ಸಂ. ೬೮

ಅಪ್ಪೆಂಬ೪

ಕವಿ ಕಾರ್ಯ ಪ್ರಶಂಸೆ

ಮತ್ತು

ಕನ್ನಡ ರಘುವಂಶ

ವಾಗ್ಭೂಷಣ ಗ್ರಂಥಮಾಲೆ—ನಂ. ೫೯.

ಕವಿಕಾರ್ಯಪ್ರಶಂಸೆ.

ಮಂ. ಆ. ರಾಮಾನುಜಯ್ಯಂಗಾರ್ಯ. ಕರ್ಣಾಟಕ
ಕಾವ್ಯಕಲಾನಿಧಿಪ್ರವರ್ತಕ, ಮತ್ತು ಕವಿಸಮಯ,
ಪ್ರಮಾಣಪ್ರಮೇಯ ವಿವೇಕ, ಪ್ರಬಂಧಾವಳಿ,
ಸುವ್ರತ ಇತ್ಯಾದ್ಯನೇಕ ಗ್ರಂಥಕರ್ತ;
ಇವರಿಂದ ರಚಿತವಾದುದು.

ಬೆಳಗಾಂವ "ಶ್ರೀಮಹಾವೀರ" ಪ್ರೇಸಿನಲ್ಲಿ
ಮುದ್ರಿತವಾಯಿತು.

1913.

ಕ್ರಯ ೨ ಆಣೆ.

Printed At the
"SHRI MAHAVIR PRESS" BELGAUM
by Mr. D. P. Chaugule
& Published by the K. V. V. Sangha
DHARWAR.

ಪ್ರವೇಶ.

ಈ ಗ್ರಂಥವಿಷಯವು ಸನ್ ೧೯೧೩ನೆಯ ಜೂನ್ ೧ರಲ್ಲಿ ಕರ್ಣಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವಕಾಲದಲ್ಲಿ ಧಾರವಾಡದಲ್ಲಿ ವಾಚೋಪನ್ಯಸ್ತವಾಗಿ ಆ ಮೇಲೆ ಸ್ಮೃತಿಯಿಂದ ಸಾಧ್ಯವಾದಮಟ್ಟಿಗೆ ಹೇಳಿದ ಪರಿಪಾಟಿಯಲ್ಲೇ ಅನ್ಯೂನಾತಿರಿಕ್ತವಾಗಿ ಬರೆಯಲ್ಪಟ್ಟಿದು.

ಇದು ವಾಚೋಪನ್ಯಸ್ತವಾದ ಗ್ರಂಥವಾದುದರಿಂದ ಶ್ರೋತೃಗಳ ಗಮನವನ್ನು ಹಿಂದೆ ಹೇಳಿದ ವಿಷಯಗಳಕಡೆಗೆ ಪದೇಪದೇ ತರಬೇಕಾಗಿರುವ ಕಾರಣ ಇದರಲ್ಲಿ ಪೌನರುಕ್ತ್ಯವು ಬರಬೇಕಾಗುವುದು. ಈ ವಿಧವಾದ ಪೌನರುಕ್ತ್ಯ ದೋಷಕ್ಕೂ ಮತ್ತು ಅಜ್ಞಾನಮೂಲಕವಾಗಿ ಸಂಭವಿಸಿರಬಹುದಾದ ಇತರ ದೋಷಗಳಿಗೂ ವಿದ್ವಾಂಸರ ಕ್ಷಮೆಯನ್ನು ಬೇಡುವೆನು.

ಈ ಉಪನ್ಯಾಸವನ್ನು ಮಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟು ಅದನ್ನು ಬರೆಯಿಸಿ ಕರ್ಣಾಟಕ ಭಾಷೆಗೆ ಭೂಷಣಪ್ರಾಯವಾಗಿರುವ "ವಾಗ್ಭೂಷಣ" ಮಾಸಪತ್ರಿಕೆಯಲ್ಲಿ ಮುದ್ರಿಸಿ ಪ್ರಚಾರ ಮಾಡಿಸಿದ ಕರ್ಣಾಟಕ ವಿದ್ಯಾವರ್ಧಕ ಸಂಘಕ್ಕೂ ಆ ಸಂಘದ ಕಾರ್ಯನಿರ್ವಾಹಕರಾಗಿ ಸನ್ಮಾನಿತರಾದ ಮ. ರಾ. ಕರಿಗುದರಿಯವರಿಗೂ ಮತ್ತು ಮ. ರಾ. ಮಹಿಷಿಯವರಿಗೂ ಕೃತಜ್ಞತಾಪೂರ್ವಕವಾದ ಸವಿನಯಾಭಿವಂದನವನ್ನು ಅರ್ಪಿಸುವೆನು.

Mysore
August 1913

M. A. R.

ಶ್ರೀರಸ್ತು.

ಶ್ರೀಮತೇ ರಾಮಾನುಜಾಯ ನಮಃ ।

ಕವಿಕಾರ್ಯಪ್ರಶಂಸೆ.

ಸಭಾಧ್ಯಕ್ಷರೆ, ಸಭಿಕರಿರಾ,

ರಾಮದೇವರು ಚಿತ್ರಕೂಟ ಪರ್ವತದಲ್ಲಿದ್ದಾಗ ಒಂದು ಹುಲ್ಲುಕಡ್ಡಿಯನ್ನು ಬ್ರಹ್ಮಾಸ್ತ್ರಮಾಡಿ, ಅದರ ಮಹಿಮೆಯನ್ನು ನೋಡಲಪೇಕ್ಷಿಸಿದಂತೆ, ಹುಲ್ಲಿಗಿಂತಲೂ ಕೀಳಾದ ನನ್ನಲ್ಲಿ ಇಲ್ಲದೇ ಇದ್ದ ಒಂದು ಮಹಿಮೆಯನ್ನು ಕೂಡಿಸಿ ಅದು ನನ್ನಲ್ಲಿ ಹೇಗೆ ಪ್ರಕಾಶಿಸುವದೆಂದು ನೋಡಬೇಕೆಂಬ ಕುತೂಹಲವುಳ್ಳವರಾಗಿರುವಿರಿ. ಉದಕಸಮೃದ್ಧಿಯನ್ನುಳ್ಳ ಉದಧಿಯು ನಾವು ಕೊಡುವ ಅರ್ಘ್ಯೋದಕದಿಂದ ಹೇಗೆ ಸುಪ್ರೀತನಾಗುವನೋ, ತೇಜೋರಾಶಿಯಾದ ಸೂರ್ಯನು ನಾವು ಬೆಳಗುವ ದೀಪಾರತಿಯಿಂದ ಹೇಗೆ ಪ್ರಸನ್ನನಾಗುವನೋ ಹಾಗೆಯೇ ಕೃಪಾರಸಪೂರ್ಣರಾಗಿಯೂ, ಜ್ಞಾನತೇಜಸ್ಸನ್ನು ಸರ್ವತ್ರ ಎರಚುತ್ತಿರುವರಾಗಿಯೂ ಇರುವ ತಾವೂ ಅಲ್ಪ ಪ್ರಜ್ಞನಾದ ನನ್ನಲ್ಲಿ ಹೊರಡುವ ವಾಕ್ಕಿನಲ್ಲಿ ಪ್ರೀತರಾಗುವಿರಿ. ಮಾತಾಪಿತೃಗಳು ಸುತನ ಮಾತಿನಲ್ಲಿ ದೋಷವನ್ನು ನೋಡದೆ ಅದನ್ನು ಆದರಪೂರ್ವಕವಾಗಿ ಲಾಲಿಸಿ ಹೇಗೆ ಕೇಳುವರೋ ಹಾಗೆ ತಾವು ನನ್ನ ವಾಕ್ಕಿನಲ್ಲಿ ದೋಷಗಳು ಕೋಡಿಹರಿಯುತ್ತಿದ್ದರೂ ಅವೊಂದನ್ನೂ ಲಕ್ಷ್ಯಕ್ಕೆ ತಾರದೆ ಗುಣಗಳನ್ನು ಮಾತ್ರವೆ ಸ್ವೀಕರಿಸುವಿರಿ ಎಂಬುದಕ್ಕೆ ತಮ್ಮ ಈ ಕೃಪಾಗಮನವೇ ಸಾಕಾದ ದೃಷ್ಟಾಂತವು. ತಮ್ಮ ಈ ಕುತೂಹಲವೂ, ಈ ಪ್ರಸನ್ನತೆಯೂ, ಈ ಆದರವೂ, ತಮ್ಮ ಸನ್ನಿಧಿಯಲ್ಲಿ ಉಪನ್ಯಾಸ ಮಾಡಲು ನನಗೆ ಧೈರ್ಯವನ್ನು ಕೊಟ್ಟಿರುವುದು. ಪ್ರಾಜ್ಞರಲ್ಲಿ ವಿಶೇಷ ಹೇಳಬಾರದು. ವಿಷಯುವನ್ನು ಆರಂಭಿಸುವೆನು.

"ಸುಖಂ ಮೇ ಭೂಯಾತ್" ಎಂಬ ಇಚ್ಛೆಯೇ ಸಕಲರ ಪ್ರವೃತ್ತಿಗೂ ಕಾರಣವಷ್ಟೆ. ಸುಖವೆಂದರೇನು? ಆ ಸುಖವು ಹೇಗೆ ಉಂಟಾಗುವುದು? ಸುಖ

ವೆಂಬುವದು ಒಂದು ವಿಧವಾದ ಅನುಕೂಲವೃತ್ತಿಯ ಕಾರ್ಯವಾಗಿರುವುದು. ದುಃಖ ವೆಂಬುದು ತದ್ಭಿನ್ನವು; ಎಂದರೆ ವಿರೋಧವೃತ್ತಿಯ ಕಾರ್ಯವಾಗಿರುವುದು. ಎಂದ ಮೇಲೆ ದುಃಖವು ಕೂಡ ಕೆಲವು ವೇಳೆ ತನ್ನಿ ವೃತ್ತಿದ್ವಾರಾ ಸುಖರೂಪವಾಗಿ ಪರಿಣಮಿಸುವುದು. ಅದ್ದರಿಂದ ಸಕಲ ಪ್ರವೃತ್ತಿಗೂ "ಸುಖಂ ಮೇ ಭೂಯಾತ್" ಎಂದರೆ ಸುಖವು ಉಂಟಾಗಲಿ. ಎಂಬ ಆಶೆಯೇ ಕಾರಣವಾಗಿರುವುದು.

ಆ ಸುಖವು ಹೇಗೆ ಉಂಟಾಗುವುದು? ಅದು ಇಂದ್ರಿಯುಗಳ ದ್ವಾರಿಾ ಉಂಟಾಗುವುದು. ಇಂದ್ರಿಯುಗಳ ಸಹಾಯುದಿಂದಲೇ ಲೋಕದ ಪರಿಚಯುವು ಬರಬೇಕು. ಆ ಇಂದ್ರಿಯುಗಳಲ್ಲಿ ಜ್ಞಾನೇಂದ್ರಿಯುಗಳು ಕರ್ಮೇಂದ್ರಿಯುಗಳು ಎಂದು ಎರಡು ದೊಡ್ಡ ವಿಭಾಗವುಂಟು. ಅವುಗಳಲ್ಲಿ ಕರ್ಮೇಂದ್ರಿಯುಗಳಿಗಿಂತ ಜ್ಞಾನೇಂದ್ರಿಯುಗಳು ಪ್ರಬಲವಾದುವು. ಕರ್ಮೇಂದ್ರಿಯುಗಳ ಮೂಲಕ ಉಂಟಾಗುವ ಲೋಕಪರಿಚಯುವೂ ತನ್ಮೂಲಕ ಹುಟ್ಟುವ ಸುಖದುಃಖರೂಪಗಳಾದ ಅನುಭವಗಳೂ, ಜ್ಞಾನೇಂದ್ರಿಯುಗಳ ಮೂಲಕ ಉಂಟಾಗುವ ಲೋಕಪರಿಚಯು ತನ್ಮೂಲಕ ಹುಟ್ಟುವ ಅನುಭವ ಇವುಗಳಿಗಿಂತಲೂ ಬಹಳ ಕಡಿಮೆ. ಅದ್ದರಿಂದ ಇಲ್ಲಿ ಕರ್ಮೇಂದ್ರಿಯುಗಳ ವಿಚಾರಕ್ಕೆ ಅಷ್ಟು ಹೋಗುವುದಿಲ್ಲ.

ಜ್ಞಾನೇಂದ್ರಿಯುಗಳು ಕಣ್ಣು ಮೂಗು, ಕಿವಿ, ನಾಲಿಗೆ, ಚರ್ಮ ಎಂಬ ಹೆಸರುಗಳಿಂದ ಪ್ರಸಿದ್ಧವಾಗಿರುವುವು. ನಾವು ಕಣ್ಣಿನಿಂದ ನೋಡುವೆವು; ಕಿವಿಯಿಂದ ಕೇಳುವೆವು; ಮೂಗಿನಿಂದ ವಾಸಿಸುವೆವು. ನಾಲಗೆಯಿಂದ ರುಚಿಸುವೆವು. ಚರ್ಮದಿಂದ ಸ್ಪರ್ಶಿಸುವೆವು. ಕಣ್ಣಿನಿಂದ ನಾವು ನೋಡುವೆವು ಎಂದರೆ ವಸ್ತುಗತವಾದ ಬಣ್ಣ-ಆಕಾರಗಳನ್ನು ಪರಿಚಯು ಮಾಡಿ ತಿಳಿಯುವೆವು. ಕಿವಿಯಿಂದ ಕೇಳುವೆವು ಎಂದರೆ ವಸ್ತುಗಳಲ್ಲಿ ಉಂಟಾಗುವ ಸದ್ದುಗಳನ್ನು ಪರಿಚಯುಮಾಡಿ ತಿಳಿಯುವೆವು, ಮೂಗಿನಿಂದ ವಾಸಿಸುವೆವು, ಎಂದರೆ ವಸ್ತುಗತವಾದ ಗಂಧಾದಿಗಳನ್ನು ಪರಿಚಯು ಮಾಡಿ ತಿಳಿಯುವೆವು. ನಾಲಗೆಯಿಂಗ ರುಚಿಸುವೆವು. ಎಂದರೆ ವಸ್ತುಗತವಾದ ರಸಗಳನ್ನು ಪರಿಚಯುಮಾಡಿ ಅರಿಯುವೆವು. ಚರ್ಮದಿಂದ ಸ್ಪರ್ಶಿಸುವೆವು. ಎಂದರೆ ವಸ್ತುಗತವಾದ ಮಾರ್ದವ ಕಾಠಿಣ್ಯ ಎಂಬ ಗುಣಗಳನ್ನು ಪರಿಚಯುಮಾಡಿ ಅರಿಯುವೆವು. ಎಂದು ಅರ್ಥ. ಹೀಗೆಂದು ಹೇಳಿದ ಮೇಲೆ ಜ್ಞಾನೇಂದ್ರಿಯುಗಳ ಸಹಾಯುದಿಂದ ನಮ್ಮ ಶರೀರಕ್ಕೆ ಸಂಬಂಧಪಟ್ಟ ಮತ್ತು ನಮಗಿಂತ ಹೊರಗಣ ವಸ್ತುಗಳ ಪರಿಚಯುವನ್ನು ಎಂದರೆ ಅವುಗಳಲ್ಲಿರುವ ರೂಪ, ರಸ, ಗಂಧ, ಸ್ಪರ್ಶ ಮೊದಲಾದುವುಗಳನ್ನು ತಿಳಿಯುವೆವೆಂದಾಯಿತು. ಹೀಗಿರಲು ಲೋಕಪರಿಚಯುಕ್ಕೆ ಜ್ಞಾನೇಂದ್ರಿ

ಯ ಪಂಚಕದ ಸಹಾಯವೇಬೇಕು. ಇನ್ನು ಮೇಲೆ ಕರ್ಮೇಂದ್ರಿಯಗಳಲ್ಲಿ ಮುಖ್ಯವಾಗಿ ಒಂದೆರಡರಿಂದ ವಸ್ತುಗಳ ಪರಿಮಾಣ, ಗಾತ್ರ, ತೂಕ, ಮೊದಲಾದ ಜ್ಞಾನವು ಉಂಟಾಗುವದು. ಪರಿಮಾಣಾದಿಗಳನ್ನು ತಿಳಿಸುವ ಕರ್ಮೇಂದ್ರಿಯಗಳ ವ್ಯಾಪಾರವು ಜ್ಞಾನೇಂದ್ರಿಯಗಳ ವ್ಯಾಪಾರಕಾಲದಲ್ಲಿಯೇ ಉಂಟಾಗುವುದರಿಂದ ಅವುಗಳ ನೈಜಸಾಮರ್ಥ್ಯವು ಜ್ಞಾನೇಂದ್ರಿಯಗಳ ಸಾಮರ್ಥ್ಯದಲ್ಲಿಯೇ ಸೇರಿ ಹೋಗುವುದು. ಅವುಗಳ ವಿವೇಚನೆಯನ್ನು ಬೇರೆ ಮಾಡಬೇಕಾಗಿಲ್ಲ. ಇಂದ್ರಿಯಗಳಿಂದ ಲೋಕಪರಿಚಯವು ಹೇಗೆ ಉಂಟಾಗುವುದು? ಎಂದು ಕೇಳಿದರೆ:—ಆತ್ಮನು ಮನಸ್ಸೆಂಬ ಅಂತರಿಂದ್ರಿಯನ್ನು ಪ್ರೇರಿಸುವನು. ಮನಸ್ಸು ಬಹಿರಿಂದ್ರಿಯಗಳೆನಿಸಿಕೊಂಡ ಜ್ಞಾನೇಂದ್ರಿಯಗಳನ್ನು ಪ್ರೇರಿಸುವುದು. ಆ ಪ್ರೇರಣೆಯಿಂದ ಆ ಬಹಿರಿಂದ್ರಿಯಗಳು ವಸ್ತುಗಳನ್ನು ಮುಟ್ಟುವುವು. ಆಗ ನಮಗೆ ವಸ್ತುಸಾಕ್ಷಾತ್ಕಾರ ಅಥವಾ ಪರಿಚಯವು ಉಂಟಾಗುವುದು ಎಂದು ನಮ್ಮ ಶಾಸ್ತ್ರಕಾರರು ನಿರೂಪಿಸುವರು. ಈಗಿನ ಪಾಶ್ಚಾತ್ಯಶಾಸ್ತ್ರಜ್ಞರಲ್ಲಿ ಕೆಲವರು ನಮ್ಮ ಹಿರಿಯರ ತಾತ್ಪರ್ಯವನ್ನು ತಿಳಿಯದೆ ಅವರ ಮತವನ್ನು ಅಜ್ಞಪ್ರಲಪಿತವೆಂದು ದೂಷಿಸುವರು. ಅವರು ವಸ್ತುಗಳಲ್ಲಿರುವ ಪ್ರತಿಪರಮಾಣುಗಳಿಂದ ಹೊರಟ ತೇಜಸ್ಸು, ಧ್ವನಿ, ರಸ, ಇವೇ ಮೊದಲಾದ ಗುಣ ಪರಂಪರೆಗಳು ಬಹಿರಿಂದ್ರಿಯಗಳನ್ನು ಮುಟ್ಟಿ, ಒಳಗೆ ನುಗ್ಗಿ, ತತ್ತದಿಂದ್ರಿಯಗಳ ಭಿತ್ತಿಗಳ ಮೇಲೆ ಒಂದು ವಿಧವಾದ ವಿಚಿತ್ರಸಂಸ್ಕಾರಗಳನ್ನು ಮಾಡುವವು. ಆಯಾ ಸಂಸ್ಕಾರಗಳು ತತ್ತದಿಂದ್ರಿಯಗತವಾದ ಜ್ಞಾನನಾಡಿಗಳ ದ್ವಾರಾ ಮನಸ್ಸಿಗೆ ತಲಪುವುವು. ಆಮೇಲೆ ನಮಗೆ ವಸ್ತುಗಳ ಜ್ಞಾನವುಂಟಾಗುವುದು. ಎಂದು ಹೇಳಿ ಲೋಕದ ವಸ್ತುಗಳಿಂದ ಹೊರಟ ಗುಣಪರಂಪರೆಗಳು ಇಂದ್ರಿಯ ಭಿತ್ತಿಯನ್ನು ಮುಟ್ಟಿ ಮನಸ್ಸಿಗೆ ಸೇರಿದ ಮೇಲೆಯೇ ವಸ್ತುಜ್ಞಾನವುಂಟಾಗಬೇಕೇ ಹೊರತು ಮನಸ್ಸಿನಿಂದ ಪ್ರೇರಿತವಾದ ಇಂದ್ರಿಯಗಳು ವಸ್ತುಗಳನ್ನು ಮುಟ್ಟುವುದರಿಂದ ಉಂಟಾಗುವುದಿಲ್ಲವೆಂದು ನಿರೂಪಿಸುವರು. ಇಲ್ಲಿ ನಾವು ಹೇಳುವದೇನಂದರೆ—ವಸ್ತುಗಳಿಂದ ಹೊರಟ ಗುಣಪರಂಪರೆಗಳು ಬಹಿರಿಂದ್ರಿಯಗಳನ್ನು ಸ್ಪರ್ಶಿಸುತ್ತಿದ್ದರೂ ಅನೇಕ ವೇಳೆ ವಸ್ತುಜ್ಞಾನವುಂಟಾಗುವುದಿಲ್ಲ. ಅನೇಕವೇಳೆ ಗಂಟೆಯ ಸದ್ದು ಕಿವಿಗೆ ಬೀಳುತ್ತಿದ್ದರೂ ತಿಳಿದು ಬರುವುದಿಲ್ಲ. ಅತ್ಯಧಿಕವಾದ ಯೋಚನೆಯಲ್ಲಿದ್ದಾಗ ಸುತ್ತಮುತ್ತಲಿರುವ ಜನಗಳ ಸಲ್ಲಾಪವು ತಿಳಿದು ಬರುವುದಿಲ್ಲ. ಇಂಥವರು ಬಂದಿದ್ದರು, ಇಂಥ ಮಾತಾಡಿದರು, ಎಂದು ಗೊತ್ತಾಗುವುದಿಲ್ಲ. ಹಲವು ವೇಳೆ ಒಂದು ಉಪನ್ಯಾಸವನ್ನೋ ಅಥವಾ

ಗ್ರಂಥ ಲೇಖನವನ್ನೋ ರಚಿಸುತ್ತಿರುವಾಗ ನಮ್ಮ ಕಣ್ಣಿನ ನೋಟವು ಎದರು ಗೋಡೆಯ ಮೇಲೆ ಬಿದ್ದಿದ್ದರೂ ಆ ಗೋಡೆಯ ಮೇಲೆ ಅಡ್ಡಾಡುವ ಹುಳುಗಳೂ, ಅವುಗಳ ವ್ಯಾಪಾರವೂ ಗೊತ್ತಾಗುವುದಿಲ್ಲ. ಸ್ನೇಹಿತರೊಡನೆ ವಿನೋದವಾಗಿ ಮಾತನಾಡುತ್ತ ವಾಯುವನ್ನು ಸೇವಿಸುವ ಉದ್ದೇಶದಿಂದ ಹೊರಗಡೆ ಸಂಚರಿಸುತ್ತಿರುವಾಗ ನಡೆದ ದಾರಿಯೂ, ಆ ದಾರಿಯಲ್ಲಿ ಕಂಡ ವಸ್ತುಗಳೂ, ನಡೆದ ಸಂಗತಿಯೂ ಗೊತ್ತು ಹತ್ತುವುದಿಲ್ಲ. ಹೀಗಾಗುವದಕ್ಕೆ ಕಾರಣವೇನು? ವಸ್ತುಗತವಾದ ತೇಜಃಪರಂಪರೆಯ ಕಾರ್ಯಗಳು ಬಹಿರಿಂದ್ರಿಯಗಳ ಮೇಲೆ ನಡೆಯುತ್ತಲೇ ಇದ್ದರೂ ವಸ್ತುಜ್ಞಾನವು ಯಥಾವತ್ತಾಗಿ ಉಂಟಾಗುವುದಿಲ್ಲ. ಆದ್ದರಿಂದ ಇಂದ್ರಿಯಗಳಲ್ಲಿ ಉಂಟಾದ ಸಂಸ್ಕಾರಗಳು ಪ್ರಯೋಜನಕಾರಿಗಳಾಗಲಿಲ್ಲ. ಹೀಗಾಗಲು ಕಾರಣವೇನು? ಎಂದು ಕೇಳಿದರೆ ಆಗ ನಮ್ಮ ಮನಸ್ಸು ಬೇರೆ ಕಡೆಗೆ ಇದ್ದಿತು, ಈ ಸಂಸ್ಕಾರಗಳ ಕಡೆ ಇರಲಿಲ್ಲ ಎಂದೇ ಹೇಳಬೇಕು. ಆದ್ದರಿಂದ ಆತ್ಮನು ಮನಸ್ಸನ್ನು ಪ್ರೇರಿಸಿ ಎಂದರೆ—ಆ ಇಂದ್ರಿಯಗಳನ್ನು ವಸ್ತುಗಳ ಮೇಲೆ ಮುಟ್ಟುವಂತೆ ಮಾಡಿ ವಸ್ತುಗಳ ರೂಪಾದಿಗಳ ಪರಿಚಯವನ್ನು ಒಳಕ್ಕೆ ತೆಗೆದುಕೊಂಡ ಮೇಲೆ ವಸ್ತು ಸಾಕ್ಷಾತ್ಕಾರವು ಉಂಟಾಯಿತು. ಎಂದು ಹೇಳಿದಂತಾಯಿತು. ಪಾಶ್ಚಾತ್ಯರು ಹೇಳುವ ವಸ್ತು ಸಾಕ್ಷಾತ್ಕಾರಕ್ಕೆ ಕಾರಣವು ವಸ್ತುಜ್ಞಾನವು ಬಹಿರಿಂದ್ರಿಯದ ಮೂಲಕ ಉಂಟಾಗುವ ಕ್ರಮವನ್ನು ತಿಳಿಸುವ ಪ್ರಕಾರವಾಯಿತು. ಆದ್ದರಿಂದ ಈ ಎರಡು ಪ್ರಕಾರವೂ ಒಂದೇ ವಿಷಯವನ್ನು ಎರಡು ಪ್ರಕಾರದಲ್ಲಿ ತಿಳಿಸಿತು. ಪರಸ್ಪರ ವಿರೋಧವಿಲ್ಲ ಎಂಬುದು ನಮ್ಮ ಅಭಿಪ್ರಾಯವು.

ಲೋಕಪರಿಚಯವನ್ನು ಮಾಡುವ ಕಾಲದಲ್ಲಿ ಮನಸ್ಸಿನಲ್ಲಿ ಉಂಟಾಗುವ ಒಂದುವಿಧವಾದ ಅನುಕೂಲ ಪ್ರತಿಕೂಲರೂಪವಾದ ಸಂಸ್ಕಾರ ವಿಶೇಷಗಳೇ ಸುಖದುಃಖವೆನಿಸಿಕೊಳ್ಳುವುವು. ನಾನು ಸುಖಪಡುತ್ತೇನೆ; ನಾನು ದುಃಖಪಡುತ್ತೇನೆ. ಎಂದಲ್ಲವೆ ವಾಡಿಕೆಯಲ್ಲಿರುವುದು? ಕಣ್ಣು ಸುಖಪಟ್ಟಿತು; ಮೂಗು ಸುಖಪಟ್ಟಿತು; ಮೈ ದುಃಖಹೊಂದಿತು ಎಂದು ಹೇಳುವುದಿಲ್ಲ. ಇಂದ್ರಿಯ ದ್ವಾರಾ ಮನಸ್ಸಿನಲ್ಲಿ ಅನುಕೂಲ ಪ್ರತಿಕೂಲ ಸಂಸ್ಕಾರದಿಂದ ಉಂಟಾದ ಸುಖದುಃಖಜ್ಞಾನವನ್ನು ನಾವು ಅನುಭವಿಸುವೆವು. ಅಥವಾ ಮನಸ್ಸಿನಲ್ಲಿ ಸುಖದುಃಖಜ್ಞಾನವು ಉಂಟಾಗುವುದು. ಪ್ರಪಂಚ ಲೋಕಪರಿಚಯವನ್ನು ಇಂದ್ರಿಯಗಳ ಸಹಾಯದಿಂದ ಮಾಡುವಕಾಲದಲ್ಲಿ ಇಂದ್ರಿಯಗಳಿಗೂ ವಸ್ತುಗಳಿಗೂ ಅನುಕೂಲ ವೃತ್ತಿಯಿಂದ ಹುಟ್ಟುವಜ್ಞಾನವೇ

ಸುಖವು; ವಿರೋಧ ವೃತ್ತಿಯಿಂದ ಹುಟ್ಟುವಜ್ಞಾನವೇ ದುಃಖವು ಎಂದು ಹೇಳಿದಂತಾಯಿತು.

ಹಿತೈಷಿಗಳು ಎಂಬುವರು ಯಾರು? ಅವರು ಏತಕ್ಕೆ ಹಿತೈಷಿಗಳೆನಿಸಿಕೊಂಡರು? ಯಾರು ಲೋಕದ ಜನರ ದುಃಖವನ್ನು ತಗ್ಗಿಸಿ ಸುಖವನ್ನು ಹೆಚ್ಚಿಸುವ ಕಾರ್ಯದಲ್ಲಿ ಪ್ರವಣರಾಗಿ ತಮ್ಮ ಜೀವಮಾನಕಾಲವನ್ನು ಕಳೆಯುವರೋ ಅವರೇ ಹಿತೈಷಿಗಳು. "ಸಂತೋಷಂ ಜನಯೇತ್' ಪ್ರಜ್ಞಃ ತದೇವೇಶ್ವರ ಪೂಜನಂ" ಎಂದಲ್ಲವೆ ಅವರ ಶಾಸನವು ಸರ್ವತ್ರ ಬೆಳಗುತ್ತಿರುವುದು? ಯಾವರೀತಿಯಲ್ಲಿ ಆ ಹಿತೈಷಿಗಳು ಲೋಕದ ಸುಖವನ್ನು ಹೆಚ್ಚಿಸಲು ಯತ್ನಿಸಿದರು? ಎಂಬುದನ್ನು ಸ್ವಲ್ಪ ಯೋಚಿಸೋಣ.

ಲೋಕಪರಿಚಯ ಜ್ಞಾನಾನುಭವದ ವೇಳೆಯಲ್ಲಿ ಉಂಟಾಗುವ ಸುಖವನ್ನೂ ಉತ್ತರಕಾಲಿಕವಾದ ಅದರ ಸ್ಮರಣವೇಳೆಯಲ್ಲಿ ಹುಟ್ಟುವ ಸುಖವನ್ನೂ ಹೋಲಿಸಿ ನೋಡೋಣ. ಪರಿಚಯಕಾಲದ ಸುಖವು ಹೆಚ್ಚೋ ಸ್ಮರಣಕಾಲದ ಸುಖವು ಹೆಚ್ಚೋ? ಸ್ಮರಣಕಾಲದ ಸುಖವೇ ಹೆಚ್ಚಾಗಿ ತೋರುವದೆಂದು ಯಾರು ತಾನೇ ಹೇಳರು? ಇದು ಅನುಭವ ಸಿದ್ಧವಾದ ವಿಷಯ.

ಊಟಮಾಡಿದ ಮೇಲೆ ಊಟಮಾಡಿದ ಮೃಷ್ಟಾನ್ನದ ರುಚಿಯು ತೋರುವದಷ್ಟೇ? ಏಕೆ? ತೋರುವ ವ್ಯಾಪಾರವು ಬುದ್ಧಿಕಾರ್ಯವಾದ್ದರಿಂದ. ಮತ್ತು ಆ ಸುಖವು ನಮ್ಮೊಡನೆ ಭೋಜನಕ್ಕೆ ಬಾರದ ಮಿತ್ರಮಂಡಳಿಯಲ್ಲಿ ವಿವರಿಸುವಾಗ ಮತ್ತಷ್ಟು ಹೆಚ್ಚಾಗಿ ಕಂಡು ಬರುವುದು. ಮಕ್ಕಳಾಟದ ಸೌಖ್ಯವನ್ನು ಕವಿಗಳ ಮಾತಿನಲ್ಲಿ ಓದಿದಾಗ ನಾವು ಹಿಂದೆ ಅನುಭವಿಸಿದ ಆ ಮಕ್ಕಳಾಟದ ಸುಖವು ಅತ್ಯತಿಶಯವಾದ ಆನಂದವನ್ನು ಕೊಡುವುದು. ಮನೆಯಲ್ಲಿ ಅಣ್ಣತಮ್ಮಂದಿರ ನಡುವೆ ಪಟ್ಟ ಸುಖವು ಪರಸ್ಥಳದಲ್ಲಿ ಒಬ್ಬೊಂಟಿಗರಾಗಿದ್ದಾಗ ಹೆಚ್ಚಾಗಿ ಕಂಡುಬರುವುದು. ಪತಿಪತ್ನಿಯರ ಪ್ರೇಮಾತಿಶಯವು ಸಂಶ್ಲೇಷ ದೆಶೆಗಿಂತ ವಿಶ್ಲೇಷದೆಶೆಯಲ್ಲಿ ಅತ್ಯಧಿಕವಾಗಿ ಕಂಡುಬರುವುದು. ಹೀಗೆ ಹೆಚ್ಚಾಗಿ ತೋರುವುದಕ್ಕೆ ಆಯಾ ಅನುಭವಗಳು ಈ ಕಾಲದಲ್ಲಿ ಎಂದರೆ ಸ್ಮರಣವೇಳೆಯಲ್ಲಿ ಬರುವುದೂ ಮನಸ್ಸಿನ ತದೈಕಾಗ್ರತೆಯನ್ನು ಚದರಿಸುವ ಕೋಟಲೆಗಳು ಯಾವುವೂ ಇಲ್ಲದೆ ಇರುವುದೂ ಕಾರಣವು. ಇದಲ್ಲದೆ ಇದಕ್ಕೆ ಮತ್ತೊಂದು ಪ್ರಬಲಕಾರಣವೂ ಉಂಟು. ಲೋಕಪರಿಚಯ

ದ್ವಾರಾ ಅನುಭವದ ವೇಳೆಯಲ್ಲಿ ಇಂದ್ರಿಯಗಳ ವ್ಯಾಪಾರವು ವಸ್ತುವಿನ ಮೇಲೆ ಎಷ್ಟು ಕಾಲವಿರುತ್ತದೆಯೋ ಅಷ್ಟೇ ಕಾಲ ಆ ಸುಖವು ಇರುವುದು. ಉತ್ತರಕ್ಷಣದಲ್ಲಿಯೇ ಅದು ಹೋಗುವುದು. ಇಂದ್ರಿಯಗಳು ಮೇಲೆ ಮೇಲೆ ಬರುತ್ತಿರುವ ವಿಷಯಗಳ ಸಂಪರ್ಕದಿಂದ ಚಲಿಸುವುದರಿಂದ ಅನುಭವಗಳು ಬೇರೆ ಬೇರೆ ಆಗುತ್ತಲೆ ಹೋಗುವುವು. ಒಂದು ವಿಷಯದ ಮೇಲಿದ್ದ ಸ್ಥಿತಿಯು ಮಾರಿ ಹೋಗುವುದು. ಉದಾಹರಣೆಗಾಗಿ ಒಂದು ನದಿಯ ಪ್ರವಾಹವನ್ನು ನೋಡುತ್ತಿರುತ್ತೇವೆಂದು ಇಟ್ಟುಕೊಳ್ಳೋಣ. ಆಗ ಪಕ್ಕದ ಮರದ ಮೇಲೆ ಕೂಗಿದ ಕಾಗೆಯ ಕೂಗು ಕಿವಿಗೆ ಬಿದ್ದರೆ ಒಡನೆಯೆ ಮನಸ್ಸು ನದಿಯ ಕಡೆಯನ್ನು ಬಿಟ್ಟು ಆ ಕೂಗಿನ ಕಡೆ ಹೋಗುವುದು. ಕೂಡಲೆ ಎದುರಿಗೆ ಒಂದು ನಾಯಿಯು ಪ್ರವಾಹಕ್ಕೆ ನುಗ್ಗಿದರೆ ಹಿಂದಣ ಗಮನವು ಮಾರಿ ಹೋಗಿ ಬೇರೆ ತರದ ಪರಿಚಯಾನುಭವವು ಬರುವದು. ಹೀಗಿರುವುದರಿಂದ ಇಂದ್ರಿಯಗಳ ಸಹಾಯದಿಂದ ಹೊಂದುವ ಅನುಭವವು ಆ ಅನುಭವಕಾಲದವರೆಗೆ ಹೊರತು ಮಿಕ್ಕ ವೇಳೆಯಲ್ಲಿ ನಿಲ್ಲದು. ಇಲ್ಲಿ ಒಂದು ಆಕ್ಷೇಪಣೆ ಹುಟ್ಟುವುದು. ಹಾಗೆ ಆ ಅನುಭವವು ಉತ್ತರಕ್ಷಣದಲ್ಲಿಯೇ ಮಾಯವಾಗುವುದು ಎಂದರೆ ಅದು ನಾಶವಾಗಿ ಹೋಗುವುದೋ? ಪುನಃ ಉದ್ಭವಿಸುವುದೋ? ಉದ್ಭವಿಸುವದು. ನಾಶವಾಗುವುದಿಲ್ಲ. ಉದ್ಭವಿಸುವದು ಹೇಗೆಂದರೆ—ಅನುಭವ ಕಾಲದಲ್ಲಿ ಉಂಟಾದ ಸಂಸ್ಕಾರಗಳು ಮನಸ್ಸಿನಲ್ಲಿ ಅವ್ಯಕ್ತವಾಗಿ ಅಡಗಿರುವುವು. ಇತರ ವೇಳೆಯಲ್ಲಿ ಹಿಂದೆ ಅನುಭವಿಸಿದ ಪರಿಚಯಾನುಭವಗಳು ಇಲ್ಲವೇ ಇಲ್ಲವೆಂಬದಾಗಿ ತೋರುತ್ತಿದ್ದರೂ ಉತ್ತೇಜನಸಾಮಗ್ರಿಯುಂಟಾದಾಗ ಆ ಸಂಸ್ಕಾರಗಳ ಪ್ರತಿಭಾನಗಳು ಉಂಟಾದಾಗ ನಾವು ಅನುಭವ ವೇಳೆಯಲ್ಲಿ ಅನುಭವಿಸಿದ ಅನುಭವಗಳು ತಾವಾಗಿಯೇ ಬರುವುವು. ಈ ಕಾಲದಲ್ಲಿ ಇಂದ್ರಿಯದ ಏಕಾಗ್ರತೆಯನ್ನು ಹೋಗಲಾಡಿಸುವ ವಿರೋಧಸಾಮಗ್ರಿಗಳು ಯಾವುವೂ ಇರುವುದಿಲ್ಲ. ಆದ್ದರಿಂದ ಮನಸ್ಸು ಅನುಭವ ವೇಳೆಗಿಂತ ಏಕಾಗ್ರತೆಯನ್ನು ಹೊಂದಿ ಇತರ ಅನುಭವಗಳ ಕಡೆ ಹೋಗದೆ ಆ ಒಂದು ಅನುಭವದಲ್ಲಿಯೇ ನಿಲ್ಲುವುದರಿಂದ ಸುಖವು ಹೆಚ್ಚಾಗಿ ತೋರಬೇಕು ಆದ್ದರಿಂವ ಅದು ಹಾಗೆ ಹೆಚ್ಚಾಗಿ ತೋರುವದು. ಇದೂ ಅಲ್ಲದೆ ಹೀಗೆ ಆಗುವದಕ್ಕೆ ಮತ್ತೊಂದು ಕಾರಣವನ್ನು ಯೋಚಿಸಿರಿ. ಕಷ್ಟಪಡದೆ ಸುಖವಿಲ್ಲ. ಹೀಗಿದ್ದರೂ ಎಲ್ಲರೂ ಸುಖಪಡುವದಕ್ಕೆ ಮಾಡಬೇಕಾದ ಶ್ರಮವನ್ನು ಅಪೇಕ್ಷಿಸದೆ ಸುಖವನ್ನು ಮಾತ್ರ ಅಪೇಕ್ಷಿಸುವರು. “ಧರ್ಮಸ್ಯ ಫಲ-

ಮಿಚ್ಛಂತಿ, ಧರ್ಮಂ ನೇಚ್ಛಂತಿ ಮಾನವಾಃ" ಅಧಿಕಾರಿಯಾಗಿ ಸಾರೋಟಿನಲ್ಲಿ ಗುವುದಕ್ಕೆ ಎಲ್ಲರೂ ಆಶೆಪಡುತ್ತಾರೆ. ಹಾಗೆ ಅಧಿಕಾರವನ್ನು ಹೊಂದುವುದಕ್ಕೆ ಅವನು ಪಟ್ಟ ಕಷ್ಟವನ್ನು ಒಬ್ಬರೂ ಅಪೇಕ್ಷಿಸರು. ಹೀಗಿರಲು ಒಂದೊಂದು ಲೋಕಪರಿಚಯುವನ್ನು ತದ್ವಾರಾ ಲಭಿಸುವ ಸುಖವನ್ನು ತಾವು ಸ್ವಲ್ಪವೂ ಶ್ರಮ ತೆಗೆದುಕೊಳ್ಳದೆ ಅನುಭವಿಸಬೇಕೆಂಬ ಅಪೇಕ್ಷೆಯು ಸರ್ವತ್ರ ಇರುವ್ವದು. ಉತ್ತೇಜಕದಿಂದ ಸ್ಮರಣರೂಪವಾಗಿ ಹುಟ್ಟುವ ಸುಖವು ಶ್ರಮರೂಪವಾದ ದುಃಖದಿಂದ ವಿರಹಿತವಾಗಿದೆ. ಆದ್ದರಿಂದ ಸ್ಮರಣವೇಳೆಯಲ್ಲಿ ಅನುಭವಿಸಿದ ಅನುಭವವು ನಮಗೆ ಹೆಚ್ಚಿದಂತೆ ಕಾಣುವದು. ಇತ್ಥಂಚ, ಸ್ಮರಣವೇಳೆಯಲ್ಲಿ ಜನಿಸುವ ಸುಖವು ಇಂದ್ರಿಯಗಳಿಗೆ ಪಾರಿಪ್ಲವವಿಲ್ಲದೆ ತತ್ಪ್ರೇರಕವಾದ ಮನಸ್ಸಿಗೆ ಅನ್ಯತ್ರಚಲನಾವಕಾಶವಿಲ್ಲದೆ ಆ ವಸ್ತುವಿನ ಮೇಲೆಯೇ ಚಿರಕಾಲ ನಿಲ್ಲಬಹುದಾಗಿರುವುದರಿಂದಲೂ, ಪರಿಚಯುಕಾಲದಲ್ಲಿ ಉಂಟಾಗುವ ಶ್ರಮಗಳು ಇಲ್ಲದೆ ಇರುವುದರಿಂದಲೂ, ಪರಿಚಯುವೇಳೆಗಿಂತ ಅತಿಶಯುವಾಗಿಯೂ, ಹಿತವಾಗಿಯೂ ಇರುತ್ತದೆ. ಇದು ಅನುಭವ ಸಿದ್ಧವಾಗಿಯೂ ಇದೆ.

ಹೀಗಿರಲು ಲೋಕಪರಿಚಯು ಕಾಲದಲ್ಲಿ ಹುಟ್ಟುವ ಸುಖಾನುಭವವನ್ನು ಅಭಿವೃದ್ಧಿಪಡಿಸಲು ಯತ್ನಿಸಿದ ಹಿತೈಷಿಗಳಿಗಿಂತ ಸ್ಮರಣವೇಳೆಯಲ್ಲಿ ಆಯಾ ಸುಖಾನುಭವಗಳನ್ನು ಹೆಚ್ಚಿಸಿಕೊಡಲು ಪ್ರವರ್ತಿಸಿದ ಹಿತೈಷಿಗಳು ನಮ್ಮ ಹೆಚ್ಚಾದ ಗೌರವಕ್ಕೆ ಪಾತ್ರರಾಗಬೇಕು.

ಮನುಷ್ಯನು ಅನುಭವಿಸುವ ಸುಖಗಳಲ್ಲಿ ಕೆಲವು ಶರೀರಕ್ಕೆ ಮಾತ್ರ ಸಂಬಂಧಪಟ್ಟುವು. ಕೆಲವು ಮನಸ್ಸಿಗೆ ಮಾತ್ರ ಸಂಬಂಧಪಟ್ಟುವು. ಇವುಗಳಲ್ಲಿ ಶರೀರಕ್ಕೆ ಸಂಬಂಧಪಟ್ಟುವು ಮನಸ್ಸಿಗೆ ಸಂಬಂಧಪಟ್ಟುವಕ್ಕಿಂತ ಅತಿಶಯಿತವೂ ಅಲ್ಲ; ಸೂಕ್ಷ್ಮವೂ ಅಲ್ಲ;

ಲೋಕಹಿತೈಷಿಗಳಲ್ಲಿ ಕರ್ಮೇಂದ್ರಿಯದ್ವಾರಾ ತಾತ್ಕಾಲಿಕ ಸುಖವನ್ನು ಹೆಚ್ಚಿಸಲು ಹೊರಟವರು ಹಲವರು. ಜ್ಞಾನೇಂದ್ರಿಯದ್ವಾರಾ ತಾತ್ಕಾಲಿಕ ಸುಖವನ್ನು ಹೆಚ್ಚಿಸಲು ಹೊರಟವರು ಕೆಲವರು. ಉಭಯೇಂದ್ರಿಯದ್ವಾರಾ ತತ್ಕಾಲಿಕ ಸುಖವನ್ನು ಹೆಚ್ಚಿಸಲೂ ಹೊರಟವರು ಹಲವರು. ಬಹಿರಿಂದ್ರಿಯಗಳ ಸಂಪರ್ಕವಿಲ್ಲದೆ ಮಾನಸೇಂದ್ರಿಯುವನ್ನು ಮಾತ್ರವೇ ಅವಲಂಬಿಸಿ ತದ್ವಾರಾ ಲೋಕಸುಖವನ್ನು ಹೆಚ್ಚಿ

ಸಲು ಹೊರಟವರು ಕೆಲವರು. ಇವರು ಯಾವತ್ತು ಹಿತೈಷಿಗಳು! ಯಾವ ಯಾವ ಇಂದ್ರಿಯವನ್ನು ಅವಲಂಬಿಸಿ ಹೊರಟದ್ದರೂ ಮುಖ್ಯವಾಗಿ ಮಾನಸೇಂದ್ರಿಯದ ಸಹಾಯವನ್ನೇ ಇಟ್ಟುಕೊಳ್ಳಬೇಕು. ಸುಖಜ್ಞಾನವು ಮಾನಸೇಂದ್ರಿಯ ವ್ಯಾಪಾರವಾಗಿರಲಾಗಿ ಇವರೆಲ್ಲರೂ ಮಾನಸೇಂದ್ರಿಯದಲ್ಲಿ ತಾತ್ಕಾಲಿಕ ಮಾತ್ರದಲ್ಲಿ ಅನುಭವಿಸಲ್ಪಡುವ ಸುಖವನ್ನು ಹೆಚ್ಚಿಸುವದರಲ್ಲಿ ನಿರತರಾದರು. ಸ್ಮರಣವೇಳೆಯಲ್ಲಿ ಸುಖವನ್ನು ಹುಟ್ಟಿಸುವ ಶಕ್ತಿಯು ಇವರಿಗೆ ಮೀರಿದ ಶಕ್ತಿಯು. ಮತ್ತು ಸದ್ವಾರಕವಾಗಿ ಮಾನಸೇಂದ್ರಿಯದಲ್ಲಿ ಹುಟ್ಟುವ ಸುಖಕ್ಕಿಂತ ಅದ್ವಾರವಾಗಿ ಮಾನಸೇಂದ್ರಿಯದಲ್ಲಿ ಹುಟ್ಟುವ ಸುಖವು ಘನವಾದದ್ದು. ಸದ್ವಾರಕವಾಗಿ ಹುಟ್ಟುವದು ತಾತ್ಕಾಲಿಕವಾದದ್ದು. ಅದ್ವಾರಕವಾಗಿ ಹುಟ್ಟುವದು ಸ್ಮರಣವೇಳೆಯದು. ಇಂದ್ರಿಯದ್ವಾರಾ ಹುಟ್ಟುವ ಸುಖಗಳಲ್ಲಿ ತಾರತಮ್ಯವಿರುವ ಕಾರಣ ಆಯಾ ಇಂದ್ರಿಯಗಳ ಬಲದಿಂದ ಲೋಕಹಿತವನ್ನು ಹುಟ್ಟಿಸಿ ಹೆಚ್ಚಿಸುವದರಲ್ಲಿ ಯತ್ನಿಸಿದ ಹಿತೈಷಿಗಳಲ್ಲಿ ತಾರತಮ್ಯಗಳನ್ನು ಒಪ್ಪಿಕೊಳ್ಳಬೇಕು.

ಹೀಗಿರಲಾಗಿ ಸುಖವನ್ನು ಹೆಚ್ಚಿಸಿ ಲೋಕೋಪಕಾರ ಮಾಡುವ ವಿಷಯದಲ್ಲಿ ನಿರತರಾದ ಹಿತೈಷಿಗಳಲ್ಲಿ:—

ಮನೆ, ಮಠ, ಅರಮನೆ, ಆರಾಮಗಳನ್ನು ನಿರ್ಮಿಸಿದ ಕಲಾಜ್ಞರ ಉಪಕಾರವು ಹೆಚ್ಚೋ, ಬಂಡಿ, ಬೈಸಿಕಲ್, ರೈಲ್‌ಗಳನ್ನು ನಿರ್ಮಿಸಿ ಉಪಕಾರ ಮಾಡಿದ ಕಲಾವಿದರ ಉಪಕಾರವು ಹೆಚ್ಚೋ, ವೀಣೆ, ಸಾರಂಗಿ, ಹಾರ್‌ಮೋನಿಯಮ್ ಮೊದಲಾದ ಸಂಗೀತ ವಾದ್ಯಗಳನ್ನು ಮಾಡಿದ ಉಪಕಾರಿಗಳ ಉಪಕಾರವು ಹೆಚ್ಚೋ, ಚಿತ್ರಪಟಗಳನ್ನು ನಿರ್ಮಿಸಿದ ಕಲಾಕುಶಲರ ಉಪಕಾರವು ಹೆಚ್ಚೋ ಕಾವ್ಯಗಳನ್ನು ನಿರ್ಮಿಸಿ ಅದ್ವಾರಕವಾದ ಮಾನಸಿಕ ಸುಖವನ್ನು ಹುಟ್ಟಿಸಿ ಆ ಸುಖವನ್ನು ಸ್ಮರಣವೇಳೆಯಲ್ಲಿ ಅತ್ಯತಿಶಯವಾಗಿ ಅನುಭವಿಸುವಂತೆ ಮಾಡಿದ ಪರಮೋಪಕಾರಿಗಳಾದ ಕವಿಗಳ ಉಪಕಾರವು ಮೇಲೊ? ಯೋಚಿಸಿರಿ. ಇವರ ಸಮುದಾಯದಲ್ಲಿ ಯಾರು ಅಗ್ರಾಸನವನ್ನು ವಹಿಸುವದಕ್ಕೆ ಅರ್ಹರೋ ನೀವೇ ಹೇಳಿ. ಕವಿಗಳೇ ಕಲಾವಿದರಾದ ಹಿತೈಷಿಗಳಲ್ಲಿ ನಿಪುಣರೆಂದು ಎಲ್ಲರೂ ಒಪ್ಪಿಕೊಳ್ಳಬೇಕು. ಕವಿಗಳೇ ಜೈಸಲಿ! ಅವರ ಕಾರ್ಯವೇ ಸರ್ವತ್ರ ವ್ಯಾಪಿಸಲಿ! ಅವರ ಪ್ರಭಾವವೇ ಎಲ್ಲಾ ಕಡೆಯಲ್ಲಿಯೂ ಹರಡಲಿ!

ಈ ವಿಷಯುವನ್ನೇ ಬೇರೆ ರೀತಿಯಲ್ಲಿ ಮುಂದೆ ವಿವರಿಸುವೆವು.

ಲೋಕದಲ್ಲಿ ಎಲ್ಲಾ ಸೀಮೆಗಳಲ್ಲಿಯೂ, ಎಲ್ಲಾ ತರದ ಜನಗಳು ಪರಿಚಯ ಮಾಡಿ ಅನುಭವಿಸಿದ ಅನುಭವಗಳನ್ನು ಅನುಭವಮಾಡಲು ನಮಗೆ ಸಾಧ್ಯವೇ? ಇಲ್ಲ; ನಾವು ನಮ್ಮ ಸುತ್ತಮುತ್ತಲಿರುವ ಪದಾರ್ಥಗಳ ಅನುಭವಗಳನ್ನು ಹೊಂದ ಬಹುದು. ಹಿಮಾಚಲದ ತಪ್ಪಲಿಂದ ರಾಮಸೇತುವರೆಗೂ, ವಾಸಮಾಡುವ ಜನ ಗಳ ಅನುಭವವನ್ನು ಒಂದುವೇಳೆ ಹೊಂದಬಹುದಾದರೂ, ಇತರ ದೇಶಗಳಲ್ಲಿ ಅದೇ ಕಾಲಕ್ಕೆ ಉಂಟಾಗುವ ಇತರರ ಅನುಭವಗಳನ್ನು ಹೊಂದಲಾರೆವು. ಆಲ್ಪ್ಸ್ ಬೆಟ್ಟಗಳಲ್ಲಿ ಹಿಮಝುರಿಗಳ ವೇಗವನ್ನೂ, ಅವುಗಳಲ್ಲಿ ಆಗಾಗ್ಗೆ ಉಂಟಾಗುವ ಚಿತ್ರವಿಚಿತ್ರವಾದ ಆಕೃತಿಗಳನ್ನೂ, ಉತ್ತರಸಾಗರದ ತೀರದಲ್ಲಿ ಹಿಮಂತಋತು ವಿನಲ್ಲಿ ಪ್ರಕಾಶಿಸುವ "ಅರೋರ್" ಎಂಬ ತೇಜೋರಾಶಿಯ ಮಹಿಮೆಯನ್ನೂ, ಸಹಾರಾಮರಳುಗಾಡಿನ ಮಧ್ಯದಲ್ಲಿ ಬೀಸುವ ಸೈಮೂಮ್ ಬಿರುಗಾಳಿಯ ಹಾವ ಳಿಯನ್ನೂ, ಸಮುದ್ರದ ಅಲೆಗಳ ರಭಸಕ್ಕೆ ಸಿಕ್ಕಿ, ಮುಳುಗಿ ಹೋಗುವ ಹಡಗಿನ ರೀತಿಯನ್ನೂ ಮತ್ತು ಅದರೊಳಗೆ ಪ್ರಯಾಣಮಾಡುತ್ತಿರುವ ನಾವಿಕರು ಪ್ರಾಣ ಗಳನ್ನು ಉಳಿಸಿಕೊಳ್ಳಲು ಮಾಡುವ ವ್ಯಾಪಾರಗಳನ್ನೂ, ರೋದನಗಳನ್ನೂ ಸಮು ದ್ರದ ಅಡಿಯಲ್ಲಿರುವ ಜಲಚರಗಳ ವಿಸ್ಮಯವಾದ ಆಕೃತಿ ಮತ್ತು ವ್ಯಾಪಾರಗ ಳನ್ನೂ, ವಿಮಾನದಲ್ಲಿ ಕುಳಿತು ಅಂತರಿಕ್ಷದಲ್ಲಿ ಸಂಚಾರಹೊರಟಾಗ ಭೂಮಿಯ ಮೇಲೆ ಕಂಡು ಬರುವ ವಿಚಿತ್ರ ದರ್ಶನಗಳನ್ನೂ, ನಯಾಗರಾ ನದಿಯ ಜಲಪಾತದ ಅದ್ಭುತ ದರ್ಶನವನ್ನೂ, ಪ್ರೈಯರಿಗಳೆಂದು ಕರೆಯಲ್ಪಡುವ ಅಮೇರಿಕಾಖಂಡದ ಹುಲ್ಲುಗಾಡು ಹತ್ತಿಕೊಂಡಾಗ ಆ ಕಾಡಿನೊಳಗಿರುವ ಕಾಡುಮೃಗಗಳ ಸಂಕಟ, ಗಾಬರಿ, ನಿರಾಶೆ ಮೊದಲಾದುವುಗಳನ್ನೂ, ಆಫ್ರಿಕಾಖಂಡದ ಬೆಟ್ಟಗಳ ಕಣಿವೆಯಲ್ಲಿ ಹೆಬ್ಬಾವುಗಳ ತೆಕ್ಕೆಯಲ್ಲಿ ಸಿಕ್ಕಿ, ನರಳಿ ಊಳುತ್ತಿರುವ ಸಿಂಹಶಾರ್ದೂಲಗಳನ್ನೂ ಇವೇ ಮೊದಲಾದ ಈಶ್ವರಸೃಷ್ಟಿಯಲ್ಲಿ ನಾವು ನೋಡಬಹುದಾದ ದೇಶ, ಮೃಗ, ಪಕ್ಷಿ, ಪ್ರಾಣಿಗಳಲ್ಲಿ ಸಂಭವಿಸುವ ಚಮತ್ಕಾರಗಳನ್ನು ಸಾಕ್ಷಾತ್ತಾಗಿ ನೋಡಿ, ಇಷ್ಟನ್ನೂ ಅನುಭವಿಸಲು ಒಬ್ಬನಿಗೆ ಒಂದು ಜೀವಮಾನಕಾಲವು ಸಾಕಾದೀತೆ? ಇದೊಂದು ವಿಷಯುವನ್ನು ಮನಸ್ಸಿಗೆ ತೆಗೆದುಕೊಳ್ಳಿರಿ. ಒಬ್ಬೊಬ್ಬರೆ ಒಂದೊಂದು ವಿಧವಾದ ಅನುಭವವನ್ನು ಹೊಂದಿದರೇ ಹೊರತು, ಎಲ್ಲಾ ತೆರದ ಅನುಭವಗಳನ್ನೂ, ಎಲ್ಲರೂ ಒಟ್ಟಿಗೆ, ಸಂಪೂರ್ಣವಾಗಿ ಅನುಭವಿಸಲಿಲ್ಲ. ನಮಗೇನೇ ಅವರ ಅಷ್ಟು ಅನುಭವ

ಗಳನ್ನೂ ಒಟ್ಟಿಗೆ ಅನುಭವಿಸಲು ಆಶೆ ಇದೆ. ಎಲ್ಲರೂ ಅನುಭವಿಸಿ ಪಟ್ಟ ಸುಖಾನುಭವಗಳನ್ನು ನಾವೆಲ್ಲರೂ ಸಂಪೂರ್ಣವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಅನುಭವಿಸುವುದಾದರೆ, ನಮ್ಮ ಸುಖವು ಎಷ್ಟುಮಟ್ಟಿಗೆ ಹೆಚ್ಚುವುದು, ಯೋಚಿಸಿರಿ. ಆದ್ದರಿಂದ ಎಲ್ಲರ ಅನುಭವವನ್ನು ಈ ಜೀವಮಾನದಲ್ಲಿಯೇ ಅನುಭವಿಸಬೇಕೆಂಬ ಆಶೆಯು ಯಾರಿಗೆ ತಾನೇ ಹುಟ್ಟದು? ಆದರೂ ಆ ಅನುಭವಗಳಿಗಾಗಿ, ಅವರವರು ಪಟ್ಟ ಕಷ್ಟಗಳನ್ನು ಯೋಚಿಸಿದರಂತೂ ಅವರವರ ಆಯಾ ಕಷ್ಟಗಳೂ ಬೇಡ. ಅವರವರ ಆಯಾ ಸುಖಾನುಭವಗಳೂ ಬೇಡ ಎಂದು ತೋರುತ್ತದೆ. ಹೀಗಿರಲು ಅವರು ಪಟ್ಟ ಕಷ್ಟಗಳಲ್ಲಿ ತಿಲದಷ್ಟು ಕಷ್ಟಕ್ಕೆ ಒಳಗಾಗದೆ, ಅವರ ಅನುಭವಗಳು ಯಾವತ್ತನ್ನೂ, ಹೊಂದಬಹುದಾದ ಒಂದು ಸಂಭವವಿದ್ದರೆ, ಯಾರು ತಾನೆ ಅವುಗಳನ್ನು ಬೇಡವೆಂದು ಆ ಅವಕಾಶವನ್ನು ತಳ್ಳಿಬಿಡುವರು? ಆ ಸುಖಾನುಭವವನ್ನು ಅನುಭವಿಸಲು ಯಾರು ತಾನೇ ಮುಂದುವರಿಯರು? ತುಸವೂ ತ್ರಾಸವಿಲ್ಲದೆ, ಎಷ್ಟೋ ತನು ಮನ, ಶ್ರಮಗಳೂ, ಧನನಷ್ಟವೂ, ಕಾಲ, ಸಾಹಸಗಳೂ, ಅಪಾಯಗಳೂ, ಬೇಕಾಗಿರುವ ಲೋಕದ ಚಿತ್ರಸೃಷ್ಟಿಸ್ಥಿತಿಗಳ ಪರಿಚಯದಮೂಲಕ ಲಭಿಸುವ ಸುಖಾನುಭವಗಳನ್ನು, "ಶ್ರಮಲೇಶವನ್ನೂ ಪಡಬೇಡಿರಿ; ನಾವು ಅಂತಹ ಸುಖಾನುಭವಗಳನ್ನು ದಾನಕೊಡುವೆವು. ಕೈನೀಡಿ ತೆಗೆದುಕೋಂಡು ಅನುಭವಿಸಿ, ನಿಮಗೆ ಸೇರಿದ ಜನರಿಗೂ ಕೊಡಿರಿ. ಅವರೊಡನೆ ಕಲೆತು, ಆ ಸುಖವನ್ನು ಅಭಿವೃದ್ಧಿಪಡಿಸಿಕೊಂಡು ಆನಂದಪಾರವಶ್ಯವನ್ನು ಹೊಂದಿರಿ." ಎಂದು ಹೇಳುತ್ತಾ ನಿಮ್ಮ ಅವಕಾಶವನ್ನು ನಿರೀಕ್ಷಿಸಿ, ಆ ಅನುಭವಗಳನ್ನು ಕೊಡಲು ಕೃಪೆಮಾಡಿ, ನಿಮ್ಮ ಹತ್ತರಕ್ಕೆ ಯಾರಾದರೂ ಅಂಥ ಮಹಾತ್ಮರು ಬಂದರೆ, ಅವರನ್ನು ತಿರಸ್ಕರಿಸುವಿರಾ? ಅವರ ಪರಾರ್ಥೈಕಪ್ರಯೋಜನವಾದ ದಾತೃತ್ವವನ್ನು ಎಷ್ಟು ಕೊಂಡಾಡುವಿರಿ? ಅವರಲ್ಲಿ ಎಷ್ಟು ಕೃತಜ್ಞತೆಯನ್ನು ತೋರಿಸುವಿರಿ?

ಹಾಗೆ ನಮಗೆ ಹಿತಮಾಡಬೇಕೆಂಬ ಇಚ್ಛೆಯಿಂದ ನಮ್ಮ ಹತ್ತರಕ್ಕೆ ಬರುವ ಹಿತೈಷಿಗಳು ಯಾರಿರುವರು? ಅವರು ಯಾವ ರೀತಿಯಲ್ಲಿ ಆ ಅನುಭವಾನಂದವನ್ನು ಕೊಡುತ್ತಿರುವರು? ಆ ಮಹಾತ್ಮರು ಎಲ್ಲಿರುವರು? ಅವರನ್ನು ನಾವೇ ಹುಡುಕಿಕೊಂಡು ಹೋಗಿ, ಆಶ್ರಯಿಸೋಣವೆಂದು ಯತ್ನಿಸಲೊಲ್ಲವೇ? ಆ ಮಹಾತ್ಮರು ನಮ್ಮ ಅನುಗ್ರಹವನ್ನು ನಿರೀಕ್ಷಿಸುತ್ತಾ ಸರ್ವತ್ರ ನಮ್ಮ ಹತ್ತರವೇ ಕಾದಿದ್ದರೂ ನಾವು ಅವರ ಕಡೆ ಲಕ್ಷ್ಯಕೊಡುವದಿಲ್ಲ. ನಾವು ಅಂಥ ಗರ್ವಾಂಧರು!

ಆ ಮಹಾತ್ಮರಲ್ಲಿ ಚಿತ್ರಕರ್ಮನಿಪುಣರು ಒಬ್ಬರಾಗಿರುವರು. ಅವರು ತಾವು ನೋಡಿದ ಮನೋಹರವಾದ ನೋಟಗಳಲ್ಲಿ ತಾವು ಪಟ್ಟ ಅನುಭವಗಳನ್ನು ಇತರರೂ ಹೊಂದಿ ಆನಂದಪಡಲಿ, ಎಂದು ಚಿತ್ರಫಲಕದಮೇಲೆ ಆ ನೋಟಗಳನ್ನು ಲೇಖಿನಿಗಳಿಂದ ಚಿತ್ರಿಸಿ, ನಮಗೆ ತೋರಿಸುತ್ತಿರುವರಲ್ಲವೇ? ಅವರು ಬರೆದಿಟ್ಟು ಹೋದ ಚಿತ್ರಪಠಗಳನ್ನು ನೋಡಿ, ಆ ನೋಟಗಳ ಸುಖವನ್ನು ಎಲ್ಲೆಲ್ಲಿಯೂ ನಾವು ನೋಡಿ ನೋಡಿ ಆನಂದಪಡುತ್ತಿರುವುದಿಲ್ಲವೇ? ಅವರ ಉಪಕಾರಕ್ಕೆ ನಮ್ಮಲ್ಲಿ ಎಷ್ಟೋ ಜನರು ಕೃತಜ್ಞತೆಯನ್ನು ತೋರಿಸುತ್ತಿಲ್ಲವೇ? ಈಗಲೂ ಯೂರೋಪಖಂಡದಲ್ಲಿ ಹುಟ್ಟಿ ಪ್ರಸಿದ್ಧಿಯನ್ನು ಪಡೆದ ರಫೇಲ್‌ಮೈಕೇಲ್ ಆಂಗಿಲೋ ಮೊದಲಾದ ಚಿತ್ರಿಕಶ್ರೇಷ್ಠರ ಚಿತ್ರಪಠಗಳು ಸರ್ವೋತ್ಕೃಷ್ಟಗಳೆಂದು ಹೊಗಳಿಸಿಕೊಂಡು ಎಷ್ಟು ಜನಗಳ ಮನಸ್ಸನ್ನು ಅಪಹರಿಸುತ್ತಾ ಇಲ್ಲ? ನಮ್ಮ ದೇಶದಲ್ಲಿ ಈಚೆಗೆ ಬಹಳ ಪ್ರಸಿದ್ಧನಾದ ರವಿವರ್ಮನೆಂಬ ಚಿತ್ರಿಕ ಮಹಾಶಯನ ಚಿತ್ರಪಠಗಳು ಪೂರ್ವಕಾಲದ ಮಹಾತ್ಮರ ಚರಿತ್ರೆಗಳನ್ನು ನಮ್ಮ ಕಣ್ಣೆದುರಿಗೆ ತೋರಿಸಿ, ಆನಂದ ಹುಟ್ಟಿಸುತ್ತಿವೆಯಲ್ಲವೇ? ಆ ಚಿತ್ರಪಠಗಳು ಎಷ್ಟು ಆನಂದವನ್ನು ಉಂಟುಮಾಡಿದುವು? ಈಗ ಮಾಡುತ್ತಿರುವುವು? ಮುಂದೆ ಮಾಡುವವು? ಎಂಬುದಕ್ಕೆ ಅವರ ಚಿತ್ರಪಠಗಳ ಪ್ರತಿಕೃತಿಗಳು ಅನೇಕರ ಮನೆಯಲ್ಲಿ ಒಳ್ಳೆಯ ಸ್ಥಾನಗಳನ್ನು ಅಲಂಕರಿಸುತ್ತಾ ಇರುವುದೇ ದೃಷ್ಟಾಂತವಾಗಿದೆ. ಇವರು ನೇತ್ರೇಂದ್ರಿಯದಿಂದ ತಾವು ಪಟ್ಟ ಸುಖವನ್ನು ಈ ರೀತಿಯಲ್ಲಿ ಜನರಿಗೆ ದಾನಮಾಡುತ್ತಿರುವರು.

ಇವರು ಮಾಡಿದ ಉಪಕಾರದಲ್ಲಿ ಒಂದು ನ್ಯೂನತೆಯನ್ನು ಕಂಡ ಶಿಲ್ಪಿಕರೆಂಬ ಮಹಾತ್ಮರು ಅದನ್ನು ನಿವಾರಿಸಿ ಉಪಕಾರಮಾಡಲು ಮುಂದುವರಿದರು. ಚಿತ್ರಿಕರು ಎಷ್ಟೇ ರಮಣೀಯವಾಗಿ ಸರಿಯಾಗಿ ಪ್ರಪಂಚದ ಪ್ರಕೃತಿಯ ಸಾಮ್ಯವನ್ನು ಚಿತ್ರಫಲಕದಲ್ಲಿ ಎತ್ತಿ ದರ್ಶನಮಾಡಿಸಿದರೂ ಪ್ರಕೃತಿಯಲ್ಲಿರುವ ಘನಭಾಗವೂ, ವರ್ತುಲತ್ವವೂ, ಮಾಂಸಲತ್ವವೂ, ಚಲನದಿಂದುಂಟಾಗುವ ಶರೀರಗತವಾದ ಅವಯವಸ್ಥಿತಿಭೇದಗಳೂ, ಗೋಚರಿಸವು. ಇದಲ್ಲದೆ ಘನತೆಯು ವಸ್ತುಗಳಲ್ಲಿ ಸಹಜವಾಗಿರುವ ಧರ್ಮವು. ಘನತೆ ಇಲ್ಲದ ಪದಾರ್ಥವು ಕಣ್ಣಿಗೆ ಗೋಚರಿಸದು. ಇದನ್ನು ಚಿತ್ರಿಕರು ತಿಳಿಯದೆ ಇರಲಿಲ್ಲ. ತಮ್ಮ ಚಿತ್ರದಲ್ಲಿ ಆ ಕೊರತೆಯನ್ನು ಹೋಗಲಾಡಿಸಲು, ಅಪೂರ್ವ ವರ್ಣಮಿಶ್ರ ಮೊದಲಾದುವುಗಳಿಂದ ಬಹು ಕಷ್ಟಪಟ್ಟು ತೋರಿಸಿದರು. ಎಷ್ಟು ಕಷ್ಟಪಟ್ಟರೂ ಸಂಪೂರ್ಣವಾಗಿ ಮೇಲೆ ಹೇಳಿದ ಘನತೆಯ ದರ್ಶನವು ಅವ

ರಿಂದ ತೋರಿಸಲು ಆಗಲಿಲ್ಲ. ಅಂಗಾಂಗಗಳ ಪರಿಣಾಮವೂ, ಸ್ಥಿತಿಭೇದಗಳೂ, ಚಿತ್ರಪಟದಲ್ಲಿ ಅಷ್ಟು ಚೆನ್ನಾಗಿ ಕಂಡುಬರಲಿಲ್ಲ. ಈ ವಿಧವಾದ ನ್ಯೂನತೆಗಳನ್ನು ನಿವಾರಣಮಾಡುವುದೇ ಶಿಲ್ಪಿಕರ ಮುಖ್ಯವಾದ ಉದ್ದೇಶವು—ಅವರು ಶಿಲೆ, ಲೋಹ, ಮಣ್ಣು, ಮರ ಮೊದಲಾದ ದ್ರವ್ಯಗಳಿಂದ ತಾವು ನೋಡಿ ಅನುಭವಿಸಿದ ನೋಟಗಳ ಬಿಂಬಗಳನ್ನು ಮಾಡಿ, ಆ ಚಿತ್ರಿಕರ ಕಾರ್ಯದಲ್ಲಿ ಸಹಜವಾದ ಕೊರತೆಗಳನ್ನು ದೂರೀಕರಿಸಿ, ಪ್ರಕೃತಿಯ ಸಾಕ್ಷಾದ್ದರ್ಶನದಿಂದ ಉಂಟಾಗುವ ಆನಂದವನ್ನು ಲೋಕಕ್ಕೆ ದಾನಮಾಡಿದರು. ಇವರ ಉಪಕಾರವು ಚಿತ್ರಿಕರ ಉಪಕಾರಕ್ಕಿಂತ ಮೇಲಾದ್ದು. ಈ ಶಿಲ್ಪಿಕಮಹಾಶಯರಲ್ಲಿ ಪ್ರಗಲ್ಭರಾದವರು ಪರ್ಯಾಲೋಚಿಸಿ ಪ್ರಕೃತಿಪ್ರತಿಕೃತಿಗಳನ್ನು ತೋರಿಸುವ ವಿಗ್ರಹಗಳ ಮೇಲೆ ನೇತ್ರೇಂದ್ರಿಯಕ್ಕೆ ವಿಷಯವಾದ ಬಣ್ಣಗಳನ್ನೂ ಸಹ ಸೇರಿಸಿ, ಚಿತ್ರಿಕರ ಕಲೆಯಿಂದ ಉಂಟಾದ ಆನಂದವನ್ನು ಜತೆಗೊಳಿಸಿದರು. ಇವರಿಬ್ಬರ ಉಪಕಾರದಿಂದ ನಾವೇ ಸಾಕ್ಷಾತ್ತಾಗಿ, ಲೋಕವನ್ನು ಪರಿಚಯಮಾಡಿದ್ದರೆ, ಎಷ್ಟು ಆನಂದವನ್ನು ಹೊಂದುತ್ತಿದ್ದೆವೋ ಅದಕ್ಕಿಂತ ಅನೇಕ ಪಾಲು ಹೆಚ್ಚಾದ ಆನಂದವನ್ನು ಪಡುವೆವು. ಯಾತಕ್ಕೋಸ್ಕರ ಆನಂದವು ಹೆಚ್ಚಾಗಿ ಹುಟ್ಟುವುದು? ಸಾಕ್ಷಾದ್ದರ್ಶನದಲ್ಲಿ ಹುಟ್ಟಿದಷ್ಟೇ ಅಥವಾ ಕಡಿಮೆಯಾಗಿಯೇ ಇರಬೇಕಲ್ಲವೇ? ಸ್ವಲ್ಪ ಯೋಚಿಸಿದರೆ ಹೆಚ್ಚಾಗಿಯೇ ಉಂಟಾಗಬೇಕು, ಎಂದು ತಿಳಿದು ಬರುವುದು. ನಾವು ಪ್ರಕೃತಿಯ ಯಾವ ಭಾಗವನ್ನು ನೋಡಬೇಕು? ಆನಂದ ಹುಟ್ಟುವುದಕ್ಕೆ ಅದನ್ನು ಹೇಗೆ ಪರಿಚಯ ಮಾಡಬೇಕು? ಎಂಬುದನ್ನು ಅರಿಯೆವು: ಬೆಟ್ಟದ ಮೇಲೆ ಸೂರ್ಯೋದಯದಲ್ಲಿ ಎಳಬಿಸಲು ಹಸುರಾದ ಹುಲ್ಲಿನ ಮೇಲೆ ಬೀಳುತ್ತಿದ್ದರೂ ಅನೇಕವೇಳೆ ಅದನ್ನು ನೋಡಿ ಆನಂದ ಪಡಲಿಲ್ಲ. ಬೆಕ್ಕು ಬಟ್ಟಲಿನಲ್ಲಿ ಹಾಲು ಕುಡಿಯುವುದನ್ನು ನೋಡಿ ಸುಖ ಹೊಂದಲಿಲ್ಲ. ಮಕ್ಕಳು ಅಂಗಳದಲ್ಲಿ ಕುಣಿಕುಣಿದಾಡುತ್ತ ಕೈತಪ್ಪಳೆ ಹಾಕುತ್ತ ಆಡುವದರ ಕಡೆಗೆ ನಮ್ಮ ಲಕ್ಷ್ಯವು ಹೋಗಲಿಲ್ಲ. ಚಿತ್ರಿಕರೂ, ಶಿಲ್ಪಿಕರೂ, ಅಂಥ ನೋಟಗಳನ್ನು ತೋರಿಸಿ, "ಬುದ್ಧಿಯಿಲ್ಲದ ಜಂತುಗಳೇ, ನೀವು ಏಕೆ ಕಣ್ಣುಗಳನ್ನು ಹೊಂದಿರುವಿರಿ? ಭಗವಂತನು ದಯೆಪಾಲಿಸಿದ ಕಣ್ಣನ್ನೂ ಉಪಯೋಗಿಸದೆ, ಏಕೆ ವ್ಯರ್ಥ ಮಾಡುವಿರಿ?" ಎಂದು ನಮ್ಮನ್ನು ಶಿಕ್ಷಿಸಿ ಆ ನೋಟಗಳನ್ನು ನೋಡುವಂತೆ ಮಾಡಿ ಬಲಾತ್ಕರಿಸಿ, ಆ ಸುಖಗಳನ್ನು ಅನುಭವಿಸುವಂತೆ ಮಾಡಿರುವರು. ಅವರ ಶಿಕ್ಷೆಯಿಂದ ಶಿಕ್ಷಿತರಾದ ಮೇಲೆಯಲ್ಲವೇ ನಾವು ನಮ್ಮ ಮನೆಗಳ ಮೂಲೆಗಳಲ್ಲಿ

ಮೇಜುಗಳ ಮೇಲೆ ಬೊಂಬೆಗಳನ್ನು ಇಟ್ಟು ಗೋಡೆಗಳಲ್ಲಿ ಚನ್ನಾಗಿ ಕಾಣುವ ಸ್ಥಳಗಳಲ್ಲಿ ಚಿತ್ರಪಟಗಳನ್ನು ಕಟ್ಟಿ ಆನಂದಪಡುವೆವು. ಪ್ರಕೃತಿಗೆ ಸಮಾನಾಕಾರವಾದ ಬೊಂಬೆಯಲ್ಲಿಯೂ, ಚಿತ್ರಪಟಗಳಲ್ಲಿಯೂ, ಸಾಕ್ಷಾತ್ ದರ್ಶನದ ಅನುಭವವೂ, ಆ ಅನುಭವದ ಅತಿಶಯವಾದ ಆನಂದವೂ ಉಂಟಾಗದಿದ್ದರೆ ಯಾರೂ ಹಾಗೆ ಮಾಡುತ್ತಿರಲಿಲ್ಲ! ಮತ್ತು ಮತ್ತೊಂದು ವಿಷಯವನ್ನು ಯೋಚಿಸಿರಿ. ಚಿತ್ರಿಕರ ಮತ್ತು ಶಿಲ್ಪಿಕರ ಕಲಾವ್ಯಾಪಾರವೂ, ಅದರ ಫಲವೂ, ಪರಿಚಯಾನುಭವದ ಸ್ಮರಣ ವೇಳೆಗೆ ಸದೃಶವಾದದ್ದೆಂದು ಹೇಳಬೇಕಾಗಿಲ್ಲ. ಆದ್ದರಿಂದ ಈ ಕಲಾನಿಪುಣರ ಸಾಮರ್ಥ್ಯವನ್ನು ನಾವು ಕೊಂಡಾಡುತ್ತಿರುವೆವು. ಇವರಿಬ್ಬರೂ ನೇತ್ರೇಂದ್ರಿಯ ಸುಖದಾನದಲ್ಲಿಯೇ ಪ್ರವೃತ್ತರಾದರು. ಇವರ ಉಪಕಾರಕ್ಕೆ ಇವರ ಕಲೆಯು ಸಾಮರ್ಥ್ಯಪ್ರದರ್ಶಕವಾದ ಚಿತ್ರಾದಿಗಳನ್ನು ಮನೆಯಲ್ಲಿ ಇಟ್ಟುಕೊಂಡು ಗೌರವಿಸುವ ನಮ್ಮ ಕೃತಜ್ಞತೆಯೇ ಸಾಕು. ಇವರು ಉಪಕಾರ ಹೊಂದಿದ ನಮ್ಮಿಂದ ಇನ್ನು ಹೆಚ್ಚಾದ ಕೃತಜ್ಞತೆಯನ್ನು ಅಪೇಕ್ಷಿಸರು.

ನೇತ್ರೇಂದ್ರಿಯ ದ್ವಾರಾ ಉಪಕರಿಸಿದ ಚಿತ್ರಿಕಶಿಲ್ಪಿಕರಂತೆ ಇತರ ಇಂದ್ರಿಯಗಳ ಮುಖಾಂತರ ಉಪಕಾರಮಾಡಲು ಪ್ರವರ್ತಿಸಿದವರೂ ಇರುವರೇ? ಎಂದು ಕೇಳಿದರೆ ಇರುವರು, ಎಂದು ಹೇಳಬಹುದು. ಅವರ ಉಪಕಾರವು ಇವರ ಉಪಕಾರದಷ್ಟು ಪ್ರಬಲವಾಗಿ ಇಲ್ಲ. ಅವರು ಯಾರೆಂದರೆ:—ಗಾನಕಲಾನಿಪುಣರಾದ ಗಾಯಕರೂ, ಸೂಪಶಾಸ್ತ್ರಪ್ರವರ್ತಕರೂ. ಶ್ರೋತ್ರೇಂದ್ರಿಯ ಪಾಟವವೈಶದ್ಯವನ್ನು ಪಡೆದ ಮಹಾಶಯರು, ತಾವು ಅರಣ್ಯದಲ್ಲಿ ಕೇಳಿದ, ಪಕ್ಷಿ, ಪಶು, ಮೃಗಾದಿಗಳ ಸ್ವರಗಳನ್ನೂ, ಲತಾವೃಕ್ಷಾದಿಗಳ ಚಲನಾವ್ಯಾಪಾರಗಳಲ್ಲಿ ಹುಟ್ಟುವ ಧ್ವನಿಗಳನ್ನೂ ಕೇಳಿಯೂ, ಪೂರ್ವಕಾಲದಿಂದ ಪ್ರಚಾರದಲ್ಲಿ ಬಂದ ಅಪೌರುಷೇಯವಾದ ವೇದವಾಕ್ಯಗಳನ್ನೂ ಕೇಳಿಯೂ, ಅವನ್ನು ಕೇಳಿದಾಗ ತಾವು ಅನುಭವಿಸಿದ ಸುಖವನ್ನು ಇತರರಿಗೆ ದಾನಮಾಡಬೇಕೆಂದು, ಅವುಗಳ ಧ್ವನಿಗಳ ಅನುಕಾರವನ್ನು ಏರ್ಪಡಿಸಿದುದೂ ಅಲ್ಲದೆ ಪಕ್ಷಿಮೃಗಾದಿಗಳ ಧ್ವನಿಗಳನ್ನೂ ವಿವೇಚನೆಮಾಡಿ ಕಂಡುಹಿಡಿದ ಸಪ್ತಸ್ವರಗಳ ಸಮ್ಮೇಳನದಿಂದ ಆ ಸುಖವು ಮತ್ತಿಷ್ಟು ಹೆಚ್ಚುವುದೆಂದು ಯೋಚಿಸಿ; ಆ ಸಮ್ಮೇಳನ ಪ್ರಕಾರವಾದ ರಾಗಗಳನ್ನು ಕಲ್ಪಿಸಿ, ಆ ರಾಗಗಳನ್ನು ತಾವೇ ಹಾಡಿದಾಗ ತಮ್ಮ ಹೃದಯದಲ್ಲಿ ಉಂಟಾದ ಹರ್ಷವಿಕಾಸವನ್ನು ಶಿಷ್ಯರಿಗೆ ಉಪ

ದೇಶವಮಾಡಿದರು. ಆ ರಾಗಗಳು ಈಗಲೂ ಪರಂಪರೆಯಾಗಿ ಬರುತ್ತ ಸರ್ವತ್ರ ವೊಳಗುತ್ತಿವೆ. ಆ ರಾಗಗಳನ್ನೂ ತಂತಿಗಳುಳ್ಳ ವಾದ್ಯಗಳೂ, ಚರ್ಮಸಹಿತವಾದ ವಾದ್ಯಗಳೂ, ಇತರ ವಿಧವಾದ ವಾದ್ಯಗಳೂ, ಈ ವಿಧವಾದ ವಾದ್ಯಗಳನ್ನೂ ನಿರ್ಮಿಸಿ ಗಾನಕುಶಲರಿಗೆ ಸಹಾಯಮಾಡಲು ಕೆಲವರು ಹೊರಟರು. ಅವರೂ ಈ ಗಾನಕುಶಲರ ಗೋಷ್ಠಿಯಲ್ಲಿ ಸೇರುವರು. ಅವರು ಆ ರಾಗಗಳನ್ನು ತಮ್ಮ ಕಂಠ ದಿಂದ ಹೊರಡಿಸಿದರು. ಇವರು ವಾದ್ಯಗಳಿಂದ ಹೊರಡಿಸಿದರು. ಅವರ ಸಾಮರ್ಥ್ಯ ಕ್ಕಿಂತ ಇವರ ಸಾಮರ್ಥ್ಯವು ಹೆಚ್ಚು. ಇವರು ಅವರ ಸಾಮರ್ಥ್ಯವನ್ನು ಹೊಂದದಿ ದ್ದರೆ ಆ ವಾದ್ಯಗಳನ್ನು ನಿರ್ಮಿಸಲಾರರು.

ಈ ಸಂಗೀತಜ್ಞರು ಎಷ್ಟೆಷ್ಟು ಶ್ರಮಪಟ್ಟು ಕೇಳುವವರ ಹೃದಯದಲ್ಲಿ ಆನಂದಪರವಶತೆಯನ್ನು ಹುಟ್ಟಿಸಿದರೂ, ಒಂದು ಕೊರತೆಯು ತೋರಿಬಂದಿತು. ಆಯಾ ರಾಗಗಳು ಅಪ್ಯಾಯಕರೂಪವಾದ ಬರೀ ಧ್ವನಿಗಳ ಸಮುದಾಯವಾಗಿ ದ್ದಿತು. ಬರೀ ಸ್ವರಜತಿಗಳು ಮಾತ್ರವೇ ಇದ್ದರೆ, ರಾಗದ ಆಲಾಪನೆಯು ಎಷ್ಟು ಆನಂದವನ್ನು ಕೊಡುವದೋ ಅರ್ಥಬೋಧಕವಾದ ಪದಸಮುದಾಯದಿಂದ ಆ ಸ್ವರಜತಿಗಳು ಹುಟ್ಟಿದರೆ, ಆ ರಾಗವು ಮತ್ತಿಷ್ಟು ಹೆಚ್ಚಾದ ಆನಂದವನ್ನು ಕೊಡು ವುದು. ರಾಗದಲ್ಲಿ ಅಭಿಪ್ರಾಯ ಬೋಧಕವಾದ ಪದರಾಶಿಯಿದ್ದಲ್ಲಿ ಅದರ ರಾಮ ಣೀಯಕತೆಯು ಹೆಚ್ಚುವುದೆಂದು ಎಲ್ಲರೂ ಬಲ್ಲರು. ಅದಕ್ಕಾಗಿ ರಾಗದೊಡನೆ ಸಾಹಿತ್ಯವನ್ನು ಜೋಡಿಸಿ ಕೀರ್ತನೆಗಳನ್ನು ಕಲ್ಪಿಸಿದರು. ಶ್ರೋತ್ರೇಂದ್ರಿಯದ ಮೂಲಕ ಸುಖವನ್ನು ಇತರರಿಗೆ ದಾನಮಾಡಬೇಕೆಂದು ಉದ್ದೇಶಿಸಿದ ಮಹಾ ತ್ಮರುಗಳು ಕೀರ್ತನೆಗಳನ್ನು ಬರೆದಿಟ್ಟು ಶಿಷ್ಯರಿಗೆ ಬೋಧಿಸಿದರು. ಈಗ ಪ್ರಚಾರ ದಲ್ಲಿರುವ ಕೀರ್ತನೆಗಳಲ್ಲಿ ಸಂಗೀತ ಸಾಹಿತ್ಯಗಳು ಪ್ರಾಯಶ: ಕಲೆತೇ ಇರುವುವು. ಇವರ ದಾನಕ್ಕೆ ಪಾತ್ರರಾದವರು ಬಹುಮಂದಿ. ಇವರ ದಾನಕ್ಕೆ ಶ್ರೋತ್ರೇಂದ್ರಿಯ ಪಾಟವವುಳ್ಳ ಸಮಸ್ತ ಪ್ರಾಣಿಯೂ ಅರ್ಹವಾದದ್ದು. ಇತರೇಂದ್ರಿಯಗಳಿಗಿಂತ ಶ್ರೋತ್ರೇಂದ್ರಿಯದ ಸುಖವನ್ನು ಅನುಭವಿಸಲು ಅಷ್ಟು ಪರಿಶ್ರಮವು ಬೇಕಿಲ್ಲದೆ, ಇರುವುದರಿಂದ, “ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿಗಾನರಸಂ ಫಣೀ” ಎಂಬ ಮರ್ಯಾದೆಯಲ್ಲಿ ಶ್ರೋತ್ರೇಂದ್ರಿಯದ ಮೂಲಕವಾಗಿ ಹುಟ್ಟುವ ಸುಖವು ಮನು ಷ್ಯನೇ ಮೊದಲಾಗಿ ಅನೇಕ ಪ್ರಾಣಿಗಳಿಗೆ ಅನುಭವವೇದ್ಯವಾಗಿರುವುದು. ಅದ್ದ

ರಿಂದ ಈ ಗಾನಕಲಾಕುಶಲರ ಉಪಕಾರದ ಸುಖವನ್ನು ಎಲ್ಲರೂ ತಿಳಿಯ ಬಲ್ಲರು. ಇತರೇಂದ್ರಿಯಗಳ ಸುಖಕ್ಕೆ ಆಯಾ ಇಂದ್ರಿಯಗಳಿಗೆ ಸಂಬಂಧಪಟ್ಟ ಕಲೆಗಳಲ್ಲಿ ಪರಿಶ್ರಮವು ಹೆಚ್ಚಿದ ಹಾಗೆಲ್ಲಾ ಸುಖವೂ ಹೆಚ್ಚುವಂತೆ ಈ ಕಲೆ ಯಲ್ಲಿಯೂ ಹೆಚ್ಚುವುದು.

ರಸನೇಂದ್ರಿಯದ ಸುಖದಲ್ಲಿ ಪ್ರವರ್ತಿಸಿದ ಸೂಪಕಲಾನಿಪುಣರು ಎಷ್ಟೇ ಪ್ರವರ್ತಿಸಿ ತಾವು ಪಟ್ಟಸುಖವನ್ನು ಹಿಂದೆ ಹೇಳಿದ ಕಲಾಜ್ಞರಂತೆ ಇತರರಲ್ಲಿ ಶ್ರಮಾ ಪೇಕ್ಷೆಯಿಲ್ಲದೆ, ಹುಟ್ಟಿಸಬೇಕೆಂದು ಯತ್ನಿಸಿದರೂ ಸಾಧ್ಯವಾಗದೆ ಹೋಯಿತು. ಆದ್ದರಿಂದ ಆ ಕಲಾಪ್ರವರ್ತಕರೂ ಹಿಂದೆ ಹೇಳಿದ ಮಹನೀಯರಷ್ಟು ಯಶಸ್ಸಿ ಗೆ ಬರಲಿಲ್ಲ. ಇವರು "ನಾವು ರಸನೇಂದ್ರಿಯ ದ್ವಾರಾ ಅನುಭವಿಸಿದ ಸುಖವನ್ನು ಶ್ರಮಪಡದೆ ನೀವೂ ಅನುಭವಿಸಿರಿ." ಎಂದು ದಾನಮಾಡುವದಕ್ಕೆ ಆಗದೆ ಹಿಂಜರಿ ದರು. "ನೀವೂ ಪಚನ ಪದಾರ್ಥಗಳನ್ನು ಕೂಡಿಟ್ಟು ನಾವು ಹೇಳಿದ ರೀತಿಯಲ್ಲಿ ಪಾಕಗಳನ್ನು ಮಾಡಿ ಊಟಮಾಡಿರಿ" ಎಂದು ಹೇಳಬೇಕಾಯಿತು. ಪಾಕಮಾಡು ವುದರಲ್ಲಿ ಹೆಚ್ಚು ಕಡಿಮೆಯಾದರೂ, ಪದಾರ್ಥಗಳ ಪ್ರಮಾಣದಲ್ಲಿ ಹೆಚ್ಚು ಕಡಿಮೆ ಯಾದರೂ ಅಡಿಗೆ ರುಚಿಸದು. ಮತ್ತು ಭೇದಿಸುವುದು. ರಸವತ್ತಾದ ಪದಾರ್ಥಗಳು ದೇಶದೇಶಗಳಲ್ಲಿ ಭಿನ್ನವಾಗಿರುವುವು. ಪ್ರಕೃತಿಧರ್ಮವು ದೇಶದೇಶಕ್ಕೆ ಬೇರೆ ಬೇರೆ ಯಾಗಿರುವುದು. "ಲೋಕವಾದರೋ ಭಿನ್ನರುಚಿಯು" ಇದೂ ಅಲ್ಲದೆ ಈ ರಸ ನೇಂದ್ರಿಯದ ಸುಖವನ್ನು ಅನುಭವಿಸುವುದಕ್ಕೆ ಆಹಾರ ಸಾಮಗ್ರಿಗಳನ್ನು ಜತೆಗೊಳಿ ಸುವುದರಲ್ಲಿಯೂ, ಭಕ್ಷ್ಯಾದಿಗಳನ್ನು ಸಿದ್ಧಪಡಿಸುವುದರಲ್ಲಿಯೂ, ವಿಶೇಷ ಶ್ರಮವೂ ಸಹನೆಯೂ ಬೇಕು. ಧನ, ಜನ, ಸಹಾಯ ಸಂಪತ್ತಿಯೂ ಅಪೇಕ್ಷಿತವಾಗಿರುವುದು. ಇಷ್ಟು ತೊಡಕಿರುವದರಿಂದ ರಸನೇಂದ್ರಿಯ ಸುಖಕ್ಕಾಗಿ ಹೊರಟ ಕಲೆಯು ಉತ್ತಮ ಕಲೆಯೆಂದು ಗಣನೆಗೆ ಬರಲಿಲ್ಲ. ಈ ಕಲೆಯಂತೆಯೇ ನಾಸಿಕೇಂದ್ರಿಯದ ಮೂಲಕ ಸುಖದಾನವನ್ನು ಮಾಡಲು ಪ್ರವರ್ತಿಸಿದ ಕಲೆಯೂ ಅಷ್ಟು ಪ್ರಸಿದ್ಧಿಗೆ ಬರಲಿಲ್ಲ. ಈ ಕಲೆಯಲ್ಲಿ ಪ್ರವರ್ತಿಸಿದವರು ಗಂದಿಗರು, ಮಾಲಾಕಾರರು; ಇವರ ಪರೋಪ ಕಾರ ಯತ್ನದಲ್ಲಿಯೂ ಸೂಪಕಲಾಪರಿಶ್ರಮಜನ್ಯಸುಖವನ್ನು ಅನುಭವಿಸುವುದ ರಲ್ಲಿ ಉಂಟಾದ ಶ್ರಮವೂ, ಧನ, ಜನಸಹಾಯ ಸಂಪತ್ತಿಯೂ ಅಪೇಕ್ಷಿತವಾಗಿರು ವುದು. ಈ ಕಲೆಯು ಸೂಪಕಲೆಯಂತೆ ಅತ್ಯಧಿಕವಾದ ಶ್ರಮಸಾಧ್ಯವಾಗಿಯೂ ಸಾಮಾನ್ಯವಾಗಿ ಅನುಭವಕ್ಕೆ ತರಲು ಕಷ್ಟವಾಗಿಯೂ ಧನಿಕರಾದ ಕೆಲವರಿ

ಗೇನೆ ಅನುಭವ ಸಾಧ್ಯವಾಗಿರುವದರಿಂದಲೂ ಇವುಗಳ ವಿಚಾರವನ್ನು ಇಷ್ಟಕ್ಕೆ ಸಾಕು ಮಾಡುವೆನು.

ಮೇಲೆ ನಿರೂಪಿಸಿದ ಜ್ಞಾನೇಂದ್ರಿಯ ಪಂಚಕಗಳ ದ್ವಾರಾ ಸುಖ ಹೆಚ್ಚಿಸಿ, ಲೋಕವನ್ನು ಉದ್ಧಾರ ಮಾಡಲೆಂದು ಪ್ರವರ್ತಿಸಿದ ಕಲೆಗಳಷ್ಟರಲ್ಲಿಯೂ ಪರ್ಯಾಲೋಚನೆ ಮಾಡಿದಲ್ಲಿ ಪ್ರಬಲವಾದ ಎರಡು ಕೊರತೆಗಳು ಕಂಡುಬರುತ್ತಿವೆ. ಆ ಕಲಾಜ್ಞರು ಎಷ್ಟೆಷ್ಟೋ ಯತ್ನಿಸಿದರೂ, ಆ ಕೊರತೆಗಳನ್ನು ನಿವಾರಿಸಲಾರದೆ ಹೋದರು. ಮುಖ್ಯವಾಗಿ ಚಿತ್ರಿಕರ ಮತ್ತು ಗಾನಜ್ಞರ ಕಲಾನೈಪುಣ್ಯವಿಷಯದಲ್ಲಿ ಆ ಕೊರತೆಗಳನ್ನು ನಿರೂಪಿಸುವೆನು. ಪ್ರಪಂಚವು ಚರಾಚರಾತ್ಮಕವಾಗಿಯೇ ಇರುವುದಷ್ಟೆ? ಚಿತ್ರಿಕರ ಮತ್ತು ಶಿಲ್ಪಿಕರ ನೈಪುಣ್ಯವು ನಿಂತಿರುವ ಚಲಿಸದ ವಸ್ತುವಿನ ಸ್ಥಿತಿಯನ್ನು ತೋರಿಸುವದರಲ್ಲಿ ನಿಂತುಹೋಯಿತು. ಚಲನಾತ್ಮಕ ವ್ಯಾಪಾರವನ್ನು ನಿರೂಪಿಸುವದರಲ್ಲಿ ಹೊರಟರೂ ವಸ್ತುಗಳಲ್ಲಿ ಏಕಕ್ಷಣಾವಚ್ಛಿನ್ನವಾದ ಎಂದರೆ ಒಂದು ಕ್ಷಣಕಾಲ ಮಾತ್ರದಲ್ಲಿ ಕಣ್ಣಿಗೆ ಗೋಚರವಾದ ರೂಪಾದಿಗಳನ್ನು ತೋರಿಸಬಲ್ಲದು. ತಥಾಚ ಅವರ ಸಾಮರ್ಥ್ಯವು ವಸ್ತುಗತವಾದ ಚಲನಾತ್ಮಕ ವ್ಯಾಪಾರವನ್ನು ಯಥಾವತ್ತಾಗಿ ತೋರಿಸಲಾರದೆ ಹೋಯಿತು. ಈ ನ್ಯೂನತೆಯನ್ನು ಯೋಚಿಸಿ ತತ್ವಶಾಸ್ತ್ರಜ್ಞರಲ್ಲಿ ಕೆಲವರು ಬಹು ಕಾಲದಿಂದ ಶ್ರಮಪಡುತ್ತಿದ್ದು ಕೊನೆಗೆ ಈ ಕಲೆಗಳ ನ್ಯೂನತೆಯನ್ನು ಹೋಗಲಾಡಿಸಿದರು. ಚಿತ್ರಿಕರ ಶ್ರಮವನ್ನು ಹೋಗಲಾಡಿಸಲು ಛಾಯಾಗ್ರಾಹಿಯ ಯಂತ್ರವನ್ನು ನಿರ್ಮಾಣಮಾಡಿದರು. ಇವರು ಚಿತ್ರಿಕರ ಶ್ರಮವಷ್ಟನ್ನು ಹೋಗಲಾಡಿಸಿದುದಲ್ಲದೆ ಅವರ ಕೈಯಿಂದ ಆಗದ ವಿಷಯಗಳನ್ನು ಮಾಡಿದರು. ಛಾಯಾಗ್ರಾಹಿಯ ಯಂತ್ರದಲ್ಲಿ ಒಂದು ಮಹತ್ವವುಂಟು. ಅದನ್ನು ತಮಗೆ ತಿಳಿಸುವೆನು. ಚಿತ್ರಿಕರು ತಾವು ನೋಡಿದುದನ್ನು ಮನಸ್ಸಿಗೆ ತಂದುಕೊಂಡು ಮನನಮಾಡಿ ಹಲಗೆಯ ಮೇಲೆ ಬಿಂಬಿಸಿ ಬರೆಯುತ್ತಿದ್ದರು. ಆ ಕಾರ್ಯ ನಿರ್ವಾಹಕ್ಕೆ ಎಷ್ಟು ನಿಪುಣತೆ ಎಷ್ಟು ಸಹನವಿರಬೇಕು. ಆ ಸಹನವೂ ಆ ನಿಪುಣತೆಯೂ ಸಾಮಾನ್ಯರಿಗೆ ಸಾಧ್ಯವಲ್ಲ. ಒಬ್ಬಿಬ್ಬರಿಗೆ ಸಾಧ್ಯವಾದರೆ ಹೆಚ್ಚು. ಹಾಗೆ ನೋಡಿದರೆ ಅಂಥ ನಿಪುಣತೆಯುಳ್ಳ ಮಹಿಮರು ಒಂದು ದೇಶಕ್ಕೆ ಇಬ್ಬರಿದ್ದರೆ ಹೆಚ್ಚು. ಅದರಲ್ಲಿ ಪ್ರಕೃತಿ ಸಮನಾಗಿ ಪ್ರತಿಕೃತಿಯನ್ನು ವಿನ್ಯಾಸ ಮಾಡುವರು ಸಿಕ್ಕುವುದು ಅಪರೂಪ. ಛಾಯಾಗ್ರಾಹಿ ಯಂತ್ರದ ಸಹಾಯದಿಂದ ನೋಡಿದ ನೋಟವೆಲ್ಲವನ್ನೂ ಪ್ರತಿಬಿಂಬಿಸಬಲ್ಲರು. ಚಿತ್ರಕರ್ಮ ಚಕ್ರವರ್ತಿಗಳ ಅಧಿಪತ್ಯಕ್ಕೆ ಒಳಗಾಗದ ಪ್ರದೇಶ

ಗಳ ಬಿಂಬವನ್ನೂ ತರಬಹುದು. ಇಳಿಯುವುದಕ್ಕೆ ಆಗದ ಕಮರಿಯನ್ನೂ, ಹತ್ತುವುದಕ್ಕಾಗದ ಬೆಟ್ಟವನ್ನೂ, ಕ್ರೂರಜಂತುಗಳಿಗೆ ಆವಾಸವಾದ ಅರಣ್ಯವನ್ನೂ ಚಿತ್ರದಲ್ಲಿ ತೋರಿಸಬಹುದು. ಚಿತ್ರಕರ್ಮದ ನ್ಯೂನತೆಯನ್ನು ಶಿಲ್ಪಕರ್ಮವು ನಿವಾರಿಸಿದ ಹಾಗೆ ಛಾಯಾಗ್ರಾಹಿಯ ನ್ಯೂನತೆಯನ್ನು ಸಿನಿಮಿಟೋಗ್ರಾಫ್ ಹೋಗಲಾಡಿಸಿತು. ಇದರಂತೆ ಗ್ರಾಮಫೋನ್ ಎಂಬ ರಾಗಗ್ರಾಹಿಯಂತ್ರವು ಸಂಗೀತಕಲೆಯ ಕೊರತೆಯನ್ನು ಹೋಗಲಾಡಿಸಿ, ಆ ಕಲೆಯ ಆನಂದವನ್ನು ಸರ್ವರಿಗೂ ದಾನಮಾಡಿತು. ಸಮರ್ಥನಾದ ಸಂಗೀತಜ್ಞನ ಹಾಡನ್ನು ಎಲ್ಲರಿಗೂ ಕೇಳಲು ಸುಲಭವಲ್ಲ. ಅಂಥವನು ಎಲ್ಲ ದೇಶಗಳಲ್ಲಿಯೂ ಇರುವುದಿಲ್ಲ. ಎಲ್ಲಾ ಕಡೆಗೂ ಬರುವುದಿಲ್ಲ. ಎಲ್ಲಾ ಕಡೆಯಲ್ಲಿಯೂ, ಎಲ್ಲಾ ವೇಳೆಯಲ್ಲಿಯೂ ಹಾಡುವುದಿಲ್ಲ. ಎಲ್ಲೋ ಒಬ್ಬಿಬ್ಬರು ಧನಿಕರು ಕೇಳುವರು, ಅವರ ಎದುರಿಗೆ ಹಾಡುವನು. ಅಂಥ ಮಹಾತ್ಮನು ಹಾಡಿದ ಗಾನದ ಪರಿಪಾಟಿಯನ್ನು ರಾಗಗ್ರಾಹಿಯ ಮೂಲಕ ಎಲ್ಲಾ ದೇಶದ ಬಡವರೂ, ಧನಿಕರೂ ತಮಗೆ ಇಷ್ಟ ಬಂದ ವೇಳೆಯಲ್ಲಿ ಕೇಳಿ ಆನಂದ ಪಡಬಹುದಾಯಿತು. ಆ ಮಹಾನುಭಾವನು ಸತ್ತರೂ ಅವನ ಹಾಡೂ, ಅವನ ಶಾರೀರವೂ ಚಿರಸ್ಥಾಯಿಯಾಯಿತು. ಒಬ್ಬನ ಧ್ವನಿಯನ್ನು ಅನುಕಾರ ಮಾಡಲು ಅಸಾಧ್ಯವಾಗಿತ್ತು. ಅದೂ ಸಾಧ್ಯವಾಯಿತು. ವಾದ್ಯಗಳ ಮೇಳದಲ್ಲಿ ಉಂಟಾಗುವ ರಾಗದ ಜಮಾವಣೆಯು ಒಂದು ಯಂತ್ರದಿಂದಲೇ ಆಗುವ ಹಾಗೆ ಆಯಿತು. ಇದೆಲ್ಲವೂ ಪ್ರಕೃತಿ ಶಾಸ್ತ್ರಜ್ಞರ ಉಪಕಾರವಲ್ಲವೇ? ಅವರ ಆ ಉಪಕಾರಕ್ಕೆ ಅವರನ್ನು ನಾವು ಎಷ್ಟು ಗೌರವಿಸಿದರೂ ತೀರದು.

ಏವಂಚ ಏನು ಹೇಳಿದ ಹಾಗಾಯಿತು:----ಹಿತೈಷಿಗಳು ಲೋಕೋಪಕಾರ ಬುದ್ಧಿಯಿಂದ ತಾವು ಅನುಭವಿಸಿದ ಸುಖಾನುಭವಗಳು ಬಹುಕಾಲ ನಿಲ್ಲುವಂತೆಯೂ ಸಕಲರಿಗೂ ಸುಲಭವಾಗಿ ಅನುಭವಿಸುವಂತೆಯೂ, ಉಪಾಯಗಳನ್ನು ಕಲ್ಪಿಸಿದರು. ಕಣ್ಣಿಗೆ ತಿಳಿಯುವ ಮರ, ಬೆಟ್ಟ, ಜಲಪಾತ ಮೊದಲಾದುವುಗಳನ್ನು ಚಿರಸ್ಥಾಯಿಯಾಗಿ ನಿಲ್ಲುವಂತೆ ಮಾಡುವ ಉದ್ದೇಶದಿಂದ ಚಿತ್ರಿಕರು ಅವುಗಳನ್ನು ಹಲಿಗೆಗಳ ಮೇಲೆ ತೋರಿಸಿದರು. ಈ ಚಿತ್ರಕರ್ಮದ ಕೆಲವು ಕೊರತೆಗಳನ್ನು ಶಿಲ್ಪಕಲಾನಿಪುಣರು ನಿವಾರಿಸಿದರು. ಸ್ವರ ಪರಂಪರೆಯಾದ ರಾಗವು ಚಿರಸ್ಥಾಯಿಯಾಗಿ ನಿಲ್ಲಲು ಸಂಗೀತ ಕಲಾನಿಪುಣರು ಮಾಡಿದ ಉಪಾಯವು ತಿಳಿದೇ ಇದೆ. ಇತರ ಇಂದ್ರಿಯಗಳ ಅನುಭವ ಸುಖವನ್ನು ಚಿರಕಾಲ ನಿಲ್ಲಿಸುವುದಕ್ಕೆ ಆಯಾ ಕಲಾಪ್ರವೀಣರು

ಮಾಡಿರುವ ಉಪಾಯಗಳೂ ಅದರಿಂದ ಅವರು ತೋರಿಸಿದ ನೈಪುಣ್ಯವೂ, ಅದರ ವಿಮರ್ಶೆಯಿಂದ ಲೋಕಕ್ಕೆ ಉಂಟಾದ ಸುಖಪರಂಪರೆಯೂ ಬಹಳ ಹೇಳಬೇಕಾಗಿವೆ. ಅವುಗಳಷ್ಟನ್ನೂ ಇಲ್ಲಿ ಹೇಳಬೇಕಾಗಿಲ್ಲ. ಈ ಮಹನೀಯರು ಇಷ್ಟೊಂದು ಸೌಕರ್ಯವನ್ನೂ ಅನುಭವ ಪರೀವಾಹವನ್ನೂ ಉಪಕಾರ ಮಾಡುತ್ತಿದ್ದರೂ ಅವರ ಉಪಕಾರವೆಲ್ಲವನ್ನೂ ಒಟ್ಟುಗೂಡಿಸಿದರೂ ಕವಿಯೆಂಬ ಮಹಾಪ್ರಾಜ್ಞನ ಸಾಮರ್ಥ್ಯ ಪ್ರಭಾವ ಮತ್ತು ಉಪಕಾರದ ಒಂದು ಅಂಶವನ್ನು ಹೋಲಲಾರದು ಎಂದು ದೃಢವಾಗಿ ಹೇಳಬಹುದು.

ಚಿತ್ರಿಕನು ತನ್ನ ಅನುಭವವನ್ನು ಮತ್ತೊಬ್ಬನಿಗೆ ಕೊಡಲು ಇಷ್ಟಪಟ್ಟರೆ ಅಂಥದರ ಪ್ರತಿಕೃತಿಯನ್ನು ತಂದು ಅವನ ಕಣ್ಣಿನ ಮುಂದೆ ಹಿಡಿಯಬೇಕು. ಹಿಡಿಯದಿದ್ದರೆ ಸಾಧ್ಯವಿಲ್ಲ. ಏಕೆ? ನೇತ್ರೇಂದ್ರಿಯ ಸುಖವನ್ನು ನೇತ್ರೇಂದ್ರಿಯದ ಮೂಲಕವಾಗಿಯೇ ಹುಟ್ಟಿಸಬೇಕು. ರಾಗಜ್ಞನು ಕರ್ಣೇಂದ್ರಿಯ ಸುಖವನ್ನು ತಾನು ಯಾವರಾಗದಿಂದ ಪಡೆದನೋ ಆ ರಾಗವನ್ನೇ ಮತ್ತೊಬ್ಬನ ಎದುರಿಗೆ ಹಾಡಿ ಅಥವಾ ಹಾಡಿಸಿ ಅನುಭವಿಸಿಸಬೇಕು. ರಸಕಲಾಜ್ಞನು ತಾನು ಅನುಭವಿಸಿದ ರಸನೇಂದ್ರಿಯ ಸುಖವನ್ನು ಅಂಥ ಭಕ್ಷ್ಯಾದಿಗಳನ್ನು ಮಾಡಿ ತಿನ್ನಿಸಿ ಮತ್ತೊಬ್ಬನಿಗೆ ಕೊಡಬೇಕು. ಈ ರೀತಿಯಲ್ಲಿ ಆಯಾ ಇಂದ್ರಿಯ ಸುಖವನ್ನು ಆಯಾ ಇಂದ್ರಿಯದ ಮೂಲಕವಾಗಿಯೇ ಆಯಾ ಕಲಾಪ್ರವೀಣರು ತೋರಿಸಿ ಅನುಭವಿಸಿಸಬೇಕು. ಒಂದು ಇಂದ್ರಿಯದ ಸುಖವನ್ನು ಬೇರೊಂದು ಇಂದ್ರಿಯದ ಮೂಲಕ ತಿಳಿಸಲು ಆಗುವುದಿಲ್ಲ. ಪ್ರಕೃತಿಸ್ವಭಾವವೇ ಅಂಥದು ಒಂದು ಇಂದ್ರಿಯುದ ಕಾರ್ಯವನ್ನು ಮತ್ತೊಂದು ಇಂದ್ರಿಯವು ಮಾಡುವುದಾದರೆ ಅಷ್ಟು ಇಂದ್ರಿಯಗಳ ಅವಶ್ಯಕತೆ ಇರಲಿಲ್ಲ. ಆಯಾ ಇಂದ್ರಿಯಗಳ ಸುಖವನ್ನು ಇತರರು ಅನುಭವಿಸುವಂತೆ ಮಾಡುವಲ್ಲಿ ಇಷ್ಟು ಕಲಾಪ್ರವೀಣರುಗಳ ಸಹಾಯಾವಶ್ಯಕತೆಯೂ ಬೇಕಾಗಿರಲಿಲ್ಲ.

ಇನ್ನು ಕವಿಯ ಮಹತ್ವದ ಕಡೆಗೆ ಸ್ವಲ್ಪ ತಿರುಗೋಣ. ಕವಿಯು ಭಗವಂತನ ಸೃಷ್ಟಿ ವೈಚಿತ್ರ್ಯವನ್ನು ಚೆನ್ನಾಗಿ ಪರಿಶೀಲಿಸಿದನು. ಅವನು ನಾಭಿಕಂಠಾದಿಸ್ಥಾನಗಳಲ್ಲಿ ಇರುವ ಒಂದು ಶಕ್ತಿ ವಿಶೇಷವನ್ನು ಅವಗಾಹಿಸಿ ಆ ಶಕ್ತಿಯ ಸಹಾಯ ಸಂಪತ್ತಿನಿಂದ ತನ್ನ ಸಾಮರ್ಥ್ಯವನ್ನು ಸರ್ವತ್ರ ಬೆಳಗಿ ಇತರ ಕಲಾನಿಪುಣರ ನೈಪುಣ್ಯವನ್ನು ಹೊಂದಿ ತಾನೇ ಹಿತೈಷಿಗಳ ಚಕ್ರವರ್ತಿ ಎನಿಸಿಕೊಂಡನು. ಕಂಠಾಭಿಷ್ಠಾನಮತ್ತಾದ ಮುಖದಲ್ಲಿ ಶಬ್ದೋಚ್ಚಾರಣಶಕ್ತಿಯೊಂದುಂಟು. ಅದೇ ವಾಕ್ಶಕ್ತಿ

ಅಥವಾ ಮಾತನ್ನಾಡುವ ಸಾಮರ್ಥ್ಯವು. ಮಾತಿಗೆ ಅತ್ಯಾಶ್ಚರ್ಯಕರವಾದ ಒಂದು ಶಕ್ತಿಯುಂಟು. ಮಾತು ಲೋಕದಲ್ಲಿ ಇಂದ್ರಿಯಗಳದ್ವಾರಾ ಪ್ರತ್ಯಕ್ಷವಾದ ಪ್ರತ್ಯಕ್ಷವಾಗುವ ವಿಷಯಗಳನ್ನು ವಾಚಿಸುವದು, ಎಂದರೆ ಇಂದ್ರಿಯದ್ವಾರಾ ಪ್ರತ್ಯಕ್ಷವಾದ ವಿಷಯಗಳನ್ನು ಅಂತರಿಂದ್ರಿಯವಾದ ಮನಸ್ಸಿನಲ್ಲಿ ಪ್ರತಿಭಾಸಿಸುವುದು; ಎಂದರೆ ಹಿಂದೆ ಅನುಭವಿಸಿದ ಆ ವಿಷಯಗಳನ್ನು ಮನಸ್ಸಿನ ಮುಂದೆ ಪುನಃ ಎತ್ತಿತಂದು ತೋರಿಸುವುದು. ಇಂದ್ರಿಗಳಿಂದ ಪರಿಚಯು ಮಾಡಿದ ವಸ್ತುಗಳ ಸಂಸ್ಕಾರವು ಮನೋಭಿತ್ತಿಯಲ್ಲಿ ನಿಲ್ಲುವುದು. ನಿಂತರೂ ಅವ್ಯಕ್ತವಾಗಿಯೇ ನಿಲ್ಲುವುದು. ಎಂದರೆ ಮನಸ್ಸಿನಲ್ಲಿ ಆ ಸಂಸ್ಕಾರಗಳು ಸರ್ವಕಾಲದಲ್ಲಿಯೂ ಇರುವಂತೆ ತೋರಿಬರುವುದಿಲ್ಲ. ಆದರೂ ಅಲ್ಲಿ ಅವು ಇದ್ದೇ ಇರುವುವು. ಹಾಗೆ ಇರುವ ಆ ಸಂಸ್ಕಾರಗಳ ಸ್ಥಿತಿಯನ್ನು ಅವ್ಯಕ್ತಸ್ಥಿತಿಯೆಂದು ಕರೆಯುಬಹುದು. ಇಂದ್ರಿಯಗಳ ಮೂಲಕ ಹೊಂದಿದ ಪರಿಚಯಾನುಭವಗಳು ಆಯಾ ಶಬ್ದಗಳ ಶ್ರವಣದಿಂದ ಪುನಃ ವ್ಯಕ್ತವಾಗುವುವೆಂದರೆ, ಪ್ರತ್ಯಕ್ಷವೇಳೆಯಲ್ಲಿ ಚಿತ್ರ ಭಿತ್ತಿಯಲ್ಲಿ ಇಂದ್ರಿಯಗಳ ಮೂಲಕ ಪರಿಚಯು ಮಾಡಿದ ವಸ್ತುಗಳ ಚಿತ್ರವು ಶಬ್ದಶ್ರವಣ ಕಾಲದಲ್ಲಿ ಮನೋಭಿತ್ತಿಯಲ್ಲಿ ಹುಟ್ಟುವುದು. ಆ ಚಿತ್ರಕ್ಕೆ ಸಂಸ್ಕಾರವೆಂಬ ಶಬ್ದವನ್ನು ಉಪಯೋಗಿಸಿ ಚಿತ್ತಸಂಸ್ಕಾರವೆಂದು ಕರೆಯುಬಹುದು. ಆ ಸಂಸ್ಕಾರವು ಅವ್ಯಕ್ತಸ್ಥಿತಿಯಲ್ಲಿ ಚಿತ್ತಭಿತ್ತಿಯಲ್ಲಿ ಅವ್ಯಕ್ತವಾಗಿ ನಿಂತಿರುವುದು. ಅವ್ಯಕ್ತಸ್ಥಿತಿಯಲ್ಲಿದ್ದ ಆ ಸಂಸ್ಕಾರವನ್ನು ಪುನಃ ಗಮನಕ್ಕೆ ತರಲು ಅಥವಾ ವ್ಯಕ್ತವಾಗಿಸಲು ಪದಗಳನ್ನು ಇಟ್ಟುಕೊಂಡಿರುವೆವು. ಆ ಪದಗಳನ್ನು ಕೇಳಿದಾಗ ಕೇಳಿದವರ ಚಿತ್ತಭಿತ್ತಿಯಲ್ಲಿ ತಾವು ಹಿಂದೆ ಅನುಭವಿಸಿದ ವಸ್ತುವಿನ ಚಿತ್ತಸಂಸ್ಕಾರಕ್ಕೆ ಸಜಾತೀಯವಾದ ಸಂಸ್ಕಾರವೂ ತನ್ಮೂಲಕ ಹುಟ್ಟಿದ ಅನುಭವವೂ ಹುಟ್ಟುವುವು. ಇದೇ ವಾಚ್ಯಶಕ್ತಿಯು. ಕುದುರೆ ಎಂಬ ಶಬ್ದವನ್ನು ಒಬ್ಬನು ಉಚ್ಚರಿಸಿದ ಕೂಡಲೆ ಕೇಳಿದವರ ಮನಸ್ಸಿನ ಮುಂದೆ ಕುದುರೆಯ ಆಕೃತಿಯು ತರಲ್ಪಡುವುದು. ಇದೇ ಆ ಶಬ್ದದ ಶಕ್ತಿಯು. "ಕುದುರೆಯು ಓಡುತ್ತಿದೆ; ಕೆಂಪುಬಣ್ಣದ ಅಂಗಿಯನ್ನು ಕರಿಟೊಪ್ಪಿಗೆಯನ್ನು ಹಾಕಿಕೊಂಡ ಸವಾರನು ಓಡಿಸುತ್ತಾನೆ" ಎಂಬ ವಾಕ್ಯ ಶ್ರವಣಾನಂತರದಲ್ಲಿ ಏನಾಗುವುದು; ವಿಚಾರಿಸಿರಿ. ಮೊದಲು ಒಂದು ಕುದುರೆಯ ಚಿತ್ರವೂ, ಬಳಿಕ ಅದರ ಸವಾರನು, ಅನಂತರ ಅವನ ರೂಪವು, ಆಮೇಲೆ ಅವನ ಟೊಪ್ಪಿಗೆಯೂ, ಅವನ ಅಂಗಿಯೂ ಅವನು ಕುಳಿತಿರುವ ಸಿತಿಯೂ, ಆ ಮೇಲೆ

ಕುದುರೆಯ ಓಡುವಿಕೆಯೂ, ಇವುಗಳ ಪ್ರತಿಕೃತಿಯು ಮನಸ್ಸಿನಲ್ಲಿ ಒಂದೊಂದಾಗಿ ಪ್ರತ್ಯಕ್ಷ ಸಮಾನಾಕಾರವಾಗಿ ಉಂಟಾಗುತ್ತಿದೆ. ಕೇಳಿದವರು ತಾವೇ ಸಾಕ್ಷಾತ್ತಾಗಿ ನೋಡಿದ್ದರೆ ಹೇಗೋ ಹಾಗೆಯೇ ಅವುಗಳ ಸಂಸ್ಕಾರವನ್ನು ಹೊಂದುವರು. ನಮ್ಮ ಅಭಿಪ್ರಾಯಗಳನ್ನೆಲ್ಲ ಸ್ವಲ್ಪವೂ ತಪ್ಪದೆ ಇತರರ ಮನಸ್ಸಿಗೆ ಗೋಚರವಾಗುವಂತೆ ಮಾಡುವ ರೀತಿಯೇ ಇದು. ಹೀಗೆ ಪದಗಳ ಸಮುದಾಯದಿಂದ ನಮ್ಮ ಅಭಿಪ್ರಾಯವನ್ನು ಬೋಧಿಸುವ ಪದಶಕ್ತಿಯು ವಾಚ್ಯಶಕ್ತಿ ಎನ್ನುವುದು. ಈ ಪದಶಕ್ತಿಯೇ ಕವಿಗಳ ವಜ್ರಾಯುಧವು. ಬಾಹ್ಯೇಂದ್ರಿಗಳಿಂದುಂಟಾಗುವ ಸಕಲ ವಿಧವಾದ ಅನುಭವಗಳನ್ನೂ ಕೆಲವು ಪದ ಸಂಯೋಗದಿಂದ ಪಾಠಕರ ಚಿತ್ತಭಿತ್ತಿಯಲ್ಲಿ ಬಾಹ್ಯೇಂದ್ರಿಯಗಳ ಸಹಾಯವಿಲ್ಲದೆಯೂ, ಚಿತ್ರಪಠಾದಿಗಳ ಸಹಾಯವಿಲ್ಲದೆಯೂ ಅಲ್ಪಸ್ವಲ್ಪ ಶ್ರಮವನ್ನು ಕೊಡದೆಯೂ, ತಮ್ಮ ಪರಿಚಯವನ್ನೂ ತಮ್ಮ ಅಭಿಪ್ರಾಯವನ್ನೂ, ತಾವು ಅನುಭವಿಸಿದ ಸುಖಗಳನ್ನೂ, ಹೊಂದುವಂತೆ ಮಾಡಿದವರು ಮಹಾಕುಶಲರಲ್ಲವೇ? ಒಂದೊಂದು ವಿಷಯಕ್ಕೆ ಗೋಚರವಾಗುವ ಪದಾರ್ಥದ ಗುಣಗಳನ್ನು ಬುದ್ಧಿಬಲದಿಂದ ಒಟ್ಟುಗೂಡಿಸಿ ಒಮ್ಮೆಯೇ ಅವುಗಳ ಪರಿಚಯಾನುಭವವನ್ನು ತಮ್ಮಂತೆಯೇ ತಮ್ಮನ್ನಾಶ್ರಯಿಸಿದವರು ಉಳಿದ ಕಡೆಯಲ್ಲಿಯೇ ಹೊಂದುಂವತೆ ಮಾಡುವುದು ಬಾಯಿಮಾತೇ? ಹೀಗೆ ಯಾರು ಮಾಡಬಲ್ಲರು? ಕವಿಯೊಬ್ಬನೇ ಮಾಡಬಲ್ಲನು. ಇದೂ ಅಲ್ಲದೆ ಒಂದು ಇಂದ್ರಿಯದ ಸುಖವನ್ನು ಮತ್ತೊಂದು ಇಂದ್ರಿಯವು ತಿಳಿಸಿದಷ್ಟೇ ಕವಿಯು ಶಬ್ದಶಕ್ತಿಯಿಂದ ಎಲ್ಲಾ ಇಂದ್ರಿಯದ ಸುಖವನ್ನು ಮಾನಸೇಂದ್ರಿಯವೆಂಬ ಒಂದು ಇಂದ್ರಿಯದಿಂದಲೇ ತಿಳಿಸಬಲ್ಲನು. ಲೋಕಪ್ರತ್ಯಕ್ಷದ ಸಂಸ್ಕಾರಗಳೆಲ್ಲವೂ ಮನೋಭಿತ್ತಿ ಎಂಬ ಒಂದೇ ಆಶ್ರಯದಲ್ಲಿ ನಿಲ್ಲುವುವಾದ್ದರಿಂದ ಒಂದು ಇಂದ್ರಿಯ ವ್ಯಾಪಾರವನ್ನು ಮತ್ತೊಂದು ಇಂದ್ರಿಯ ವ್ಯಾಪಾರದಿಂದ ಸೂಚಿಸಿ ವಿನಿಮಯ ಮಾಡಬಹುದಾಯಿತು. ನೇಮಿಚಂದ್ರನು "ಕಿವಿಯಿಂ ದೀಂಟಿಸುವರ್ ಸಮಸ್ತರಸಮಂ" ಎಂದು ಕವಿಗಳನ್ನೂ ಕೇಶಿರಾಜನು "ಆವಾವಿಂದ್ರಿಯದ ಸುಖಮಂ ಶ್ರೋತ್ರದೊಳುದ್ಭಾವಿಪವಾಗ್ದೇವಿಗೆ" ಎಂದು ಕವಿಗಳ ದೇವತೆಯಾದ ಸರಸ್ವತಿಯನ್ನೂ ಸ್ತೋತ್ರಮಾಡಿರುವುದರಲ್ಲಿ ಎಷ್ಟು ಅಭಿಪ್ರಾಯವಡಗಿರುವುದು. ಈ ಕವಿಗಳ ವಾಕ್ಯಗಳನ್ನು ಕೇಳಿ;—

(ವನಮಹಿಷೀ ವರ್ಣನೆ):—

ವಸುವುರ್ಪಲ್ಲಂ ಮೇದು ಸಂದೊಂದೆಡೆಯೊಳವೊಡಲಿಂ ಬಿಲ್ಲೆನಲ್
ಕೊರ್ವಿಕೆಚ್ಚಲ್।
ಕುಸಿವನ್ನಂ ಬೀಗಿವಾಲಂ ಬಿರಿವಿಡೆ ಮೊಲೆಯಿಂ ವತ್ಸಪೀತಾವಶೇಷಂ ॥
ಪೊಸಗಾರೊಳ್ಪೂರಲೊಳ್ ಕಣ್ಣರೆಮುಗುಳ್ದಿರೆಸೃಕ್ವಂಗಳಿಂ ಸೂಸೆಫೇನ।
ಪ್ರಸರಂ ಮೆಲ್ಪೊತ್ತುತುಂ ನಿಂದುದು ವನಮಹಿಷೀವೃಂದಮಾನಂದದಿಂದಂ॥

(ಕಪಿಯ ವರ್ಣನೆ):—

ಪರಿದಲೆಯಿಟ್ಟುಪಲ್ಗಿರಿದು ಹರ್ರೆನುತುರ್ಬುತೆ ಪುರ್ಬನೇರಿಸು।
ತ್ತುರುಗಿಸಿ ನೋಡಿದಾಂಟಲನುಗ್ಗೈಯ್ಯುತೆ ತೂಗುತೆ ಝುಂಕಿಸುತ್ತೆ ಬಾ ॥
ಯ್ದೆರೆದೊಲೆಯುತ್ತೆಕೆಯ್ನೆಗಪಿಜೂಗಿಸಿ ಕುರ್ಗುತು ಮೇಡಿಸುತ್ತೆ ತಾಂ।
ನೆರೆನಗಿಸಿತ್ತು ತಾಪಸಕುಮಾರರನಲ್ಲಿಯದೊಂದು ಮರ್ಕಟಂ ॥

(ದುಂಬಿಯ ವರ್ಣನೆ):—

ಪೊಸತಲರ್ದವಕುಳರಸದೊಳ್ ।
ಮುಸುಂಬುಮುಳುಗುವಿನಮೆರಗಿಕೋಡೆರಕೆಗಳಂ ॥
ಪಸರಿಸಿಕಂಪನಲಂಪಿಂ ।
ದುಸಿರ್ದುಸಿರ್ದೀಂಟಿದುದು ಮಧುಪನೆರ್ದೆಮುಳುಗುವಿನಂ ॥

ಈ ವರ್ಣನೆಗಳಲ್ಲಿ ಕವಿಯು ಲೋಕಪ್ರತಿಕೃತಿಯನ್ನು ಶಬ್ದಮುಕುರದಲ್ಲಿ ಎಷ್ಟು ಮನೋಹರವಾಗಿ ಎತ್ತಿ ತೋರಿಸಿರುವನು!

ಯಾವ ಚಿತ್ರಿಕನು ಇಂತು ಬರೆದು ತೋರಿಸಬಲ್ಲನು? ಕೇಳಿರಿ, ಒಬ್ಬ ಕವಿಯೇ ಅತ್ಯಂತ ಅತ್ಯತಿಶಯವಾಗಿ ಬರೆದ ಒಂದು ಚಿತ್ರಪಟವನ್ನು ನೋಡಿ:-

“ ತೆರೆಕರೆಗಣ್ಮಿದಪ್ಪುವಿವೆತಣ್ಣೆಲರಿಂತಡಿಯೊಳ್ರಥಾಂಗಮೀ
ನೆರೆಪುವೆರಾಜಹಂಸ ಚರಣಾಹತಿಯಿಂ ಜಳಬುದ್ಬುದಂಗಳುಂ ॥
ನೊರೆಗಳುಮೀ ತೆರಳ್ದಪುವೆ ಹೇಮಸರೋರುಹಕುಟ್ಮಳಂಗಳೊಳ್ ।
ಬಿರಿಪುವೆ ಪೋಲೆ ಪೂಗೊಳನನಿಂತಜನುಂಬರೆಯಲ್ಕೆ ಬಲ್ಲನೇ ॥”

" ಅಲರ್ವಂತಿರ್ದುವು ಕುಟ್ಮಲಂಗಳವರೊಳ್ಬಂಡುಂಡು ಪೆಣ್ದುಂಬಿಗಳ್
ನಲಿವಂತಿರ್ದುವು ಕೋರಕಂ ಪೊರೆಸಡಿಲ್ವಂತಿರ್ದುವೂಳ್ವಂತೆಕೋ ||
ಗಿಲೆವಿಂಡಿರ್ದುವು ದಿಟ್ಟನಟ್ಟುದೆನೆವ್ಯರ್ಣವ್ಯಕ್ತಿಯಿಂವೃಕ್ಷಗು |
ಲ್ಮಲತಾಜಾತಿಗಳಿರ್ದುವಿಂತು ಬರೆಯಲ್ ಪೇಳಾರ್ಗಮೇಂತೀರ್ಗುಮೇ || "

ಎಂದು ಪೇಳುವನು. ಚಿತ್ರಪಟವನ್ನು ನೋಡಿದ್ದರೂ ಇಷ್ಟು ಸ್ಫುಟವಾಗಿ ಆ ಚಿತ್ರಪಠದಲ್ಲಿ ಚಿತ್ರಿಕನು ತೋರಿಸಿದ ಸಾಮರ್ಥ್ಯವು ಗೋಚರವಾಗುತ್ತಿದ್ದಿತೆ? ಹೇಳಿ. ಕವಿಯ ಮಹಿಮೆಯು ಇಷ್ಟೇ ಅಲ್ಲ. ಬ್ರಹ್ಮನ ಸೃಷ್ಟಿಗಿಂತ ಕವಿಯ ಸೃಷ್ಟಿಯು ಹೆಚ್ಚು ಸಾಮರ್ಥ್ಯ ಪ್ರದರ್ಶಕವಾದದ್ದು. ಬ್ರಹ್ಮನು ಬಾಯಿಂದಲೇ ರಸವನ್ನು ಕುಡಿವುದೆಂದೂ, ಕಣ್ಣಿನಿಂದಲೇ ರೂಪವನ್ನು ನೋಡುವುದೆಂದೂ, ಕಿವಿಯಿಂದಲೇ ಶಬ್ದವನ್ನು ಕೇಳುವುದೆಂದೂ, ನಾಲಿಗೆಯಿಂದಲೇ ರಸವನ್ನು ತಿಳಿಯುವುದೆಂದೂ, ಕಟ್ಟಳೆ ಮಾಡಿರುವನು. ಕವಿಯಾದರೋ ಕಿವಿಯೊಂದರಿಂದಲೇ ಕುಡಿಯಿಸುವನು. ನೋಡಿಸುವನು. ವಾಸನೆಯನ್ನುಂಟು ಮಾಡಿಸುವನು, ಸ್ಪರ್ಶಸುಖವನ್ನು ಹುಟ್ಟಿಸುವನು. ಕವಿಯು ತನ್ನ ವಾಙ್ಮೂಲಕ ಹೊರಟ ಶಬ್ದಜಾಲವನ್ನು ಇತರರ ಕಿವಿಗಳ ಮೇಲೆ ಎಸೆದು ಮೇಲೆ ಹೇಳಿದ ವ್ಯಾಪಾರಗಳನ್ನು ಮಾಡಿಸುವನು. ಕವಿಯು ಒಂದು ವರ್ಣನೆಯನ್ನು ಮಾಡಿದರೆ ಆ ವರ್ಣನೆಯಿಂದ ನಮಗೆ ಆ ವರ್ಣಿತವಾದ ವಸ್ತುಗಳ ಪ್ರತ್ಯಕ್ಷ ಸಮಾನಾಕಾರವಾದ ಸ್ವರೂಪ ಸ್ಥಿತಿ ಮುಂತಾದವುಗಳು ಗೋಚರವಾಗುವುದಿಲ್ಲವೇ? ಕಾವ್ಯಪರಿಚಯವುಳ್ಳ ತಮಗೆ ಅನುಭೂತ ವಿಷಯವಾಗಿರುವುದರಿಂದ ಇದನ್ನು ದೃಷ್ಟಾಂತಿಸಬೇಕಾಗಿಲ್ಲ. ಒಂದು ಇಂದ್ರಿಯದಿಂದ ಹುಟ್ಟುವ ಸುಖವನ್ನು ಮತ್ತೊಂದು ಇಂದ್ರಿಯವು ತಿಳಿಸದು; ಎಂದು ಹೇಳಿದೆವಷ್ಟೇ? ಕವಿಯು ಶಬ್ದಶಕ್ತಿಯಿಂದ ಎಲ್ಲಾ ಇಂದ್ರಿಯಗಳ ಸುಖವನ್ನು ಮಾನಸೇಂದ್ರಿಯ ದ್ವಾರಾ ತಿಳಿಸಬಲ್ಲನು. ನೇಮಿಚಂದ್ರನು "ಕಿವಿಯಿಂ ದೀಂಟಿಸುವರ್ ಸಮಸ್ತರಸಮಂ" ಎಂದು ಹೇಳಿದಂತೆ ಕವಿಯು ಸಮಸ್ತವಿಧವಾದ ಪರಿಚಯಗಳನ್ನು ಶಬ್ದಜಾಲದಿಂದ ಕಿವಿಯ ಮಾರ್ಗವಾಗಿ ಮನೋಭಿತ್ತಿಯಲ್ಲಿ ಚಿತ್ರಿಸಿ ಪ್ರತ್ಯಕ್ಷವಾಗಿ ಅನುಭವಿಸಿದ್ದರೆ ಎಷ್ಟೋ, ಅದಕ್ಕಿಂತ ಹೆಚ್ಚಾದ ಅನುಭವವನ್ನು ಕೊಡುವನು.

ಇದೂ ಅಲ್ಲದೆ, ಬ್ರಹ್ಮಸೃಷ್ಟಿಗೂ ಕವಿಸೃಷ್ಟಿಗೂ ಬಹಳ ತಾರತಮ್ಯವುಂಟು. ಪ್ರಪಂಚದಲ್ಲಿ ಭಯಜನಕವಾದ ವಸ್ತುಗಳು ಭಯವನ್ನು ಹುಟ್ಟಿಸುವುವು. ಜಿಗುಪ್ಸಿತ

ವಾದ ವಸ್ತುಗಳು ಜಿಗುಪ್ಸಿತವಾಗಿಯೂ, ದುಸ್ಸಹವಾದುವುಗಳು ದುಸ್ಸಹಗಳಾಗಿಯೂ, ದುಃಖಜನಕಗಳಾದುವು ದುಃಖಜನಕಗಳಾಗಿಯೂ ಇರುವುವು. ಇವೆಂದೆಂದೂ, ಆನಂದಜನಕಗಳಾಗವು. ಜಿಂಕೆಯ ಮೇಲೆ ಬಿದ್ದು ಅದರ ರಕ್ತವನ್ನು ಹೀರುತ್ತಿರುವ ಹುಲಿಯನ್ನು ಸಾಕ್ಷಾತ್ತಾಗಿ ಎದುರಿಗೆ ನಿಂತುನೋಡಲು ಕಾಡಿಗೆ ಹೋಗುವವರು ಯಾರು? ಕೊಳೆತು ನಾರಿ ಹುಳುಗಳು ವಿಲಿವಿಲಿಯೆಂದು ಮೊದಕುತ್ತಿರುವ ಕತ್ತೆಯ ಶವವನ್ನು ನೋಡಲು ಯಾರು ಇಷ್ಟಪಡುವರು? ಸಹಾರಾಮರಳುಗಾಡಿನ ಬಿಸಿಲಿನ ತಾಪವನ್ನು ಸಹಿಸಲು ಯಾರು ಒಪ್ಪುವರು? ಅಲ್ಪ್ಸ್ ಬೆಟ್ಟದ ಶಿಖರದಲ್ಲಿಯೂ, ಉತ್ತರ ಸಾಗರದಲ್ಲಿಯೂ ಹಿಮದ ಗಡ್ಡೆಗಳ ನಡುವೆ ಸಿಕ್ಕಿ ಸೇಡುಗೊಂಡು ಪ್ರಾಣಬಿಡುವಷ್ಟು ಸಹನೆ ಯಾರಿಗುಂಟು? ಆ ಪ್ರಾಣಬಿಡುತ್ತಿರುವ ಬಡವರ ಸಂಕಟಗಳನ್ನು ನಿಂತು ನೋಡುವಷ್ಟು ಯಾರಮನಸ್ಸು ಕಠಿಣವಿರುವುದು? ಹೀಗಿದ್ದರೂ ಮೇಲೆ ಹೇಳಿದ ವಿಷಯಗಳ ವರ್ಣನೆಗಳು ಯಾವ ಕವಿಗೆ ತಾನೆ ಮಹತ್ವವನ್ನು ತಾರವು? ಆ ವರ್ಣನೆಗಳನ್ನು ಓದಿ, ಓದಿ ಆ ಪ್ರತಿಕೃತಿಗಳ ಪ್ರತಿಭಾನಗಳನ್ನು ಮನಸ್ಸಿಗೆ ತಂದುಕೊಂಡು ಮನನಮಾಡಿ ಆನಂದಪಡುವ, ಎಂದು ಯಾವ ಸಹೃದಯನು ಉತ್ಸಾಹಿಸುವುದಿಲ್ಲ? ಕವಿಕಾರ್ಯದ ಸಾಮರ್ಥ್ಯವನ್ನು ಸ್ವಲ್ಪ ಯೋಚಿಸಿ ನೋಡಿದರೆ, ಕಾರಣವು ಗೊತ್ತಾಗದೆ ಇಲ್ಲ. ಕಾಡಾನೆಯ ವರ್ಣನೆಯೊಂದನ್ನು ದೃಷ್ಟಾಂತಕ್ಕೆ ತೆಗೆದುಕೊಳ್ಳೋಣ; ಸಲಗನು ಭಯಂಕರವಾದ ಅಡವಿಯ ನಡುವೆ ನದಿಯ ತೀರದಲ್ಲಿ ನಿಂತು ಅಲ್ಲಿದ್ದ ಒಂದು ಅತ್ಯುನ್ನತವಾದ ಮರವನ್ನು ಬುಡಸಹಿತ ಉರುಳಿಸಿ ಅದರ ಸೊಪ್ಪನ್ನು ಸೊಂಡಿಲಿನಿಂದ ಕಿತ್ತುಕಿತ್ತು ತನ್ನ ಯೂಥದಲ್ಲಿದ್ದ ಮರಿಗಳಿಗೆ ನೀಡುತ್ತಲೂ, ಆ ಮರಿಗಳು ಅತ್ತಿತ್ತ ಚದುರದಂತೆ ಕಣ್ಣೆಕಾವಲಾಗಿ ನೋಡುತ್ತಲೂ ಒಂದು ಸಣ್ಣ ಧ್ವನಿಗೂ ಹೆದರಿ ತನ್ನ ಗುಂಪನ್ನು ಬೇಗಬೇಗನೆ ಮತ್ತೊಂದು ಕಡೆಗೆ ಸಾಗಿಸುತ್ತಲೂ ಇರುವುದನ್ನು ನೋಡುತ್ತಿರುವದರಲ್ಲಿ ಆನಂದಾತಿಶಯವು ಹುಟ್ಟುತ್ತಿದ್ದರೂ ಆ ಆನೆಯ ಗುಂಪು ನಮ್ಮ ಕಡೆಗೆ ಬಂದರೇನು ಗತಿ? ಎಂಬ ಭಯವು ಆಗಲೆ ಹುಟ್ಟಿ ಆ ಆನಂದವನ್ನು ಮೆಟ್ಟಿ ತಾನೇ ತಾನಾಗಿ ಕಾಣಿಸಿಕೊಳ್ಳುವುದು; ಎದೆಯು ದಡಬಡ ಎನ್ನುವುದು; ಉಸಿರು ಕೂಡ ಹೊರಡದು. ಆ ಕಾಡಾನೆಯನ್ನು ಚಿತ್ರಿಕನ ಕಾಗದದ ಮೇಲೆ ರಚಿಸಿದ ಚಿತ್ರಪಟದಲ್ಲಿಯೂ, ಕವಿಯಿಂದ ವಾಙ್ಮೂಲಕ ಮನೋಭಿತ್ತಿಯಲ್ಲಿ ರಚಿಸಲ್ಪಟ್ಟ ಚಿತ್ರಪಟದಲ್ಲಿಯೂ ಸಾಕ್ಷಾತ್ಕರಿಸಿದಾಗ ಆ ಅಪಾಯ ಭೀತಿಯು ಎಲ್ಲಿಯೋ ಮಾಯವಾಗಿ ಆ ಆನಂದವು ಪುಷ್ಟನಾಗಿ ತಾನೇ ತಾನಾಗಿ ತಲೆಯೆತ್ತುವುದು, ಚಿತ್ರಿಕನೂ, ಶಿಲ್ಪಿಕ

ನೂ ಕವಿಯೂ ಭಯಸ್ಥಾನದಲ್ಲಿ ಉತ್ಸಾಹವನ್ನು ಇಟ್ಟು ಆ ಪರಿಚಯದ ಆನಂದವನ್ನು ಹೆಚ್ಚಿಸುವರು. ಹೀಗೆಯೇ ಜಿಗುಪ್ಸಿತವಾದ ವಸ್ತುವಿನಲ್ಲಿ ಜಿಗುಪ್ಸೆಗೆ ಕಾರಣವನ್ನೂ ತನ್ಮೂಲಕವಾಗಿ ಹುಟ್ಟುವ ನಿರೋಧಪ್ರವೃತ್ತಿಯನ್ನೂ ನಿರ್ಮೂಲಿಸುವರು. ಲೋಕವನ್ನು ಸಾಕ್ಷಾತ್ತಾಗಿ ನೋಡುವುದಕ್ಕಿಂತ ಕಲಾದ್ವಾರಾ ನೋಡುವುದು ಮಹಿಮಾಧಾಯಕವು. ಕಲೆಗಳಲ್ಲಿರುವ ಮುಖ್ಯವಾಗಿ ಕಾವ್ಯಕಲೆಯಲ್ಲಿ ಕಂಗೊಳಿಸುವ ಈ ಮಹಿಮೆಯನ್ನು ದಶರೂಪಕಕಾರನು ಸಂಗ್ರಹಿಸಿ ಹೀಗೆ ಹೇಳುತ್ತಾನೆ.

ರಮ್ಯಂ ಜಿಗುಪ್ಸಿತಮುದಾರಮಥಾಪಿನೀಚ ।
ಮುಗ್ರಂ ಪ್ರಸಾದಿಗಹನಂ ವಿಕೃತಂ ಚ ವಸ್ತು ॥
ಯದ್ವಾಪ್ಯವಸ್ತುಕವಿಭಾವಕಭಾವ್ಯಮಾನಂ ।
ತನ್ನಾಸ್ತಿಯನ್ನರಸಭಾವಮುಪೈತಿಲೋಕೇ ॥

ತಿರುಮಲಾರ್ಯನು,

ಕಡುಪಿಂ ಕೂರಾನೆ ಕಾಳ್ಕಿಚ್ಚುಡವಿ ಬರಸಿಡಿಲ್ ಬಳ್ಳಿಮಿಂಚೆಂಬಿವೆಲ್ಲಂ ।
ಪಡೆಗುಂ ನೋಳ್ಪರ್ಗೆಮೇಣುಬ್ಬೆಗದೊದವನವೇ ಮತ್ತಮೊಳ್ಗಬ್ಬದೊಳ್ಬಂ ॥
ದೊಡನೊಳ್ಪಂ ಪೆತ್ತುಮಾಳ್ಕುಂ ಸಹೃದಯಹೃದಯಾಹ್ಲಾದಮಂ ನಾಡೆಯಂತಾ।
ದೊಡಮುಳ್ಕೇಂ ಕಬ್ಬಿಗರ್ತಾಮಘಟಿತಘಟನಾ ನೂತನ ಬ್ರಹ್ಮರಲ್ತೇ ॥

ಎಂದೂ; ಭಾಸ್ಕರನು ಜೀವಂಧರ ಚರಿತ್ರೆಯಲ್ಲಿ;

* " ಬಿಸಜ ಸಂಭವಷಡ್ರಸವನಿ ।
ರ್ಮಿಸೆಕವೀಶ್ವರ ಧಾತ್ರಿಯೊಳುನವ ।
ರಸವಸೃಜಿಸಿದೊಡಾಚತುರ್ಮುಖನಿಂದ ಕವಿವರರು ॥
ವಸುಧೆಯೊಳು ಸರಿಮಿಗಿಲೆನಿಸಿಪಸ ।
ರಿಸಲುಲೋಕತ್ರಯವು ಸತ್ಕವಿ।
ಯೆಸಗಿದಂದದೊಳೊಪ್ಪಿಹುದು ತಿಳಿವರೆ ಧರಿತ್ರಿಯಲಿ ॥

ಎಂದೂ ಹೇಳುತ್ತಾರೆ. ಇವರು ಹೇಳುವ ಹಾಗೆ ಲೋಕದ ಎಂಥ ವಿಷಯಗಳೂ ಹೃದಯಂಗಮವಾಗದೆ ಇರವು.

---

* ಷಡ್ರಸ,-ಜಿಹ್ವೇಂದ್ರಿಯ ಪ್ರತ್ಯಕ್ಷವಾದುದು. ನವರಸ,-ಮಾನಸೇಂದ್ರಿಯ ಪ್ರತ್ಯಕ್ಷವಾದುದು. ಜಿಹ್ವೇಂದ್ರಿಯ ಸುಖಕ್ಕಿಂತ ಪ್ರಬಲಸುಖವನ್ನು ಕೊಡುವುದು.

ಕಲಾಕುಶಲರ ನೈಪುಣ್ಯವು ಲೋಕಸ್ಥಿತಿಗೆ ಸದೃಶವಾದ ಸ್ಥಿತಿಯನ್ನು ತೋರಿಸುವುದರಲ್ಲಿ ನಿಂತುಹೋಗುವುದು. ಕವಿಗಳಲ್ಲಿ ಇದ್ದ ಸ್ಥಿತಿಯನ್ನು ಇದ್ದಹಾಗೆ ತೋರಿಸುವುದು ಒಂದು ಮಹಿಮೆಯಾದರೂ ಅವರು ಅದನ್ನು ತೋರಿಸುವ ವೇಳೆಯಲ್ಲಿ ಅದಕ್ಕೆ ಒಂದು ವಿಧವಾದ ಶೋಭೆಯನ್ನು ಕೊಟ್ಟೇ ತೋರಿಸುವರು. ಮತ್ತು ತಾವು ತೋರಿಸುವ ಲೋಕಸ್ಥಿತಿಯಲ್ಲಿ ಪದೇಪದೇ ಪರಿಚಯ ಮಾಡೆಂಬ ಆಶೆಯನ್ನು ಜನರಲ್ಲಿ ಹುಟ್ಟಿಸುವರು. ಗೇರೆಸೊಪ್ಪೆ ಜಲಪಾತವು ಬಹು ರಮಣೀಯ ನೋಟವಷ್ಟೇ? ಅದನ್ನು ಆರುಸಲ ನೋಡುವವರೆಗೂ ನೋಡಬೇಕೆಂಬ ಕುತೂಹಲ ನಿಲ್ಲುವುದು ಕಷ್ಟ. ಏಳನೇಸಲ ನೋಡಬೇಕೆಂಬ ಆಶೆಯು ಹುಟ್ಟುವುದೇ ಇಲ್ಲ. ಅದೇ ಜಲಪಾತವನ್ನು ಕಾಳಿದಾಸನಂಥ ಕವಿಯು ವರ್ಣಿಸಿದ್ದಲ್ಲಿ ಆ ವರ್ಣನೆಯಲ್ಲಿ ಬೇಸರಿಕೆ ಹುಟ್ಟುತ್ತಿತ್ತೇ? ವಾಲ್ಮೀಕಿರಾಮಾಯಣದ ಚಿತ್ರಕೂಟದ ವರ್ಣನೆಯನ್ನೂ ಬೆಳದಿಂಗಳವರ್ಣನೆಯನ್ನೂ ಶತಾವೃತ್ತಿಯೋದಿದವರೂ ಉಂಟೆಂದು ಕೇಳಿರುತ್ತೇನೆ. "ಆಲ್ಪ್ಸ್" ಬೆಟ್ಟಗಳ ಏರುವಿಕೆಯ ವರ್ಣನೆಯನ್ನು ವೃದ್ಧರೂ ಕೂಡ ಆನಂದದೊಡನೆ ಓದುತ್ತಿರುವರಂತೆ. ಕವಿವಾಙ್ಮುಕುರದಲ್ಲಿ ಪ್ರತಿಫಲಿತವಾದ ವಸ್ತುವಿನಲ್ಲಿ ಬೇಸರಿಕೆ ಎಂಬುದೇ ಇರುವುದಿಲ್ಲ.

ಅನಿಮಿತ್ತಂ ಪನೆಗಳ್ ಪಳಚ್ಚನೆಸೆವನ್ನಂ ಮುಂದಹಾಸಪ್ರಕಾ।
ಶನಮುಂ ಮುದ್ದುಮೊಗಕ್ಕೆ ತಂದು ಪರಿತಂದಪ್ಪಪ್ಪೆನುತ್ತಪ್ಪಿಪಿಂ ॥
ದ್ಧನೆಪೊಕ್ಕೊಯ್ಯನಡಂಗಿದಾಯೆನುತೆ ಮತ್ತೈತಂದುಮುಂಡಾಡಿಭೂ।
ಪನುಮಂ ದೇವಿಯುಮಂ ಪ್ರಮೋದರಸದೊಳ್ತೇಂಕಾಡಿಪಂ ನಂದನಂ ॥ ೧ ॥

ಮಕ್ಕಳ ಈ ಆಟದ ಸುಖವನ್ನು ಅನುಭವಿಸಿದವರನೇಕರಿಲ್ಲಿರುವರು. ಈ ಪದ್ಯವನ್ನು ಕೇಳಿದಾಗ ಹುಟ್ಟಿದಷ್ಟು ಆನಂದವು ಆಗ ಹುಟ್ಟಿತೇ ಹೇಳಲಿ. ಇನ್ನೊಮ್ಮೆ ಓದುವೆನು; ಬೇಸರಿಕೆ ಹುಟ್ಟುವುದೇ ಹೇಳಲಿ. ಏನು ವರ್ಣಿಸಿರುವನು! ಎಂದು ವಿಸ್ಮಯಪಡುವಿರಿ. ಈ ಆಟವನ್ನು ಮಗುವು ಒಂದು ಸಲಮಾಡಿದರೆ ರಮಣೀಯವಾಗಿರುವುದು. ಮತ್ತೊಮ್ಮೆ ಮಾಡಿದರೂ ಸಹಿಸಿಕೊಳ್ಳಬಹುದು. ಇನ್ನೊಮ್ಮೆ ಮಾಡಿದರೆ ಎಂಥ ಸಹನಸ್ವಭಾವವುಳ್ಳ ತಂದೆಗೂ ಕೋಪ ಬಂದು ಮಗುವನ್ನು ಹೊಡೆದಟ್ಟುವನು. ಸಹೃದಯನಲ್ಲಿ ಎಂದಾದರೂ ಈ ಪದ್ಯವನ್ನು ಪದೇಪದೇ ಓದುವುದರಿಂದ ಸಿಟ್ಟೂ ಬೇಸರಿಕೆಯೂ ಹುಟ್ಟುತ್ತಿದೆಯೇ?

ಕವಿಗಳು ವರ್ಣಿಸುವ ಪ್ರಕಾರವೇ ಚಮತ್ಕಾರವಾಗಿರುವುದು. ಈ ಪದ್ಯಗಳನ್ನು ಕೇಳಿರಿ:—

ಮಾವಿನ ಮರದ ವರ್ಣನೆ:—

ಅಸದಳಮಾಯ್ತು ರೂಪಮದಮುಗ್ಗಳಮಾದುದು ಯೌವನೋದಯಂ ।
ಪೊಸಸಿರಿವಂತ ನಾಸಿರಿಯುಮಂ ಜನಕಂ ಮಧುಕೊಟ್ಟನಿಂ ವಿಚಾ ॥
ರಿಸುಗುಮೆ ಚೂತನೊಲ್ದು ಪೊರೆಗುಂ ಗಿಳಿಯುಂ ಮುಖರಾಗಿಯುಂ ಮಧು ।
ವ್ಯಸನಿಮುದಾಳಿಯುಂ ಸಹಜವಕ್ರವಚಸ್ವಿಯ ವನ್ಯಪುಷ್ಟವಂ ॥

ಅರುಣೋದಯ ವರ್ಣನೆ:—

ಹರಿದ್ವಶಂ ಬಂದಪಂ ವಾಹಳಿಗೆ ನುತರುಣಂ ವ್ಯೋಮವಿಸ್ತೀರ್ಣರಂಗಾಂ ।
ತರವೀಥೀಛನ್ನ ತಾರಾಸ್ಫಟಿಕಶಕಲಮಂ ನೂಂಕುತುಂ ಚಾರುಚಾಮಿೞ ॥
ಕರಯಂತ್ರವ್ರಾತದಿಂ ಕುಂಕುಮಘನರಸಮಂ ಸಿಂಪಿಸುತ್ತಿರ್ದನೆಂಬಂ ।
ತಿರಲೆತ್ತಂ ನೀಳ್ದು ಪೊಣ್ಮಿತ್ತುದಯ ಸಮಯದೊಳ್ ಶೋಣಸೂ
ರ್ಯಾಂಶುಜಾಲಂ ॥

ಈ ರೀತಿಯಲ್ಲಿ ಅನೇಕ ಉದಾಹರಣೆಗಳನ್ನು ಕೊಡಬಹುದು. ಬಟ್ಟೇನು? ಅವರ ವರ್ಣನಾವೈಖರಿಯು ಹಲವಿಧವಾಗಿರುವುದು.

ಕವಿಯಿಂದ ವರ್ಣಿಸಲ್ಪಟ್ಟು ರಸಭಾವವನ್ನು ಹೊಂದದೆ ಇರುವ ವಸ್ತುವೇ ಪ್ರಪಂಚದಲ್ಲಿಲ್ಲ. ಈ ವಿಷಯವನ್ನು ವಿಸ್ತಾರವಾಗಿ ನಾನು ಬರೆದಿರುವ "ಕವಿಸಮಯ" ವೆಂಬ ಗ್ರಂಥದ ಪ್ರಥಮಭಾಗದಲ್ಲಿ ಉಪಪಾದಿಸಿರುವೆನು. ಕವಿಕಾರ್ಯಫಲವಾದ ವರ್ಣನೆಗಳನ್ನು ಓದಿದಷ್ಟು ಆನಂದವು ಹೆಚ್ಚುವುದಲ್ಲದೆ ಪೂರ್ವದಲ್ಲಿ ಪಟ್ಟ ಆನಂದವು ಜ್ಞಾಪಕಕ್ಕೆ ಬರುತ್ತಿರುವುದು. ಆ ಆನಂದವು ಸ್ಮರಣವೇಳೆಯದಾದ್ದರಿಂದ ಮಿತಿಮೀರಿದಂತೆ ತೋರುವುದು. ಇಂಥ ಸಂಗತಿಯು ಚಿತ್ರಕರ್ಮಾದಿ ಇತರ ಕಲೆಗಳಲ್ಲಿ ಹುಟ್ಟಿದರೂ ಇಷ್ಟುಮಟ್ಟಿಗೆ ಹುಟ್ಟದು.

ಕವಿಕಾರ್ಯಕ್ಕೆ ಸಹಜವಾದ ಈ ಅತಿಶಯವನ್ನು ಕವಿಕಾರ್ಯಮಹಿಮೆಯನ್ನು ಬಲ್ಲ ಕವಿಶ್ರೇಷ್ಠನಾದ ಕಾಳಿದಾಸನು ಶಕುಂತಳೆಯ ಸೌಂದರ್ಯವರ್ಣನಾವಸರದಲ್ಲಿ ಸೂಚಿಸಿರುವನು.

ಚಿತ್ರೇನಿವೇಶ್ಯ ಪರಿಕಲ್ಪಿತ ಸತ್ವಯೋಗಾ।
ರೂಪೋಚ್ಚಯೇನ ವಿಧಿನಾಮನಸಾಕೃತಾನು?
ಸ್ತ್ರೀರತ್ನ-ಸೃಷ್ಟಿರಪರಾ ಪ್ರತಿಭಾತಿ ಸಾ ಮೇ।
ಧಾತುರ್ವಿಭುತ್ವಮನುಚಿಂತ್ಯವಪುಶ್ಚತಸ್ಯಾಃ" ॥

ಇಲ್ಲಿ ಕವಿಯು ಶಕುಂತಲೆಯನ್ನು ಮೊದಲು ಬ್ರಹ್ಮನು "ಚಿತ್ರೇನಿವೇಶ್ಯ ಪರಿಕಲ್ಪಿತ ಸತ್ವಯೋಗಾ" ಎಂದರೆ–ಚಿತ್ರದಲ್ಲಿ ಚಿತ್ರಿಕನಂತೆ ಬರೆದು ಅದಕ್ಕೆ ಜೀವ ಕಳೆಯನ್ನು ಕೂಡಿಸಿ ಸೃಷ್ಟಿಸಿರಬಹುದೆಂದು ವರ್ಣಿಸುವನು. ಚಿತ್ರಿಕನು ಮೊದಲು ಮನಸ್ಸಿನಲ್ಲಿ ಒಂದು ಸುಂದರವಾದ ರೂಪವನ್ನು ನೆನಿಸಿಕೊಳ್ಳುವನು. ಆ ರೂಪವನ್ನು ಹಲಗೆಯ ಮೇಲೆ ಲೇಖಿನಿಯಿಂದ ಗುರುತು ಹಚ್ಚುವನು. ಆ ಮೇಲೆ ಅದನ್ನು ಚನ್ನಾಗಿ ನೋಡುವನು. ಅದರಲ್ಲಿ ಕಂಡ ಕೊರತೆಗಳನ್ನು ಅಳಿಸಿ ಅಳಿಸಿ ಪುನಃ ಪುನಃ ಬರೆದು ನೇರ ಮಾಡುವನು. ತೃಪ್ತಿ ಹುಟ್ಟುವವರೆಗೂ ಪರಿಷ್ಕರಿಸುತ್ತ ಹೋಗುವನು. ಎಷ್ಟು ಪರಿಷ್ಕರಿಸುತ್ತ ಹೋದರೂ ತೃಪ್ತಿ ಹುಟ್ಟದು. ಇನ್ನೂ ಇದಕ್ಕಿಂತ ಮನೋಹರವಾಗಿ ಮಾಡಲು ತನ್ನ ಕೈಯಲ್ಲಾಗದು, ಎಂದು ಯಾವಾಗ ಗೊತ್ತಾಗುವುದೋ ಆಗ ತನ್ನ ಪರಿಷ್ಕಾರವನ್ನು ಸಾಕು ಮಾಡುವನು. ಆ ರೀತಿಯಲ್ಲಿಯೇ ಬ್ರಹ್ಮನು ತನಗೆ ತೃಪ್ತಿ ಹುಟ್ಟುವವರೆಗೂ ತಾನು ಹಲಗೆಯ ಮೇಲೆ ರಚಿಸಿದ ಶಕುಂತಲೆಯನ್ನು ಸರಿಮಾಡುತ್ತ ಹೋಗಿ ತನ್ನ ಮನಸ್ಸಿನಲ್ಲಿ ಹೇಗೆ ಯೋಚಿಸಿದನೋ ಅಷ್ಟು ಸುಂದರವಾಗಿ ತನ್ನ ಕೈಯಲ್ಲಿ ತೋರಿಸಲಾಗದೆಂದು ನಿರಾಶನಾದ ಮೇಲೆ ಆ ಪರಿಷ್ಕರಣವನ್ನು ನಿಲ್ಲಿಸಿ ಅದಕ್ಕೆ ಜೀವಕಳೆಯನ್ನು ತುಂಬಿ ನಿರ್ಮಿಸಿರಬೇಕು. ಎಂದು ಯೋಚಿಸುವನು. ಆಮೇಲೆ ಹಾಗೆಯೇ ಪರ್ಯಾಲೋಚಿಸಿ ತಾನು ಹಾಗೆ ವರ್ಣಿಸಿದ್ದು ಅನುಚಿತವು, "ವಿಧಿನಾ ಮನಸಾ ಕೃತಾನು?" ಎಂದು ವರ್ಣಿಸಬೇಕಾಗಿತ್ತು ಎಂದು ಯೋಚಿಸುವನು. ಮನಸ್ಸಿನಲ್ಲಿ ಯೋಚಿಸಿದಷ್ಟು ಮನೋಹರತ್ವವನ್ನೂ ಮಹತ್ವವನ್ನೂ ನಿರೂಪಿಸಿ ತೋರಿಸಲು ಸಾಧ್ಯವಲ್ಲವಷ್ಟೆ? ನಾವು ಒಂದು ಪ್ರಬಂಧವನ್ನು ಬರೆಯಲು ಹೊರಟು ಯೋಚಿಸುವಾಗ ಮೊದಲು "ಹಾಗಿರಬೇಕು, ಹೀಗಿರಬೇಕು ಹೀಗೆ ಇದ್ದರೇನೇ ಸೊಗಸಾಗುವುದು" ಎಂದು ಯೋಚಿಸಿ ಉಪಕ್ರಮಿಸುವೆವು. ನಾವು ಬರೆದ ಪ್ರಬಂಧವನ್ನು ಯೋಚಿಸಿದ ಪ್ರಬಂಧದೊಡನೆ ಹೋಲಿಸಿ ನೋಡುವಲ್ಲಿ ಯೋಚಿಸಿದಷ್ಟು ರಚಿಸಿದ ಪ್ರಬಂಧವು ಸೊಗಸಾದೀತೆ? ಚಿತ್ರಿಕ ಮೊದಲಾದ ಕಲಾಕುಶಲರ ವ್ಯಾಪಾರವೂ ಹೀಗೆಯೇ.

ಕವಿಗೂ ಮನದಲ್ಲಿ ಹುಟ್ಟಿದಷ್ಟು ಅನುಭವವನ್ನು ಅವನ ಮಹತ್ವದ ಮಾತೂ ತಿಳಿಸಲಾರದು. ಅನೇಕ ಸಹೃದಯರು "ಆ ಮಹಿಮನ ಮನದಲ್ಲಿ ಏನು ಭಾವ ವೋಡಿತೋ?" ಎಂದು ಕವಿಯ ವಾಕ್ಯದಲ್ಲಿ ಮರುಳಾಗಿ ಹೋಗಿರುವರು. ಕವಿಯಾಗಿಯೂ ಸಹೃದಯನಾಗಿಯೂ ಇದ್ದದ್ದರಿಂದ ಕಾಳಿದಾಸನು "ಚಿತ್ರೇನಿವೇಶ್ಯ ಪರಿಕಲ್ಪಿತಸತ್ವಯೋಗಾ" ಎಂದು ಮೊದಲು ಹೇಳಿದ್ದು ಸರಿಯಲ್ಲ; "ಮನಸಾಕೃತಾನು?" ಎಂದರೆ ಮನಸ್ಸಿನಲ್ಲಿ ಚಿತ್ರಿಸಿ ಅದಕ್ಕೆ ಜೀವಕಳೆಯನ್ನು ತುಂಬಿ ಬ್ರಹ್ಮನು ನಿರ್ಮಿಸಿರಬೇಕು; ಎಂದು ಹೇಳಬೇಕಾಗಿತ್ತು, ಎಂದು ಹೇಳುವನು. ತಿರಿಗಿಯೂ ಯೋಚಿಸುವನು. ಈ ವರ್ಣನೆಯುಲ್ಲಿಯೂ ತೃಪ್ತಿಹೊಂದದೆ ("ರೂಪೋಚ್ಚಯೇನ ವಿಧಿನಾ ಮನಸಾಕೃತಾನು?") ರೂಪೋಚ್ಚಯೇನ ಎಂಬುದೊಂದು ವಿಶೇಷಣವನ್ನು ಸೇರಿಸುವನು. ಈ ವಿಶೇಷಣದಿಂದ ಏನು ಔಚಿತ್ಯ ಬಂದಿತು ವಿಚಾರ ಮಾಡೋಣ. ಆರ್ಯಕ್ಷೇಮೀಶ್ವರನು "ದೃಷ್ಟಂ ಕಿಮಪಿ ಲೋಕೇಸ್ಮಿನ್ ನ ನಿರ್ದೋಷಂ ನ ನಿರ್ಗುಣಂ" ಎಂದು ಹೇಳುವಂತೆ ಸಮಸ್ತ ಭಾಗದಲ್ಲಿಯೂ ಅನ್ಯೂನಾತಿರಿಕ್ತವಾಗಿ ಮನೋಹರತೆಯನ್ನೆ ಹೊಂದಿರುವ ಪದಾರ್ಥವು ಲೋಕದಲ್ಲೇ ಇಲ್ಲ. ಆಹ್ಲಾದಕವಾದ ಚಂದ್ರಬಿಂಬದಲ್ಲಿಯೂ ಕಳಂಕವಿರುವುದು. ಸುವಾಸನೆಯುಳ್ಳ ಗುಲಾಬಿ ಹೂವೂ ಮುಳ್ಳುಗಳ ಮಧ್ಯದಲ್ಲಿ ಬೆಳೆಯುವುದು. ರಮಣೀಯವಾದ ನದಿಯ ಪ್ರವಾಹಗಳಲ್ಲಿಯೂ ಅಪಾಯಭೀತಿಯು ಇರುವುದು. ಕೋಮಲವಾಗಿ ಶ್ಲಾಘ್ಯವಾದ ವಾಸನೆಯುಳ್ಳ ಮಲ್ಲಿಗೆಯೂ ಮುಟ್ಟಿದರೆ ಕಂದಿನಾರುವುದು. ಸರಸವಾದ ಗುಣಗಳು ವಿರಸವಾದ ಗುಣಗಳೊಡನೆಯೇ ವಸ್ತುಗಳಲ್ಲಿ ಬೆರಸಿಯೇ ಇರುವುವು. ಆಹ್ಲಾದ ವಸ್ತುಗಳನ್ನು ಮನಸ್ಸಿನಲ್ಲಿ ತಂದುಕೊಂಡಾಗ ಅವುಗಳಲ್ಲಿರುವ ವಿರಸಗುಣಗಳೊಡನೆಯೇ ಸರಸಗುಣಗಳು ಮನಸ್ಸಿಗೆ ಪ್ರತಿಫಲಿಸುವುವು. ಅದಕ್ಕಾಗಿ ಕವಿಯು "ರೂಪೋಚ್ಚಯೇನ" ಎಂಬ ವಿಶೇಷಣವನ್ನು ಸೇರಿಸಿ ಆ ವಿಶೇಷಣ ಬಲದಿಂದ ವಿರಸಗುಣಲೇಶವೂ ಮನಕ್ಕೆ ಬಾರದಂತೆಯೂ, ಸರಸಗುಣಗಳೇ ಗೋಚರಿಸುವಂತೆಯೂ, ಮಾಡಿರುವನು. ಚತುರನಾದ ಬ್ರಹ್ಮನು ಚಂದ್ರನಲ್ಲಿರುವ ಕಾಂತಿಯನ್ನೂ ಮುತ್ತಿನಲ್ಲಿರುವ ಲಾವಣ್ಯವನ್ನೂ ಪುಷ್ಪದಲ್ಲಿರುವ ವಾಸನೆಯನ್ನೂ ಮಧುರವಾದ ದ್ರಾಕ್ಷಾದಿಗಳಲ್ಲಿರುವ ಮಾಧುರ್ಯವನ್ನೂ ಹೀಗೆಯೇ ಯಾವ ಯಾವ ಸುಂದರವೆನಿಸಿಕೊಂಡ ವಸ್ತುಗಳಲ್ಲಿ ಯಾವ ಯಾವ ಸೌಂದರ್ಯಭಾಗವು ಅತಿಶಯಾಧಾಯಕವೋ ಅವುಗಳೆಲ್ಲವನ್ನೂ ತಂದು ಒಟ್ಟುಗೂಡಿಸಿ ಆ

ಸಂಭಾರ ಸಾಮಗ್ರಿಯಿಂದ ಮನಸ್ಸಿನಲ್ಲಿಯೇ ಒಂದು ಆಕೃತಿಯನ್ನು ಕಲ್ಪಿಸಿ ಸರ್ವ ವ್ಯಾಪಕನಾದ ಭಗವಂತನು ತನಗೆ ದಯಪಾಲಿಸಿದ ಶಕ್ತಿಪರಾಕಾಷ್ಠೆ ಯಾವತ್ತನ್ನೂ ಉಪಯೋಗಿಸಿ ಒಂದು ರೂಪವನ್ನು ಮಾಡಿ ಜೀವ ತುಂಬಿಸಿರಬಹುದು, ಎಂದು ಯೋಚಿಸುವನು. ಹಾಗೂ ತಾನು ವರ್ಣಿಸಿದ ವಸ್ತುವಿನ ಸೌಂದರ್ಯವನ್ನು ತನ್ನ ಶಬ್ದ ಶಕ್ತಿಯಿಂದ ನಮ್ಮ ಮನೋಭಿತ್ತಿಯಲ್ಲಿ ಬರೆದು ತೋರಿಸಿ ಆನಂದವನ್ನು ಹುಟ್ಟಿಸುತ್ತಿರುವನು. ಸಹೃದಯರೇ ಸಾಕ್ಷಿ. ಆ ಮೇಲೆ ಕವಿಯು ಇಂಥ ನಿರ್ಮಾಣಶಕ್ತಿಯು ಚಿತ್ರಸೃಷ್ಟಿ ಕುಶಲನಾದ ಸಾಕ್ಷಾತ್ ಬ್ರಹ್ಮನಲ್ಲಿಯೂ ಇಲ್ಲವೆಂದು ನಮಗೆ ಉಪದೇಶಿಸಲು ಹೊರಟು "ಸ್ತ್ರೀ ರತ್ನಸೃಷ್ಟಿರಪರಾ ಪ್ರತಿಭಾತಿ ಸಾಮೇ ಧಾತುರ್ವಿಭುತ್ವಮನುಚಿಂತ್ಯವಪುಶ್ಚತಸ್ಯಾಃ" ಎಂದು ಹೇಳುವನು. ಈ ಶಕುಂತಲೆಯನ್ನು ನಿತ್ಯವೂ ಸೃಷ್ಟಿಕರ್ಮದಲ್ಲಿ ಕೌಶಲವನ್ನು ಪ್ರಕಾಶಗೊಳಿಸುತ್ತಿರುವ ಆ ಬ್ರಹ್ಮನು ಸೃಷ್ಟಿಸಲಿಲ್ಲ; ಬೇರೆ ಯಾವನೋ ಒಬ್ಬ ಆತನಿಗಿಂತಲೂ ಚತುರನಾದ ಬ್ರಹ್ಮನು ಸೃಷ್ಟಿಸಿರಬೇಕು. ಎಂದು ಹೇಳುವನು. ನಿಜವಾದ ಶಕುಂತಲೆಯಲ್ಲಿ ಕಾಳಿದಾಸನ ಶಕುಂತಲೆಯ ಸೌಂದರ್ಯ ಸೌಕುಮಾರ್ಯಾದಿ ಪ್ರಭಾವಗಳು ತಿಲಮಾತ್ರಕ್ಕಾದರೂ ಇದ್ದಲ್ಲಿ ಕವಿಯ ವಾಕ್ಯದಲ್ಲಿ ಅವಿಶ್ವಾಸ ಹುಟ್ಟಬಹುದು? "**ರವಿಕಾಣದ ಕವಿಕಂಡ**" ಎಂಬುದು ಸುಳ್ಳಲ್ಲ. ಇಂಥ ಶಕುಂತಲೆಯನ್ನು ರವಿನೋಡುವನೆ? ಪ್ರಪಂಚದಲ್ಲಿ ಹುಟ್ಟಿದರಲ್ಲವೆ ನೋಡುವನು? ಇಷ್ಟೂ ಅಲ್ಲದೆ ಕವಿಗಳಲ್ಲಿ ಅನ್ಯಾದೃಶವಾದ ಮತ್ತೊಂದು ಶಕ್ತಿಯುಂಟು. ಕವಿಬಿಟ್ಟರೆ ಮತ್ತು ಯಾರಲ್ಲಿಯೂ ಅಂಥ ಶಕ್ತಿಯು ಇರುವುದಿಲ್ಲ. ಅದೇನೆಂದರೆ ಇತರ ಕಲಾಕುಶಲರು ಎಷ್ಟು ಸಮರ್ಥರಾದರೂ ವಸ್ತುಗಳಲ್ಲಿರುವ ಹೊರಗಣ ಶರೀರಗತವಾದ ವಿಕಾರಗಳನ್ನು ತೋರಿಸಬಲ್ಲರೇ ಹೊರತು ಅವುಗಳ ಪ್ರತ್ಯಕ್ಷಕಾಲದಲ್ಲಿ ನಮ್ಮ ಮನಸ್ಸಿನಲ್ಲಿ ಓಡುತ್ತಿರುವ ಅನುಭಾವಾದಿಗಳನು ತೋರಿಸಲಾರರು. ಸೌಂದರ್ಯವುಳ್ಳ ವಸ್ತುದರ್ಶನದಲ್ಲಿ ಮನಸ್ಸಿನಲ್ಲಿ ಹುಟ್ಟುವ ಹರ್ಷವನ್ನೂ ದುಃಖಕರವಾದ ವಸ್ತುದರ್ಶನದಲ್ಲಿ ಮನಸ್ಸಿನಲ್ಲಿ ಹುಟ್ಟುವ ವಿಷಾದವನ್ನೂ ತಿಳಿಸಬಲ್ಲರೆ? ಕೋಪತಾಪಗಳಲ್ಲಿ ಶರೀರದಲ್ಲಿ ಕಂಡುಬರುವ ಸ್ವೇದಾಶ್ರುಸ್ತಂಭಾದಿಗಳನ್ನೂ ಚಿತ್ರಿಕನು ತೋರಿಸಬಲ್ಲನೆಂದಿಟ್ಟುಕೊಂಡರೂ ಕುಪಿತನಾದವನ ಇಲ್ಲವೆ ಆರ್ದ್ರಚಿತ್ತವುಳ್ಳವನ ಮನೋಭಾವವನ್ನೂ ಅದರೊಡನೆ ಹೊರಡುವ ಶಬ್ದಜಾಲವನ್ನೂ ತಿಳಿಸುವನೆ? ಇದೇ ಆಗದೆ ಇದ್ದಾಗ ಅವನನ್ನು ನೋಡುತ್ತಿದ್ದವರ ಮನೋಭಾವವನ್ನೂ ಅವನಿಂದ ವಿವರಿಸಲಾದೀತೆ? ಹಡಗು ಬಂಡೆಗೆ ಬಡಿದು

ಒಡೆಯುವುದನ್ನೂ ರೈಲು ಸೇತು ಮುರಿದು ನದಿಯಲ್ಲಿ ಬೀಳುವುದನ್ನೂ ಊರು ಹತ್ತಿಕೊಂಡು ಉರಿಯುವುದನ್ನೂ ಛಾಯಾಗ್ರಾಹಿಯೂ, ಚಿತ್ರಿಕನೂ, ಒಂದುವೇಳೆ ಶಿಲ್ಪಿಕನೂ ನಿಮಗೆ ಪ್ರತ್ಯಕ್ಷ ಮಾಡಿಸಬಹುದು. ಆ ಕಾಲದಲ್ಲಿ ಆ ಅಪಾಯಕ್ಕೆ ಸಿಕ್ಕಿಬಿದ್ದ ಮನುಷ್ಯರ ಗಾಬರಿ, ಸಂಕಟ, ವೈರಾಗ್ಯ ಪ್ರಕಾರ, ಪ್ರತಿಯೊಬ್ಬನೂ ಆಡುವ ಮಾತೂ ಇವೇ ಮೊದಲಾದ ವ್ಯಾಪಾರಗಳನ್ನು ಇವರಲ್ಲಿ ಯಾರಿಗೆ ತೋರಿಸಲು ಸಾಧ್ಯವಾದೀತು? ಯೋಚಿಸಿರಿ. ಗದಾಯುದ್ಧದಲ್ಲಿ ಭೀಮಸೇನನ ಕೋಪವನ್ನು ಕರ್ಣಾಟಕ ಕವಿಚಕ್ರವರ್ತಿಯೆಂಬ ಬಿರುದನ್ನು ತೈಲಪಚಕ್ರವರ್ತಿಯಿಂದ ಪಡೆದ ರನ್ನನು ವರ್ಣಿಸಿರುವ ಪದ್ಯಗಳನ್ನು ಓದುವಾಗ ಇಷ್ಟೊಂದು ಕಾರ್ಯಗಳನ್ನು ಕವಿಯು ನಾಲ್ಕು ಮಾತುಗಳಲ್ಲಿಯೇ ಹೇಗೆ ತೋರಿಸಬಲ್ಲನು? ಎಂಬ ವಿಸ್ಮಯವು ಪಾಠಕರ ತಲೆಯನ್ನು ತೂಗಿಸದೆ ಇರದು. ನಾಟಕದಲ್ಲಿ ಈ ಕವಿಶಕ್ತಿಯನ್ನು ನೋಡಿರಿ ಕವಿಯು ನಾಯಕನಾಯಿಕೆಯರಿಗೂ, ಪಾಠಕರಿಗೂ ತಾದಾತ್ಮ್ಯಜ್ಞಾನವನ್ನು ಹುಟ್ಟಿಸುವನು. ಆ ತಾದಾತ್ಮ್ಯಜ್ಞಾನವು ತಾವೇ ಅನುಭವಿಸಿದ್ದಲ್ಲಿ ಉಂಟಾಗುವ ಅನುಭವಗಳನ್ನು ಪ್ರೇಕ್ಷಕರಲ್ಲಿ ಹುಟ್ಟಿಸುವುದು. ಸಹೃದಯರಾದ ಪಾಠಕರು ಶಾಕುಂತಲ ನಾಟಕವನ್ನು ಓದುವಾಗ ದುಷ್ಯಂತನೇ ಆಗಿಹೋಗುವರು. ದುಷ್ಯಂತನು ಅನುಭವಿಸಿದ ಹರ್ಷಾದಿಗಳನ್ನು ತಾವು ಅನುಭವಿಸುವರು. ಅವನು ಉತ್ಸಾಹದಿಂದ ಉತ್ತೇಜಿತನಾದಂತೆ ಇವರೂ ಉತ್ತೇಜಿತರಾಗುವರು. ಹೀಗೆ ತಾವೂ ದುಷ್ಯಂತನಾಗಿ ಹೋಗುತ್ತಿದ್ದರೂ ತಾವು ಓದುವವರೂ ಅಥವಾ ಪ್ರೇಕ್ಷಕರೆಂಬ ಭಾವವನ್ನು ಮರೆಯುವರು. ದುಷ್ಯಂತನು ಶಕುಂತಲೆಯನ್ನು “ಇದು ಸಾಮಾನ್ಯ ಸ್ತ್ರೀಯು ರಾಜನನ್ನು ಸೇರುವ ಕಾಪಟ್ಯ”ವೆಂದು ಹೇಳಿ ವಿಮುಖನಾಗಿ ತಿರಸ್ಕರಿಸಿದಾಗ ದುಷ್ಯಂತನ ಮೇಲೆ ತಮಗೆ ಕೋಪಹುಟ್ಟಿತಲ್ಲವೆ? ಮೇನಕೆಯು ಶಕುಂತಲೆಯನ್ನು ಎತ್ತಿಕೊಂಡು ಹೋದಾಗ “ದುಷ್ಯಂತನಿಗೆ ಹಾಗೆಯೇ ಆಗಬೇಕು. ನಿರ್ಘೃಣನು; ಏನೂ ತಿಳಿಯದ ನಿರಪರಾಧಿಯಾದ ಶಕುಂತಲೆಯನ್ನು ಹಾಗೆ ಹೇಳಬಹುದೆ?” ಎಂಬ ನಿಗ್ರಹವು ತಲೆದೋರಿತಲ್ಲವೆ? ದುಷ್ಯಂತನು ಸಂಗೀತವನ್ನು ಕೇಳಿದಾಗ ಖಿನ್ನನಾಗಿ ರಾಜ್ಯವ್ಯಾಪಾರದಲ್ಲಿ ಬೇಸರಿಕೆಯುಳ್ಳವನಾದಾಗ, ಅವನಂತೆ ತಮ್ಮಲ್ಲಿ ಬೇಸರಿಕೆ ಹುಟ್ಟಲಿಲ್ಲ. ಆದರೆ “ಅಯ್ಯೋ! ಪಾಪ! ಅವನ ತಪ್ಪಲ್ಲ; ದೂರ್ವಾಸಶಾಪದ ಮಹಿಮೆ! ಏನುಮಾಡಾನು? ಎಷ್ಟು ಶೀಘ್ರವಾಗಿ ಶಕುಂತಲೆಯ ಸಂಶ್ಲೇಷವನ್ನು ಹೊಂದುವನೋ” ಎಂಬ ಕನಿಕರ ಹುಟ್ಟಿತಲ್ಲವೆ?

ದುಷ್ಯಂತನು ಮರೆಯಲ್ಲಿ ನಿಂತುಕೊಂಡು ಭ್ರಮರಬಾಧೆಗೆ ಈಡಾದ ಶಕುಂತಲೆಯನ್ನು ನೋಡಿ:—

" ಯತೋಯತಷ್ಷಟ್ಚರಣೋಽಭಿವರ್ತತೇ ।
ತತಸ್ತತ: ಪ್ರೇರಿತ ಲೋಲ ಲೋಚನಾ ॥
ವಿವರ್ತಿತಭ್ರೂರಿಯಮದ್ಯ ಶಿಕ್ಷ್ಯತೇ
ಭಯಾದಕಾಮಾಪಿ ಹಿ ದೃಷ್ಟಿವಿಭ್ರಮಮ್ ॥ ೧ ॥

" ಚಲಾಪಾಂಗಂ ದೃಷ್ಟ: ಸ್ಪೃಶಸಿ ಬಹುಶೋ ವೇಪಥುಮತೀಂ
ರಹಸ್ಯಾಖ್ಯಾಯೀವ ಸ್ವನಸಿಮೃದು ಕರ್ಣಾಂತಿಕಚರ: ।
ಕರಂ ವ್ಯಾಧೂನ್ವತ್ಯಾಃ ಪಿಬಸಿ ರತಿಸರ್ವಸ್ವಮಧರಂ ।
ವಯಂ ತತ್ವಾನ್ವೇಷಾನ್ಮಧುಕರ ಹತಾಸ್ತ್ವಂಖಲುಕೃತೀ ॥ "

ಎಂದು ಹೇಳಿದಾಗಲೂ, ಮತ್ತು ಶಕುಂತಲೆಯು ಅವನ ಸಂಶ್ಲೇಷದಿಂದ ಸಡಲಿ ಗೌತಮಿಯೊಡನೆ ಹೋದಮೇಲೆ ಅವಳ ಸಂಶ್ಲೇಷ ಸುಖದ ಸ್ಮರಣೆಯಲ್ಲಿ—

" ಮುಹುರಂಗುಲಿ ಸಂವೃತಾಧರೋಷ್ಠಂ ।
ಪ್ರತಿಷೇಧಾಕ್ಷರ ವಿಕ್ಲವಾಭಿರಾಮಂ ॥
ಮುಖಮಂ ಸವಿವರ್ತಿ ಪಕ್ಷ್ಮಲಾಕ್ಷ್ಯಾ:
ಕಥಮಪ್ಯುನ್ನಮಿತಂ ನ ಚುಂಬಿತಂ ತು ॥ "

ಎಂದು ಅನುತಾಪಪಟ್ಟು ಹೇಳಿದ ಪದ್ಯವನ್ನು ಕೇಳಿದಾಗಲೂ ಪಾಠಕರ ಮನೋಭಿತ್ತಿಯಲ್ಲಿ ಏನು ಇಂದ್ರಜಾಲ ಮಾಡಿದನೋ ಅದನ್ನು ಸಾಧ್ಯವಾದ ಮಟ್ಟಿಗೆ ವಿವರಿಸುವೆನು.

ಮೊದಲನೆಯ ಪದ್ಯ—ಮೊದಲು ನದಿಯ ತೀರವು. ಆ ತೀರದಲ್ಲಿ ಸೊಂಪಾಗಿ ಬೆಳೆದ ವೃಕ್ಷಗಳು. ಆ ವೃಕ್ಷಗಳ ಮಧ್ಯದ ಕಾಲುದಾರಿಗಳು. ಆ ಕಾಲುದಾರಿಗಳ ಉಭಯ ಪಾರ್ಶ್ವದಲ್ಲಿ ಬೆಳೆದಿರುವ ಹೂಬಿಡುವ ಗಿಡಗಳೂ ಲತೆಗಳ ಪೊದರುಗಳೂ ಉಳ್ಳವನೋದ್ದೇಶವು ನಮ್ಮ ಮನಶ್ಚಕ್ಷುಸ್ಸಿಗೆ ಗೋಚರವಾಗುವುದು. ಮತ್ತು ಶಕುಂತಲೆಯು ಸಖಿಗಳು ವೃಕ್ಷಲತೆಗಳಿಗೆ ಬಿಂದಿಗೆಗಳಿಂದ ನೀರು ಸುರಿಯುತ್ತಿರುವುದೂ,

ಮತ್ತೊಂದು ಕಡೆ ಮುಖ ತಿರಿಗಿಕೊಂಡು ಶಕುಂತಲೆಯು ಮಾಧವೀಲತೆಗೆ ನೀರು ಹೊಯ್ಯುವುದು ತೋರುವುದು. ನೀರು ಹೊಯಿದ ಕೂಡಲೆ ಪುಷ್ಪಗುಚ್ಛದಲ್ಲಿ ಮುತ್ತಿಕೊಂಡು ಮಧುಪಾನ ಮಾಡುತ್ತಿರುವ ಮಧುಪಗಳು ಜೊಯ್ಯೆಂದು ಮೇಲಕ್ಕೆ ಎದ್ದು ಅವಳ ಮುಖವನ್ನು ಮುತ್ತಿಕೊಳುವುದೂ, ಅವುಗಳ ಬಾಧೆಗೆ ಅವಳು ಪಡುವ ಕಷ್ಟವೂ ಒಂದರ ಮೇಲೊಂದು ಗೋಚರಿಸುವುವು. ಆಗ ಅವಳ ಶರೀರದ ಚಲನೆಯೂ, ದೃಷ್ಟಿವ್ಯಾಪಾರವೂ, ಸಾಕ್ಷಾತ್ಕರಿಸಲ್ಪಡುವುವು. ಇಷ್ಟು ಮನೋಹರ ವ್ಯಾಪಾರವನ್ನು ಚಿತ್ರಿಕನು, ಶಿಲ್ಪಿಕನು, ಛಾಯಾಗ್ರಾಹಿಯು, ಸಿನಿಮಿಟೋಗ್ರಾಫನು, ದುಷ್ಯಂತನೊಡನೆ ನಿಂತು ನೋಡುವುದಾಗಿದ್ದರೆ ಒಂದು ವೇಳೆ ತೋರಿಸಬಹುದಾಗಿದ್ದಿತು. ಅಂಥ ನೋಟವು ಅವರಿಗೆ ಎಂದೂ ಲಭಿಸತಕ್ಕದಲ್ಲ. ಕವಿಯು ತನ್ನ ಮನಸ್ಸಿನಿಂದಲೇ ನಿರ್ಮಿಸಿದ ನೋಟವಲ್ಲವೆ? ಅದೂ ಇರಲಿ; ಆ ನೋಟದೊಡನೆ ದುಷ್ಯಂತನ ಮನಸ್ಸಿನಲ್ಲಿ ಹುಟ್ಟಿದ ಅಸೂಯೆಯೊಡನೆ ಕೂಡಿದ ಅಭಿಲಾಷೆಯು ಯಾರಿಂದ ನಿರೂಪಿಸಲಾದೀತು? ಜಗತ್ಸೃಷ್ಟ್ಯವಾದ ಚತುರ್ಮುಖನಿಗೇನೇ ಅಸಾಧ್ಯವೆಂದು ಹೇಳುವಾಗ ಕವಿಯಲ್ಲದ ಮತ್ತೆ ಯಾರು ಆ ಆಶಯವನ್ನು ನಿರೂಪಿಸಬಲ್ಲರು? "ಓ ಭ್ರಮರವೇ, ನೀನೇ ಧನ್ಯನು. ನಾನು ನಿನ್ನ ಅನುಭವವನ್ನು ಅನುಭವಿಸುವಷ್ಟು ಪುಣ್ಯ ಮಾಡಲಿಲ್ಲವಲ್ಲಾ! ಸುಮ್ಮನೇ ನಾನು ಆಶೆಯಿಂದ ಇಲ್ಲಿ ಒದರಿಕೊಳ್ಳುವುದಾಯ್ತು! ನಾನು ನೋಡುತ್ತಿದ್ದ ಹಾಗೆಯೇ ನೀನು ಅವಳ ಅಧರವನ್ನು ಪಾನ ಮಾಡುತ್ತೀಯಲ್ಲಾ!" ಎಂಬ ದುಷ್ಯಂತನ ಮನೋಭಾವವು ಹೊಳೆಯಲಿಲ್ಲವೆ? ಈ ಅನುಭವವನ್ನು ದುಷ್ಯಂತನು ಮಾತ್ರವೇ ಅನುಭವಿಸಲಿಲ್ಲ ಪಾಠಕರಾದ ನೀವೂ ನಾನೂ ಎಲ್ಲರೂ ಅನುಭವಿಸುವರು. ಮೂರನೆಯ ಪದ್ಯದಲ್ಲಿ ಒಂದೊಂದು ವಿಶೇಷ್ಯದಲ್ಲಿ ಎಷ್ಟು ಹೃದಯಂಗಮವಾದ ಅಭಿಪ್ರಾಯವು ಅಡಗಿರುವುದೋ ನಾನು ಹೇಳಲಾರೆನು. "ಮುಹು: ಅಂಗುಳಿಸಂವೃತಾಧರೋಷ್ಠಂ". "ಪ್ರತಿಷೇಧಾಕ್ಷರ ವಿಕ್ಲವಾಭಿರಾಮಂ" "ಮುಖಮಂಸವಿವರ್ತಿ" "ಪಕ್ಷ್ಮಲಾಕ್ಷ್ಯಾಃ" "ಕಥಮಪಿ" "ಉನ್ನಮಿತಂ" "ನಚುಂಬಿತಂ" ಈ ವಿಶೇಷಣಗಳಲ್ಲಿ ಅಡಗಿರುವ ಅಭಿಪ್ರಾಯ ಪ್ರಸಂಗವನ್ನು ಮಾತು ತಿಳಿಸಲಾರದು. 'ಮನಸ್ಸೇ ತಿಳಿಸಬೇಕು. ಒಂದೊಂದು ವಿಶೇಷಣದ ಸ್ವಾರಸ್ಯವನ್ನು ನಿಧಾನವಾಗಿ ಯೋಚಿಸಿದಲ್ಲಿ ಅನುಭಾವಗಳ ಒಂದು ಪ್ರಪಂಚವೇ ಉಂಟಾಗುವುದು. ಅವನ್ನು ಎಷ್ಟೆಷ್ಟು ಯೋಚಿಸಿದರೂ ವರ್ಣಿಸಿದರೂ ಸಾಲದು.

ಏವಂಚ-ಕವಿಗಳು ಶಬ್ದಶಕ್ತಿಯಿಂದ ಮನೋಮುಕುರದಲ್ಲಿ ಪ್ರತ್ಯಕ್ಷ ಸಮಾನಾಕಾರವಾದ ದರ್ಶನವನ್ನು ಹುಟ್ಟಿಸಿ ಪ್ರತ್ಯಕ್ಷ ವೇಳೆಗಿಂತಲೂ ಅತಿಶಯವಾದ ಆನಂದವನ್ನು ಜನಿಸಿ ಆ ಆನಂದವು ನಾಯಕನ ಮನಸ್ಸಿನಲ್ಲಿ ಉಂಟಾದುದಕ್ಕಿಂತ ಅನೇಕ ಪಾಲು ಅಭಿವೃದ್ಧವಾಗಿ ಪಾಠಕರ ಹೃದಯದಲ್ಲಿ ತೋರುವಂತೆ ಮಾಡುವರು. ಶಕುಂತಲೆಯನ್ನು ಪತಿಯ ಗೃಹಕ್ಕೆ ಕಳುಹಿಸಿ ಕೊಟ್ಟ ಕಣ್ವರೊಡನೆ ಕಂಠಸ್ತಂಭಿತ ಬಾಷ್ಪವೃತ್ತಿಗಳಾಗಿ ಅಳುವಂತೆಯೂ, ಅನೇಕ ವೇಳೆ ಬೆಸ್ತರೊಡನೆ ಬೆಸ್ತರಾಗಿ ಕುಣಿವಂತೆಯೂ, ಸೇವಕರಂತೆ ಸೇವಕರಾಗಿ ಅಜ್ಞಾಪಾಲನ ಮಾಡುವಂತೆಯೂ, ವೀರರೊಡನೆ ವೀರವಾದವನ್ನು ಅನುಕರಿಸುವಂತೆಯೂ, ಒಟ್ಟೇನು? ಅಳುವವರ ಜತೆ ಅಳಿಸಿಯೂ, ನಗುವವರೊಡನೆ ನಗಿಸಿಯೂ, ಓಡುವವರೊಡನೆ ಓಡಿಸಿಯೂ, ಕವಿಯು ತಾನು ಇಷ್ಟಪಟ್ಟದ್ದನ್ನು ತನ್ನ ಪಾಠಕರಿಂದ ಮಾಡಿಸುವನು. ಈ ರೀತಿಯಲ್ಲಿ ಕವಿಯು ತನ್ನ ಛಾತ್ರಭಾವವನ್ನು ಆಶ್ರಯಿಸಿದವಂಗೆ ನಾನಾ ವಿಧವಾದ ಲೋಕಾನುಭವವನ್ನು ಬೇಸರ ಹುಟ್ಟದಂತೆ ಶಿಕ್ಷಿಸುವನು. ಈ ವಿಚಾರದಲ್ಲಿ ಇನ್ನೂ ಬಹಳ ಹೇಳಬೇಕಾದ ವಿಷಯಗಳಿವೆ. ಅದಿರಲಿ.

ಲೋಕದಲ್ಲಿ ವಿಷಯಗಳನ್ನು ಸ್ಪಷ್ಟವಾಗಿ ಹೇಳುವುದಕ್ಕಿಂತ ತಾನಾಗಿಯೇ ಊಹೆಗೆ ಬರುವಹಾಗೆ ಮಾಡುವುದು ಸುಖಾತಿಶಯಜನಕವೆಂದು ಎಲ್ಲರ ಅನುಭವಕ್ಕೂ ಬಂದಿರುವುದು. ಈ ವಿಷಯದಲ್ಲಿ ಕವಿಗಳ ಸಾಮರ್ಥ್ಯವು ಎಲ್ಲೆಯನ್ನು ಮೀರಿರುವುದು. ಕಾವ್ಯದಲ್ಲಿ ಈ ರೀತಿಯಲ್ಲಿ ವಿಷಯವನ್ನು ಹೇಳುವುದನ್ನು ವ್ಯಂಗ್ಯವೆಂದು ಕರೆವರು. ವ್ಯಂಗ್ಯಪ್ರಧಾನವಾದ ಕಾವ್ಯವೇ ಉತ್ತಮ ಕಾವ್ಯವೆಂದು ಪರಿಗಣಿತವಾಗಿರುವುದು. ಸಂತೋಷಾತಿಶಯವನ್ನು ಹುಟ್ಟಿಸುವುದೇ ವ್ಯಂಗ್ಯಕ್ಕೆ ಮುಖ್ಯ ಪ್ರಯೋಜನವು. ಸಂಭಾಷಣವು ಬಹಳ ರಮಣೀಯವಾಗಿತ್ತೆಂದು ಹೇಳಿಸಿಕೊಳ್ಳಬೇಕಾದರೆ ಆ ಸಂಭಾಷಣದಲ್ಲಿ ವ್ಯಂಗ್ಯಗರ್ಭಿತವಾದ ಮಾತುಗಳೂ, ಹಾಸ್ಯಗಳೂ, ಉಕ್ತಿಚಮತ್ಕಾರಗಳೂ ಇದ್ದಿರಬೇಕು. ಸಂಭಾಷಣದಲ್ಲಿ ಕಂಡುಬರುವ ಈ ಗುಣಗಳ ಪರಾಕಾಷ್ಠೆಯನ್ನು ಕವಿಗಳ ಗ್ರಂಥಗಳಲ್ಲಿ ನೋಡಬಹುದು. ಉದಾಹರಣೆಗಾಗಿ ಒಂದೆರಡು ಪದ್ಯಗಳನ್ನು ಉದಾಹರಿಸುವೆನು.

ಸೂಳೆಗೇರಿ—

ಗಂಡನನೊರ್ವಳೂರ್ವಶಿಗೆ ಗಂಗೆಗೆ ಗೋಪಿಗೆ ಕೊಟ್ಟರೆಂದೊಡಾ ।
ಪೆಂಡಿರರೂಪುಮಂ ಸೊಬಗುಮಂ ಭವಮಂ ಪೆಸರ್ಗೊಳ್ವುದೇವುನಂ ॥

ಗೊಂಡಳವಂಗವಂ ರತಿಯೆನಲ್ ಚದುರೆತ್ತಣದಾಕೆಗೆಂದು ಕ।
ಜ್ಗೊಂಡ ವಿಲಾಸದಿಂ ನಗುವುದಲ್ಲಿಯ ವಾರವಿಲಾಸಿನೀಜವಂ ॥

ಹೈಮಂತಋತು—

ತಿಳಿವೊಡೆ ಶಶಿರವಿ ರವಿಶಶಿ।
ಬೆಳಗುವ ಜೊನ್ನಂ ಬಿಸಿಲ್ ಬಿಸಿಲ್ ತಾಂ ಜೊನ್ನಂ ॥
ಚಳಿ ಬಿಸುಪು ಬಿಸುಪು ಚಳಿಯೆನೆ।
ಬಳೆದುದು ಹಿಮರಾಜ ತೇಜವಿೂಜಗದೆಡೆಯೊಳ್ ॥

ಆ ಸಮಯದೊಳ್—

ಪಲ್ವರೆಯೊಳ್ ಹುಹುಯೆಂಬಾ।
ಚಲ್ವಗ್ಗಡಣೆಯೊಳೆ ಹಸ್ತದಂಡಿಗೆಯೊಳೆ ತಾ ॥
ನೊಲ್ವನ್ನಂ ಶಿಶಿರನಟಂ।
ಸಾಲ್ವನ್ನಂ ಜನವನಾಡಿಸಿದ ಮರ್ವರೆಯೊಳ್ ॥

ಸ್ತ್ರೀರೂಪ—

ಕೆಡಿಸಿದನೇಕೆ ತಾವರೆಯ ನೀಮೊಗಮಂ ಪಡೆದೇಕೆನೆಯ್ದಿಲಂ।
ಕೆಡಿಸಿದ ನೀತೆರಂಬೊಳೆವ ಕಣ್ಬೊಣರಂ ಪಡೆದೇಕೆ ತುಂಬಿಯಂ ॥
ಕೆಡಿಸಿದ ನೀವಿನೀಳಕುಟಿಲಾಳಕಮಂ ಪಡೆದೇಕೆ ಪದ್ಮಜಂ।
ಕೆಡಿಸಿದ ನೀಕೆಯಂ ಪಡೆದು ಜಂಗಮಕಲ್ಪಲತಾವಿಲಾಸಮಂ ॥

ಈ ರೀತಿಯಾದ ಕವಿಗಳ ಉಕ್ತಿ ಪ್ರಪಂಚವನ್ನು ಉದಾಹರಿಸುತ್ತ ಹೋದರೆ ಕೊನೆ ಮೊದಲೇ ಇಲ್ಲದೆ ಹನುಮಂತನ ಬಾಲದಂತೆ ಬೆಳೆಯುವುದು. ಕವಿಗಳಲ್ಲಿ ಅಸದೃಶವಾದ ಮತ್ತೊಂದು ಪ್ರಬಲ ಶಕ್ತಿಯುಂಟು. ಲೋಕದಲ್ಲಿ ವಸ್ತುಗಳ ಜ್ಞಾನಸಂಪಾದನೆಗೆ ಒಬ್ಬ ಗುರುವು ಬೇಕು. ಅವನು ಎಲ್ಲವನ್ನೂ ಪ್ರೇಮಪುರಸ್ಸರವಾಗಿ ಕಲಿಸಬೇಕು. ಮತ್ತು ಶುಕ್ರನು ಹೇಳುವಂತೆ ಬುದ್ಧಿವಂತನಾದವನಿಗೆ "ಆಚಾರ್ಯ: ಸರ್ವಚೇಷ್ಟಾಸು ಲೋಕ ಏವ ಹಿ ಧೀಮತಃ" ಎಂಬ ಮರ್ಯಾದೆಯಲ್ಲಿ ತಾನೇ ಸಾವಧಾನವಾಗಿ ನೋಡಿ ಪರಾಂಬರಿಸಿ ತಿಳಿದುಕೊಳ್ಳುವ ಸಾಮರ್ಥ್ಯವೂ ಬೇಕು. ಅನೇಕವೇಳೆ ತಿಳಿದುಕೊಳ್ಳುವ ಸಾಮರ್ಥ್ಯವೂ ಇದ್ದು ಯತ್ನಿಸಿದರೂ ಒಬ್ಬ ಗುರುವಿಲ್ಲದಿದ್ದರೆ ವಿಷಯಗಳು ಶೀಘ್ರ ಸಿದ್ಧಿಸುವದಿಲ್ಲ. ಗುರುವು ನಾವು ನೋಡ

ಬೇಕಾದ ವಿಷಯಗಳನ್ನು ನೋಡಿಸಿ ಹೇಗೆ ನೋಡಬೇಕೆಂಬುದನ್ನು ತಿಳಿಸಿ ಆದರಿಂದ ತಿಳಿದುಕೊಳ್ಳಬೇಕಾದ ವಿಷಯುವನ್ನು ಸರಿಯಾಗಿ ತಿಳಿದುಕೊಳ್ಳುವಂತೆ ಮಾಡುವನು. ಇದೂ ಅಲ್ಲದೆ ನಾವು ತಿಳಿದುಕೊಳ್ಳಬೇಕಾದ ಎಲ್ಲಾ ವಿಷಯುಗಳಿಗೂ ಒಬ್ಬನೆ ಗುರುವು ಸಿಕ್ಕುವುದು ಕಷ್ಟ. ಒಂದೊಂದು ವಿಷಯುಕ್ಕೆ ಒಬ್ಬೊಬ್ಬ ಗುರುವು ಸಿಕ್ಕಿದರೆ ಹೆಚ್ಚು. ಒಂದೊಂದು ವಿಷಯು ಸಂಪಾದನೆಗೆ ಒಬ್ಬೊಬ್ಬ ಗುರುವನ್ನು ಹುಡುಕುತ್ತ ಹೋದರೆ ನಾವು ತಿಳುವಳಿಕೆಯುಳ್ಳವರೆನಿಸಿಕೊಳ್ಳುವದಕ್ಕೆ ಎಷ್ಟು ಕಾಲಬೇಕು ? ಎಷ್ಟು ಕಷ್ಟಪಡಬೇಕು? ಕವಿಯೆಂಬವನು ಎಲ್ಲಾ ತೆರದ ಗುರುಗಳ ಸಮಷ್ಟಿಯಾಗಿರುವನು. ಕವಿಯೆಂಬ ಗುರುವನ್ನು ಆಶ್ರಯು ಮಾಡಿದರೆ ನಮ್ಮ ಇಷ್ಟಾರ್ಥಗಳೆಲ್ಲವು ಸಿದ್ಧಿಸುವುವು. ಕವಿಯು ನಾವು ಕೇಳಿದ ವಿಷಯುಗಳನ್ನೂ ನಾವು ತಿಳಿಯುಬೇಕಾದ ವಿಷಯುಗಳನ್ನೂ ನಮ್ಮ ಗ್ರಹಣ ಸಾಮರ್ಥ್ಯವನ್ನೂ ಪರಿಶೀಲಿಸಿ ಉಪದೇಶಿಸುವನು. ಕವಿಯು ನಮಗೆ ಉಪದೇಶಿಸುವ ಕಾಲದಲ್ಲಿ ರೂಪಾಂತರವನ್ನು ಹೊಂದಿಯೇ ಉಪದೇಶಿಸುವನು. ಅವನನ್ನು ಆಗ ಪದೇಪದೇ ಕೇಳುತ್ತಿದ್ದರೂ ಕೋಪ ಹುಟ್ಟದು. ಬೇಸರಿಕೆಯಿಲ್ಲ. ಆ ರೂಪಾಂತರದಲ್ಲಿದ್ದುಕೊಂಡು ನಮಗೆ ಕಣ್ಣನ್ನು ಕೊಟ್ಟು ಲೋಕದ ರಾಮಣೀಯುಕತೆಯುನ್ನು ತೋರಿಸುವನು. ಕಿವಿಯುನ್ನು ಕೊಟ್ಟು ಶ್ರಾವ್ಯವಾದದ್ದನ್ನು ಕೇಳಿಸುವನು. ಹೀಗೆಯೇ ಯಾವ ಯಾವ ಇಂದ್ರಿಯುಗಳು ಬೇಕೋ ಆಯಾ ಇಂದ್ರಿಯುಗಳನ್ನು ಕೊಟ್ಟು ಎಲ್ಲಿಗೆ ಕರೆದುಕೊಂಡು ಹೋಗಬೇಕೋ ಅಲ್ಲಿಗೆ ಕರೆದುಕೊಂಡು ಹೋಗಿ ಆಯಾ ವಿಷಯುಗಳನ್ನು ತೋರಿಸಿ ಹೇಳಿಕೊಡುವನು. ಪರಿಶೀಲನೆ ಮಾಡಿ ಸುಖಪಡುವಂತೆಯೂ ಮಾಡುವನು. ಸೂರ್ಯೋದಯುದಲ್ಲಿ ಬೆಟ್ಟದ ಮೇಲೆ ಬಿಸಿಲು ಬೀಳದೆ ಇಲ್ಲ. ಅದನ್ನು ನಿತ್ಯವೂ ನಾವು ನೊಡುತ್ತಿದ್ದರೂ ಅತ್ತಕಡೆ ನಮ್ಮ ಮನಸ್ಸು ಹೋಗಲಿಲ್ಲ. ಕೊಳಗಳಲ್ಲಿ ಓಡಾಡುತ್ತಿರುವ ಕೊಕ್ಕರೆಗಳನ್ನೂ ಶಬ್ದಮಾಡುತ್ತಿರುವ ನೀರುಕೋಳಿಗಳನ್ನೂ ನಾವು ನೋಡದೆ ಇಲ್ಲ. ಮಕ್ಕಳ ಸಾವಿನಲ್ಲಿ ತಾಯಿತಂದೆಗಳು ದುಃಖಿಸುವುದನ್ನು ನೋಡದೆ ಇಲ್ಲ. ಬೆಟ್ಟದ ಮೇಲೆ ಪ್ರಾತಃಕಾಲದಲ್ಲಿ ಬಿದ್ದ ಬಿಸಿಲಿನ ವರ್ಣನೆಯುನ್ನು ಓದಿರಿ. ಕೊಳದ ವರ್ಣನೆಯುನ್ನು ಓದಿರಿ. ಬಳಿಕ ಅದೇ ಸ್ಥಳಗಳನ್ನು ನೀವು ಹೋಗಿ ನೋಡಿರಿ. ಆಗ ಪೂರ್ವದಲ್ಲಿ ನಿಮ್ಮ ಮನಸ್ಸನ್ನು ಅಪಹರಿಸಿದ ಅಥವಾ ಅಪಹರಿಸಿದರೂ ಔದಾಸೀನ್ಯಕ್ಕೆ ವಿಷಯುವಾದ ವಿಷಯುಗಳೇ ಈಗ ಎಂಥ ಮನೋಹರವಾದ ದರ್ಶನವನ್ನು ಕೊಟ್ಟು ನಿಮ್ಮ ಮನಸ್ಸನ್ನು ಅಪಹರಿಸಿ ಕರಗಿಸುವುವು. ವಸ್ತುಗಳೇನೋ ಹಿಂದೇ ಇದ್ದವೆ. ಅವು

ಗಳೇ ಕವಿಗಳಿಂದ ಶಿಕ್ಷಿತರಾದ ಮೇಲೆ ನಿಮ್ಮ ಮನಸ್ಸಿಗೆ ಬೇರೆ ಹೊಸ ವಸ್ತುಗಳಾಗುವುವು. ಆ ಮೇಲೆ ಅವುಗಳ ದರ್ಶನದಿಂದ ಎಷ್ಟುಮಟ್ಟಿಗೆ ಆನಂದಪಡುವೆವೊ! ಅಂಥ ಆನಂದಪರೀವಾಹವು ಕಾವ್ಯರಸಪರಿಚಯವಿಲ್ಲದ, ಕವಿಗಳಲ್ಲಿ ಶಿಷ್ಯವೃತ್ತಿಯನ್ನು ಮಾಡದ ಬಗೆ ಗುರುಡರಿಗೆ ಹೇಗೆ ಲಭಿಸುವುದು?

ಕವಿಗಳು ಗುರುಗಳಾಗಿ ನಮಗೆ ಉಪಕಾರ ಮಾಡುವುದು ಇಷ್ಟೇ ಅಲ್ಲ. ಕವಿಗಳು ಚಕ್ಷುರಾದೀಂದ್ರಿಯುಗಳಿಗೆ ಗೋಚರವಾಗದ ಅನೇಕ ನವೀನ ಸೃಷ್ಟಿಗಳನ್ನು ಮಾಡಿಯೂ, ಅನೇಕ ವಿಶೇಷ ವಿಷಯಗಳನ್ನು ಬೋಧಿಸಿಯೂ, ವಿಶೇಷಾನುಭವಗಳನ್ನು ಮಾಡಿಸಿಯೂ ಮುಕ್ತರ ಆನಂದವನ್ನು ಈ ಲೋಕದಲ್ಲಿಯೇ ಉಂಟು ಮಾಡಿಸುವರು. ಅವರ ಈ ಸಾಮರ್ಥ್ಯವನ್ನು ಒಬ್ಬ ಕವಿಯು "ಬಿಚ್ಚಳಿಸಲ್ಕೆ ನಾಲಗೆಗಳೈದವು" ಎಂದು ಹೇಳುತ್ತಾನೆ. ಕವಿಗಳು ಸ್ವರ್ಗಾದಿ ಭೋಗಭೂಮಿಗಳನ್ನೂ ಋಷಿಗಳ ಋಷ್ಯಾಶ್ರಮಗಳನ್ನೂ ವರ್ಣನೆ ಮಾಡಿರುವರು. ಅವನ್ನು ಓದಿನೋಡಿರಿ. ಕಾದಂಬರಿಯ ಆಸ್ಥಾನ ವರ್ಣನೆಯನ್ನು ಓದಿನೋಡಿರಿ. ಮೂರ್ಸ್ ಎಂಬ ಆಂಗ್ಲ ಕವಿಯು (Eutopia) "ಯೂಟೋಪಿಯ" ಎಂಬ ಗ್ರಂಥವನ್ನು ಓದಿರಿ. ಆಗಲ್ಲವೆ ನಿಮಗೆ ಒಬ್ಬ ಕವಿಯು ಕವಿಗಳ ನವೀನ ಸೃಷ್ಟಿಯ ವಿಷಯವಾಗಿ ಹೇಳಿದ ಅಭಿಪ್ರಾಯವು ತಿಳಿದು ಬರುವುದು.

"ಒಗೆದುದನೊಗೆದಂತೆ ಮಗು।
ಳ್ದೊಗೆಯಿಸುಗುಂ ಪೆರತನೊಂದನೊಗೆಯಿಸನಜಮಂ॥
ವಿಗಡರ್ಕಬ್ಬಿಗರವನಿಂ।
ದೊಗೆಯಿಸುವರ್ ಬಗೆಗೆ ಬಂದುದೆಲ್ಲಮನಮಮಾ!॥"

ಇಲ್ಲಿ ಕವಿಗಳು ತಮಗೆ ಇಷ್ಟ ಬಂದ ವಿಷಯುಗಳನ್ನು ಆ ಬ್ರಹ್ಮನಿಂದಲೇ ಸೃಷ್ಟಿಸುವರು, ಎಂದು ಹೇಳಿರುವನು. ಮತ್ತೊಬ್ಬ ಕವಿಯು—

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ।
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನಿಕ್ಕಿ ಗಂಟಲಂ॥
ಮೆಟ್ಟುಗೆ ಮೆಟ್ಟದಿರ್ಕೆ——ಯಾರು ಕಂಡವರು?

ನಾವೆಲ್ಲರೂ ಆ ಸಂದರ್ಭಗಳನ್ನು ನಿಜವೆಂದು ನಂಬಿಲ್ಲವೆ? ಕಾರಣವೇನು? ಎಂದು ಮನ್ನನ್ನು ಕುರಿತು ಪ್ರಶ್ನೆ ಕೇಳಿ ಪುನಃ ಅವನೇ—

"—ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್।
ಮುಟ್ಟಿದರಿಕ್ಕಿ ಮೆಟ್ಟಿದರ್,,——ಎಂದ ಮೇಲೆ
'—ಏವಳವಗ್ಗಳಮೋಕವೀಂದ್ರರಾ'। ಎಂದು ಹೇಳಿ ನಮ್ಮನ್ನು ಒಪ್ಪಿಸುವನು.

ಇದೂ ಹಾಗಿರಲಿ; ಲೋಕದಲ್ಲಿ ಸಮಸ್ತ ವಸ್ತುಗಳೂ ಕಾಲಚಕ್ರಕ್ಕೆ ಸಿಕ್ಕಿ ದೂಳಾಗಿ ನಾಶಹೊಂದುವುವು. ಯಾವುದೂ ಕಾಲಕ್ಕೆ ಎದುರಿಲ್ಲ. ಎಂಥ ಸ್ಪೃಹಣೀಯವಾದ ಮಹಿಮಾಧಾಯಕವಾದ ವಸ್ತುಗಳು ಹುಟ್ಟಲಿಲ್ಲ? ನಾಶಹೊಂದಲಿಲ್ಲ? ಹುಟ್ಟುತ್ತಲೂ ಇರುವುವು. ನಾಶಹೊಂದುತ್ತಲೂ ಇರುವುವು. ರಾಮರಾಜ್ಯದಂತಹ ರಾಜ್ಯವೂ ಮಾಯವಾಯಿತು! ವ್ಯಾಸಾದಿ ಮಹರ್ಷಿಗಳೂ ಕಾಲವಾದರು! ಸೂರ್ಯಚಂದ್ರಾದಿಗಳೂ ಪ್ರಳಯದಲ್ಲಿ ನಾಶಹೊಂದುವರು. ಕಾಲನ ಧಾಳಿಯನ್ನು ಯಾರು ತಡೆದು ನಿಲ್ಲಿಸುವರು? ಅಂತಹ ಕಾಲರಾಜನನ್ನು ತಡೆದು, "ನಿಲ್ಲು, ನಿನ್ನ ದಾಳಿಯನ್ನು ನಮ್ಮಮೇಲೆ ನೂಕು; ನಿನ್ನಿಂದೇನಾದೀತು? ನಿನ್ನ ದಾಳಿಯು ನಮ್ಮನ್ನು ಸುತ್ತಲೂ ಮುತ್ತಲಿ; ನಾವು ಹೆದರುವರಲ್ಲ;" ಎಂದು ಎದೆ ತಟ್ಟಿಕೊಂಡು ಹೇಳುವ ಸಾಮರ್ಥ್ಯವುಳ್ಳವರು ಯಾರಾದರೂ ನಮ್ಮ ಮಧ್ಯದಲ್ಲಿ ಹುಟ್ಟಿರುವರೇ ಸ್ವಲ್ಪ ಯೋಚಿಸಿರಿ. ಲೋಕಕ್ಕೆ ಅಸದೃಶವಾದ ಉಪಕಾರವನ್ನು ಮಾಡಲು ಕಾಲವನ್ನು ಎದುರಿಸಿದವರು ಕವಿಗಳೇ ಎಂದು ಹೇಳುತ್ತೀರಿ. ಕವಿಗಳು—"ತಮ್ಮ ಪಾರ್ಥಿವಶರೀರವನ್ನಲ್ಲವೆ ಕಾಲನು ಅಗಿದು ನುಂಗುವನು; ಅವನ ಹಲ್ಲಿಗೆ ಸಮಯದ ಅವನ ಸಾಮರ್ಥ್ಯವು ಸ್ವಲ್ಪವೂ ನಡೆಯದ ಬೇರೊಂದು ಶರೀರವನ್ನು ವಹಿಸಿದರೆ ಅವನಿಂದೇನಾದೀತು?" ಎಂದು ವಾಙ್ಮಯ ಶರೀರವನ್ನು ಧರಿಸಿ ಉಪಕಾರ ಮಾಡಲು ಹೊರಟರು. ಆಗ ಅವರ ಕೌಶಲ್ಯವು ಸರ್ವತ್ರ ಸರ್ವಕಾಲದಲ್ಲಿಯೂ ಬೆಳಗುವಂತಾಯಿತು. ಈ ವಿಚಾರವನ್ನು ಒಬ್ಬ ಕವಿಯು ಹೀಗೆ ಪ್ರಸ್ತಾಪಿಸಿರುವನು.—

"ಅದುವಿದುವೆನ್ನದಾವುದು ಮನೊರ್ಮೆಯೆನುಂಗುವ ಕಾಲರಾಕ್ಷಸಂ।
ಗದಿರದೆ ತಮ್ಮ ವಾಙ್ಮಯಶರೀರದೆ ನಿಂದು ಸಮಸ್ತಲೋಕಕಂ॥
ಪಡೆದು ಹಿತಾಹಿತಂಗಳಿರವಂ ತಿಳಿವಂತಿರೆ ಪೇಳ್ದು ಕಲ್ಪಿಪಾ।
ಸದಮಳಚಿತ್ತರಪ್ಪ ಕವಿವರ್ಯರೆ ವಂದ್ಯರಿಳಾತಳಾಗ್ರದೊಳ್॥

ಎಂದು. ಎಷ್ಟು ಕಟ್ಟಡಗಳು ನಾಶವಾಗಲಿಲ್ಲ? ಎಷ್ಟು ರಾಜ್ಯಗಳು ಹೀನಸ್ಥಿತಿಗೆ ಬರಲಿಲ್ಲ? ಎಷ್ಟು ಮಹೋಪಕಾರಿಗಳು ನಿರ್ನಾಮವಾಗಲಿಲ್ಲ? ಅವನ್ನು ಹೇಳು

ವವರೂ ಇಲ್ಲ; ಕೇಳುವವರೂ ಇಲ್ಲ; ಕವಿಗಳು ತಮ್ಮ ಕಾವ್ಯದಲ್ಲಿ ವರ್ಣಿಸಿದ ಒಂದು ಹಳೇಕಾಲದ ಗುಡಿಸಲೂ, ಒಬ್ಬ ಕುರುಬನ ಇಲ್ಲವೆ ಒಬ್ಬ ಗೊಲ್ಲನ ಕಥೆಯೂ ಈಗಲೂ ಜನಗಳಿಂದ ಭಕ್ತಿಯಿಂದಲೂ ಗೌರವದಿಂದಲೂ ಆದರಿಸಲ್ಪಡುವುದೆಂದು ಹೇಳಿದ ಮೇಲೆ.

ಮತಪೂರ್ವ ರಾಜಕೀರ್ತಿ ।
ಪ್ರತಿಬಿಂಬಂ ಶಬ್ದಮುಕುರದೊಳ್ ॥
ಕ್ಷಿತಿಪಾಲರಳಿದೊಡೇಂ ಕಿಡ ।
ದತಿಶಯದಿಂ ಕೀರ್ತಿಬಿಂಬಮಾಕಲ್ಪಾಂತಂ ॥

ಎಂದು ಕವಿಗಳ ವಿಷಯದಲ್ಲಿ ಹೇಳುವುದೊಂದತಿಶಯವಲ್ಲ. ಕ್ಷಣಿಕವಾದದ್ದನ್ನು ಚಿರಸ್ಥಾಯಿಯನ್ನಾಗಿಯೂ, ಕ್ಷುದ್ರವಾದದ್ದನ್ನು ಅತಿಶಯವಾದದ್ದನ್ನಾಗಿಯೂ, ಮತ್ತೇನು? ಎಂಥೆಂಥದ್ದನ್ನು ಎಂಥೆಂಥದ್ದನ್ನಾಗಿಯೂ ಮಾಡುವ ಅನ್ಯಾದೃಶವಾದ ಮಹಿಮೆಯು ಕವಿಗಳಿಗಲ್ಲದೆ ಮತ್ತಾರಿಗುಂಟು ?

ಇದೂ ಹಾಗಿರಲಿ; ಶ್ರೀಕೃಷ್ಣನು ಅರ್ಜುನನಿಗೆ ದಿವ್ಯ ಚಕ್ಷುಸ್ಸನ್ನು ಕೊಟ್ಟು ವಿಶ್ವರೂಪವನ್ನು ತೋರಿಸಿದಂತೆ ಕವಿಗಳು ತಮ್ಮನ್ನು ಆಶ್ರಯಿಸಿದವರಿಗೆ ಒಂದು ಮಾನಸ ಚಕ್ಷುಸ್ಸನ್ನು ಕೊಟ್ಟು ವಿಶ್ವದ ಮಹಿಮೆಯನ್ನು ತೋರಿಸುವರು. ಅದರ ದರ್ಶನವನ್ನು ಮಾಡಿ ದುಃಖ ಮಿಶ್ರವಿಲ್ಲದ ಆನಂದವನ್ನು ಅನುಭವಿಸುವರು. ಆ ಆನಂದಾನುಭವದಲ್ಲಿ ತಮ್ಮ ದುಃಖವನ್ನೂ ಮರೆಯುವರು. ಸೆರೆಮನೆಯ ಕ್ಲೇಶವನ್ನೂ ಗ್ರಂಥರಚನೆಯಲ್ಲಿ ಸುಖವೆಂದು ಭಾವಿಸುವುದುಂಟು. ಪತ್ನಿ, ಪುತ್ರ, ತಂದೆ, ಸ್ನೇಹಿತ ಮುಂತಾದವರ ಮರಣದಿಂದ ಸಂಭವಿಸಿದ ದುಃಖವನ್ನು ರಾಮಾಯಣ ಮಹಾಭಾರತಾದಿ ಗ್ರಂಥಗಳ ಪಠನ ಮಾಡುತ್ತ ಸಹಿಸಿಕೊಂಡು ಇದ್ದವರನ್ನೂ ನಾವು ನೋಡುತ್ತೇವೆ.

ಕವಿಗಳು ಉಪಕರಿಸುವ ರೀತಿಯು ವಿಜಾತೀಯವಾಗಿರುವುದು. ಅವರು ತಾವು ಉಪಕಾರ ಮಾಡುವವರೆಂದು ಉಪಕರಿಸುವ ವೇಳೆಯಲ್ಲಿ ತೋರಿಸಿಕೊಳ್ಳುವುದಿಲ್ಲ. "ಸ್ವಾರ್ಥಾನ್ಪರಿತ್ಯಜ್ಯಪದಾರ್ಥಘಟಕರು" ಲೋಕದಲ್ಲನೇಕರಿರುವರು. ಅವರೂ ತಮ್ಮ ಪುರುಷಕಾರವನ್ನು ಆ ಕಾಲದಲ್ಲಿ ತೋರಿಸಿಕೊಳ್ಳದೆ ಇರಲಾರರು. ಕವಿಗಳಾದರೋ ಹಾಗಲ್ಲ. ಅವರು ವಾಗ್ರೂಪದಲ್ಲಿ ನಿಂತು ಉಪಕರಿಸುವಾಗ ಉಪಕೃತರಾಗುವ ನಾವು ನಾವೇ ಶ್ರಮಪಟ್ಟು ಆ ಫಲವನ್ನು ಹೊಂದಿದೆವೆಂದು

ತಿಳಿಯುವೆವೇ ಹೊರತು ತಮಗಾಗಿ ಕವಿಗಳು ಮಾಡಿದ ಉಪಕಾರವೆಂದು ನೆನೆಯೆವು. ದಾರಿಕಾಯುವ ಕಳ್ಳರಂತೆ ಅವರ ಸರ್ವಸ್ವವನ್ನೂ ನಾವು ಅಪಹರಿಸಿಕೊಂಡು ಹೋಗುವೆವು. ಅವರು ಅಷ್ಟು ಸಂಪತ್ತನ್ನು ಶೇಖರಿಸಲು ಎಷ್ಟು ಕಷ್ಟಪಟ್ಟರು? ಎಂಬುದನ್ನು ಸ್ವಲ್ಪವೂ ಗಣಿಸುವುದಿಲ್ಲ. "ನಮ್ಮ ಲಾಭಕ್ಕೇನೇ ಅವರು ಶೇಖರಿಸಿಟ್ಟ ಸಂಪತ್ತು; ನಾವು ದಾರಿ ಕಾದೆವು; ನಮಗೆ ಆ ಸಂಪತ್ತು ಲಭಿಸಿತು" ಎಂದೇ ತಿಳಯುವೆವು. ನಾವು ಉಪಕೃತರಾಗುವೆವೆಂಬ ಭಾವನೆಯಿಂದ ಕೂಡಿ ಅವರ ಹತ್ತಿರ ಉಪಕಾರ ಬೇಡುವುದಕ್ಕೆ ಹೋಗುವಾಗ' ಹದಿನಾರು ಹಲ್ಲುಗಳನ್ನು ಬಿಟ್ಟುಕೊಂಡು ಮಾರುದ್ದದ ದೇಹವನ್ನು ಚೋಟುದ್ದ ಮಾಡಿಕೊಂಡು ದೈನ್ಯದಿಂದ ದೇಹಿ ಎಂದು ಹೇಳಬೇಕಾಗಿಲ್ಲ. ಯಾವಾಗ ದರ್ಶನಲಭಿಸೀತೋ ಎಂದು ಸಮಯ ನಿರೀಕ್ಷಿಸಬೇಕಾಗಿಲ್ಲ. ಉಪಕರಿಸುವರೋ ಇಲ್ಲವೋ ಎಂದು ಸಂಶಯ ಪಡಬೇಕಾಗಿಲ್ಲ. ಅವರಾದರೋ, "ಉಪಕಾರ ಬೇಡಲು ಯಾರಾದರೂ ಬರುವರುಂಟೇ? ಯಾರು ಬರುವರು? ಯಾವಾಗ ಬರುವರು? ಎಂದು ನಮ್ಮ ಸಮಯವನ್ನೂ ಅನುಗ್ರಹವನ್ನೂ ಹಾರೈಸುತ್ತಲೂ "ಯಾವನಾದರೂ ಒಬ್ಬನು ಉಪಕೃತನಾಗಿ ಯೋಗ್ಯನಾದರೆ ತಾವು ಧನ್ಯರು ತಮ್ಮ ಜನ್ಮವು ಸಾರ್ಥಕವಾಯಿತು" ಎಂದು ಸಂತೋಷಪಡುವರು. ಇಂಥ ಸರಳ ಹೃದಯರಾದ ಮಹೋಪಕಾರಿಗಳುಂಟೇ? ಇವರ ಉಪಕಾರದ ಸರಳತೆಯನ್ನೂ ನೋಡಿ ಆಬಾಲವೃದ್ಧರೂ ಇವರ ಸಹವಾಸವನ್ನು ಸದಾ ಹಾರೈಸುವರು. ಇವರ ಸಹವಾಸವೊಂದೇನೆ ಎಂಥೆಂಥ ಅತಿಶಯವಾದ ಗುಣಗಳನ್ನು ಹುಟ್ಟಿಸುವುದಿಲ್ಲ? ಕುರೂಪಿಯಾಗಿದ್ದರೂ ಇವರ ಸಹವಾಸ ಮಾಡಿದವನು ರೂಪವಂತನಿಗಿಂತಲೂ ಅತ್ಯಧಿಕವಾಗಿ ಜನರಿಂದ ನೋಡಲ್ಪಡುವನು. ದುರ್ಗುಣಿಯಾದವನು ತನ್ನ ದುರ್ಗುಣಗಳನ್ನು ಕಷ್ಟಪಡದೆ ಸರಾಗವಾಗಿ ಕಳೆದುಕೊಳ್ಳುವನು. "ವಿದ್ಯಾವಿಹೀನಃ ಪಶುಃ" ಎಂಬ ಮರ್ಯಾದೆಯಲ್ಲಿ ತನ್ನಲ್ಲಿದ್ದ ಪಶುತ್ವವನ್ನು ಹೋಗಲಾಡಿಸಿಕೊಂಡು ದೇವಭಾವವನ್ನು ಹೊಂದಲು ಯತ್ನಿಸುವನು. ಹಾಗೆ ಯತ್ನಿಸಿ ದೇವನೇ ಆಗುವನು. ಸುಗುಣಾದಿಗಳು ಹುಟ್ಟಿದ ಮೇಲೆಯೇ ಕವಿಗಳ ಉಪಕಾರವು ಅತಿಶಯ ಉಳ್ಳದ್ದೆಂದು ಉಪಕೃತರಾದವರಲ್ಲಿ ಕೃತಜ್ಞತಾಜ್ಞಾನವು ಜನಿಸುವುದು. ಕವಿಗಳು ಇಂದ್ರಜಾಲ ವಿದ್ಯೆಯಲ್ಲಿ ಬಹು ಕುಶಲರಾದರಿಂದ ಪುಸ್ತಕಗಳೆಂಬ ಇಂದ್ರಜಾಲ ದಂಡವನ್ನು ತಿರುಗಿಸಿ ದೃಶ್ಯಗಳಾದ ಲೋಕವಸ್ತುಗಳ ವಿಚಿತ್ರವ್ಯಾಪಾರಗಳು ಕಣ್ಣಿನ ಮುಂದೆ ನಡೆಯುವಂತೆ ತೋರಿಸಿ ಅದನ್ನು ನೋಡುವಕಾಲದಲ್ಲಿ ಹರ್ಷವಿಷಾದಗಳನ್ನು ಅನುಭವಿಸುವಂತೆ ಮಾಡಿ ಪ್ರೇಕ್ಷಕ

ರಾದ ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ತಮಗಿಂತ ಹೆಚ್ಚಾಗಿ ತಿಳಿದವರು ಇನ್ನಾರಿರುವರೆಂಬ ಅಜ್ಞಾನ ಗರ್ಭವಾದ ಗರ್ವವನ್ನು ನಮಗೂ ತಿಳಿಯದಂತೆ ತೊಲಗಿಸಿ ನಮಗೇನೂ ತಿಳಿಯದು ಎಂದು ಭರ್ತೃಹರಿಯು:—

" ಯದಾ ಕಿಂಚಿದ್ ಜ್ಞೋಽಹಂ ಗಜ ಇವ ಮದಾಂಧಸ್ಸಮಭವಂ ।
ತದಾಸರ್ವಜ್ಞೋಽಸ್ಮೀತ್ಯಭವದವಲಿಪ್ತಂ ಮಮ ಮನ: ॥
ಯದಾ ಕಿಂಚಿತ್ಕಿಂಚಿದ್ಬುಧಜನ ಸಕಾಶಾದವಗತಂ ।
ತದಾ ಮೂರ್ಖೋಽಸ್ಮೀತಿಜ್ವರಇವ ಮದೋ ಮೇ ವ್ಯಪಗತಃ ॥

ಎಂದು ಹೇಳುವಂತೆ ಅನುತಾಪವನ್ನು ಹುಟ್ಟಿಸಿ ನಮ್ಮ ನೈಜರೂಪದಲ್ಲಿ ನಮಗೆ ಹೇಸಿಕೆಯನ್ನು ಹುಟ್ಟಿಸುವರು. ಇಂಥ ಅದ್ಭುತತರ ಶಕ್ತಿಯು ಯಾವ ಇತರ ಇಂದ್ರಜಾಲಕನಲ್ಲಿ ಉಂಟು?

ಏವಂಚ ಕವಿಗಳೆಂಬವರು " ಎತೇ ಸತ್ಪುರುಷಾ: ಪರಾರ್ಥ ಘಟಕಾ: ಸ್ವಾರ್ಥಾನ್‌ಪರಿತ್ಯಜ್ಯಯೇ " ಎಂಬ ಮರ್ಯಾದೆಯಲ್ಲಿ ಪರೋಪಕಾರೈಕದೀಕ್ಷಿತರಾದ ಕಲಾವಿದರಲ್ಲಿ ಮಹಾ ನಿಪುಣರೆಂದು ತೋರಿಸಿದಂತಾಯಿತು.

ಇನ್ನು ಮೇಲೆ ರಾಜ್ಯಾಂಗಕ್ಷೇಮಚಿಂತಕರಲ್ಲಿಯೂ ಇವರೇ ಅಗ್ರಗಣ್ಯರೆಂಬುವದನ್ನು ವಿವರಿಸುವೆನು. ರಾಜನು ಅವನಿಗೆ ಪ್ರತಿನಿಧಿಗಳಾದ ಮಂತ್ರಿ, ಸೇನಾಪತಿ, ಆರೋಗ್ಯಾಧಿಕಾರಿ, ಧರ್ಮಾಧಿಕಾರಿ, ನೀತಿಶಾಸ್ತ್ರಕಾರಿ, ಇವರ ವ್ಯಾಪಾರವನ್ನು ಚೆನ್ನಾಗಿ ಕಾರ್ಯಕಾರಣಪುರಸ್ಸರವಾಗಿ ವಿಮರ್ಶಿಸಿ ನಿರೂಪಿಸುವ ಚರಿತ್ರಲೇಖಕ ಮೊದಲಾದವರು, ಇವರ ಕೃತ್ಯದಲ್ಲಿಯೇ ಪ್ರವರ್ತಿಸಿದ ಕವಿಗಳ ಮುಂದೆ ಬಂದರೆ ಸೂರ್ಯನ ಮುಂದೆ ಬಂದ ಮಿಂಬುಳುವಿನಂತಾಗುವರು. ಅವರಷ್ಟರ ಹಿತ ಪ್ರವೃತ್ತಿಯು ಕವಿಗಳ ಪ್ರವೃತ್ತಿಯಷ್ಟು ಕಾರ್ಯಕರವಾಗಿ ಪರಿಣಮಿಸದು. ಅವರ ವ್ಯಾಪಾರವೆಲ್ಲವೂ ಉತ್ಪನ್ನವಾದ ಅನಿಷ್ಟರೂಪ ವ್ಯಾಪಾರವನ್ನು ತಡೆಯುವದರಲ್ಲಿಯೇ ಪರ್ಯವಸಾನ ಹೊಂದುವುವು. ಅನಿಷ್ಟನಿವೃತ್ತಿಯಾದ ಮಾತ್ರಕ್ಕೆ ಇಷ್ಟ ಪ್ರಾಪ್ತಿಯು ಉಂಟಾದರೂ ಆಗಬಹುದು. ಇಲ್ಲದಿದ್ದರೆ ಇಲ್ಲ. ರಾಜನು " ಹೀಗೆ ಮಾಡು ಹೀಗೆ ಮಾಡದಿದ್ದರೆ ಈ ರೀತಿ ಶಿಕ್ಷಿಸುವೆನು " ಎಂದು ಅಜ್ಞೆ ಮಾಡುವನು. ಆಜ್ಞೋಲ್ಲಂಘನೆ ಮಾಡಿದವರನ್ನು ಕಂಡುಹಿಡಿದು ಶಿಕ್ಷೆಗೆ ಗುರಿ ಮಾಡುವನು. ಕಳ್ಳನನ್ನು ಇತರರ ವಸ್ತುವನ್ನು ಕದಿಯದಿರುವಂತೆ ಸೆರೆಯಲ್ಲಿಡುವನು. ಕೊಲೆಪಾತಕರನ್ನು ಅವರಿಂದ ಮುಂದಕ್ಕೆ ಕೊಲೆಗಳು ನಡೆಯದೆ ಇರುವು

ದಕ್ಕು ಅವರಿಗೆ ಉಂಟಾದ ಶಿಕ್ಷೆಯನ್ನು ನೋಡಿ ಇತರರು ಕೊಲೆಗೆಲಸದಲ್ಲಿ ಪ್ರವರ್ತಿಸದಂತೆ ಭೀತಿ ಹುಟ್ಟಿಸುವುದಕ್ಕಾಗಿಯೂ ಕೊಲ್ಲುವನು. ಮಂತ್ರಿಯು ರಾಜನ ಬುದ್ಧಿಯ ಸ್ಥಾನದಲ್ಲಿ ನಿಂತು ರಾಷ್ಟ್ರಚಕ್ರವನ್ನು ನಿರ್ವಹಿಸುವನು. ದಂಡನಾಯಕನು ಜನಾಂಗದಲ್ಲಿ ಕಾಮಕ್ರೋಧಾದಿಗಳಿಂದ ಹುಟ್ಟುವ ಜನಕ್ಷೋಭವನ್ನು ತನ್ಮೂಲಕ ಹುಟ್ಟುವ ದೇಶಕ್ಷೋಭವನ್ನು ನಿವಾರಿಸುವುದಲ್ಲದೆ ದುಷ್ಟರಾದ ಪರರಾಜರ ಹಾವಳಿಯಿಂದ ಉತ್ಪನ್ನವಾಗುವ ದೇಶಸಂಕಟವನ್ನೂ ನಿವಾರಿಸುವನು. ಅಧಿಕಾರಿಗಳು ಜನಗಳಲ್ಲಿ ಹಾವಳಿಯು ಹುಟ್ಟದಂತೆ ನೋಡಿಕೊಳ್ಳುವರು. ಆರೋಗ್ಯಾಧಿಕಾರಿಗಳು ರಾಜನಿಂದ ಸ್ಥಾಪಿತವಾದ ವೈದ್ಯಶಾಲೆಗಳಲ್ಲಿ ಹುಟ್ಟಿದ ರೋಗಕ್ಕೆ ಚಿಕಿತ್ಸೆ ಮಾಡುವರು. ಇತರ ಕ್ಷೇಮಚಿಂತಕರ ಕಾರ್ಯವು ಪ್ರಾಯಶಃ ಇವರ ಕಾರ್ಯದಂತೆ, ಉತ್ಪನ್ನವಾದ ಅನಿಷ್ಟನಿವೃತ್ತಿಯಲ್ಲಿಯೇ ಇರುವುದು. ರಾಜನು ಮೊದಲಾಗಿ ಈ ಕ್ಷೇಮಚಿಂತಕರ ವ್ಯಾಪಾರಗಳೆಲ್ಲವೂ ಪ್ರಜೆಯೆಂಬ ಭೂಮಿಯಲ್ಲಿ ಹುಟ್ಟಿದ ವಿಷವೃಕ್ಷದ ಬೆಳವಣಿಗೆಯನ್ನು ಕತ್ತರಿಸಿ ತಡೆಯುವಂತೆ ಇರುವುವು. ಕವಿಗಳ ಪ್ರವೃತ್ತಿಯಾದರೊ ಹಾಗಲ್ಲ. ಅಂಥ ವಿಷವೃಕ್ಷದ ಬೀಜವೇ ನೆಲದಲ್ಲಿರುತಾಗಲೇ ಮುಗ್ಗಿ ಹೋಗಿ ಮೊಳಕೆ ಬಿಡದಂತೆ ಮಾಡುವುದು. ಇಷ್ಟೇ ಅಲ್ಲ ಆ ನೆಲವನ್ನು ಚೆನ್ನಾಗಿ ಅಗತೆ ಮಾಡಿ ಒಳ್ಳೆಯ ಪಾತಿಯನ್ನು ಕಟ್ಟಿ ಆ ಪಾತಿಯೊಳಗೆ ಸುವೃಕ್ಷವು ಹುಟ್ಟುವ ಬೀಜವನ್ನು ನೆಟ್ಟು ಗಿಡ ಬೆಳೆಸುವರು. ಕವಿಗಳು ನಮ್ಮ ಮನವೆಂಬ ನೆಲದಲ್ಲಿ ಕಥೆಯೆಂಬ ಪಾತೆಗಳನ್ನು ಕಟ್ಟಿ ಮಹಾತ್ಮರ ಚರಿತ್ರ ಬೀಜಗಳನ್ನು ನೆಡುವರು. ಆ ಬೀಜದಿಂದ ಬೆಳೆದ ವೃಕ್ಷದಲ್ಲಿ ಫಲರೂಪವಾದ ಅವರ ಮೇಲ್ಮೆಗಳನ್ನೂ ಲೋಕೋಪಕಾರಗಳನ್ನೂ ಆಸ್ವಾದಿಸಿ "ತಾವೂ ಅಂಥ ಫಲವೃಕ್ಷಗಳಾಗಿ ಇತರರಿಗೆ ಫಲಕೊಡುವವರಾಗಬೇಕು" ಎಂಬ ಅತ್ಯಾಶೆಯನ್ನೂ ಉತ್ಸಾಹವನ್ನೂ ಹುಟ್ಟಿಸುವರು. ಇದೂ ಅಲ್ಲದೆ ಕವಿಗಳು ವಿಷವೃಕ್ಷದಲ್ಲಿ ಹುಟ್ಟುವ ವಿಷಫಲಗಳನ್ನೂ, ಅವನ್ನು ತಿಂದು ಕಷ್ಟದಲ್ಲಿ ನರಳಿದ ಜನರ ಹೀನಸ್ಥಿತಿಯನ್ನೂ, ಒಳ್ಳೇ ಬೀಜದಿಂದ ಹುಟ್ಟಿದ ಕಲ್ಪವೃಕ್ಷದ ಅಮೃತೋಪಮಾನವಾದ ಫಲವನ್ನೂ, ಅದನ್ನು ತಿಂದು ಸುಖದಲ್ಲಿ ಓಲಾಡುವ ಜನಗಳ ಮೇಲ್ಮೆಯನ್ನೂ ಪಕ್ಕಪಕ್ಕದಲ್ಲಿ ಇಟ್ಟು ತೋರಿಸುವುದರಿಂದ ಬಾಲಕರ ಮನಸ್ಸು ಒಳ್ಳೇ ಬೀಜದ ಬೆಳವಣಿಗೆಗೆ ಅವಕಾಶ ಕೊಡುವುದೇ ಹೊರತು ವಿಷಬೀಜಗಳು ಬೇರೂರುವುದಕ್ಕೆ ಅವಕಾಶ ಕೊಡದು. ಇದರ ಮೇಲೆ ಉತ್ತಮೋತ್ತಮ ಸ್ಥಿತಿಗೆ ಏರಿದವರ ಮಹತ್ವವನ್ನೂ, ಅವರು ಹೇಗೆ ಏರಿದರೋ ಅದನ್ನೂ ಮುಂದಿಟ್ಟು ಮಾಡಿಸಿಕೊಟ್ಟು, ಮನೆಯನ್ನೂ ಕೊಟ್ಟು ಮಕ್ಕಳ ಕೈಬರಹವನ್ನೂ ತಿದ್ದಿಸುವಂತೆ ನಮ್ಮ ನಡತೆಗಳನ್ನು ತಿದ್ದಿಸುವರು. ರಾಜನಂತೆಯೂ ಮಂತ್ರಿಯಂತೆಯೂ ಅಧಿಕಾರಿಗಳಂತೆಯೂ ಕವಿಗಳು ಆಜ್ಞೆ ಮಾಡುತ್ತ ಹತ್ತರ ಬರುವರಲ್ಲ. ಪತ್ನಿಯಂತೆಯೂ, ಸ್ನೇಹಿತನಂತೆಯೂ, ಅಣ್ಣತಮ್ಮಂದಿರಂತೆಯೂ ಹತ್ತಿರ ಬಂದು

ನಾವು ನಾವೇ ಇಷ್ಟಪಟ್ಟು ಕೆಲಸ ಮಾಡುವಂತೆ ಮಾಡುವರು. ಕವಿಗಳ ಮಾತ ಕರ್ಕಶವಾಗಿಲ್ಲ. ದ್ರಾಕ್ಷೆಯಂತೆ ರುಚಿಯಾಗಿರುವುದು. ಯಾವ ಯಾವ ಪ್ರಕೃತಿಯುಳ್ಳ ಜನರನ್ನು ಹೇಗೆ ವಶಮಾಡಿಕೊಳ್ಳಬೇಕೆಂಬುದನ್ನು ಅವರು ಬಲ್ಲರು. ಔಷಧವನ್ನು ಸಕ್ಕರೆಯೊಳಗಿಟ್ಟು ಮಕ್ಕಳಿಗೆ ಕೊಡುವಂತೆ ದುರ್ಗುಣ ನಿವಾರಣೆ ಮಾಡಲು ಔಷಧಿಕೊಡಲು ಬಂದವರೆಂದು ನಾವು ಅವರ ಹತ್ತಿರ ಹೋಗುವಾಗ ಗೊತ್ತಾಗುವುದಿಲ್ಲ. ಹೇಳಬೇಕೆಂಬ ವಿಷಯವನ್ನು ತಿಳಿಯಿತು, ತಿಳಿಯಲಿಲ್ಲ, ಎಂಬ ರೀತಿಯಲ್ಲಿ ಮರೆಮಾಚಿ ಹೇಳುತ್ತ ಹೇಳುತ್ತ ಹೋಗಿ ತಿಳಿದುಕೊಂಡಲ್ಲದೆ ಆಗದೆಂಬ ಉತ್ಕಟೇಚ್ಛೆ ನಮ್ಮಲ್ಲಿ ಕಾಣುತ್ತಲೆ ತಿಳಿಸುವರು. ತಾವು ತಿಳಿಸುವ ವಿಷಯದಲ್ಲಿ ಪಾಠಕರುಗಳಿಗೆ ಅನುಭಾವಾದಿಗಳನ್ನು ಹುಟ್ಟಿಸಿ ಅವರ ಅಂತರಂಗದಲ್ಲಿ ತಮ್ಮ ಉದ್ದೇಶವು ದೃಢಮೂಲವಾಗಿ ಫಲಕಾರಿಯಾಗುವಂತೆ ಮಾಡುವರು. ಒಳ್ಳೆಯ ಮಾತಿಗೆ ವಶವಾಗದವನು ಆಜ್ಞೆಗೆ ವಶವಾಗುವನು. ಆಜ್ಞೆಗೆ ವಶವಾಗದವನು ಹೆದರಿಕೆಗೆ ವಶವಾಗುವನು. ಇವಿಷ್ಟಕ್ಕೂ ವಶವಾಗದವನು ಇಷ್ಟವಾಗಿರುವುದನ್ನು ಕೊಡುವುದರಿಂದ ವಶವಾಗುವನು. ಈ ನೀತಿಯನ್ನು ಚನ್ನಾಗಿ ಬಲ್ಲ ಕವಿಗಳು ಸಮಯಕ್ಕೆ ತಕ್ಕಂತೆ ಬೋಧಿಸಿ, ಮಾಡಿ, ಕೊಟ್ಟು ತಮ್ಮ ಮಾರ್ಗಕ್ಕೆ ತಂದುಕೊಳ್ಳುವರು. "ಸತ್ಯಂ ವದ, ಧರ್ಮಂ ಚರ" ಎನ್ನುವ ಹಾಗೆ ಶಾಸ್ತ್ರಕಾರರ ಶಾಸನವಿರುವುದು. "ಅಸತ್ಯಕ್ಕೆ ಒಳಗಾದರೆ, ಅಧರ್ಮದಲ್ಲಿ ಚರಿಸಿದರೆ ಸೆರೆಯಲ್ಲಿಡುವೆನು; ಶೂಲವನ್ನು ಏರಿಸುವೆನು;" ಎಂಬಂತೆ ರಾಜಾಜ್ಞೆಯು ಇರುವುದು. ಕವಿಗಳು ಜನಗಳನ್ನು ಧರ್ಮಮಾರ್ಗದಲ್ಲಿ ನಡೆಯಿಸಬೇಕೆಂಬ ಉದ್ದೇಶದಲ್ಲಿಯೇ ಹೊರಟರೂ ಅವರ ಶಿಕ್ಷಾಕ್ರಮದಲ್ಲಿ "ನಮ್ಮನ್ನು ಇವರು ಶಿಕ್ಷಿಸುವುದಕ್ಕೆ ಬಂದಿರುವರು; ನಮ್ಮ ಸ್ವೈರಾಚಾರವನ್ನು ನಿರೋಧಿಸುವರು;" ಎಂಬ ಭಾವವೇ ಹುಟ್ಟುವುದಿಲ್ಲ. ಸಂತೋಷದೊಡನೆ ಇವರ ಹಿಂದೆ ಹೋಗಿ ಸಂಸ್ಕೃತರಾಗಲು ಸಮ್ಮತಿಸುವೆವು. ಇಷ್ಟವಿದ್ದ ಕಡೆ ಕಾರ್ಯವು ಕಷ್ಟವಿಲ್ಲದೆ ನೆರವೇರುವುದಾದ್ದರಿಂದ ಕವಿಗಳ ಪ್ರವೃತ್ತಿಯು ಹಿಂದೆ ನಿರೂಪಿಸಿದಂತೆ ಅವರ ವಾಕ್ಯವನ್ನು ಕೇಳುವವರಲ್ಲಿ ನಾವು ಎಂಬ ಭಾವವೇ ಮಾಯವಾಗುವುದರಿಂದ ಎಂದೂ ನಿಷ್ಫಲವಾಗುವುದಿಲ್ಲ. ಕವಿಗಳ ಕಾರ್ಯ ಸಾಧನಾಕ್ರಮವು ಅಷ್ಟು ಮನೋಹರವಾದುದು! ಕವಿಗಳ ಶಕ್ತಿಯನ್ನು ಸ್ವಲ್ಪ ಯೋಚಿಸಿ ನೋಡಿರಿ. ರಾಜನೇ ಮೊದಲಾದ ಲೋಕಹಿತೈಷಿಗಳು ಎಷ್ಟು ಶ್ರಮ ತೆಗೆದುಕೊಂಡರೂ ಕವಿಗಳಂತೆ ಹರಿಶ್ಚಂದ್ರನೊಡನೆ ಬಾಲಕರನ್ನು ಬೇಟೆಗೆ ಹೋಗುವಂತೆ ಉತ್ಸಾಹಗೊಳಿಸಬಲ್ಲರೆ? ಆತನ ಪತ್ನೀಪುತ್ರರ ಕಷ್ಟದಲ್ಲಿ ಕೊರಗಿಸಬಲ್ಲರೆ? ಕಾಶೀಪಟ್ಟಣದಲ್ಲಿ ಕ್ರೂರಿಯಾದ ಕಾಲಕೌಶಿಕನು ರೋಹಿತಾಶ್ವನನ್ನು ದರದರನೆ ಎಳೆದೂ, ಹರಿಶ್ಚಂದ್ರನನ್ನು ತ್ಯಜಿಸಲಾರದೆ ಸ್ವಲ್ಪ ತಾಮಸಮಾಡಿದ ಚಂದ್ರಮತಿಯನ್ನು ನಡೆಯೆಂದು ಗದ್ದರಿಸಿಕೊಂಡಾಗ ಆಕೆಯ ದೈನ್ಯವನ್ನೂ, ರೋಹಿತಾಶ್ವನ ರೋದನವನ್ನೂ,

ಕೇಳಿ ಹರಿಶ್ಚಂದ್ರನ ಎದೆಯು ಹೇಗೆ ತಲ್ಲಣಿಸಿ ಹೋಯಿತೋ ಹಾಗೆ ಬಾಲಕರ ಎದೆಯನ್ನು ತಲ್ಲಣಿಸಬಲ್ಲರೆ? "ವಿಶ್ವಾಮಿತ್ರನು ಏನೇನು ಕಷ್ಟಗಳನ್ನು ಕೊಡುವನೋ ನೋಡುವೆನು; ಸತ್ಯವನ್ನೂ ಧರ್ಮವನ್ನೂ ಕಾಪಾಡಲಾರದೆ ಹೋದೇನೇ?" ಎಂಬ ಹರಿಶ್ಚಂದ್ರನ ಕೆಚ್ಚನ್ನು ಬಾಲಕರಲ್ಲಿ ಹುಟ್ಟಿಸಬಲ್ಲರೆ? ಕೊನೆಗೆ ಚಂದ್ರಮತಿಯು ಸತ್ತ ಮಗನನ್ನು ಮಸಣಗಾಡಿನಲ್ಲಿ ಹಾಕಿಕೊಂಡು ಭೂತಗಳಿಗೂ ಕೂಡ ಎದೆ ಕರಗುವಂತೆ ರೋದನ ಮಾಡುತ್ತ ಕಣ್ಣೀರನ್ನು ಧಾರೆಧಾರೆಯಾಗಿ ಸುರಿಸುತ್ತ ತನ್ನ ಪೂರ್ವ ಸ್ಥಿತಿಯನ್ನು ನೆನೆಸಿಕೊಂಡು ಹಂಬಲಿಸುತ್ತಾ "ಮಸಣದ ಕಾವಲವನು ನೆಲಹಾಗವನ್ನು ಕೇಳಿದರೆ ಎಲ್ಲಿಂದ ಕೊಡಲಿ, ಯಾರಲ್ಲಿ ಬೇಡಲಿ, ಅಯ್ಯೋ ಹರಿಶ್ಚಂದ್ರನೇ" ಎಂದು ಪ್ರಳಾಪಿಸುತ್ತಿರುವುದನ್ನು ಕೇಳಿ ಹರಿಶ್ಚಂದ್ರನು ಅವಳಿಂದ ನೆಲಹಾಗವನ್ನು ತೆಗೆದುಕೊಂಡು ತನ್ನ ಕರ್ತವ್ಯವನ್ನು ಕಾಪಾಡುವನೋ ಇಲ್ಲವೆ ವಿಶ್ವಾಮಿತ್ರನ ಮಾಯೆಗೆ ಸಿಕ್ಕಿ ತನ್ನ ಸತ್ವಯನ್ನು ಕಳೆದುಕೊಳ್ಳುವನೋ? ಮತ್ತು ಪತ್ನಿಯನ್ನೂ ಪುತ್ರನನ್ನೂ ಗುರುತಿಸಿದ ಮೇಲೆ ಅವನ ಎದೆಯು ಸೀಳಿ ಹೋಗದೋ ಎಂಬ ನಿರೀಕ್ಷಣೆಯಲ್ಲಿ ಶ್ರೋತೃಬಾಲಕರ ಮನಸ್ಸು ವಿಸ್ಮಯ ಸ್ತಬ್ಧವಾಗುವಂತೆ ಮಾಡಲಾಪರೆ? ತನಗೊದಗಿದ ಅಪಾಯಗಳನ್ನು ಧೈರ್ಯ ಸ್ಥೈರ್ಯಗಳಿಂದ ಜಯಿಸಿ ಪತ್ನೀಪುತ್ರಾದಿಗಳೊಡನೆ ಸೇರಿದಾಗ ಹರಿಶ್ಚಂದ್ರನಲ್ಲಿ ಜನಿಸಿದ ಆನಂದವನ್ನು ಶ್ರೋತೃಬಾಲಕರಲ್ಲಿ ಆತನಿಗಿಂತ ಹತ್ತುಪಾಲು ಹೆಚ್ಚಾಗಿ ಹುಟ್ಟಿಸಿ ಆನಂದ ಪಾರವಶ್ಯದಿಂದ ಕುಣಿಯಿಸ ಬಲ್ಲರೆ? ಇಷ್ಟರ ಮೇಲೆ "ಹರಿಶ್ಚಂದ್ರನು ಎಂಥ ಮಹಿಮನು, ಅವನಂತೆ ಹಸ್ತಪಾದಗಳುಳ್ಳ ನಾವು ಏಕೆ ಅವನಂತೆ ಆಗಬಾರದು? ಯತ್ನಿಸಿದರೆ ಆಗದೆ ಏನು? ವಿಶ್ವಾಮಿತ್ರನೂ ಮಹಾತ್ಮನು, ಯೋಗ್ಯನು, ಯೋಚಿಸಿದರೆ ವಸಿಷ್ಠನಿಗಿಂತಲೂ ಅಧಿಕಮಾನಾರ್ಹನು, ಹರಿಶ್ಚಂದ್ರನಿಗೆ ಅಧಿಕಾಪ್ತನು, ವಿಶ್ವಾಮಿತ್ರನು ಅಷ್ಟು ಕಷ್ಟಗಳನ್ನು ಕೊಡದಿದ್ದರೆ ಹರಿಶ್ಚಂದ್ರನ ಯೋಗ್ಯತೆಯು ಹೊರಬೀಳುತ್ತಿತ್ತೆ? ಅಂಥ ಅತ್ಯುಚ್ಛ್ರಾಯದ ಶ್ರೇಯಸ್ಸೂ ಲಭಿಸುತ್ತಿತ್ತೇ? ರಾಜಭೋಗಕ್ಕಿಂತ ಬಹುಭಾಗದಲ್ಲಿ ಮೇಲಾದ ತಪೋಭೋಗವನ್ನು ವಿಶ್ವಾಮಿತ್ರನಲ್ಲದೆ ಬೇರೆ ಯಾವನು ದಾನಮಾಡುತ್ತಿದ್ದನು? ಹರಿಶ್ಚಂದ್ರನಂತೆ ನಾವೂ ಸಚ್ಛೀಲವ್ರತವನ್ನು ಕೈಕೊಳ್ಳೋಣ; ನಮ್ಮ ವ್ರತಕ್ಕೆ ಭಂಗಸಂಭವಿಸಿದರೆ ಮಹಾತ್ಮರ ಸಹಾಯದಿಂದ ಏಕೆಪಾರಾಗಬಾರದು? ಒಂದುವೇಳೆ ನಮ್ಮ ವ್ರತವು ಭಗ್ನವಾದರೂ ನಮ್ಮ ಸ್ಥಿತಿಯು ಉತ್ತಮೋತ್ತಮವಾಗುವುದರಲ್ಲಿ ಸಂಶಯವಿಲ್ಲ." ಎಂದು ಧೈರ್ಯದಿಂದೊಡಗೂಡಿದ ಸದ್ಧರ್ಮಪ್ರವರ್ತನೆಯೂ ಶ್ರೋತೃಬಾಲಕರಲ್ಲಿ ಹುಟ್ಟಲು ಅಡಿಯೇನು? ಈಗಲೂ ...ಲ್ಲಿ ಅನೇಕ ಸ್ತ್ರೀಯರು ಜಾನಕಿಯ ಚರಿತ್ರೆಯನ್ನು ಕೇಳಿ ಸಂಸಾರದ ...ವನ್ನು ಸಹಿಸಿಕೊಂಡಿಲ್ಲವೆ? ಪುತ್ರಮಿತ್ರಕಳತ್ರಾದಿಗಳ ವಿಯೋಗದಲ್ಲಿಯೂ ...ತನದ ಕೋಟಲೆಯಲ್ಲಿಯೂ ಕವಿಗಳು ತಿಳಿಸಿದ ಹಿಂದಣ ಮಹಾತ್ಮರನ್ನು

ನೋಡಿಕೊಂಡು ಎದೆಗುಂದದೆ ಇರುವರು ಈಗಲೂ ನಮ್ಮಲ್ಲಿ ಎಷ್ಟು ಮಂದಿ ಇಲ್ಲ? ಭೀಷ್ಮನಂತೆಯೂ ಅಭಿಮನ್ಯುವಿನಂತೆಯೂ ಇರಬೇಕೆಂಬ ಆಶೆಯು ಎಷ್ಟು ಮಂದಿಗಳನ್ನು ಪ್ರೇರಿಸುತ್ತಿಲ್ಲ? ಮುಸಲ್ಮಾನನಾದ ಹೈದರಲ್ಲಿಯೂ ಕೂಡ ಭಾರತ ಯುದ್ಧವನ್ನು ಕೇಳಿ "ಏಕ್ ಛೊಕ್ರ, ಏಕ್ ಬುಡ್ಡ," ಎಂದು ಹೊಗಳಿ ತಲೆದೂಗಿದನೆಂದು ಕೇಳಿದ್ದೇವೆ. ಕುಂತಿಯಂತೆ ಪುತ್ರರ ಶ್ರೇಯಸ್ಸಿನಲ್ಲಿ ಬುದ್ಧಿಯಿಟ್ಟು ವೈಧವ್ಯದು:ಖವನ್ನು ಸಹಿಸಿಕೊಂಡು ಪ್ರವರ್ತಿಸುವವರು ಎಷ್ಟು ಸ್ತ್ರೀಯರು ಇಲ್ಲ? ಝೂಂಸಿ ಮಹಾರಾಣಿಯ ಚರಿತ್ರವನ್ನು ಕೇಳಿರುವಿರಿ. ಇವೆಲ್ಲವೂ ಕವಿಗಳು ನಿರೂಪಿಸುವ ಮಹಾತ್ಮರ ಚರಿತ್ರೆಗಳ ಶ್ರವಣಪಠನಗಳಿಂದ ಹುಟ್ಟಿದುವಲ್ಲವೆ? ಇಂಥ ಸಾಮರ್ಥ್ಯವು ಮತ್ತು ಯಾರಲ್ಲಿ ಕಂಡು ಬರುವುದು?

ಏವಂಚ ಕವಿಗಳ ಬೋಧನಾಕ್ರಮವು ವಿಜಾತೀಯವಾಗಿರುವುದು. ಬಾಲಕರ ಮನಸ್ಸೆಂಬ ನೆಲವನ್ನು ಗಮನವೆಂಬ ನೇಗಿಲಿನಿಂದ ಬಹುಕಾಲ ಅಗೆದು ಅಗೆದು ಅಗತೆಮಾಡಿ ಆಲಸ್ಯ, ಗ್ಲಾನಿ, ಜುಗುಪ್ಸೆಗಳೆಂಬ ಕಲ್ಲುಗಳನ್ನು ಅರಿಸಿ ತೆಗೆದು ಹಾಕಿ ನವರಸಗಳೆಂಬ ನೀರಿನಿಂದ ಸೇಚನೆಮಾಡಿ, ಲೋಕಸ್ಥಿತಿ ನಿರೂಪಣವೆಂಬ ಗೊಬ್ಬರವನ್ನು ಮೇಲೆ ಎರಚಿ, ಮಾತಿನ ಸೊಗಸೆಂಬ ಸಲಾಕೆಗಳಿಂದ ಚೆನ್ನಾಗಿ ಆಗಾಗ್ಗೆ ಕೆದರಿ, ಸಚ್ಛೀಲಪ್ರವರ್ತನವೆಂಬ ಬೀಜವನ್ನು ಮಹಾತ್ಮರ ಚರಿತ್ರವೆಂಬ ಆಧಾರದಲ್ಲಿ ತಂದು ನೆಟ್ಟು, ಆ ಬೀಜವು ಮೊಳಕೆಬಿಟ್ಟು ಸಸಿಯಾಗಿ ಸೊಂಪಾಗಿ ಬೆಳೆಯುವವುದಕ್ಕೋಸ್ಕರ "ಅಹಾ! ಇದು ನಮ್ಮ ಅನುಭವವೇ ಆಗಿರುವುದು. ನಮ್ಮಂತೆಯೇ ಇತರರೂ ಅನುಭವಿಸುವರು. ಈ ಅನುಭವವೇ ನಿಜವಾದದ್ದು" ಎಂಬ ವಿಶ್ವಾಸ ಆದರಗಳೆಂಬ ಗಾಳಿಬಿಸಿಲು ಸು ಬೀಳುವ ಅವಕಾಶವನ್ನು ಹುಟ್ಟಿಸಿ, ಅದು ಬೆಳೆದು ಜೀವಮಾನದ ಆದಿಭಾಗವ ಬಾಲ್ಯದಲ್ಲಿ ಚೆನ್ನಾಗಿ ಬೇರೂರಿ ದೃಢವಾಗಿ ನಿಲ್ಲುವಂತೆಯೂ, ಮುಂದೆ ಜೀವಮಾನದ ಮಧ್ಯ ಮತ್ತು ಅಂತ್ಯಭಾಗಗಳಲ್ಲಿ ವೃಕ್ಷವಾಗಿ ಬೆಳೆದು ಸಮೃದ್ಧಿಯಾಗಿ ಸ್ವಾ ಫಲ ಬಿಡುವಂತೆಯೂ ಮಾಡುವ ಚಾತುರ್ಯವುಳ್ಳ ಒಂದು ಬಗೆಯ ತೋಟಗ ರೇ ಕವಿಗಳು. ಹೀಗೆಂದ ಮೇಲೆ ಕವಿಗಳ ಕಾರ್ಯವು ವಿಫಲವಾಗುವ ಉಂಟೋ? ಕವಿಗಳ ಬೋಧನಾ ಪ್ರಕಾರಕ್ಕೂ ನೀತಿಕಾರರೇ ಮೊದಲಾದ ಇ ಮಹೋಪಕಾರಿಗಳ ಪ್ರವೃತ್ತಿಗೂ ತಾರತಮ್ಯವನ್ನು ನೀವೇ ಯೋಚಿಸಿ. ಕವಿಯೆ ಗರುಡನ ಮುಂದೆ ಹಿತೈಷಿಗಳೆಂಬ ಗುಬ್ಬಿಗಳು ಆಡುವುವೆ?

ವಾಗ್ಭೂಷಣ ಗ್ರಂಥಮಾಲೆ ಸಂಖ್ಯೆ ೮೬

— : ಹರಿಃ ಓಂ : —

ರಘುವಂಶ.

ಕವಿ ಕುಲಗುರು ಕಾಲಿದಾಸ ವಿರಚಿತ
ರಘುವಂಶ ಮಹಾಕಾವ್ಯದ
ಕರ್ನಾಟಕ ಪದ್ಯಾನುವಾದವು.

ಅನುವಾದಕರು.

ಶ್ರೀ ಕಲಮಡಿ ನರಹರಿರಾಯರು
ವಕೀಲರು - ವಿಜಾಪೂರ.

ಡಿಸೆಂಬರ ೧೯೨೮

(ಮೊದಲನೆಯ ಮುದ್ರಣ ೧೦೦೦ ಪ್ರತಿಗಳು)

ಬೆಲೆ ೨-೮-೦

ಮುದ್ರಕರು.

೧—೧೪೪ ಪುಟಗಳು " ಮಹಾವೀರ ಪ್ರೆಸ್ " ಬೆಳಗಾವ

೧೪೫—೧೮೪ ಪುಟಗಳು " ತೋಟದ ಸಿದ್ಧಲಿಂಗ ವಿಜಯ ಪ್ರೆಸ್ " ಧಾರವಾಡ.

೧೮೫ - ೨೨೮ ಪುಟಗಳು " ವಿಜಯ ಪ್ರೆಸ್ " ಧಾರವಾಡ.

ಪ್ರಕಾಶಕರು.

ಶ್ರೀ. ಕೆ. ಬಿ. ಅಂಕಲಿಗಿ.

ವ್ಯವಸ್ಥಾಪಕ- ವಾಗ್ಭೂಷಣ

ಶ್ರೀ ಚಾಮರಾಜ ಮಂದಿರದಲ್ಲಿ ಪ್ರಕಟಿಸಲ್ಪಟ್ಟಿತು.

ಮುನ್ನುಡಿ.

ಕವಿ ಕುಲಗುರು ಕಾಲಿದಾಸ ವಿರಚಿತವಾದ ಮಹಾಕಾವ್ಯ ಸಂಸ್ಕೃತ ರಘುವಂಶದ ಗುಣಾನುವಾದನೆಗೆ ಇಲ್ಲಿ ಅವಕಾಶವಿಲ್ಲ; ಅಷ್ಟೊಂದು ಆವಶ್ಯಕವೂ ಎನಿಸದು. ಆ ಸಕಲಜನಾನಂದಕರವಾದ ಬಾಲವಾಚನ ಯೋಗ್ಯವಾದ ಆ ಸರಸ ಕಾವ್ಯದ ಕರ್ನಾಟಕ ಪದ್ಯಾನುವಾದವಾದ ಪ್ರಸ್ತುತ ಗ್ರಂಥವು ಕನ್ನಡಿಗರಿಗೆ ಎಷ್ಟುಮಟ್ಟಿಗೆ ರುಚಿಸಬಹುದೆಂಬದನ್ನು ನೋಡಬೇಕಾಗಿದೆ.

ಪ್ರತಿಭಾಸಂಪನ್ನರಾದ ಕನ್ನಡದ ಕವಿಗಳು ಕಾವ್ಯರಚನೆಗೆ ಕೈಯಿತ್ತಾಗ ಹಲವು ಮಾತುಗಳನ್ನು ಯೋಚಿಸಬೇಕಾಗಿದೆ. ಕಾವ್ಯಕ್ಕೆ ತಕ್ಕುದಾದ ವಸ್ತುವನ್ನು ಆಯ್ದುಕೊಳ್ಳುವುದು; ಓದುಗರ ಯೋಗ್ಯತೆಗೆ ತಕ್ಕಂತಹ ಶೈಲಿಯನ್ನು ನಿರ್ಣಯಿಸುವುದು ; ಮುಂದೆ ಆ ಕಾವ್ಯದ ಪ್ರಕಟನೆಗೆ ತಕ್ಕ ಸಾಧನ ಸಂಪತ್ತಿಯನ್ನು ಕಲ್ಪಿಸಿಕೊಳ್ಳುವದು ಇತ್ಯಾದಿ ವಿಷಯಗಳು ಆಧುನಿಕ ಕವಿಗಳು ಪರ್ಯಾಲೋಚಿಸತಕ್ಕ ವಿಷಯಗಳಾಗಿವೆ. ಪ್ರಸ್ತುತ ಕಾವ್ಯದ ಕರ್ತರಾದ ಶ್ರೀ. ನರಹರಿರಾಯರು ಕಾವ್ಯದ ವಸ್ತುವನ್ನು ಶೋಧಿಸಲು ಹೆಚ್ಚು ಪರಿಶ್ರಮ ಪಡಲಿಲ್ಲವೆಂದು ಹೇಳಬೇಕಾಗುವುದು. ಯಾಕೆಂದರೆ- ಇವರು ಬರೆದ ಋತುಸಂಹಾರ, ಪಾರ್ವತೀ ಪರಿಣಯ, ಭಗವದ್ಗೀತೆ, ಶಿವಗೀತೆ, ರುಕ್ಮಿಣೀ ಹರಣ, ಮಾನವೀ ಮೀಮಾಂಸೆ (Pope's Essay on Man) ಮುಂತಾದುವೆಲ್ಲ ಭಾಷಾಂತರಿತ ಗ್ರಂಥಗಳಾಗಿವೆ. ಕಾಲಕ್ಕೆ ತಕ್ಕಂತೆ ಕಾವ್ಯದ ಶೈಲಿಯು ಮಾರ್ಪಡುವದು ಸಹಜವಾದುದರಿಂದ ಶ್ರೀ ನರಹರಿರಾಯರು ಹಳೆಯ ಬಿಗುವಿನ ಅಕ್ಷರ ವೃತ್ತಗಳ ಶೈಲಿಯನ್ನು ಬಿಟ್ಟು ಹೊಸದೂ ಸುಗಮವೂ ಆದ ಷಟ್ಪದಿಯ ಮಾರ್ಗವನ್ನು ಆರಿಸಿಕೊಂಡುದರಲ್ಲಿ ಆಶ್ಚರ್ಯವೇನಿದೆ? ಇನ್ನು ಮೂರನೆಯದಾದ ಮುದ್ರಣದ ಕಾರ್ಯವನ್ನು ಮಾತ್ರ ಆ ಮಹನೀಯರಿಗೆ ತಾವೇ ಕೈಕೊಳ್ಳಲು ಸಾಧ್ಯವಿರಲಿಲ್ಲ. ಯಾಕೆಂದರೆ ಪ್ರಾಪಂಚಿಕ ಕಷ್ಟ ಸುಖಗಳ ಅನುಭವ ಪಡೆದು ತಾರುಣ್ಯದ ಹುರುಪಳಿದು ಇಳಿವಯಸ್ಸಿಗೆ ಆರಂಭವಾದ ತರುವಾಯವೇ ಇವರು ಸರಸ್ವತೀ ಸೇವೆಗೆ ಮನಸ್ಸು ಮಾಡಿದರು. ತಮ್ಮ ೫೦ನೆಯ ವರ್ಷ ವಯಸ್ಸಿನಲ್ಲಿ ಸಂಸ್ಕೃತದ ಅಭ್ಯಾಸವನ್ನು ಆರಂಭಿಸಿ ಅದರಲ್ಲಿ ತಕ್ಕಷ್ಟು ಪ್ರಗತಿಯನ್ನು ಪಡೆದ ತರುವಾಯ ಆ ದೇವವಾಣಿಯಲ್ಲಿ ತುಂಬಿರುವ ಕಾವ್ಯ ರಸಾಸ್ವಾದನೆಯಿಂದ ತೃಪ್ತರಾಗಿ, ಆ ಅಮೃತಸೇವನೆಯಿಂದ ಹೊಸ ತಾರುಣ್ಯದ ಹುರುಪು ಮರುಕಳಿಸಿದ ತರುವಾಯ ತಾವು ಪಡೆದ ಆ ಸಂಜೀವಿನಿಯ ಸೇವನೆಯ ಸಾಮರ್ಥ್ಯವನ್ನು ಕನ್ನಡಿಗರ ಸೇವೆಗೆ ಅರ್ಪಿಸಬೇಕೆಂಬ ಕುತೂಹಲದಿಂದ ಕನ್ನಡ ಕಾವ್ಯಗಳನ್ನು ರಚಿಸಲು ಪ್ರಾರಂಭಿಸಿದ ಮಹನೀಯರಿವರು. ಇಂತಿದ್ದರೂ ಪಾರ್ವತೀ ಪರಿಣಯ, ಭಗವದ್ಗೀತೆ ಇವೆರ

ಡನ್ನೂ ತಾವೇ ಮುದ್ರಿಸಿ ಪ್ರಕಟಿಸಿದರು. ಪ್ರಸ್ತುತದ ರಘುವಂಶ ಕಾವ್ಯದ ಕರ್ನಾಟಕಾನುವಾದವು ಸಿದ್ಧವಾಗುವಷ್ಟರಲ್ಲಿ ಆ ಮಹರ್ಷಿಯರ ವಯಸ್ಸು ಅರುವತ್ತಕ್ಕೆ ಮುಟ್ಟಿತು. ಸದ್ಯಕ್ಕೆ ಕಾರವಾರದ ಹಾಯಸ್ಕೂಲಿನಲ್ಲಿ ಮುಖ್ಯಾಧ್ಯಾಪಕರಾಗಿರುವ ಶ್ರೀ. ಮಹಿಷಿ ರಾಮರಾಯರು ಆಗ ವಿಜಾಪುರ ಹಾಯಸ್ಕೂಲಿನಲ್ಲಿದ್ದರು. ಮುಂದೆ ತುಸು ದಿನಗಳ ತರುವಾಯ ಅವರು ಅಲ್ಲಿಂದ ಧಾರವಾಡದ ಟ್ರೇನಿಂಗ ಕಾಲೇಜಕ್ಕೆ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟಿದ್ದರಿಂದ ಧಾರವಾಡಕ್ಕೆ ಬರುವಾಗ ಕನ್ನಡದ, ಕರ್ನಾಟಕದ, ಕರ್ನಾಟಕ ವಿದ್ಯಾವರ್ಧಕ ಸಂಘದ ಅಭಿಮಾನಿಗಳಾದ ಆ ಮಹಾನುಭಾವರೊಡನೆ ಈ ಕಾವ್ಯವು ಧಾರವಾಡಕ್ಕೆ ಬಂದು ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸೇರಿತು. ೧೯೨೦ನೆಯ ಇಸ್ವಿಯ ಕೊನೆಯಿಂದ ಕ್ರಮವಾಗಿ ವಾಗ್ಭೂಷಣದಲ್ಲಿ ಪ್ರಕಟವಾಗ ಹತ್ತಿರುವುದಂತೂ ನಮ್ಮ ವಾಚಕರಿಗೆ ತಿಳಿದೇ ಇದೆ. ಶ್ರೀ. ನರಹರಿರಾಯರು ರಚಿಸಿದ ಇನ್ನುಳಿದ ಗ್ರಂಥಗಳು ಯಾವಾಗ ಬೆಳಕಿಗೆ ಬರುವವೋ ನೋಡಬೇಕು.

ಸದ್ಯದ ಪರಿಸ್ಥಿತಿಯಲ್ಲಿ ಕನ್ನಡ ಗ್ರಂಥಗಳನ್ನು ಪ್ರಕಟಿಸುವುದೇ ಬಿಗುವಿನ ಕೆಲಸ. ಅದರಲ್ಲಿಯೂ ಕಥೆ ಕಾದಂಬರಿಗಳಷ್ಟು ಸುಲಭವಲ್ಲದ ಮತ್ತು ಅವಸರದ ವಾಚನಕ್ಕೆ ಸಲ್ಲದ ಮನಸ್ಸಿನ ಸ್ಥಿರತೆಯೂ ತುಸು ಹೆಚ್ಚಿನ ಭಾಷಾಜ್ಞಾನವೂ ಅವಶ್ಯಕವೆನಿಸುವ ಪದ್ಯ ಕಾವ್ಯಗಳ ವಾಚಕರು ತೀರ ದುರ್ವಿರಲರಾಗಿರುವದೆಂದರೆ ಆಶ್ಚರ್ಯವಾಗಲು ಕಾರಣವಿಲ್ಲ. ಇಂತಿರುವಾಗ ಕ. ವಿ. ವ. ಸಂಘದಂಥ ಸಾರ್ವಜನಿಕ ಸಂಸ್ಥೆಗಳಿಗಲ್ಲದೆ ಸಾಮಾನ್ಯ ವ್ಯಕ್ತಿಗೆ ಇಷ್ಟು ದೊಡ್ಡ ಕಾವ್ಯವನ್ನು ಪ್ರಕಟಿಸುವದು ಎಂದೂ ಸಾಧ್ಯವಾಗದ ಮಾತೇ ಸರಿ. ಈ ಕಾರಣದಿಂದಲೂ ಸಂಘವು ಈ ಕಾವ್ಯದ ಪ್ರಕಟನೆಯ ಕಾರ್ಯವನ್ನು ಒಪ್ಪಿಕೊಂಡಿತು. ಕೇವಲ ವಾಙ್ಮಯ ಸೇವೆಯ, ನಿಃಸ್ವಾರ್ಥಬುದ್ಧಿಯ ಸಂಘದ ಇಂತಹ ಕಾರ್ಯಕ್ಕೆ ತಕ್ಕ ಪ್ರೋತ್ಸಾಹನೆಯನ್ನು ಕೊಡುವದು ಕನ್ನಡಿಗರ ಕರ್ತವ್ಯವಾಗಿದೆ.

ಯಾವ ತರದ ಪ್ರತಿಫಲವನ್ನು ಕೋರದೆ ಪ್ರಸ್ತುತ ಕಾವ್ಯದ ಸರ್ವ ಸ್ವಾಮಿತ್ವವನ್ನು ಸಂಘಕ್ಕೆ ಸಮರ್ಪಿಸಿದ ಶ್ರೀ. ಕಲಮಡಿ ನರಹರಿರಾಯರ ಔದಾರ್ಯವನ್ನು ಎಷ್ಟು ಪ್ರಶಂಸಿಸಿದರೂ ಸಾಲದು; ಅವರ ಉಪಕಾರವನ್ನು ಎಷ್ಟು ಸ್ಮರಿಸಿದರೂ ತೀರದು. ಕೊನೆಗೆ ಶ್ರೀ. ನರಹರಿರಾಯರಿಗೆ ದೀರ್ಘಾಯುಷ್ಯವನ್ನು ಕೋರಿ ಅಭಿಮಾನಿಗಳಾದ ಕನ್ನಡಿಗರಿಗೆ ಸಂಘದ ಕಾರ್ಯಕಲಾಪಗಳ ವಿಷಯವಾಗಿ ಅಭಿಮಾನ ತಾಳಿ ತಕ್ಕ ನೆರವನ್ನು ನೀಡಿರೆಂದು ಎಚ್ಚರಿಸಿ ಈ ಚಿಕ್ಕ ಮುನ್ನುಡಿಯನ್ನು ಮುಗಿಸುವೆವು.

ಕ. ವಿ. ವ. ಸಂಘ
ಧಾರವಾಡ.
ತಾ. ೧೦–೧೨–೧೯೨೮

ಕೆ. ಬಿ. ಅಂಕಲಿಗಿ,
ವ್ಯವಸ್ಥಾಪಕ ವಾಗ್ಭೂಷಣ.



ಶ್ರೀಯುತ ನರಹರರಾವ ಕಲಮಡಿ
ವಕೀಲ, ವಿಜಾಪುರ.

ಶ್ರೀರಘುವಂಶ ಸರ್ಗ ೧ನೇದು.

ವಾಣಿ ಮೇಣದರ್ಥವಿಪ್ರಗಳ । ಜ್ಞಾನ ಸಂಪಾದಿಸುವಗೋಸ್ಕರ ।
ಮಾನವಿಲ್ಲದ ಸಕಲವಿಶ್ವಕೆ ಯೋನಿಯಾಗಿರುವ ॥
ಮೇನಕಾತ್ಮಜೆಯೊಡನೆಯಾಕೆಯ । ಪ್ರಾಣನಾಥನ ಚರಣಗಳನುರೆ ।
ಸಾನುರಾಗದೆ ವಂದಿಪೆನು ನಾಂ ಪರಮ ಭಕುತಿಯಲಿ ॥ ೧ ॥
ಎತ್ತ ಭಾಸ್ಕರನಿಂದ ಪುಟ್ಟಿ- । ದುತ್ತಮೋತ್ತಮವಾದ ಕುಲವದ- ।
ನೆತ್ತ ನಾನತಿ ಮಂದ ಮತಿಯುವನೀಗ ಬಣ್ಣಿಪೆನೋ ॥
ಹತ್ತಿ ಕಿರಿ ಡೋಣಿಯಲಿ ಧರೆಯನು । ಸುತ್ತುಗಟ್ಟಿದ ಕಡಲ ದಾಂಟುವ ।
ಮತ್ತನಂತೀ ನನ್ನ ಕೃತಿಯುಪಹಾಸ ಹೊಂದುವದು. ॥ ೨ ॥
ಕರವ ಮೇಲಕೆ ಚಾಚಿ ಫಲವನು । ಪರಿದುಕೊಳ್ಳುವೆನೆಂದು ಲೋಭದೆ ।
ಬರಿದೆ ಶ್ರಮಿಸುವ ವಾಮನಾಕೃತಿಯುಳ್ಳ ನರನಂತೆ ॥
ಸರಸಕವಿಗಳ ಕೀರ್ತಿಯನ್ನುರೆ । ವರಿಸುವೆನು ನಾನೆಂದು ರಚಿಸುವ ।
ನಿರಸವಾದಂಥೆನ್ನ ಕಾವ್ಯವು ಹಾಸ್ಯಹೊಂದುವದು ॥ ೩ ॥
ಕಲೆಯ ಬಲ್ಲವನಿಂದ ವಜ್ರದ । ಪೊಳೆವ ಮಣಿಯಲಿ ಬೆಜ್ಜ ಮಾಡಲು ।
ಲಲನೆಯಾದೊಡೆ ಸೂತ್ರವನು ಪೋಣಿಸುವ ತೆರದಲ್ಲಿ ॥
ಹಲವು ಪ್ರಾಕ್ಸೂರಿಗಳೂ ಮಿತ್ರನ । ಕುಲದ ನಿಲಯಕೆ ವಾಣಿಮಾರ್ಗವ ।
ಬಲದೆ ಮಾಡಿಹರೆಂದು ನಾನದರಲ್ಲಿ ಸೇರುವೆನು ॥ ೪ ॥
ಹಿಡಿದ ಕೆಲಸಗಳನ್ನು ಮನಸಿನ । ದೃಢತೆಯಿಂ ಕಡೆಗಾಣಿಸುವ ಮೇಣ್ ।
ಪಡೆದ ಪುಣ್ಯಗಳಿಂದ ಜನ್ಮಾರಂಭದಿಂ ಮೆರೆವ ॥
ಇಡಿಯ ಪೊಡವಿಯ ರಾಜ್ಯವಾಳಿದ ಪೊಡವಿಯಿಂ ಸುರರಿರುವ ಸ್ಥಾನಕೆ ।
ಒಡವೆ ರಥವನು ನಡಿಸಿದಂತಹ ಪರಮ ಪಾವನರ ॥ ೫ ॥
ಅತಿಥಿಗಳನುರೆ ತೃಪ್ತಿ ಬಡಿಸಿದ ಕೃತುಗಳನು ವಿಧಿಯಂತೆ ಮಾಡಿದ ।
ಸತತ ಪ್ರಜೆಗಳ ಹಿತದ ಕಾರ್ಯ್ಯಗಳನ್ನು ಮಾಡಿರ್ದ ॥
ಚತುರತನದಲಿ ನ್ಯಾಯತೀರಿಸಿ । ಮಿತಿಯ ಮೀರದೆ ಶಾಸ್ತ್ರದಂತೆಯೆ ।
ಪತಿತ ಜನರಿಗೆ ತಕ್ಕಶಾಸನವನ್ನು ವಿಧಿಸಿರ್ದ; ॥ ೬ ॥
ಧನವು ದುರ್ವ್ಯಾಪಾರಕಲ್ಲದೆ ಪ್ರಣತರಿಗೆ ಯರ್ಪಿಸಲು ಗಳಿಸಿದ ।
ಮನನ ಪೂರ್ವಕವಾಗಿ ಸೂನೃತ ವಾಣಿಯನು ನುಡಿದ ॥
ಜನಪರನು ಯಶಕಾಗಿ ಜಯಿಸಿದ । ವನಿತೆಯನು ಭೋಗಾರ್ಥಕಲ್ಲದೆ ।
ತನುಜರನ್ನುತ್ಪಾದಿಸುವದಕೆ ಮಾಡಿಕೊಂಡಿರ್ದ ॥ ೭ ॥

ಚಿಕ್ಕತನವಭ್ಯಾಸದಲಿ ಪ್ರೇಣ್ । ತಕ್ಕಪ್ರಾಯವ ವಿಷಯ ಭೋಗದೆ ।
ಮಿಕ್ಕಿಯುಳಿದಾಯುಷ್ಯ ವಾನಪ್ರಸ್ಥದಲಿ ಕಳೆದ ॥
ಅಕ್ಕರದೆ ದೇಹಾಂತ ಸಮಯವ । ರುಕ್ಮಿಣಿಯ ವರನನ್ನು ಧ್ಯಾನಿಸಿ ।
ಮೋಕ್ಷವನು ಸಂಪಾದಿಸುವದಕೆ ವ್ಯಯವ ಮಾಡಿರ್ದ; ॥ ೮ ॥

ಭಾನುವಂಶದ ನೃಪರ ಯಶವನು । ತಾನು ಕೇಳಿದ ಕೂಡಲೆನ್ನಯ ।
ಮಾನಸವು ತದ್ಗುಣ-ಗಣಾನ್ವಯವನ್ನು ಬಣ್ಣಿಸಲು ॥
ಸಾನುರಾಗದೆ ಹೊಂದಿ ಸ್ಫೂರ್ತಿಯ । ತಾನು ಮಾಡುವ ಕರ್ಮವರಿಯದೆ ।
ವಾಣಿಯನು ಸಂಯೋಜಿಸಿತು ನಾನೇನು ಮಾಡುವೆನು ॥ ೯ ॥

ಶೋಧಕರು ಬಂಗಾರದಲ್ಲಿಯ । ಭೇದವನ್ನರಿಯಲ್ಕೆಯನಲದೆ ।
ಕಾದ ಮುಸಿಯಲ್ಲಿಕ್ಕಿ ಕರಗಿಸಿ ಯದನು ನೋಡುವರು ॥
ಆದಕಾರಣ ನನ್ನ ಕೃತಿಯಾ- । ಸ್ವಾದವನು ಬುಧರೋದಿ ನೋಡಲು ।
ಬಾಧೆಯಿಲ್ಲದೆ ದೋಷಗುಣಗಳ ಬೋಧವಾಗುವದು ॥ ೧೦ ॥

ಪ್ರಥಮದಲಿ ರವಿಯಿಂದ ಪುಟ್ಟಿ- । ದ್ದತುಲ ವಿಕ್ರಮದಿಂದ ಕೂಡಿದ ।
ಸುತನು ಮಹಿತಲದಲ್ಲಿ ಮನುನಾಮಾಭಿಧಾನದಲಿ ॥
ಶ್ರುತಿಗಳಲ್ಲೋಂಕಾರದಂತೆಯೆ । ಕ್ಷಿತಿಪರೊಳಗವನಾದ್ಯರಾಜನು ।
ಗತಿಸಿ ಪೋದನು ಸರ್ವಸಮ್ಮತನಾಗಿ ಜನರೊಳಗೆ ॥ ೧೧ ॥

ಧಾರುಣಿಯ ಮೇಲಿಂಥ ಸುಂದರ । ಧೀರಪರವೋಪಕಾರ ಶುಚಿತರ ।
ವೀರರಾಜರ ವಂಶದಲಿ ಬಹು ಪುಣ್ಯಬಲದಿಂದ ॥
ಕ್ಷೀರ-ಸಾಗರದಲ್ಲಿ ಜನಿಸಿದ । ಚಾರು ಚಂದಿರನಂತೆ ಮಿನುಗುವ ।
ಮಾರಮೋಹನ ನೃಪದಿಲೀಪನು ಜನುಮ ತಾಳಿದನು ॥ ೧೨ ॥

ಬೀಲಿಯಂತ್ಯಕೆ ಬೆಳಿಸಿದಂತಹ । ಶಾಲ-ವೃಕ್ಷೋನ್ನತ-ಶರೀರನು ।
ತೋಳುಗಳು ಮೊಣಕಾಲ ಕೆಳವರೆಗಿರ್ದ ಸುಂದರನು ॥
ಭಾಲ ವಿಸ್ತೃತವಾಗಿ ತೋರ್ಪವಿ- । ಶಾಲ ತುಂಬಿರ್ದುರದ ನೃಪ ಶಾ- ।
ರ್ದೂಲ ಸಾಕ್ಷಾತ್ ಕ್ಷಾತ್ರಧರ್ಮದ ತೆರದಿ ತೋರಿದನು ॥ ೧೩ ॥

ಎಲ್ಲ ಪ್ರಾಣಿಗಳಲ್ಲಿ ತಾಂ ಬಲ- । ದಲ್ಲಿ ಯತಿಶಯ ಮೀರಿ ತೋರುವ ।
ಎಲ್ಲ ಶಿಖರಿಗಳಲ್ಲಿ ಪೊಳೆಯುವ । ಚಲ್ಲೆ ಮೇರುವಿನಂತೆ ಧರಣಿಯ ।
ಫುಲ್ಲ ಲೋಚನನೆಲ್ಲ ತೇಜಗಳನ್ನು ಹಿಮ್ಮೆಟ್ಟಿ ॥
ವಲ್ಲಭನು ಸುರನರರ ಕಣ್ಗಳಿಗಂದ-ವೀಯುವನು ॥ ೧೪ ॥

ಅರಸನಾಕೃತಿಗೊಪ್ಪುವಂತಹ । ಸರಸ ಬುದ್ಧಿಯು ಬುದ್ಧಿಗೊಪ್ಪುವ ।
ಪರಮ ವಿಸ್ತೃತವಾದ ಶಾಸ್ತ್ರಾಭ್ಯಾಸವಿರುತಿತುದು. ॥

ಮೆರೆವ ಶಾಸ್ತ್ರಾಭ್ಯಾಸಕೊಪ್ಪುವ, ಕರದೆ ಕರ್ಮಗಳಾಗುವವು ಮೇ- ।
ಣಿರದೆಯುವುಗಳಿಗೊಪ್ಪುವಂತೆಯೆ ಕಾರ್ಯಸಿದ್ಧಿಗಳು ॥ ೧೫ ॥
ಕ್ರೂರ ಜಂತುಗಳಿಂದ ಹಾಗೆಯೆ । ಚಾರುರತ್ನಗಳಿಂದ ತುಂಬಿದ ।
ವಾರಿಧಿಯು ತೆರದಲ್ಲಿ ಭೂಪನು ತನ್ನ ರಾಜ್ಯದಲಿ ॥
ಶೂರನೃಪತಿಗಳಲ್ಲಿ ತೋರುವ । ಸಾರಗುಣ-ಸಂಭಾರದಿಂದಾ- ।
ಧಾರ ಮೇಣ್ದುರ್ಧರ್ಷ್ಯನಾಗಿರುತಿಹನು ಪ್ರಜೆಗಳಿಗೆ ॥ ೧೬ ॥
ಚತುರ ಸಾರಥಿಯಿಂದ ನಡೆಸಿದ । ರಥವು ಚಕ್ರದ ನೇಮಿ ನುರಿತಿಹ ।
ಪಥದ ರೇಖೆಗಳನ್ನು ಮೀರದೆ ಸಾಗುವಂದದಲಿ ॥
ಪೃಥು ಪರಾಕ್ರಮಿ ಮನುವಿನಿಂದಲೆ । ಸತತ ಬಂದಾಚಾರದಂತೆಯೆ ।
ಮಿತಿಯು ಮೀರದೆಯೆಲ್ಲ ಪ್ರಜೆಗಳು ನಡೆದುಕೊಳ್ಳುವರು ॥ ೧೭ ॥
ತರಣಿ ತನ್ನಯ ಕರಗಳಿಂದಲೆ । ಧರೆಯು ಮೇಲಿನ ರಸವ ಶೋಷಿಸಿ ।
ತಿರುಗಿ ಸಾಸಿರಪಾಲಿನಿಂ ಪ್ರತ್ಯರ್ಪಿಸುವ ತೆರದೆ ॥
ತೆರಿಗೆಯನು ಜನರಿಂದ ಕರುಣಾ- । ಪರ ದಿಲೀಪನು ಕೊಂಡು ತಾನವ- ।
ನಿರದೆ ಪ್ರತಿ-ಹಿತವನ್ನು ಮಾಡುವದಕ್ಕೆ ಕೊಡುತಿಹನು. ॥ ೧೮ ॥
ಅರಸುಗಳಿಗಿರ ತಕ್ಕವಿಭವದ । ಕುರುಹುವೆಂದೀ ನೃಪದಿಲೀಪನು ।
ಪರಮ ದುರ್ಧರವಾದ ಸೈನ್ಯಗಳನ್ನು ಸಾಕಿಹನು ॥
ಧರೆಯ ಪಾಲನೆಗಾಗಿ ತನ್ನಯ । ಕರದೆ ಧರಿಸಿದ ಚಾಪ-ಮೌರ್ವಿಯು ।
ಮೆರೆವ ಪರಮಾವಧಿಯ ರಾಜ್ಯದ ನೀತಿಕುಶಲತೆಯು ॥ ೧೯ ॥
ಇಳೆಯ ಪಾಲನ ಮನಸಿನೊಳಗಿನ । ಲಲಿತಗೂಢ-ವಿಚಾರಗಳು ನೃಪ-
ನುಳಿದ ಬೇರಾಕಾರ ಚೇಷ್ಟೆಗಳಿಂದ ತಿಳಿಯುವವೇ?
ಕಳೆದ ಜನುಮಗಳಲ್ಲಿ ಮಾಡಿದ । ಮೊಳೆತ ಸಂಸ್ಕಾರಗಳ ತೆರದಲಿ ।
ಫಲಗಳಿಂದನುಮಾನಮಾಡಲ್ಕಳವು ತೋರುವದು. ॥ ೨೦ ॥
ಪರರ ದರ ತನಗಿಲ್ಲದಿರ್ದರು । ಪರಮ ಜಾಗ್ರತೆಯಿಂದ ತನ್ನ- ।
ನ್ನಿರದೆ ರಾಜನು ಕಾದುಕೊಳ್ಳುತ ನಿರುಜೆತನದಲ್ಲಿ ॥
ಚರಿಸಿ ಧರ್ಮವ ಸ್ವಾರ್ಥವಿಲ್ಲದೆ । ತೆರಿಗೆಕೊಂಡಾಸಕ್ತಿಯಿಲ್ಲದೆ ।
ಹರುಷದಿಂ ಸುಖಭೋಗವನ್ನನುಭವಿಸುತಿರುತಿಹನು ॥ ೨೧ ॥
ಜ್ಞಾನಿ ಚೂಡಾಮಣಿಯು ವಿನಯದೆ । ಮೌನವನು ತಾಳುವನು ಭಿಕ್ಷು-
ಶ್ರೇಣಿಗಳಿಗವನಿತ್ತು ಪರಿಪರಿಯಿಂದ ದಾನಗಳ ॥
ವಾಣಿಯಿಂ ಶ್ಲಾಘನೆಯ ಮಾಡದೆ । ದೀನರಲಿ ಕ್ಷಮೆಯನ್ನು ತೋರಿಸಿ ।
ಮಾನವಾಧೀಶ್ವರನು ಗುಣಗಳ ಜನಕನಾಗಿಹನು ॥ ೨೨ ॥

ವಿಷಯಗಳ ಲೋಲುಪ್ತಿಯಿಲ್ಲದೆ । ಮಿಸುಪ ವಿದ್ಯೆಗಳಲ್ಲಿಯತಿಶಯ ।
ಪಸರಿಸಿದ ಜ್ಞಾನಾನುಭವಗಳ ಯೋಗಬಲದಿಂದ ॥
ಅಸಮ ರತಿಯನು ತಾಳ್ದು ಧರ್ಮದೆ । ವಸುಧೆಯೊಡೆಯನು ಪ್ರಾಯದಲ್ಲಿಯೆ ।
ಸುಷುಮೆಯನು ಹೊಂದಿಹನು ಜರಠರ ಕ್ಷೈಣ್ಯವನ್ನುಳಿದು ॥ ೨೩ ॥

ತನ್ನ ಪ್ರಕೃತಿಗಳನ್ನು ಪ್ರೇಮದೆ । ಯನ್ನ- ವಸ್ತ್ರಗಳಿಂದ ಪೋಷಿಸಿ- ।
ಸನ್ನುತಾಂಗನು ಸಂಕಟಂಗಳನೆಲ್ಲ ಪರಿಹರಿಸಿ ॥
ಮನ್ನಣೆಯ ಕರ್ತವ್ಯಕರ್ಮಗ- । ಳನ್ನು ಜನರಿಗೆ ಕಲಿಸಿ ತಾನೇ ।
ಜನ್ಮದಾತರಿಗಿಂತ ಹೆಚ್ಚಿಗೆಯಾಗಿ ತೋರಿದನು. ॥ ೨೪ ॥

ಜನರ ಸಂಸ್ಥಿತಿಗಾಗಿ ಸಾಹಸ- । ಜನರ ಕೃತಿಗಳಿಗೊಪ್ಪುವಂತಹ ।
ಜನಪನವರಿಗೆ ತಕ್ಕಶಾಸನವನ್ನು ವಿಧಿಸುವನು ॥
ತನುಜರುತ್ಪಾದನೆಯಗೋಸುಗ । ವನಿತೆಯನು ಸಂಗ್ರಹಿಸಿದಂ ಧೀ- ।
ಮನುಜಪತಿಕಾಮಾರ್ಥಗಳು ಜನಿಸುವವು ಧರ್ಮವನು ॥ ೨೫ ॥

ಧರೆಯ ಪಾಲನು ತನ್ನಜನರಂ । ಭರದೆ ತೆರಿಗೆಯ ರೂಪದಿಂ ಸಂ- ।
ಹರಣ ಮಾಡಿದ ಹಣದೆ ಕ್ರತುಗಳ ನಿರದೆ ರಚಿಸುವನು ॥
ಸುರರ ಪತಿ ಮಳೆಗರೆದು ರಾಜನ । ಧರೆಯ ಮೇಲ್ವರ್ಷಣಿಸುತಿರುವನು ।
ಚರಿಸುತಿಹರನ್ಯೋನ್ಯರೀಪರಿ ತಮ್ಮ ಹಿತಕಾಗಿ ॥ ೧೬ ॥

ಪರರ ವಸ್ತ್ವಪಹರಣವೆಂಬೀ । ತೆರದ ದುಃಶಬ್ದಗಳು ರಾಜನ ।
ಧರಣಿಮೇಲ್ಕೃತಿಯಲ್ಲಿ ತೋರದೆ ನರರ ಸ್ಮರಣೆಯಲಿ ॥
ಇರುವವಿಂತಹ ರಾಜರಾಜನ । ಸರಿಯ ಮಾಡುವರಾರು ಜಗದೊಳು?
ಹರಿಯ ಯಶವನು ಹೊಂದುವವೆ ಪಿರಿದಾದ ದ್ವಿರದಗಳು? ॥ ೨೭ ॥

ಪರಮ ಕಟುತ್ವೌಷಧಿಗಳಂತೆಯೆ । ಸರಲ ಶಿಷ್ಟಾಚಾರದರಿಗಳು ।
ಸರಸ ವರ್ತನದಿಂದ ರಾಜನಿಗಿಷ್ಟರೆನಿಸುವರು ॥
ಉರಗ ಕಚ್ಚಿದ ಬೆರಳಿನಂತೆಯೆ । ದುರುಳರತಿ ಹಿತಕರ್ತರಾದೊಡೆ- ।
ನರಪನವರನು ತ್ಯಾಜ್ಯರೆಂದೆಣಿಸುವನು ಮನದಿಂದ ॥ ೨೮ ॥

ಸುರರ ಜ್ಯೇಷ್ಠನು ತಾನು ಸೃಜಿಸಿ- । ದ್ದೆರಡು ಮೇಣ್ ಮೂರ್ತತ್ವಗಳ ಬಹು ।
ಪರರಿಗುಪಕಾರವನು ಮಾಡುವ ಗುಣದ. ಸಾರವನು ॥
ಭರದೆ ತೆಗೆದೊಂದೆಡೆಗೆ ಕೂಡಿಸಿ । ಪರಮದಕ್ಷತೆಯಿಂದ ಧರಣೀ- ।
ವರ ದಿಲೀಪನ ಸರಸದೇಹವ ರಚಿಸಿ ಬಿಟ್ಟಿಹನೋ? ॥ ೨೯ ॥

ಧರೆಯೆ ನರಪನ ನಗರವದು ಸಾ- । ಗರವೆಯಾನಗರಕ್ಕೆ ಸುತ್ತಿಹ ।
ಪರಿಖೆ ಪರಿಖೆಗೆ ಹೊಂದಿಯೊಳಭಾಗಕ್ಕೆ ಗೋಪುರಿಪ ॥

ಸರಸ ವಪ್ರಗಳೆಲ್ಲ ಕಡೆಯಲಿ । ಪಿರಿಯ ಕೋಟೆಗಳಿಂಥ ಪುರದಲಿ ।
ವರದಿಲೀಪನು ತಾನೆಯೊರ್ವನೆ ರಾಜ್ಯವಾಳುವನು ॥ ೩೦ ॥

ಕ್ರತುವಿನಧಿಪತಿಯಾದ ದೇವಗೆ । ಸತಿಯು "ದಕ್ಷಿಣೆ" ದೊರೆತ ತೆರದಲಿ ।
ಪತಿಗೆ ಸಾದೃಶವಾದ ದಾಕ್ಷಿಣ್ಯಾದಿ ಗುಣವತಿಯು ॥
ಸತಿ "ಸುದಕ್ಷಿಣೆ" ಯೆಂಬಪೆಸರಿನ । ಚತುರಮಗಧ ಪ್ರಾಂತದೊಡೆಯನ ।
ಸುತೆ "ದಿಲೀಪಗೆ" ದೈವಯೋಗದೆ ಪತ್ನಿಯಾಗಿಹಳು ॥ ೩೧ ॥

ಅರಸನಂತಃಪುರದೆ ಸುಂದರ । ತರುಣಪೆಂಡಿರ ಗಡಣವಿರ್ದೊಡೆ ।
ನಿರತಿಶಯ ದೃಢ-ಚಿತ್ತಳಾದೀ ವರ "ಸುದಕ್ಷಿಣೆಯ- ॥
ಕರವ ಪಿಡಿದದರಿಂದ ಮೇಣೀ- । ಧರೆಯ ವರನಾಗಿರುವ ಮೂಲಕ ।
ನರಪ ಭಾರ್ಯಾವಂತ ತಾನೆಂದಿರದೆ ತಿಳಿದಿಹನು ॥ ೩೨ ॥

ತನ್ನಗುಣರೂಪಗಳ ಸಾದೃಶ- । ವನ್ನು ತಾಳುವ ತನುಜನೀಕೆಯ ।
ಪೊನ್ನಜಠರದೆ ಯೆಂದು ಪುಟ್ಟುವನೆಂದು ಮನಸಿನಲಿ ॥
ಬನ್ನಬಡುತತಿ ಖಿನ್ನನಾದೀ- । ಗನ್ನಮಹಿಮನು ಚಿಂತೆಯಲಿ ದಿನ- ।
ವನ್ನು ಕಳೆಯುತ್ತಿಹನು ಪನ್ನಗಶಾಯಿಯನು ನೆನಿಸಿ- ॥ ೩೩ ॥

ಸಂತತಿಯು ಸಲುವಾಗಿ ವಿಧಿಯನು । ಕಾಂತೆಯಿಂದೊಡಗೂಡಿ ತಾನೇ ।
ಕಾಂತದಲಿ ಮಾಡಲ್ಕೆ ತನ್ನಯ ರಾಜ್ಯಭಾರವನು ॥
ಚಿಂತೆಯಿಲ್ಲದೆ ಮಂತ್ರಿಗಳ ಮೇ- । ಲಂತರಂಗದ ಹೇತು ತಿಳುಹಿದ ।
ನಂತರದೆ ನೃಪನಿಟ್ಟು ತಾಂ ನಿಶ್ಚಿಂತನಾಗಿಹನು. ॥ ೩೪ ॥

ಬಳಿಕ ಸಂತಾನವನು ಬಯಸುವ । ನಳಿನ ಮಿತ್ರನ ವಂಶಜಾತನು ।
ನಳಿನ ಸಂಭವನಾದ ಬ್ರಹ್ಮನ ಪೂಜೆಯನು ಮಾಡಿ ॥
ಇಳೆಯ ಪಾಲನು ಹೊರಟನಾಗಲೆ । ನಳಿನ ಮುಖಿಯನು ಕೊಂಡು ಸಂಗಡ ।
ಕುಲದ ದೇಶಿಕನಾಶ್ರಮಕೆ ಪಿರಿದಾದ ಭಕುತಿಯಲಿ ॥ ೩೫ ॥

ಬರಿಸಕಾಲದ ಮೋಡಗಳ ಮೇಲ್ । ಚರಿಪಚಪಲೈರಾವತಂಗಳ ।
ಸರಸ ಯುಗ್ಮದ ತೆರದೆ ನಯನೋಲ್ಲಾಸಕರವಾಗಿ ॥
ಪರಮ ಮಂಜುಲರವವನೀಯುವ । ವರಸುವರ್ಣದ ತೇರಿನಲಿ ಭೂ- ।
ವರ ದಿಲೀಪನು ಮತ್ತೆಯಾತನ ಪತ್ನಿಯಡರಿದರು. ॥ ೩೬ ॥

ಗುರುವಿನಾಶ್ರಮದಲ್ಲಿ ತನ್ನ- । ಲ್ಲಿರುವ ಸೇವಕ ಜನರ ಪೀಡೆಯು ।
ಶರವದಲ್ಲೆಂದರಿತು ತನ್ನಯ ಮನಸಿನಲಿ ನೃಪನು ॥
ಪರಮ ಪರಿಮಿತಿಯಿಂದ ಬೇಕಾ- । ಗಿರುವ ಜನರನ್ನಷ್ಟೆ ಯೊಯ್ದನು ।
ಮೆರೆವ ತೇಜದೆ ಸೈನ್ಯಪರಿವೃತನಂತೆಯೆಸೆದಿಹನು. ॥ ೩೭ ॥

ದಾರಿಯಿಕ್ಕೆಲ ಭಾಗದಲ್ಲಿಯು । ಭೂರುಹಂಗಳು ತಮ್ಮ ಪೂಗಳ ।
ಸಾರವನು ಮೇಣ್ ಶಾಲ ತರುಗಳು ದಿವ್ಯಸುರಭಿಯನು ॥
ಮಾರುತನ ಮುಖದಿಂದಲರ್ಪಿಸಿ । ತೋರಿದವು ತಂತಮ್ಮ ಪ್ರೇಮವ ।
ಧಾರುಣಿಯ ಪತಿಗಾಗ ಗುರ್ವಾಶ್ರಮದ ದಾರಿಯಲಿ. ॥ ೩೮ ॥

ರಥದ ಘನಗಂಭೀರ ಶಬ್ದವು । ಶ್ರುತಿಗೆ ಬಿದ್ದಾಕ್ಷಣಕೆ ಶಿಖಿಗಳು ।
ಕುತುಕದಿಂ ತಲೆಯೆತ್ತಿ ಮೇಲಕೆ ಷಡ್ಜನಾದವನು ॥
ಪಥದೆ ಸಾಗುವ ರಾಜರಾಜ್ಞಿಯ । ಮಿಥುನಕತ್ಯಾನಂದ ವೀಯಲು ।
ಜತನದಿಂ ಮಾಡುತ್ತಲಿಹವೇನೆಂದು ತೋರಿದವು. ॥ ೩೯ ॥

ಎರಳೆಗಳ ಸ್ತ್ರೀಪುರುಷ ಯುಗ್ಮವು । ಸರಿದು ಪಥದೊಂದೆಡೆಗೆ ನಿಂತವು ।
ಬರುವ ಚಿನ್ನದ ತೇರಿನಲಿ ಕುಳಿತಿರುವ ಜಂಪತಿಯ ॥
ಪರಮ ವಿಸ್ತೃತವಾದ ಕಣ್ಗಳು । ಸರಿಯುವಾಗುವವೇನು ತಮ್ಮಯ ।
ಸರಸ ಕಣ್ಗಳಿಗೆಂದು ಪರಿಕಿಸಿ ದಿಟ್ಟಿಸೀಕ್ಷಿಪವು? ॥ ೪೦ ॥
ಮೇಲೆಯಾಗಸದಲ್ಲಿ ಹಾರುವ । ಪಾಲಿನಂತತಿ ಶುಭ್ರವರ್ಣದ ।
ಲೋಲವಾಗಿಹ ಸಾರಸಂಗಳ ಸಾಲುಗಳು ನೃಪಗೆ ॥
ಕೋಲು ಕಂಬಗಳಿಲ್ಲದಂಥ ವಿ- । ಶಾಲಪೊರಬಾಗಿಲಕೆ ಕಟ್ಟಿದ ।
ಜೋಲುವಂತಹ ಪುಷ್ಪತೋರಣದಂತೆ ತೋರಿದವು. ॥ ೪೧ ॥
ಅಂದು ಸ್ಯಂದನ ಮಾರ್ಗದಲಿ ಬಹು । ಮಂದಗತಿಯಿಂ ಬೀಸಿಗಾಳಿಯು ।
ಕುಂದರದನೆಯ ಕುಂತಳಕೆ ಮೇಣ್ರಾಜ-ಮಸ್ತಕದ ॥
ಚಂದ ಮುಂಡಾಸಕ್ಕೆ ರಜಸಿನ । ಬಂಧವಾಗದೆ ಕಾರ್ಯಸಿದ್ಧಿಯು ।
ಹೊಂದುವದು ತಾನೆಂದು ನಿಶ್ಚಯವಾಗಿ ಸೂಚಿಸಿತು ॥ ೪೨ ॥
ಚರಿಸುತಿರೆ ಭೂಪಾಲಕನು ಮೇ- । ಣರಸಿ ಮಾರ್ಗದೆದೊಳಾಗ ಕಂಡರು ।
ಸರಸಿಯುಲ್ಲರಳಿರ್ದ ಸುಂದರ ಸರಸಿಜಂಗಳನು ॥
ಮರುತನವುಗಳ ಸುರಭಿಯನು ಪರಿ- । ಹರಿಸಿ ಯಾನರಪುಂಗವರ ಮುಖ- ।
ಸರಸ ಗಂಧಕ್ಕಿರದೆ ಸರಿ ಮಾಳ್ಪಂತೆ ತೋರಿದನು. ॥ ೪೩ ॥
ದಾರಿಯಲಿ ಯಜ್ವರಿಗೆ ಮುಂಚೆಗೆ । ನೀರಜಾಕ್ಷರು ತಾವು ಕೊಟ್ಟ- ।
ದೂರುಗಳು ಹತ್ತಿದವು ತತ್ತದ್ ಗ್ರಾಮಗಳಲಿರ್ದ ॥
ಪಾರುವರು ತಮಗಿತ್ತ ಬಹಳುಪ- । ಚಾರಗಳ ಮೇಣಾಶಿಷಂಗಳ ।
ತೋರ ಸಂತಸದಿಂದ ಕೊಳ್ಳುತೆ ಮುಂದೆಸಾಗಿದರು. ॥ ೪೪ ”
ಸಾಗೆದಂಪತಿ ಮುಂದಕವರೆದು- । ರಾಗಿ ಗೋಪಾಲಕರು ಬಂದೀ- ।
ಯೋಗವದು ತಮಗೆಂದು ದೊರೆಯುವದೆಂದು ಪ್ರೇಮದಲಿ ॥

ಆಗಕಾಸಿದ ಘೃತವನರ್ಪಿಸೆ । ರಾಗದಿಂದವರನ್ನು ರಾಜನು ।
ಸಾಗುವಡೆ ಚರಿತಾರ್ಥ ಸುಖದಿಂದೆಂದು ಕೇಳಿದನು. ॥ ೪೫ ॥
ಮೋಡಮುಸುಕದ ಸ್ವಚ್ಛ ನಭದಲಿ । ಮೂಡಿ-ಚಿತ್ರಾ-ಚಂದ್ರಮರ ಸರಿ- ।
ಜೋಡು ಮಧು ಮಾಸದಲಿ ರಾತ್ರಿಯ ಕಾಲದಲಿ ಪೊಳೆವ ॥
ಪಾಡಿನಂದದೆ ಸೂರ್ಯಕುಲದೀ- । ಪ್ರೌಢವಾಗಿಹ ರಾಜದಂಪತಿ ।
ನಾಡಿನೊಳಗಿನ ಜನರ ಕಣ್ಗಳಿಗೆಸೆದು ತೋರಿದುದು ॥ ೪೬ ॥
ಚಾರುಕರ್ಮಗಳಿಂದ ಲೊಪ್ಪುವ । ಸಾರಸುಂದರನಾದ ರಾಜನು ।
ಸಾರಸಾಕ್ಷಿಗೆ ಮಾರ್ಗದಲ್ಲಿಯ ವಸ್ತುಗಳನರುಹಿ ॥
ತೋರಿಸುವ ಭರದಲ್ಲಿ ಸಾಗಿದ । ದಾರಿಯಳತೆಯನಾದರೂ ತಾಂ- ।
ತೋರದೇ ಸುಖದಿಂದ ಮಾರ್ಗಕ್ರಮಣ ಮಾಡಿದನು ॥ ೪೭ ॥
ನಳಿನಮಿತ್ರನು ಪಶ್ಚಿಮಾದ್ರಿಯ । ಕೆಳಗೆ ಪೋಗುವಕಾಲದಲಿ ರವಿ- ।
ಕುಲಶಿರೋಮಣಿಯಾದ ರಾಜನು ಪೆಂಡತಿಯ ಕೂಡ ॥
ಇಳಿದು ರಥದಿಂ ಗುರುವಿನಾಶ್ರಮ- । ದೊಳಗೆ ಪೊಕ್ಕನು ಸೇವಕರು ಶ್ರಮ ।
ಕಳೆದುಕೊಳ್ಳುತ ಹೊರಗೆ ಕುಳಿತರು ಕಟ್ಟಿಹಯಗಳನು. ॥ ೪೮ ॥
ಮುನಿ ವಸಿಷ್ಠಾ-ಶ್ರಮಕೆ ತಾಪಸ- । ಜನರು ಸಮಿಧಾಪುಷ್ಪಫಲಗಳ- ।
ನನಿತರೊಳು ಕೈಕೊಂಡು ಬಂದರು ಶೀಘ್ರಗತಿಯಿಂದ ॥
ತನಗೆ ಯಾಹುತಿಯನ್ನು ಕೊಡುವೀ- । ಘನ ತಪೋಧನ ಜನರ ಮಾರ್ಗವ ।
ನನಲ ಶಿಖೆಗಳ ನೆಗಪಿ ನೋಡುವ ತೆರದೆ ಜ್ವಲಿಸಿದನು ॥ ೪೯ ॥
ವನವ ಮನೆ ಮಾಡಿರ್ದ ಮುನಿಗಳ । ವನಿತೆಯರಿಗವರವರ ತನುಜರು ।
“ ಜನನಿ ನಮಗೀಕ್ಷಣಕೆ ತಿನ್ನಲು ಕೊಡದೆ ಬಿಡೆವೆಂದು ” ॥
ಎನುವ ತೆರದಲಿ ಹರಿಣಗಳು ಮುನಿ- । ಜನರ ಮಾರ್ಗವರೋಧಿಸುತೆವನ- !
ತೃಣದ ಬೀಜಗಳನ್ನು ಕೊಳ್ಳುತ್ತಿಹವು ಸಲುಗೆಯಲಿ ॥ ೫೦ ॥
ಬಾಲ ತರುಗಳ ಮೂಲದಲಿ ಮುನಿ- । ಬಾಲೆಯರು ನುಡಿ ತುಂಬಿ ನೀರನು ।
ಲೀಲೆಯಿಂ ಪೊಯ್ದಾಗಲೇ ತೆರಳುವರು ದೂರದಲಿ ॥
ಸಾಲುಗೊಂಡಲವಾಲದಲ್ಲಿಯ । ಪಾಲಿನಂತಹ ಶುದ್ಧ ಜಲವನು ।
ನೀಲಕಂಠಾದ್ಯಖಿಲ ಖಗಗಳು ಕುಡಿಯುಲಿಂತೆಂದು ॥ ೫೧ ॥
ಗುರುವಿನಾಶ್ರಮದೆದುರಿನಲ್ಲಿಯ । ಪರಮ ವಿಸ್ತೃತವಾದ ಬೈಲೊಳು ।
ತರಣಿ ಯಸ್ತಾಚಲಕೆ ಪೋಗುವ ಸಮಯದಲಿ ಬಂದು ॥
ತರುಣ ಮುನಿಸುತರಾಗಸುರುವಿದ । ಸರಸ ತೃಣಬೀಜಗಳ ರಾಶಿಯು ।
ನೆರೆದ ಮೃಗ ಸಮುದಾಯದೀಕ್ಷಣ ಕಂದ ಕೊಟ್ಟಿಹುದು ॥ ೫೨ ॥

ಮರುತದಿಂ ಪ್ರಜ್ವಲಿಸಿ ಯುರಿಯು- । ತ್ತಿರುವ ಹೋಮಾಗಾರದಲ್ಲಿಯ ।
ಪರಮ ಪಾವನವಾದ ಹೋಮದ ಧೂಮವದು ಸೋಂಕಿ ॥
ನರಪತಿಯು ಮೇಣವನ ಭಾಮೆಯು । ಸರಸ ತನುಗಳು ಶುದ್ಧವಾದವು ।
ನಿರತಿಶಯ ಸೌಂದರ್ಯವೈಭವದಿಂದಲೊಪ್ಪಿದವು ॥ ೫೩ ॥
ತೇರಿನಿಂ ಮುನ್ನಿಳಿದು ತನ್ನಯ । ದಾರವನು ಕೆಳಗಿಳಿಸಿ ಯಾಗಲೆ ।
ಸಾರಥಿಗೆ ಹಯಗಳನು ವಿಶ್ರಮಗೊಳಿಪುದೆಂದುಸುರಿ ॥
ಧಾರಿಣೀಶ ದಿಲೀಪರಾಯನು । ಸಾರಸಾಕ್ಷಿಯ ಕೂಡ ಹೋಮಾ- ।
ಗಾರದೆಡೆಗೈತಂದನಾಗಲೆ ಪರಮ ಭಕುತಿಯಲಿ ॥ ೫೪ ॥
ಮಡದಿಯಿಂ ದೊಡಗೂಡಿ ಬಂದಾ- । ಪೊಡವಿಯೊಡೆಯನ ನೀತಿನಿಪುಣನ ।
ಬಿಡದೆ ಪ್ರಜೆಗಳನವನ ಮಾಡುವ ಪರಮ ಧಾರ್ಮಿಕನ ॥
ಒಡನೆ ಕಂಡಾಕ್ಷಣಕೆ ಹರುಷದೆ । ಕಡು ದಯಾನ್ವಿತರಾದ ಮುನಿಗಳು ।
ತಡವ ಮಾಡದೆ ಮನ್ನಿಸಿದರತ್ಯಂತ ಸಾದರದೆ ॥ ೫೫ ॥
ಅನಲನೆಡೆಯಲ್ಲವನ "ಸ್ವಾಹಾ" । ವನಿತೆಕುಳ್ಳಿರುವಂತೆ ಮುನಿ-ಸತಿ ।
ಮುನಿ ವಸಿಷ್ಠನ ಪಾರ್ಶ್ವದಲ್ಲಿಯೆ ಕುಳಿತುಕೊಂಡಿರಲು ॥
ಕ್ಷಣದೆಯಲ್ಲಿಯ ವಿಧಿಯು ಮುಗಿದಾ- । ಕ್ಷಣಕೆ ಗುರುವಿನ ಕಾಣಲೊಯ್ಯನೆ ।
ವಿನಯದಿಂ ಮುಂದಾದನವನಿಪನಿನಿಯಳಿಂ ಕೂಡಿ ॥ ೫೬ ॥
ಸರಸ ಭಕುತಿಯ ಭರದೆ ಯೋಗೀ- । ಶ್ವರ ವಸಿಷ್ಠನ ಮತ್ತೆ ಯಾತನ ।
ಪರಮ ಮಂಗಲೆಯಾದರುಂಧತಿಯಮಲಪದಗಳಿಗೆ ॥
ಎರಗೆ ನೃಪ ಮೇಣವನ ಪೆಂಡತಿ । ಯಿರದೆ ದಂಪತಿಗಳನು ಮನ್ನಿಸಿ ।
ಶಿರದ ಮೇಲ್ ಕೈಚಾಚಿ ಪರಸಿದರಾಗ ದೇಸಿಕರು ॥ ೫೭ ॥
ಅತಿಥಿ ಸತ್ಕಾರಗಳನಾ ಮುನಿ- । ಪತಿಯು ಭೂಪತಿಗಿತ್ತನಂತರ ।
ರಥದೆ ಮಾರ್ಗಕ್ರಮಣ ಮಾಡಿದ ಶ್ರಮವ ಪರಿಹರಿಸಿ ॥
ಚತುರ ಕೋಸಲ ದೇಶದಧಿಪಗೆ । ಹಿತದೆ ಕೇಳಿದನಾಗ "ಕುಶಲವೆ ।
ಕ್ಷಿತಿಪನೇ ನಿನ್ನೆಲ್ಲ ರಾಜ್ಯಕ್ಕೆಂ"ದು ಮಮತೆಯಲಿ ॥ ೫೮ ॥
ಚರಮ ವೇದ-ನಿಧಾನನೆನಿಸಿದ ! ಗುರು ವಸಿಷ್ಠನ ಮಾತುಗಳನವ- ।
ಧರಿಸಿ ಧರಣೀತಲದ ಮೇಲಿನ ಪುರಗಳನು ಗೆಲ್ದ ॥
ಹರನ ಸಖನಂತರ್ಥಪತಿಯಾ- । ಗಿರುವ ಕೋಸಲ ದೇಶದೊಡೆಯನು ।
ಸರಸ ವಚನಗಳಿಂದಲೀಪರಿ ನುಡಿದನುತ್ತರವ ॥ ೫೯ ॥
ಗುರುವೆ ನಿನ್ನಾಶ್ರಯವು ನನಗಿರು- । ತಿರಲು ದೈವೀ-ಮಾನುಷಾಪ ।
ದರಗಳನು ಪರಿಹರಿಸುವವನೀಂ ಶಿರದ ಮೇಲಿರಲು ॥

ಅರಸರೇಳಂಗಗಳು ನನ್ನಲಿ । ಸ್ಥಿರವಗೊಂಡಿರುವಲ್ಲಿ ಸಂಶಯ- ।
ವಿರುವದೇ ದುರಿತಾರಿ ಕರುಣಾ-ಶರಧಿ-ಚಂದ್ರಮನೇ ? ॥ ೬೦ ॥
ವರದನೇ ನೀಂ ರಚಿಸಿದಂತಹ । ಸರಸ ಮಂತ್ರಗಳೆನ್ನರಿಪುಗಳ
ಶಿರಗಳನ್ನವರನ್ನು ನೋಡದೆ ಕಡಿದು ಚಲ್ಲುವವು ॥
ಅರಿಗಳನ್ನು ಪರೋಕ್ಷದಲ್ಲಿಯೆ । ತರಿದು ಬಿಡುವಂಥೆನ್ನ ಶರಗಳ-
ನಿರದೆಯುಪಹಾಸವನು ಮಾಡುತ್ತಿರುವವವು ಬಿಡದೆ ॥ ೬೧ ॥

ಮುನಿಯೆ ಪಾವಕನಲ್ಲಿ ಯಾಹುತಿ । ದಿನದಿನದೆ ವಿಧಿಯಂತೆ ಯರ್ಪಿಸಿ
ಯೊಣಗಿ ಪೋಗುತ್ತಿರುವ ಸಸ್ಯಂಗಳಿಗೆ ಕಾಲದಲಿ ॥
ಘನದ ಸಾರವ ಕರೆದು ಪ್ರಜೆಗಳ । ಮನಸಿಗಾನಂದವನು ಕೊಡುತಿಹೆ
ಯೆನಿತು ಬಣ್ಣಿಪೆ ನಿನ್ನ ಘನತೆಯ ನಾನು ಪಾಮರನು ? ॥ ೬೨ ॥

ನಿನ್ನ ತಪಸಾಮರ್ಥ್ಯದಿಂದಲೆ । ನನ್ನ ಪ್ರಜೆಗಳು ಸ್ವಾಸ್ಥ್ಯ-ಸುಖ-ಸಂ-
ಪನ್ನರಾಗಿರುತಿಹರು ಶತಸಮದವಧಿಗಳವರೆಗೆ ॥
ಬನ್ನವಿಲ್ಲದೆ ಬಾಳುವರು ಮೇ- । ಣಿನ್ನು ಕನ್ಯಾ-ಪುತ್ರಗಳ ಮುಖ-
ವನ್ನು ನೋಡುತ ಧನ್ಯತಮರಾಗಿಹರು ಜಗದೊಳಗೆ ॥ ೬೩ ॥

ಇನಿತು ಪರಿ ನೀಸಬ್ಜ-ಯೋನಿಯ । ತನಯನೇ ನನ್ನನ್ನು ಪ್ರೇಮದೆ
ಯನಿಶದಲಿ ನಿಜ ತನುಜನಂದದೆ ಪಾಲಿಸುತ್ತಿರಲು ॥
ಎನಗೆ ಧರಣೀ-ತಲದ ಮೇಲಿನ । ಗಣನೆಯಿಲ್ಲದ ಸಕಲ ವಿಭವವು
ಮನುಜರಲಿ ಲಭಿಸಿರುವದಿದರಲ್ಲೇನು ಸಂದೆಗವು? ॥ ೬೪ ॥

ಋಷಿಯೆ ನಿನ್ನೀಸ್ನುಷೆಯ ಜಠರದೆ । ಶಿಶುವು ಪುಟ್ಟದರಿಂದ ನಾಂ ಬಲು
ವ್ಯಸನದಲಿ ಕಳೆಯುತ್ತಲಿರುವೆನು ರಾತ್ರಿ-ದಿನಗಳನು ॥
ವಸುಧೆ ನಾನಾರತ್ನಗಳನುರೆ । ಪ್ರಸವ ಹೊಂದುವಳಾದರೂ ಮಾ-
ನಸದ ಸಂತೋಷಕ್ಕೆ ಕಾರಣಳಾಗದಿರುತಿಹಳು ॥ ೬೫ ॥

ಭಾನು ವಂಶಕೆ ಕಡೆಯ ಪುರುಷನು । ನಾನೆ ಯಾಗುತ್ತಿರುವೆನೆಂಬನು-
ಮಾನದಿಂ ಸ್ವರ್ಗಸ್ಥ ಪಿತರರು ಶ್ರಾದ್ಧ-ಕಾಲದಲಿ ॥
ಮ್ಲಾನಮುಖದವರಾಗಿ ಹರ್ಷದೆ । ಬೋನಗುಳಿಗೆಗಳನ್ನು ತಿನ್ನದೆ
ಧ್ಯಾನತತ್ಪರರಂತೆ ಚಿಂತಾಮಗ್ನರಾಗಿಹರು ॥ ೬೬ ॥
ಹೊತ್ತುಹೊತ್ತಿಗೆ ನಾನು ಪಿತೃಗಳಿ- । ಗಿತ್ತ ತರ್ಪಣ ಕಾಲದಲ್ಲಿಯು
ಮತ್ತೆ ಕಾಲಶ್ರಾದ್ಧದಲ್ಲಿಯ ತಿಲ-ಜಲಾಂಜಲಿಯ ॥
ಚಿತ್ತದಲಿ ಮರುಮರುಗಿ ಬಿಸು ಸು- । ಯ್ಯುತ್ತ ಪಿತೃಗಳು ಪರಮ ಕಷ್ಟದೆ
ಉತ್ತು ಕುಡಿಯುವ ತೆರದಿ ತೋರುವದೆನಗೆ ಮುನಿವರನೇ ॥ ೬೭ ॥

ಯಾಗದಿಂ ನಿರ್ಜರರ ಋಣವನು । ನೀಗಿದೆನು ಶುದ್ಧಾತ್ಮನಾಗಿಹೆ-
ನೀಗ ಸಂತತಿ ಲೋಪದಿಂ ಪೂರ್ವಜರ ಸಾಲದಲಿ ॥
ಹಾಗೆ ಯುಳಿದೆನು ದೀಪ್ತಿತಮಗಳ । ಯೋಗ "ಲೋಕಾಲೋಕದಲಿ" ಸಂ-
ಯೋಗವಾದಂತೆನ್ನಗತಿ ಯಾಗಿಹುದು ಗುರುವರನೇ ॥ ೬೮ ॥

ದಾನ ಯಜ್ಞಾದಿಗಳ ಮೂಲಕ । ಮಾನವನು ಗಳಿಸಿರ್ದ ಪುಣ್ಯದ
ಮಾನದಿಂದವಗಾಗುವದು ಪರಲೋಕದಲಿ ಸುಖವು ॥
ಮೌನಿಯೇ ಸತ್ಪುತ್ರನೋರ್ವನು । ತಾನೆ ಯಿಹಪರದಲ್ಲಿ ಸುಖವನು
ಶಾನೆ ಕೊಡುವನು ಜನನಿ-ಜನಕರಿಗೆಂದು ತಿಳಿದಪೆನು ॥ ೬೯ ॥

ಮುನಿಯೆ ನೀಂ ಮನೆಯಲ್ಲಿ ಹಚ್ಚಿದ । ವನವ ದಿನದಿನಕೆರೆದು ಬೆಳೆಸಿದ
ಪನಸ ಮುಂತಾದಖಿಲ ತರುಗಳು ಗೊಡ್ಡು ಬೀಳಲ್ಕೆ ॥
ಮನದೆ ವ್ಯಸನವ ತಾಳುವಂದದೆ । ತನುಜ ಸಮನಾದೆನಗೆ ತನಯನು
ಜನಿಸದಿರೆ ನೀನೆಂತು ನನ್ನನುಪೇಕ್ಷೆ ಮಾಡಿರುವೆ ? ॥ ೭೦ ॥

ಆನೆಯನು ಸಂಕೋಲೆಯಿಂದಾ- । ಲಾನಕತಿ ದೃಢವಾಗಿ ಬಂಧಿಸಿ
ಸ್ನಾನವನು ಬಿಡಿಸಿರ್ದುದಾದರೆ ದುಃಖ ಪಡುವಂತೆ ॥
ನಾನು ಪಿತೃಗಳ ಸಾಲವಿರೆ ನಿ- । ರ್ವಾಣಕೈದುವದೆಂತದೆಂದೀ
ಮಾನ ಮೀರಿದ ವ್ಯಸನಕೊಳಗಾಗಿರುವೆ ಮುನಿವರನೇ ॥ ೭೧ ॥

ನಳಿನ-ಮಿತ್ರನ ಕುಲದೆ ಪುಟ್ಟಿ- । ರ್ದಿಳೆಯ ಪಾಲರಿಗೆಲ್ಲ ನೀನೇ
ಬಲವು ವಿಶ್ವಾಸಕ್ಕೆ ಸ್ಥಳ ನಿನ್ನುಳಿದು ಮತ್ತಾರು ? ॥
ನಳಿನ ಸಂಭವ ಜಾತನೇಗಡ । ತೊಳೆದು ನನ್ನಯ ಪೂರ್ವಜರ ಋಣ-
ಮಲವ ಸಲುಹೆಂದಾಗ ರಾಜನು ಪಾದಗಳಿಗೆರಗೆ; ॥ ೭೨ ॥

ಮೀನಗಳು ಮಲಗಿರ್ದ ಸರಸಿನ । ತಾಣದಲ್ಲಿಯ ಮಡುವಿನಂದದೆ
ಯೇನು ಸ್ಪಂದಗಳಿಲ್ಲದಲೆ ಕ್ಷಣಮಾತ್ರ ಮುನಿವರನು ॥
ಸ್ಥಾನದಲ್ಲಿಯೆ ಮುಚ್ಚಿ ಕಣ್ಗಳ । ಧ್ಯಾನದಲಿ ಮುಳುಗಿದನು ಕಿಂಚಿತ್
ಭಾನವಿಲ್ಲದ ಹಾಗೆ ಕುಳಿತನು ಮೌನವನು ತಳೆದು ॥ ೭೩ ॥

ಮುನಿಯು ಚೆನ್ನಾಗರಿತು ತನ್ನಯ । ಮನಸಿನಲ್ಲೀ ಧರಣಿ-ಯಾಣ್ಮನ
ತನಯ-ಜನಿ-ಸಂರೋಧ ಕಾರಣವನ್ನು ತತ್‌ಕ್ಷಣಕೆ ॥
ವಿನಯ-ಗುಣ-ಸಂಪನ್ನನಾದೀ- । ಜನಪನಿಗೆ ಬಹು ಕರುಣೆಯಿಂದಲೆ
ಮುನನ ಶೀಲನು ತೆರೆದು ಕಣ್ಗಳ ನಿಂತು ಪೇಳಿದನು ॥ ೭೪ ॥

ಸಂತೆ ನೀನಮರೇಂದ್ರನನು ಬಹು ಸಂತವಿಸಿ ಶುಶ್ರೂಷೆಯಿಂ ಪುರ-
ಪಂಥಿಯಾಗಾಕಾಶ ಮಾರ್ಗದೆ ತಿರುಗಿ ಬರುತಿರಲು ॥

ಅಂಥಕಾಲಕೆ ಸುರರ-ದ್ರುಮದ- । ತ್ಯಂತ ಶೀತಚ್ಛಾಯೆಯಲಿ ವಿ-
ಶ್ರಾಂತಿಯನು ಕೊಳ್ಳುತ್ತ ಸುರಭಿಯು ಕುಳಿತುಕೊಂಡಿರಲು, ॥ ೭೫ ॥
ಅರಸಿ ಋತುಮತಿಯಾಗಿ ಯೆರಕೊಂ- । ಡಿರುವದನು ನೀಂ ಸ್ಮರಿಸಿ ಧರ್ಮಾ- ।
ಚರಣದಲಿ ವ್ಯತ್ಯಾಸವಾಗುವದೆಂಬ ಭೀತಿಯಲಿ ॥
ತ್ವರದೆ ಚರಿಸಿದೆ, ಮಾರ್ಗದಲ್ಲೀ- । ಸುರಭಿಕುಳಿತದ್ದನ್ನು ರಾಜನೆ ।
ಮರೆತೆಯಾಕೆಯ ಪೂಜೆಯನು ಮಾಡುವದು ಭಕುತಿಯಲಿ ॥ ೭೬ ॥

ನರರ ಕೋರಿಕೆಗಳನು ಸಲ್ಲಿಪ । ಸುರಭಿ-ಮಾತೆಯು ನಿನ್ನ ತಪ್ಪಿಗೆ ।
ಪರಮ ಕೋಪಾಟೋಪದಿಂದಲೆ ಪರುಷವಚದಿಂದ ॥
ಧರೆಯಪಾಲನೆ ನಿನಗೆ ತನ್ನಯ । ಕರುವಿನಾರಾಧನೆಯ ಮಾಡದೆ ।
ವರಕುಮಾರನು ಪುಟ್ಟದಿರಲೆಂದಾಗ ಶಪಿಸಿದಳು ॥ ೭೭ ॥

ಸುರಭಿಶಾಪವನಿತ್ತಕಾಲಕೆ । ಸುರರ ನದಿಯಲಿ ದಿಗ್ಗಜಂಗಳು ।
ಸಲಿಲ-ಕೇಲಿಯನಾಡತೊಡಗಿದರಿಂದ ಪುಟ್ಟಿರ್ದ ॥
ಪರಮ ಕೋಲಾಹಲದ ಮೂಲಕ । ಸುರಭಿ-ಶಾಪದ ವಾರ್ತೆಯಾದೊಡೆ ।
ನರಪನೇ ತವಶ್ರುತಿಗೆ ಗೋಚರವಾಗಲಿಲ್ಲ ಕಣಾ ॥ ೭೮ ॥

ಮಾನವೇಂದ್ರನೆ, ನೀನು ಸುರಭಿಯ । ಮಾನಭಂಗವಗೈದೆ ಯದರಿಂ ।
ನೀನು ಸಂತತಿಯಿಲ್ಲದಲೆಯುಳಿದಿರುವೆ ಜಗದೊಳಗೆ ॥
ಮಾನಿತನೆ ಪೂಜಾರ್ಹರನು ಬಹು । ಮಾನದಿಂದರ್ಚಿಸದೆ ಪೋದರೆ ।
ಹಾನಿಯಾಗುವದೆಂದಿಗೂ ತಪ್ಪುವದೆ ಜಗದೊಳಗೆ? ॥ ೭೯ ॥

ನಾಗಲೋಕದಲೀಗ ನಡೆದಿಹ । ಯಾಗಕಾರ್ಯಕ್ಕಾಗಿ ಸುರಭಿಯು ।
ಸಾಗಿ ಪೋಗಿಹಳಲ್ಲಿ ಸದ್ಯಕೆ ವಾಸಮಾಡಿಹಳು ॥
ಭೋಗಿಗಳು ಪಾತಾಳಲೋಕದ । ಬಾಗಿಲವ ಕಾಯ್ದಿರುವವಲ್ಲಿಗೆ ।
ಯೋಗಿಯಾದರು ಗಮಿಸಲಾರನು ಪರರ ಪಾಡೇನು? ॥ ೮೦ ॥

ಸಲಿಲದಲಿ ಸ್ನಾನವನು ತೀರಿಸಿ । ಸುರಭಿ-ತನುಜೆಯನವಳತಾಣದೆ ।
ನರಪನೇ ಸರಿಯಾಗಿ ಭಾವಿಸಿ ಭಾವೆಯಿಂ ಕೂಡಿ ॥
ಚರಿಸೆಯಾರಾಧನೆಯನಾಕೆಯು । ಕರುಣೆಯಿಂ ಸಂತುಷ್ಟಳಾದರೆ ।
ದುರಿತವನು ದೂರೈಸಿ ಬಿಡುವಳು ವರಗಳನ್ನಿತ್ತು ॥ ೮೧ ॥

ಇನಿತರೊಳು ಮುನಿವರನ ಮುಖಸಾ- । ಧನವೆಯಾಗಿರ್ದಂಥ ಸುರಭಿಯು ।
ತನುಜೆಯಾಶ್ರಮದಲ್ಲಿ "ಅಂಬಾ"ರವದೆ ನರ್ತಿಸುತೆ ॥
ವನದೆ ಪುಚ್ಛವನೆಗಹಿ ಮೇಲಕೆ । ಜನರಿಗತ್ಯಾನಂದವೀಯುತೆ ।
ಮುನಿಯ ಹತ್ತಿರಬಂದು ನಿಂತಳು ಪರಮ ಪಾವನೆಯು ॥ ೮೨ ॥

ಎಳೆಯ ಪಲ್ಲವದಂತೆ ಶೋಭಿಪ । ಬಿಳಿಯ ಕೆಂಪಾದಂಗ-ವರ್ಣದೆ ।
ಕಳೆಯ ತಾಳಿದ ಸುರಭಿ-ಮಾತೆಯ ಮಗಳ ಘಣೆಯಲ್ಲಿ ॥
ಪೊಳೆತ ಬೆಳ್ಪಾದಂಥ ರೋಮಾ- । ವಳಿಯು ಸಂಧ್ಯಾಕಾಲದಲ್ಲಿಯು ।
ಪೊಳೆವ ಬಿದಗಿಯು ಚಂದ್ರನಂತೆಯೆ ಕಣ್ಗೆ ತೋರಿದುದು ॥ ೮೩ ॥
ನರರು ಯಾಗದ ಪರಿಸಮಾಪ್ತಿಗೆ । ಚರಿಸುವಂಥವಭೃಥದ ನೀರಿನ ।
ತೆರದೆ ಪಾವನವಾಗಿ ಮೆರೆಯುವ ಕ್ಷೀರಧಾರೆಯನು ॥
ಸುರಭಿನಂದಿನಿ ಕರುವನೀಕ್ಷಿಸೆ । ತೊರೆದ ಪೇರ್ಗೆಚ್ಚಲದಿನಾಗಲೆ ।
ಸುರಿಸಿದಳು ಕಾರ್ಮೋಡಗಳು ಭೋರ್ಮಳೆಯ ಕರೆವಂತೆ ॥ ೮೪ ॥
ಹರಿಯು ಚರಣದೆ ಹೊರಟು ಧರೆಯಲಿ । ಚರಿಸಿ ನರರಘವನ್ನು ದೂರೀ- ।
ಕರಿಸುವಂತಹ ಸುರತರಂಗಿಣಿಯಂತೆ ನಂದಿನಿಯ ॥
ಖುರದೆ ಮೇಲಕೆ ಹಾರಿ ಧೂಲಿಯು । ಧರಣಿಪತಿ ಗಾತ್ರಕ್ಕೆ ಸೋಂಕಲು ।
ಪರಮ ಪಾವನನಾಗಿಯಾತನು ಮನುಜರಲಿ ಮೆರೆದ ॥ ೮೫ ॥
ಗುರು ವಸಿಷ್ಠನು ಸುರಭಿಜಾತೆಯ । ದರುಶನದೆ ಶುಭಶಕುನವನ್ನರೆ ।
ಯರಿತು ಮನದಲಿ ಯಾಜ್ಯನಾದೀ ರವಿಕುಲೋತ್ತಮನು ॥
ವರಿಸಲಿಚ್ಛಿಪ ವರವು ಸಿದ್ಧಿಸ- । ದಿರದು ತಾನೆಂದವನ ಸಂಗಡ ।
ಹರುಷದಿಂ ಮಗುಳಿಂತು ನುಡಿದನು ಸರಸವಾಣಿಯಲಿ ॥ ೮೬ ॥
ಸ್ಮರಿಸಿ ನುಡಿಯೆತ್ತುವದರಲ್ಲಿಯೆ । ಸುರಭಿ-ನಂದಿನಿ ಕಣ್ಗೆತಾಂಗೋ ।
ಚರಿಸಿದಳು ಸರಿಯಾಗಿ ಕರುಣಾಶರಧಿ ಕಲ್ಯಾಣಿ ॥
ಧರಣಿ ಪಾಲನೆ ನಿನ್ನ ಕಾರ್ಯವು । ತ್ವರದೆ ಸಿದ್ಧಿಸದಿರದು ಚಿಂತೆಯ ।
ಭರದೆ ಬಾಗುವದೇಕೆ ಯೆಂದಾಮುನಿಯು ಪೇಳಿದನು ॥ ೮೭ ॥
ವನದ ಫಲ-ನೀವಾರಗಳು ಜೀ- । ವನದ ಸಾಧನವೆಂದು ಕಲ್ಪಿಸಿ ।
ಕ್ಷಣಿಕ ದೇಹದ ಕಷ್ಟಕಂಜದೆ ಪರಮ ಭಕುತಿಯಲಿ ॥
ವನಜನಯನನೆ ಸುರಭಿತನುಜೆಯ । ಮನವು ಮೆಚ್ಚುವ ಹಾಗೆ ಪ್ರತಿದಿನ- ।
ವನಿಶದಲಿಯೆಡೆಬಿಡದೆ ಸೇವಿಪುದೆಂದು ಮುನಿ ನುಡಿದ ॥ ೮೮ ॥
ಸುರಭಿ ತನುಜೆಯು ಹೊರಡಲಾಗಲೆ । ಹೊರಟು ಹಿಂಬಾಲಿಪುದು ಮೇಣ್ನೀ- ।
ನಿರದೆ ಯಾಕೆಯು ಕುಳಿತುಕೊಂಡರೆ ಕುಳಿತುಕೊಳ್ಳುವದು ॥
ವರದೆ ನಿಂತರೆ ನಿಲ್ಲುವದು ಗಡ । ಚರಿಸಿದರೆ ಯನುಸರಿಸಿ ಪೋಪುದು ।
ಸರಸ ಜಲವನು ಕುಡಿದುದಾದರೆ ಪಾನ ಮಾಡುವದು ॥ ೮೯ ॥
ಅರಸಿ ಗಂಧಾಕ್ಷತೆಗಳಿಂದೀ- । ಸುರಭಿ ತನುಜೆಯ ನರ್ಚಿಸುತ್ತಾ- ।
ದರದೆ ಕಳುಹುತ್ತವಳ ಪಿಂತೆಯೆ ವನದವರೆಗೈದಿ ॥

ತಿರುಗಿ ಸಂಧ್ಯಾಕಾಲಕಾಳೆಯು। ಬರುವ ಸಮಯಕ್ಕೆದುರುಗೊಂಡುರೆ।
ಕರೆದು ತರಬೇಕೆಂದು ನೃಪನಿಗೆ ಮುನಿತು ಪೇಳಿದನು ॥ ೯೦ ॥
ಸರಸ ಚರಿತಸೆ " ನಂದಿನಿ " ಯು ಪರಿ.। ಚರಿಂಯೆಯನು ಹಗಲಿರುಳು ತಪ್ಪದೆ।
ವರವ ಪಡೆಯುವವರೆಗೆ ಮಾಡುವದೆಂದು ಮುನಿಯುಸುರಿ ॥
ಪರಸಿದನು ನಿರ್ವಿಘ್ನವಾಗಿಂಯೆ। ಜರುಗಿ ಪೋಗಲಿ ನಿನ್ನ ವ್ರತವಿದು।
ಧರೆಯ ಪಾಲನೆ ಶೀಘ್ರವೇ ಸಂತಾನ ಪಡೆಯೆಂದು ॥ ೯೧ ॥
ದೇಶಕಾಲವನರಿತ ಕೋಸಲ। ದೇಶದೊಡೆಯನು ಕೇಳಿ ತನ್ನಯ।
ದೇಶಿಕನ ಸುಶ್ರಾವ್ಯವಾದು ಪದೇಶವನು; ನುಡಿದ ॥
" ವಾಸಿಯಾಯಿತು ಗುರುವೆ ನನ್ನಭಿ। ಲಾಷೆ ಪೂರೈಸುವದು, ನನ್ನೀ-।
ಯೋಷೆಯಿಂದೊಡಗೂಡಿ-ಮಾಳ್ಪೆನು ಸೇವೆಯನ್ನೆಂದು ॥ ೯೨ ॥
ನಳಿನ-ಮಿತ್ರನ ಕುಲದೆ ಜನಿಸಿ। ದ್ಗಿಳೆಯ ಪಾಲನ ಕೂಡ ನಲವಿಂ।
ನಳಿನ-ಸಂಭವ-ಜಾತನೀವರೆಗಾಡಿ ಮಾತುಗಳ ॥
ತಿಳಿದು ರಾತ್ರಿಯು ಬೆಳೆಯಿತೆಂದುರೆ। ಚಲುವ ನೃಪನಿಗೆ ಮಲಗಿಕೊಳ್ಳಲು।
ತಿಳುಹಿ ಯಪ್ಪಣೆ ಕೊಟ್ಟು ತಾನಲ್ಲಿಂದ ತೆರಳಿದನು ॥ ೯೩ ॥
ವ್ರತದ ವಿಧಿಯನ್ನರಿತ ಮುನಿ-ಕುಲ। ಪತಿಯು ತನ್ನಯ ಯೋಗಬಲದಿಂ।
ವಿತರಿಸಲು ಸುಖಭೋಗಗಳನುರೆಯೀಶನಾಗಿರಲೂ ॥
ಸತಿಗೆ ಮೇಣ್ಭೂಪತಿಗೆ ಯಿತ್ತನು। ಹಿತತೃಣಾಸನಗಳನು ಮಲಗಲು।
ವ್ರತದ ನಿಯಮಗಳನ್ನು ಸಂಪಾದಿಸುವ ಸಲುವಾಗಿ ॥ ೯೪ ॥
ಗುರುವಿನುಟಜದ ನಿಕಟದಲ್ಲಿಯ। ಸರಸ ಕುಟಿಯಲಿ ತಾನು ಮೇಣ್ತಾ-।
ನ್ನರಸಿ ಪುಲ್ಲಿನ ಹಾಸಿಕೆಯ ಮೇಲ್ಮಲಗಿ ನಿಶೆ ಕಳೆದು ॥
ಮರಳಿ ಪ್ರಾತಃಕಾಲದಲಿ ಗುರು-। ವರನ ಶಿಷ್ಯರ ವೇದಪಾಠದ।
ಸ್ವರವ ಕೇಳಿದ ಮೇಲೆ ಜಾಗರವನ್ನು ಹೊಂದಿದರು ॥ ೯೫ ॥

೨ ನೆಯ ಸರ್ಗ.

ಮರು ಹಗಲಿನಲಿ ಯೆದ್ದು ರಾಜನು। ಕರುವಿಗಾವಿನ ಮೊಲೆಯನುಣ್ಣಿಸಿ।
ತಿರುಗಿಯಾಕರುವನ್ನು ಗೂಟಕೆ ಕಟ್ಟುವಷ್ಟರಲಿ ॥
ಅರಸಿ " ನಂದಿನಿ " ಯನ್ನು ಪೂಜಿಸೆ। ನರಪ ಗೋವನು ವನದೆ ಮೇಯಿಸಿ।
ತರುವದರ ಸಲುವಾಗಿ ದಾಮದ ಕುಣಿಕೆಯುರ್ಚಿದನು ॥ ೧ ॥
ಶ್ರುತಿಯ ಗೂಢಾರ್ಥವನು ಲಕ್ಷಿಸಿ। ಸ್ಮೃತಿಯು ತಾನನುಸರಿಪ ಪೋಲ್ಭೂ-।
ಪತಿಯ ಧರ್ಮದ ಪತ್ನಿಯಾದಾ ಸತಿ ಶಿರೋಮಣಿಯು ॥

ಗತಿಸಿ ವನಭಾಗಕ್ಕೆ ಸುರಭಿಯು- । ಸುತೆಯು ಖುರ-ವಿನ್ಯಾಸದಲ್ಲಿಂಪ್ಪು ।
ಯತಿಶಯಾದರದಿಂದ ಹಿಂಬಾಲಿಸಿದಳೆಡೆಬಿಡದೆ ॥ ೨ ॥
ಅರಸಿಯನು ಸಾದರದೆ ತನ್ನಯ । ಗುರುವಿನಾಶ್ರಮದೆಡೆಗೆ ಕಳುಹಿಸಿ ।
ಎರಡು ಮೇಣ್ಣೀರಬ್ಧಿಗಳೆ ಗುರುಕುಚಗಳಾಗಿರುವ ॥
ಧರೆಯೆ ವರ "ನಂದಿನಿ" ಯ ರೂಪವ । ಧರಿಸಿ ಬಂದಿಹಳೆಂದು ಭಾವಿಸಿ ।
ಧರೆಯ ಪತಿಯುವಳನ್ನು ರಕ್ಷಿಸಲಾಗ ತೊಡಗಿದನು ॥ ೩ ॥
ನಳಿನ ಮಿತ್ರನ ಕುಲದೆ ಪುಟ್ಟ- ರ್ದಿಳೆಯ ಪಾಲರು ತಾವೆ ತಮ್ಮಯ ।
ಬಲದೆ ರಕ್ಷಿತರಾಗುತಿಹರದರಿಂದ ಭೂಪತಿಯು ॥
ಉಳಿದ ತನ್ನನುಯಾಯಿಗಳನುರೆ । ಯುಳಿಸಿ ಯಾಶ್ರಮದಲ್ಲಿ ತಾನಾ- ।
ಕಳನು ಕಾಯುತ ವಿಪಿನದಲಿ ಪೊರಮಟ್ಟು ಸಾಗಿದನು ॥ ೪ ॥
ವನದೆ ಯೆಳೆಸವಿ ಪುಲ್ಲ ತಿನ್ನಿಸಿ । ವನದ ಪೆರ್ನೊಣಗಳನು ಹಾರಿಸಿ ।
ಸ್ವನಖದಿಂ ಸುಖವಾಗುವಂತೆಯೆ ದೇಹವನು ತುರಿಸಿ ॥
ಅನಿಶದಲಿ " ನಂದಿನಿ " ಯ ಪಿಂತೆಯೆ । ಮನಸಿನಿಂದವಳಿಚ್ಛೆಯಂತೆಯೆ ।
ಜನಪನಡ್ಡಾಡುತ್ತೆಯಾರಾಧನೆಯ ಮಾಡುವನು ॥ ೫ ॥
ಚಲಿಸೆ ಯಾಕೆಯು ಚಲಿಸುವನು ಮೇ- । ಣ್ಕುಳಿತು ಕೊಂಡರೆ ಕುಳಿತುಕೊಳ್ಳುವ ।
ನಲಿದು ನೀರನು ಪಾನಮಾಡಲು ತಾನು ಕುಡಿಯುವನು ॥
ಗಳಿಗೆ ಬಿಟ್ಟವಳನ್ನು ಪೋಗದೆ । ಯಿಳೆಯ ಪಾಲನು ನಂದಿನಿಯ ನಿಜ ।
ನೆಳಲಿನಂತೆಡೆ ಬಿಡದೆ ಯಾಕೆಯ ಪಿಂತೆ ಸಾಗುವನು ॥ ೬ ॥
ಉಳಿದೊಡಂ ವೈಭವಗಳನು ಮೇ- । ಣಿಳೆಯ ಪಾಲರ ಚಿಹ್ನಗಳ ಥಳ- ।
ಥಳಿಪ ನಿಜ ತೇಜಸ್ಸಿನಿಂದಲೆ ರಾಜನಿವನೆಂದು ॥
ತಿಳಿಯುವದು ಸಂದೇಹವಿಲ್ಲದೆ- । ಯೊಳಗೆ ತೀವಿದ ಮದದ ದಂತಾ- ।
ವಲದ ತೆರದಲ್ಲಿವನು ಕಾಂತಿಯನಾಂತು ಶೋಭಿಪನು ॥ ೭ ॥
ಜನಪ ತನ್ನಯ ಕೇಶಗಳನುರೆ । ವನದ ಬಳ್ಳಿಗಳೆಳೆಗಳಿಂದಲೆ ।
ಘನತೆಯಿಂ ದೃಢವಾಗಿ ಬಂಧನ ಮಾಡಿ ಕೈಯೊಳಗೆ ॥
ಧನುವಿನಲಿ ಕೋಲ್ಪೂಡಿ ಪಿಡಿದಾ- । ಮುನಿಯ ಗೋವನು ಕಾಯ್ವಮಿಷದಿಂ ।
ವನದ ಮೃಗಗಳನರಸಿ ಶಿಕ್ಷಿಪ ತೆರದಿ ಚರಿಸಿದನು ॥ ೮ ॥
ತೊರೆದು ಸೇವಕರನ್ನು ಚರಿಸುವ । ವರುಣ ದೇವನ ತೆರದೆ ಬಲದಲಿ ।
ಮೆರೆವ ಗಟ್ಟಿಗನಾದ ನರಪನು ಬರುವದನು ಕಂಡು ॥
ನೆರೆಯಲಿರುತಿರುವೆಲ್ಲ ತರುಗಳು । ಹರುಷದಿಂ ಕೊಬ್ಬಿರ್ದ ಖಗಗಳ ।
ಸುರವದಿಂದವನನ್ನು ತುತಿಸುವ ತೆರದಿ ತೋರಿದವು ॥ ೯ ॥

ಅನಿಲ-ಸಖನಂತೆಸೆದು ತೋರುವ । ಜನಪ ತಮ್ಮ ಸಮೀಪದಲಿ ಬರೆ ।
ಯನಿಲನಿಂ ಪ್ರಸ್ಪಂದ ಹೊಂದಿರ್ದೆಳೆಯ ವಳ್ಳಿಗಳು ॥
ವಿನಯದಿಂದವನಿಪನ ಸುಂದರ । ತನುವಿನಲಿ ವರಸುಮದ ಸ್ತೋಮವ ।
ವನಿತೆಯರು ಬತ್ತರಳ- ಮಳೆಗರೆದಂತೆ ಸುರವಿದವು. ॥ ೧೦ ॥

ಪಿರಿಯ ಕಾರ್ಮುಕವನ್ನು ಕರದಲಿ । ಧರಿಸಿದೊಡೆ ಕರುಣಾಳುವೆಂದುರೆ ।
ಧರೆಯ ಪಾಲನ ಚರ್ಯೆಯಿಂದಲೆ ಯರಿತು ನಿರ್ಭಯದಿ ॥
ಹರಿಣಗಳು ವನದಲ್ಲಿ ರಾಜನ । ಪರಮ ಸುಂದರ ರೂಪ ವೀಕ್ಷಿಸಿ ।
ಸರಸ ಪೆರ್ಣ್ಣಯನಗಳ ಸಫಲತೆಯನ್ನು ಹೊಂದಿದವು ॥ ೧೧ ॥

ಅತಿ ಮನೋಹರವಾದ ಕೀಚಕ । ಸು-ತರು-ರಂಧ್ರಂಗಳಲಿ ವಾತೋ- ।
ದ್ಧತಿಗಳಿಂದುಂಟಾದ ಮಂಜುಲರವದ ಜೋಡಿನಲಿ ॥
ಲತೆಯ ಮಂಟಪಗಳಲಿ ವನದೇ- । ವತೆಗಳೆಲ್ಲರು ಕೂಡಿ ರಾಜನ ।
ಪ್ರಥಿತ ಯಶವನು ಪಾಡುತಿಹರೇನೆಂದು ತೋರಿದುದು ॥ ೧೨ ॥

ಹರಿದು ಗಿರಿಕಂಧರದೆ ಬರುತಿಹ । ಝರಿಯ ಶೀಕರದಿಂದ ಕೂಡಿದ ।
ಸರಸ ತರುಗಳ ಸುಮದ ಸೌರಭದಿಂದ ತೀವಿರ್ದ ॥
ಮರುತನಾತಪದಿಂದ ಬಳಲಿದ । ಶಿರದ ಮೇಲ್ಸತ್ತಿಗೆಯ ಧರಿಸದ ।
ಪರಮಪಾವನನಾದ ನರಪತಿಯನ್ನು ಸೇವಿಸಿದ ॥ ೧೩ ॥

ಎಂದು ವನದಲಿ ಧರೆಯ ಪಾಲನು । ಬಂದಿನಂದಿನ ದಿವಸದಿಂದಲೆ ।
ನೊಂದಿ ಪೋಯಿತು ವೃಷ್ಟಿಯಿಲ್ಲದೆ ತಾನೆ ದಾವವದು ॥
ಹೊಂದಿದವು ಫಲಪುಷ್ಪಗಳ ತರು । ವೃಂದಗಳು, ಕಿರು ದೊಡ್ಡ ಮೃಗಗಳು ।
ಬಿಂದು ಮಾತ್ರವು ವೈರವಿಲ್ಲದೆ ಸುಖದೆ ಬಾಳಿದವು ॥ ೧೪ ॥

ದಿನದ ಕೊನೆಯಲಿ ದಿನದ ಪತಿ ಮೇಣ್ । ಮುನಿಯ ಸುಂದರವಾದ ಧೇನುವು ।
ಸುನವ ಪಲ್ಲವ-ತಾಮ್ರ ವರ್ಣದ ಶೋಭೆಯಿಂದೆಸೆದು ॥
ಘನತೆಯಿಂ ಸಂಚರಿಸಿ ದಿಕ್ಪಾ- । ವನವ ಮಾಡಿದ ಮೇಲೆ ನಿಲಯಕೆ ।
ಯನಿಬರೂ ವಿಶ್ರಾಂತಿಗೊಳ್ಳುವದಕ್ಕೆ ಸಾಗಿದರು ॥ ೧೫ ॥

ಯಾಗ ಮುಂತಾದಖಿಲ ಕಾರ್ಯದ । ಯೋಗಗಳಿಗಾಧಾರವಾಗಿಹ ।
ಯೋಗಿವರನಾಕಳದ ಪಿಂತನುರಾಗದಿಂ ನೃಪನು ॥
ಸಾಗಿ ಮುನಿಯಾಶ್ರಮಕೆ ಬರುತಿರು- । ವಾಗಲಾತನು ಸಾಧುಜನರಿಗಂ ।
ಪೋಫು ವಿಧಿಯಿಂ ಕೂಡಿದಂತಹ ಶ್ರದ್ಧೆಯಂತೆಸೆದ ॥ ೧೬ ॥

ಕೆರೆಯ ಕರ್ದಮದಿಂದ ಮೇಲಕೆ । ಬರುವ ಕಿರಿಗಳ ಯೂಥಗಳನುರೆ ।
ಸರಸ ಹುಲ್ಲಿನ ಹಾಸಿಕೆಯ ಮೇಲ್ಮಲಗಿಕೊಂಡಿರುವ ॥

ಹರಿಣಗಳ ಸಮುದಾಯುವನು ಮೇ- । ಸ್ನೆರೆವ ಬರ್ಹಿಗಳನ್ನು ವನದಲಿ ।
ನರಪನಾ ಸಮಯಕ್ಕೆ ನೋಡುತೆ ಮುಂದೆ ಚರಿಸಿದನು ॥ ೧೭ ॥
ಪಿರಿಯು ಕೆಚ್ಚಲ ಭಾರವನು ಪೊ- । ತ್ತಿರುವ ಗುರುವಿನ ನಂದಿನಿಯು ಮೆ- ।
ಙ್ಧರೆಯು ಪಾಲನ ಸರಸ ಗುರುತರವಾದ ದೇಹವದು ॥
ತಿರುಗಿ ವನದಿಂದಾಶ್ರಮಕ್ಕೈ- । ತರುವ ಮಾರ್ಗದೆ ನರರ ಕಣ್ಗಳಿ- ।
ಗಿರದೆ ಪರತರವಾದ ಸಂತಸವನ್ನು ಕೊಡುತಿಹವು ॥ ೧೮ ॥
ಗುರು ವಸಿಷ್ಠನ ಸುರಭಿಯುನ್ನನು- । ಸರಿಸಿ ವನದಿಂ ಬರುವ ರಾಜನ ।
ಸರಸ ಮುಖವನು ರೆಪ್ಪೆಯಿಕ್ಕದೆ ವರ " ಸುದಕ್ಷಿಣೆ " ಯು ॥
ಸಿರಶನದೆ ತಾನಿರುವ ಪಾರ್ವನು । ಹರುಷದಿಂ ಪರಮಾನ್ನವನ್ನುರೆ ।
ಸ್ಥಿರದೆ ನೋಡುವ ತೆರದೆ ಸಾಶಯುದಿಂದ ನೋಡಿದಳು ॥ ೧೯ ॥
ಮುಂದೆ ಪುಣ್ಯಾಶ್ರಮದೆ ಬರುವಾ- । ಮಂದಗಾಮಿನಿಯಾದ ರಾಜ್ಞಿಯು ।
ಹಿಂದೆ ನರವರನಿವರ ಮಧ್ಯದಲಿರ್ದ ಮುನಿಪತಿಯು ॥
" ನಂದಿನಿಯು " ಪಗಲಿರುಳುಗಳ ನಡು- । ಸಂಧಿಯೊಳಗಿನ ಸಾಂಧ್ಯಸಮಯದ ।
ಚಂದವಾದತ್ಯಂತ ಸಾಮ್ಯವನಾಂತು ಮಿನುಗಿದಳು ॥ ೨೦ ॥
ಕರದೊಳಕ್ಷತೆ ತಳಿಗೆಯುನ್ನುರೆ । ಧರಿಸಿದಂತಹ ವರ " ಸುದಕ್ಷಿಣೆ "
ಯೆರಗಿ " ನಂದಿನಿಯುನ್ನು ಭಕುತಿಯು ಭರದೆ ಬಲಗೊಂಡು ॥
ಪರಮ ಸಿದ್ಧಿಯ ದ್ವಾರದಂತಿರು- । ತಿರುವ ವಿಸ್ತೃತವಾದ ಶೃಂಗಾಂ- ।
ತರದೆ ಯುರಿಸಿನ ಕುಂಕುಮಂಗಳ ಪೂಸಿ ನಮಿಸಿದಳು ॥ ೨೧ ॥
ಸುರಭಿ ತನುಜೆಯು ತನ್ನ ಕರುವಿನ । ದರುಶನವ ಹಾರೈಸಿದೊಡೆಯುಂ ।
ಸ್ಥಿರದೆ ಯುರಸಿಯು ಪೂಜೆಯುನು ಕೈಕೊಂಡಳದರಿಂದ ॥
ಧರೆಯ ಪಾಲಕ-ದಂಪತಿಗೆ ಬಲು । ಹರುಷವಾಯಿತು ಪರಮ ಮಹಿಮರ ।
ಕರುಣೆ ಮುಂದಿನ ಫಲದ ಚಿಹ್ನವದೆಂದು ತಿಳಿಯುವರು ॥ ೨೨ ॥
ಗುರು ವಸಿಷ್ಠನ ಮತ್ತೆ ಯಾತನ । ಪರಮ ಪಾವನೆಯಾದ ಭಾರ್ಯೆಯ ।
ಚರಣಕಮಲಗಳನ್ನು ವಂದಿಸಿ ಸಾಂಧ್ಯವಿಧಿ ಮುಗಿಸಿ ॥
ಅರಿಗಳನು ನಿರ್ಜಯಿಸಿದಂತಹ । ಧರೆಯ ಪಾಲನು ಮರಳಿಯಾ ಸುರ- ।
ಸುರಭಿ-ನಂದಿನಿ ಕುಳಿತ ತಾಣಕೆ ಬಂದು ಭಜಿಸಿದನು ॥ ೨೩ ॥
ದೀಪ-ಬಲಿಗಳನಿತ್ತು ಪೂಜಿಸಿ- । ದಾಪಯುಸ್ವತಿ ಸುರಭಿಸುತೆಯ ಸ- ।
ಮೀಪದಲ್ಲಿ ಸುದಕ್ಷಿಣೆಯು ಮೇಣವಳ ಪ್ರಿಯತಮನು ॥
ಪಾಪಿ ಆಕೆಯು ಮಲಗೆ ಮಲಗುವ । ರಾ ಪಯುಸ್ವಿನಿ ಯೇಳಲಾಗಲೆ ।
ಸ್ನಾಪವನು ತಿಳಿದೆದ್ದು ತಟ್ಟನೆ ಕುಳಿತು ಕೊಳ್ಳುವರು ॥ ೨೪ ॥

ಚಿಂತಿತಾರ್ಥವನಿತ್ತು ದೀನರ । ಚಿಂತೆಯನು ದೂರೈಸುವಂತಹ ।
ಶಾಂತಿಸಾಗರನಾದ ಭೂಮಿಯ ಕಾಂತನೆಡೆವಿಡದೆ ॥
ಕಾಂತೆಯಿಂದೊಡಗೂಡಿಯೀಪರಿ । ಸಂತತಿಯು ಸಲುವಾಗಿ ವ್ರತವ- ।
ನ್ನಾಂತು ನಿಯಮದೆ ಕಳೆದ ನಿಪ್ಪತ್ತೊಂದು ದಿನಗಳನು ॥ ೨೫ ॥
ಮುನಿಯ ಹೋಮದ ಧೇನು ಮರುದಿನ । ದಿನಪ ಕುಲಮಣಿಯಾದ ಜನಪನ ।
ಮನದ ನಿಶ್ಚಯವನ್ನು ಪರಿಕಿಸಿ ನೋಡಲುಜ್ಜುಗಿಸಿ ॥
ವನದ ಪಾರ್ಶ್ವದೊಳೆಸೆವ ಗಂಗಾ- । ಸುನದಿಯೆಡೆಯಲ್ಲಿರ್ದ ಕೋಮಲ ।
ತೃಣದೆ ಮುಚ್ಚಿದ ಗೌರಿಯಾಣ್ಮನ ಗವಿಯ ಸೇರಿದಳು ॥ ೨೬ ॥
ಸುರಭಿಯಣುಗೆಯು ಹಿಂಸೆಯನು ಕೇ- । ಸರಿಗೆ ತನ್ನಯ ಮನಸಿನಲಿ ಸಹ ।
ತರುವದಳವಲ್ಲೆಂದು ನಿಶ್ಚಯದಿಂದ ನರವರನು ।
ಅರಿತು ನಿರ್ಭಯದಿಂದ ಗಿರಿಕಂ- । ಧರದ ಸುಷಮೆಯನಾತನೀಕ್ಷಿಸು- ।
ತಿರುವ ಸಮಯಕೆ ಹರಿಯು ಪಿಡಿದಿತು ತ್ವರದೆ ಸುರಭಿಯನು ॥ ೨೭ ॥
ಅರರೆ! ದೀನಸ್ವರದೆ ಗುರುವಿನ । ಸುರಭಿಯೊದರಲ್ಕದರ ಪ್ರತಿರವ ।
ಗಿರಿಯ ಗಹ್ವರದಲ್ಲಿ ತುಂಬಿದರಿಂದಲಾನೃಪನ ॥
ಪರಮ ಕೋಮಲವಾದ ಹೃದಯವು । ಕರಗಿ ಹೋಯಿತು ತ್ವರದೆ ಯಾತನ ।
ಕರುಣೆಯಿಂ ತೀವಿರ್ದ ದೃಷ್ಟಿಯದತ್ತ ತಿರುಗಿದುದು. ॥ ೨೮ ॥
ಗಿರಿಯ ಕೆಂಪಾದಂಥ ಸ್ಥಳದ- । ಲ್ಲರುಣವರ್ಣದ ಲೋಧ್ರ ವೃಕ್ಷವು ।
ನರರ ಕಣ್ಗಳಿಗೆಸೆದು ಕಾಣುವ ತೆರದಿಯಾ ನೃಪನು ॥
ಸುರಭಿತನುವಿನ ಮೇಲೆ ತಾಂ ಕೇ । ಸರಿಯು ಕುಳಿತದ್ದನ್ನು ಹಾಗೆಯೆ ।
ಹರಿಯುವಂತಹ ರಕ್ತಧಾರಾ । ಸ್ರೋತವನು ಕಂಡ ॥ ೨೯ ॥
ಅರಿಗಳಸು ನಿರ್ಜಯಿಸಿದಂತಹ । ಶರಣರಲಿ ಪೆರ್ಕರುಣೆಯುಳ್ಳಹ ।
ಹರಿಯವೋಲ್ಗಂಭೀರಗತಿಯುಳ್ಳಂಥ ನರವರನು ॥
ಪರಿಭವವು ತನಗಾಯಿತೆಂದತಿ । ಕೆರಳಿ ಹರಿಯನು ವಧಿಪೆನೆಂದುರೆ ।
ಶರವ ಮುಡಿಯಿಂ ಹಿರಿದು ತೆಗೆಯಲ್ಕಿಚ್ಛಿಸಿದನವನು. ॥ ೩೦ ॥
ಮಾನಧನನವನಿಪನು ಶರಸಂ- । ಧಾನವನು ಮಾಡಲ್ಕೆ ಮೌರ್ವಿಯ ।
ತಾಣದಲಿ ಪೂಡಿದನು ನಿಶಿತಾದೊಂದು ಬಾಣವನು ॥
ಏನು ಸೋಜಿಗವೋ ನೃಪಾಲನ । ಪಾಣಿ ಶಾಖೆಗಳಲ್ಲೆ ಪುಂಖದ ।
ಸ್ಥಾನದಲಿ ನೆಲೆಗೊಂಡು ನಿಂತವು ಚಿತ್ರಲಿಪಿಯಂತೆ ॥ ೩೧ ॥
ಬಿಡದೆ ಮಂತ್ರೌಷಧಿಗಳಿಂದಲೆ । ತಡೆದ ಪೆರ್ಪೆಡೆ ಪಾವಿನಂದದೆ ।
ಪೊಡವಿಯೊಡೆಯನ ಬಾಹುಗಳು ಸಂಸ್ತಂಭ ಹೊಂದಿರಲು ॥

ಎಡೆಯೊಳಿರ್ದಾಗಸವ ಮಾಡಿದ । ಕಡು ಪರಾಕ್ರಮಿಯಾದ ಸಿಂಹನ ।
ಹೊಡೆಯುಲಾರದೆ ಧರಣಿಪನು ನೆರೆಕೋಪಗೊಂಡಿಹನು. ॥ ೩೨ ॥
ತರಣಿಕುಲ ಭೂಷಣನು ತನಗಾ- । ಗಿರುವ ಪರಿಭವವನ್ನು ಸ್ಮರಿಸುತೆ ।
ಪರಮ ವಿಸ್ಮಯದಿಂದ ಮನದಲಿ ಯೋಚಿಸುತ್ತಿರಲು ॥
ನರರು ನುಡಿಯುವ ವಾಣಿಯಿಂ ಕೇ- । ಸರಿಯು ನರಕೇಸರಿಗೆಯೀಪರಿ ।
ಸರಸ ಘನಗಂಭೀರರವದಿಂ ಪೇಳತೊಡಗಿದುದು. ॥ ೩೩ ॥
ಸಾಕು ಸಾಕಿಳೆಯಾಣ್ಮನೇನೀ- । ನೇಕೆ ಪುಸಿ ಸಾಯಸವ ಮಾಡುವೆ ।
ತಾಕುವವೆ ನಿನ್ನಿಂಥ ಬಾಣಗಳೆನ್ನ ತನುವಿನಲಿ? ॥
ಲೋಕದಲಿ ಬಿರುಗಾಳಿ ತರು-ತರು । ಶಾಖೆಗಳ ಕಿತ್ತೊಗೆದರೂ ಗಡ ।
ಸ್ತೋಕವಾದೊಡೆ ಗಿರಿಯ ಶಿಖರವನದುರಿಸುತ್ತಿಹುದೆ? ॥ ೩೪ ॥
ಕುಂಭ-ತುಂದೆಂದೆನ್ನಪೆಸರು ನಿ- । ಕುಂಭನೆಂಬವನೆನ್ನ ಮಿತ್ರನು ।
ಶಂಭುವಿನ ಕಿಂಕರನು, ನನ್ನೀ ಬೆನ್ನ ಮೇಲವನು ॥
ಅಂಬೆಯಿಂದೊಡಗೂಡಿ ಪಾದ- । ಕ್ಕೆಂಬುಗೊಂಡೇರುವನು ನಂದಿಯು; ।
ಕುಂಭಿನೀಪತಿ, ನನ್ನಕಾಯವು ಶುದ್ಧವಾಗಿಹುದು. ॥ ೩೫ ॥
ಮುಂದೆ ಕಾಣುವ ದೇವ ದಾರುವ- । ನಂದದಿಂ ಧೂರ್ಜಟಿಯು ತನ್ನಯ ।
ಕಂದನಂತೆಯೆ ಮನ್ನಿಸಿದನದರಿಂದ ಪ್ರೇಮದಲಿ ॥
ಸ್ಕಂದ ಮಾತೆಯು ಹೇಮಘಟಕುಚ- । ದಿಂದ ಪಯವನ್ನೆರೆದು ಬಲುಶ್ರಮ- ।
ದಿಂದಲೀ ತರುವನ್ನು ತನುಜನ ತೆರದಿ ಬೆಳೆಸಿಹಳು ॥ ೩೬ ॥
ಬಳಿಕ ಕೆಲದಿನದೊಳಗೆ ದಂತಾ- । ವಲವು ಬಂದೀವಿಪಿನದಲಿ ಬಲು ।
ಬಲದೆ ಶಿರವನು ತಿಕ್ಕಿಬಿಟ್ಟೀ ಗಿಡದ ತೊಗಟೆಯನು ॥
ಸುಲಿದ ಸಂಗತಿಯನ್ನು ಶೂಲಿಯ । ಲಲನೆ ಯೀಕ್ಷಿಸಿ ವ್ಯಥಿಸಿದಳು ಸುರ- ।
ದಲದ ಸೇನಾಪತಿಯ ದೇಹಕೆ ಗಾಯವಾದಂತೆ ॥ ೩೭ ॥
ಪೊರೆಯಲೀ ತರುವನ್ನು ಗೌರೀ- । ವರನು ತದ್ದಿನದಿಂದಲೆನ್ನನು ।
ಗಿರಿಯ ಕಂಧರದಲ್ಲಿ ಕೇಸರಿ ರೂಪವನು ಕೊಟ್ಟು ॥
ಇರಿಸಿದನು ನನ್ನುದರ ಪೂರ್ತಿಗೆ । ಚರಿಸಿ ಬರುತಿರುವಂಥ ಪಶುಗಳ- ।
ನಿರದೆ ಭಕ್ಷಿಪುದೆಂದು ವರವನ್ನಿತ್ತು ಕಳುಹಿದನು. ॥ ೩೮ ॥
ಭಸಿತ ಭೂಷಣನಿಂದ ವಿಧಿಸಿದ । ಸುಸಮಯದೆ ಬಂದೊದಗಿದಂಥೀ- ।
ಪಶುವು ನನ್ನಯ ಹಸಿದ ಜಠರದ ತೃಪ್ತಿಸಲುವಾಗಿ ॥
ಶಶಿಯ ಸುಧೆಯುದು ಸೈಂಹಿಕೇಯನ । ತೃಷೆಯ ಶಮಿಸಲ್ಕಾಗುವಂದದೆ ।
ವಸುಧೆಯಾಣ್ಮನೆ ದೈವಯೋಗದಲೆನಗೆ ದೊರೆತಿಹುದು ॥ ೩೯ ॥

ಅರಸನೇ ಕರದಲ್ಲಿ ಕಾರ್ಮುಕ । ಧರಿಸಿದಂತಹ ನೃಪರ ಕೀರ್ತಿಯು ।
ಶರವೆ ಕುಂಠಿತವಾದರೆಂತದು ನಷ್ಟವಾಗುವದು? ॥
ಸರಸ ಗುರು-ಭಕ್ತಿಯನು ತೋರಿದೆ । ತೊರೆದು ತ್ರಪೆಯನ್ನಾದಕಾರಣ ।
ತೆರಳು ಮುನಿಯಾಶ್ರಮಕೆ “ ನಂದಿನಿ ” ಯಾಶೆಯನು ಬಿಟ್ಟು ॥ ೪೦ ॥
ಹರನ ವರ ಮೂಲಕವೆ ತನ್ನಯ । ಶರವು ಕುಂಠಿತವಾಯಿತೆಂದೀ ।
ಪರಿಯು ಕೇಸರಿ-ವಾಣಿಯನ್ನಾಲೈಸಿ ನರವರನು ॥
ಪರಮ ವಿಸ್ಮಯವನ್ನು ಹೊಂದಿದ- । ನಿರದೆ ತನ್ನಯ ಪೂರ್ವದಲ್ಲಿಯ ।
ಪರಿಭವದುತ್ರಪೆಯನ್ನು ಮನದಿಂ ಹೊರಗೆ ಹಾಕಿದನು. ॥ ೪೧ ॥
ಗಿರಿಶನೀಕ್ಷಣದಿಂದ ವಜ್ರಿಯ । ಕರವು ವಜ್ರಾಯುಧವನೊಗೆಯದೆ ।
ಸ್ಥಿರವಗೊಂಡಂತಿಳೆಯ ಪಾಲನ ಶರದ ಹಸ್ತವದು ॥
ಸರಿಯಲಾರದೆಯಿರ್ದುದನು ಭೂ- । ವರನು ಮೊದಲಿಗೆ ಕಂಡುವನಕೇ- ।
ಸರಿಗೆ ವಿಸ್ಮಯಗೊಂಡು ಪ್ರತ್ಯುತ್ತರವನಿತ್ತೆಂದ ॥ ೪೨ ॥
ಪಾಣಿಕಾರ್ಯವು ನಿಂತ ನನ್ನಯ । ವಾಣಿಯನ್ನಾಲೈಸಿ ಸರ್ವ- ।
ಕ್ಷೋಣಿಯಲ್ಲಿಯ ಜನರು ನನ್ನುಪಹಾಸ ಮಾಡುವರು. ॥
ಪ್ರಾಣಿಗಳ ಮಾನಸವ ಬಲ್ಲಹ । ಜ್ಞಾನಿ ನೀನಿರುತಿರುವೆ ಯದರಿಂ- ।
ದಾನು ನನ್ನಂತರದ ಭಾವವ ನಿನಗೆ ಪೇಳುವೆನು. ॥ ೪೩ ॥
ಸ್ಥಿರ ಚರಾತ್ಮಕ ಸಕಲ ವಿಶ್ವದ । ಪರಮಕಾರಣನಾದ ಸರ್ವೇ-
ಶ್ವರನ ಶಾಸನ ಪೂಜ್ಯತಮವಾಗಿರ್ದರೂ ಹರಿಯೇ ॥
ಗುರುವಿನಾಶ್ರಮ-ಧರ್ಮಸಾಧನ- । ವಿರುವ ಸುರಭಿಯ ಮರಣವದು ನಾ ।
ನಿರುವವರೆಗಾಗುವದು ಪರಮಾನ್ಯಾಯವಲ್ಲೇನು? ॥ ೪೪ ॥
ಆದಕಾರಣ ನನ್ನದೇಹದ । ಸ್ವಾದು ಮಾಂಸವನುಂಡು ಕ್ಷುಧೆಯನು ।
ಸಾಧು-ಕಂಠೀರವನೆ ತೀರಿಸಿಕೊಂಡು ದಯೆಯಿಂದ ॥
ಹಾದಿಯನು ನೋಡುತ್ತ ಸೋತ್ಸುಕ- । ವಾದ ವತ್ಸದ ಬಳಿಗೆ ಪೋಗಲು ।
ಬಾಧಿಸದೆ ಗೋವನ್ನು ಬಿಡು ನೀನೆಂದು ಪ್ರಾರ್ಥಿಪನು. ॥ ೪೫ ॥
ಕರುಣೆಯಿಂದುರೆ ಕರಗಿದಂತಹ । ಧರೆಯಪಾಲನ ವಾಣಿಯನು ಕೇ- ।
ಸರಿಯು ಕೇಳಿದ ಮೇಲೆ ಯೀಷತ್ ಸ್ಮೇರವನು ಮಾಡಿ ॥
ತೆರೆದ ಮುಖದಿಂ ಹೊರಟ ಪಲ್ಗಳ । ಕಿರಣದಿಂ ಗಹ್ವರದ ಕತ್ತಲೆ ।
ಹರಿಸುವಂತೆಯೆ ಮಾಡಿ ಮರಳೀ ತೆರದಿ ಪೇಳಿದನು. ॥ ೪೬ ॥
ಸ್ಮರನ ನಾಚಿಸುವಂಥ ರೂಪವು, । ಗಿರಿಯ ವರನಂತಿರುವ ಧೈರ್ಯವು, ।
ತರುಣ ವಯಮೇಣ್ ಸರಸಕಾಂತಿಯು, ಧರೆಯ ರಾಜ್ಯವದು ॥

ಅರರೆ! ನಿನಗಿರಲಾಗಿಯಿವುಗಳ । ತೊರೆದು ಕ್ಷುಲ್ಲಕ ಸುರಭಿಗಾಗಿಯೆ ।
ಮರಣಹೊಂದುವದುಚಿತವೇ? ಬಿಡು ಮರುಳತನ ನೃಪನೇ ॥ ೪೭ ॥
ನೀನು ಕೃಪೆಯಿಂದಸುವ ಕೊಟ್ಟರೆ । ಧೇನು ಬದುಕುವದಲ್ಲದೇ ಮ- ।
ತ್ತೇನು ಘನತರವಾದ ಲಾಭದ ಪ್ರಾಪ್ತಿಯಾಗುವದು? ॥
ಪ್ರಾಣದಿಂ ಚಿರಕಾಲವಿರ್ದರೆ । ಮಾನವೇಂದ್ರನೆ ಪ್ರಜೆಗಳನ್ನರೆ ।
ಹಾನಿಯಿಂ ಪಿತನಂತೆ ಪಾಲಿಸಿ ಸೌಖ್ಯವನು ಕೊಡುವೆ ॥ ೪೮ ॥
ಪಂಡಿತನೆಯೀ ಸುರಭಿಯೊಡೆಯುನ । ಚಂಡ ಕೋಪಕೆ ನಿನ್ನ ಮನ ಭಯ ।
ಗೊಂಡುದಾದರೆ ಮುನಿಯ ಕೋಪಾಟೋಪವನು ನೀನು ॥
ಹಿಂಡು ಗೋಗಳನಿತ್ತು ಬೇಗನೆ । ಖಂಡಿಸಲ್ಕದು ಶಕ್ಯವಿರುತಿರೆ ।
ಯಂಡಲೆಯ ಪಡೆದೇಕೆ ಸುಮ್ಮನೆ ಮ್ಲಾನನಾಗಿರುವೆ? ॥ ೪೯ ॥
ಅಖಿಲ ಭೂಲೋಕದಲಿ ಲಭಿಸುವ । ಸುಖಗಳನ್ನುಪಭೋಗ ಮಾಡುವ ।
ಮುಕುತಿಯಂಗನೆಯುನ್ನು ವರಿಸುವ ದ್ವಾರವಾಗಿರುವ ।
ಪ್ರಕಟ ತೇಜದ ನಿನ್ನ ದೇಹವ- । ನಕಟ । ತೊರೆಯುವದೇಕೆ ಭೂಪನೆ ।
ಅಕಗಳಿಲ್ಲದ ಸ್ವರ್ಗದಲಿ ಪೆಚ್ಚೇನು ಪೇಳೆನಗೆ ॥ ೫೦ ॥
ಇಂತುಪರಿ ಮಾತಾಡಿ ಸುಮ್ಮನೆ । ನಿಂತ ಸಿಂಹದ ರವದ ಪ್ರತಿರವ ।
ಹಂತ! ಗಿರಿ-ಗಹ್ವರದ ಮಧ್ಯದೆ ತೀವಿ ಹೊರಬಿದ್ದು ॥
ಅಂತೆವಾಸಿಗೆ ದೇಶಿಕನು ಬಹು । ಸಂತಸದೆ ಯುಪದೇಶವನು ಮಾ- ।
ಳ್ಪಂತೆ ಭೂಪತಿಗಾಗ ಮಾಡಿದುದೆಂದು ತೋರಿದುದು. ॥ ೫೧ ॥
ಸಾನುರಾಗದೆ ಯಿನಿತು ಪರಿ ಶ । ರ್ವಾಣಿಪತಿ ಕಿಂಕರನು ಪೇಳಿದ ।
ವಾಣಿಯನ್ನಾಲೈಸಿ ಯರೆಕ್ಷಣ ಮೌನದಿಂದಿರ್ದು ॥
ಧೇನುವಿನ ಕಡೆ ತಿರುಗಿ ಯೀಕ್ಷಿಸೆ । ದೀನ ಮುಖದಿಂದವಳು ನೋಡಲು ।
ಮಾನವಾಧೀಶ್ವರನು ಪುನರಪಿ ನುಡಿದನುತ್ತರವ ॥ ೫೨ ॥
ಅರರೆ ! ಕ್ಷತ್ರಿಯ ಕುಲದೆ ಜನಿಸಿದ । ನರರು ಬೆಂಬಿದ್ದಿರ್ಪ ಜನರನು ।
ಪೊರೆಯದಿರ್ದರೆ ಕ್ಷತ್ರಕುಲದಲಿ ಪುಟ್ಟಿ ಫಲವೇನು? ॥
ಸ್ಥಿರವದಲ್ಲದ ಭೋಗಲಿಪ್ಸೆಗೆ । ಬೆರೆತುದಾದರೆ ಮುಂದೆಯವರಿಗೆ ।
ನಿರಯುವೇಗತಿ ಯಲ್ಲದೇ ಮತ್ತೇನು ಲಭಿಸುವದು? ॥ ೫೩ ॥
ಗಣನೆಯಿಲ್ಲದ ಧೇನುಗಳ ಸಂ । ದಣಿಯ ಕೊಟ್ಟರೆ ಸಿಂಹ ರಾಜನೆ ।
ಮುನಿಯ ಕೋಪಾನಲವ ಶಮಿಸಲು ಶಕ್ಯವಾಗುವದೆ? ॥
ಜನನಿಯನು ಗುಣದಲ್ಲಿ ಪೋಲುವ । ಮುನಿಯ ಗೋವನು ಪಿಡಿವ ಶಕ್ತಿಯು ॥
ನಿನಗೆ ಶಿವವರದಿಂದ ಬಂದಿಹುದೆಂದು ನೀನರಿಯೆ ॥ ೫೪ ॥

ಪಾರಣೆಗೆ ಕೇಸರಿಯೆ ನನ್ನ ಶ-। ರೀರವನು ನಿನಗಿತ್ತು ಬಿಡುವೆನು ।
ಸೌರಭೇಯಿಯ ಪ್ರಾಣದಾನವ ಮಾಡು ಮಾಡೆಂದು ॥
ಕೋರುವೆನು, ಮುನಿಕಾರ್ಯವಿದರಿಂ । ಪಾರವಾಗುವದಲ್ಲದೇ ತವ ।
ತೋರಕ್ಷುಧೆಯದು ತೀರುವದು ಮೇಣ್ ಶ್ರೇಯ ದೊರೆಯುವದು ॥ ೪೫ ॥

ಪರರ ಸೇವಕನಾದ ನೀನೀ-। ತರುವನನುದಿನ ಬಿಡದೆ ಪೊರೆಯು---।
ತ್ತಿರುವೆ ಯದರಿಂ ನ್ಯಾಸ ಕಾಯುವ ಕಷ್ಟವನು ಬಲ್ಲೆ ॥
ಗುರುವಿನಾಶ್ರಮಕೆಂತು ನಾನೀ--। ಸುರಭಿಯನು ಸಂತ್ಯಜಿಸಿ ಕರದಲಿ ।
ಶರವ ಪಿಡಿದಕ್ಷತ ಶರೀರದೆ ಪೋಗುವೆನು ಹರಿಯೆ? ॥೪೬ ॥

ನೀರ ಮೇಲಿನ ಗುರುಳಿಯಂತೆ ಶ-। ರೀರವಸ್ಥಿರವಾಗಿ ತೋರ್ಪುದು ।
ಸಾರ ಬಲ್ಲವರಿದರ ವಾಂಛೆಯನಾರು ಮಾಡುವರು? ॥
ಚಾರು ಮದ್ಯಶವನ್ನು ರಕ್ಷಿಸಿ । ತೋರುವದು ಕಾರುಣ್ಯವೆಂದುರೆ ।
ಕೋರುವೆನು ಕೇಸರಿಯೆ ಗೋವಿನ ಮೋಚನೆಯ ಮಾಡಿ ॥ ೪೭ ॥

ಎಲವೊ, ಶೂಲಿಯ ಚರನೆ ನಮ್ಮೊಳು । ಲಲಿತ ಸಂಭಾಷಣದ ಮೂಲಕ ।
ವಿಲಯಹೊಂದದ ಸ್ನೇಹವೀವನದಲ್ಲಿ ಕಲೆತಿಹುದು ॥
ಉಳಿದು ಮುನಿಯಾಕಳವ ನೀಗಲೆ । ನಲವಿನಿಂದವಳನ್ನು ಕಳುಹಿಸಿ ।
ಬೆಳೆಸು ಗಳಿಸಿರ್ದಂಥ ಗೆಳೆತನವೆಂದು ಪ್ರಾರ್ಥಿಪೆನು ॥ ೪೮ ॥

ಕೇಳಿ ಸೂನೃತವಾಣಿಯನು ಶಶಿ--। ಮೌಲಿ ಕಿಂಕರನಾಗ ಗೋವನು ।
ಲೀಲೆಯಿಂ ಮೋಚಿಸಿದ ಕೂಡಲೆ ನೃಪನ ಪಾಣಿಗಳು ॥
ಮೂಲಗತಿಯನ್ನೈದಿದವು ಭೂ-। ಲೋಲನಾಗಲೆ ತನ್ನ ವಚನವ ।
ಪಾಲಿಸಲು ಸಂಸಿದ್ಧನಾದನು ಚೆಲ್ಲಿ ಚಾಪವನು ॥ ೪೯ ॥

ಹರಿಯು ತನ್ನನ್ನಿರದೆಯೀಗಲೆ । ಹರಿದು ತಿನ್ನುವದೆಂದು ಭೂಪನು ।
ಧರೆಯ ಕಡೆ ಮುಖಮಾಡಿ ಹರಿಯನು ಚಿಂತಿಸುತ್ತಿರಲು ॥
ತ್ವರದೆ ಯಾಗಸದಿಂದ ವಿದ್ಯಾ--। ಧರರು ಕುಸುಮದ ವೃಷ್ಟಿಯನ್ನರೆ ।
ಕರೆದರಾ ನರವರನ ನೆತ್ತಿಯ ಮೇಲೆ ಹರುಷದಲಿ ॥೬೦ ॥

ತನಯ ನೀನೇಳೆಂದು ನೃಪನನು । ಜನನಿಯನು ಮಿಕ್ಕಿರುವ ಮಮತಾ---।
ಸ್ತನದೆ ಕರೆದಾಗವನು ಮೊಗವನ್ನೆತ್ತಿ ನೋಡಲ್ಕೆ ॥
ಸ್ತನದೆ ಸರಸಾಮೃತವ ಕರೆಯುವ । ಜನರ ಕಾಮನೆಯನ್ನು ದುಹಿಸುವ ।
ಮುನಿಯ ಹೋಮದ ಧೇನುವನು ತನ್ನೆದುರಿನಲಿ ಕಂಡ ॥ ೬೧ ॥

ತನುಜನೇ ನಾಂ ನಿನ್ನ ಮನಸಿನ । ಘನತೆಯನು ಪರಿಕಿಸಲು ಭೀಕರ ।
ವನದೆ ಪಂಚಾನನನ ಮಾಯಾಬಲದೆ ನಿರ್ಮಿಸಿದೆ ॥

ಎನಗೆ ಶಮನನ ಭೀತಿಯದು ಸಹ। ಮುನಿಯ ಕೃಪೆಯಿಂ ತಟ್ಟಲಾರದು।
ಜನಪನೇ ಮತ್ತನ್ಯ ಸತ್ವಗಳೇನು ಮಾಡುವವು? ॥ ೬೨ ॥
ಗುರುಪರಾಯಣನಾದ ಕೋಸಲ-। ಧರೆಯ.ಪಾಲನೆ ನನ್ನ ವಿಷಯಕೆ।
ಪರಮ ಕರುಣೆಯ ನೀನು ತೋರಿದರಿಂದ ಮೆಚ್ಚಿರುವೆ॥
ಬರಿದೆ ಕ್ಷೀರವ ಕರೆವ ಪ್ರಾಕೃತ। ಸುರಭಿಯಂತಾನಲ್ಲವೊಲಿತರೆ।
ನರಪನೇ ಬೇಡಿದ್ದಕೊಡುವೆನು ಬೇಡುವರವನ್ನು ॥ ೬೩ ॥
ಅರಿಗಳನು ಮರ್ದಿಸಿದ ವೀರನು। ಸುರಭಿಮಾತೆಯ ಕೇಳಿಯೀಪರಿ।
ಸರಸವಚನಗಳನ್ನು ಮನದಲಿ ತೋಷವನು ಹೊಂದಿ॥
ವರ ಸುದಕ್ಷಿಣೆಯುರಸಿಯುದರದೆ। ತರಣಿಕುಲದಭಿವೃದ್ಧಿಪಡಿಸುವ।
ತರಳನನು ದಯಪಾಲಿಸೆಂದತಿವಿನಯದಿಂ ನುಡಿದ ॥ ೬೪ ॥
ತನ್ನ ವಂಶದ ವೃದ್ಧಿಗಾಗೀ-। ಚನ್ನಿಗನು ಮಗುವನ್ನು ಬಯಸಲು।
ಗನ್ನ ಮಹಿಮೆಯು "ಹಾಗೆಯಾಗಲಿ" ಯೆಂದು ವರಕೊಟ್ಟು॥
ದೊನ್ನೆಯೊಳು ನೀನೆನ್ನ ಸ್ತನದಿಂ। ನಿನ್ನ ಕರದಿಂ ಹಿಂಡಿ ದುಗ್ಧವ-।
ನಿನ್ನು ಪ್ರಾಶನವನ್ನು ಮಾಡೆಂದವಳು ಪೇಳಿದಳು. ॥ ೬೫ ॥
ತೆರಿಗೆಯನು ನಾನೆನ್ನ ಪ್ರಜೆಗಳ। ಕರದೆ ಕೊಳ್ಳುವ ತೆರದೆ ಸುರಭಿಯೆ।
ಕರುವಿಗುಣ್ಣಿಸಿ ಹೋಮಕಾರ್ಯಕೆ ಸಾಲ್ದು ಮೇಣುಳಿದ॥
ಸರಸ ಪಯವನು ನಾನು ಕೊಳ್ಳುವೆ। ಗುರುವಿನಪ್ಪಣೆಯಂತೆ ಮೀರದೆ।
ಕರುಣೆಯಿಂದಿದಕಾಜ್ಞೆಯನು ನೀನಿತ್ತು ಪೊರೆಯೆನಲು ॥ ೬೬ ॥
ನಳಿನ ನಯನನ ಲಲಿತ ನುಡಿಯ-। ನ್ನೊಲಿದು ಕೇಳಿದಮೇಲೆ ಸುರಭಿಯು।
ತಳೆದು ಮೊದಲಿನಗಿಂತ ಹೆಚ್ಚಿಗೆ ಬೆಳೆದ ಹರುಷವನು॥
ಬಳಲಿದೆಲೆ ನೀನಿಳೆಯಪಾಲನೆ। ಕಳೆಯದಿರು ತುಸುಕಾಲವಾದರು।
ಗಳಿಗೆಯಲಿ ಯಾಶ್ರಮವನೈದುವೆವೆಂದು ಸಾಗಿದಳು. ॥ ೬೭ ॥
ಅಂದು ಗುರ್ವಾಶ್ರಮಕೆ ರಾಜನು। ಬಂದಕೂಡಲೆ ದೇಶಿಕನಿಗಾ-।
ನಂದದಿಂ ನಡೆದೆಲ್ಲ ಸಂಗತಿಯನ್ನು ಪೇಳಿದನು.॥
ಇಂದುವಿನಸಮ ಪೊಳೆವ ಮೊಗದಿಂ। ಹಿಂದಿನಿಂದವನಾಗ ರಾಜ್ಞಿಗೆ।
"ನಂದಿನಿ" ಯು ವರದಾನ ಮಾಡಿದ್ದನ್ನು ತಿಳುಹಿದನು. ॥ ೬೮ ॥
ಗುರುವಿನಾಜ್ಞೆಯ ಪಡೆದನಂತರ। ಕರುವಿಗುಣ್ಣಿಸಿ ಹವಿಗೆ ಬೇಕಾ-।
ಗಿರುವ ಸುರಭಿಯ ಸರಸ ದುಗ್ಧವ ಬಿಟ್ಟು ಭೂಪತಿಯು॥
ಪುರುಷ ನಿರ್ಭರನಾಗಿ ತನ್ನಯ। ಪರಮ ನಿರ್ಮಲವಾದ ಕೀರ್ತಿಯ।
ತೆರದೆ ಮೆರೆಯುವ ಶೇಷಪಯವನು ಪಾನ ಮಾಡಿದನು. ॥ ೬೯ ॥

ಮೀರಿದುತ್ಸವದಿಂದ ಮರದಿನ । ಪಾರಣೆಯ ವಿಧಿಯಿಂದ ಜರುಗಿಸಿ ।
ಪಾರುವರಿಗಿಳೆಪಾಲನಾಗಲೆ ಭೋಜನವನಿತ್ತು ॥
ಸಾರವರಿತಾ ಗುರುವಿನಂಘ್ರಿಗೆ । ಬಾರಿ ಬಾರಿಗೆ ನಮಿಸಿ ಯಾತನು ।
ತೋರೆಯನುಮತಿ ರಾಜ-ದಂಪತಿ ಪುರಕೆ ಯೆದುರಾಗಿ ॥ ೭೦ ॥
ಪೊರಮಡುವದಕ್ಕಿಂತ ಮಂಚೆಗೆ । ಭರದೆ ಯೀರ್ವರು ಹೋಮದಗ್ನಿಗೆ !
ಗುರುವಿಗಂ ಗುರುಧರ್ಮಸತಿಗಂ ಮತ್ತೆನಂದಿನಿಗೆ ॥
ಶಿರವನನುನಯದಿಂದ ಬಾಗಿಸಿ । ಪರಕೆಯನು ಪಡೆದವರು ಬೇಗನೆ ।
ಪರಮ ಹರುಷದೆ ಪುರಕೆ ಹೊರಟರು ಪರಿಜನರಕೂಡ ॥ ೭೧ ॥
ಶ್ರುತಿ ಮನೋಹರವಾದ ತೇರಿನ । ಶ್ರುತಿಯನಾಲೈಸುತ್ತೆ ರಾಜನು ।
ರಥದ ಮಧ್ಯದೆ ಲಲನೆಯಿಂದೊಡಗೂಡಿಪಟ್ಟಣದ ॥
ಪಥದೆ ಸಾಗಿಹನಂದು ತನ್ನಯ । ಬತ! ಮನೋರಥವೆಂಬ ರಥದಲಿ ।
ಸ್ಥಿತಿಯ ಹೊಂದಿರುವಂತೆ ಪರಮಾನಂದದಲಿ ಮುಳುಗಿ. ॥ ೭೨ ॥
ಸುತನ ಪಡೆಯುವದಕ್ಕೆ ಭೂಮಿಯ । ಪತಿಯು ಗುರ್ವಾಶ್ರಮದೆ ಬಹುದಿನ ।
ವ್ರತವನಾಚರಿಸುತ್ತೆ ಕೃಶನಾಗಿರುವನೆಂದರಿತು. ॥
ಅತಿಶಯಾದೌತ್ಸುಕ್ಯದಿಂ ಭೂ- । ಪತಿಯ ಪ್ರಜೆಗಳು ಚಂದ್ರದರ್ಶನ ।
ತಿಥಿಯನೀಕ್ಷಿಪ ತೆರದಿಯಾತನ ಮಾರ್ಗನೋಡಿದರು. ॥ ೭೩ ॥
ಉರಗ ಪತಿಬಲದಿಂದ ಕೂಡಿದ । ಸುರರಪತಿವೈಭವದೆ ಮೆರೆಯುವ ।
ಧರೆಯಪಾಲನ ಪ್ರಜೆಗಳಾತನ ದರುಶನವಕೊಂಡು ॥
ಸರಸಕೇತುಗಳಿಂದ ಶೋಭಿಪ । ಪುರದ ಮಾರ್ಗದೆ ಯೊಯ್ಯಲಾತನು ।
ಧರೆಯ ಧುರವನು ಧರಿಸಿದನು ಪುನರಾನಂದದಿಂ ಕೂಡಿ. ॥ ೭೪ ॥
ಸುರರ ವರ್ತ್ಮವದತ್ರಿನೇತ್ರದ । ಪರಮ ಸುಂದರ ತೇಜವನ್ನೀ- ।
ಶ್ವರನ ವೀರ್ಯವನಗ್ನಿ ಮುಖದಿಂ ಸುರರ ಸರಿತೆಯದು ।
ಧರಿಸಿದಂತೆಯೆ ಧರೆಯಪಾಲಕ- । ನರಸಿ ದಿಕ್ಪಾಲಕರ ತೇಜದೆ ।
ನರಪ ಕುಲದಭಿ ವೃದ್ಧಿಗಾಗಿಯೆ ಗರ್ಭತಾಳಿದಳು. ॥ ೭೫ ॥

೩ನೆಯ ಸರ್ಗ.

ಬಳಿಕ ಕೆಲದಿನಗಳಲಿ ರಾಜನ । ಲಲಿತ ವಾಂಛೆಯು ಫಲಿಸಿತೇನೆನೆ ।
ಕೆಳದಿಯರ ಕೌಮುದಿಯ ಸೂತ್ಸವ ಮೂರ್ತವಾಯಿತೆನೆ ॥
ಇಳೆಯಪತಿಯಿಕ್ಷ್ವಾಕುರಾಜನ । ಕುಲದ ವೃಕ್ಷಕೆ ಫಲವು ಬಂತೆನೆ ।
ಲಲನೆ-ಬಸುರಿನ ಚಿಹ್ನಗಳು ಕಣ್ದೋರಲೆಸಗಿದವು ॥ ೧ ॥

ಇರುಳಿನುತ್ತರ-ಕಾಲದಲ್ಲಿಯು । ವಿರಳವಾದುದು-ರಾಜಿ-ಪರಿವೃತ ।
ಸರಸ ಹಿಮಕರನಿಂದ ಕೂಡಿದ ಶರ್ವರಿಯ ತೆರದೆ ॥
ಸೊರಗಿದಂಗದ ಮೇಲೆ ಸ್ವಲ್ಪಾ-। ಭರಣಗಳನಿಟ್ಟಿರುವ ಕೋಸಲ- ।
ಧರೆಯಪಾಲನ ಸತಿಯು ಪಾಂಡುರ-ಮುಖವು ತೋರಿದುದು ॥ ೨ ॥

ಘನವು ಗ್ರೀಷ್ಮಾಂತದಲಿ ನೀರಿನ । ಹನಿಗಳನ್ನರೆ ಕರೆದು ತುಂಬಿದ ।
ವನದ ಪಲ್ವಲವನ್ನು ಮೂಸಿಪ ಮತ್ತಕರಿಯಂತೆ ।
ಜನಪನೇಕಾಂತದಲಿ ತನ್ನಯ । ವನಿತೆ-ಮಣ್ತಿಂದಂಥ ವಕ್ತ್ರದ ।
ಘನಸುವಾಸವನೀಂಟಿ ಸಲೆ ಸಂತೃಪ್ತಿ ಬಡದಿಹನು ॥ ೩ ॥

ಸುರರ ಪತಿ ನಾಕವನು ಭೋಗಿಪ । ತೆರದಿ ತನ್ನಯ ಭಾವಿತರಳನು ।
ಧರೆಯ ಪರಿಪಾಲನವ ಮಾಡುವನೆಂದು ತಾನರಿತು ॥
ಅರಸು--ಪಟ್ಟದ ರಾಣಿ ಮುಂದಿನ । ಕುರುಹವನು ತೋರಲ್ಕೆ ಮೃತ್ತಿಕೆ ।
ಪರಮ ಹರುಷದೆ ಸೇವಿಸುವಳೇನೆಂದು ತೋರಿದುದು ॥ ೪ ॥

ಮಗಧದೇಶದ ಭೂಮಿಪಾಲನ । ಮಗಳು ದೋಹದವನ್ನು ತ್ರಪೆಯಿಂ- ।
ಬಗೆಯುಗೊಳಿಸದೆ ಸುಮ್ಮನಿರುವಳು ಕೆಳದಿಯರೆ ನೀವು ॥
ಸೊಗಸು ನುಡಿಯಿಂ ರಮಿಸಿ ನನ್ನಯ । ಸುಗುಣಖನಿಯುನು ಕೇಳಿ ಬಯಕೆಯ ।
ಬಗೆಯುನರಿತದನೆನಗೆ ಹೇಳುವದೆಂದನಾ ನೃಪನು ॥ ೫ ॥

ಚೆಲ್ಲೆಗಂಗಳೆಯಾದ ಭೂಪತಿ- । ವಲ್ಲಭೆಗೆ ದೋಹದಗಳಾಗಲು ।
ಸಲ್ಲಿದವು ಬಿಡದೆಲ್ಲ ವಾಂಛೆಗಳೇನು ದುರ್ಲಭವೋ? ॥
ಬಿಲ್ಲು ಕರದಲಿ ಧರಿಸಿದಂತಹ । ಬಲ್ಲಿದನಿಗಮರೇಂದ್ರ ಪುರದ- ।
ಳ್ಲಿಲ್ಲವೆಂಬುವರಾರು ವಸ್ತುಗಳನ್ನು ಕೊಡಲವಗೆ ॥ ೬ ॥

ಉರುಳಿ ಹೋಗಲು ಜೀರ್ಣದಲಗಳು । ಮರಳಿ ಪೊಸ ಪಲ್ಲವಗಳನ್ನರೆ ।
ಧರಿಸಿ ತರುಗಳು ರಾಜಿಸುವ ತೆರದಲ್ಲಿ ಭೂಪತಿಯ ।
ಅರಸಿ ಬಯಕೆಗಳಡಗಲಾಕೆಯು । ಸುರಸದೇಹಾಂಗದಲಿ ಪುನರಪಿ ।
ಚರಿಸಿ ಪುಷ್ಟಿಯು ಮುಖದ ಕಾಂತಿಯು ಪೆರ್ಚಿ ಬೆಳಗಿಹುದು ॥ ೭ ॥

ಬಳಿಕ ಕೆಲದಿನಗಳ ರಾಜ್ಞಿಯು । ಬಲಿತ ಮೊಲೆಗಳ ಚೂಚುಕಂಗಳು ।
ತಳೆದು ಮೇಚಕ ಮಣಿಯು ಸಾದೃಶವನ್ನು ವರ್ಣದಲಿ ॥
ನಲಿನಿಗಳಿಗಭಲೀನವಾಗಿ-। ರ್ದಲಿಗಳಿಂದುಂಟಾದ ಸಿರಿಯುನು ।
ಹಳಿದು ಹಿಯ್ಯಾಳಿಸುವ ತೆರ ಸಖಿಯುರಿಗೆ ತೋರಿದವು ॥ ೮ ॥

ಒಡಲು ರನ್ನದ ವಸ್ತ್ರವನ್ನರೆ । ಪೊಡವಿಯುಟ್ಟಿರುವಂತೆ ಬನ್ನಿಯ ।
ಗಿಡವು ತನ್ನೊಳಭಾಗದಲಿ ಪಾವಕನ ತಳೆದಂತೆ ॥

ಬಿಡದೆ ಮಳಲಿನ ಬುಡದೆ ಸರಸತಿ । ಜಡವ ಧರಿಸಿರುವಂತೆ ತನ್ನಯ ।
ಮಡದಿ ಗರ್ಭವು ಕೋಸಲೇಂದ್ರನ ಕಣ್ಗೆ ಶೋಭಿಸಿತು. ॥ ೯ ॥
ದಿಕ್ಕು ದಿಕ್ಕುಗಳಿಂದ ಬಲದಾ- । ಧಿಕ್ಯದಿಂ ಗಳಿಸಿರ್ದ ದ್ರವ್ಯದ ।
ತಕ್ಕ ಮಾನದೆ ಪುಂಸವನ ಮೊದಲಾದ ಕಾರ್ಯಗಳ ॥
ಅಕ್ಕರದೆ ಕ್ರಮದಿಂದ ತೀರಿಸಿ । ರಿಕ್ಥವನು ಪಾರ್ವರಿಗೆ ರಾಜನು ।
ಸಿಕ್ಕುವದು ತನಗಿನ್ನು ಫಲವೆಂದರಿತು ಕೊಟ್ಟಿಹನು. ॥ ೧೦ ॥
ರಾಣಿಯನು ಕಾಣಲ್ಕೆರಾಜನು । ಕೋಣೆಯೊಳು ಪೊಕ್ಕಾಗಲಾಕೆಯು ।
ಪಾಣಿಸಂಪುಟವನ್ನು ಜೋಡಿಸಿಯೆದ್ದು ಶ್ರಮದಿಂದ ।
ಏಣನಯನಗಳಿಂದ ಮಾನಿನಿ- । ಯಾನನವ ನೋಡುತ್ತ ಪ್ರೇಮದೆ ।
ಮಾನ ಮಾಡುವದನ್ನು ಕಂಡಾನಂದ ಹೊಂದಿದನು. ॥ ೧೧ ॥
ವಸುಧೆಯಾಣ್ಮನ ಧರ್ಮಪತ್ನಿಯ । ಬಸುರಿನಾರಯ್ಕೆಯನು ಯತ್ನದೆ ।
ಭಿಷಜರನು ದಿನಮಾಡೆ ಪ್ರಸವದ ಸಮಯ ಬರೆ ನೃಪನು ॥
ಬಿಸಿಲುಗಾಲವು ತೀರೆ ಧಾರಾ- । ರಸವ ಸುರಿಸುವ ಮೇಘವನು ಗಡ ।
ವಸುಧೆಯಾಶಿಸುವಂತೆ ಶಿಶು-ಜನಿಯನ್ನು ಬಯಸಿದನು ॥ ೧೨ ॥
ಮೇದಿನಿಯ ಪತಿನತಕೆ ಸಂಪದೆ । ಸಾಧನತ್ರಯದಿಂದ ಬಂತೆನ- ।
ಲೈದು ಗ್ರಹಗಳು ಕೇಂದ್ರದೆಡೆಯಲಿ ಕೂಡಿ ಬಂದಿರಲು ॥
ಐದುಗಣೆಯನ ತೆರದ ಮಗುವ- । ನ್ನೈದಿದಳು ಶಚಿಯಂತೆ ಶುಚಿಯಾ- ।
ದೈದೆ ಯಾಸಮಯಕ್ಕೆ ಪರಮಾನಂದವಾಗಿಹುದು ॥ ೧೩ ॥
ಅಂದದಿಂ ಬೆಳಗಿದವು ದಿಶೆಗಳು । ಚಂದದಿಂ ವಹಿಸಿದನು ವಾಯುವು ।
ತಿಂದನಾಹುತಿ ವಹ್ನಿ ದಕ್ಷಿಣ ದಿಕ್ಕಿನಲಿ ಬೆಳೆದು ॥
ಸಂದು ವಡೆದವು ಸಕಲ ಶುಭಗಳು । ಮುಂದಿಯುದಯಕ್ಕಾಗಿಯಿಂತಹ ।
ಸುಂದರಾತ್ಮರ ಜನ್ಮವಾಗುವದೆಂದು ಪೇಳುವರು ॥ ೧೪ ॥
ಸೂತಿಕಾಗೃಹದಲ್ಲಿ ಸೊಡರಿನ । ಜ್ಯೋತಿಯಿರುಳಿನ ಕಾಲದಲಿ ಪ್ರ- ।
ಖ್ಯಾತವಾದಾ ರಾಜಪುತ್ರನ ಕಾಂತಿಯಿಂದಡಗಿ ॥
ಸೋತು ಸೂರ್ಯನ ತೇಜದಿಂ ಖ- । ದ್ಯೋತ ಭೂತಲದಲ್ಲಿ ಬೆಳಗುವ ।
ರೀತಿಯಿಂ ನಿಸ್ತೇಜವಾಗಿಹುದೇನು ಪೇಳುವೆನು ॥ ೧೫ ॥
ಅರಸಿಯಂತಃಪುರದ ಶುದ್ಧಾ - । ಚರಣದಿಂ ಕೂಡಿರ್ದ ವಾರ್ತಾ- ।
ಹರರು ಪುತ್ರೋತ್ಸವದ ಸುದ್ದಿಯನರುಹೆ ಭೂಪತಿಯು ॥
ಅರಸು ಕುರುಹುಗಳನ್ನು ಬಿಟ್ಟಾ - । ದರದೆಯವರಿಗೆ ತುರಗ-ರಥ-ಧನ ॥
ಕರಿಗಳನ್ನರೆ ಕೊಟ್ಟು ಸಂತಸವನ್ನು ಪಡಿಸಿದನು ॥ ೧೬ ॥

ಮಾರುತನ ಸಂಚಾರವಿಲ್ಲದ । ಸಾರಸಂಗಳ ತೆರದಿ ನಿಶ್ಚಲ ।
ಸಾರಸಾಕ್ಷಗಳಿಂದ ರಾಜನು ಪುತ್ರಮುಖನೋಡೆ ॥
ಚಾರುಚಂದ್ರನ ಕಂಡಕೂಡಲೆ । ವಾರಿಧಿಗೆಯುಕ್ಕೇರುವಂದದೆ ।
ಧಾರುಣೀಶನ ಪ್ರೇಮದುದಧಿಗೆ ಪೂರ ಬಂದಿಹುದು ॥ ೧೭ ॥

ಅಂದು ಸ್ವಾಶ್ರಮದಿಂ ವಸಿಷ್ಠನು । ಬಂದು ರಾಜನ ಮಂದಿರಕೆ ನೃಪ - ।
ನಂದನನ ಶುಭ ಜಾತಕರ್ಮಗಳನ್ನು ಮುಗಿಸಿರಲು ॥
ತಂದು ಖನಿಯಿಂ ವಜ್ರವನು ಭರ- । ದಿಂದ ಶಾಣಕೆ ಹಚ್ಚಲದು ಬಲು ।
ಚಂದಕಾಣುವ ತೆರದಿ ಹಸುಳನು ಶೋಭೆ ಹೊಂದಿಹನು ॥ ೧೮ ॥

ಆಗ ಮಂಗಲ ವಾದ್ಯರವಗಳು । ವಾಗಧಿಯು ಪತಿ-ನಗರದೊಳ-ಹೊರ- ।
ಭಾಗದಲಿ ಸಾಗಿದವು ಪರಮಾನಂಗದಿಂ ಕೂಡಿ ॥
ಆಗಸದ ಪಥದಲ್ಲಿ ನಿರ್ಜರ- । ಭೋಗವನಿತಾ-ಜನರು ಹರುಷದೆ ।
ರಾಗ-ರಾಗಿಣಿ ಸಹಿತ ತೌರ್ಯತ್ರಿಕವ ನಡಿಸಿದರು ॥ ೧೯ ॥

ಕಂದ ಪುಟ್ಟಿದನೆಂದು ಮಹದಾ- । ನಂದದಿಂದಿಳೆಪತಿಯು ಸೆರೆಮನೆ- ।
ಯಿಂದ ಜನರನು ಮುಕ್ತಮಾಡುವೆನೆಂದು ಯೋಚಿಸಲು ॥
ಅಂದು ಬಂದೀವಾಸದಲಿ ತಾ- । ನೊಂದು ಪ್ರಾಣಿಯುನಾದರೂ ಕ- ।
ಣ್ಣಿಂದ ಕಾಣದೆ ತಂದೆರುಣದಿಂ ತಾನೆ ಯುಳಿದಿಹನು ॥ ೨೦ ॥

ಮೊಗದ ಚಿಹ್ನಗಳಿಂದ ತನ್ನಯು । ಮಗನು ಶಾಸ್ತ್ರೋದಧಿಯ ದಾಂಟುವ ।
ಖಗನು ಭಗಣಗಳನ್ನು ತೇಜದೆ ಜಯಿಸುವಂದದಲಿ ॥
ಹಗೆಗಳನು ಸಂಹರಿಪನೆಂದುರೆ । ಬಗೆದು "ರಘು" ನಾಮಾಭಿಧಾನದೆ ।
ಸುಗುಣಮಂಡಿತನಾದ ನೃಪನಿವನನ್ನು ಕರೆಯುವನು. ॥ ೨೧ ॥

ಭಾನು-ತೇಜವನಾಂತು ಚಂದ್ರನು । ತಾನು ದಿನ ದಿನ ಬೆಳೆಯುವಂತೆಯೆ ।
ನೂನವಿಲ್ಲದ ವಿಭವ ಸಂಯುತನಾದ ನರಪತಿಯ ॥
ಸಾನುರಾಗದ ಯತ್ನದಿಂ ನೃಪ- । ಸೂನುವಿನ ರಮಣೀಯ ದೇಹವು ।
ಬೇನೆ ಬೇಸರ ವಿಲ್ಲದೇ ಬೆಳೆಯುತ್ತ ನಡೆದಿಹುದು. ॥ ೨೨ ॥

ಸ್ಕಂದ ಸುರಸೇನಾನಿಯಿಂ ಗಿರಿ- । ನಂದಿನಿಗೆ ಮೇಣಿಂದು-ಧರನಿಗೆ ।
ಸುಂದರಾಂಗ ಜಯಂತನಿಂ ಶಚಿಪತಿಗೆ ಶಚಿಸತಿಗೆ ॥
ಅಂದವಾದಂತಾಗ ರಘುಪತಿ- । ಯಿಂದಲಾತನ ತಂದೆ ತಾಯ್ಗಳಿ- ।
ಗಂದು ಪರಮಾನಂದವಾಯಿತು ಪುತ್ರಜನಿಯಿಂದ. ॥ ೨೩ ॥

ಚಕ್ರವಕ್ಕಿಗಳಂತೆ ಪ್ರೇಮಾ- । ಧಿಕ್ಯದಿಂ ಕೂಡಿರ್ದ ದಂಪತಿ- ।
ಯಕ್ಕರವು ತನುಜಾತನಾದೀ ಚಿಕ್ಕ ಮಗುವಿನಲಿ ॥

ತಕ್ಕ ಮಾನದೆ ಹಂಚಿ ಪೋದರು । ರೊಕ್ಕ ಪಕ್ಕಗಳಂತೆ ಸೊರಗದೆ ।
ಮಿಕ್ಕಿ ಮುಂಚಿನಗಿಂತ ವೆಗ್ಗಳವಾಗಿ ಬೆಳೆದಿಹುದು. ॥ ೨೪ ॥
ಹಾದಿಯಿಂ ತಪ್ಪಡಿಗಳಿಕ್ಕುತೆ । ದಾದಿಯಂಗುಲಿಯನ್ನು ಪಿಡಿದಾ ।
ನೋದವನು ಬೀರುತ್ತೆ ಕಲಿಸಿದ ನುಡಿಗಳನ್ನಾಡಿ ॥
ದಾದನೆದುರಿಗೆ ಬಂದು ಶಿಶುವದು । ಪಾದಪದ್ಮಗಳನ್ನು ವಂದಿಸೆ ।
ಮೋದಸಾಗರದಲ್ಲಿ ರಾಜನು ಮಜ್ಜನಂ ಗೈದ ॥ ೨೫ ॥
ತರಳನಂಗಸ್ಪರ್ಶಯೋಗದೆ । ಧರೆಯಪತಿದೇಹದಲಿ ಸುಧೆಯನು ।
ಸುರುವಿದಂತತಿ ಸುಖದೆಯಾತನು ಕಣ್ಗಳನು ಮುಚ್ಚಿ ॥
ಮರೆತು ಮೈ ಚಿರದಿಂದ ಪುನರಪಿ । ಧರಿಸಿ ಪ್ರಜ್ಞೆಯನಾಗ ಮಗುವ- ।
ನ್ನಿರಿಸಿ ಯುತ್ಸಂಗದಲಿ ತನ್ಮುಖವನ್ನು ಚುಂಬಿಸಿದ ॥ ೨೬ ॥
ಸೃಷ್ಟಿಯನು ನಿರ್ಮಿಸಿದ ದೇವನು । ಶ್ರೇಷ್ಠಗುಣದವತಾರದಿಂದೀ- ।
ದೃಷ್ಟ ವಿಶ್ವದ ಸ್ಥಿತಿಯುದಾಗುವದೆಂದು ತಿಳಿದಂತೆ ॥
ಸುಷ್ಟುಗುಣದಿಂ ಕೂಡಿದಂತಹ । ಶ್ರೇಷ್ಠರಘುವಿನ ಜನ್ಮದಿಂ ತನ- ।
ಗಿಷ್ಟವಹ ರವಿಕುಲದ ಸಂಸ್ಥಿತಿಯನ್ನು ನೃಪನರಿತ ॥ ೨೭ ॥
ಚೆಲುವ ರಘುವಿನ ಚೌಲಕರ್ಮವ । ನಲವಿನಿಂ ಮುಗಿಸಲ್ಕೆ ರಾಜನು ।
ಪಲವು ಸಚಿವರ ತನುಜರನು ಸಲೆ ಕಲೆತು ಮಠದೊಳಗೆ ॥
ಕಲಿತು ಮೂಲಾಕ್ಷರಗಳನ್ನರೆ । ಲಲಿತ ವಾಙ್ಮಯದೊಳಗೆ ಪೊಕ್ಕನು ।
ಜಲಧಿಯೊಳು ನದಮುಖದೆ ಸೇರುವ ತೆರದಿ ನೃಪಸುತನು ॥ ೨೮ ॥
ತರುಳನುಪನಯನವನು ವಿಧಿಯಂ । ಧರೆಯ ಪಾಲನು ಮಾಡಿ ಹರುಷದೆ ।
ಪರಮ ಪಂಡಿತರಾದ ಗುರುಗಳ ಕಡೆಗೆ ಕುವರನನು ॥
ಸರಸ ವಿದ್ಯಾಧ್ಯಯನ ಮಾಡಿಸ- । ಲಿರದೆ ಕಳುಹಿಸಲವರ ಶ್ರಮವದು ।
ಬರಿದೆಯಾಗದೆ ಸಫಲವಾಯಿತು ಸ್ವಲ್ಪಕಾಲದಲಿ ॥ ೨೯ ॥
ಎರಲವನು ಜವದಲ್ಲಿ ಮೀರಿದ । ತುರಗಗಳ ರಥದಲ್ಲಿ ಹತ್ತಿದ ।
ತರಣಿ ಜವದಿಂ ದಿಶೆಗಳನ್ನುತ್ತರಿಪ ತೆರದಲ್ಲಿ ॥
ಚುರುಕು ಬುದ್ಧಿಯ ಧಾರುಣೀಶನ । ತರುಳನೀರೀರ್ಕಡಲುಗಳ ಸರಿ ।
ಯಿರುವ ನಾಲ್ಕೂ ವಿದ್ಯಗಳನುರೆ ಕ್ರಮದೆ ದಾಂಟಿದನು ॥ ೩೦ ॥
ಧರೆಯ ಮಂಡಲಕೋರ್ವನೇ ಧೊರೆ । ಶರಗಳೆಸೆಯುವ ಕರ್ಮ-ದೀಕ್ಷಾ- ।
ಗುರುವೆ ತಾನಾಗಿರುವ ಕೋಸಲದೇಶದಧಿಪತಿಯು ॥
ಎರಳೆ ಚರ್ಮವನುಡಿಸಿ ತನ್ನಯ । ತರುಳನಿಗೆ ಶಸ್ತ್ರಾಸ್ತ್ರ-ವಿದ್ಯೆಯ- ।
ನರುಹಿದನು ಮಂತ್ರೋಪದೇಶವ ಮಾಡಿ ವಿಧಿಯಿಂದ ॥ ೩೧ ॥

ಬೆಳೆದು ಕರು ವೃಷವಾಗುವಂದದೆ । ಬೆಳೆದು ಕರಿಶಾವಕವು ದಂತಾ- ।
ವಲವದಾಗುವ ತೆರದೆ ರಘುಪತಿ ಬೆಳೆದು ದಿನದಿನಕೆ ॥
ಉಳಿದು ಶೈಶವವನ್ನು ಭರದಿಂ । ತಳೆದು ಯೌವನವನ್ನು ಸುಂದರ ।
ಪೊಳೆವ ದೇಹದ ಕಾಂತಿಯಿಂ ವಿಭ್ರಾಜಿಸುತ್ತಿಹನು ॥ ೩೨ ॥

ಮುಗಿಸಿ "ಗೋದಾನ"ವನು ರಾಜನು । ಮಗನ ಮದುವೆಗಳನ್ನು ಸುಂದರ ।
ಸುಗುಣದಿಂ ಕೂಡಿರ್ದ ವಧುಗಳ ಕೂಡ ಮಾಡಿದನು. ॥
ಭಗಣಗಳು ತಮ್ಮೊಡೆಯ ಹಿಮಕರ- । ನಗಲಿ ಜೀವಿಸದಂತೆ ಪೆಂಡರು ।
ರಘುವಿನಲಿ ಮಿಗೆ ಪ್ರೇಮದಿಂ ಸಂತುಷ್ಟರಾಗಿಹರು. ॥ ೩೩ ॥

ಅಗಲವಾದೆದೆ, ದೀರ್ಘ ಬಾಹಾ- । ಯುಗಲಗಳು, ಪರಿಪುಷ್ಟವಾದಹ ।
ಹೆಗಲುಗಳು ರಘುನಾಥನಂಗಕೆ ಶೋಭೆಗೊಡುತಿಹವು. ॥
ಮೊಗದ ಕಾಂತಿಯು ತಾತನನ್ನುರೆ । ಮಿಗಿಲುಗೊಂಡತಿ ಶೋಭಿಸಿರ್ದೊಡೆ ।
ಸೊಗಯಿಸಿದ, ನವನೀತ ಸಂತತಿ ವಿನಯಗುಣದಿಂದ. ॥ ೩೪ ॥

ಪರಮ ಗುರುತರವಾದ ರಾಜ್ಯದ । ಧುರವ ತಾನೇ ಪೊತ್ತು ನೃಪ ಬೇ- ।
ಸರಿಸಿ ರಘುವಿನ ಸರಸ ಗುಣಗಳನರಿತು ಮನಸಿನಲಿ ॥
ಹರುಷದಿಂ ಯುವರಾಜನೆಂಬೀ- ಬಿರುದವಂ ಕೊಟ್ಟವನ ಮನ್ನಿಸಿ ।
ಧರೆಯ ಪಾಲನವನ್ನು ಮಾಡಲ್ಕವನ ತೊಡಕಿಸಿದ. । ॥ ೩೫ ॥

ವನಜದಿಂ ಪೊಸದಾದ ಬೇರೆ । ವನಜದೆಡೆಯುಲಿ ಮೆಲ್ಲ ಮೆಲ್ಲನೆ ।
ಬನದ-ಸಿರಿ ಗುಣಲೋಭದಿಂದಲೆ ಪೋಪುವಂದದಲಿ ॥
ಮನುಜರೊಡೆಯನ ರಾಜ್ಯಲಕ್ಷ್ಮಿಯು । ಘನಗುಣಾನ್ವಿತನಾದ ರಾಜನ- ।
ತನುಜ ನಾಶ್ರಯುವನ್ನು ಕ್ರಮದಿಂ ಮಾಡಲೆಸಗಿದಳು. ॥ ೩೬ ॥
ಎರಲ ಸಾರಥಿಯಿಂದ ವಹ್ನಿಯು, ತೆರಳೆ ಧಾರಾಧರವು ಸೂರ್ಯನು, ।
ಸುರಿಯೆ ಮದಜಲ ಕರಿಯು, ದುರ್ಧರ ವಾಗುವಂದದಲಿ ॥
ಪರಮ ವಿಕ್ರಮದಿಂದ ಕೂಡಿದ । ತರುಳರಘುವಿನ ನೆರವು ದೊರೆಯುಲು ।
ಧರೆಯ ಪಾಲನು ಧಾರುಣಿಗೆ ದುರ್ಧರ್ಷನಾಗಿಹನು. ॥ ೩೭ ॥
ಸರಸ ವಾದೇಕೋನ-ಶತ ಮಿತಿ । ತುರಗ-ಮೇಧಗಳನ್ನು ಹರುಷದೆ ।
ಸುರರ ಪತಿಯುಂತಸಮ ಬಲಯುತನಾದ ನರಪತಿಯು ॥
ಪರರ ತೊಡರುಗಳಿಲ್ಲದಲ್ಲೀ । ತರುಣ ತರುಳನ ನೆರವಿನಿಂದಲೆ ।
ಚರಿಸಿದನು ನಿರ್ವಿಘ್ನತನದಿಂ ಧನ್ಯನೆನಿಸಿದನು. ॥ ೩೮ ॥
ಉಳಿದ ಹಯುಮೇರಿಧವನು ಮಾಡ- ಲ್ಕಿಳೆಯ ಪಾಲನು ಮುಖದ ಕುದುರೆಯು- ।
ನಿಳೆಯ ಮೇಲ್ಬಿಟ್ಟದರ ಕಾವಲಿಗಟ್ಟಿ ಕೊಟ್ಟಂಥ ॥

ಪಲವು ನೃಪತಿಗಳೆದುರುನಿಂತಿರೆ । ಮುಳಿದ ಶಕ್ರನು ಗುಪ್ತರೂಪದೆ ।
ತಿಳಿಯದಂತಾ ವಾಜಿಯುನ್ನಪಹರಣ ಮಾಡಿದನು. ॥ ೩೯ ॥
ಕ್ರತುವಿನಶ್ವವು ಗುಪ್ತವಾಗ- । ಲ್ಕತಿಶಯಚ್ಚರಿಯೊಳಗೆ ರಾಜನ- ।
ಸುತನ ಸೈನ್ಯವು ಮುಳುಗಿ ಮುಂದಿನ ಗತಿಯ ಕಾಣದಿರೆ ॥
ಬತ! ವಸಿಷ್ಠನ ಧೇನು "ನಂದಿನಿ" । ಪಥದೆ ಪ್ರಾರಬ್ಧಾನುಸಾರವೆ ।
ಕುತುಕದಿಂದೈತರುವದನು ರಘುಪತಿಯು ನೋಡಿದನು. ॥ ೪೦ ॥

ವಂದನೀಯ ನೃಪೇಂದ್ರನಂದನ- । ನಂದು ಸುರಭಿಯ ನಂದಿನಿಯ ಪದ ।
ವಂದಿಸಿದ ಮೇಲವಳ ಸಲಿಲದೆ ಕಣ್ಗಳನು ತೊಳೆಯೆ ॥
ಸಂಧಿಸಿತು ತತ್ಪುಣ್ಯಯೋಗದೆ । ಚಂದವಾದಪರೋಕ್ಷ ದೃಷ್ಟಿಯು ।
ಸುಂದರಾಂಗನಿಗಂದು ಸರ್ವವು ತೋರಹತ್ತಿದುದು ॥ ೪೧ ॥

ಪೂಡಿಸಿದ ಪೊಂದೇರಿನಲಿಯಾ- । ರೂಢನಾಗಿರುವಂಥ ಶಕ್ರನು ।
ಜೋಡುರಶ್ಮಿಗಳಿಂದ ಯಜ್ಞದ ತುರಗವನು ಬಿಗಿಸಿ ॥
ಮೂಡಣದ ದಿಗ್ಭಾಗದಿಂದವ- । ನೋಡಿ ಪೋಪುವದನ್ನು ಕುವರನು ।
ನೋಡಿದನು "ನಂದಿನಿ"ಯು ಕೃಪೆಯಿಂ ಕೊಟ್ಟ ದಿಟ್ಟಿಯಲಿ ॥ ೪೨ ॥

ಹರಿತವರ್ಣದ ತುರಗಗಳ ಮೇಣ್- । ಚರಿಸದಿರುವಂಥಕ್ಷಿ-ಪಕ್ಷದ ।
ಕುರುಹಿನಿಂದಿವನಿಂದ್ರ ತಾನಾಗಿರುವನೆಂದರಿತು ॥
ಸರಸ ಘನಗಂಭೀರರವದಿಂ । ಕರೆದು ನಿಲ್ಲಿಪ ತೆರದೆ ನರಕೇ- ।
ಸರಿಯ ತರುಳನು ನುಡಿದನೀಪರಿ ವಚನವನು ಹರಿಗೆ ॥ ೪೩ ॥

ಕ್ರತುವನುಂಬುದರಲ್ಲಿ ನೀನೇ । ಪ್ರಥಮದಲಿ ಪರಿಗಣ್ಯನೆಂದುರೆ ।
ಬತ! ಮನೀಷಿಗಳೆಲ್ಲರೂ ಪೇಳುವರು ಶತಮಖನೇ ॥
ಸತತ ಮಖವನು ಚರಿಪನನ್ನಯ । ಪಿತನ ಯಜ್ಞಕೆ ವಿಘ್ನವನು ನೀ- ।
ನಿತರ ಜನರಂತೆಂತು ಮಾಡುತ್ತಿರುವೆನಾನರಿಯೆ! ॥ ೪೪ ॥
ಲೋಕಧರ್ಮಾಚರಣ-ದ್ವಿಜ್ಜನ- । ಘೂಕರನು ದಂಡಿಸುವ ಬಂಧುರ ।
ಲೋಕ-ಬಂಧುವು ನೀನೆಯಲ್ಲವೆ ? ಏಕೆ ಯೀಪರಿಯ ॥
ಕಾಕುತನದಿಂ ವಿಘ್ನಮಾಡುವೆ? । ಲೋಕನಾಥನೆ ನೀನು ಮುನಿದರೆ ।
ಸಾಕು, ಕರ್ಮದ ಕಥೆಯೆ ತೀರಿತು ಕೇಳುವವರಾರು? ॥ ೪೫ ॥
ವೇದ-ಮಾರ್ಗವನರಿತು ಪರರಿಗೆ । ಹಾದಿಯನು ತೋರ್ಪಂಥ ದಿವಿಜರು ।
ಭೇದವಿಲ್ಲದೆ ನಿಂದ್ಯಕೃತ್ಯವನೆಂತು ಮಾಡುವರು? ॥
ಆದಕಾರಣ ಮಖದ ಹಯವನು । ಬೋಧ-ರೂಪನೆ ಬಿಟ್ಟು ನಿನ್ನಯ ।
ಪಾದ-ಕಿಂಕರನನ್ನು ಪಾಲಿಪುದೆಂದು ಕೋರುವೆನು. ॥ ೪೬ ॥

ರಘುವಿನುತ್ತಮ ವಾಣಿಯನು ನಸು। ನಗುತಲಿಂದ್ರನು ಕೇಳಿ ರಥ ಹಿಂ-।
ದೆಗಿಸಿ ಗಗನದ ಪಥದೆಯಾಗಲೆ ಧರೆಯ ಕಡೆಗಿಳಿಸಿ ॥
ಸುಗುಣ ಸುಂದರನಾದ ರಾಜನ। ಮಗನ ಮೊಗವನು ನೋಡಿ ಕಿಂಚಿತ್।
ಬಗೆಯುಗೊಂಡವನಿಂತು ಸಂತಸದಿಂದ ಪೇಳಿದನು ॥ ೪೭ ॥

ನೀನು ಪೇಳಿದ ಮಾತುಗಳು ಸಲೆ। ನೂನವಿಲ್ಲದೆ ಸತ್ಯವಿರ್ದೊಡೆ।
ಮಾನಿತನೆ ಮದ್ಯಶದ ಹಾನಿಯನೆಂತು ಸಹಿಸುವೆನು ॥
ಮಾನವೇಂದ್ರನು ಯಜಿಸಿ ಯೆನ್ನಸ-। ಮಾನ ಯಶವನುಗಳಿಸಿ ಯೆನ್ನಪ-।
ಮಾನ ಮಾಡುವನೆಂದು ಹಯವನು ಹರಣ ಮಾಡಿಹೆನು ॥ ೪೮ ॥

ಹರಿಯನಾಮಸ್ಮರಣ ಮಾತ್ರದೆ। ಪರಮ ಪುರುಷೋತ್ತಮನ ಬೋಧವು।
ಹರನ ಪೆಸರವ ಕೊಳ್ಳಲಾತ್ರ್ಯಂಬಕನ ಜ್ಞಾನವದು ॥
ನರರು ಶತಮುಖನೆಂದು ಪೇಳಲು। ಸುರರ ಪತಿಯಾದೆನ್ನಜ್ಞಪ್ತಿಯು।
ಬರುವದಲ್ಲದೆ ಪರರಿಗೆಂತೀ ಶಬ್ದಸಂಜ್ಞೆಗಳು ? ॥ ೪೯ ॥

ಮಗುವೆ ತವಪಿತನಶ್ವವನು ನಾಂ। ಜಿಗಿದು ಕಪಿಲನ ತೆರದೆ ಯೊಯ್ವೆನು।
ಸಿಗದು ನಿನಗಿದು ಪುಸಿಯ ಶ್ರಮುವನ್ನುಳಿದು ತ್ವರಿತದಲಿ ॥
ಸುಗಣನೇ ಪೋಗಿನ್ನು ಸುಮ್ಮನೆ। ಸಗರ ಸುತರಾಪದ್ಗಳರಿಸದೆ।
ನಗರದೊಳು ಸುಖದಿಂದ ಬಾಳುವೆ ಜಗಳದಿಂದೇನು ? ॥ ೫೦ ॥

ಕೇಳಿಯೀಪರಿ ವಾಣಿಯನುದಂ-। ಭೋಳಿಧರನಿಗೆ ಭೀತಿಯಿಲ್ಲದೆ।
ಪೇಳಿದನು ರವಿಕುಲದ ತಿಲಕನು ಮಗುಳಿ ಯುತ್ತರವ ॥
ಕೇಳು ನನ್ನನು ಜಯಿಸದೇ ನೀ-। ನಾಳ್ತನವನು ಬಳಿಸದಿರು ಬೇ-।
ಗೇಳು ಶಸ್ತ್ರವ ಧರಿಸಿ ಕಾಳಗದಲ್ಲಿಯೆದುರಾಗು ॥ ೫೧ ॥

ಹರನು ತ್ರಿಪುರಾಸುರನ ಸಮರದ। ಪರಮ ದಾರುಣ ಸಮಯದಲಿ ತಾಂ-।
ಧರಿಸಿದಂಥಾಲೀಢ ಬಗೆಯನು ತಾಳಿ ಸ್ಥಿರಗೊಂಡು ॥
ಕರದೆ ಚಾಪವಕೊಂಡು ಭರದಿಂ। ಶರ ಶರಾಸನದಲ್ಲಿ ಪೂಡಿ-।
ರ್ದರಸು-ಮಗ ಸನ್ನದ್ಧನಾದನು ಬಳಿಕ ಮೊಗವೆತ್ತಿ; ॥ ೫೨ ॥

ಭರದೆ ಹದನಾದಂಥ ಶರ ಬೊ-। ಬ್ಬಿರಿದು ರಘುಪತಿಯಾಗ ಸುರಪತಿ-।
ಯುರಕೆ ಗಾಯ್ವಡೆವಂತೆ ಬಲದಿಂ ಹೊಡೆಯೆ ವಾಸವನು ॥
ಕೆರಳಿ ಮೇಘಾವಳಿಯ ಪೋಲುವ। ಸರಸ ಕಾರ್ಮುಕದಲ್ಲಿ ತಪ್ಪದ।
ಪರಮ ಹದನಾದಂಥ ಮಾರ್ಗಣವನ್ನು ಪೂಡಿದನು. ॥ ೫೩ ॥

ಕಿಡಿಗಳನು ಕಣ್ಣಿಂದ ಸುರಿಸುತೆ। ಗಡನೆ ಕೂರ್ಗಣೆಯನ್ನು ವಜ್ರಿಯು।
ಬಿಡಲು ಸಿಡಿಲಿನ ತೆರದಿ ಭೀಕರ ಶಬ್ದವನು ಮಾಡಿ ॥

ಪೊಡವಿಯೊಡೆಯನ ತನಯುನೆದೆಯಲಿ। ಬಡಿದು ರಂಧ್ರವ ಮಾಡಿಯಲ್ಲಿಯು।
ಬಿಡದೆ ಬಿಸಿ ಬಿಸಿ ರುಧಿರವನ್ನುರೆ ಕುಡಿಯುಲೆಸಗಿತದು. ॥ ೫೪ ॥
ಹರಿಯುಪನಿತೆಯು ಹಸ್ತ-ರಾಗದ। ಗುರುತಿನಿಂ ಪರಿಶೋಭಿಸುವ ಮೇ-।
ಣಿರಿಗು ಕರಿವರನನ್ನು ಸೃಣಿಯಿಂ ಗಟ್ಟಿಯಾದಂಥ॥
ಕರದೆ ಮೆರೆಯುವ ಹರಿಯ ಭುಜದಲಿ। ಕೊರೆದ ಪೆಸರಿನ ತನ್ನ ಶರವನು।
ವರಕುಮಾರನು ಪೂಣ್ದು ಬಿಟ್ಟನಿದೆಂತು ಪೌರುಷವೊ! ॥ ೫೫ ॥
ನವಿಲುಗರಿ ಹಚ್ಚಿರ್ದಬಾಣದೆ। ದಿವಿಜ-ಪತಿ ಸು-ವಿಶಾಲ ತೇರಿನ।
ಪವಿಯ ಧ್ವಜವನು ಕಡಿದು ರಘುಪತಿ ಚಲ್ಲೆ ವಾಸವನು॥
ದಿವದ ಸಿರಿ ಮಸ್ತಕದ ಕಬರಿಯ। ಯುವನು ಪಿಡಿದೆಳೆದಂತೆ ಭಾವಿಸಿ।
ಜನದೆ ಕಾಲಾನಲನ ತೆರದಲಿ ರೇಗಿ ಕೂಗಿದನು. ॥ ೫೬ ॥
ಮೊಳೆತ ರೆಕ್ಕೆಗಳಿಂದ ಕೂಡಿದ। ಪಲವು ಸರ್ಪಗಳಲ್ಲಿ ಭೀಕರ-।
ಕೊಳಗುಳವು ನಡೆದಿರುವದೇನೆಂಬತೆ ಕಣ್ಗೆಸೆದು ॥
ಬಳಿಕ ರಘುಪತಿ ಮೇಣ್ಮಹೇಂದ್ರನ। ಮುಳಿದ ಸೈನಿಕರಲ್ಲಿ ದಾರುಣ।
ಕಲಹ ಜಯದಭಿಲಾಷೆಯಿಂದಲೆ ಬಿಡದೆ ಸಾಗಿದುದು. ॥ ೫೭ ॥
ಪ್ರಲಯ ಕಾಲದ ವೃಷ್ಟಿಯಂತೆಯೆ। ಜಲದವಾಹನನಾಗ ಕೋಲ್ಗಳ।
ಮಳೆಯ ಕರೆದೊಡೆ ಬಲದೆ ಮೀರಿರ್ದಿಳೆಯ ಪತಿ-ಸುತನ॥
ಬಲವ ತಗ್ಗಿಸದಿರ್ದನಾತನು। ಜಲದದಿಂ ಪುಟ್ಟಿರ್ದಸಿಡಿಲದು।
ಜಲದ ವರ್ಷಣದಿಂದ ಶಮಿಸಲ್ಕಾಗದಿರ್ದಂತೆ ॥ ೫೮ ॥
ಸರಸ ಹರಿಚಂದನವ ಪೂಸಿದ। ಹರಿಯ ಕರದಲ್ಲಿರ್ದ ಚಾಪದ।
ಪರಮ ದೃಢತರವಾದ ಮೌರ್ವಿಯನಾಗ ರಘುಪತಿಯು॥
ಭರದೆ ಯರೆಚಂದ್ರಮನ ಪೋಲುವ। ಶರದೆ ಕತ್ತರಿಸಲ್ಕೆ ಭೀಕರ।
ಶರಧಿ-ಮಂಥನ-ಕಾಲದಲ್ಲಿಯ ಧ್ವನಿಯು ಪುಟ್ಟಿದುದು ॥ ೫೯ ॥
ಒಗೆದು ಚಾಪವನಾಗ ಸುರಪತಿ। ಯುಗದ ಪಕ್ಷ-ಚ್ಛೇದನ-ಕ್ಷಮ।
ಝಗನೆ ಬೆಳಗುವ ತನ್ನ ವಜ್ರಾಯುಧವನಬ್ಬರದೆ॥
ಜಗಳದಲ್ಲೆದುರಾದ ಕಲಿಭಟ। ರಘುವನೀಕ್ಷಣದಲ್ಲಿ ಮರ್ದಿಸಿ।
ಮುಗುಳಿ ಜೀವಿಸದಂತೆ ಮಾಡುವೆನೆಂದು ನೆಗಹಿದನು. ॥ ೬೦ ॥
ತ್ವರದೆ ವಜ್ರಾಸ್ತ್ರವನು ವಜ್ರಿಯು। ತರುಳನುರದೆಡೆಯಲ್ಲಿ ಹೊಡೆಯಲು।
ಧರೆಗೆ ಯಾತನು ಸೈನಿಕರ ಕಂಬನಿಗಳಿಂ ಕೂಡಿ॥
ಉರುಳಿದನು ಕ್ಷಣಮಾತ್ರದಲ್ಲಿಯೆ। ತೊರೆದು ಮೂರ್ಛೆಯ ತನ್ನ ಪಕ್ಷದ।
ನರರ ಹರುಷದೆ ಕೂಡಿ ತಟ್ಟನೆ ಯೆದ್ದನಬ್ಬರದೆ ॥ ೬೧॥

ಮೂರು ಲೋಕಗಳಲ್ಲಿ ಗುಣಕಾ- । ಧಾರ ದೊರೆಯುವದೇನು ಸೋಜಿಗ? ।
ಮೂರು ನಯನನು ನರನಿಗಾಹವದಲ್ಲಿ ಯೊಲಿದಂತೆ॥
ಘೋರ ಸಂಗರದಲ್ಲಿ ತಾಳಿದ । ಶೂರ ಕೋಶಲ ದೇಶದೊಡೆಯನ ।
ವೀರ ಪುತ್ರನ ಪೌರುಷಕೆ ವೃತ್ರಾರಿ ಮೆಚ್ಚಿದನು. ॥ ೬೨ ॥

ಗಿರಿಯ ಚೂರ್ಣೀಕರಿಪ ನನ್ನಯ । ಪರಮ ದಾರುಣವಾದ ಶಸ್ತ್ರ- ।
ಕ್ಕುರವ ಕೊಟ್ಟುಳಿದಂಥ ನರವರರನ್ನು ನಾನರಿಯೆ ॥
ಉರು ಪರಾಕ್ರಮಿಯಾದ ನಿನ್ನಲಿ । ನರಪ-ತನಯನೆ ಪ್ರೀತನಾದೆನು !
ವರಿಸು ವರವನು ತುರಗವನ್ನುಳಿದೆಂದನಾ ಹರಿಯು ॥ ೬೩ ॥

ಬಳಿಕ ಪೊಂಗರಿಯಿಂದ ಥಳ ಥಳ । ಹೊಳೆವ ಮಾರ್ಗಣವನ್ನು ಮೆಲ್ಲನೆ ।
ಯಿಳಿಸಿ ಕಾರ್ಮುಕದಿಂದ ಮೂಡಿಗೆಯೊಳಗೆ ಹಾಕಿದನು, ॥
ಬಲನಿಷೂದನನೊಲಿದು ಪೇಳಿದ । ಲಲಿತ ವಚನಗಳಿಂದ ಸಂತಸ- ।
ದಳೆದು ರಘುಪತಿ ವಿನಯದಿಂದುತ್ತರವನಿತ್ತೆಂದ ॥ ೬೪ ॥

ಸತತ ಮಖ-ದೀಕ್ಷೆಯನು ತೊಟ್ಟಿಹ । ಪಿತನ ಹಯವನು ನೀನು ಬಿಡದಿರೆ ।
ಕ್ರತು ಸಮಾಪ್ತಿಗೆ ಬರುವ ಹತಿಯನು ನೀನೆ ದೂರೈಸಿ ॥
ಶ್ರುತಿಗೆ ಸಮ್ಮತವಾಗುವಂದದೆ । ಹಿತದೆ ಪೂರ್ಣತೆಗದನು ಹೊಂದಿಸಿ ।
ಕೃತಿಯು ತಾನೆಂದೆನ್ನ ಜನಕನಿಗೆನಿಸು ಶಚಿಪತಿಯೆ ॥ ೬೫ ॥

ಗಿರಿಶನಂಶಾಂಶದಲಿ ಜನಿಸಿದ । ಪರಮ ಪಾವನನಾದ ಕೋಸಲ- ।
ಧರೆಯ ಪಾಲನಿಗೆಲ್ಲ ಸಂಗತಿಯನ್ನು ವಿಸ್ತರದೆ ॥
ತ್ವರಿತದಲಿ ತವ ಚರರ ಮುಖದಿಂ- । ದರುಹಿಸುವೆ ನೀನೆಂದು ಕರುಣಾ- ।
ಶರನೆ ವಿನಯದೆ ಬೇಡಿಕೊಂಬೆನು ಮನ್ನಿಸೆಂದೆನಲು, ॥ ೬೬ ॥

ಹಾಗೆ ಯಾಗುವದೆಂದು ನುಡಿದತಿ- । ವೇಗದಿಂ ಕುಳಿತವನು ರಥದಲಿ ।
ಸಾಗಿದನು ಸುರಪತಿಯು ಸ್ವರ್ಗಕೆ ಬಂದ ದಾರಿಯಲಿ ॥
ಯಾಗದಶ್ವವು ಪೋಯಿತೆಂದು- - ದ್ವೇಗದಿಂ ರಘುಪತಿಯು ಮಂದನು- ।
ರಾಗದಿಂ ಪಟ್ಟಣಕೆ ಹೊರಟನು ಪರಿಜನರ ಕೂಡ ॥ ೬೭ ॥

ಹರಿಯು ವಾರ್ತಾಹರನ ಮುಖದಿಂ- । ದರಿತು ಸಂಗತಿಯನ್ನು ಪೊದಲಿಗೆ ।
ಧರೆಯ ಪಾಲನು ಮಗನ ದಾರಿಯ ನೋಡಿಕೊಂಡಿರ್ದು ॥
ಬರಲು ತರುಳನು ಭರದೆ ಬಿಗಿದ- । ಪ್ಪಿರದೆ ಯಾತನ ಸರಸ ಮೊಗವನು ।
ಪರಮ ಹರುಷದೆ ನೋಡಿ ಚುಂಬಿಸಿ ಸೌಖ್ಯಹೊಂದಿದನು. ॥ ೬೮ ॥

ಭಾನು ವಂಶೋದ್ಭವ ದಿಲೀಪನು । ಶಾನೆ ಚರಿಸಿರ್ದಶ್ವ-ಮಖದೇ- ।
ಕೋನ ಶತಮಿತಿ ನಾಕಸೋಪಾನಗಳನಳವಡಿಸಿ ॥

ಪ್ರಾಣಗತಿಸಿದ ಮೇಲೆ ಸ್ವರ್ಗಕೆ। ಮಾನವೇಂದ್ರನು ಸಹಜವಾಗಿಯೆ।
ತಾನು ಪೋಗುವದಕ್ಕೆ ಮಾರ್ಗವ ಮಾಡಿ ಬಿಟ್ಟಹನು ॥ ೬೯ ॥
ಮನಸಿನಿಂ ವಿಷಯಂಗಳನ್ನುರೆ। ಮನುಜನಾಥನು ತೊರೆದು ತನ್ನಯ।
ತನುಜನಿಗೆ ವಿಧಿಯಿಂದ ಪಟ್ಟವ ಕಟ್ಟಿ ಮುನಿಯಂತೆ ॥
ವನಕೆ ವಾನಪ್ರಸ್ಥನಿಯಮವ। ಘನತೆಯಿಂ ಚರಿಸಲ್ಕೆಯಿನಕುಲ-।
ಜನಪರಂತೆಯೆ ಹೊರಟು ಹೋದನು ಪತ್ನಿಯಿಂ ಕೂಡಿ ॥ ೭೦ ॥

೪ನೆಯ ಸರ್ಗವು.

ಗುರುದಿಲೀಪನ ಕರದೆ ಸುಂದರ। ಭರತಖಂಡದ ಸರ್ವರಾಜ್ಯವು।
ದೊರೆಯಲಾರಘುವರನು ತೇಜೋವಿಭವದಿಂ ಕೂಡಿ ॥
ಇರುಳಿನೊಳು ಹುತವಹನು ತರಣಿಯ। ಕಿರಣದುಷ್ಣತೆಯನ್ನು ತನ್ನಲಿ।
ಧರಿಸಿ ಧರೆಯಲಿ ಮೆರೆವ ತೆರದಲಿ ಪೆರ್ಚಿ ಮಿರುಗಿದನು ॥ ೧ ॥
ಧರೆಯ ಧುರವನ್ನಿರಿಸಿ ರಘುವಿನ। ಶಿರದ ಮೇಲಾರಣ್ಯವಾಸಕೆ।
ತೆರಳಿದನು ತ್ವತ್ಪಿತನು ಪರಮೋಲ್ಲಾಸದಿಂದೆಂದು ॥
ಅರಿತು ನರರವರುರದೆ ಹೊತ್ತಿದ। ದುರುಳ ಮಾತ್ಸರ್ಯಾಗ್ನಿಯತಿಶಯ।
ಭರದೆ "ಧಗಧಗ" ಮೀರಿ ಮೇರೆಯನುರಿಯ ಹತ್ತಿದುದು ॥ ೨ ॥
ಎತ್ತಿ ನೇತ್ರಂಗಳನು ಮೇಲಕೆ। ಸೋತ್ತಮಾಂಗನ ಪ್ರಜೆಗಳೆಲ್ಲರು।
ಚಿತ್ತದತ್ಯಾಸಕ್ತಿಯಿಂ ತಮ್ಮರಸನೇಳ್ಗೆಯನು ॥
ಎತ್ತರದ ಸುರಪತಿಯ ಧ್ವಜವನು। ಮುತ್ತಿಪರ್ಜನ್ಯವನು ಬಯಸುವ।
ಮೊತ್ತದಂತೆಯೆ ನೋಡುತಿರುವರು ತೃಪ್ತಿಹೊಂದದಲೆ ॥ ೩ ॥
ಪರಮ ವಿಸ್ತೃತವಾದ ಗುರುವಿನ। ಸರಸರಾಜ್ಯದ ಭಾಗವನು ಮೇ-।
ಣುರಿದು ಬೀಳುವ ತನ್ನ ರಿಪುಗಳ ಶಿರಗಳನು ತರೆದು ॥
ಹಿರಿದು ರಾಷ್ಟ್ರಗಳನ್ನು ಯುಗಪತ್। ದ್ವಿರದ ಗಾಮಿಯು ಕೊಂಡು ವೈಭವ-।
ಗಿರಿಯ ಶಿಖರವನಡರಿ ಹರಿಯಂತೆಸೆದು ತೋರಿದನು ॥ ೪ ॥
ಕಮಲ-ಮಿತ್ರನ ಕುಲದೆ ಪುಟ್ಟಿದ। ವಿಮಲಕೀರ್ತಿಯ ರಾಜರಾಜನ।
ಕಮಲ-ಮುಖದೆಡೆಯಲ್ಲಿ ತೋರುವ ಕಾಂತಿ-ಮಂಡಲದೆ ॥
ಕಮಲೆ ಕಣ್ಮರೆಗಿರ್ದು ಸಂತತ। ಕಮಲಛತ್ರವ ಪಿಡಿದು ತಾನತಿ-।
ಮಮತೆಯಿಂದುಪಚರಿಪಳೇನೆಂಬಂತೆ ತೋರಿದಳು ॥ ೫ ॥
ಎಲ್ಲ ಕಾಲಗಳಲ್ಲಿ ಸರಸಿಜ-। ದಲ್ಲಿ ಜನಿಸಿದ ಬ್ರಹ್ಮ-ದೇವನ।
ನಲ್ಲೆ ಸರಸತಿ-ತಾಯಿ ಕೋಸಲ-ದೇಶದಧಿಪತಿಯ ॥

ಬಲ್ಲ ಸ್ತುತಿ-ಪಾಠಕರ ವದನಗ- । ಳಲ್ಲಿ ವಾಸವ ಮಾಡಿಕೊಂಡೀ- ।
ಫುಲಲೋಚನನಾದ ರಘುವಿನ ಹಾಡಿ ಹರಸುವಳು ॥ ೬ ॥
ವಸುಗಳನ್ನೊಡಲಲ್ಲಿ ಧರಿಸಿದ । ವಸುಧೆಯುನ್ನೀ ಮೊದಲೆ ಪುಷ್ಕಳ ।
ರಸಿಕ-ಬಲಸಯಧರ್ಮಯುತ ಮನ್ವಾದಿ ನೃಪತಿಗಳು ॥
ಕಸುವಿನಿಂದಾಳಿರ್ದರೂ ಗಡ । ಮಿಸುಪ ರಘುವರನಲ್ಲಿ ಯೀಕೆಯು ।
ಪೊಸದಿದೆನ್ನುವ ಪ್ರೇಮದಿಂದನುರಕ್ತೆ ಹೊಂದಿಹಳು ॥ ೭ ॥
ಬಿಂಕಿನಿಂದರಿಗಳನು ಬಿಡದಲೆ । ಬಂಕಿಸಿದ ರಘುಪತಿಯು ತಪ್ಪಿಗೆ ।
ಶಂಕೆಯಿಲ್ಲದೆ ತಕ್ಕ ಶಾಸನವನ್ನು ನಿರ್ಣಯಿಸಿ ॥
ತೆಂಕಣದ ತಂಗಾಳಿ ಜನರಿಗೆ । ಸೊಂಕಿಸುಖವನು ಕೊಡುವ ತೆರದ- ।
ಲ್ಲಂಕಿತ ಪ್ರಜೆಗಳಿಗೆ ತೋಷವನಿತ್ತು ಪಾಲಿಪನು ॥ ೮ ॥
ಗುರುದಿಲೀಪನ ಶ್ರೇಷ್ಠ ಗುಣಗಳ- । ನರಿತು ಸ್ಮರಿಸುತ್ತಿರುವ ಪ್ರಜೆಗಳು ।
ನರಪರಘುವಿನ ಮೀರಿಮಿಕ್ಕುವ ಗುಣಗಳನು ಕಂಡು ॥
ಸುರಭಿಯುತ ಸಹಕಾರಿ ಸುಮವನು । ವರ ಫಲೋದ್ಗಮದಿಂದ ಕ್ರಮದಲೆ ।
ನರರು ಮರೆಯುವ ತೆರದೆಯಾತನ ಮರೆತು ಬಿಟ್ಟಿಹರು ॥ ೯ ॥
ಖ್ಯಾತಿಯನು ಪಡೆದಂಥ ರಘುವಿನ । ನೀತಿಕೋವಿದರಾದ ಸಚಿವರು ।
ಹೇತು ಮೇಣುಪಪತ್ತಿಪೂರ್ವಕ ರಾಜಕಾರ್ಯಗಳ ॥
ರೀತಿಯನ್ನಿರ್ದ್ವಿಧದೆ ಪೇಳ- । ಲ್ಯಾತನಾಗಲೆ ಧರ್ಮಮಾರ್ಗವೆ ।
ಭೀತಿಯಿಲ್ಲದೆ ಗೃಹಿಸುವನು ಕೌಟಿಲ್ಯವನು ಬಿಟ್ಟು ॥ ೧೦ ॥
ನವದಿವಾಕರನಂತೆ ಮಿನಗುವ । ನವಮಹೀಪತಿಯಾಳುತಿರೆ ಯಭಿ- ।
ನವವೆಸರ್ವವದಾಗಿ ತೋರಿತು ಪಂಚಭೂತಗಳು ॥
ದಿವದ ವೈಭವವನ್ನೆ ತಮ್ಮಲಿ । ಜವದೆ ತಳೆದಿರುವಂತೆ ಶೋಭಿಸಿ ।
ಯವನಿಯಲ್ಲಿಯ ಜನರ ಮನಕಾನಂದ ಗೊಟ್ಟಿಹವು ॥ ೧೧ ॥
ಹದನ-ಗದಿರನು ಸರ್ವಜನರಿಗೆ । ಕುದಿಯನೀಯುವನೆಂದು ತಪನನು ।
ಸುಧೆಯ ಕಿರಣನು ಮೋದಗೊಡುತಿಹನೆಂದು ಚಂದ್ರಮನು ॥
ಸದಮಲಾತ್ಮನು ಪ್ರಜೆಗಳನು ಬಹು । ವಿಧದೆ ರಂಜಿಪನೆಂದು ಸಾರ್ಥವೆ ।
ಚದುರ ರವಿಕುಲತಿಲಕ ರಘುವಿಗೆ ರಾಜನೆಂಬುವರು ॥ ೧೨ ॥
ಶ್ರವಣ-ಮಂಗಲ-ಕೀರ್ತಿಯುಳ್ಳೀ- । ಭುವನಸುಂದರನಾದ ರಘುವಿನ ।
ಶ್ರವಣದೆಡೆವರೆಗಕ್ಷಿಯಿದೊಡೆ ಸೂಕ್ಷ್ಮಕಾರ್ಯಗಳ ॥
ವಿವರಿಸುವ ಸಚ್ಛಾಸ್ತ್ರದಿಂದು- । ದ್ಭವಿಸಿದಂತಹ ದೃಷ್ಟಿಯಿಂದಲೆ ।
ಯಿವನು ಚಕ್ಷುಷ್ಮಂತನೆನಿಸುವನಲ್ಲದಿನ್ನೇನು? ॥ ೧೩ ॥

ಅರಿಗಳನು ಮುರಿದೊತ್ತಿ ಮೂಲಿಗೆ । ಪರಮ ವಿಕ್ರಮದಿಂದಲಾಳುವ ।
ಧರೆಯಪಾಲನ ಮನಸು ಸುಸ್ಥಿರತೆಯನು ಹೊಂದಿರಲು ॥
ನರರ ಮನಕಾಲ್ಹಾದವೀಯುವ । ವರಶರತ್ತಿನ ಸರಸಿಜಂಗಳ ।
ಸಿರಿಯು ನರಪತಿಯಪರ ಲಕ್ಷ್ಮಿಯ ತೆರದೆ ತೋರಿದುದು ॥ ೧೪ ॥
ಜಲಧರನು ಕರೆಕರೆದು ಮಳೆಯನು । ತೊಲಗೆ ನಿರ್ಮಲವಾದ ನಭದಲಿ ।
ಜಲಜ-ಮಿತ್ರನು ಪ್ರಖರಕರದಿಂ ಬೆಳಗುವಂದದಲಿ ॥
ಇಳೆಯ ಪಾಲನು ತನ್ನ ರಿಪುಗಳ । ಬಲದ ತೊಡರುಗಳನ್ನು ನುಣ್ಣಗೆ ।
ಕಳೆದು ದುಃಸಹವಾದ ತೇಜದ ಕಳೆಯ ತಳೆದಿಹನು ॥ ೧೫ ॥
ಅಗುರ-ವರ-ಕಾರ್ಮುಕವು ವರ್ಷಾ- । ಸಮಯದಲಿ ಹೊರದೆಗೆದು ಮಳೆಯನು ।
ಮಮತೆಯಿಂ ಕರೆಕರೆದು ಪ್ರಜೆಗಳ ಹಿತವ ಮಾಳ್ಪಂತೆ ॥
ಅಮಮ! ಕೋಸಲ-ಧರೆಯಪತಿ ಸಂ-। ಭ್ರಮದೆ ತನ್ನಯ ವಿಜಯಹೊಂದುವ ।
ವಿಮಲಧನು ಹೊರದೆಗೆದು ಪ್ರಜೆಗಳ ಹಿತವಗಳಿಸುವನು ॥ ೧೬ ॥
ಬಿಳಿಯ ಕಮಲದ ಸುಮದ ಛತ್ರವ । ಬೆಳೆದ ಕಾಶದ ತೃಣದ ಚಮರವ ।
ತಳೆದು ಶರದೃತು ಬಂದು ಭೂಮಂಡಲದೆ ನಟಸಿದೊಡೆ ॥
ಇಳೆಯ ಪಾಲನ ಪರಮಸೋಜ್ವಲ । ಕಳೆಯ ಪೋಲುವದೆಂತೋ ಕ್ಷುಲ್ಲಕ ।
ಮೊಲಕೆ ನಿಜ ವಿಕ್ರಮದೆ ಪುಲಿಯನು ಗೆಲಿಯಲಳವಹುದೆ? ॥ ೧೭ ॥
ಕಮಲವನು ಧಿಕ್ಕರಿಪ ರಾಜನ । ವಿಮಲತೇಜೋ-ವಿಭವ ಪರಿವೃತ ।
ಸಮತೆಯಿಂ ಮಿಗೆ ಕೂಡಿದಂತಹ ಸರಸ ಸು-ಮುಖವನು ॥
ಕುಮುದ ಬಾಂಧವನನ್ನು ನೋಡುವ । ಮಮತೆಯಿಂದೆಡೆ ಬಿಡದೆ ಪ್ರಜೆಗಳು ।
ಕಮಲನಯನಗಳಿಂದ ಪ್ರೇಮೋತ್ಕರದೆ ನೋಡುವರು ॥ ೧೮ ॥
ಗಗನದಲಿ ಝಗಝಗಿಸಿ ಬೆಳಗುವ । ಭಗಣಗಳು ಮೇಣ್ಸರಗಳಲ್ಲಿಯ ।
ಸ್ವಗುಣದಿಂ ಕಣ್ಗಂದವೀಯುವ ಪುಂಡರೀಕಗಳು ॥
ಒಗೆದ ಬಟ್ಟೆಗಳಂತೆ ಯತಿಶಯ । ಸೊಗೆಯಿಸುವ ಕಲಹಂಶಗಳು ಗಡ ।
ಸುಗುಣರಾಜನ ಯಶದ ಭಾಗವನಾಂತು ಶೋಭಿಪವೋ? ॥ ೧೯ ॥
ಶಾಲಿಪೈರುಗಳನ್ನು ಕಾಯುವ । ಬಾಲೆಯರು ಬೆಳೆದಂಥ ಕಬ್ಬಿನ ।
ಸಾಲಿನಲಿ ಸಾಲ್ಗೊಂಡು ಕುಳಿತಾನಂದ ಭರದಿಂದ ॥
ಬಾಲತನದಾರಂಭದಿಂ ನರ- । ಪಾಲರಾಗ್ರಣಿಯಾದ ರಘುವಿನ ।
ಲೀಲೆಗಳನ್ನುಲ್ಲಾಸದಿಂ ಸುಸ್ವರದೆ ಪಾಡುವರು ॥ ೨೦ ॥
ಮುನಿಗಳಾಗ್ರಣಿಯಾದ ಗಸ್ತ್ಯನು । ಜನಿಸಿದಾಕ್ಷಣದಿಂದ ಧರೆಯೊಳು ।
ವನಗಳತಿಶಯ ನಿರ್ಮಲತ್ವವ ತಾಳ್ದು ಪೊಳೆವಂತೆ ॥

ಜನಪ ರಘುವಿನ ಜನುಮದಿಂದಲೆ। ಜನಪನರಿಗಳ ಮನಗಳಭಿಭವ।
ಜನಿಸುವದು ತಮಗೆಂದು ಮಾಲಿನ್ಯವನು ಹೊಂದಿದವು ॥ ೨೧ ॥
ಕೋಡುಗಳ ನೊತ್ತುತ್ತೆ ಮೇಲಕೆ। ತೋಡಿ ದಿನ್ನಿಯ ಮೃದವ ಚಿಮ್ಮು-।
ತಾಡುವಂತಹ ಹೋರಿಗಳು ರಘುರಾಜನನು ಕರಿಸಿ ॥
ಕ್ರೀಡೆಯನು ವಿಕ್ರಮದೆ ಸಹಜವೆ। ಮಾಡುತಿಹವೇನೆಂದು ಕೋಸಲ।
ನಾಡಿನಲ್ಲಿಯು ಜನರ ಕಣ್ಗಳಿಗೆಂದ ವೀಯುವವು ॥ ೨೨ ॥
ಏಳು ಪರ್ಣಗಳುಳ್ಳ ತರುಗಳ। ಜೋಲು ಬಿದ್ದಿರುವಂಥ ಸುಮಗಳ।
ಗಾಳಿಯಿಂ ತೀವಿರ್ದ ಮದದಂತಿರುವ ಗಂಧವನು ॥
ತಾಳಲಾರದೆ ಸ್ಪರ್ಧೆಯಿಂ ಭೂ-। ಪಾಲನಾನೆಗಳಾಗ ಭರದಿಂ-।
ದೇಳು ಪರಿಯಿಂ ಮದದ ವಾರಿಗಳನ್ನು ಸುರಿಸಿದವು ॥ ೨೩ ॥
ಮಳೆಯ ಕಾಲವು ಪೋಗಿ ಕ್ರಮದಿಂ। ಚಳಿಯ ಸಮಯವು ಬಂದು ಹೊಳೆಗಳ।
ಪುಲಿನಗಳು ತೆರೆದಾಗ ನಿರ್ಮಲವಾಗಿ ಯೊಡಲಿನಲಿ ॥
ಜಲವು ಹರಿಯುತ್ತಿರಲು ಮಾರ್ಗದ। ನೆಲವು ಕಾಠಿಣ್ಯವನು ಧರಿಸ-।
ಲ್ಕಿಳೆಯ ಪಾಲನು ಶತ್ರುವಿಜಯಕ್ಕೆ ಪೋಗಲೆಸಗಿದನು ॥ ೨೪ ॥
ಆಜಿಯಲಿ ರಿಪುದಮನ ಮಾಡುವ। ವಾಜ್ಯದಿಂ ಮಾಹಾರಾಜ ರಾಜನು।
ವಾಜಿ-ನೀರಾಜನದ ವಿಧಿಯನು ಮಾಡಲಾಕ್ಷಣಕೆ ॥
ರಾಜಿಸುವ ಹುತವಹನು ತನ್ನಯ। ತೇಜವೆಂಬುವ ಸವ್ಯಹಸ್ತದೆ।
ಯಾಜಿಯಾದಾ ರಾಜನಿಗೆ ಜಯಶಕುನ ತೋರಿಸಿದನು ಕೊಟ್ಟಹಸು ॥ ೨೫ ॥
ಸರಸ ದುರ್ಗಗಳನ್ನು ಹಾಗೆಯೆ। ಪುರವ ಪೊರೆಯುವದಕ್ಕೆ ರಘುಪತಿ-॥
ಯಿರಿಸಿ ಸೈನಿಕರನ್ನು ಪಿಂತಿನ ಚಿಂತೆಯನು ಬಿಟ್ಟು ॥
ತ್ವರದೆ ಷಡ್ವಿಧ ಬಲವ ಕೂಡಿಸಿ। ಧರೆಯ ಪಾಲನು ಶುಭ ಮುಹೂರ್ತದೆ।
ಹೊರಟನುತ್ಸವದಿಂದ ದಿಗ್ವಿಜಯವನು ಮಾಡಲ್ಕೆ ॥ ೨೬ ॥
ಹರಿಯ ಶೀರ್ಷದ ಮೇಲೆ ಮಂದರ-। ಗಿರಿಯ ಸಂಹತಿಯಿಂದ ಪುಟ್ಟಿದ।
ಸರಸ ತುಂತುರ್ಧ್ವನಿಗಳನು ಪಾಲ್ಗಡಲು ಕರೆದಂತೆ ॥
ನರಪ ರಘುವಿನ ಶಿರದ ಮೇಲಾ-। ಪುರದ ಮುತ್ತೈದೆಯರು ಮೋದದೆ।
ಸುರುಹಿದರು ಸಲೆಲಾಜಿಗಳನವ ಚರಿಸಿ ಮಾರ್ಗದಲಿ ॥ ೨೭ ॥
ಬಳದೆ ಬಲವೈರಿಯನು ಪೋಲುವ। ನಲಿನ ಮಿತ್ರನ ಕುಲದೆ ಜನಿಸಿ-।
ರ್ದಿಳೆಯ ಪಾಲನು ಪೂರ್ವದಿಗ್ವಿಜಯಕ್ಕೆ ಸಾಗಿರಲು ॥
ಪೊಳೆವ ರಾಜನ ಕೇತು ರಿಪುಗಳ। ಬಲವ ಹಳಿಯುವ ತೆರದೆ ಗಾಳಿಗೆ।
ಚಲಿಸಿ "ಫಡ ಫಡ" ಗಾಢ-ಶಬ್ದವ ಮಾಡಿ ತೋರಿದುದು ॥ ೨೮ ॥

ದಾರಿಯಿಂ ಧಾರುಣಿಯ ಪಾಲನ । ತೇರುಗಳು ಸಾಗಿರಲು ಧೂಲಿಯು ।
ಹಾರಿ ಬಾನ್ಗಳದಲ್ಲಿ ಭೂಭ್ರಮ, ಮತ್ತೆ ಧರೆಯಲ್ಲಿ॥
ವಾರಿ-ವಾಹಗಳಂತೆ ತೋರುವ । ವಾರಣಂಗಳು ಚರಿಸಿ ನೇತ್ರಕೆ ।
ಚಾರು ಗಗನದ ಭ್ರಾಂತಿಯನ್ನುರೆಯುಂಟು ಮಾಡಿದವು ॥ ೨೯ ॥
ಮುಂದೆ ದಂಡಾದಿಗಳ ತೇಜವು, । ಹಿಂದೆ ದಂಡಿನ ಕಲಕಲ ಧ್ವನಿ ।
ಹೊಂದಿ ಸೇನಾಹಿನಿ ಪದಗಳಿಂ ಹೊರಟಂಥ ಧೂಲಿಯದು, ॥
ಸ್ಯಂದನಂಗಳು ವಿಂತೆ, ಯಿತೇರ-। ದಿಂದ ನಾಲ್ವಡೆಯಿಂದ ಚಮುಗಳ ।
ಸ್ಕಂಧವೇಸಾಗಿರವದೇನೆನೆ ಕಣ್ಗೆ ತೋರಿದುದು ॥ ೩೦॥
ಸಲಿಲ-ವಿಲ್ಲದ ಮಳಲುನಾಡಿನ । ಸ್ಥಳದೆ ನಿರ್ಮಲ ವಿಪುಲ ಜಲವನು ।
ಹೊಳೆಗಳಲಿ ಕಾಲ್ದಾರಿಯನು ಮೇಣ್ಗಹನ ವಿಪಿನದಲಿ ॥
ಅಳಿಪಿ ಗಿಡಗಂಟೆಗಳ ಮೂಲವ- । ನಿಳೆಯ ಪಾಲನು ದಿವ್ಯಮಾರ್ಗವ ।
ಗಳಿಗಿಯೊಳು ನಿರ್ಮಾಣ ಮಾಡುತ್ತಿಹನು ಬಲದಿಂದ ॥ ೩೧ ॥
ಹರನ ಜಟೆಯಿಂ ಹೊರಟ ಪಾವನ । ಸುರರ ನದಿಯನು ಧರೆಗೆ ತಂದಾ- ।
ವರ ಭಗೀರಥ ನೃಪನ ತೆರದಿಂ ಕೋಸಲಾಧಿಪನು ॥
ಅರಿಗಳನು ಜಯಿಸಲ್ಕೆ ತನಯ । ಪರಮ ದುರ್ಧರವಾದ ಚಮುವನು ।
ಭರದೆ ಮೂಡಣ ಕಡಲಿನೆಡೆಯಲಿಕೊಂಡು ಸಾಗಿದನು. ॥ ೩೨ ॥
ತರುಗಳನು ಮೇಣ್ಫಲಗಳನ್ನುರೆ । ದ್ವಿರದಗಳು ತೆಗೆದೊಗೆದು ಮಾರ್ಗದೆ ।
ಪರಮ ನಿರ್ಭಯದಿಂದ ಚರಿಸುವ ತೆರದೆ ರಘುವರನು ॥
ಅರಿಗಳನು ನಿರ್ಜಯಿಸಿ ಸಮರದೆ । ಮುರಿದು ತದ್ಬಲಗಳನು ನುಣ್ಣಗೆ ।
ಹರಣ ಮಾಡುತ್ತವರ ಸಿರಿಯನು ಮುಂದೆ ಸಾಗಿದನು ॥ ೩೩ ॥
ಹರಿಯು ಕರಿಯನು ಜಯಿಸುವಂದದೆ । ತರಣಿಕುಲಭೂಷಣನು ಸಹಜವೆ ।
ಪರ ನೃಪಾಲಕರನ್ನು ಕ್ರಮದಿಂ ಬಿಡದೆ ನಿರ್ಜಯಿಸಿ ॥
ಕರವ ಕೊಳ್ಳುತೆ ಪೂರ್ವದಿಗ್ಸಾ- । ಗರದ ತೀರದಲಿರ್ದ ತಾಲದ ।
ತರುಗಳಿಂ ರಮಣೀಯವಾದಹ ತಾಣಕೈದಿದನು ॥ ೩೪ ॥
ಮಳೆಯ ಕಾಲದ ಹೊಳೆಯ ನೀರಿನ । ಸೆಳವಿನಲಿ ಸಿಕ್ಕಂಥ ಬೆತ್ತಿನ ।
ಬೆಳೆದ ಗಿಡಗಳು ತಾಳ್ದುಳಿ ನಮ್ರೀಭಾವವನು ಬಿಡದೆ ॥
ಉಳಿದಕೊಳ್ಳುವ ತೆರದೆ "ಸುಹ್ಮರು" । ನಳಿನ ನೇತ್ರನ-ಪಾದ-ಯುಗಳಕೆ ।
ನಲಿವಿನಿಂ ನೆರೆಬಾಗಿ ಪ್ರಾಣವನುಳುಹಿಕೊಂಡಿಹರು ॥ ೩೫ ॥
ವಂಗದೇಶದ ನೃಪತಿಗಳ ಕುಲ- ಭಂಗವನು ಸಂಗರದೆ ಮಾಡಿದ ।
ತುಂಗ ವಿಕ್ರಮನಾದ ಕೋಸಲ ದೇಶದಧಿಪತಿಯು ॥

ಗಂಗೆಯುದಕದ ಮಧ್ಯದಲಿ ಯು- । ತ್ತುಂಗ ಕಂಬವನಿರದೆ ಕಟ್ಟಿಸಿ ।
ಮಂಗಳೋತ್ಸವವನ್ನು ಪಾರುವರಿಂದ ಮುಗಿಸಿದನು ॥ ೩೬ ॥
ಅಗಿಗಳನು ಧರೆಯಿಂದ ಭರದಿಂ । ತೆಗೆದು ಬೇರ್ಗಳ ಸಹಿತ ಹಚ್ಚಲು ।
ಚಿಗಿತು ವೆಗ್ಗಳವಾಗಿ ಫಲಗಳನೀಯುವಂದದಲಿ ॥
ಮುಗಿದು ಕೈ-ಶರಣೆನಲು ಪುನರಪಿ । ಹಗೆಗಳನು ನಿಜಪದದೆ ಸ್ಥಾಪಿಸೆ ।
ರಘುವಿಗವರಾಗಮಿತ ಹಣವನ್ನಿತ್ತು ಭಜಿಸಿದರು ॥ ೩೭ ॥
ಕರಿಗಳಿಂ ಸರಿಯಾಗಿ ರಚಿಸಿದ । ಸರಸ ಸೇತುವಿನಿಂದ “ ಕಪಿಶಾ ” ।
ಸರಿತೆಯನು ದಾಂಟಿರ್ದ ರಾಜನು ಸೇನೆಯಿಂ ಕೂಡಿ ॥
ಭರದೆ “ ಯುತ್ಕಲ ” ರಿಂದ ತೋರಿದ । ನುರಿತ ಮಾರ್ಗದೆ ಸಾಗಿ ಬೇಗನೆ ।
ವರ ಕಲಿಂಗಾಧಿಪನ ನಗರಕ್ಕೆದುರುಗೊಂಡಿಹನು ॥ ೩೮ ॥
ನಿಶಿತವಾದಂಕುಶವನೊಳ್ಳೀ- । ಕಸುವಿನಿಂ ಮಾವುತನು ಮುದದಿಂ ।
“ ಮುಸು ಮುಸಿಪ ” ಕರಿಶಿರದೆ ಸ್ಥಾಪಿಸುವಂತೆ ಸಂಭ್ರಮದೆ ॥
ಅಸಮ ಬಲ ರಘುಪತಿಯು ತನ್ನಯ । ಯಶದ ಚಿಹ್ನ ಮಹೇಂದ್ರಗಿರಿಯನು
ವಶಕೆ ಕೊಂಡಾಗಲ್ಲೆ ನೆಲೆಗೊಳಿಸಿದನು ಶೀಘ್ರದಲಿ ॥ ೩೯ ॥
ಗಿರಿಯ ಪಕ್ಷಚ್ಛೇದನೋದ್ಯುತ್ । ಸುರರ ಪತಿಯನು ಕೋಪದಿಂದಲೆ ।
ಧರಣಿಧರ ಕಲ್ಮಳೆಯ ಕರೆದಂತಾಗ ಶೀಘ್ರದಲಿ ॥
ವರ ಕಲಿಂಗಾಧಿಪನು ತನ್ನಯ । ಕರಿಯ ಸೇನೆಯ ನೂಕಿ ಕೋಸಲ- ।
ಧೊರೆಯ ಮೇಲ್ಕಣ ರಂಗದಲಿ ಶರಗಳನುಸುರಿಸಿದನು ॥ ೪೦ ॥
ಹಿರಿದು ಮೂಡಿಗೆಯಿಂ ಕಲಿಂಗದ । ನರಪನತಿ ವಿಕ್ರಮದೆ ರಘುವಿನ ।
ಶಿರದ ಮೇಲ್ಹದರಾದ ಶರಗಳ ವೃಷ್ಟಿಯನು ಕರಿಯೆ ॥
ಹರಿದ ರುಧಿರದ ನೀರಿನಲಿ ನರ- । ವರನು ಮಂಗಳ ಜಳಕ ಜರಗಿಸಿ ।
ವರಿಸಿದನು ರಿಪು-ನೃಪನ ವಿಜಯದ ಸರಸ ಸಿರಿಯನ್ನು ॥ ೪೧ ॥
ಆಗ ರಘುವಿನ ಯೋಧರೆಲ್ಲರು । ನಾಗವಲ್ಲಿಯ ದಲಗಳಿಂ ಶ್ರಮ- ।
ನೀಗಿಸುವದಕ್ಕಾಗಿ ಪಾನದ ಗೃಹಗಳನು ರಚಿಸಿ ॥
ಬೇಗದಿಂ ಲಾಂಗಲಿಯ ಫಲಗಳ । ಮೋಘವಾದಾಸವವ ಮೇಣನು- ।
ರಾಗದಿಂದರಿ-ನೃಪನ ಯಶವನು ದಾನ ಮಾಡಿದರು ॥ ೪೨ ॥
ತರಣಿ-ಕುಳಭೂಷಣನು ರಣದಲಿ । ಶರಣಬಂದ ಕಲಿಂಗದೊಡೆಯನ ।
ಕರುಣೆಯಿಂ ಸೆರೆಯಿಂದ ಮೋಚನ ಮಾಡಿಯಾನೃಪನ ॥
ಧರೆಯನವನಿಗೆ ಕೊಟ್ಟು ಬಿಟ್ಟನು । ಕರದ ಮಿಷದಿಂದವನ ಸಿರಿಯನು ।
ಹರಿಸಿದನು ಧರ್ಮಾರ್ಥಕಾರ್ಯಕ್ಕಾಗಿ ರಘುವರನು ॥ ೪೩ ॥

ಸಾಗರದ ತಟವಿಡಿದನಂತರ । ಪೂಗಫಲಗಳು ಬೆಳೆವ ನಾಡಿನ ।
ಭಾಗವನು ಜಯಿಸಲ್ಕಗಸ್ತ್ಯನು ಚರಿಪ ದಿಶೆಯುಲ್ಲಿ ॥
ವೇಗದಿಂ ಹೊರಟಿದ್ದು ಸೇನಾ- । ಸಾಗರದ ಸಹಿತಾಗ ರಘುಪತಿ ।
ಸಾಗಿದನು ತದ್ದೇಶವನು ಜಯಿಸಿದನು ಸಹಜದಲಿ ॥ ೪೪ ॥
ಮಿಂದ ಪೇರ್ಮದ್ದಾನೆಗಳ ಮದ- । ಗಂಧದಿಂ ತೀವಿರ್ದ ಶೀತಲ ।
ಮಂದ ವಾಹಿನಿಯಾದ ಶುಭಕಾವೇರಿ-ಯುದಕದಲಿ ॥
ಸುಂದರಾಂಗ ಸೈನಿಕರು ನಲಿ- । ವಿಂದ ಕ್ರೀಡೆಯನಾಡಿ ತತ್ಪತಿ- ।
ಸಿಂಧುವಿನ ಮನದಲ್ಲಿ ಶಂಕೆಯನುಂಟುಮಾಡಿದರು ॥ ೪೫ ॥
ಬಲದೆ ಬಲವೈರಿಯನು ಪೋಲುವ । ನಲಿನ ಮಿತ್ರನ ವಂಶಜಾತನು ।
ಬಲದೆ ಭೂವಲಯವನು ಜಯಿಸುವ ವಾಂಛೆಯನು ತಳೆದು ॥
ಕೆಲವು ದಿನ ದಾರಿಯನು ನಡೆಯುತೆ । ಚಲುವ "ಹಾರಿತ" ವೃಂದ ಪರಿವೃತ ।
ಮಲಯಗಿರಿ ಕೆಳಭಾಗದಲಿ ವಿಶ್ರಾಂತಿ ಹೊಂದಿದನು ॥ ೪೬ ॥
ಧರೆಯ ಪಾಲನ ಚರಿಪ ಹರಿಗಳ । ಖುರಗಳಿಂದರೆದರೆದು ಸಣ್ಣಾ- ।
ಗಿರುವ ಪರದೋದ್ದಾಮ ಪರಿಮಳದಿಂದ ಕೂಡಿರುವ ॥
ಸರಸವಾದೇಲಕ್ಕಿಫಲಗಳ । ನುರಿತಧೂಲಿಯು ಹಾರಿ ಮೇಲಕೆ ॥
ದ್ವಿರದಗಳ ಶಿರಮದದ ವಾರಿಗಳಲ್ಲಿ ಬೆರೆತಿಹವು ॥ ೪೭ ॥
ದಂದಶೂಕಂಗಳ ಸುವೇಷ್ಟಣ- । ದಿಂದ ಕೊರೆಬಿದ್ದಿರುವ ಪೇರ್ಧರಿ- ।
ಚಂದನದ ತರುಗಳಿಗೆ ರಜ್ಜುಗಳಿಂದ ಕಟ್ಟಿರುವ ॥
ಬಂಧುರ ಸ್ತಂಭೇರಮಂಗಳು । ಬಂಧನದ ನಿರ್ಬಂಧವರಿಯದೆ ।
ಮಂದ ಪರಿಮಳವನ್ನು ಮೂಸುತ್ತಂದು ನಿಂತಿಹವು ॥ ೪೮ ॥
ಉರು ಪರಾಕ್ರಮಿಯಾದ ಪಾಂಡ್ಯದ । ಧೊರೆಯ ದುರ್ಧರ ತೇಜದಿಂ ಬಿಸಿ- ।
ಗಿರಣ ತೆಂಕಣ ದಿಕ್ಕಿನಲಿ ಸಂಚರಿಪ ಕಾಲದಲಿ ॥
ಧರಿಸುವನು ಸೌಮ್ಯತೆಯ ನಿಂತಹ । ಧರೆಯಪತಿ, ರಘುಪತಿಯು ಚರಣ- ।
ಕ್ಕೆರಗಿ ಕರವನ್ನಿತ್ತು ನಾನಾ ತೆರದಿ ಮನ್ನಿಸಿದ ॥ ೪೯ ॥
ಮಲಯ ಪರ್ವತದಲ್ಲಿ ಜನಿಸಿದ । ಮಲವ ಹರಿಸುವ ತಾಮ್ರ ಪರ್ಣಿಯ ।
ಜಲವು ಜಲಧಿಗೆ ಕೂಡಿದಂತಹ ಸ್ಥಳದೆ ಪುಟ್ಟಿರುವ ॥
ಪೊಳೆವ ಮುತ್ತುಗಳನ್ನು ಕೋಸಲ- । ದಿಳೆಯ ಸ್ವಾಮಿಗೆ ಪಾಂಡ್ಯನೃಪತಿಯು।
ಗಳಿಸಿದಂತಹ ತನ್ನ ಕೀರ್ತಿಯ ಕೂಡ ಕೊಟ್ಟಿಹನು ॥ ೫೦ ॥
ಸುಂದರ ಸ್ತ್ರೀಕುಚಗಳನ್ನರೆ । ನಿಂದಿಸುವ ತೆರದಿಂದ ನೇತ್ರಕೆ ।
ಚಂದಗಾಣುವ "ಮಲಯ ದುರ್ದುರ" ವೆಂಬ ಶೈಲಗಳ ॥

ಚಂದನದ ತಟಗಳಲಿ ರಘುಪತಿ। ಯಂದದಿಂ ಮನದಂತೆ ಕ್ರೀಡಿಸಿ।
ಹೊಂದಿ ಸಂತಸವನ್ನು ಮೆಲ್ಲನೆ ಮುಂದೆ ಕ್ರಮದಿಂದ; ॥ ೫೧ ॥
ಬಿಟ್ಟು ತದ್ದೇಶವನು ರಾಜನು। ಬಿಟ್ಟಸಾಗರವೆಂಬ ಸುಂದರ।
ಬಟ್ಟೆಯನು ಬಹು ದೂರದಲಿ ರಮಣೀಯವಾಗಿರುವ।
ಬೆಟ್ಟ-ಸಹ್ಯಾಚಲನಿತಂಬವ। ನಿಟ್ಟಿಸುತೆ ವಿಟಗಾರನಂದದೆ।
ತಟ್ಟನೇ ಹೊರಟಿದ್ದು ಲಗಬಗೆಯಿಂದ ಸಾಗಿದನು ॥ ೫೨ ॥
ಹೊಡೆದು ಬಾಣಗಳನ್ನು ರಾಮನು। ಕಡಲವನು ಸರಿಸಿರ್ದರೂ ಗಡ।
ಬಿಡದೆ ಪುನರಪಿ ಮುಂದೆ ಬಂತೆನೆ ಕೋಪಲಾಧಿಪನ।
ಪಡುವಣದ ದಿಗ್ಭಾಗ ಜಯಿಸುವ। ದೃಢತೆಯಿಂ ಸಾಲ್ಗೊಂಡು ಸಾಗಿದ।
ಪಡೆಯು ಪ್ರೇಕ್ಷಕ ಜನರ ಕಣ್ಗಳಿಗಂದು ತೋರಿದುದು ॥ ೫೩ ॥
"ಕೇರಳಕೆ" ರಘುಪತಿಯ ಸೇನಾ-। ಭಾರವಧು ಬಂದೊದಗಲಲ್ಲಿಯ।
ನಾರಿಯರು ಭಯದಿಂದ ತನ-ಶೃಂಗಾರವನ್ನುಳಿದು ॥
ದಾರಿಯಲಿ ಮುಖದಿಂದ ಹಾಹಾ-। ಕಾರವನು ಮಾಡುತ್ತ ನಡೆದಿರೆ।
ಹಾರಿ ಚಮೂವಿನ ಪಾದರಜವವರನ್ನು ಧೂಷಿಸಿತು ॥ ೫೪
ಸುರರ ಹೊಳೆಯುದಕವನು ಸ್ಪರ್ಧಿಸಿ। ಹರಿವ "ಮರಲಾ" ನದಿಯ ತೀರದ।
ಸರಸ ಕೇದಗೆ-ಗರಿಗಳಲ್ಲಿಯ ಪರಿಮಳದ ರಜವು ॥
ಮರುತದಿಂ ಹರಡೆಲ್ಲ ಕಡೆಯಲಿ। ಚರಿಪ ರಘುವಿನ ವೀರರ ರಿವೆಗೆ।
ಸುರಭಿ ತೊಡಗೆಯ ನಿಡಿಸಿ ಸಂತಸವನ್ನು ಪೆರ್ಚಿಸಿತು ॥ ೫೫ ॥
ಎರಲವನು ಹಿಂದೊಗೆದು ಚರಿಸುವ। ತುರಗಗಳ ಮೇಲಿರಿಸಿದಂತಹ।
ಸರಸ ಕವಚಗಳಿಂದ ಪುಟ್ಟಿದ ದೊಡ್ಡನಾದವದು ॥
ಮರುತದಿಂ ಕಂಪಿಸಿದ ತಾಲದ। ಮರದ ಪರ್ಣಗಳಿಂದ ಜನಿಸಿದ।
ಪರುಷ ರವವನ್ನಿರದೆ ಜರೆಯುವ ತೆರದೆ ತೋರಿದುದು ॥ ೫೬ ॥
ಬೆಳೆದ ಪೆರ್ಭಜರ್ೂರಪಾದಪ- ಗಳಗೆ ಶೃಂಖಲೆಯಿಂದ ಕಟ್ಟಿ-।
ರ್ದಿಳೆಯ ಣಾಲನ ಹಸ್ತಿಗಳ ಮದ-ಸುರಭಿಯನು ಕಂಡು ॥
ಉಳದುಪುನ್ನಾಗಗಳ ಪೂಗಳ-। ನೆಳೆಸಿ ತುಂಬೆಗಳಲ್ಲಿ ಬಂದತಿ।
ಸಲಿವಿನಿಂ ಝೇಂಕಾರರವದಿಂ ಗಾನಮಾಡಿದವು ॥ ೫೭ ॥
ಪರಶುಧರ ವರರಾಮನುದಧಿಗೆ। ಧರೆಯ ದಾನವನಂದು ಬೇಡಲು।
ಹರುಷದಿಂದವಕಾಶವನ್ನಿತ್ತಂಥ ಸಾಗರನು ॥
ಪರಮ ವಿಕ್ರಮವುಳ್ಳ ರಘುವಿನ। ಬರುವ ವಾರ್ತೆಯನರಿತು ಪಶ್ಚಿಮ।
ಧರಣಿ-ಪತಿಗಳ ಹಂಪದಿಂ ಕರವನ್ನು ಕೊಟ್ಟಹನು ॥ ೫೮ ॥

ದಂತಿಗಳು ಸೊಕ್ಕೇರಿ ತಮ್ಮಯ । ದಂತಗಳನೊತ್ತೊತ್ತಿ ಮಾಡಿ- ।
ರ್ದಂಥ ಚಿಹ್ನಗಳುಳ್ಳ ತ್ರಿಕುಟಾಚಲವೆ ರಘುವರನ ॥
ಪಂಥದಿಂ ಪರಬಲವ ಜಯಿಸಿ- । ರ್ದಂಥ ವಿಜಯದ ಸ್ತಂಭವೆಂದೆನೆ ।
ನಿಂತುಕೊಂಡಿಹುದಲ್ಲೆ ಪ್ರೇಕ್ಷಕ ಜನರ ಕಣ್ಗೆಸೆದು ॥ ೫೯ ॥
ತಿಳಿದು ತತ್ವಾರ್ಥವನು ಯೋಗಿಯು । ಬಲದೆಯಿಂದ್ರಿಯ ವೈರಿಗಳನುರೆ ।
ಸುಲಭದಿಂ ಗೆಲಿಯಲ್ಕೆ ಯತ್ನವ ಮಾಳ್ಪತೆರದಿಂದ ॥
ಬಳಿಕ ಕೋಸಲದೇಶದೊಡೆಯನು । ಜಲದ ದಾರಿಯ ನುಳಿದು ಬೇಗನೆ ।
ಸ್ಥಳದ ಮಾರ್ಗದೆ ಪಾರಸೀಕರ ಜಯಿಸಲೆಳಸಿದನು. ॥ ೬೦ ॥
ಮಳೆಯಕಾಲವ ಕಳೆದ ಮೇಘವು । ನಲಿನಿಗಳ ಸಂಬಂಧಿ ದಿನಕರ- ।
ನೆಳೆಯ ಕಿರಣಗಳನ್ನು ಸೈರಿಸಲಾರದಿರ್ದಂತೆ ॥
ನಳಿನ ಮಿತ್ರನ ಕುಲದೆ ಜನಿಸಿರ್ದಿಳೆಯ ಪಾಲನು ಯಾವನೀಮುಖ- ।
ಕಳೆಯ ಬೆಳೆಸಿರ್ದಂಥ ಮಧುಮದ ಸೇರದಿರ್ದಪನು ॥ ೬೧ ॥
ತುರಗಗಳ ಪರಿಗಣನೆ ಯಿಲ್ಲದ । ಸರಸ ಸೇನೆಗಳನ್ನು ತುರುಕರು ।
ನೆರವಿ ರಘುವಿನ ಮೇಲೆ ಯುದ್ಧಕೆ ಸಾಗಿ ಬರುತಿರಲು ॥
ಮರುತದಿಂ ಧೂಸರವು ವ್ಯಾಪಿಸಿ । ನರರ ಕಣ್ಗಳಿಗಾಂಧ್ಯವಿತ್ತಿರೆ ।
ಶರದ ರವದಿಂದವರು ಪರಬಲವನ್ನು ತಿಳಿದಿಹರು ॥ ೬೨ ॥
ಮೋರೆಮೆಲ್ಹೊತ್ತಿರುವ ಗಡ್ಡದ । ಭಾರದಿಂ ಕೂಡಿರ್ದಸೇನಾ- ।
ಭಾರವನು ರಘುವರನು ಭಲ್ಲದೆ ಕಡಿದು ಚೆಲ್ಲಲದು ॥
" ಯಾರಜೇ "ಯೆಂದೊದರಿ ಚಟ್ಟನೆ । ಧಾರುಣಿಯ ತಲದಲ್ಲಿ ಬಿದ್ದಿತು ।
ಘೋರ ಹಾಹಾಕಾರವಾಯಿತು ಪಾರಸೀಕರಲಿ ॥ ೬೩ ॥
ಹಗೆಗಳಲಿ ಸತ್ತುಳಿದ ಯೋಧರು । ತೆಗೆದು ಟೊಪ್ಪಿಗೆಗಳನು ಶಿರದಿಂ ।
ರಘುವಿನಂಘ್ರಿಗೆ ಶರಣು ಪೋದರು ಪರಮ ವಿನಯದಲಿ ॥
ಜಗದ ಪ್ರಭುಗಳ ಕ್ರೋಧಭಾರವು । ಹಗುರವಾಗುವದಕ್ಕೆ ಪ್ರಣತಿಯೆ ।
ಮಿಗಿಲು ಸಾಧನವೆಂದು ಪೇಳುವ ನುಡಿಯು ಸತ್ಯವದು ॥ ೬೪ ॥
ಕಡೆಗೆ ವಿಜಯವ ಹೊಂದಿದಂತಹ । ಪೊಡವಿಯೊಡೆಯನ ಸೇನಿಕರು ದೊ- ।
ಡ್ಡಡವಿಯಲ್ಲಿಯ ದ್ರಾಕ್ಷಬಳ್ಳಿಯ ಬುಡದ ನೆರಳಿನಲಿ ॥
ಕಡವೆಚರ್ಮಗಳನ್ನು ಪಸರಿಸಿ । ಪಡೆಯೆ ವಿಶ್ರಾಂತಿಯನು ಕುಳಿತರು ।
ಜಿಡದೆ ದ್ರಾಕ್ಷಾಸವವ ಕುಡಿದರು ಪರಮ ಮೋದದಲಿ ॥ ೬೫ ॥
ಉತ್ತರಾಯಣದಲ್ಲಿ ಸೂರ್ಯನು । ಪೃಥ್ವಿಯಲ್ಲಿಯ ರಸಗಳನು ಪೀ- ।
ರುತ್ತ ತಾರಾಪಥದೆ ಮಾರ್ಗಕ್ರಮಿಸುವಂದದಲಿ ॥

ಸೋತ್ತನೂಂಗನು ತನ್ನಬಲ ಸಂ- । ಪತ್ತಿಯುನು ಕೊಂಡಾಗವೇಗದೆ ।
ಯುತ್ತರದ ದಿಗ್ವಿಜಯ ಮಾಡಲು ಹೊರಟು ಸಾಗಿದನು. ॥ ೬೬ ॥
ಸಿಂಧು-ನದ-ತೀರದಲಿ ರಾಜನು । ಬಂದ ಕ್ಷಣದಲಿ ಮಾರ್ಗನಡೆದುದ- ।
ರಿಂದ ಶ್ರಮಿಸಿದ ಕುದುರೆಗಳು ಗಡಗಡನೆ ಹೊರಹೊರಳಿ ॥
ಚಂದದಿಂ ದಣುವಾರೆ ಚಟವಟ- । ದಿಂದ ಪುನರಪಿಯೆದ್ದು ತಮ್ಮಯ ।
ಸ್ಕಂಧಗಳಿಗಂಟಿರ್ದ ಕುಂಕುಮ ಝಾಡಿಸಿದವಾಗ ॥ ೬೭ ॥
ಏಣನಯನೆಯರಾದ ಸುಂದರ । ರಾಣಿವಾಸದ ಪೆಣ್ಗಳೆದುರಿಗೆ ।
ಹೂಣಜನರಧಿಪತಿಗಳನು ಗತಜೀವರನು ಮಾಡಿ ॥
ಪಾಣಿ ತಾಡಣದಿಂದ ತಂತ- । ಮ್ಮಾನನಂಗಳ ರಂಜಿಸುವ ಕಲೆ ।
ಜಾಣತನದಿಂ ರಾಜನವರಿಗೆ ಕಲಿಸಿ ಬಿಟ್ಟಿಹನು. ॥ ೬೮ ॥
ಅಮಿತ ವಿಕ್ರಮನಾದ ರಘುವಿನ । ಸಮರದಲಿಕಾಂಭೋಜದೊಡೆಯರು ।
ಶಮಿಸಲಾರದೆ ಪ್ರಮದೆಯರ ತೆರದಿಂದ ಲಜ್ಜೆಯಲಿ ॥
ಸು-ಮದದಿಂಕೊಡಿರ್ದಸ್ತಂಭೇ- । ರಮಗಳನು ದೃಢವಾಗಿ ಕಟ್ಟಿಡ ।
ದ್ರುಮಗಳಂತೆಯೆ ಮಣಿದು ರಾಜನ ಚರಣಕೆರಗಿದರು. ॥ ೬೯ ॥
ಹೆದರಿ ತದ್ದೇಶಾಧಿಪತಿಗಳು । ಕುದುರೆಗಳ ಸಮುದಾಯಗಳ ಬಹು ।
ವಿಧದ ರತ್ನಾಭರಣಗಳ ಮೇಣ್ ದ್ರವ್ಯರಾಶಿಯನು ॥
ಸದಯನಾದೀ ರಘುವರೇಣ್ಯನ । ಸದನದೊಳು ಪೊಗಸಿರ್ದರೂ ದು- ।
ರ್ಮದದ ಲೇಶವದಿವನ ಮನದಲಿ ಸೇರಲಿಲ್ಲಕಣಾ ॥ ೭೦ ॥
ಹೊರಟನಲ್ಲಿಂದಾಗ ತ್ವರೆಯಲಿ । ಪರಮಪಾವನೆಯಾದ ಗೌರೀ- ।
ವರನ ಹಿಮಗಿರಿ-ಶೋಭೆಯನು ಕಣ್ಣಾರೆ ನೋಡಲ್ಕೆ, ॥
ಚರಿಪ ಸೇನಾನಿಗಳ ಹರಿಗಳ । ಖುರದೆ ಪುಟ್ಟಿದ ಗೈರಿಕೆಯ ಧೂ- ।
ಸರದೆ ಯಾ ಶೈಲವನು ಬೆಳೆಸುವ ತೆರದೆ ರಘುವರನು ॥ ೭೧ ॥
ಅಂದುರಾಜನ ಬಲದ ಪೆರ್ದನಿ । ಯಿಂದ ನಿರ್ಭಯವಾಗಿ ಹರಿಗಳು ।
ಕಂದರಂಗಳ ಮಧ್ಯದಲ್ಲೆಚ್ಚತ್ತು ಕುಳಿತಲ್ಲೇ ॥
ಸ್ಕಂಧವನ್ನೆತ್ತೆತ್ತಿ ನೇತ್ರಗ- । ಳಿಂದ ನೋಡಿದರಿಂದಲವುಗಳು ।
ಕುಂದವಿಲ್ಲದ ತಮ್ಮ ಬಲವನು ವ್ಯಕ್ತಮಾಡಿಹವು. ॥ ೭೨ ॥
ದಾರಿಯಿಂ ಗಿರಿಯನ್ನು ಹತ್ತುವ । ಸಾರಸಾಕ್ಷನಿಗಂದು ಗಂಗಾ- ।
ವಾರಿ-ಶೀಕರದಿಂದ ಮೃದುಮೃದುವಾಗಿಯಿರುತಿರುವ ॥
ಚಾರು ಭೂರ್ಜದ ಪತ್ರಗಳ ಸುಖ- । ಬೀರುವಂತಹ ಸರಸ ವ್ಯಜನವ ।
ತೋರಸಂಭ್ರಮದಿಂದಲೇ ಮಾರುತನು ಬೀಸಿದನು. ॥ ೭೩ ॥

ಮೃಡನ ಗಿರಿಯಲಿ ಮಾರ್ಗವನು ನಡೆ- । ನಡೆದು ಸೈನಿಕರೆಲ್ಲರೂ ಶ್ರಮ- ।
ಪಡೆದು ಸುರಪುನ್ನಾಗ ಗಿಡಗಳ ದಟ್ಟನೆಳಲಿನಲಿ ॥
ಕುಡಿದು ಜಲವನು ಮೃಗದನಾಭಿಯು । ಕಡುಸುವಾಸನೆಯಿಂದ ಕೂಡಿ- ।
ರ್ದಡವಿ ಕಲ್ಗಳ ಮೇಲೆ ವಿಶ್ರಾಂತಿಯನು ಹೊಂದಿದರು. ॥ ೭೪ ॥
ಇರುಳಿನೊಳು ಝುಗಝುಗಿಪ ಸೊಡರಿನ । ತೆರದೆ ಮಿನುಗುವ ಬಳ್ಳಿಗಳ ಪ್ರಭೆ- ।
" ಸರಲ " ಜಾತಿಯ ತರುಗಳಿಗೆ ಕಟ್ಟಿರ್ದದ್ವಿರದಗಳ ॥
ಕೊರಳು ಸರಪಣೆಯಲ್ಲಿ ಬಿದ್ದದು । ತಿರುಗಿ ಪ್ರತಿಫಲಿಸೆಲ್ಲ ಕಡೆಯಲಿ ।
ಪರಮ ಸೋಜ್ವಲವಾದ ದೀಪವೆ ದೊರೆಯಿತವನಿಪಗೆ ॥ ೭೫ ॥
ಇಳಿದ ಸ್ಥಳವನು ಬಿಟ್ಟು ಮುಂದಕೆ । ಯಿಳೆಯ ಪಾಲನು ಸಾಗಿಪೋಗಲು ।
ಬಳಿಕ ಭಿಲ್ಲರು ಬಂದು ತತ್‌ಸ್ಥಾನಕ್ಕೆ ದ್ವಿರದಗಳ ॥
ಗಲದ ಬಂಧನದಿಂದ ಪೆರ್ಮರ- । ಗಳಿಗೆ ಬಿದ್ದಿರುವಂಥ ಚಿಹ್ನದೆ ।
ಸುಲಭದಿಂದಾ ಕರಿಗಳುನ್ನತಿಯನ್ನು ತಿಳಿದಿಹರು ॥ ೭೬ ॥
ಅಲ್ಲಿ ಮನೆಮಾಡಿರ್ದಕಾಡಿನ । ಭಿಲ್ಲಜನರಾಗೆಲ್ಲ ಕಡೆಯಿಂ ।
ಕಲ್ಲು ಕವಣೆಗಳನ್ನು ಹೊಡೆಯುತ್ತಿದುರುಗೊಂಡಿರಲು ॥
ಫುಲ್ಲನೇತ್ರನು ಬಿಡದೆ ಯುವರನು । ಭಲ್ಲಗಳ ತೆಗೆತೆಗೆದು ಹೊಡೆಯುಲು ।
ಕಲ್ಲುಗಳಿಗವು ತಗಲಿ ಬೆಂಕಿಯು ಕಿಡಿಗಳುದುರಿದವು ॥ ೭೭ ॥
ಬಲದೆ " ಉತ್ಸವ "ರೆಂಬ ಪೆಸರಿನ । ಕಲಿಗಳನು ರಣದಲ್ಲಿ ಭಂಜಿಸಿ ।
ಜಲಜ-ಮಿತ್ರನ ಕುಲದೆ ಜನಿಸಿರ್ದಂಥ ರಘುವರನು ॥
ಒಲೆದು ಕಿನ್ನರ-ಲಲನೆಯರಿಗತಿ । ಲಲಿತ ವಿಜಯೋತ್ಸವದ ಗಾಯನ- ।
ಕಲೆಯ ವಿಷಯವ ಕಲಿಸಿ ಬಿಟ್ಟಿಹನೆಂದು ತೋರಿದುದು ॥ ೭೮ ॥
ಹರಸಗಿರಿಯಲ್ಲಿರ್ದ ಗಣಗಳು । ಪರಮ ಸಾದರದಿಂದ ಕರವನು ।
ಧರೆಯ ಪತಿಗರ್ಪಣವ ಮಾಡಿದರಿಂದ ಹಿಮನಗನು ॥
ಅರಸು-ರಘುವಿನ ಸಾರವನು ಮೇಣ್- । ಗಿರಿಯು ಸಂಪನ್ನತೆಯ ನೃಪವರ- ।
ನರಿತುಕೊಂಡಿಹರೋರ್ವನೋರ್ವನ ಗುಣದ ಪ್ರೌಢಿಯನು. ॥ ೭೯ ॥
ಮುನ್ನದಶಮುಖನಿಂದ ಪರಿಭವ- । ವನ್ನು ಹೊಂದಿರುವಂಥ ಸಿರಿಮು- ।
ಕ್ಕಣ್ಣದೇವರ ನಗವನೇರಲು ನಾಚ್ಚಿದನೊ ಎನೆ ॥
ತನ್ನ ವಿಜಯೋನ್ನತಿಯ ಚಿಹ್ನಗ- । ಳನ್ನು ಜಿಡದಲ್ಲಲ್ಲಿ ಸ್ಥಾಪಿಸಿ- ।
ಗನ್ನಮಹಿಮನು ತಿರುಗಿ ಹೊರಟನು ಬಂದ ಮಾರ್ಗದಲಿ. ॥ ೮೦ ॥
ಸರಸ " ಲೌಹಿತೆ "ಯನ್ನು ಲಂಘಿಸಿ । ಭರದೆ " ಪ್ರಾಗ್ಜ್ಯೋತಿಷ "ದ ನಗರಕೆ ।
ಧರೆಯ ಪಾಲನು ಬಂದನೆಂಬುವ ವಾರ್ತೆಯನ್ನರಿತು ॥

ಪುರದ ರಾಜನು ನಡುಗಿದನು ಮೇಣ್ । ಕರಿಗಳನು ಬಂಧಿಸಿದ ಕೃಷ್ಣಾ- ।
ಗರುಗಳೂ ಪ್ರತಿನಿಮಿಷದಲಿ ಥರಥರನೆ ನಡುಗಿದವು. ॥ ೮೧ ॥
ತ್ವರದೆ ಬರುತಿರುವಂಥ ರಾಜನ । ಸರಸ ತೇರಿನ ಚಕ್ರಗಳ ಧೂ- ।
ಸರವು ನಭದಲಿ ಹರಡಿ ದುರ್ದಿನದಂತೆ ಕಾಣಿಸಲು ॥
ಪರಮ ಭಯವನು ಪಟ್ಟರಿಪುಗಳು । ಧರೆಯು ಪಾಲನ ಸೈನಿಕರ ಕೂ- ।
ಡವರೆ ರಣದಲ್ಲೆಂತು ಸಂಗ್ರಾಮವನು ಮಾಡುವರೋ? ॥ ೮೨ ॥
ಅಮರಪತಿಯನು ಮೀರಿಮೆರೆಯುವ । ವಿಮಲ ವಿಕ್ರಮನಾದ ರಘುವನು ।
ಸಮರದಲಿ ನಿರ್ಜಯಿಸುವದು ವಿಭ್ರಮವದೆಂದರಿತು ॥
ನಮಿಸಿ ಯಾತನ "ಕಾಮರೂಪದ" ರಮಣನತಿ ಚಲುವಾದ ಸ್ತಂಭೇ- ।
ರಮಗಳನು ಕಾಣಿಕೆಗೆ ಯರ್ಪಿಸಿ ಸಾಮ ಮಾಡಿದನು, ॥ ೮೩ ॥
"ಕಾಮರೂಪದ" ಧರೆಯುಪಾಲನು । ಕ್ಷೇಮವನು ಕಾಮಿಸುತೆ ಮನದಲಿ ।
ಹೇಮ-ಪೀಠದ ಮೇಲೆ ಭೂಮಿಯು ಕಾಂತ ರಘುವರನ ॥
ವಾಮ-ವಾಮೇತರ-ಸು-ಮಂಗಲ । ಕೋಮಲಾದಡಿಗಳನು ಸ್ಥಾಪಿಸಿ ।
ವಾಮದೇವನ ತೆರದೆ ರತ್ನಗಳಿಂದ ಪೂಜಿಸಿದ ॥ ೮೪ ॥
ಇಳೆಯು ತಳವನು ಜಯಿಸಿ ಯೀಪರಿ । ಹೊಳೆದು ದಿನಮಣಿಯಂತೆ ಪೃಥ್ವೀ- ।
ವಲಯು ಕೊರ್ವನೆ ಛತ್ರಪತಿಯೆಂದೆನಿಸಿ ರಘುವರನು ॥
ಕುಳಿತ ತೇರಿನ ಚಕ್ರರಜವನು । ಗಲಿತ ಛತ್ರದ ರಿಪು-ನೃಪಾಲರ ।
ತಲೆಯು ಮೇಲ್ಸ್ಥಿರವಾಗಿ ಸ್ಥಾಪಿಸಿ ಪುರಕೆ ತೆರಳಿದನು. ॥ ೮೫ ॥
ಧರೆಯು ಪಾಲನು ವಿಶ್ವಜಿತ್ಕ್ರತು । ಚರಿಸಿ, ಸರ್ವಸ್ವವನು ದ್ವಿಜರಿಗೆ ।
ಪರಮ ಹರುಷದೆ ಕೊಟ್ಟು, ಧನ್ಯತೆಯನ್ನು ಪಡೆದಿಹನು. ॥
ಹರಿಸಿ ಸಾಗರದಲ್ಲಿಯುದವನು । ತಿರುಗಿ ಮುಗಿಲ್ಗಳು ಕೊಡುವ ತೆರದಲಿ ।
ಸರಸ ಚರಿತರು ಮಾಡಿದರ್ಜನ ದಾನಕಾಗುವದು. ॥ ೮೬ ॥
ಚರಿಸಿಯಾಗವ ಮುಗಿಸಿಕೋಸಲ- । ಧರೆಯುಪಾಲನು ಲಲನೆಯರ ಚಿರ- ।
ವಿರಹ ದುಃಖದೆ ಬಳಲುವಂತಹ ವೈರಿರಾಜರನು ॥
ಪರಮ ಸಾದರದಿಂದ ರತ್ನಾ- । ಭರಣಗಳ ದಿವ್ಯೋಪಚಾರದೆ ।
ಮರಿಸಿ ಯುಪಮಾನವನು ಮನ್ನಿಸಿ ಮುದದೆ ಬೀಳ್ಕೊಟ್ಟ ॥ ೮೭ ॥
ತೆರಳಿ ತಮ್ಮಯು ಪುರಗಳಿಗೆ ನೃಪ- - ವರರು ಪೋಗುವ ಸಮಯದಲಿ ರಘು- ।
ವರನ ಸರಸೀರುಹ-ಧ್ವಜಾಂಕುಶ-ಚಕ್ರ-ರೇಷೆಗಳ ॥
ಸರಸ ಚಿಷ್ನಗಳುಳ್ಳ ಕೋಮಲ । ಚರಣಯುಗಳಕೆ ಶಿರವ ಬಾಗಿಸಿ ।
ಕೊರಳು-ಪೂಸರಗಳ ಪರಾಗದೆ ಯೆರೆದು ಸಾಗಿದರು.

೫ನೆಯ ಸರ್ಗ.

ಸಕಲ ಭೂಮಂಡಲವ ಜಯಿಸಿದ । ಮುಖದೆ ಕೋಶಗಳೆಲ್ಲ ಬ್ರಾಹ್ಮಣ- ।
ಮುಕುಟ-ಮಣಿಗಳಿಗಿತ್ತು ಮಿನುಗುವ ರಘುವಿನೆದುರಿನಲಿ ॥
ಸ್ವಕುಲಗುರು "ವರತಂತು"ವಿಗೆ ತಾಂ- । ಭಕುತಿಯಿಂ ಕೊಡಲೊಪ್ಪಿದಕ್ಷಿಣೆ ।
ಪ್ರಕಟವಾದನು "ಕೌತ್ಸ" ಮುನಿ ಧನವನ್ನು ಯಾಚಿಸಲು ॥ ೧ ॥

ವಿತ್ತವನು ವಿತರಿಸಿದ ಮೂಲಕ । ಮೃತ್ತಿಕೆಯ ಪರಿಮಾಣದಲಿ ರಘು- ।
ಸತ್ತಮನು ಪೂಜೋಪಕರಣಗಳನ್ನು ಸಂಗ್ರಹಿಸಿ ॥
ಒತ್ತರದೆ ಮುನಿಗೆದುರುಗೊಂಡನು । ಚಿತ್ತವೇಧಕವಾಣಿಯಿಂದಲೆ ।
ತೋತ್ತರವ ಮಾಡುತ್ತೆ ಗದ್ದುಗೆಯಲ್ಲಿ ಕುಳ್ಳಿರಿಸಿ ॥ ೨ ॥

ಮಾನಧನನಾದಂಥ ರಾಜನು । ಮಾನಮೀರಿದ ಭಕುತಿಯಿಂ ಬಹು- ।
ಮಾನದಿಂ ವಿಧಿಯಿಂದ ಪೂಜಿಸಿ, ನಮಿಸಿ ಸತ್ಕರಿಸಿ ॥
ಪಾಣಿಸಂಪುಟವನ್ನು ಜೋಡಿಸಿ । ತಾನು ಬ್ರಾಹ್ಮಣನನ್ನು ಪ್ರಾರ್ಥಿಸಿ- ।
ಸಾಸುರಾಗದೆ ಬಂದಕಾರಣ ಕೇಳ ತೊಡಗಿದನು. ॥ ೩ ॥

ದ್ವಾದಶಾತ್ಮನು ಕಿರಣದಿಂಪೊಸ- । ದಾದ ಜಾಗ್ರತೆಕೊಡುವ ತೆರದಲಿ ।
ಬೋಧವನು ನಿನಗಿತ್ತ ಪೂರ್ಣಜ್ಞಾನಿ ದೇಶಿಕನು ॥
ವೇದಮಂತ್ರಗಳನ್ನು ತಿಳಿದವ- । ರಾದ ಬ್ರಾಹ್ಮಣರಲ್ಲಿ ಶ್ರೇಷ್ಠನು ।
ವ್ಯಾಧಿ ಬಾಧೆಗಳಿಲ್ಲದಲೆ ಸುಖರೂಪನಾಗಿಹನೇ? ॥ ೪ ॥

ಮೂರು ಕಾಲಗಳಲ್ಲಿ ಸಂತತ । ಮೂರು ಕರಣಗಳಿಂದ ಗಳಿಸಿದ ।
ಘೋರತಮ ತಪಕಂಜಿ ಯಿಂದ್ರನು ಭೀರುತನದಲ್ಲಿ ॥
ಬಾರಿಬಾರಿಗೆ ಗುರುವಿನೆಡೆಯಲಿ । ತೋರವಿಘ್ನವನುಂಟು ಮಾಡಲು ।
ವಾರನಾರಿಯನಟ್ಟಿ ಕೊಡಲಿಲ್ಲಷ್ಟೆ ಮುನಿವರನೇ? ॥ ೫ ॥

ಗುರುಗಳಾಶ್ರಮದಲ್ಲಿ ಹಚ್ಚಿದ । ತರುಗಳಿಗೆ ನೀರುಣಿಸಿ ಪ್ರೇಮದೆ ।
ತರಳರಂತವುಗಳನು ನೀಂ ಜೋಪಾನವನು ಮಾಡಿ ॥
ಭರದೆ ಸಂವರ್ಧಿಸಿದೆ ಯವುಗಳು । ಮರುತದಿಂ ಮೇಣಿತರ ರೋಗದೆ ।
ಮರಣಹೊಂದದೆ ಯಿರ್ದುಮನಕಾನಂದ ವೀಯುವವೊ? ॥ ೬ ॥

ಎರಳೆಕರುಗಳು ಬಂದುಗುರುವಿನ । ಕರದೆ ದರ್ಭಾಂಕುರಗಳನ್ನರೆ ।
ತ್ವರದೆ ತಿನ್ನುವದಕ್ಕೆ ಪ್ರತಿಕಾರವನು ಮಾಡದಲೆ ॥
ಪರಮ ಮೋದದೆ ತೊಡೆಯಮೇಲ್ಕರ- । ಕರೆದು ಕೂಡಿಸಿಕೊಂಡು ಸಲಹಿದ ।
ಮರಿಗಳಾಶ್ರಮದಲ್ಲಿ ನಿರ್ಭಯದಿಂದಲಿರುತಿಹವೆ? ॥ ೭ ॥

ಆವನದಿಯಲಿ ಮಿಂದು ಮುನಿಗಳು । ದೇವಪಿತ್ರಾದಿಗಳ ತರ್ಪಣ ।
ಸಾವಕಾಶದಿ ಮಾಡಿ ಪಾವನರಾಗಿ ಚರಿಸುವರೋ ॥
ಆವ ತೀರ್ಥದ ತೀರದಲ್ಲಿಯು । ದೇವ ಧಾನ್ಯವನುಂಡು ಸುಖದಲಿ ।
ಜೀವಿಸುವರಾ ನದಿಯು ನಿರ್ಮಲವಾಗಿ ಹರಿಯುವದೋ? ॥ ೮ ॥
ಮನನ ಶೀಲರ ಜೀವನಕೆ ಮೇಣ್ । ಮುನಿಗಳನು ಕಾಣ್ಬಂದ ಭಾವಿಕ ।
ಜನರ ಸತ್ಕಾರಕ್ಕೆ ಹತ್ತುವ ವಿವಿಧ ಧಾನ್ಯಗಳು ॥
ಘನದ ನೀರಿಗೆ ಪುಟ್ಟಿ ತಾವೇ । ವನದ ಬುವಿಯೊಳು ಪಕ್ವವಾಗಿರೆ ।
ಜನರು ಸಾಕಿದ ಗ್ರಾಮ್ಯ ಪಶುಗಳ ಮುಖದೆ ಯುಳಿದಿಹವೆ? ॥ ೯ ॥
ಆರು ಶಾಸ್ತ್ರಗಳನ್ನು ಹಾಗೆಯೆ । ಮೂರು ವೇದಗಳನ್ನು ಕಲಿಸಿದ ।
ಪಾರಮಾರ್ಥಿಕ ತತ್ವವೇತ್ತನು ನಿನಗೆ ಕರುಣೆಯಲಿ ॥
ಚಾರುಗಾರ್ಹಸ್ಥ್ಯಾಶ್ರಮದೆಯುಪ- । ಕಾರವೆಲ್ಲರಿಗಾಗುವದದರಿಂ- ।
ದಾರ ಸಂಗ್ರಹ ಮಾಡಲಪ್ಪಣೆಯನ್ನು ಕೊಟ್ಟಿಹನೆ? ॥ ೧೦ ॥
ನಿನ್ನ ದರ್ಶನದಿಂದ “ ಕೌತ್ಸನೆ ” । ನನ್ನಮನ ಸಂತೃಪ್ತಿ ಹೊಂದದೆ ।
ಗನ್ನಮಹಿಮನೆ ನೀನು ವನದಿಂ ಬಂದ ಕಾರ್ಯವನು ॥
ಇನ್ನು ತಿಳಿಯುವದಕ್ಕದವಸರ- । ವನ್ನು ಪಟ್ಟಿಹುದಾದ ಕಾರಣ ।
ನನ್ನ ಮನದಾಕಾಂಕ್ಷೆಯನು ಪೂರೈಸು ಕನಿಕರದೆ ॥ ೧೧ ॥
ರಘುವಿನರ್ಘ್ಯದ ಪಾತ್ರವನು ಕಣ್- । ದೆಗೆದು ನೋಡಿದ ಕೂಡಲೇ ಹಣ ।
ಸಿಗದು ತನಗೆಂದಾಶೆಯನು ಬಿಟ್ಟಂಥ ಮುನಿವರನು ॥
ಸುಗುಣ ಧೀರೋದಾರ ರಾಜನು । ಮುಗಿದು ಪಾಣಿಗಳನ್ನು ಪ್ರಾರ್ಥಿಸೆ ।
ನಗುತಲೀ ಪರಿಯಿಂದ ಭೂಪತಿಗಿತ್ತನುತ್ತರವ ॥ ೧೨ ॥
ಒಡೆಯನೇ ನಮ್ಮೆಲ್ಲ ಸಂಗತಿ । ಮೃಡನ ದಯೆಯಿಂ ನೆಟ್ಟಗಿರುವದು ।
ಪೊಡವಿ-ದೊರೆ ನೀನಿರಲು ಪ್ರಜೆಗಳಿಗೆಂತು ಸಂಕಟವು? ॥
ಸುಡುವ ಕಿರಣನು ಮೂಡೆ ನಭದೊಳು - ಬಿಡದೆಕತ್ತಲೆಯೋಡಿ- ಪೋಪುದು ।
ತಡೆವುದದು ಜನ-ನಯನ-ತೇಜವನೆಂತು ರಘುವರನೇ? ॥ ೧೩ ॥
ಅತಿಥಿಗಳ ಸತ್ಕಾರದಲಿ ಕ್ಷಿತಿ- । ಪತಿಯೆ ನಿನಗೆದುರಿಲ್ಲ ಧರೆಯೊಳು ।
ವಿತರಿಸಿದೆ ಸರ್ವಸ್ವವನು ದ್ವಿಜ-ಕುಲದ ಹಿತಕಾಗಿ ॥
ಹತಕ ದೈವನು ವಿತ್ತಯಾಚಿಸೆ । ಗತಿಸಿ ಸಮಯುವ ಬಂದೆನೆಂದುರೆ ।
ಖತಿಯು ತಾಳಿಹುದೆನ್ನ ಮಾನಸ ಪೇಳಲಹುದೇನು ॥ ೧೪ ॥
ಯೋಗಿಗಳು ತೃಣಧಾನ್ಯವನು ನಿಜ- । ಯೋಗ-ಪೂರ್ಣತೆಗಾಗಿ ಯೊಯ್ಯಲು ।
ಜಾಗಿದಂತಹ ಶುಷ್ಕಕಡ್ಡಿಗಳಲ್ಲಿ ಯುಳಿದಂತೆ ॥

ಯಾಗದಲಿ ಹಣವೆಲ್ಲವನು ಶುಭ- । ಭಾಗನೇ ನೀಂ ಯೋಗ್ಯರಿಗೆ ಸಂ- ।
ತ್ಯಾಗಮಾಡಿ ಶರೀರ ಮಾತ್ರವೆ ಶೇಷವಾಗಿರುವೆ ॥ ೧೫ ॥
ಏಣಲಾಂಛನನಾದ ಚಂದ್ರನು । ದಾನವಾಂತಕರಾದ ಸುರರಿಗೆ ।
ತಾನು ಸುಧೆಯುನ್ನಿತ್ತು ಕ್ಷೀಣತೆಯುನ್ನು ತಳೆದಂತೆ ॥
ನೀನು ಮಾಡಿದ ದಿವ್ಯಮಖದೊಳು । ಹೀನ ಕಾಂಚನನಾಗಿ ರಾಜನೆ ।
ಮಾನಧನರೊಳು ಪೆರ್ಚಿಮಿನುಗುವೆ ದಾನಧರ್ಮದಲಿ ॥ ೧೬ ॥

ಇರಲಿ ರಾಜನೆ ನಿನಗೆ ಕ್ಷೇಮವು । ಚರಿಪೆ ನಾನಿಲ್ಲಿಂದಲೀಗಲೆ ।
ಪರ ನೃಪಾಲರ ಗೃಹಕೆ ಗುರುದಕ್ಷಿಣೆಯು ಯಾಚಿಸಲು ॥
ಕರೆದು ಮಳೆಗಾಲದಲಿ ಮಳೆಯನು । ಪರಮ ನೀರಸವಾದ ಮೇಘಕೆ ।
ತೆರೆದು ಬಾಯ್ಬೇಡುವದೆ ಘನರಸವನ್ನು ಚಾತಕವು? ॥ ೧೭ ॥
ಇನಿತು ಪರಿ "ವರ-ತಂತು" ಶಿಷ್ಯನು । ಮನದಕಾಮನೆಯನ್ನು ಪೇಳದೆ ।
ಮನೆಯು ಬಿಡಲುದ್ಯುಕ್ತನಾಗಲು ನುಡಿದ ರಘುವರನು ॥
ನಿನಗೆ ಬೇಕೇನದನು ತಿಳುಹದೆ । ಮುನಿಯೆ ವಿನ್ಮುಖನಾಗಿ ಪೋಪುದು ।
ಘನತೆಯೇನಿದು? ನಿನಗೆ ಬೇಕಾದದ್ದು ಪೇಳೆನಗೆ ॥ ೧೮ ॥

ಎನಲು ವಿಧಿವದ್ಯಜ್ಞ ಮಾಡಿದ । ವಿನಯಗುಣ ಸಂಪನ್ನನಾಗಿಹ ।
ಘನತೆಯಿಂ ವರ್ಣಾಶ್ರಮಂಗಳ ಪೊರೆವ ರಾಜನಿಗೆ ॥
ಅನಲ ಸಮ ದೇದೀಪ್ಯಮಾನನು । ಮುನಿಪವರ "ವರತಂತು" ಶಿಷ್ಯನು ।
ಮನಸಿನಾಶಯವನ್ನು ವಿಸ್ತರದಿಂದ ಪೇಳಿದನು. ॥ ೧೯ ॥
ಎಲ್ಲ ವಿದ್ಯೆಗಳನ್ನು ಕಲಿಸಿದ । ಬಲ್ಲಗುರುವಿಗೆ ಪರಮ ವಿನಯದೆ ।
ಸಲ್ಲಿಸುವೆನಾಂ ನಿನಗೆ ದಕ್ಷಿಣೆಯೆಂದು ಬಿನ್ನವಿಸೆ ॥
ಒಲ್ಲೆ ಶಿಷ್ಯೋತ್ತಮನೆ ನಾನೀ- । ಬಿಲ್ಲೆ ಕಾಸಿನ ಕ್ಷುದ್ರ ದಕ್ಷಿಣೆ ।
ಸಲ್ಲಿದುದು ನಿಜ ಭಕ್ತಿದಾನವು ನನಗೆ ಯೀ ಮೊದಲು ॥ ೨೦ ॥

ಬೇಡ ದಕ್ಷಿಣೆಯೆಂದು ದೇಶಿಕ- । ನಾಡಿದಕ್ಕಾಗ್ರಹದೆ ಗುರುವನು ।
ಪೀಡಿಸಿದೆ ನನ್ನಿಂದ ದಕ್ಷಿಣೆ ತೆಗೆದುಕೊಳ್ಳೆಂದು ॥
ಮೂಢತನಕಾಗವನು ರೋಷದೆ । ಬೇಡಿದನು ಹದಿನಾಲ್ಕುಕೋಟಿಯು ।
ನಾಡಿನಲ್ಲಿಯು ನಡೆವ ನಾಣ್ಯವ ತಂದು ನೀಡೆಂದು ॥ ೨೧ ॥
ನಾನು ನಿನ್ನೆಡೆಯಲ್ಲಿ ರಾಜನೆ । ದಾನವನು ಯಾಚಿಸಲು ಬಂದೆನು.
ನೀನು ಲೋಕದನಾಥನಾದರು ಹೀನ ಧನನೆಂದು ॥
ಆನು ತಿಳಿದಪೆನಾದ ಕಾರಣ । ಸಾನುಕಂಪನದಿಂದ ಹಣವ- ।
ನ್ನೀನು ಯಾಚಿಸಲೆಂದು ಸ್ಥಾನಾಂತರಕೆ ಪೋಗುವೆನು. ॥ ೨೨ ॥

ಯೂಪಮಯ ಜಗವನ್ನು ಮಾಡಿದ । ಚಾಪಧರರೊಳು ಶ್ರೇಷ್ಠನೆನಿಸಿದ ।
ಪಾಪಕರ್ಮ ಪರಾಙ್ಮುಖೇಂದ್ರಿಯನಾದ ರಘುವರನು ॥
ಈಪರಿಯ ದ್ವಿಜರಾಜ ಕೌತ್ಸನು । ತಾಪದಿಂ ನುಡಿದಂಥ ವಾಣಿಯ ।
ಪಾಪ! ಕೇಳಿದ ಮೇಲೆಮಾತನು ಮುನಿಗೆ ಯಿಂತೆಂದ ॥ ೨೩ ॥
ಸಕಲ ವಿದ್ಯೆಗಳಲ್ಲಿ ಪಾರಗ । ಸುಕೃತಿಯಾದಂಥೋರ್ವ ವಿಪ್ರನು ।
ಭಕುತಿಯಿಂ ಗುರ್ವರ್ಥಕಾಮನೆಯಿಂದ ಬಂದಿರಲು ॥
ಅಕಟ! ರಘುವರನವನಿಗರ್ಥವ । ಪ್ರಕೃತದಲಿ ಕೊಡದನ್ಯರಾಜನ ।
ನಿಕಟದಲಿ ಕಳುಹಿರ್ದನೆಂದಪವಾದ ಬೇಡೆನಗೆ ॥ ೨೪ ॥
ಎನ್ನ ಹೋಮಾಗಾರದಲಿ ನೀ- । ನಿನ್ನು ಮೂರ್ ದಿನಗಳನು ಕಳೆವುದು ।
ಮನ್ನಿಸುವೆನಾಂ ನಿನ್ನ ನಾಲ್ಕನೆ ವಹ್ನಿಯುಂದದಲಿ ॥
ಇನ್ನು ಯತ್ನವ ಮಾಡಿ ತಪ್ಪದೆ । ಗನ್ನ ಮಹಿಮನೆ ನಿನ್ನ ಕಾಮನೆ- ।
ಯನ್ನು ಪೂರೈಸುವೆನು ಸರ್ವೇಶ್ವರನ ದಯೆಯಿಂದ ॥ ೨೫ ॥
ಹೀಗೆ ರಘುಪತಿ ನುಡಿದ ಕೂಡಲೆ । ಹಾಗೆ ಜರುಗಲಿಯೆಂದು ಕೌತ್ಸನು ।
ರಾಗದಿಂ ಸಾಗಿದನು ಹೋಮಾಗಾರ ಕಿಳೆಪತಿಯು ॥
ಯಾಗ ಕಾರ್ಯಕ್ಕಾಗಿ ಹಣವನು । ಸಾಗರಾಂಬರೆಯಿಂದ ಕೊಂಡಿಹೆ- ।
ನೀಗ ಧನದನ ಧನವ ಕೊಳ್ಳುವೆನೆಂದು ಯೋಚಿಸಿದ ॥ ೨೬ ॥
ಗುರುವಸಿಷ್ಠನು ಕರುಣೆಯಿಂ ರಘು- । ವರನಿಗಭಿಷೇಚನವ ಮಾಡಿದ
ಸರಸ ಸಮಯಕ್ಕೆರೆದ ಮಂತ್ರೋದಕದ ಬಲದಿಂದ ॥
ಧರಣಿ ಸಾಗರ ಗಗನಗಳ ಮೇಲ್ । ನಿರುತದಲ್ಲ ನಿರುದ್ಧಗತಿಯಿಂ ।
ಭರದೆ ಯಾತನ ರಥವು ಮಾರುತನಂತೆ ಚರಿಸುವದು ॥ ೨೭ ॥
ಚಾರು ಸುಂದರ ತೇರಿನಲಿ ರಘು- । ವೀರ ತನ್ನಯ ಚಾಪವನು ಮೇಣ್ ।
ಕ್ರೂರ ಶರ-ಶಸ್ತ್ರಾಸ್ತ್ರಗಳ ಸಂಭಾರವನ್ನಿರಿಸಿ ॥
ಮಾರಹರ-ಸಖನನ್ನು ಮರುದಿನ । ಘೋರ ಸಂಗ್ರಾಮದಲಿ ಮರ್ದಿಸಿ ।
ಪಾರುವನ ರಣ ತೀರಿಸುವೆ ನಾನೆಂದು ಮಲಗಿದನು. ॥ ೨೮ ॥
ಎದ್ದು ಪ್ರಾತಃಕಾಲದಲಿ ರಘು । ಸಿದ್ಧನಾಗಿರಲಾಗಿ ಯುದ್ಧಕೆ ।
ಬದ್ಧ ಹಸ್ತಕನಾಗಿ ಸೇನಾಧಿಪನು ವಿನಯದಲಿ ॥
ಬುದ್ಧಿ ನಿನ್ನಿನ ರಾತ್ರಿಯಲಿ ಸಂ- । ವೃದ್ಧಕನಕದ ವೃಷ್ಟಿಯಾಯಿತು ।
ಯುದ್ಧ ಕಾರ್ಯಕೆ ಪೋಗಲೇತಕೆ ಯೆಂದು ಬಿನ್ನವಿಸೆ. ॥ ೨೯ ॥
ಹರನ ಸಖನಿಂದಾಗ ಕಾಂಚನ । ಗಿರಿಯ ತೆರದಲಿ ಬಂದ ಧನವನು ।
ಕರೆದು ವರತಂತುವಿನ ಶಿಷ್ಯನ ತನ್ನಯೆದುರಿನಲಿ ॥

ಕರದೆಯುದಕವ ಕೊಂಡು ರಾಜನು । ಪರಮ ಹರುಷದೆ ಬಿಟ್ಟು ನುಡಿದನು ।
ಹರಿಗೆಯರ್ಪಣೆಯಾಗಲಿದು ಮುನಿ ನಿನ್ನ ದಯೆಯಿಂದ ॥ ೩೦ ॥
ಧನದನಿಂ ದೊರೆತೆಲ್ಲ ಧನವನು । ಜನಪ ರಘುಪತಿ ಕೊಟ್ಟು ಕೃಷ್ಣಾ- ।
ರ್ಪಣೆಯ ಮಾಡಿದ ದಾನಶೌಂಡತೆಯನ್ನು ಮೇಣ್ಮುನಿಯೆ ॥
ತನಗೆ ಗುರುದಕ್ಷಿಣೆಯಕಿಂತಲು । ಹಣವು ಹೆಚ್ಚಿಗೆ ಬೇಡ ಬೇಡೆಂ- ।
ದೆನುವ ಪರಿಯನು ಕಂಡು ಪೌರರು ಹಾಡಿ ಹರಸಿದರು ॥ ೩೧ ॥
ನೂರು ಮಯುಗಳ ಮೇಲೆ ರಾಜನು । ಪಾರುವನ ಹಣವನ್ನು ಹೇರಿಸಿ ।
ಚಾರು ವಿಹಿತಾಚಾರದಂತೆಯೆ ಪರಮ ವಿನಯದಲಿ ॥
ಬಾರಿಬಾರಿಗೆ ನಮಿಸೆ ವಿಪ್ರನು । ತೋರಸಂತಸದಿಂದ ರಘುವಿನ ।
ಮೋರೆ ನೋಡುತ ಶಿರದ ಮೇಲ್ಕರವಿಟ್ಟು ಪೇಳಿದನು ॥ ೩೨ ॥
ಪ್ರೀತಿಯಿಂ ಪ್ರಜೆಗಳನು ಪಾಲಿಪ । ನೀತಿವೃತ್ತನೆ ನಿನ್ನ ಮನಸಿನ ।
ಹೇತುವನು ಕ್ಷಿತಿದೇವಿ ಪೂರಿಪುದೇನು ಸೋಜಿಗವೋ ॥
ಸಾತಿಶಯವಿದು ನನಗೆ ತೋರ್ಪುದು । ಧೂತಪಾಪನೆ ವ್ಯೋಮವಾದರು ।
ಮಾತು ಮನ್ನಿಸಿ ನಿನ್ನ ಕಾಮನೆಯನ್ನು ದೋಹಿಪುದು! ॥ ೩೩ ॥
ಭೂಮಿಪನೆ ನಿನಗಿನ್ನು ಜಗದೊಳು । ಕಾಮನೀಯ ಪದಾರ್ಥ ಕಾಣೆನು ।
ಕಾಮಿತಾರ್ಥವನಿತ್ತು ಸಜ್ಜನರನ್ನು ಪಾಲಿಸುವೆ ॥
ಕಾಮಜನಕನು ನಿನಗೆ ಸದ್ಗುಣ- । ಧಾಮನಾದಂಥೋರ್ವ ಸುತನನು ।
ನೇಮದಿಂ ಕೊಡಲೆಂದು ಪ್ರೇಮದೆ ನಾನು ಹರಸುವೆನು ॥ ೩೪ ॥
ಹೀಗೆಯಾಶೀರ್ವಾದವನು ತಾ- । ನಾಗಿ ಕೌತ್ಸನು ಕೊಟ್ಟು ನೃಪನಿಗೆ ।
ಪೋಗಿ ಬರುತಿಹೆನೆಂದು ಪೇಳಿದ ಮೇಲೆ ತೆರಳಿದನು ॥
ಭೋಗಿಶಯನನ ಕರುಣೆಯಿಂದಲೆ । ಬೇಗ ರಾಜನಿಗೋರ್ವ ತತ್ಸಮ ।
ಪೂಗಣೆಯನಂತೆಸೆವ ಸುಂದರ ಸುತನು ಪುಟ್ಟಿದನು ॥ ೩೫ ॥
ಅರಸುಪೆಂಡತಿ ಬ್ರಾಹ್ಮದೆಶೆಯಲಿ । ಹರನ ವರತನುಜಾತನಂತಹ ।
ಸರಸಸುಂದರ ಪುತ್ರರತ್ನವ ಪಡೆದಳಾ ಸುತಗೆ ॥
ಸುರರ ಜ್ಯೇಷ್ಠನ ಪೆಸರಿನಿಂದಲೆ । ನರಪ ರಘುವಜನೆಂದು ಪ್ರೇಮದೆ ।
ಹರುಷದಿಂ ನಾಮಾಭಿಧಾನವನಿಟ್ಟು ಕರೆಯುವನು ॥ ೩೬ ॥
ಒಂದು ದೀಪದ ಕಲಿಕೆಯಿಂ ಮ- । ತ್ತೊಂದು ಸೊಡರನು ಹಚ್ಚಿದರೆ ಗಡ- ।
ಚೆಂದ ಚಲುವಿಕೆಯಲ್ಲಿಯವುಗಳ ಸಾಮ್ಯವಿರುವಂತೆ ॥
ತಂದೆ ರಘುವಿನ ಮನಸಿನುನ್ನತಿ । ಸುಂದರಾಕೃತಿ ಮತ್ತೆ ಗುಣಗಳು ।
ಕಂದನಾದಜನಲ್ಲಿ ಪೂರ್ಣತೆಯಿಂದ ಬಂದಿಹವು ॥ ೩೭ ॥

ಗುರುವಿನಾಶ್ರಮದಲ್ಲಿ ವಿದ್ಯೆಯು । ಪರಮ ಲಾಲಸೆಯಿಂದ ಕಲಿತಿಹ ।
ತರುಣನಾದಜ ರಾಜನಂಗದ ಚಲುವಿಕೆಯು ಕಂಡು ॥
ಧರಣಿದೇವಿಯು ಮರುಳುಗೊಂಡಳು । ಹಿರಿಯುನಾಜ್ಞೆಯು ಮಾರ್ಗನೋಡುತೆ ।
ವರನ ಕಾಂಕ್ಷಿಪ ಧೀರವಧುವಿನ ತೆರದೆ ಕುಳಿತಿಹಳು ॥ ೩೮ ॥
ಇರಲಿ ಯಿಂತಹ ಸಮಯದಲಿ ರಘು- । ವರನ ಕಡೆ ವೈದರ್ಭದೇಶದ ।
ನರಪನಿಂದಟ್ಟಿರ್ದ ದೂತನು ಬಂದು ವಿನಯದಲಿ ॥
ಅರುಹಿದನು ನಮ್ಮರಸುತಂಗಿಯು । ವರಸಯುಂಬರಕಾಗಿ ಯಜನನು ।
ಕರೆಯ ಬಂದೆನು ದೊರೆಯೆ ಕೃಪೆಯಿಂದವನ ಕಳುಹೆಂದು ॥
ಚರನ ವಚನವ ಕೇಳಿ ರಾಜನು । ತರುಣ ದೆಶೆಯನ್ನಾಂತ ಕುವರನ ।
ಪರಿಣಯದ ಹೊತ್ತೊದಗಿ ಬಂದಿಹುದೆಂದು ಮನಸಿನಲಿ ॥
ಅರಿತು ವೈದರ್ಭೇಶನಣುಗೆಯ । ವರಸಯುಂಬರಕಾಗಿ ಯಜನನು ।
ಹೊರಡಿಸಿದನಾಗವನ ಸಂಗಡ ಕೊಟ್ಟು ಸೈನ್ಯವನು ॥ ೪೦ ॥
ದಾರಿಯಲ್ಲಲ್ಲಲ್ಲಿ ಸುಂದರ । ಡೇರೆ ರಾಹುಟಿಗಳನು ಹೊಡೆದರು ।
ಮೀರಿದುತ್ಸವದಿಂದ ಪೌರರು ತಂದು ಕಾಣ್ಕೆಗಳ ॥
ವೀರರಘುಪತಿ ಸುತನಿಗರ್ಪಿಸಿ । ತೋರಿದರು ನಿಜಭಕ್ತಿಯನು ಸಂ- ।
ಚಾರವಜನಿಗೆ ಕ್ರೀಡೆಯಂದದೆ ಸೌಖ್ಯಜನಿಸಿದುದು ॥ ೪೧ ॥
ನಡೆದು ಮಾರ್ಗವನೆಲ್ಲ ಸೈನ್ಯವು । ತಡೆಯದೇ ಶ್ರಮವನ್ನು "ರೇವೆಯ"
ಧಡದೆ ಶೀತಲ ಬಿಲ್ವ-ತರುಗಳ ತೋಪಿನಲ್ಲಂದು ॥
ಕಡು ಪರಾಕ್ರಮಿಯಾದ ಭಾವೀ । ಪೊಡವಿ-ಯೊಡೆಯನ ಕೂಡ ವಿಶ್ರಮ ।
ಪಡೆದುಕೊಳ್ಳುವದಕ್ಕೆ ಯಿಳಿದಿತು ಪರಮ ಹರುಷದಲಿ ॥ ೪೨ ॥
ಪೀನ ಗಂಡಸ್ಥಳದೆ ಸ್ರವಿಸಿದ । ದಾನ-ವಾರಿಯ ಗಂಧವನ್ನಾ- ।
ಘ್ರಾಣಿಸುತೆ ನರ್ಮದೆಯ ನೀರಿನ ಮೇಲೆ ಮಧುಪಗಳ ॥
ಶ್ರೇಣಿಗಳು ಝೇಂಕರಿಸುತಿರೆ ಮ- । ದ್ದಾನೆ ನೀರ್ಮೇಲ್ಭಾಗಕೆದ್ದಿತು ।
ಶಾನೆಯುದರ ಶರೀರ ನಿರ್ಮಲವಾಗಿ ಶೋಭಿಸಿತು ॥ ೪೩ ॥
ನೀರಿನಲಿ ಚಿರಕಾಲವರೆಗೀ । ವಾರಣವು ನೆರೆ ಮಿಂದು ಹತ್ತಿದ ।
ಗೈರಿಕೆಯು ತೊಳೆದೆಲ್ಲ ದೇಹವು ಸ್ವಚ್ಛವಾಗಿರಲು ॥
ಕೋರೆ ಪಲ್ಗಳ ಕೂರ ತುದಿಗಳು । ತೋರ ಪರ್ವತದರೆಯ ಸಂಗಡ ।
ಬಾರಿಬಾರಿಗೆ ಕಾದಿ ಮೊಂಡಾದಂತೆ ತೋರಿದವು ॥ ೪೪ ॥
ಸೊಂಡೆಯನು ಮೇಲೆತ್ತಿ ರೇವೆಯ । ದಂಡೆಗಭಿಮುಖವಾಗಿ ಯೀಸುತ ।
ಖಂಡಿಸುತ್ತುದ್ದಂಡವಾಗಿಹ ತೆರೆಗಳನು ಭರದೆ ॥

ತುಂಡದಿಂ ಘನಘೋರ ಗರ್ಜನೆ । ಪುಂಡತನದಿಂ ಮಾಡಿ ಬರುತಿಹ ।
ಗಂಡುಮದಗಜವನ್ನು ಕಂಡರು ಸರ್ವ ಸೈನಿಕರು ॥ ೪೫ ॥
ಪರಮ ವಿಸ್ತೃತವಾದ ಗಿರಿಯಂ- । ತಿರುವ ಕರಿವರನುರದೆ ತನ್ನಯ ।
ಹರಿದ ಶೈವಲ ಜಾಲವನು ಮುಂಭಾಗದಲಿ ಸುರ್ಗಿ ॥
ತ್ವರದೆ ತೀರಕೆ ಬರುವ ಪೂರ್ವದೆ । ಪಿರಿಯ ತೆರೆಗಳು ಶಬ್ದ ಮಾಡುತ ।
ಭರದೆ ಬಂದಪ್ಪಳಿಸಿ ಧರೆಯನು ತೊಯ್ಸಿ ಬಿಟ್ಟಿಹವು ॥ ೪೬ ॥
ನೀರಿನಲಿ ಮುಳುಮುಳುಗಿ ಸ್ವೇಚ್ಛಾ- । ಚಾರದಿಂ ಮಜ್ಜನವಗೈದಾ-
ವಾರಣದ ಶಿರದಿಂದ ಸ್ರವಿಸುವ ದಾನ-ವಾರಿಯದು ॥
ಸೋರದೇ ಕ್ಷಣಮಾತ್ರ ನಿಂತರು । ತೀರದಲ್ಲಿಯ ಗ್ರಾಮ್ಯಕರಿಗಳು ।
ತೋರಿದಾಗಲೆ ಮುಂಚಿನಂತೆಯೆ ಸೋರತೊಡಗಿದುದು ॥ ೪೭ ॥
ಏಳು ಪರ್ಣಗಳಿರ್ದ ವೃಕ್ಷದ । ಪಾಲಿನಂತತ್ಯುಗ್ರವಾಗಿಹ ।
ಶೈಲವಂತಹ ಗಜದ ಮದಗಂಧವನು ತಾಳದಲೆ ॥

ಪಾಲಿಸಿದ ಮದ್ದಾನೆಗಳು ಗಡ । ಪಾಲಕರ ಶಾಸನವ ಕೇಳದೆ ।
ಗಾಳಿಯಂತಲ್ಲಿಂದ ದಿಕ್ಪಾಲಾಗಿಯೋಡಿದವು ॥ ೪೮ ॥
ಸೇರಿ ಪಾಳಯದಲ್ಲಿ ಗಜವದು । ತೇರುಗಳನುರೆ ಚೂರು ಮಾಡಿತು ।
ಜಾರಿದವು ಹರಿದೊಗೆದು ಪಾಶಗಳನ್ನು ಕುದುರೆಗಳು ॥
ಚೀರಿದರು ಹೆಂಗಸರು ಚಿಟ್ಟನೆ । ವೀರರಾದರು ಭೀತಿಗೊಂಡರು ।
ತೋರ ಹಾಹಾಕಾರವಾಯಿತು ಸಕಲ ಸೈನ್ಯದಲಿ ॥ ೪೯ ॥
ತಾನೆ ಮೈಮೇಲೇರಿ ಬರುವಂ- । ಥಾನೆಯನು ಸಂಹರಿಸಿದರೆ ಘನ- ।
ಹಾನಿ ತಟ್ಟುವದೆಂದು ಧರ್ಮವನರಿತ ರಾಘವನು ॥
ಜಾಣತನದಿಂ ಗಜದ ಗಂಡ- । ಸ್ಥಾನದಲಿ ಹಗುರಾಗಿ ಪೊಡೆದನು ।
ಬಾಣವನ್ನಲ್ಲಿಂದಲಾಕರಿಯನ್ನು ಹೊರಡಿಸಲು ॥ ೫೦ ॥
ಕರದ ಸ್ಪರ್ಶವದಾದ ಕೂಡಲೆ । ಕರಿಯು ರೂಪವ ತ್ಯಜಿಸಿಯಾಗಲೆ ।
ಸರಸ ಸುಂದರವಾದ ಪುಷ್ಕರ-ಚರನ ರೂಪವನು ॥
ಧರಿಸಿತಾಗಜ ನೋಡಿಯೆಲ್ಲರು । ಪರಮ ವಿಸ್ಮಿತರಾದರಲ್ಲದೆ ।
ಧರಣಿತಲ ಝಗಝಗನೆ ಬೆಳಗಿತು ಪೇಳಲೇನದನು ॥ ೫೧ ॥
ಬಳಿಕ ಮುತ್ತಿನ ಹಾರದಿಂದುರ । ಹೊಳೆದು ಬೆಳಗುತ್ತಿರುವ ಪುರುಷನು ।
ನಳಿನಲೋಚನನಾದ ರಾಘವನನ್ನು ಸಂಸ್ತವಿಸಿ ॥
ಗಳಿಗೆಯೊಳು ಮಂದಾರ ಪೂಗಳ । ಮಳೆಯನಾತನ ಮೇಲೆಕರೆದನು ।
ನಲವಿನಿಂ ನಸುನಕ್ಕು ವಾಗ್ಮಿಯು ನುಡಿದನೀಪರಿಯ ॥ ೫೨ ॥

ಎನಗೆ " ಪ್ರಿಯವಾಕ್ಯೆಂ "ದು ಕರೆವರು । ಮನೆಯು ಸುರಲೋಕದಲಿಯಿರುವದು।
ಜನಿಸಿದೆನು " ಪ್ರಿಯದರ್ಶನನ " । ಸತ್ಕುಕ್ಷಿಯಲಿ ನೃಪನೇ ॥
ಎನಗೆ ನನ್ನಯ ಗರ್ವಮೂಲಕ । ಮುನಿ ಮತಂಗನು ಶಪಿಸಿದದರಿಂ ।
ವನದೆ ಘನಗಜನಾಗಿ ಯೀವರೆಗಿಲ್ಲಿ ಭ್ರಮಿಸಿದೆನು ॥ ೫೩ ॥

ಆನು ಮುನಿ ಶಾಪಿಸಿದ ನಂತರ । ದೀನಮುಖದಿಂದವನ ಪದಗಳ ।
ರೇಣುಗಳಮೇಲುರುಳಿ ಪರಿಪರಿಯಿಂದ ಬಿನ್ನವಿಸೆ ॥
ಭಾನು ತಾಪವು ದೂರವಾಗಲು । ತಾನೆ ನೀರ್ತಂಪಾಗುವಂದದಿ ॥
ಶಾನೆ ಮುನಿಪನು ಶಾಂತನಾದನು ನೈಜಭಾವದಲಿ ॥ ೫೪ ॥

ಪರಮ ಧಾರ್ಮಿಕನಾದ ರವಿಕುಲ- । ವರ-ರಘೂದ್ವಹತನುಜನಜನೃಪ ।
ಶರದೆ ನಿನ್ನಯ ಶಿರವ ಭೇದಿಸಿ ಬಿಡಲು ತಕ್ಷಣಕೆ ॥
ಸುರರಿಗೊಪ್ಪುವ ನಿನ್ನ ಮುಂಚಿನ । ಸರಸರೂಪವ ಧರಿಸುತಿಹೆ ಯೆಂ- ।
ದರುಹಿದನು ತಾಂ ಮುನಿವರೇಣ್ಯನು ನನಗೆ ಕರುಣೆಯಲಿ ॥ ೫೫ ॥

ನಿನ್ನದರುಶನವನ್ನು ಬಯಸುತ । ಗನ್ನಮಹಿಮನೆ ನಾನು ಪ್ರತಿದಿನ ।
ಬನ್ನಬಡುತಲೆ ಕಾಲಕಳೆಯುತ್ತಿರ್ದೆನೀವರೆಗೆ ॥
ಎನ್ನಶಾಪವ ಮೋಚಿಸಿರ್ದದಕಿ- । ನ್ನು ಪ್ರತಿಹಿತಮಾಡದಿರ್ದರೆ ।
ನನ್ನ ಜನುಮದ ಸಾರ್ಥಕವನಾನೇನು ತಿಳಿಯುವೆನು ॥ ೫೬ ॥

ಕೊಡುವೆ ಪಿಡಿ ಸಮ್ಮೋಹನಾಸ್ತ್ರವ । ನೊಡೆಯ ಗಂಧರ್ವೇಂದ್ರನಿರ್ಪನು, ।
ಬಿಡುವ ಮೇಣ್ ಸಂಹರಣ ಮಾಡುವ ಮಂತ್ರ-ತಂತ್ರಗಳ ॥
ಒಡನೆ ಪೇಳುವೆ ನಿನಗೆ ರಾಜನೆ । ಕಡು ಪರಾಕ್ರಮಿ ಶತ್ರು-ವಿಜಯವ ।
ಬಿಡದೆ ಮಾಡುವದಲ್ಲದೇ ಸಂಹಾರಮಾಡದಿದು ॥ ೫೭ ॥

ಬಾಣವನ್ನೆನಗೆಚ್ಚಿದರು ನೀಂ । ಪ್ರಾಣವನು ಕಾಯ್ದೀಗಲೆನ್ನೊಳು ।
ನೀನು ದಯೆಯನು ತೋರಿಸಿದೆ ಮಹನೀಯ ಬಾಂಧವನೇ ॥
ಏನು ಕಾರಣ ಲಜ್ಜೆ ತಾಳುವೆ । ಸಾನುರಾಗದೆ ಗ್ರಹಿಸಿಯಸ್ತ್ರವ ।
ಜಾಣನೇ ನಾಂ ಬೇಡಿಕೊಂಬೆನು ಮನ್ನಿಸೆನ್ನನ್ನು ॥ ೫೮ ॥

ಮಾನವನು ಕೊಟ್ಟವನ ಬಿನತಿಗೆ । ಸ್ನಾನವನು ನರ್ಮದೆಯ ಜಲದಲಿ ।
ದಾನವನು ಮೂರ್ಬಾರಿ ವಿಧಿಯಿಂ ಮಾಡಿಯಾದರದೆ ॥
ಆನನವ ಬಡಗಣಕೆ ಮಾಡಿದ । ಮಾನವೇಂದ್ರನು ಭಕ್ತಿಪೂರ್ವಕ ।
ನೂನವೇನೇನಿಲ್ಲದಲೆ ತಾಂ ಕಲಿತ ಮಂತ್ರಗಳ ॥ ೫೯ ॥

ಇನಿತು ಪರಿಯಲಿ ದೈವಯೋಗದೆ । ಜನಪ ಪುಷ್ಕರ ಚರರು ಕಲೆತರು ।
ಜನಿಸಿತಾಗವರೀರ್ವರಲಿ ದೃಢವಾದ ಗೆಳೆತನವು ॥

ಪ್ರಣತಿಯನು ಮಾಡಿದರು ಪ್ರೇಮದೆ । ಯಿನಿಬರೂ ತಂತಮ್ಮ ಮಾರ್ಗದೆ ।
ವಿನಯಪೂರ್ವಕವಾಗಿ ದಾರಿಯ ಪಿಡಿದು ಸಾಗಿದರು ॥ ೬೦ ॥
ಮೆಟ್ಟಿ ಮಾರ್ಗವ ನಡೆದು ಕುವರನು । ಪಟ್ಟಣದ ಹತ್ತರವೆ ಬಂದುದ- ।
ದಿಟ್ಟ ವಾರ್ತಾಹರರ ಮುಖದಿಂ ಕೇಳಿ ಸುದ್ದಿಯನು ॥
ತಟ್ಟನೇ ವೈದರ್ಭರಾಜನು । ಕೊಟ್ಟು ಬಹುಮಾನವನು ಹರುಷದೆ ।
ಮುಟ್ಟಿ ಮನದಿಂದವನ ಭೂಪತಿಯೆದುರುಗೊಂಡಿಹನು ॥ ೬೧ ॥
ಪುರಕೆಯಭಿಮುಖವಾಗಿಯಜನನು । ಹೊರಡಿಸಿದ ಮೇಲಲ್ತಾನು ಭೋಜನು ।
ಪರಮ ವಿನಯದೆ ಮುಂದೆ ನಡೆಯುತೆ ಪೊಕ್ಕ ನಗರದಲಿ ॥
ಸರಸವಾದುಪಚಾರ ಮಾಡುತ । ನೆರೆದ ಜನರಿಗೆ ಯಜನೆಯೊಡೆಯನು ।
ಧರಣಿಪತಿ ತಾನವನ ಸೇವಕನೆಂದು ತೋರಿದುದು ॥ ೬೨ ॥
ಪಟದೆ ನಿರ್ಮಿಸಿದಂಥ ಸುಂದರ । ಕುಟಿಯ ನಿಕಟದೆ ತುಂಬಿದಂತಹ ।
ಘಟವ ಸ್ಥಾಪಿಸಿ ಸಜ್ಜು ಮಾಡಿದ ಸ್ಥಾನಕಜನೃಪನು ॥
ಥಟನೆ ಮಾರ್ಗದೆ ಭೋಜಸೇವಕ । ಭಟರ ಪ್ರಣತಿಗಳನ್ನು ಕೊಳ್ಳು- ।
ತ್ತುಟಣ ಮಾಡಿದನಪರ ಮನ್ಮಥನಂತೆ ಕಣ್ಗೆಸೆದು ॥ ೬೩ ॥
ತರುಣಿ ತನ್ನಯ ಪರಮ ಪುರುಷನ । ವಿರಹವನು ಸೈರಿಸದೆ ಮನದೊಳು ।
ಮರುಗಿ ನಿಶೆಯನು ಕಳೆವ ತೆರದಲ್ಲೆಂದು ರಾಘವನು ॥
ನೆರೆದ ನೃಪತಿಗಳಲ್ಲಿ ತನ್ನನು । ವರಿಸುವಳೆ ವೈದರ್ಭಿಯೆಂದುರೆ ।
ಯಿರುಳು ಜಾಗರದಲ್ಲಿ ನಿದ್ರೆಯ ತೊರೆದು ಕಳೆದಿಹನು ॥ ೬೪ ॥
ಹಾಸಿಗೆಯ ಮೇಲ್ಹೊರಳಿ ದೇಹಕೆ । ಪೂಸಿದಂತಹ ರಾಗವುದುರಿರೆ ।
ಬೀಸೆ ಬೆಳಗಿನ ತಂಪುಗಾಳಿಯು ರಾಘವನ ಕಣ್ಗೆ ॥
ಸೂಸಿ ನಿದ್ರೆಯು ಬಂದು ಮಲಗಿರೆ । ತಾಸಿನೊಳು ವೈತಾಲಿಕರು ಮೃದು ।
ಭಾಷೆಯಿಂದವನನ್ನು ಬಣ್ಣಿಸಿ ಯೆಬ್ಬಿಸಿದರಾಗ ॥ ೬೫ ॥
ಧರಣಿಯನು ಪಾಲಿಸುವ ಭರದ- । ಲ್ಲೆರಡು ಭಾಗಗಳನ್ನು ಬ್ರಹ್ಮನು ।
ವಿರಚಿಸಿದನದರಲ್ಲಿ ರಘುಪತಿಗೊಂದು ಭಾಗವನು ।
ಧುರದ ಬೇರ್ಭಾಗವನು ಕುವರನೆ । ಕರುಣೆಯಿಂ ನಿನಗರ್ಪಿಸಿರುವನು ।
ತೊರೆದು ನಿದ್ರೆಯನೇಳು ಪ್ರಾತಃಕಾಲವಾಗಿಹುದು. ॥ ೬೬ ॥
ಪತಿಯು ಪರದಾರದಲಿ ನಿಶೆಯನು । ಗತಿಸೆಯಬಲೆಯು ತಾಳಲಾರದೆ ।
ವ್ಯಥೆಯ ಪ್ರತಿಕೃತಿಯನ್ನು ನೋಡುತ ಕಳೆವ ತೆರದಲ್ಲಿ ॥
ಕೃತಿಯೆ ನಿದ್ರಾವಶದೆ ಲಕ್ಷ್ಮಿಯು । ಗತಿಯು ನೀನದರಂತೆ ಮಾಡಲು ।
ಹಿತದೆ ಚಂದ್ರನ ನೋಡಿ ರಮಿಸುತ್ತಿರುವಳೇಳಜನೇ ॥ ೬೭ ॥

ತೆರೆದು ಕಣ್ಗಳನೀಗ ಯುಗಪತ್। ಸರಸ ನಯನಂಗಳಿಗೆ ಕಮಲದ,।
ನಿರುತದಲಿ ಪ್ರಸ್ಪಂದ ಹೊಂದುತ್ತಿರುವ ನೇತ್ರಗಳ ॥
ಸರಸ ತಾರಕೆಗಳಿಗೆ ರಾಜನೆ। ವಿರಮವಿಲ್ಲದೆ ಮೆರೆವ ಭ್ರಮರದ।
ಪರಮ ಸರಿಯಾದಂಥ ಸಾದೃಶವನ್ನು ಕಣ್ಗೊಳಿಸು ॥ ೭೮ ॥

ನರಪನೇ ತವಮುಖದ ಸುರಭಿಗೆ। ಸರಿಯು ಮಾಡುಹೆನೆಂದು ವಾಯುವು।
ತರುಗಳಿಂದುದಿರಿರ್ದ ಕುಸುಮಗಳನ್ನು ಸ್ವೀಕರಿಸಿ ॥
ತರಣಿ ಯುದಯಕ್ಕರಳಿದಂತಹ। ಸರಸ ಸರಸಿಜ ಗಂಧವನ್ನಪ-।
ಹರಿಸಿ ಪರಗುಣದಿಂದ ಮೆರೆಯುತ್ತಿಲ್ಲಿ ಬಂದಿಹನು ॥ ೭೯ ॥

ನಿನ್ನ ತುಟಿಗಳ ಮೇಲೆ ಪಲ್ಗಳ। ಜೊನ್ನ ಪಸರಿಸಿ ಹೊಳೆವ ಬೆಳ್ನಗೆ-।
ಯನ್ನು ಸ್ಪರ್ಧಿಸಲೆಸಗಿದಂತಹ ವೃಕ್ಷಜಾತಿಗಳ ॥
ಕೆನ್ನವಾದೆಳೆದಳಿರುಗಳ ಮೇಲ್। ಸನ್ನುತಾಂಗನೆ ಬಹಳ ಬಿದ್ದಿ-।
ಬ್ಬನ್ನಿ ಹನಿಗಳು ತೊಳೆದ ಮುತ್ತಿನ ತೆರದಿ ತೋರುವವು ॥ ೭೦ ॥

ಸರಸ ಬಾನ್ದಳದಲ್ಲಿ ತರಣಿಯು। ಬರುವ ಮೊದಲೆಂಹ ಗರುಡನಗ್ರಜ।
ಭರದೆ ತಿಮಿರವನೆಲ್ಲ ದೂರೀಕರಿಪ ತೆರದಲ್ಲಿ ॥
ದೊರೆಯೆ ನಿದ್ರೆಯ ತೊರೆದು ಬೇಗನೆ। ಕರಿಗಳನು ಹರಿಯಂತೆ ರಿಪುಗಳ।
ಶಿರಗಳನು ತರೆದೊಗೆದರೇತಕೆ ಪಿತನು ಶ್ರಮಿಸುವನು ? ॥ ೭೧ ॥

ಎರಡು ಮಗ್ಗುಲ್ಗಳಲಿ ಮಲಗಿದ। ದ್ವಿರದಗಳು ಚೇತರಿಸಿ ಕಟ್ಟಿದ।
ಸರಪಣಿಯ ಸಪ್ಪಳವ ಮಾಡುತ ಸಾಸ ಹೊಯ್ಯುವವು ॥
ತರುಣ ತರಣಿಯ ಕಿರಣಗಳು ಸಲೆ। ಕರಿಯ ಪಲ್ಗಳ ಮೇಲೆ ಬಿದ್ದವು।
ಗಿರಿಯು ಗೈರಿಕೆಯರುಣ ವರ್ಣದ ಕಾಂತಿ ತಾಳಿಹವು ॥ ೭೨ ॥

ಅರಿವೆ ಲಾಯಗಳಲ್ಲಿ ಸುಂದರ। ತುರಗಗಳು ಮಲಗೆದ್ದು ನಿಂತವು।
ಖುರದೆ ಧರೆಯನು ಕೆದರಿ "ಘುರಘುರ" ಶಬ್ದಗಳ ಮಾಡಿ ॥
ದೊರೆಯೆ ಸೈಂಧವದುಪಲಗಳನುರೆ। ಪರಮ ತೋಷದೆ ನೆಕ್ಕಿ ಮುಖನಿ-।
ಸ್ಸರಣದುಷ್ಣೋಚ್ಛ್ವಾಸದಿಂದವುಗಳನು ದೂಷಿಪವು ॥ ೭೩ ॥

ಅರಲುಗಳು ಬಿದ್ದಿಹವು ಸರದಿಂ। ಹರಿದು ಶಯ್ಯೆಯ ಮೇಲೆ ಸೊಡರಿನ।
ಸರಸತೇಜವು ಕಡಿಮೆಯಾಯಿತು ಹರುಷದಿಂ ಗಿಳಿಯು ॥
ಪರಮ ಮಂಜುಳವಾಣಿಯಿಂದಲೆ। ತಿರುಗಿ ಪಂಜರದೊಳಗೆ ನಿನ್ನಯ।
ಧರೆಯ ಪಾಲನೆ ಕರೆದು ಜಾಗರವನ್ನು ಗೊಳಿಸುವದು ॥ ೭೪ ॥

ಸುರರ ಪಾವನ ನದಿಯ ಪುಲಿನದೆ। ಹರುಷದಿಂದರಸಂಚೆಗಳು ಮೃದು।
ಸರಸರವದಿಂ ದಿಗ್ಗಜಂಗಳನೆಬ್ಬಿಸುವ ತೆರದಿ ॥

ತರುಣ ಸೂತಾತ್ಮಜರು ಸುಂದರ । ಸರದೆ ಯೀಪರಿಪಾಡಿದಾಗಲೆ ।
ತ್ವರದೆ ರಾಘವ ನೃಪನು ಹಾಸಿಗೆಯನ್ನು ತ್ಯಜಿಸಿದನು ॥ ೫೫ ॥
ಬಳಿಕ ಪ್ರಾತರ್ವಿಧಿಗಳನು ಮೇಣ್ । ಜಳಕವನು ಮುಗಿಸೆದ್ದು ಕೇಶರ- ।
ತಿಲಕವನು ಧರಿಸಿದನು ವಸ್ತ್ರಾಭರಣಗಳನಜನು ॥
ಅಳುಕದಲೆ ಬಹು ನೃಪರು ಕೂಡಿದ । ಸ್ಥಳಕೆ ಚರಿಸಿದನಾಗ ಬೇಗನೆ ।
ಗಳಿಸಿಕೊಳ್ಳುವದಕ್ಕೆ ವಧುವೈದರ್ಭಿಯನು ತನಗೆ ॥ ೫೬ ॥

೬ನೆಯ ಸರ್ಗ.

ಇಂದುಮತಿಯ ಸ್ವಯಂವರವು.

ವ್ಯೋಮಯಾನದೆ ಗಮಿಸುವಮರರ । ಕಾಮ-ಲೀಲೆಗಳನ್ನು ತಾಳಿದ ।
ಹೇಮ-ರತ್ನಾಭರಣ-ಮಂಡಿತರಾದ ನರವರರು ॥
ಹೇಮ ಸಿಂಹಾಸನದ ಮೇಲ್ತಾ- । ವಾ ಮಹಾಸಭೆಯಲ್ಲಿ ಸುಂದರ ।
ಕಾಮನಂತೆ ವಿರಾಜಿಸುವದನು ರಾಘವನು ಕಂಡ ॥ ೧ ॥
ರತಿಯ ಪ್ರಾರ್ಥನೆಯಿಂದಲೀಶನು । ಸತಿಗೆ ಪತಿಯನು ವಿತರಿಸಿದ ತನು- ।
ಭೃತನೆ ರಾಘವ-ರೂಪದಿಂದವತರಿಸಿ ಬಂದನೆನೆ ॥
ಕ್ಷಿತಿಪರೆಲ್ಲರು ಚಿತ್ತದಲಿ ಯಪ- । ಹತಿಯ ತಾಳಿದರಿಂದು ರಾಜನ ।
ಸುತೆಯು ತಮ್ಮನು ತ್ಯಜಿಸಿಯಜನನೆ ವರಿಸುತಿಹಳೆಂದು ॥ ೨ ॥
ರಾಜ ಭೋಜನು ತೋರಿಸಿದ ರಾ- । ರಾಜಿಸುವ ಸಿಂಹಾಸನದೆ ಮೃಗ- ।
ರಾಜ-ಶಾವಕನದ್ರಿ-ಶೃಂಗವನೇರು ವಂದದಲಿ ॥
ಓಜದಿಂದಜರಾಜನಾಗಲೆ । ರಾಜರೆಲ್ಲರು ನೋಡುತಿರೆ ಬಲು ।
ಸೋಜಿಗದೆ ತಾನೇರಿ ಕುಳಿತನು ಜನರು ಬೆರಗಾಗೆ ॥ ೩ ॥
ಒನಪಿನಿಂ ಸಂಚರಿಸುವಂತಹ । ವನ ಮಯೂರದ ಮೇಲೆ ಮಿನುಗುವ ।
ಜನನಿ ಪಾರ್ವತಿಯಣುಗ ಷಣ್ಮುಖನಂತೆ ಸಿರಿದಳೆದು ॥
ಕನಕ ನಾನಾ ರತ್ನಖಚಿತಾ- । ಸನದ ಮೇಲ್ಕುಳಿತಿರುವ ರಾಘವ- ।
ಜನಪನಲ್ಲಿಯ ಜನರ ಮನಗಳಿಗಂದು ತೋರಿದನು ॥ ೪ ॥
ಘನದ ಗಡಣಗಳಲ್ಲಿ ಚಪಲೆಯು । ತನುಗಳಲಿ ಚೇತನದ ಚಿತ್ಕಲೆ ।
ವನದ ವೀಚಿಗಳಲ್ಲಿ ದಿನಪನು ಶೋಭೆದಳೆದಂತೆ ॥
ಜನಪ ಸಮುದಾಯದಲಿ ರಾಘವ- । ನನುಪಮ ಶ್ರೀಯಿಂದ ಮಿನುಗುತೆ ।
ಜನರ ಮನಗಳನೆಳೆದುಕೊಂಡನು ಸಹಜ-ಲೀಲೆಯಲಿ ॥ ೫ ॥
ಭೋಜಸಭೆಯಲಿ ನೆರೆದ ರಾಜರ- ರಾಜಿಯಲಿ ಯಜರಾಜನೊರ್ವನೆ ।
ತೇಜದಿಂದುಡುರಾಜನುಡುಗಳ ನಡುವೆ ಪೊಳೆವಂತೆ ॥

ಮಾಜದೇ ಸುರ-ತರುಗಳಲಿ ಬಿ- । ಭ್ರಾಜಿಸುವವರ ಪಾರಿಜಾತದ ।
ಭೂಜದಂತೆಯೆ ಪರಮ ಸುಂದರನಾಗಿ ತೋರಿದನು ॥ ೬ ॥
ಸುಮದರಸವನು ಸವಿದು ನುಣ್ಣಗೆ । ಸು-ಮದ ಭರದಿಂ ಚರಿಪ ಗಜಗಳ ।
ಸು-ಮಹ-ವಾರಿಯು ಸುರಭಿಯನ್ನನು-ಸರಿಸಿ ಭ್ರಮರಗಳು ॥
ಭ್ರಮಿಸುವಂದದಿ ಜನರ ಕಣ್ಗಳು । ಶಮವ ಹೊಂದದೆ ರಾಘವನ ಮುಖ- ।
ಕಮಲವನು ಬಿಟ್ಟೆಲ್ಲ ಭೂಪತಿಗಳನು ನೋಡಿದವು ॥ ೭ ॥
ಅಗರು ಚಂದನ ಧೂಪಗಳ ನೆರೆ । ಹೊಗೆಯು ಸುತ್ತಲು ಮುತ್ತಿ ಮೇಲಕೆ ।
ಮುಗಿಲನೊಳಗಿನ ಧ್ವಜಗಳನು ಸಹ ಮುಸುಕಿಕೊಂಡಿರಲು ॥
ಬಿಗಿದು ಸಭೆಯಲಿ ಕುಳಿತು ರಾಜರ । ಸುಗುಣಗಳ ಮತ್ತವರ ವಂಶವ ।
ಹೊಗಳುತಿರೆ ಸ್ತುತಿ-ಪಾಠಕರು ಬಲು ಜಾಣತನದಿಂದ; ॥ ೮ ॥
ಚಾರಿಸುವ ಸುಶ್ರಾವ್ಯಮಂಗಲ । ಭೇರಿಮದ್ದಲೆ ವೀಣೆ ಸಂಬಳ- ।
ಚಾರು ವೇಣು ಸನಾದಿಗಳ ಮತ್ತಿತರ ವಾದ್ಯಗಳ ॥
ತೋರಮಂಜುಸ್ವರಗಳಿಂದಲೆ । ಸೂರೆಗೊಂಡ ಮಯೂರಗಳು ಘನ- ।
ದಾರವದ ಮಿಗೆ ಭ್ರಾಂತಿಯಿಂದಲೆ ನೃತ್ಯಮಾಡುತಿರೆ; ॥ ೯ ॥
ಸರಸ ವಸ್ತ್ರಾಭರಣಗಳನುರೆ । ಧರಿಸಿಯರಸನ ತರುಳೆ ಸಭೆಯುಲಿ ।
ವರನ ವರಿಸುವದಕ್ಕೆ ಪರಿಚಾರಕರ ಗಡಣದಲಿ ॥
ನರರು ಪೊತ್ತಿರುವಂಥ ಯಾನದೆ । ಚರಿಸಿದಳು ಸಭೆಯುಲ್ಲಿ ರಾಜರು ।
ಬೆರಗಿದರು ಲಾವಣ್ಯಲತಿಕೆಯು ರೂಪವನು ಕಂಡು ॥ ೧೦ ॥
ಕಮಲ-ಸಂಭವನಿಂದ ಸೃಜಿಸಿದ । ಕಮಲ-ಮುಖಿಯುಪ್ರತಿಮ ಸುಂದರ ।
ವಿಮಲ ರೂಪದೊಳೆಲ್ಲ ರಾಜರ ನೇತ್ರಪಂಕ್ತಿಗಳು ॥
ಭ್ರಮಿಸಿಯಲ್ಲಿಯೆ ಸಿಕ್ಕು ಬಿದ್ದವು । ರಮಿಸಿದರು ನೃಪರಾಗ ಚಿತ್ರದ ।
ಸಮವೆ ವಿಸ್ಮಯದಲ್ಲಿ ಕುಳಿತರು ರೆಪ್ಪೆಯಿಕ್ಕದಲೆ ॥ ೧೧ ॥
ಕೂಡಿದಂತಹ ರಾಜರೆಲ್ಲರು । ನೋಡಿವಧುವಿನ ರೂಪವನ್ನುರೆ ।
ಮೂಢರಾದರು; ತಮ್ಮ ಮನದಭಿಲಾಷೆಯನ್ನರುಹೆ ॥
ಮಾಡಿದರು ಪರಿಪರಿಯ ಚೇಷ್ಟೆಗ- । ಳಾಡಿದರು ಪ್ರೌಢೋಕ್ತಿಗಳ ಬಲು
ಬೇಡಿಕೊಂಡರು ದೇವನನು ಮನದಿಚ್ಛೆ ಸಿದ್ಧಿಸಲು ॥ ೧೨ ॥
ಅರಸನೋರ್ವನು ಕಮಲನಾಲವ । ಧರಿಸಿ ಕರಗಳ ಮಧ್ಯದಲಿ ಗರ- ।
ಗರನೆ ತಿರುಹುತ ಸರಸಿಜಾಂತಃ ಪರಿಮಳವ ಪರೆಪಿ ॥
ಸುರಭಿ ಪಾನಕೆ ಗಾನಮಾಡುತೆ । ಬರುವ ಭ್ರಮರಗಳನ್ನು ಪೀಡಿಸಿ ।
ಯುರುಹಿದನು ನಿನ್ನಾಜ್ಞೆ ಮೇರೆಗೆ ಚರಿಪೆನಾನೆಂದು ॥ ೧೩ ॥

ಸರಿದು ಕೇಯೂರಕ್ಕೆ ಸೇರಿದ। ಸರಸ ಪೂಸರವನ್ನು ಕರದಿಂ।
ಧರಿಸಿಯೋರ್ವನು ಪ್ರೇಮದಿಂದಲೆ ತೋರೆಯನು ತಿರುಹಿ ॥
ಸರಸಿಜಾಕ್ಷಿಯೆ ನಿನ್ನ ನೀಪರಿ। ಹರುಷದಿಂ ಪರಿಪಾಲಿಸುವೆನೆಂ-।
ದಿರದೆ ತನ್ನಾಶಯುವನಭಿನಯುದಿಂದ ತೋರಿದನು ॥ ೧೪ ॥

ಚಿತ್ತಪೂರ್ವಕ ಕೆಳಗೆ ನೋಡುತ। ಮತ್ತೆ ಯೋರ್ವನು ಲೀಲೆಯಿಂದಲೆ।
ಯೆತ್ತಿ ಪೊಳೆಯುವ ಪಾದದಂಗುಟವನ್ನು ತುಸು ಮಣಿಸಿ ॥
ಕೆತ್ತಿ ಸರಿಮಾಡಿರ್ದ ನಖದಿಂ-। ದೊತ್ತಿಗದ್ದುಗೆಯನ್ನು ಬರೆಯುತೆ।
ಸೋತ್ತಮಾಂಗಿಯ ಮನವನೆಳೆಯುವ ತೆರದಿ ನಟಿಸಿದನು. ॥ ೧೫ ॥

ಗದ್ದುಗೆಯ ಮೇಲೂರಿ ಕರವ-। ನ್ನೆದ್ದು ತೋರುವ ಭುಜದ ಭೂಪನು।
ತಿದ್ದಿಕೊಳ್ಳುತ ಹೆಗಲ ಮೇಲಿನ ದಿವ್ಯಹಾರವನು ॥
ಬದ್ಧ ಹಾರ್ದದೆ ಮಿತ್ರನೊಡನೆಯೆ। ಮುದ್ದು ಮಾತಾಡುತ್ತೆ ವಧುವನು।
ಗೆದ್ದುದಾದರೆ ಹೀಗೆ ಪಾಲಿಪೆನೆಂದು ತಿಳುಹಿದನು ॥ ೧೬ ॥

ಪ್ರಮದೆಯರು ಸಂಭ್ರಮದೆ ತಮ್ಮಯ। ರಮಣ-ಚಿತ್ತಾಕ್ರಮಣ ಮಾಡುವ।
ವಿಮಲ ಭೂಷಣದಂತೆ ಧರಿಸುವ ಕೇತಕೀ ದಲವ।
ಅಮಮ ! ಭೂಪತಿಯೋರ್ವನುಗುರಿಲೆ। ಕ್ರಮದೆ ಹರಿದೊಗೆಯುತ್ತಲೀಪರಿ।
ರಮಣಿ ನಖಪದ ರಚಿಸಿ ಸುಖಿಸುವೆನೆಂದು ಸೂಚಿಸಿದಾ ॥ ೧೭ ॥

ಬೆರಳಿನಲಿ ಥಳಥಳಿಪ ರತ್ನದ। ಹರಳಿನುಂಗುರವನ್ನು ಧರಿಸಿದ।
ಕರದ ತಲದಲಿ ಧ್ವಜದ ರೇಖೆಯು ಚಿಹ್ನದಿಂ ಮೆರೆವ ॥
ನರಪನೋರ್ವನು ಲೆತ್ತವನು ಗಡ-। ಗರನೆ ತಿರುವುತ್ತೊಗೆದು ವಧುವಿಗೆ।
ಸರಸವನ್ನೀಪರಿಯಲಾಡುವೆನೆಂದು ತೋರಿದನು ॥ ೧೮ ॥

ಹರಳುಗಳ ಪ್ರಭೆಯಿಂದ ಬೆಳಗುವ। ಪರಮಸೋಜ್ವಲ ಮುಕುಟದಲಿ ತಾಂ-।
ಬೆರಳುಗಳ ನಾಡಿಸುತಲೋರ್ವನು ಸ್ವಸ್ಥವಾಗಿರ್ದ ॥
ವರ ಕುಮಾರಿಯೆ ನಿನ್ನ ನೀಪರಿ। ಶಿರದೆ ಧಾರಣ ಮಾಡಿ ನಿನ್ನಯ।
ಭರವನೆಣಿಸದೆ ಹರುಷ ತಾಳುವೆನೆಂದು ಸೂಚಿಸಿದಾ ॥ ೧೯ ॥

ಎಲ್ಲ ರಾಜರ ವಂಶವೃತ್ತವ। ಬಲ್ಲ ದ್ವಾಸ್ಥೆ ಸುನಂದೆಯಾಗಲೆ।
ಮೆಲ್ಲಮೆಲ್ಲನೆ ರಾಜಸಭೆಯಲಿ ಮುಂದೆ ತಾನಾಗಿ ॥
ನಲ್ಲೆ ಭೋಜನತಂಗಿಯನು ಕರೆ-। ದಲ್ಲಿ ಕುಳಿತಿರುವಂಥ ಮಗಧದ-।
ವಲ್ಲಭನ ನೆರೆಯಲ್ಲಿ ನಿಂತುರೆ ನುಡಿದಳೀ ತೆರದಿ ॥ ೨೦ ॥

ಈ ಮಹಾಶಯನಾದ ಮಗಧದ। ಭೂಮಿಪಾಲನು ತನ್ನ ಪ್ರಜೆಗಳ।
ಕಾಮುಗಳ ಪೂರೈಸುವದರಲಿ ಪೆಸರ ಪಡೆದಿಹನು ॥

ಧಾಮಸಿಧಿಯುಂತರಿಗಳಿಗೆ ಬಹು । ನೇಮದಿಂ ಪರಿತಾಪ ವಿತರಿಸಿ ।
ನಾಮವನ್ನುರೆತಾಂ ಪರಂತಪನೆಂದು ಹೊಂದಿಹನು ॥ ೨೧ ॥
ಈ ಜಗತ್ತಿನ ಮೇಲೆ ಯುಗಣಿತ । ರಾಜರಿರುತಿಹರಾದರೇ ಸೀ ।
ರಾಜನಿಂದಲೆ ಭೂಮಿ ರಾಜನ್ವತಿಯು ತಾನಾಗಿ ॥
ರಾಜಿಸುವಳಾಕಾಶದಲಿ ಬಹು । ತೇಜದಿಂ ಮೆರೆಯುವವು ತಾರಾ- ।
ರಾಜಿಗಳು ದ್ವಿಜ ರಾಜಸಿಂದಲೆ ರಾತ್ರಿ ಪೊಳೆವಂತೆ ॥ ೨೨ ॥
ಸತತ ಮಗಧದ ಪತಿಯು ಯಜಿಸುವ । ಕ್ರತು ಪರಂಪರೆಯಿಂದಲಿಂದ್ರನು ।
ಸತಿಯು ನುಳಿದೀಕ್ಷಿತಿಯು ಮೇಲ್ಮಾಂ ಬಂದು ಕೂಡಲ್ಕೆ ॥
ಪತಿಯು ವಿರಹದೆ ಪಾಂಡು ವರ್ಣವು। ಸತಿಯು ಮುಖದಲಿ ತೋರುವದು ಮೇಣ್ ।
ಶಿಥಿಲ ಕುಟಿಲಾಲಕಗಳಾಕೆಯ ಮೊಗದೆ ಜೋಲ್ದಿಹವು ॥ ೨೩ ॥
ವರ ಪರಂತಪ ನೃಪನು ಮನಸಿಗೆ। ಸರಿಸಿಜಾಕ್ಷಿಯೆ ಬಂದರಾತನ ।
ವರಿಸು ಪಾಟಲಿ ನಗರದಲ್ಲಿ ಪ್ರವೇಶವನು ಮಾಡಿ ॥
ಅರಸನಂತಃಪುರದ ಸ್ತ್ರೀಯರ । ಸರಸ ಕಣ್ಗಳಿಗೆಂದವೀಯುತ ।
ಪುರದರಾಜನ ಪರಮ ಪ್ರಶ್ರಯವನ್ನು ಹೊಂದಿರುವೆ ॥ ೨೪ ॥
ಎನಲು ದೂರ್ವಾಂಕುರ ಮಧೂಕದ । ಸುನವ ಪುಷ್ಪಗಳಿಂದ ರಚಿಸಿದ ।
ಘನ ಮನೋಹರ ಹಾರವನು ಕೊರಳಲ್ಲಿ ಧರಿಸಿರುವ ॥
ವನಿತೆ ಮಗಧದ ರಾಜನನ್ನುರೆ । ಕ್ಷಣನಿರೀಕ್ಷಿಸಿ ಮೌನದಿಂದಲೆ ।
ಮಣಿಯುದೇ ತುಸು ಶಿರವ ಬಾಗಿಸಿ ಮುಂದೆ ಸಾಗಿದಳು ॥ ೨೫ ॥
ಮಾನಸೌಕಸದಂಚೆಯುನು ಪವ- । ಮಾನದಿಂದೆದ್ದಂಥ ತೆರೆಗಳು ।
ಸ್ಥಾನದಿಂ ಸ್ಥಾನಕ್ಕೆ ತಾವರೆ ಪೂಗಳೆದ್ದೆಡೆಗೆ ॥
ಪೌನದಿಂ ಸಾಗಿಸುವ ತೆರದಲಿ । ಮಾನವಾಧೀಶ್ವರನ ಮಗಳನು ।
ಜಾಣೆದೌವಾರಿಕೆಯು ಬೇರೊಬ್ಬರಸ ನೆಡೆಗೊಯ್ದು ॥ ೨೬ ॥
ಅಂಗದೇಶದ ರಾಜನೀತನು । ಮಂಗಳಾಂಗಿಯೆ ಕೇಳು ಭೂಪತಿ- ।
ಯಂಗ ಸೌಷ್ಟವ ಯೌವನಕೆ ನೆರೆ ಮೆಚ್ಚಿ ನಿರ್ಝರರ ॥
ತುಂಗ ಕುಚದಂಗನೆಯರೆಲ್ಲರು । ಸಂಗವನು ಬಯಸುವರು, ಕರಿಗಳ ।
ಸಂಘವನು ತಾಂ ಸಾಕಿ ನಾಕದ ಸೌಖ್ಯಹೊಂದಿಹನು ॥ ೨೭ ॥
ಅರಸುರಿಪು ಭೂಭುಜರ ಸ್ತ್ರೀಯರ । ಕೊರಳ ಮುತ್ತಿನ ಹಾರಗಳನುರೆ ।
ಹರಿಸಿ ಯಂತಃಕರಣ ಕೀತನು ದೋಹವನ್ನಿತ್ತು ॥
ತರಿಸಿದನು ಕಣ್ಗಳಿಗೆ ನೀರನು । ಬರುವನೀರ್ವನಿಗಳನು ಪುನರಪಿ ॥
ಕರುಣೆಯಿಂದರ್ಪಿಸಿದನವರಿಗೆ ಸರಸಹಾರವೆನೆ ॥ ೨೮ ॥

ಭರತಭೂತಲದಲ್ಲಿ ಕಾಣದ । ಸಿರಿಯು ಮೇಣ್ ಸರಸತಿಯು ಸಂಗವು ।
ನಿರುತದಲ್ಲೀ ರಾಜನಲಿ ನೆಲೆಗೊಂಡು ತೋರುವದು ॥
ಪರಮ ಸೂನೃತ ವಾಣಿಯಿಂ ಮೇಣ್ । ಸರಸ ಚಲುವಿಕೆಯಿಂದಲೊಪ್ಪುವ ।
ತರಳೆ, ನೀನಿವನಲ್ಲಿ ರತಿಯನು ತಾಳಲರ್ಹಳಿಹೆ ॥ ೨೯ ॥
ನುಡಿದ ಮೇಲೀಪರಿ ಸುನಂದೆಯು । ತಡೆದು ನಿಂತಿರೆ ರಾಜ-ತನುಜೆಯು ।
ಪೊಡವಿಯೊಡೆಯನ ನೋಡತೊಡಗಿದ ದೃಷ್ಟಿಯನು ತಿರುಹಿ ॥
ಕಡುಗುಣಾನ್ವಿತ ರಾಜನಿರಲುಂ । ಮಡದಿಗವುಗಳ ಜ್ಞಾನವಿರಲುಂ ।
ಗಡನೆ ಸಖಿನಡೆಯೆಂದು ಪೇಳ್ದಳು ! ಭಿನ್ನರುಚಿ ಜನರು ॥ ೩೦ ॥
ಮುಂದೆ ದೌವಾರಿಕೆಯು ರಾಜನ । ನಂದಿನಿಗೆ ಮತ್ತೋರ್ವ ಭೂಪನ ।
ಚಂದ ಚಲುವಿಕೆಯಲ್ಲಿ ಮದನನ ಹಿಂದೆಯೊಗೆದವನ ॥
ಚಂದಿರನಕಳೆತಾಳ್ದು ಮನಕಾ- । ನಂದವನ್ನೀಯುವನ ಶೂರನ ।
ಬಂಧುರನ ತೋರಿಸಿದಳಾಗಲೆ ದೀನಬಂಧುವಿನ ॥ ೩೧ ॥
ಉರು ವಿಶಾಲೋರಸ್ಕಗುರುಚರ । ಸರಲ ಬಾಹುಗಳುಳ್ಳ ಸುಂದರ ।
ಪುರುಷ ಪುರುಷೋತ್ತಮನವಂತಿಯನಾಥ ನಿರುತಿಹನು ॥
ಸುರರ ಶಿಲ್ಪಿಗನಿಂದ ಚಕ್ರ- । ಕ್ಕೊರೆಸಿಸರಿ ಮಾಡಿರ್ದ ನೂತನ ।
ತರಣಿ ಈ ಸಭೆಯಲ್ಲಿ ಬಂದಂತೆನಗೆ ತೋರುವನು ॥ ೩೨ ॥
ಮೂರು ಶಕ್ತಿಗಳಿಂದ ಕೂಡಿದ । ವೀರನರಪನು ಶತ್ರು ವಿಜಯಕೆ ।
ದಾರಿಯಿಂ ಹೊರ ಹೊರಟ ಕಾಲಕೆ ಕುದುರೆಗಳ ಖುರದೆ ॥
ಹಾರಿ ಮೇಲಕ್ಕಡರಿ ಧೂಲಿಯು । ಶೂರಸಾಮಂತರ ಶಿಖಾಮಣಿ- ।
ಚಾರು ಕಾಂತಿಯ ಮುಸುಕಿ ತೇಜೋಹೀನ ಮಾಡುವದು ॥ ೩೩ ॥
ಇಂದುಮತಿ, ಮಾಕಾಲದೆಡೆಯಲಿ । ಹೊಂದಿ ತನ್ನಯ ಮನೆಯ ಮಾಡಿದ ।
ಸುಂದರಾಂಗ ನೃಪಾಲನೀತನು ಕೃಷ್ಣ-ಪಕ್ಷದಲಿ ॥
ಇಂದು-ಧರನಿಂದುವಿನ ಪ್ರಭೆಯಲಿ । ಚಂದದಿಂ ನಿಶಿಯಲ್ಲಿಯುಂ ತಾಂ ।
ಮಂದಹಾಸ-ವಿಲಾಸವತಿಯರ ಕೂಡ ವಿಹರಿಪನು ॥ ೩೪ ॥
ಅನಿಲ ವೇಗದೆ ಚಲಿಪ ಕ್ಷಿಪ್ರಾ- । ವನದ ವೀಚಿಗಳಿಂದ ಶೋಭಿಪ ।
ಘನ ಮನೋಹರವಾದ ತೋಟಗಳಲ್ಲಿ ನೃಪನೊಡನೆ ॥
ವನ ವಿಹಾರಕೆ ಪೋಪುದಾದರೆ । ವನಜಲೋಚನೆ ಮನಸಿನಿಂದಲೆ ।
ಜನಪನನ್ನನು ಸರಿಸು ಬೇಗನೆ ವರಿಸಿ ಸುಖಿಯಾಗು ॥ ೩೫ ॥
ಬಂಧು-ಪಂಕಜಗಳನು ವಿಕಸನ- । ಹೊಂದಿಸುವ ಮೇಣಹಿತ-ಪಂಕವ ।
ಕುಂದಿಸುವ ವರ-ರಾಜ-ಮಿತ್ರನ ತೇಜವಾಸತಿಯು ॥

ನಂದ ಕಾರಣವಾಗದಾಯಿತು । ಚಂದ ಕುಮುದದ ಸುಮಕೆ ಲೋಕದ ।
ಬಂಧುವಿನ ಬಿರು ಕಿರಣಗಳು ಸರಿಯಾಗದಿರ್ದಂತೆ ॥ ೩೬ ॥
ಕನಕಗೌರ ವಿಶಿಷ್ಟ ವರ್ಣದ । ಗುಣಕೆ ಕಿಂಚಿನ್ನ್ಯೂನ ವಿಲ್ಲದ ।
ಘನ ಮನೋಹರವಾದ ಲಲಿತಾ ಕೃತಿಯು ವನಿತೆಯನು ॥
ವಿನಯದಿಂದ ಸುನಂದೆಯೊಯ್ದಳು । ಜನರ ಮನವನು ಹರಣ ಮಾಡುವ ।
ಪ್ರಣಯ-ಶೀಲನ ನೂಪದೇಶದ ರಾಜನೆದುರಿನಲಿ ॥ ೩೭ ॥
ಅರುಹಿದಳು ಸತಿ ಕೇಳು ಹಿಂದಕೆ । ಭರತ ಭೂಮಿಯ ಸಾರ್ವಭೌಮನು ।
ನಿರುತದಲಿ ಕ್ರತುಗಳನು ಚರಿಸಿದ ಯೋಗಿಸತ್ತಮನು ॥
ಅರಿಗಳನು ರಣದಲ್ಲಿ ಸಾಸಿರ । ಕರಗಳಿಂದಲೆ ಜಯಸಿದೆಂದೆನೆ ।
ಪರಮ ದುರ್ದಮ ಕಾರ್ತವೀರ್ಯನು ರಾಜ್ಯವಾಳಿದನು- ॥ ೩೮ ॥
ಮಾಡಬಾರದ ನಿಂದ್ಯಕಾರ್ಯವ । ಮೂಢ ಮನುಜರ ಮನಗಳಲಿ ಗಡ- ।
ಮಾಡಬೇಕೆಂಬಿಚ್ಛೆ ಮೂಡಿದ ಕೂಡಲೀ ನೃಪನು ॥
ಪ್ರೌಢಪಾವನ ಮೂರ್ತಿಯೆದುರಿಗೆ । ರೂಢವಾಗುತ್ತವರ ಪಾಪವ ।
ದೂಡಿ ಬಿಡುವದು ಚಿತ್ತದಿಂದಾ ವಾಸನೆಯ ಕಳೆದು ॥ ೩೯ ॥
ಅಮರನಾಥನ ಗರ್ವಶಮಿಸಿ- । ರ್ದಮಮ ! ದಶಮುಖನೊಮ್ಮೆ ರಾಜನ ।
ಗಮಿಸಿ ಕಾರಾಗಾರದಲಿ ದೃಢ-ಬಂಧವನು ಹೊಂದಿ ॥
ಶ್ರಮಿಸಿದನು ಸರಿದಾಡಲಾರದೆ । ವಮಿಸಿದನು ದಶಮುಖದೆ ರುಧಿರವ ।
ಕ್ರಮಿಸಿದನು ತುಸ ಕಾಲವಲ್ಲಿಯೆ ಮೋಚಿಸುವ ವರೆಗೆ ॥ ೪೦ ॥
ಇಂಥ ರಾಜನಕುಲದಲೀತನು । ಕಾಂತೆಜನ್ಮವ ತಾಳಿಸಜ್ಜನ ।
ಸಂತರನ್ನೆಡೆ ಬಿಡದೆ ಸೇವಿಸಿ ಕ್ಷೇಮಗಳಿಸುವನು ॥
ಎಂತು ಬಣ್ಣಿಪೆನಿವನು ಸದ್ಗುಣ- । ವಂತನೆಂದಿವನಲ್ಲಿ ಲಕ್ಷ್ಮಿಯು ।
ನಿಂತು ಚಂಚಲೆಯೆಂಬ ಪೆಸರನು ಕಳೆದುಕೊಂಡಿಹಳು ॥ ೪೧ ॥
ಪರಶುರಾಮನ ನಿಶಿತಧಾರಾ- । ಪರಶುವನು ಮೃದುಕಮಲದಂತೆಯೆ ।
ವರದ ವೈಶ್ವಾನರನ ಮೆಚ್ಚಿಸಿ ಮಾಡಿ ಬಿಟ್ಟಿಹನು ॥
ತರುಣಿಮಣಿಯೆ ಪ್ರತೀಪನೆಂದುರೆ । ಸರಸಪೆಸರಿಂ ಮೆರೆವ ನೀತನ ।
ಪುರುಡು ಕಟ್ಟುವರಾರು ನರರೊಳು ಭುಜದವೀರ್ಯದಲಿ ॥ ೪೨ ॥
ಧೀರ ಶೂರೋದಾರ-ರಾಜನ । ಚಾರು ಪಟ್ಟದ ರಾಣಿಯಾದರೆ ।
ವಾರಿಜಾಕ್ಷಿಯೆ ರಾಜಮಂದಿರದಿಂದ ನರ್ಮದೆಯ ॥
ನೀರು ಮಾಹಿಷ್ಮತಿಯ ಸುತ್ತಲೆ । ಪೌರವನಿತೆಯ ಕಾಂಚಿಯಂತೆಯೆ ।
ತೋರಿಹರಿಯುವ ಸೃಷ್ಟಿಶೋಭೆಯು ನಿನಗೆ ತೋರುವದು ॥ ೪೩ ॥

ನಲಿನಿಗಳು ಶರದಭ್ರವಿಲ್ಲದ । ಚಲುವ ಚಂದ್ರನ ಕಂಡು ಮನದಲಿ ।
ನಲಿವ ತಾಳದೆ ನಲಿನ ಮಿತ್ರನ ಬಯಸುವಂದದಲಿ ॥
ಉಳಿದು ಸುಂದರನೃಪವರೇಣ್ಯನ । ಚಲಿಸಿ ಮುಂದಕೆ ದ್ವಾಸ್ಥೆಯುನು ಗಡ ।
ನಲಿಸ ಮುಖಿ ಬರಮಾಡಿದಳು ರುಚಿಭಿನ್ನವಾಗಿಹುದು ॥ ೪೪ ॥
ದ್ವಾರ-ಪಾಲಿಕೆಯಿಂದುಮತಿಯುನು । ಶೂರಸೇನಾಧಿಪ ಸುಷೇಣನ ।
ಮೂರು ಲೋಕಗಳಲ್ಲಿ ಪರ್ಬಿದ ಕೀರ್ತಿಯುಳ್ಳವನ ॥
ಚಾರು ಶುದ್ಧಾಚಾರ ಸಂಪದೆ । ವಾರಿಯಲಿನೆರೆಯಿಂದು ಮಿನುಗುವ ।
ಧೀರರಾಜನ ಬಳಿಗೆ ಯೊಯ್ದಿಂತೆಂದಳಾಸತಿಗೆ ॥ ೪೫ ॥
ಜನನಿ ನೀಪಾನ್ವಯದೊಳೀತನು । ಜನಿಸಿದಂತಹ ಜನಪನಿರುವನು ।
ಜನಿಸಿ ವಿಧಿಯಿಂ ಕ್ರತುಗಳನು ಕೃತಕೃತ್ಯನಾಗಿಹನು ॥
ಮುನಿಗಳಾಶ್ರಮ-ದೇಶದೆಡೆಯುಲಿ । ವನದ ಪಶುಗಳು ಮರೆತು ಕ್ರೌರ್ಯವ ।
ಪ್ರಣಯುದಿಂದಿರುವಂತೆ ರಾಜನ ಪ್ರಜೆಗಳಿರುತಿಹರು ॥ ೪೬ ॥
ಭುವನ ಸುಂದರನಾದ ರಾಜನ । ಭವನದೊಳು ಕಣ್ಗಂದವೀಯುವ ।
ಯುವತಿಮಣಿ, ತಣ್ಗದಿರನಂತೆಯೆ ಕಾಂತಿತುಂಬಿರಲು ॥
ಇವನ ದುಃಸಹ ತೇಜದಿಂದಲೆ । ಜವದೆದೇಶತ್ಯಾಗ ಮಾಡಿ- ।
ರ್ದವನಿಪರ ಮನೆ-ಮಾಳಿಗೆಯು ಮೇಲ್ತೃಣವು ಬೆಳೆದಿಹುದು ॥ ೪೭ ॥
ನರಪನಂತಃಪುರದ ಮಹಿಳೆಯು । ರುರಗಳಲಿತೀಡಿರ್ದ ಸುರುಚಿರ ।
ಸರಸ ಚಂದನ ಲೇಪಗಳು ಕಾಲಿಂದಿಯುದಕದಲಿ ॥
ಬೆರೆತುವಾರಿ ವಿಹಾರಕಾಲಕೆ । ಸುರನದೀ ಸಂಗಮವು ಯುಮುನಾ- ।
ಸರಿತೆಗಾಯಿತು ಮಥುರೆಯುಡೆಯುಲ್ಲೆಂದು ತೋರಿದುದು ॥ ೪೮ ॥
ಪರಮ ಭೀಕರನಾದ ಕಾಲಿಯು । ಗರುಡನಂಜಿಕೆಯಿಂದ ಯುಮುನೆಯು ।
ಸರಿಲದೊಳು ಮನೆ ಮಾಡುವಾಗಲೆ ನರಪನಿಗೆ ಕೊಟ್ಟ ॥
ಸರಸ ರತ್ನದ ಹರಳು ಭೂಪತಿ । ಯುರದೆ ಮೆರೆಯುವದದರ ಕಾಂತಿಯು ।
ಹರಿಯು ಕೌಸ್ತುಭ-ಮಣಿಯುನಾದರು ಮೀರಿ ತೋರುವದು ॥ ೪೯ ॥
ಈ ತನನು ಪತಿಯಾಗಿ ಮನ್ನಿಸಿ । ಮಾತೆ ಕುಸುಮದ ಹಾಸಿಗೆಯು ಮೇಲ್ ।
ಭೀತಿಯಿಲ್ಲದೆ ಕುಳಿತು ಸರಸಾಲಾಪವನು ಮಾಡಿ ॥
ಪ್ರೀತಿಯಿಂ ಯೌವನದ ಸಿರಿಯುನು । ಖ್ಯಾತ ವೃಂದಾವನದೆ ಭೋಗಿಸಿ ।
ನಾಥನನು ಪರಿತೋಷಿಸೆಂದುರೆ ದ್ವಾಸ್ಥೆ ಪೇಳಿದಳು ॥ ೫೦ ॥
ಮಳೆಯು ಕಾಲಕೆ ಜಲದನಾಗಸ- । ದೊಳಗೆ ಸಂಚರಿ ಪಂಥ ಸಮಯುಕೆ ।
ಹೊಳೆವ ಗೋವರ್ಧನದ ಗಿರಿಕಂದರದ ಶೋಭೆಯುನು ॥

ಶಿಲೆಯ ಮೇಲ್ಸತಿ ಕುಳಿತು ಶಿಖಿಗಳು । ನಲಿದು ನೃತ್ಯವ ಮಾಳ್ಪದನು ಮೇಣ್ ।
ಗಿಳಿಯು ಹಿಂಡುಡ್ಡಾಣ ಗೈವುದನೊಲಿದು ನೋಡೆನಲು ॥ ೫೧ ॥
ನದಿಯು ಸುಳಿಯುಂತಿರುವ ನಾಭಿಯು । ಚದುರ ರಾಜನ ಬಿಟ್ಟು ತಟ್ಟನೆ ।
ನದಿಯು ಮಾರ್ಗದಲಿರ್ದ ಧರಣೀಧರನ ನೆರೆ ತೊರೆದು ॥
ಉದಧಿಯಿದ್ದೆಡೆಗೈದುವಂದದೆ । ವಿಧಿಯ ಸಂಕಲ್ಪಾನು ಸಾರವೆ ।
ಹದಿಬದಿಯು ಮುಂದೊರೆದು ನಡೆದಳು ದ್ವಾಸ್ಥೆಯನು ಕೂಡಿ ॥ ೫೨ ॥
ಅಂಗನೆಯು ಹೇಮಾಂಗ ಪೆಸರಿನ । ಮಂಗಳಾಂಗ ಕಲಿಂಗ ಭೂಪತಿ ।
ಯುಂಗದಂಗಳ ನಿಟ್ಟ ಭುಜದವನೆದುರಿನಲಿ ನಿಂತು ॥
ಅಂಗುಲಿಯ ನಿರ್ದೇಶದಿಂದಲೆ । ತುಂಗ ಕುಚದಾ ರಾಜ ಕನ್ಯೆಗೆ ।
ಸಂಗಡಲೆ ಸವಿಮಾತಿನಿಂದಲೆ ಹೀಗೆ ಪೇಳಿದಳು ॥ ೫೩ ॥
ಮಾರ ಸುಂದರನಂತೆ ಚಲುವನು । ಮೇರು-ಗಿರಿವರನಂತೆ ಧೀರನು ।
ಘೋರ ಸಂಗರದಲ್ಲಿ ಷಣ್ಮುಖನಂತೆ ಬಲಯುತನು ॥
ವಾರಣಂಗಳ ರಾಜಿರಾಜನ । ದ್ವಾರದಲಿ ಮದವಾರಿ ಸುರಿಸುತೆ ।
ತೋರುವವು ಗಿರಿರಾಜಿಯುಂತೆಯೆ ಪ್ರೇಕ್ಷರ ಕಣ್ಗೆ- ॥ ೫೪ ॥
ಚಾಪಧರರೊಳು ಶ್ರೇಷ್ಠನಾದೀ । ಭೂಪತಿಯ ತೋಳ್ಗಳಲಿ ತೋರುವ ।
ಚಾಪ ಮೌರ್ವಿಯ ಘಾತದಿಂದುಂಟಾದ ರೇಖೆಗಳು ॥
ತಾಪದಿಂದರಿ ನೃಪರ ಸಿರಿಗಳು । ಪಾಪ ! ಕಜ್ಜಲ ಕೂಡಿದೀಕ್ಷಣ- ।
ದಾಪವನು ಸುರಿಸಿರ್ದ ಲಾಂಛನದಂತೆ ಕಾಣುವವು ॥ ೫೫ ॥
ಹೊಳೆವ ಕಲ್ಲುಗಳಿಂದ ಕಟ್ಟಿದ । ನಿಲಿಯ ವಾತಾಯನದೆ ಕಾಣುವ ।
ಜಲಧಿ-ವೀಚಿಗಳಿಂದ ಪುಟ್ಟಿದ ಮಂದ್ರ-ನಾದವನು ॥
ಇಳೆಯ ಪಾಲನ ನಿದ್ರೆಯಿಂದಲೆ । ಲಲಿತಭೇರಿ ಸನಾದಿ-ತೂರ್ಯವ- ।
ನುಳಿದು ಪ್ರಾತಃಕಾಲದಲಿ ಯುದ್ಬೋಧಿಸುತ್ತಿಹುವು ॥ ೫೬ ॥
ವರಿಸಿ ಹೇಮಾಂಗದನ ಮಾನಿನಿ । ಸರಸ ವಾರಿಧಿ ತೀರದೊಳು ಬಹು ।
ವರುಷ ಬಾಳಿದ ತಾಲ-ನಾರೀಕೇಲ ವೃಕ್ಷಗಳ ॥
ನೆರಳಿನೊಳು ಪ್ರಿಯನೊಡನೆ ಸುಂದರಿ । ಸುರತಲೀಲೆಯ ನಾಡಿಸಂತತ ।
ಹರುಷದೊಳು ನಲಿದಾಡಿ-ಕಾಲಕ್ರಮಿಪುದೆಂದೆನಲು ॥ ೫೭ ॥
ಪುರುಷಕಾರವ ಮಾಡುವಂತಹ । ದುರುಳ ದೈವದ ಪುರುಷನನ್ನುರೆ ।
ಸಿರಿಯು ಬಿಟ್ಟನ್ಯತ್ರ ಚರಿಸುವ ತೆರದಿ ತತ್ಕ್ಷಣಕೆ ॥
ಅರಸನಣುಗೆಯು ತ್ಯಜಿಸಿಯೀತನ । ತ್ವರದೆ ಮುಂದಕೆ ಸಾಗಿ ನಡೆದಳು ।
ವರಿಸಲನ್ಯನ ರೂಪಗುಣಸಂಪನ್ನ ರಾಜನನು ॥ ೫೮ ॥

ದ್ವಾರಪಾಲಿಕೆ ಭೋಜರಾಜನ। ದಾರಿಕೆಗೆ ಸಂಬೋಧಿಸಿದಳೆಲೆ।
ವಾರಿಜಾಕ್ಷಿಯೆ ನಾಗಪುರದೀ ರಾಜ್ಯವಲ್ಲಭನು ॥
ಚಾರುಗಾತ್ರನು ಪ್ರೀತಿಪಾತ್ರನು। ಮಾರ ಮೋಹನನಂತೆ ಚಲುವನು।
ಧೀರ ಗುಣಗಂಭೀರನೀತನ ನೋಡು ನೋಡೆಂದು ॥ ೪೯ ॥
ದುಂಡು ಮುತ್ತಿನ ಹಾರ ಕೊರಳಲಿ। ಕುಂಡಲಂಗಳು ಕಿವಿಗಳಲಿ ಮೇಣ್।
ಗಂಡ ಹರಿಚಂದನದ ಲೇಪವ ಮೈಗೆ ಧರಿಸಿರುವ ॥
ಗಂಡುಗಲಿಯೀ ಪಾಂಡುರಾಜನು। ಚಂಡ ತೇಜನ ಕಿರಣದಿಂ ಬಹು।
ಚಂಡ ಹಿಮಗಿರಿಸಾನು ಶೋಭಿಸುವಂತೆ ಕಾಣುವನು ॥ ೬೦ ॥
ಅಂಬು ನಿಧಿಯನು ಪಾನ ಮಾಡಿದ। ಕುಂಭಿನೀಧರನನ್ನು ಮಣಿಸಿದ।
ಕುಂಭ ಸಂಭವನಿವನ ತುರಗಾಧ್ವರಕೆ ನಡೆತಂದು ॥
ಕುಂಭಿನೀಪತಿ, ಯಾಗತೀರಿತೆ? । ತುಂಬ ಸಂಭ್ರಮದಿಂದ ಲವಭೃತ।
ಜಂಭಿನಿಂ ಸಂಭವಿಸಿತೇನೆಂದಿವನ ಕೇಳಿಹನು ॥ ೬೧ ॥
ಹರನ ಮೆಚ್ಚಿಸಿ ಬ್ರಹ್ಮ-ಶಿರವೆಂ-। ಬರಿಗಳಿಗೆ ದುರ್ಜೇಯ ವಾದಹ।
ಪರಮ ಸೋಜ್ವಲ ಬಾಣವನು ಪಡೆದೀ ನೃಪಾಲಕನ ॥
ದರದೆಯೀತನ ಕೂಡ ಸಂಧಿಯ-। ನಿರದೆ ದಶಶಿರಮಾಡಿ ದರ್ಪದೆ।
ಸುರರ ಪತಿಯನು ಜಯಿಸಲಾತನು ಸ್ವರ್ಗಕಡರಿದನು ॥ ೬೨ ॥
ಸರಸ ಕುಲದಲಿ ಜನ್ಮ ಹೊಂದಿದ। ನರಪನನು ವಿಧಿಯಿಂದ ಮಾನಿನಿ।
ವರಿಸಿ ಪರಮಾನಂದದಲಿ ಮಜ್ಜನವ ಗೈಯಿಂದು ॥
ಸರಿಲಗಳ ಪತಿಯಾದ ರತ್ನಾ-। ಕರನು ದಕ್ಷಿಣ ಮೇರೆಯಾಗಿಹ।
ಧರಣಿ-ದೇವಿಯ ಸವತಿಯಾಗೆಂದುಸುರಿದಳು ದ್ವಾಸ್ಥ ॥ ೬೩ ॥
ಪೂಗ ವೃಕ್ಷಕೆನಾಗವಲ್ಲಿಯು। ಹಾಗೆ ಚಂದನ ತರುವಿಗೇಲೆಯು।
ರಾಗದಿಂ ಸುತ್ತಿರುವ ಸುಂದರ ಮಲಯ ಪರ್ವತದ ॥
ಭಾಗದೊಳು ಪೂಗಣೆಯನಾಟಕೆ। ಸಾಗಿ ರಾಜನ ಕೂಡ ಮೋದದೆ।
ಸೋಗೆಗಂಗಳೆ ಸುಖವ ಪಡೆಯೆಂದುಸುರಿದಳು ಸಖಿಯು ॥ ೬೪ ॥
ಹೊಳೆವ ಮೇಚಕ ಮಣಿಯ ತೆರದ-। ಲ್ಲಿಳೆಯ ಪಾಲನ ವರ್ಣವಿರುವದು।
ನಲಿನಿಯಂತಃಸಾರದಂತೆಯೆ ನಿನ್ನ ವರ್ಣವದು ॥
ಕಲೆತರೊಂದಕ್ಕೊಂದು ಲಲನೆಯೆ। ಲಲಿತಕಾಂತಿಯು ಪೆರ್ಚುವದು ಘನ-।
ವಲಯ ವಿದ್ಯುತ್ಸಂಗಮಕೆ ಸರಿಯಾಗಿ ತೋರುವದು ॥ ೬೫ ॥
ನಲಿನ ಮಿತ್ರನು ಮುಳುಗಿನಭದಲಿ। ನಲಿನಿಗಳು ಮುಚ್ಚಿರಲು ಚಂದ್ರನ।
ಪೊಳೆವ ಕಿರಣಗಳಿಂದ ವಿಕಸನ ಹೊಂದದಂತಾಗ ॥

ಇಳೆಯು ಪಾಲನ ಕಿಂಕರಿಯು ಒಹು । ಲಲಿತ ವಚನಗಳಿಂದಲಾದರು ।
ಲಲಿತ ಭೋಜನ ಭಗಿನಿ- । ಮಾನಸವೊಲಿಯು ಲಿಲ್ಲಗಡ ॥ ೬೬ ॥
ಇರುಳಿನೊಳು ಸಂಚರಿಪ ಮನುಜರ । ಕರದ ದೀಪದ ಕರವು ಮಾರ್ಗದೆ ।
ಸರಿಯೆ ಮನೆಗಳು, ಮುಸುಕಿ ಕತ್ತಲೆ, ಕಾಣದಿರ್ದಂತೆ ॥
ವರನ ವರಿಸುವ ತರುಳೆ, ನೃಪರನು । ತೊರೆದು ಬಿಟ್ಟಂಥವರ ಮುಖಗಳು ।
ಕರಿದು ಪೂಸಿದ ತೆರದಿ ತೇಜೋಹೀನವಾಗಿಹವು ॥ ೬೭ ॥
ಮಲಯ ಮಾರುತನಂತೆ ಮೆಲ್ಲನೆ । ಜಲಜಮುಖಿಯಜ ರಾಜನೆಡೆಯಲಿ ।
ಹಲವು ರಾಜರನುಳಿದು ಸೊಬಿಗಿಲೆ ಬಂದು ನಿಂದಿರಲು ।
ಬಲದ ಭುಜ ವಿಸ್ಫುರಣ ಹೊಂದಿತು । ಲಲನೆ ತನ್ನನು ವರಿಸುತಿಹಳೆಂ- ।
ದಿಳೆಯ ಪಾಲನು ಮನಸಿನೊಳು ವಿಶ್ವಾಸತಾಳಿದನು ॥ ೬೮ ॥
ಮಂದ ಪರಿಮಳದಿಂದ ಕೂಡಿದ । ಚಂದ ಮಾವಿನ ಪೂವಿಗಲಿಗಳ- ।
ವೃಂದಗಳು ಗತಿಕುಂದಿಯಲ್ಲಿಯೆ । ಸ್ಥೈರ್ಯಗೊಂಡಂತೆ ॥
ಇಂದುಮತಿ, ಗುಣ-ಸಿಂಧು ದೀನರ । ಬಂಧು ಬಂಧುರ ರಾಜನೆದುರಿಗೆ ।
ಬಂದು ಮುಂದಕೆ ಪೋಗದಲ್ಲಿಯೆ ನಿಂತುಕೊಂಡಿರಲು ॥ ೬೯ ॥
ಚಾರು ಚಂದ್ರನ ಕಿರಣಗಳಿಗೆ ಚ- । ಕೋರ ಪಕ್ಷಿಯು ಸೋಲ್ದುಮನವನು ।
ಮೀರಿದಂತಹ ಮೋಹ ಪರಿವೃತವಾಗಿ ಪೋದಂತೆ ॥
ಸಾರಸಾಕ್ಷಿಯ ಚಿತ್ತವೀ ಬಲ- । ಸಾರನಲ್ಲನುರಕ್ತವಾಗಿರೆ ।
ಸಾರವರಿತಾ ದ್ವಾರಪಾಲಿಕೆ ಪರಮವಿಸ್ತರದೆ ॥ ೭೦ ॥
ಉಸುರಿದಳು ಕೇಳಸಮಸುಂದರಿ । ವಸುಧೆಯೊಳು ವಿಖ್ಯಾತಿ ಹೊಂದಿ ।
ದಸುರ ಕುಲವನು ನಾಶಮಾಡಿರ್ದೋರ್ವ ನೃಪವರನು ॥
ವೃಷದಸ್ಕಂಧವನೇರಿರಣದಲಿ । ಪ್ರಶಿಮಿಸಿದನರಿಬಲವನೆಂದುರೆ ।
ಪೆಸರಕಾಕುಸ್ಥೆಂದು ಪಡೆದನು ಭೂತಕಾಲದಲಿ ॥ ೭೧ ॥
ಮನುವಿನಿಂದಿಕ್ಷ್ವಾಕು ರಾಜನು । ಜನಿಸಿಯಾತನ ವಂಶಬೆಳೆಯಿತು ।
ಮನುಜರೊಳು ಕಾಕುಸ್ಥನೆಂದಾಖ್ಯಾತಿ ಹೊಂದಿದನು ॥
ಜನಪ ತನುಜರು ಕೇಳು ಕೌಸಲ । ಜನಪದಕ್ಕಿವರೊಡೆಯರಾದರು ।
ಜನಪರೊಳು ದಿನಮಣಿಯ ತೆರದಲಿ ಶೋಭೆತಾಳ್ದಿಹರು ॥ ೭೨ ॥
ನಾಕ ಲೋಕಾಧೀಶನುಕ್ಷಗ । ಭೀಕರಾಕೃತಿ ತಳೆದ ನೀ ನೃಪ- ।
ನೇಕಕಾಲಕ್ಕದರ ಮೇಲ್ತಾಂ ಕುಳಿತು ದಾನವರ ॥
ಕೀಕಸವ ಮಾಡಿ ಪುಣ್ಯ- । ಶ್ಲೋಕನೆಂದೆನಿಸಿದನು ಜನರೊಳು ।
ರಾಕೆಯಿಂದು ವಿನಂತೆ ಸುಖಮಯ ಸೃಷ್ಟಿ ಮಾಡಿದನು ॥ ೭೩ ॥

ತೊಟ್ಟ ವೃಷರೂಪವನು ವಜ್ರಿಯು । ಬಿಟ್ಟು ನಿಜರೂಪವನು ತಾಳ್ದನು ।
ತಟ್ಟನೇ ಕರಪಿಡಿದು ವೀರಕಕುಸ್ಥರಾಜನನು ॥
ಅಟ್ಟಹಾಸದೆ ತನ್ನ ಜೊತೆಯುಲಿ । ಪಟ್ಟದಲಿ ಕರೆದೊಯ್ದು ಕೂಡಿಸಿ ।
ಕೊಟ್ಟು ಬಹುಮಾನವನು ನರರೊಳು ಶ್ರೇಷ್ಠನೆನಿಸಿದನು ॥ ೭೪ ॥
ಇವನ ಪರಮೋದಾರಕುಲದಲಿ । ಭುವನಸುಂದರ ನೃಪದಿಲೀಪನು ।
ಶಿವನ ಕೃಪೆಯಿಂ ಪುಟ್ಟಿ ದಿನಮಣಿಯಂತೆ ಬೆಳಗಿದನು ॥
ಹವಿಗಳನ್ನೇಕೋನಶತಮಿತಿ । ಜವದೆ ಮಾಡಿದನಿವನ ಕಾಲ- ।
ಕ್ಕವನಿತಲ ಸುರಭವನದಂತೆಯೆ ಶೋಭೆ ತಳೆದಿಹುದು ॥ ೭೫ ॥
ಈತನಾಳಿಕೆಯಲ್ಲಿ ಜನರಲಿ । ಪಾತಕದ ಲವಲೇಶವಾದರು ।
ನೂತನಾಂಗಿಯೆ ಕಾಣದಾಯಿತು ಶ್ರೀಶ-ಭಕ್ತಿಯಲಿ ॥
ಪ್ರೀತಿಯಿಂ ರತರಾಗಿ ಪ್ರಜೆಗಳು । ನೀತಿಮಾರ್ಗವ ಬಿಡದೆ ನಡೆದರು ।
ಖ್ಯಾತಿಯಾಯಿತು ಭೂಪತಿಲಕನ ಹಾಡಿಹರಸಿದರು ॥ ೭೬ ॥
ಇಂಥ ರಾಜನ ಸೂನುರಘುಪತಿ । ಕಾಂತೆ, ವಸುಧೆಯನಾಳುತಿರುವನು ।
ಶಾಂತಿಸಾಗರನಿವನು ನಾಲ್ಕೂ ದೇಶಗಳ ಜಯಿಸಿ ॥
ಅಂತವಿಲ್ಲದ ದ್ರವ್ಯ ಕೂಡಿಸಿ । ಪಂಥದಿಂ ಕ್ರತುಮಾಡಿ ದ್ವಿಜರಿಗೆ ।
ಸಂತಸದೆ ಸರ್ವಸ್ವದಾನವ ಮಾಡಿದಂಥವನ ॥ ೭೭ ॥
ವಿಮಲಕೀರ್ತಿಯು ಗಿರಿಗಳನ್ನುರೆ । ಕಮಲಗಂಧಿಯೆ, ವ್ಯಾಪಿಸಿತು ಮೇಣ್ ।
ಕ್ರಮದೆ ವಾರಿಧಿಗಳನನಂತರ ನಾಗಲೋಕವನು ॥
ಅಮಮ! ಮೇಲಕೆ ಸಾಗಿ ಬಿಡದಲೆ । ಯಮರಪುರವನು ತುಂಬಿಯುಳಿದಿತು ।
ರಮಣಿ, ನಾನದರಳತೆ ಮಾಡಲು ಶಕ್ಯವಲ್ಲ ಕಣಾ ॥ ೭೮ ॥
ಮೂರುಲೋಕಗಳೊಡೆಯ ವಜ್ರಿಯ । ವಾರಿಜಾಕ್ಷಿಯೆ ಹಾಗೆ ರಘುಪತಿ ।
ಶೂರ-ಧೀರೋದಾರ ರಾಜನ ತನುಜರಾಘವನು ॥
ಧಾರುಣಿಯ ಧುರವನ್ನು ಸದ್ಯಕೆ । ಧಾರಣವ ಮಾಡಿಹನು ಗುರುವಿನ ।
ಭಾರವನ್ನಿಳಿಸಿಹನು ಕಾರ್ಯಾಕಾರ್ಯವನ್ನರಿತು ॥ ೭೯ ॥
ರೂಪ-ಯೌವನ-ಗುಣಗಳಿಂದನು- । ರೂಪನಾದೀಭೂಪತಿಯ ಕುಲ- ।
ದೀಪಕನ ಕರವಿಡಿದು ಜನರೊಳು ಧನ್ಯಳೆಂದೆನಿಸು ॥
ಶ್ರೀಪತಿಯು ಶ್ರೀದೇವಿ-ಕಮಲೆಗೆ । ಚಾಪಧರ ಮನ್ಮಥನು ರತಿಸತಿ ।
ಗಾಪರಿಯಲಿವ ನಿನಗೆ ಸುಖ ಕೊಡಲೆಂದು ಸಖಿನುಡಿಯೆ ॥ ೮೦ ॥
ಮಂದಹಾಸ್ಯಂಗೈದುರಾಜನ । ಸುಂದರಾನನವನ್ನು ವಿಭ್ರಮ- ।
ದಿಂದಲೀಕ್ಷಿಸಿಪೊಡನೆ ತ್ರಪೆಯಿಂ ಧರಣಿಯನು ನೋಡಿ ॥

ಇಂದುಮತಿಯರವಿಂದನಯನಗ- । ಳಿಂದ ತನ್ನಯ ಮನದ ಭಾವವ- ।
ನಂದು ಪರಮಾನಂದದಿಂ ಸುವ್ಯಕ್ತ ಪಡಿಸಿದಳು ॥ ೮೧ ॥

ವ್ರೀಡೆಯಿಂದೊಡಗೂಡಿ ಸತಿಮಾ- । ತಾಡಲಾರದೆ ಚಿತ್ರದಂತೆಯೆ ।
ಮೂಢಳಾದಂತಾಗಿ ಸುಮ್ಮನೆ ನಿಂತುಕೊಂಡಿರಲು ॥
ಗಾಡಿಕಾರ್ತಿಯ ದೇಹದಲಿ ಬಲು । ಮೂಡಿದವು ರೋಮಾಂಚನಂಗಳು ।
ಗಾಢರಾಗವು ತಾನೆ ಪ್ರಸ್ಫುಟವಾಗಿ ತೋರಿದುದು ॥ ೮೨ ॥

ಇಂತು ರಾಘುವನಲ್ಲಿಯಾಸತಿ- । ಯಂತರವು ಸಲ್ಲಗ್ನವಾಗಿರೆ ।
ಕಾಂತೆ, ನಡೆಯುಳಿದರಸರನು ಗಡ ತೋರಿಸುವೆ ನಿನಗೆ ॥
ಇಂತು ಪರಿಹಾಸವ ಸುನಂದೆಯು । ಸಂತಸದೆ ಮಾಡಲ್ಕೆಯಾಕೆಯು ।
ಚಿಂತೆ ಮಾಡದಿರೆನ್ನ ದೆಸೆಯಿಂದೆಂದು ಪೇಳಿದಳು ॥ ೮೩ ॥

ಹರುಷದಿಂ ವೈಧರ್ಭರಾಜನ । ತರಳೆದೌವಾರಿಕೆಯು ಕರದಿಂ ।
ಸರಸ ಕೇಶರ ಚೂರ್ಣದಿಂ ಪರಿಮಲಿತಹಾರವನು ॥
ಪುರುಷಸಿಂಹನ ಕೊರಳಿನಲಿ ತಾ- । ನಿರಿಸಿದಾಗಲೆ ಪರಮರಭಸದೆ ।
ನೆರೆದ ಜನರಾನಂದದಿಂ ಚಪ್ಪಳಿಯನಿಕ್ಕಿದರು ॥ ೮೪ ॥

ವಧುವಿನಿಂದರ್ಪಿಸಿದ ಸುಂದರ । ಮಧುರಕುಸುಮದ ಸರಸಹಾರವು ।
ಚದುರ ಕೋಸಲದೇಶದರಸನ ಕೊರಳಿನಲಿ ಬರಲು ॥
ಅಧರವಿದ್ರುಮದಂತೆ ಹೊಳೆಯುವ । ಸುದತಿ-ಕರದಾಲಿಂಗನದ ಘನ ।
ಮುದವನನುಭವಿಸಿದನು ರಾಘುವನಾಗ ಮನಸಿನಲಿ ॥ ೮೫ ॥

ಇಂದುವಿಗೆ ಚಂದ್ರಿಕೆಯು ಹಾಗೆಯೆ । ಸಿಂಧುವಿಗೆ ಸುರನದಿಯ ವಾರಿಯು ।
ಬಂದು ಕೂಡಿದ ತೆರದಿ ರಾಘುವನಿಂದುಮತಿವರಿಸೆ ॥
ನಂದದಿಂ ಪುರವಾಸಿಗಳು ಬಲು । ಚಂದವಾಯಿತಿದೆಂದು ನುಡಿಯಲು ।
ಬಂದರಾಜರ ಶ್ರವಣಗಳಿಗಿದು ಕುಂದು ತೋರಿದುದು ॥ ೮೬ ॥

ಸರಸಸೂರ್ಯೋದಯವದಾಗಲು । ಸರಸಿಯೊಳು ಬಿರಿಯಲ್ಕೆ ಬಿಸಜಂ ।
ವಿರಸವಾಗುವವಾಗ ಕೌರವಸುಮಗಳಾ ತೆರದೆ ॥
ನೆರೆದ ಭೂಪತಿಗಳಲಿಯುಗಪತೆ । ವರನಪಕ್ಷಗಳಲ್ಲಿ ಹರುಷವು ।
ಬರಿದೆಯುಳಿದವರಲ್ಲಿ ನೀರಸಭಾವ ಸೇರಿದುವು ॥ ೮೭ ॥

೭ನೇ ಸರ್ಗ.

ಇಂದುಮತಿಗನುರೂಪ ವರ ರಘು- । ನಂದನನು ದೇವೇಂದ್ರ-ತನುಜೆಗೆ ।
ಸ್ಕಂದ ಸುರಸೇನಾನಿ ದೊರೆದಂತಾಗಿ ಮನದೊಳಗೆ ॥
ಅಂದದಿಂ ವೈಧರ್ಭನೃಪಸುತ- । ನಂದು ಭಗಿನಿಯ ಕೂಡ ಸಂಭ್ರಮ- ।
ದಿಂದ ಪುರಮುಖನಾಗಿ ಹೊರಟನು ಪರಮ ರಭಸದಲಿ ॥ ೧ ॥

ಉಳಿದ ರಾಜರು ವಧುವಿನಾಶೆಯ- । ನುಳಿದು ಖತಿಯನು ತಾಳಿ ಮನದೊಳು ।
ಹಳಿದುಕೊಳ್ಳುತ ತಮ್ಮ ವೈಭವ-ರೂಪಗಳನಾಗ ॥
ನಳಿನ-ಬಾಂಧವನುದಿಸಿದಾಗಲೆ । ಕಳೆಯುಗುಂದಿದ ಚಂದ್ರನಂದದೆ ।
ನೆಲವನೋಡುತ ತಮ್ಮ ಶಿಬಿರಕೆ ಹೊರಟು ಸಾಗಿದರು ॥ ೨ ॥

ಅರಸರಲಿ ಮಾತ್ಸರ್ಯವಿದ್ದರು । ಪರಮಪಾವನೆ ಸುರರ ಪತಿ-ಸತಿ ।
ವರದೆ ಮದುವೆಯ ನುನೆಯೊಳಿರುತಿರೆ ಕಾಟಸಾಗದಕೆ ॥
ನರರ ಪತಿ ರಾಘವನ ನೋಡುತ । ಮರುಗಿ ಮನದೊಳು ಸುಮ್ಮನಿರ್ದರು ।
ಸಿರಿಯು ಹೀನರ ಪುರುಷಕಾರವು ವ್ಯರ್ಥವೆನಿಪಂತೆ ॥ ೩ ॥

ರಾಜವೀಥಿಯೊಳೆಲ್ಲ ಕಡೆಯಲಿ । ರಾಜಿಸುವ ಧ್ವಜತೋರಣಂಗಳ ।
ರಾಜಿಗಳ ಮಣಿಮುತ್ತು ಕೆಚ್ಚಿದ ದಿವ್ಯಮಂಟಪದ ॥
ತೇಜದಿಂ ಥಳಥಳಿಪ ಮಾರ್ಗದೆ । ಭೋಜ ಭೂಭುಜನನುಜೆ ಮೇಣ ಜ- ।
ರಾಜನಾಗಲೆ ಕುಳಿತು ನರಯಾನದಲಿ ಸಾಗಿದರು ॥ ೪ ॥

ಸಾಗಿ ಪೋಗುವ ವಧುವರಂಗಳ- । ನಾಗ ನೋಡುವ ಕುತುಕದಿಂ ಸ್ತ್ರೀ- ।
ಪೂಗವೆಲ್ಲವು ಸೌಧವಾತಾಯನದೆ ನೆರೆನೆರೆದು ॥
ರಾಗದಿಂ ತಮಗಿಂಥ ಯೋಗವು । ಹೇಗೆ ದೊರೆಯುವದೆಂದು ಚಿಂತಿಸಿ ।
ತ್ಯಾಗವನು ಮಾಡಿತರ ಕಾರ್ಯಗಳಲ್ಲೆ ಕುಳಿತಿಹರು ॥ ೫ ॥

ಜವದೆ ವಾತಾಯನಕೆ ಪೋಗುವ । ಯುವತಿಯೋರ್ವಳ ಹೆರಳಿನಿಂದಾ- ।
ಗವನಿ ಯೊಲ್ಪುವಾಲೆಯೊಳಗಿನ ದಿವ್ಯಕುಸುಮಗಳು ॥
ಸ್ರವಿಸುತಿರೆ ಕರದಿಂದ ಹೆರಳ- । ನ್ನವಳು ಧಾರಣಮಾಡಿ ಕೂಡಲೆ ।
ಹವಣಿಸುತೆ ನಡೆತಂದು ಬಂದಳು ಬೇಗ ಕಿಟಕಿಯಲಿ ॥ ೬ ॥

ಮತ್ತೆ ಮದಗಜ-ಗಮನೆಯೋರ್ವಳು । ಚಿತ್ತದಿಂ ಪದವನ್ನು ರಂಜಿಪ ।
ಸೋತ್ತಮಾಂಗಿಯು ಕರದೆ ತನ್ನಯ ಪಾದವನ್ನೆಳೆದು ॥
ಒತ್ತರದೆ ಸಾಗಿದಳು ಪಾದದ । ಚಿತ್ತರವ ಬರೆಯುತ್ತಲೆಂದೆನೆ ।
ಹತ್ತಿರಿರ್ದಗವಾಕ್ಷದೆಡೆಗೈತಂದು ವಿಭ್ರಮದೆ ॥ ೭ ॥

ಸ್ವಕರದಿಂ ಮತ್ತೋರ್ವ ನಾರಿಯು । ಚಿಕುರ-ನಿಕರಗಳನ್ನು ತೀಡುತ ।
ಮುಕುರದಲಿ ಮೊಗ ನೋಡಿ ಕಜ್ಜಲ ಸವ್ಯನೇತ್ರದಲ್ಲಿ ॥
ಭ್ರುಕುಟಿಯನು ಮೇಲ್ಮಾಡಿ ಧರಿಸಿದ- । ಳಕಟ ವಾಮೇಕ್ಷಣವ ಮರೆತಳು ।
ನಿಕಟದಲ್ಲಿರ್ದಂಥ ವಾತಾಯನಕೆ ಸಾಗಿದಳು ॥ ೮ ॥
ಹರಿಣನಯನೆಯು ಮತ್ತೆಯೋರ್ವಳು । ತ್ವರದೆ ವಾತಾಯನಕೆ ಗಮಿಸು- ।
ತ್ತಿರಲು ನೀವೀಗ್ರಂಥಿಮೋಚನವಾಗೆ ದಾರಿಯಲಿ ॥
ಜರಿದು ಬೀಳುವ ನಿರಿಗೆಗಳನುರೆ । ಕರದೆ ಮುದುಡಿಸಿ ಪಿಡಿದು ನಡೆದಳು ।
ಹರಳು ಕೆಚ್ಚಿದ ಕಡಗಳ ಪ್ರಭೆ ಹೊಳೆದು ಶೋಭಿಸಿತು ॥ ೯ ॥
ಪಿರಿಯು ಬೆರಳಿಗೆ ಕಟ್ಟಿ ದಾರವ । ಹರಳುಗಳನದರಲ್ಲಿ ಪೋಣಿಸಿ ।
ಸರವ ಮಾಡುವಳೋರ್ವನಾರಿಯು ಭರದೆ ಸಾಗುತಿರೆ ॥
ಜರೆದು ಧರಣಿಯ ಮೇಲೆ ಮಣಿಗಳು । ಸರಿದು ಬೀಳಲು ಬರಿಯಸೂತ್ರವು ।
ಬೆರಳಿಗುಳಿದಿತು ಕಿಟಕಿಗಾಕೆಯು ಮುಟ್ಟುವಷ್ಟರಲಿ ॥ ೧೦ ॥
ತೆರೆದ ಕಿಟಕಿಯುದ್ವಾರದಲಿ ನೆರೆ । ನೆರೆದ ಪುರನಾರಿಯರ ಸುಂದರ ।
ಸರಸ ಮುಖಗಳು ಮಧುರಮಧುವಿನ ಸುರಭಿಯಿಂ ಕೂಡಿ ॥
ಸರಸಿಜಂಗಳ ಭ್ರಾಂತಿಮನಸಿಗೆ । ಯಿರದೆ ಮಾಡುವವಲ್ಲದೇ ಗರ- ।
ಗರನೆ ತಿರುಗುವ ಕಣ್ಗಳಲಿಗಳ ತೆರದಿ ತೋರುವವು ॥ ೧೧ ॥
ಪರಮ ಪ್ರೇಮದೆ ನಾರಿಯರು ವರ । ನರಪ ರಾಘವನನ್ನೆ ನೋಡುತೆ ।
ಮರೆತು ಬಿಟ್ಟರು ಬೇರೆ ವ್ಯಾಪಾರಾಂತರಂಗಳನು ॥
ತೊರೆದು ತಮ್ಮಯ ಸ್ಥಾನಗಳನುರೆ । ಕರಣಗಳು ನೇತ್ರಕ್ಕೆ ಬಂದವು ।
ದರುಶನದ ಸುಖವನ್ನು ವರಿಸುವದಕ್ಕೆ ತ್ವರೆಯಿಂದ ॥ ೧೨ ॥
ಇಂದು-ಮತಿ ತನ್ನನ್ನು ಯಾಚಿಸ । ಬಂದರಾಜರ ಶೀಲ-ಕುಲಗಳ- ।
ನಂಥರಂತೆಯೆ ನೋಡದಲೆ ತಾವರಿಸದಿರ್ದುದದು ॥
ಚಂದವೇ ಸಿರಿಯಿಲ್ಲದಿರ್ದರೆ । ಯಿಂದಿರೆಗೆ ಹರಿದೊರೆತ ತೆರದ- ।
ಲ್ಲಿಂದು ರಾಘವನೆಂತು ಭೋಜ್ಯೆಗೆ ಲಭಿಸುತಿರ್ದಕಣಾ? ॥ ೧೩ ॥
ಮಾ-ರಮಾವರರಂತೆ ಯೀರ್ವರ । ಚಾರುರೂಪಗಳನ್ನು ನಿರ್ಮಿಸಿ ।
ಪಾರಮೇಷ್ಠಿಯು ಭೋಜ್ಯೆರಘುನಂದನರ ಯೋಗವನು ॥
ದಾರ-ಪತಿಭಾವದಲಿ ಕೂಡಿಸಿ । ತಾರದಿರ್ದರೆ ತೋರುತಿತ್ತದು ।
ತೋರಶ್ರಮಕಾಂತಾರ ಚಂದ್ರಿಕೆಯಂತೆ ನಿಜವಾಗಿ ॥ ೧೪ ॥
ಪಿಂತೆ ಜನ್ಮಾಂತರದಲೀತನು । ಕಂತುವಿನ ಪ್ರತ್ಯಕ್ಷ ಮೂರ್ತಿಯು ।
ಕಾಂತೆಯಾತನ ಪ್ರಾಣವಲ್ಲಭೆ ರತಿಯು ಜನಿತಾಳೆ ॥

ಇಂತುಪರಿ ನೆರೆದಿರ್ದಭೂಪರ । ಸಂತೆಯುಲಿ ತಾನರಿಸಿದಳು ನಿಜ ।
ಕಾಂತ ರಾಘವನನ್ನು ಘನಸಂಸ್ಕಾರಬಲದಿಂದ ॥ ೧೫ ॥
ದಾರಿಯುಲಿ ಪುರನಾರಿಯುರ ಮುಖ- । ದ್ವಾರದಿಂ ಹೊರಟಂಥ ಸೂನೃತ ।
ಸಾರಸುಂದರ ವಾಣಿಯುನು ಕೇಳುತ್ತ ಹರಷದಲಿ ॥
ಸಾರಸಾಕ್ಷಿಯು ಕೂಡ ರಾಜನು । ಗೌರವದೆ ನಡೆತಂದು ಬಂದನು ।
ಪೌರವಾಧೀಶ್ವರನ ಮಂಗಲ ಲಗ್ನಮಂಟಪಕೆ ॥ ೧೬ ॥
ಗಡನೆ ರಾಘವನಿಳಿದು ಯಾನದೆ । ಪಿಡಿದು ಕಾಮೇಶ್ವರನ ಕರವ- ।
ನ್ನೊಡೆಯು ಭೋಜನು ಪಾರಿ ತೋರಿಸಿದಂತೆ ಮಂಟಪದ ॥
ಕಡು ಮನೋಹರ ಚೌಕಿನಲಿ ಮೇಣ್ । ಮಡದಿಯುರ ಮನದಲ್ಲಿಯಾದರು ।
ಬಿಡದೆಯೊಂದೇ ಕಾಲದಲಿ ಸಂಚಾರವಮಾಡಿದನು ॥ ೧೭ ॥
ಪೊಳೆವ ಸಿಂಹಾಸನದ ಮೇಲ್ತಾಂ । ಕುಳಿತು ರಾಘವನಾಗ ಸುಂದರ ।
ಬಿಳಿಯ ಕ್ಷೌಮದ ಜೋಡು ಮೇಣ್ಮಧುಪರ್ಕದರ್ಘ್ಯವನು ॥
ಇಳೆಯ ಪತಿಯು ವಿದರ್ಭರಾಜನು । ನಲಿವಿನಿಂ ಕೊಟ್ಟುದನು ಕೊಂಡನು ।
ನಳಿನ-ಮುಖಿಯುರ ಚಾರುನೇತ್ರಕಟಾಕ್ಷದಿಂ ಕೂಡಿ ॥ ೧೮ ॥
ಸರಸ ನಿರ್ಮಲವಾದ ಕ್ಷೌಮವ । ಧರಿಸಿ ಮೆರೆಯುವ ಕೌಸಲೇಂದ್ರನ ।
ಪರಮ ನಮ್ರತೆಯಿಂದ ದೌವಾರಿಕರು ಸತಿಯೆಡೆಗೆ ॥
ಭರದೊಳೊಯ್ದರು ಬಾಲಚಂದ್ರನ । ಕಿರಣಗಳು ವಾರಿಧಿಯು ನೀರಿನ ।
ನೊರೆಗಳನು ಭರದಿಂದ ತೀರಕ್ಕೊಯ್ವತೆರದಿಂದ ॥ ೧೯ ॥
ತೇಜದಿಂದಾರಾಜಿಸುವ ನೃಪ- । ಭೋಜಸುಪುರೋಹಿತನು ವಿಧಿಯಿಂ ।
ರಾಜತನುಜೆಯು ಕೂಡ ಕೌಸಲ ದೇಶದಧಿಪತಿಯು ॥
ಸೋಜಿಗದೆ ಮಾಡಿದನು ಲಗ್ನವ । ಸ್ತ್ರೀಜನರಿಗಾನಂದವಾದುದು ॥
ಭೋಜರಾಜನು ದ್ವಿಜರಿಗತಿಶಯು ದಾನಮಾಡಿದನು ॥ ೨೦ ॥
ಭರದೆ ರಾಜನು ಪಿಡಿದು ರಾಜ್ಞಿಯು । ಸರಸ ಕರವನು ತನ್ನ ಕರದಲಿ ।
ನೆರೆದ ಜನರಲಿ ಪರಮಸುಂದರನಾಗಿ ತೋರಿದನು ॥
ನೆರೆಯುಲೊಪ್ಪುವಬಾಲಚೂತಕ । ಸರಸ ಕೋಮಲ ಪಲ್ಲವಂಗಳು ।
ಮೆರೆವಶೋಕದ ತರುವಿನೆಳೆದಲದಲ್ಲಿ ಬೆರೆತಂತೆ ॥ ೨೧ ॥
ಪುರುಷಸಿಂಹನ ಪರಮ ಸುಖಮುಯು । ಕರದ ಸ್ಪರ್ಶವು ತರಳೆಗಾಗಲು ।
ಸರಸ ಭಾವದೆ ಬೆರಳುಗಳು ಬೆಮರಿದವು ತತ್ಕ್ಷಣಕೆ ॥
ಸ್ಮರನು ರಾಜನ ದೇಹದಲಿ ಸಂ- । ಚರಿಸಿ ರೋಮಾಂಚಗಳು ಪ್ರೇಮದ ।
ಭರದೆ ಸರ್ವಾಂಗದಲಿ ನೆಟ್ಟನೆ ನಿಂತುಕೊಂಡಿಹವು ॥ ೨೨ ॥

ತುಡುಗಿನಿಂದವರೀರ್ವರೂ ಗಡ । ಕಡೆಯುಕಣ್ಣಿನ ನೋಟನಿಂದೆಡೆ- ।
ಬಿಡದೆ ನೋಡುತ್ತಿರಲು ಪಕ್ಕನೆದೃಷ್ಟಿಯೊಂದಾಗೆ ॥
ಮಡದಿಯಾಗಲೆ ಮನಸಿನಲಿ ಗಡ- । ಬಡಿಸಿ ತನ್ನಯ ನೋಟವನು ಸಂ- ।
ಗಡಲೆ ಪೊಡವಿಯ ಕಡೆಗೆ ತಿರುಹುವಳಾಗ ವ್ರೀಡೆಯಲಿ ॥ ೨೩ ॥

ಇರಳು ಹಗಲುಗಳೆರಡು ಕ್ರಮದಿಂ- । ದಿರದೆಯೊಂದರ ಪಿಂತೆಯೊಂದವು ।
ಸರಸ ಕನಕದ ಗಿರಿಯನನುದಿನ ಸುತ್ತಿ ಬಲಗೊಂಡು ॥
ತಿರುಗುವಂದದೆ ಹೋಮದಗ್ನಿಯ- । ನರಸಿ ರಾಘವರಾಜನನ್ನನು- ।
ಸರಿಸಿ ಮೆಲ್ಲನೆ ಸೊಬಗಿನಿಂ ಬಲಗೊಂಡು ತೋರಿದಳು ॥ ೨೪ ॥

ಗುರುನಿತಂಬಿನಿಯಾದ ಭೋಜನ । ತರಳೆ ಮತ್ತಚಕೋರನೇತ್ರೆಯು ।
ಸುರರಜ್ಯೇಷ್ಠನ ತೆರದಿ ತೋರುವ ಗುರುವಿನಾಜ್ಞೆಯಲಿ ॥
ಪರಮ ತೇಜದೆ ಮೆರೆವವಹ್ನಿಗೆ । ಯರಳುಗಳನರ್ಪಿಸಿದಳಾಗಲೆ ।
ನೆರೆದ ನರನಾರಿಯರು ಸರ್ವರು ತೋಷಹೊಂದಿದರು. ॥ ೨೫ ॥

ಭೂಮಿಪಾಲನ ತನುಜೆ ಲಾಜಾ- । ಹೋಮದಲಿ ಘೃತದಿಂದ ಕೂಡಿದ ।
ಕೋಮಲೋತ್ತಮವೆನಿಪ ಶಮಿದಲಗಳನು ಹಾಕುತಿರೆ ॥
ಕೋಮಲಾಂಗಿಯ ಕರ್ಣದೆಡೆಯಲಿ । ಧೂಮವಾಗಲೆಸೇರಿ ತೋರಿತು ।
ಕಾಮಿನಿಯು ಕ್ಷಣಮಾತ್ರ ಕರ್ಣೋತ್ಪಲಗಳಿಟ್ಟಂತೆ ॥ ೨೬ ॥

ನಡತೆಯಂತೆಯೆ ಹೋಮಧೂಮಕೆ । ಪೊಡವಿಯೊಡೆಯನ ಮಡದಿತನ್ನಯ ।
ಕಡುಮನೋಹರವಾದ ಮುಖವನು ವಿಪ್ರನಾಜ್ಞೆಯಲಿ ॥
ಗಡನೆ ಪಿಡಿಯಲು ತಡೆಯದೇ ಗಡ । ಗಡನೆ ನೇತ್ರಗಳೊಳಗೆ ನೀರ್ವನಿ- ।
ಮಡುವು ತುಂಬಿತು ಮುಖವು ಪಾಂಡುರ ವರ್ಣ ತಾಳಿದುದು. ॥ ೨೭ ॥

ಚಿನ್ನದಾಸನದಲ್ಲಿ ವಧುವರ- । ರನ್ನು ಕೂಡಿಸಿ ಸ್ನಾತಕರು ಮೇಣ್ ।
ತನ್ನ ಬಾಂಧವರಿಂದ ಕೂಡಿದ ಭೋಜ ಭೂವರನು ॥
ಸನ್ನುತಾಂಗಿಯರೆಲ್ಲರೂ ಕ್ರಮ । ವನ್ನು ಮೀರದೆ ಯಿಂದುಮತಿಯಜ- ।
ರನ್ನು ಸ್ವಾದ್ರಾಕ್ಷತೆಗಳಿಂದಲೆ ಮಂಡಿಸಿದರಾಗ ॥ ೨೮ ॥

ವಿಧಿಯಮೇರೆಗೆ ಮುಗಿಸಿ ಭಗಿನಿಯ । ಮದುವೆಯನು ವೈದರ್ಭರಾಜನು ।
ಮುದದಿ ತನ್ನಾಪ್ತೇಷ್ಟರನು ತನ್ನೆದುರಿನಲಿ ಕರಿಸಿ ॥
ಮಧುರವಚನಗಳಿಂದಲವರಿಗೆ । ಮದುವೆ ಕೆಲಸಕೆ ಬಂದರಾಜರ- ।
ನೊದವಿನಿಂದುಪಚರಿಸಿ ಮನ್ನಿಪುದೆಂದು ಪೇಳಿದನು. ॥ ೨೯ ॥

ಒಡಲಿನೊಳಗಡಗಿರ್ದ ಮೊಸಳೆಯು । ಗಡಣವಿರ್ದರು ಸ್ಥೈರ್ಯಹೊಂದಿದ ।
ಮಡುವಿನಂದದೆ ಮನಸಿನಲಿ ಮಾತ್ಸರ್ಯ ತುಂಬಿರುವ ॥

ಪೊಡವಿಯೊಡೆಯರು ಭೋಜನೃಪನಿಗೆ । ಯೊಡವೆಯುಡುಗರೆಗಳನು ಕೊಟ್ಟರು ।
ಪಡೆದುಕೊಂಡವನಾಜ್ಞೆಯನು ಪೊರಮಟ್ಟು ಸಾಗಿದರು. ॥ ೩೦ ॥
ಕೂಡಿದರು ನೃಪರೆಲ್ಲರೊಂದೆಡೆ । ಮಾಡಿದರು ತಮ್ಮೊಳಗೆ ಸಂಚನೆ ।
ಬೇಡಿಕೊಂಡರು, ಬಿಡದೆ ಯಜನನು ಹೊಡೆದು ಯುದ್ಧದಲಿ ॥
ಗಾಡಿಕಾರ್ತಿಯನೆಳೆದು ಕೈವಶ । ಮಾಡಿಕೊಳ್ಳುವೆವೆಂದು ಕೌಸಲ ।
ನಾಡಿನಧಿಪನ ಮಾರ್ಗನೋಡುತ ಕಾದುಕೊಂಡಿಹರು ॥ ೩೧ ॥
ಭಗಿನಿಲಗ್ನವನಾಗ ಭೋಜನು । ಮಿಗಿಲು ಹರುಷದಿ ಮುಗಿಸಿ ರಘುವಿನ ।
ಸುಗುಣಸುಂದರನಾದ ಮಗನಿಗೆ ಮಾನದಿಂ ಕೊಟ್ಟು ॥
ಬಗೆಬಗೆಯ ಬಹುಮೂಲ್ಯವಸ್ತ್ರಾ- । ದ್ಯಗಣಿತಾಲಂಕಾರಗಳನುರೆ ।
ನಗುತ ಜೀಳ್ಕೊಟ್ಟವರ ಸಂಗಡ ತಾನು ಸಾಗಿದನು ॥ ೩೨ ॥
ಅಜನ ಸಹವಾಸದಲಿ ಭೋಜನು । ಸ್ವಜನರಿಂದೊಡಗೂಡಿ ಮಾರ್ಗದೆ ।
ರಜನಿ ಮೂರರವರೆಗೆ ಕಳಹುತ ತಿರುಗಿ ಪಟ್ಟಣಕೆ ॥
ರಜನಿನಾಥನು ಪರ್ವದಂತ್ಯಕೆ । ತ್ಯಜಿಸಿ ತೇಜೋರಾಶಿಯನು ಗಡ ।
ದ್ವಿಜಗಳೊಳು ಸಂಚರಿಪ ತೆರದಿಂ ಹೊರಟು ಸಾಗಿದನು ॥ ೩೩ ॥
ಮೊದಲು ರಘುರಾಜಾಧಿರಾಜನು । ಕೆದರಿ ಕದನವ ತೆಗೆದು ರಾಜರ ।
ಸದನವನು ಮೇಣವರ ರಾಷ್ಟ್ರವ ಸೂರೆಗೊಂಡದಕೆ ॥
ಹದನವಾದರಿ-ಭಾವದಲಿ ಕುದಿ- । ಕುದಿವ ರಾಜರಿಗಜನು ಹೊಂದಿದ ।
ವಧುವಿನನುಪಮ ಲಾಭದಿಂ ಬಲು ಕ್ರೋಧ ಪೆರ್ಚಿದುದು ॥ ೩೪ ॥
ಗಂಡುಗಲಿ ರಾಘವನು ತನ್ನಯ । ಪೆಂಡತಿಯು ಸಹ ಪೋಗುತಿರೆ ಯು- ।
ದ್ದಂಡ ಸೈನಿಕರಿಂದ ಕೂಡಿದ ವೈರಿ ನರವರರು ॥
ಪುಂಡತನದಿಂದಿವನ ರೋಧಿಸಿ । ದಂಡಿಸುವೆವಾವೆಂದು ಮಾರ್ಗದೆ ।
ಹಿಂಡು ಹಿಂಡಾಗಲ್ಲಿಗಲ್ಲಿಗೆ ಕಾದುಕೊಂಡಿಹರು ॥ ೩೫ ॥
ಇಂದುಮತಿ ಗಾವಲಕೆ ರಾಘವ- । ನಂದು ಪುಷ್ಕಳ ಸೈನ್ಯವನು ಮೇಣ್ ।
ತಂದೆಗಾಲದ ಚತುರ ಮಂತ್ರಿ ಶ್ರೇಷ್ಠನನ್ನಿಟ್ಟು ॥
ಬಂದೆ ಸೈರಿಸಿರೆಂದು ನುಡಿಯುತ । ಸ್ಯಂದನದ ಮುಖತಿರುಹಿ ಯರಿಗಳ ।
ಮುಂದೆ ಯುದ್ಧಕೆ ಸಿದ್ಧನಾದನು ಸೈನ್ಯದಿಂ ಗೂಡಿ ॥ ೩೬ ॥
ಅಮಿತ ರಥ-ಕರಿ-ಹಯಗಳೇರಿದ । ಸಮರ-ದುರ್ಧರರಾದ ವೀರರು ।
ಯಮನ ಭೀಕರ ರೂಪತಾಳಿದರಾಗ ಪತ್ತಿಗಳು ॥
ಕ್ರಮದೆಯೋರ್ವರ ಮೇಲೆಯೋರ್ವರು । ತಮಗೆ ದೊರೆಯುವದೆಂದು ವಿಜಯವು ।
ಧುಮಿಕಿದರು ಸಮರಾಗ್ನಿಯಲಿ ಕಡುಕೋಪದಿಂ ಕೂಡಿ ॥ ೩೭ ॥

ಘೋರ ಕರ್ಕಶ ವಾದ್ಯರವದಲಿ । ಮೇರುಪರ್ವತ ನಡುಗತೊಡಗಿತು ।
ವೀರರಿಂತಹ ಸಮಯದಲಿ ತಮ್ಮೊಳ್ಗೆಯನ್ನರುಹೆ ॥
ದಾರಿಗಾಣದೆ ಕಾರ್ಮುಕಕೆ ಬಲು । ಕ್ರೂರಶರಗಳನೂರಿ ಹೊಡೆಯುತ ।
ತೋರಿದರು ಕುಲನಾಮಗಳನಕ್ಕರಗಳನು ಬರೆದು ॥ ೩೮ ॥
ತುರಗಗಳ ಪದಹತಿಗೆ ಸಮರದ । ಧರಣಿತಲದಿಂದೆದ್ದ ಧೂಳಿಗೆ ।
ಸುರಥಗಳ ಚಕ್ರಾಭಿಸರಣಕೆ ಹೊರಟ ಧೂಳಿಯುದು ॥
ಬೆರೆತು ಕರಿಗಳ ಕರ್ಣತಾಡಣ- । ಭರದೆ ಸುಳಿಸುಳಿದೆಲ್ಲ ಕಡೆಯಲಿ ।
ತರಣಿಮಂಡಲವನ್ನು ಕಾಣದ ಹಾಗೆ ಮಾಡಿದುದು ॥ ೩೯ ॥
ಇಳೆಯು ಮೇಲ್ಮಳೆಬಿದ್ದು ಕಲುಕಿದ । ಹೊಳೆಯು ಹೊಸಜಲವನ್ನು ಕುಡಿಯುವ ।
ಲಲಿತ ಚೇತನದಿಂದ ಕೂಡಿದ ಮೀನುಗಳ ತೆರದೆ ॥
ದಳದ ಪದ ಸಂಚಲಿತ ಧೂಳಿಯು । ಮಲಿನ ನೀರನುಪಾನಮಾಡುವ ।
ಪೊಳೆವ ವಸ್ತ್ರ ಧ್ವಜದ ಮೀನ್ಗಳು ಕಣ್ಗೆ ತೋರಿದವು ॥ ೪೦ ॥
ಮೆರೆವ ಚಕ್ರದರವದೆ ರಥವಿದು । ಪಿರಿಯ ಘಂಟಾರವದೆ ಗಜವಿದು ।
ಖುರದ ಘನರವದಿಂದ ತುರಗವಿದೆಂದು ತಿಮಿರದಲಿ ॥
ಚರರು ಪ್ರಸ್ಫುಟವಾಗಿ ರಾಜರ । ಬಿರುದುಗಳನುಸುರಲ್ಕೆ ಪರನರ- ।
ವರರ ಕುರುಹುಗಳಿಂದಲಿಂಥವರೆಂದು ತಿಳಿಯುವರು. ॥ ೪೧ ॥
ಧೂಳಿಮಯವಾಯ್ತಾಗ ರಾತ್ರಿಯು । ಕಾಲದೋಷಾದಿಯಲಿ ಕತ್ತಲೆ ।
ಕಾಳಗದ ಭೂಭಾಗವನ್ನುರೆ ಮುಸುಕಿಕೊಂಡಿರಲು ॥
ಆಳು-ಪಶುಗಳ ಛಿನ್ನದೇಹದೆ । ಬೀಳುವಂಥ ಪ್ರವಾಲರಕ್ತವು ।
ಬಾಲಸೂರ್ಯನ ಕಳೆಯು ತಾಳಿತು ಬೆಳಗೆ ದಿಶಗಳನು. ॥ ೪೨ ॥
ಹರಿವ ರುಧಿರದ ಸ್ರೋತದಿಂದಲೆ । ಧರಣಿತಲ ನೆಸ್ತೆತೊಯ್ದ ಧೂಳಿಗೆ ।
ಮರುತದಿಂ ಹರಿತಂದ ರಜಸಂಬಂಧ ತೀರಿಯದು ॥
ಉರಿವ ವೈಶ್ವಾನರದಿ ಧೂಮವು । ಹೊರಟು ವಹ್ನಿಯು ಶಾಂತವಾಗಲು ।
ನರರ ಕಣ್ಗಳಿಗೆಸೆದು ತೋರುವ ತೆರದಿ ಕಾಣಿಸಿತು. ॥ ೪೩ ॥
ಅರಿಗಳಂಬುಗಳಿಂದ ರಥಿಕರು । ಮರೆತು ಮೈನಿಸ್ಪಂದವಾಗಲು ।
ತ್ವರದೆ ವೀರರನೊಯ್ದು ಸಾರಥಿ ಜನರು ದೂರದಲಿ ॥
ಪೊರೆಯೆ ಪ್ರಜ್ಞೆಯ ತಾಳಿಸೂತರ । ಜರಿದು ಪುನರಪಿ ತಿರುಹಿರಥವನು ।
ಭರದೆ ಮುಂಚಿನ ದ್ರೋಹಿಗಳನುರೆ ಹೊಡೆದು ಕೆಡುಹುವರು. ॥ ೪೪ ॥
ಘೋರಸಂಗರದಲ್ಲಿ ಕಾರ್ಮುಕ- । ಧಾರಿಗಳು ತೆಗೆದೆಸೆದ ಕೋಲ್ಗಳ ।
ದಾರಿಯಲಿ ಪರವೀರರಬ್ಬರದಿಂದ ಛೇದಿಸಲು ॥

ಹಾರಿ ನಾರಾಚಗಳ ಕೊನೆಗಳು । ತೋರ ವೇಗದೆ ಲಕ್ಷ್ಯದೊಂದಿಗೆ ।
ಸೇರಿಕೊಂಡವು ಮಧ್ಯದಲಿ ಗತಿಗೆಟ್ಟು ಪೋಗದಲೆ ॥ ೪೫ ॥
ಕರಿಗಳಾಹವದಲ್ಲಿ ಯೋಧರು । ಪರರ ಮಾವುತರನ್ನು ರೋಷದೆ ।
ಪರಮ ದಾರುಣವಾದ ಚಕ್ರಗಳಿಂದ ಶಿರಗಡಿಯೆ ॥
ಎರಗಿ ನಖಪಂಜರದೆ ಶ್ಯೇನವು । ಶಿರವನೊಯ್ಯಲು ತೊಡಕಿ ಕೂದಲ ।
ಧರಣಿತಲಕದು ಬಂದು ಕೆಲಕಾಲಕ್ಕೆ ಬೀಳುವದು ॥ ೪೬ ॥
ಕುದುರೆಸ್ವಾರರು ಕದನದಲಿ ಬಲು । ಚದುರತನದಿಂದೆತ್ತಿ ಕಸುವಿಲೆ ।
ಹದನವಾದಸಿಯಿಂದ ಕಡಿಯಲು ಮೂರ್ಛೆಯನು ತಳೆದು ॥
ಎದುರಗಾರನು ಬಿದ್ದುಕೊಳ್ಳಲು । ಮೊದಲಿನಾತನು ಮಗುಳಿ ಹೊಡೆಯದೆ ।
ಸದಯತನದಿಂದವನ ಸ್ಮೃತಿಮಾರ್ಗವನು ನೋಡುವನು ॥ ೪೭ ॥
ಕಾಳಗದ ಮದವೇರಿ ಯೀರ್ಗಡೆ- । ಯಾಳುಗಳು ತಂತಮ್ಮ ದೇಹದ ।
ಬಾಳುವೆಯ ಭಯವನ್ನು ತಾಳದೆ ಶಸ್ತ್ರಗಳ ಜಡಿಯೆ ॥
ಜ್ವಾಲೆಯಲಿ ಕಿಡಿಯೆದ್ದ ತೆರದ- । ಲ್ಲೇಳುತಿಹ ಸಣ್ಸಣ್ಣ ಕಿಡಿಗಳು ।
ವ್ಯಾಲಕರ ಶೀಕರದೆ ತತ್‌ಕ್ಷಣದಲ್ಲಿಯಾರುವವು. ॥ ೪೮ ॥
ಶರಗಳಿಂ ಕಡಿದೊಗೆದ ಶಿರಗಳೆ । ಸರಸ ನಾನಾತೆರದ ಪಣ್ಗಳು ।
ಹರಿವ ರುಧಿರವೆ ಮಧುರ ಮದ್ಯವದಾಗಿ ಕಣ್ಗೆಸೆದು ॥
ನರರ ಶೀರ್ಷಣ್ಯಗಳು ಕುಡಿಯುವ । ಪರಮ ಸೂಜ್ವಲ ಪಾತ್ರಗಳು ರಣ ।
ಧರಣಿಯೇ ಯಮಪಾನಗೃಹವಾಗೆಮಗೆ ತೋರುವದು. ॥ ೪೯ ॥
ಮಡಿದು ರಣದಲಿ ಬಿದ್ದ ಮನುಜರ । ತೊಡೆಗಳನು ಮೇಣ್ ತೋಳ್ಗಳನು ಗಡ ।
ಗಿಡದ ಬುಡದಲ್ಲೆಳೆದು ಹದ್ದುಗಳೊಯ್ದು ತೀವ್ರದಲಿ ।
ಕಡಿದು ಭುಜವನು ತಿನ್ನುತಿರೆಯಾ- । ಗಡವಿಮೃಗ ಬಂದದನು ಭಕ್ಷಿಸೆ ।
ನಡುವಿನಂತರ್ಮುಖಕೆ ನಟ್ಟಿತು ಬಾಹು ಭೂಷಣವು. ॥ ೫೦ ॥
ಅಸಮಬಲನಾದೋರ್ವವೀರನು । ಕಸುವಿನಿಂದರಿಭಟನ ಕಡಿಯು- ।
ಲ್ಕಸುವನಳಿದಾ ಯೋಧನಾಗಲೆ ವ್ಯೋಮಯಾನದಲಿ ॥
ಸುಪ್ರಮೆಯಿಂ ಸುರವತಿ ಜೊತೆಯಲಿ । ಕುಶಲತನದಿಂ ತನ್ನ ತನುಪರ- ।
ವಿಸರದೊಂದಿಗೆ ರಭಸದಿಂ ಕಾದುವದ ನೋಡಿದನು. ॥ ೫೧ ॥
ರಥಿಕರೀರ್ವರು ತಮ್ಮಯರಿಸಾ- । ರಥಿಗಳನು ಹೊಡೆದೊಗೆದು ತಾವೇ ।
ರಥವ ನಡೆಸುತ್ತೆದುರಗಾರನ ಕುದುರೆಗಳ ಕೊಂದು ॥
ಪೃಥಕದಲಿ ಗದೆಯಿಂದ ಕಾದುತ । ಮಥಿಸಿಯವುಗಳು ಮುರಿದು ಪೋಗಲು ।
ಪೃಥು ಪರಾಕ್ರಮದಿಂದ ಮಲ್ಲರ ತೆರದಿ ಕಾದಿದರು. ॥ ೫೨ ॥

ಏಕಸಮಯಕೆ ವೀರರೀರ್ವರು। ಭೀಕರಾದಾಹವದೆ ಮಡಿಯಲು।
ನಾಕಲೋಕವನೈದಿಯಲ್ಲಿಯು ಭೋಗಗಳ ಪಡೆದು॥
ಕಾಕುಬುದ್ಧಿಯ ಬಿಡದೆ ರೋಷದೆ। ಬೇಕು ತಮಗಿಂಥವಳೆ ಸ್ತ್ರೀಯೆಂ-।
ದೇಕಮೇಕರಕೂಡ ದಾರುಣ ಕಲಹ ಮಾಡಿದರು ॥ ೫೩ ॥
ಸುರರ ಮೇಣ್ದಾನವರ ಗಡಣದೆ। ಪರಮ ದಾರುಣವಾದ ಯುದ್ಧವು।
ಜರುಗಿದಂತೆಯೆ ರಾಜರೆರಡೂ ಪಕ್ಷದಲಿ ನಡೆದು॥
ಏರಲದರಿಂ ಕ್ಷೋಭಹೊಂದಿದ। ಸರಸ ಕಡಲಿನ ತೆರೆಗಳಂತೆಯೆ।
ನರಪರಲ್ಲೀರ್ಗಡೆಗೆ ವಿಜಯಶ್ರೀಯು ತಿರುಗಿದಳು. ॥ ೫೪ ॥
ಪರನೃಪಾಲರು ತನ್ನ ಸೈನ್ಯದ। ಪರಿಭವವ ಮಾಡಿದರು ರಾಘವ-।
ನರಿಗಳನ್ನರೆ ಬಿಡದೆ ಸನ್ಮುಖದಲ್ಲಿ ತಾನಾಗಿ॥
ಮರುತದಿಂ ಹೊಗೆ ದೂರವಾದರು। ಭರದೆ ವೈಶ್ವಾನರನು ತೃಣವ-।
ನ್ನುರಿವ ತೆರದಲಿ ವೈರಿಬಲವನು ಹೊಡೆದು ಕೆಡಹಿದನು. ॥ ೫೫ ॥
ಶರವ ತೂಣೀರವನು ಕವಚವ। ಧರಿಸಿದಂಥೇಕಾಕಿ ರಣದು-।
ರ್ಧರರ ಘೂತ್ತಮನಾದರಾಘವನಂದು ರಿಪುಗಳನು ॥
ಕರಿಯು ನಿಕರಗಳಲ್ಲಿಯೊಂದೇ। ಹರಿಯು ಪೊಕ್ಕವುಗಳನು ಜರ್ಜರ।
ವಿರಮವಿಲ್ಲದೆ ಮಾಡುವಂದದಿ ಮಾಡಿ ಬಿಟ್ಟಿಹನು. ॥ ೫೬ ॥
ಆವಕಾಲಕೆ ಶರವ ತೆಗೆಯುವ-। ನಾವಕಾಲಕೆ ಹೆದೆಗೆ ಹೂಡುವ-।
ನಾವಕಾಲಕೆ ಲಕ್ಷಸಾಧಿಸಿ ಬಾಣಹೊಡೆಯುವನೊ! ॥
ಕೋವಿದನ ಬಲತೋಳು ತಿರುಗುವ-। ದಾವಗಂ ಕಾಣುವದದಲ್ಲದೆ।
ದೇವನೇ ಮಿಕ್ಕುಳಿದ ವ್ಯಾಪಾರಗಳ ತಾಂ ಬಲ್ಲ ॥ ೫೭ ॥
ಪ್ರಳಯಕಾಲದ ರುದ್ರನಂದದಿ। ಮುಳಿದು ರಾಘವನಾಗಲರಿಗಳ।
ತಲೆಗಳನು ಕತ್ತರಿಸಿ ಧರಣೀತಲಕೆ ಕೆಡಹಿದನು ॥
ಇಳೆಯ ಮೇಲ್ಬಿದ್ದಂಥ ರಾಜರ। ಲಲಿತ ಮುಖಗಳು ಹಾಸಮಾಡುತ।
ಹಳೆದು ರಾಜನ ಬಲದ ಪರಿಹಾಸವನು ಮಾಡುವವು ॥ ೫೮ ॥
ಪರಮ ದಾರುಣ ಯುದ್ಧದಲಿ ಪರ-। ನರಪರೆಲ್ಲರು ಕೂಡಿ ಯುಗಪತ್।
ಕರಿರಥಾದಿಕ ಬಲಗಳಿಂದಾ ರಾಘವನ ಮುಸುಕಿ ॥
ಜರಿದು ಪರಿಪರಿಯಿಂದ ರೋಷದ। ಭರದೆ ಶಸ್ತ್ರಾಸ್ತ್ರಗಳ ನುಳೆಯುನು।
ಕರೆದು ರಘುಕುಲ ತಿಲಕನನು ಸೆರೆ ಮುಚ್ಚಿಬಿಟ್ಟಿಹರು ॥ ೫೯ ॥
ಹೊತ್ತು ಹೊರಡುವ ಕಾಲದಲಿ ಭೂ-। ಮತ್ತು ಗಗನಪ್ರಾಂತದಲಿ ಬಲು।
ಮುತ್ತಿದಂತಹ ಮಂಜಿನಲಿ ರವಿ ತೋರುವಂದದಲಿ॥

ಮತ್ತರಿಪುಗಳು ಹೊಡೆದ ಕೋಲ್ಗಳ । ಚಿತ್ತರದೆ ರಾಘವನ ತೇರಿನ ।
ಸುತ್ತ ಕತ್ತಲೆ ಮುಸುಕಿ ತೇರಿನ ಧ್ವಜವೆ ಕಾಣುವದು ॥ ೬೦ ॥
ಬಳಿಕ ರಘುಕಾಜಾಧಿರಾಜನ । ಕುಲಕೆ ಭೂಷಣನಾದ ರಾಘವ- ।
ನಳುಕದಲೆ ಗಂಧರ್ವನಿಂ ತಾಂ ಪಡೆದ ಬಾಣವನು ॥
ಬಲದೆ ರಿಪುಗಳ ಮೇಲೆ ಮೋಹನ । ಗೊಳಿಪದನ್ನಬ್ಬರದೆ ಬಿಡಲದು ।
ಗಳಿಗೆಯೊಳು ಪರರಾಜರನು ಬಲಸಹಿತ ಮೋಹಿಸಿತು ॥ ೬೧ ॥
ಮರೆತು ದೇಹದ ಭಾನವನ್ನರೆ । ಧರಣಿಮೇಲಾಗೆಲ್ಲ ಸೈನ್ಯವು ।
ಭರದೆ " ಗುರುಗುರು " ಶಬ್ದಮಾಡುತ ಮಲಗಿಕೊಂಡಿಹುದು ॥
ಪರನೃಪಾಲರ ಕರದೆ ಬಿಲ್ಗಳು । ಜರಿದು ಬಿದ್ದವು ತಾವು ರಥದ- ।
ಲ್ಲೊರಗಿದರು ಧ್ವಜಯೂಪದಾಶ್ರಯವನ್ನು ಕೈಕೊಂಡು ॥ ೬೨ ॥
ಇಂದುಮತಿ ಚೆಂದುಟಿಯ ಸುಧೆಯನು । ಚಂದದಿಂದಾಸ್ವಾದಿಸಿದ ರಘು- ।
ನಂದನನು ತನ್ನಧರ ಪುಟದಿಂ ಜಲಜವ ॥
ಅಂದು ರಿಪುಗಳ ಮೇಲೆ ಶೌರ್ಯದೆ । ಹೊಂದಿ ವಿಜಯಶ್ರೀಯ ಮಧುವನು ।
ನಂದದಿಂದಲೆ ಪಾನಮಾಡುವ ತೆರದಿ ತೋರಿದನು ॥ ೬೩ ॥
ರಾಘವನದರರವವ ತಿಳಿದಪ- । ರಾಗಿಯಾತನ ಸೈನಿಕರು ಜಯ- ।
ಯೋಗವದು ತಮ್ಮೊಡೆಯನಿಗೆ ನಿಶ್ಚಯದೆ ಬಂತೆಂದು ॥
ಸಾಗಿಯಾತನ ಬಳಿಗೆ ಬಂದರು । ರಾಗದಿಂ ಬಾಡಿರ್ದ ಪಂಕಜ ।
ಪೂಗದಲಿ ಶಶಿಯಂತೆ ಕಂಡರು ಕೋಸಲಾಧಿಪನ ॥ ೬೪ ॥
ಮಂದಮತಿಗಳೆ ನಿಮ್ಮ ಯಶವ- । ನ್ನಿಂದು ನಾನಪಹರಿಸಿದೆನು ಮೇಣ್ ।
ಕೊಂದುಹಾಕದೆ ದಯದೆ ಪ್ರಾಣಗಳನ್ನು ಕಾಯ್ದಿಹೆನು ॥
ಎಂದು ರುಧಿರಾದಿಗ್ಧ ಬಾಣಗ- । ಳಿಂದ ರಾಘವನಂದು ರಿಪುಗಳ ।
ಚಂದವಾಗಿಹ ಧ್ವಜದ ಪಟಗಳ ಮೇಲೆ ಬರೆದಿಹನು ॥ ೬೫ ॥
ಅರಿಗಳನ್ನರೆ ಜಯಿಸಿ ಯೀಪರಿ । ಧರಿಸಿ ಕಾರ್ಮುಕವನ್ನು ಕರದಲಿ ।
ಕಿರಿಯ ಬೆಮರನ್ನೊರಿಸಿಕೊಳ್ಳುತ್ತರಸಿ ಯಿದ್ದೆಡೆಗೆ ॥
ಉರುಪರಾಕ್ರಮಿಯಾದ ರಾಜನು । ಪರಮಹರುಷದೆ ಸಾಗಿಬಂದಾ ।
ದರದೆ ಗಾಬರಿಯಾದ ತನ್ನಯ ಪತ್ನಿಗಿಂತೆಂದಾ ॥ ೬೬ ॥
ನೋಡು ನೀನಿತ್ತೆಡೆಗೆ ಮಾನಿನಿ । ಕಾಡುಮೃಗಗಳ ತೆರದಿ ಬಿದ್ದಿಹ ।
ಮೂಢ ಚೇತನರಾದ ರಾಜರ ಕರದೆ ಚಾಪವನು ॥
ಆಡುವರ್ಭಕರಾದರೊಯ್ವರು । ಹೇಡಿಗಳು ನನ್ನಿಂದ ನಿನ್ನನು ।
ಮಾಡಿ ಕಾಳಗವನ್ನು ನನ್ನನು ಜಯಿಸಿ ಹರಿಸುವರೊ? ॥ ೬೭ ॥

ಒರಿಸಿ ದರ್ಪಣವನ್ನು ಸ್ವಚ್ಛೀ- । ಕರಿಸಲದು ನಿಜದಚ್ಛರೂಪವ ।
ಧರಿಸಿ " ತಳತಳ " ಹೊಳೆಯುವಂದದಿ ರಾಘವನ ಸತಿಯು ॥
ಅರಿಗಳರಸರದರದೆ ಬಾಡಿದ । ಸರಸ ಮುಖಸರಸಿಜವು ಪುನರಪಿ ।
ಪರಮ ಸೂಜ್ವಲಕಾಂತಿಯನ್ನುರೆ ತಾಳಿ ಬೆಳಗಿದುದು ॥ ೬೮ ॥
ಮಳೆಯು ಬೀಳಲ್ಕಿಳೆಯು ಸಂತಸ । ದಳೆದು ಮನದಲಿ ಮೇಘರಾಜನ ।
ಬಲದ ಸ್ತುತಿಯನು ಶಿಖಿಗಳಾಸ್ಯದೆ ಮಾಡುವಂದದಲಿ ॥
ಇಳೆಯಪಾಲನ ಸ್ತೋತ್ರವನು ತಾಂ । ನಲಿನನಯನೆಯು ನಾಚಿ ಮಾಡದೆ ।
ಗೆಳತಿಯರ ಮುಖದಿಂದ ಪರಿಪರಿ ಮಾಡತೊಡಗಿದಳು ॥ ೬೯ ॥
ಧೂಸರದೆ ಗಜತುರಗ ರಥಗಳ । ಕೇಶದಗ್ರವು ಮಾಸಿವಿಜಯದ ।
ಭೂಷಣದ ಸಿರಿಯಂತೆ ತೋರುವ ಕಾಂತಿಯಿಂ ಕೂಡಿ ॥
ದೋಷಗಳು ಲವಲೇಶವಿಲ್ಲದ । ಕೌಸಲಾಧೀಶ್ವರನು ತನ್ನಯ ।
ದ್ವೇಷಿಗಳ ತಲೆಮೆಟ್ಟಿ ಪಾದಿಲೆ ಪುರಕೆ ಸಾಗಿದನು ॥ ೭೦ ॥
ಅಜನ ವಿಜಯದ ವಾರ್ತೆ ರಘು ಭೂ- । ಭುಜನು ಮುಂಚೆಗೆ ಕೇಳಿ ತನ್ನಯ ।
ಸ್ವಜನರಿಂದೊಡಗೂಡಿ ಮನ್ನಿಸಿ ಹರಿಸಿ ರಾಘವನ ॥
ಪ್ರಜರ ಪಾಲನ ಮಾಳ್ಪ ಕಾರ್ಯ- । ಕ್ಕಜನ ನೇಮಿಸಿ ತಾನು ಮೋಕ್ಷವ ।
ಭಜಿದನು ರವಿಕುಲದ ಪೂರ್ವಾಚಾರಕನುಸರಿಸಿ ॥ ೭೧ ॥

೮ನೆಯ ಸರ್ಗ.

ಅಜವಿಲಾಪ.

ಇಂದುಮತಿಯುದ್ವಾಹಕಾಲಕೆ । ತಂದೆ ರಘುರಾಜಾಧಿರಾಜನು ।
ನಂದನನ ಕೈವಶಕೆ ಕೊಟ್ಟನು ತನ್ನ ರಾಜ್ಯವನು ॥
ಅಂದು ರಾರಾಜಿಸುವ ಭೂವಧು । ಮಂದಿಕಂಗಳಿಗೆಸೆದಳೀಕೆಯು ।
ಸುಂದರಾಕೃತಿ ಹೊಂದಿ ಬಂದಿರ್ದಪರ ಮಹಿಷಿಯೆನೆ ॥ ೧ ॥
ಸೃಷ್ಟಿಯೊಳು ನೃಪಸೂನುಗಳು ಬಹು । ದುಷ್ಟಕರ್ಮಗಳಿಂದಲಾದರು ।
ಕಷ್ಟಕಂಜದೆ ಘಾತಪಾತದೆ ರಾಜ್ಯಗಳಿಸುವರು ।
ಸುಷ್ಟು ಭೋಗದ ತೃಷ್ಣೆಯಿಂದಜ । ರಾಷ್ಟ್ರಭಾರವ ತಾಳಲಿಲ್ಲ- ।
ದ್ದಿಷ್ಟ ಪಿತ್ರಾಜ್ಞೆಯನು ಪಾಲಿಪುದಕ್ಕೆ ವಹಿಸಿದನು. ॥ ೨ ॥
ಸಕಲ ತೀರ್ಥಗಳಿಂದ ವಿಧಿಪೂ- । ರ್ವಕ ವಶಿಷ್ಠನು ರಾಜಪುತ್ರಗೆ ।
ಪ್ರಕಟದಿಂದಭಿಷೇಕವನು ಮಾಡಲ್ಕೆ ಭೂವನಿತೆ ॥
ನಿಖಿಲ ಶೌರ್ಯೋದಾರತನದಲಿ । ಮುಕುಟಮಣಿಯಾದಜನು ರಾಜ್ಯದ ।
ಶಕಟವನು ವಹಿಸಿದಕೆ ಸಂತಸವನ್ನು ತಾಳಿದಳು. ॥ ೩ ॥

ಉರು ತಪೋಧನನಾದ ಕುಲಗುರು। ವರ ವಶಿಷ್ಠನು ತನ್ನ ಛಾತ್ರನ।
ಪರಸಿರುಪರ್ಣವೇದಮಂತ್ರಾಕ್ಷರಗಳಿಂದಜಗೆ ॥
ಎರೆಯುಜಾತನು ಕ್ಷಾತ್ರತೇಜದೆ। ಪರರಿಗತಿ ದುರ್ಧರ್ಷನಾದನು।
ಭರದೆ ಬೀಸುತ್ತಿರುವ ವಾಯುವಿಗಗ್ನಿ ಕಲಿತಂತೆ ॥ ೪ ॥
ತ್ಯಜಿಸಿ ವಾರ್ಧಕ್ಯವನು ರಘು ಭೂ-। ಭುಜನೆ ನವಯೌವ್ವನವ ಪುನರಪಿ।
ಭಜಿಸಿ ಬಂದಿಹನಜನರೂಪದಿಯೆಂಬ ತೆರದಲ್ಲಿ ॥
ಪ್ರಜರ ಮನಸಿಗೆ ತೋರಿತಲ್ಲದೆ। ಸುಜನತೆಯು ಮೇಣ್ ರಘುವರೇಣ್ಯನ।
ಭುಜಪರಾಕ್ರಮನ್ನು ಧಾರಣ ಮಾಡಿ ಮೆರೆದಜನು. ॥ ೫ ॥
ತಂದೆಯಾ ರಾಜ್ಯಾಧಿಪತ್ಯಕೆ। ನಂದನನ ಸಂಯೋಗವೀತೆರ-।
ದಿಂದ ಮತ್ತೆಲ್ಲಾಗುವದು ದುರ್ನಿಳವೆ ಜಗದೊಳಗೆ ॥
ಕುಂದುವಿರಹಿತ ವಾದವಿನಯಕೆ। ಕುಂದಣವ ಕೂಡ್ರಿಸಿದ ಪರಿಯಲಿ।
ಚಂದವಾದಜನೃಪನ ನವಯೌವ್ವನವು ಶೋಭಿಸಿತು ॥ ೬ ॥
ಕುಸುಮವತಿಯಾದಂಥ ಸ್ತ್ರೀಯನು। ರಸಿಕ ಪುರುಷನು ಕುಶಲತನದಲಿ।
ವಶಕೆ ಪರಿಪರಿ ಚಾಟುವಚನಗಳಿಂದ ತರುವಂತೆ ॥
ಅಸಮ ತೇಜೋಬಲ ನೃಪಾಲನು। ವಸುಧೆಯನು ಕೈವಶಕೆ ತಂದನು।
ಶಿಶುವಿನಂತೆಯೆ ಪಾಲಿಸಿದನದನೆಂತು ಬಣ್ಣಿಪೆನು ? ॥ ೭ ॥
ಉದಧಿ, ಮೇದಿನಿ ಮೇಲೆ ಹರಿಯುವ। ನದಿಗಳಿಗೆ ಲಘು ಪೃಥುಗಳೆನ್ನದೆ।
ಪದವು ತನ್ನುದರದಲಿ ಸಲ್ಲಿಸುವಂತೆ ನೃಪವರನು ॥
ಚದುರ ಮೂಢರ ಭೇದವರಿಯದೆ। ಮಧುರ ವಚನಗಳಿಂದ ಮನ್ನಿಸಿ।
ಮುದದಿ ಪ್ರಕೃತಿಗಳನ್ನು ತನುಜರ ತೆರದಿ ರಕ್ಷಿಪನು ॥ ೮ ॥
ಗುಣಿಗಳನು ತಕ್ಕಂತೆ ಮನ್ನಿಸಿ। ಮಣಿಯದಂಥವರನ್ನು ಮರ್ದಿಸಿ।
ಮುನಿಗಳಿಗೆ ಬಹು ವಿನಯದಿಂ ಸತ್ಕಾರವನು ಮಾಡಿ ॥
ಪ್ರಣಯದಂಡಗಳಿಂದಲಜನೃಪ। ಜನರ ಮನವನ್ನೆಳೆದುಕೊಂಡನು।
ತನುಜರಂತವರೆಲ್ಲರೂ ನರವರನ ಭಜಿಸಿದರು ॥ ೯ ॥
ಹಗೆಗಳನು ಮುರಿದೊತ್ತಿ ಮೂಲೆಗೆ। ಜಗದೊಳತಿ ವಿಖ್ಯಾತನಾಗಿಹ।
ಮಗನು ತನ್ನಂತೆಲ್ಲ ಪ್ರಜೆಗಳಿಗಿನಿಯನಿಹನೆಂದು ॥
ರಘುವರೇಣ್ಯನು ತನ್ನ ಮನದೊಳು। ಬಗೆದು ನಶ್ವರವಾದ ವಿಷಯದ।
ಬಗೆಯನುಳಿದವನಾಗ ವೈರಾಗ್ಯವನು ತಾಳಿದನು. ॥ ೧೦ ॥
ನೃಪದಿಲೀಪನ ವಂಶದೊಳು ಘನ-। ತಪವ ಚರಿಸುವದಕ್ಕೆ ರಾಜರು।
ವಿಪಿನದಾಶ್ರಯವನ್ನು ಮಾಡುವ ತೆರದೆ ರಘುವರನು ॥

ಸ್ವಪದದಲಿ ಮಗನನ್ನು ಸ್ಥಾಪಿಸಿ । ವಿಪದೆಗಂಜದೆ ಮುನಿಗಳಂತೆಯೆ ।
ಸಪದಿ ವನವಾಸಕ್ಕೆ ಹೊರಡಲು ತನುಜನಜನವನ ॥ ೧೧ ॥
ಪಾದಕಮಲಗಳನ್ನು ವಂದಿಸಿ । ಖೇದದಿಂ ಕಣ್ಣೀರು ಸುರಿಸುತೆ ।
ಸ್ವೇದದಿಂ ಮೈಮುಳುಗಿ ಗದ್ಗದ ವಾಣಿಯಿಂದವನು ॥
ಆಧಿ ದುಃಖಗಳಿಂದ ರಕ್ಷಿಸಿ । ದಾದನೇ ಪರಿಪಾಲಿಸೆನ್ನನು ।
ಹಾದಿಗಾಣದ ಹಸುಳನನು ಸಂತ್ಯಜಿಸಿ ಪೋಗುವರೆ? ॥ ೧೨ ॥
ಎನಲು ಪುತ್ರಸ್ನೇಹದಿಂ ರಘು । ಮನದೊಳತಿಶಯ ಕರಗಿ ತನ್ನಯ ।
ವನಕೆ ಪೋಗುವ ವಾಂಛೆಯನು ತೆಗೆದೊಗೆದು ಮನದಿಂದ ॥
ತನುಜನಿಚ್ಛೆಯನರಿತು ಮುದದಿಂ । ಮನೆಯೊಳುಳಿದಹಿಭೋಗದಂತೆಯೆ ।
ಪುನರಪಿ ಸ್ತ್ರೀರಾಜ್ಯಭೋಗಗಳನ್ನು ಕಾಂಕ್ಷಿಸದೆ ॥ ೧೩ ॥
ಪುರದ ಹೊರಭಾಗದಲಿ ರಾಜನು । ವಿರಚಿಸಿದ ತನಗಾಗಿ ಮಠವನು ।
ಪರಮಹಂಸನ ದೀಕ್ಷೆಯನು ಸ್ವೀಕಾರವಮಾಡಿದನು ॥
ಸಿರಿಯನಾತನು ಹೇಯವೆಂದುರೆ । ವಿರತಿಯಿಂ ದೃಢವಾಗಿ ತಿಳಿದನು ।
ನಿರುತದಲಿ ಹರಿಯನ್ನು ಸ್ಮರಿಸುತ ಕಾಲಕಳೆಯುವನು ॥ ೧೪ ॥
ಪ್ರಥಮರಾಜ್ಯವನಾಳಿ ತೆರಳಿದ । ಪೃಥು ಪರಾಕ್ರಮಿಯಾದ ರಘುವಿನ ।
ಸುತನನಂತರದಲ್ಲಿಯಾಳುತ್ತಿರುವ ವಂಶವದು ॥
ಅತಿ ಮನೋಹರನಾದ ಚಂದ್ರನು । ಚ್ಯುತಿಯ ಹೊಂದಿದ ಮೇಲೆ ಸೂರ್ಯನು ।
ಪ್ರತಪಿಸುವ ಸುರವರ್ತ್ಮದಂತೆಯೆ ಶೋಭಿಸುತ್ತಿಹುದು ॥ ೧೫ ॥
ಪರಮಹಂಸನ ದೀಕ್ಷೆತಾಳಿದ । ವರ ಮಹಾರಘುರಾಯನೊಂದೆಡೆ ।
ಪರಮ ದಕ್ಷತೆಯಿಂದ ಪ್ರಜೆಗಳ ಪೊರೆವ ರಾಘವನು ॥
ಇರುವನೊಂದೆಡೆಗಾದಕಾರಣ । ಧರೆಯಮೇಲವತರಿಸಿ ಯುಗಪ- ।
ತ್ತಿರದೆ ಬಂದಿಹ ಧರ್ಮಕರ್ಮಗಳಂತೆ ತೋರಿದರು ॥ ೧೬ ॥
ಅಜಿತ ಶತ್ರುಗಳನ್ನು ಜಯಿಸ- । ಲ್ಕಜನ ಕೋವಿದರಾದ ಸಚಿವರ ।
ಭಜಿಸಿದನು ರಘುರಾಯನಾದರು ತನ್ನ ರಿಪುಗಳನು ॥
ವಿಜಯಿಸುವದಕ್ಕಾಗಿ ಸುಜ್ಞರ- । ದ್ವಿಜರ ಸಂಘವನರಿಸಿ ಭಗವ- ।
ದ್ಭಜನೆಯೊಳು ಬಲು ಪ್ರೇಮದಿಂದಲೆ ಕಾಲಕಳೆಯುವನು ॥ ೧೭ ॥
ತನ್ನ ಪ್ರಜೆಗಳ ನ್ಯಾಯನಿರ್ಣಯ- । ವನ್ನು ಮಾಡುವದಕ್ಕೆ ರಾಘವ ।
ರನ್ನದಿಂ ನಿರ್ಮಿಸಿದ ಸಿಂಹಾಸನವನೇರುವನು ॥
ಚಿನ್ಮಯಾತ್ಮಕ ವಸ್ತುವನು ತಾ- । ನಿನ್ನು ಧಾರಣೆಯಿಂದ ತಿಳಿಯುವೆ- ।
ನೆನ್ನುತಲೆ ರಘುನೃಪನು ದರ್ಭಾಸನವನೈದುವನು ॥ ೧೮ ॥

ರಾಘವನು ಪ್ರಭುಶಕ್ತಿಸಂಪದ । ಯೋಗದಿಂದರಿಗಳನು ಗೆದ್ದನು ।
ಭೋಗಿಸಿದ ನಿಷ್ಕಂಟಕದೆ ಭೂವಲಯುವನ್ನವನು ॥
ಯೋಗಸಾಧನದಿಂದ ರಘುಪತಿ । ನೀಗಿ ಮಾಯಾಮೋಹವನ್ನನು ।
ರಾಗದಿಂ ನಿಜ ಬೋಧರೂಪನು ತಾನೆ ತಾನಾದಾ ॥ ೧೯ ॥
ಅಹಿತರಾಜರು ಮಾಡಲೆಸಗಿದ । ಸ್ವಹಿತಕರ್ಮಾರಂಭ ಫಲವನು ।
ಮಹಿಪ ರಾಘವನಾಗಲೆಯೆ ಸಲೆ ಭಸ್ಮಮಾಡಿದನು ॥
ಆಹಹ!! ತನ್ನಯ ಕರ್ಮಗಳನುರೆ । ದಹಿಸಿದನು ರಘುರಾಜರಾಜನು ।
ವಿಹಿತ ಯೋಗೋಪಾಯದಿಂ ಜ್ಞಾನಾಗ್ನಿ ಬಲದಿಂದ ॥ ೨೦ ॥
ಸಂಧಿವಿಗ್ರಹಗಳಲಿ ರಾಘವ- । ನೊಂದು ತಂತ್ರಾಲಂಬನದೆ ಗಡ- ।
ಸಂಧಿ ಸಾಧಿಸಿ ಶತ್ರುಗಳನುರೆ ಜಯಿಸಿದಂದದಲಿ ॥
ತಂದೆ ರಘುವರನಾದರೂ ಗುಣ- । ಬಂಧಗಳ ಪ್ರತಿಬಂಧ ಭೇದಿಸಿ ।
ದ್ವಂದ್ವ-ಭಾವವನಳಿದು ಸಾಮ್ಯಾವಸ್ಥೆ ಹೊಂದಿಹನು ॥ ೨೧ ॥
ಕಡೆಗೆ ಮುಟ್ಟುವವರೆಗೆ ರಾಘವ- । ನಡಿಗಳನು ಹಿಂದೆಗೆಯದೇ ತಾಂ ।
ಹಿಡಿದ ಕರ್ಮಗಳನ್ನು ಕೊನೆಗಾಣಿಸನು ನಿಶ್ಚಯದೆ ॥
ಒಡೆಯ ರಘುಪತಿಯಾದರೂ ಮನ- । ಗೆಡದೆ ಯೋಗಾಭ್ಯಾಸದಿಂ ಗಡ ।
ದೃಢತೆಯಿಂ ನಿಜರೂಪಪ್ರತ್ಯಯವನ್ನು ಪಡೆದಿಹನು ॥ ೨೨ ॥
ಅಂತವಿಲ್ಲದ ಸೌಖ್ಯವೋರ್ವನ । ಹಂತ! ವಿಷಯಾನಂದವೋರ್ವನು ।
ಸಂತತ ಶ್ರಮಮಾಡಿ ತಮ್ಮಯ ಶತ್ರುಗಳನರಿದು ॥
ಇಂತು ಪರಿ ರಘುರಾಘವರು ತ- । ಮ್ಮಂತರಂಗದ ಸಾಧ್ಯಗಳನೇ- ।
ಕಾಂತಮಾನಸರಾಗಿ ಹೊಂದಿದರೇಕ ಸಮಯದಲಿ ॥ ೨೩ ॥
ತನುಜ-ಮನದಭಿಲಾಷೆಯಂತೆಯೆ । ಜನಪ ರಘು ಕೆಲಕಾಲವೀಪರಿ ।
ತೃಣಕೆ ಸರಿ ಧನಕನಕ ವಿಷಯಂಗಳನು ತಾನೆಣಿಸಿ ॥
ಮನುಜ ಲೋಕದೊಳಿರ್ದನಂತರ । ಕೊನೆಗೆ ಲಯಯೋಗವನು ಚಿಂತಿಸಿ ।
ವನಜನಾಭನ ರೂಪದೊಳು ವಿಶ್ರಾಂತಿ ಹೊಂದಿದನು ॥ ೨೪ ॥
ಪರಮಹಂಸನ ದೀಕ್ಷೆ ಹೊಂದಿದ । ಪರಮಧಾರ್ಮಿಕನಾದ ತಂದೆಯು ।
ಪರಮ ಪುರುಷನ ರೂಪದಲಿ ಬೆರೆತೆಂಬ ವಾರ್ತೆಯನು ॥
ನರಪ ರಾಘವ ಕೇಳಿ ದುಃಖದೆ । ಮರುಗಿದನು ಕಣ್ಣೀರು ಸುರಿಸುತ ।
ಚರಮ ವಿಧಿ ದೇಹಕ್ಕೆ ಸರಿ ಯಾಗವನು ಮಾಡಿದನು. ॥ ೨೫ ॥
ಯೋಗಮಾರ್ಗದೆ ಯೋಗಿಗಳು ತನು- । ನೀಗಿ ಚಿನ್ಮಯರಾಗಿ ಪೋದರೆ ।
ತ್ಯಾಗ ಪಿಂಡೋದಕಗಳೌರ್ಧ್ವಗಳನ್ನು ಮಾಡುವರೆ? ॥

ರಾಘವನು ಪಿತೃಭಕ್ತಿಪೂರಿತ- । ನಾಗಿ ದ್ವಿಜರಿಗೆ ದಾನಕೊಟ್ಟನು. ।
ಸಾಗಿಸಿದನಜನೌರ್ಧ್ವದೇಹಿಕ ಸರ್ವ ಕರ್ಮಗಳ ॥ ೨೬ ॥
ಅಜನ ಪಟ್ಟದರಾಣಿ ದೇವ- । ದ್ವಿಜರ ಪರಮಾಶಿಷದೆ ಸುಕ್ರತು- ॥
ಭುಜರ ಪತಿ ದೇವೇಂದ್ರನಂತಹ ಸುತನ ಜನಿಸಿದಳು. ॥
ಸೃಜಿಸಿದಳು ಭೂವನಿತೆ ರಾಜನ । ಪ್ರಜರಹಿತ ಸಾಧಿಸಲು ವಿಧವಿಧ ।
ರಜತ-ಮೌಕ್ತಿಕ-ಹೇಮ- ರತ್ನಗಳನ್ನು ಮೋದದಲಿ ॥ ೨೭ ॥
ಶಿಶುವು ದಶಶತ-ಕಿರಣನಂತೆಯೇ । ದಶದಿಶಂಗಳನಾಗ ಬೆಳಗಿತು ।
ಯಶಕೆ ಸರಿ ಮತ್ತಾರು ಕಾಣರು ವಜ್ರಿಯುನ್ನುಳಿದು ॥
ದಶ-ಶಿರುದ್ವಿದ್ಗುರುವು ಪುಟ್ಟಿದ । ದಶೆಯುನೀಕ್ಷಿಸಿ ವಿಬುಧರೆಲ್ಲರು ।
ದಶರಥೆಂದಭಿಧಾನ ಕೂಸಿಗೆ ಕೊಟ್ಟು ಪರಿಸಿದರು. ॥ ೨೮ ॥
ಶೃತಿಗಳನು ಪರಿಪಠಿಸಿ ಋಷಿಗಳ । ಕ್ರತುಗಳನು ಕೈಕೊಂಡು ತ್ರಿದಶರ ।
ಸುತನ ಪಡೆದಾಗಜನು ಪಿತೃಗಳ ಋಣವ ತೀರಿಸಿದ ॥
ಅತಿಥಿಗಳಿಗವರಿಚ್ಛೆಯಂತೆಯೆ । ವಿಚರಿಸುತ ಧನಕನಕಗಳನುರೆ ।
ಪೃಥು ಪರಾಕ್ರಮಿ ರಾಜಸಿಳೆಯೊಳು ತರಣಿಯಂತೆಸೆದ ॥ ೨೯ ॥
ತಂದೆ ತೀರಿದ ದುಃಖವಾದರು । ವಂದನೀಯರ ಭೋಧದಿಂ ಕ್ರಮ- ।
ದಿಂದ ಹೊಳೆ-ನೀರಿಳಿದ ತೆರದಲಿ ಕಡಿಮೆಯಾಗುತಿರೆ ॥
ಇಂದುಮತಿವರನಾದ ರಾಘವ- । ನಂದಕಾರ್ಮುಕವನ್ನು ಸಜ್ಜಿಸಿ ।
ಯೊಂದೆ ತನ್ನನುಶಾಸನವೆ ಜಗಕೆಲ್ಲ ಮಾಡಿದನು ॥ ೩೦ ॥
ಹೀನ ದೀನರ ಪಾಲನಕೆ ವಿ- । ದ್ವಾನ-ಜನ-ಸನ್ಮಾನಕಾಗಿಯೆ ।
ಮಾನನಿಧಿಯುಜರಾಜ-ಬಲ-ಪಾಂಡಿತ್ಯವಾಗಿಹವು ॥
ತಾನುಗಳಿಸಿರ್ದೆಲ್ಲ ದ್ರವ್ಯವು । ಜಾನಪದದುಪಯೋಗಕಲ್ಲದೆ ॥
ಗೌಣವಾದಿಹ ಭೋಗತೃಷ್ಣೆಗೆ ಧನವ ಕಳೆಯುವನೆ ? ॥ ೩೧ ॥
ಇಂದುಮತಿಯಿಂ ಕೂಡಿ ಭೂಪತಿ । ಯೊಂದು ದಿನ ವಿಶ್ರಾಂತಿಗೆಯ್ಯಲು ।
ಬಂದಿಗಳ ಸ್ತುತಿ-ಪಾಠ-ರವದಲಿ ಪುರದೆ ಪೊರಮಟ್ಟು ॥
ತಂದೆ ರಘುಪತಿಯಿಂದ ರಚಿಸಿದ । ಚಂದವಾದುಪವನಕೆ ಬೇಗನೆ ।
ನಂದನೋದ್ಯಾನಕ್ಕೆ ಸುರಪತಿಯಂತೆ ತೆರಳಿದನು. ॥ ೩೨ ॥
ತೆಂಕಣದ ಸಾಗರದ ತೀರದೆ । ಬಿಂಕನಿಂ ನೆಲೆಗೊಂಡ ಗೋಕ- ।
ರ್ಣಾಂಕದಿಂ ಪ್ರಖ್ಯಾತಿಹೊಂದಿದ ದೇವದೇವನನು ॥
ಪಂಕಜೋದ್ಭವನಣುಗ ವೀಣೆಯು । ಝೇಂಕರವ ಗೆಯ್ಯುತ್ತ ಹರುಷದೆ ।
ತೆಂಕಣೆದುರಿನ ದಿಕ್ಕಿನಿಂ ಕಾಣಲ್ಕೆ ಚರಿಸಿಹನು ॥ ೩೩ ॥

ಸುರರ ಮುನಿನಾರದನು ತನ್ನಯ । ಕರದೆ ಧರಿಸಿದ ಬ್ರಹ್ಮವೀಣೆಯು ।
ಶಿರದೊಳಿರುತಿರುವಮರಲೋಕದ ಪುಷ್ಪ-ಹಾರಗಳ ॥
ಸುರಭಿಸೌಂದರ್ಯಕ್ಕೆ ಮೋಹಿಸಿ । ಭರದೆ ಮಾರುತನವುಗಳನು ಗಡ- ।
ಹರಣ ಮಾಡಿದ ನರರೆ! ದುಶ್ಚರಿತಕ್ಕೆ ಹೆದರದಲೆ ॥ ೩೪ ॥
ಸುನವ ಪುಷ್ಪಗಳಿಂದ ಗ್ರಥಿಸಿದ । ಘನ ಮನೋಹರವಾದ ಮಾಲೆಯು- ।
ನನಿಲನೌದ್ಧತ್ಯದಲಿ ಹರಿಸಲು ನೊಂದು ಮನಸಿನಲಿ ॥
ಮುನಿಯು ವೀಣಾ-ವನಿತೆ ನೇತ್ರಾಂ- । ಜನದೆ ಕಲುಷಿತವಾದ ಕಣ್ಣೀ- ।
ರ್ವನಿಗಳೆಂಬ ದ್ವಿರೇಫಗಳ ಮೇದಿನಿಗೆ ಸುರಸಿದಳು ॥ ೩೫ ॥
ಸುರಭಿ ಋತು ಬಂತೆಂದು ರಾಘವ- । ನರಪನುದ್ಯಾನದಲಿ ಬಹು ವಿಧ ।
ಸರಸ ಸುಂದರ ಮಧುರ ಪುಷ್ಪಗಳರಳಿ ತೋರುತಿರೆ ।
ಝರಿದು ಭರದಿಂದವುಗಳನು ತಾಂ । ಸುರರ ಪುಷ್ಪದ ಹಾರವರಸನ ।
ತರುಣ ರಾಜ್ಞಿಯ ಕೊರಳಿನಲಿ ಸ್ಥಿತಿಯುನ್ನು ಹೊಂದಿದುದೋ ॥ ೩೬ ॥
ಅರರೆ! ರಾರೌ ಚಂದ್ರಬಿಂಬವ । ದುರುಳರಾಹುವು ಬಂದು ಮುಸುಕಲು ।
ಸರಸ ಚಂದ್ರಿಕೆಯಡಗಿ ಕತ್ತಲೆ ತುಂಬಿಕೊಂಡಂತೆ ॥
ಕೊರಳಿನಲಿ ಸುರಕುಸುಮಮಾಲೆಯು । ಪರಮಸೌಹಾರ್ದದಲಿ ಬೀಳಲು ।
ತ್ವರದೆಯರಸಿಯು ಮೊಗವು ಬಾಡಿತು ಮರಣ ಹೊಂದಿದಳು ॥ ೩೭ ॥
ಉರಿವ ದೀಪದ ಜ್ಯೋತಿಸಹಿತವೆ । ಕಿರಿಯ ತೈಲದ ಬಿಂದುವಾದರು ।
ಭರದೆ ಬೀಸುವ ಗಾಳಿಯುನ್ನನುಸರಿಸಿ ಪೇರ್ವರವು ॥
ಧರಣಿತಲದಲ್ಲಿರದೆ ಬೀಳುವ । ತೆರದಿ ನರಪನ ರಾಣಿ ತೀರಲು ।
ಮರೆತು ದೇಹದ ಪ್ರಜ್ಞೆಯುನು ನರವರನು ನೆಲವಿಡಿದ ॥ ೩೮ ॥
ಅರಸಿಯುರಸರ ಪಾರ್ಶ್ವದಲ್ಲಿಯ । ಪರಿಜನರ ದುಃಖಾರ್ತರವದಿಂ ।
ಸರಸ ಸಂಛವಗಳಲಿ ವಾಸಿಸುತಿರ್ದ ಭೃಂಗಗಳು ॥
ಮರದ ಮೇಲಿನ ಪಕ್ಕಿಗಳು ಮೇಣ್ । ಸರಸ ಕೀರ ಮರಾಳಗಳು ತ- ।
ಮ್ಮರಸನಿಗೆ ಯೊದಗಿರ್ದ ಶೋಕದೆ ಬಹಳ ಮರುಗಿದವು ॥ ೩೯ ॥
ಚಲಿಸಿ ಬೀಸಣಿಕೆಯನು ಕೆಲವರು । ಜಲದ ಸೇಚನವನ್ನು ಕೆಲವರು ।
ಹಲವು ವಿಧದುಪಚಾರಗಳನುರೆ ಮಾಡೆ ಕೆಲಕೆಲರು ॥
ತಿಳಿದು ಮೂರ್ಛೆಯುನೆದ್ದು ರಾಜನು । ಕುಳಿತುಕೊಂಡನು ರಾಜ್ಞಿಮಡಿದಳು ।
ಫಲಿಸುತಿಹವಾಯುಷ್ಯವಿರ್ದರೆ ಹಲವುಪಾಯುಗಳು ॥ ೪೦ ॥
ಕಡಿದ ತಂತಿಯುನೇರಿಸಲು ತಾಂ- । ತೊಡೆಯ ಮೇಲ್ವೀಣೆಯುನು ಗಾಯುಕ- ।
ನಿಡುವ ತೆರದಿಂದೊಡೆಯು ರಾಘವ ಗಡನೆ ಚಡಪಡಿಸಿ ॥

ಮಡದಿಪ್ರೇತವನಿಟ್ಟುಕೊಂಡನು । ಮುಡಿಯುನೇವರಿಸುತ್ತ ದುಃಖದ ।
ಕಡಲಿನೊಳು ದೃಢವಾಗಿ ಮುಳುಗಿಹನೇನು ಪೇಳುವೆನು ॥ ೪೧ ॥
ಭಾನು ಮೂಡುವ ಸಮಯದಲಿ ಖ- । ಸ್ಥಾನದಲಿ ಕಣ್ಗೆಸೆವ ಚಂದ್ರನ ।
ಮ್ಲಾನವಾಗಿಹ ರೇಷೆಯಂತೆಯೆ ಮಲಿನವಾಗಿರುವ ॥
ಪ್ರಾಣಪತಿಯುತ್ಸಂಗದಲಿ ಗನಿ । ಪ್ರಾಣಳಾದಾ ನೃಪನ ಸುಂದರಿ ।
ಯಾನನವು ತನುಸಹಿತ ಬಹು ನಿಸ್ತೇಜವಾಗಿಹುದು ॥ ೪೨ ॥
ಅರಸು ಸ್ಥಿರಬುದ್ಧಿಯವನಾದರು । ತರಳರಂತೆದೆಗೆಟ್ಟು ಕರುಣಾ- ।
ಸ್ವರದೆ ರೋದನ ಮಾಡಿದನು ಪೆಂಡತಿಯ ನೆನಿಸಿ ॥
ಬಿರಸುಲೋಹವು ತಪ್ತವಾಗಲು । ಮರೆತು ನಿಜ ಕಾಠಿಣ್ಯವನು ತಾಂ ।
ಕರಗಿ ಮಾರ್ದವ ವಹಿಸುವದು ಕಥೆ ದೇಹಿಗಳದೇನು? ॥ ೪೩ ॥
ಪರಮ ಕೋಮಲಸುಮಗಳಾದರು । ದುರುಳ ವಿಧಿಕರಗಳಲಿ ತಪ್ಪದೆ ।
ಮರಣವನು ವಿಧಿಸಲ್ಕೆ ಸಾಧನವಾದರಿನ್ನೇನು ? ॥
ನರರು ಪ್ರಾಣವನುಳಿಸಿಕೊಳ್ಳಲು । ಶರಣರಾಗುವರಾರೊ? ಹರಹರ ।
ಕರುಣೆ ಬಾರದೆ ಕಾಲಪುರುಷನೆ ನಿನಗೆ ವನಿತೆಯಲಿ? ॥ ೪೪ ॥
ಪರಮ ಕೋಮಲ ವಸ್ತುಗಳಸಂ । ಹರಣ ಮಾಡುವದಕ್ಕೆ ಕಾಲನು ।
ಕರುಣೆಯಿಂ ಮೃದು ಸಾಧನವ ಕೈಕೊಂಡು ಸಾಧ್ವಿಯನು ॥
ಸರಸ ಸರಸಿಜಗಳನು ಮಂಜಿನ । ಪದೆಪಿನಿಂದಾಯಾಸವಿಲ್ಲದೆ ।
ಹರಿಸಿ ಬಿಡುತಿರುವಂತೆ, ಮರಣಾಧೀನ ಮಾಡಿಹನು ॥ ೪೫ ॥
ಅರಳುಗಳ ಸರವೆನ್ನ ರಮಣಿಯ । ಮರಣಕಾರಣ ವಾದುದಾದರೆ ।
ಧರಿಸಿ ನಾನೀಗದನೆ ಸಾಯದೆ ಹೇಗೆ ಬದುಕಿರುವೆ? ॥
ಹರಿಯಕಾಮನೆಯಂತೆ ಪೀಯುಷ । ಗರಲವಾಗುವದಲ್ಲದೇ ವಿಷ ।
ಸುರಸ ಪೀಯುಷವಾಗಿ ಪರಿಣಮಿಸುವದು ನಿಶ್ಚಯದೆ ॥ ೪೬ ॥
ಮುನ್ನ ಜನ್ಮಾಂತರದೆ ಮಾಡಿದ । ನನ್ನ ದುಷ್ಕರ್ಮಾನು ಸಾರವೆ ।
ವಿನ್ನುವಿನ ಸುತನೀಗ ಪೊಸದಾದ ಶನಿಯನು ಮಾಡಿ ।
ಸನ್ನುತಾಂಗಿಯ ನೊಯ್ದು ಪಾದಪ । ವನ್ನು ವರ್ಜಿಸಿ ಲತೆಯ ನಾಶವ ।
ನಿನ್ನು ಮಾಡಿದನ ಸಮಃಕೌಶಲ್ಯವನೆ ತೋರಿಸಿದನೂ ॥ ೪೭ ॥
ಮಾನಿನಿಯೆ ನಾಂ ವಿಂತೆ ಮಾಡಿದ । ಹೀನವಾದ ಪರಾಧಗಳನುರೆ ।
ಮಾನಿಸದೆ ನೀಂ ಕರುಣೆಯಿಂದೆನ್ನನ್ನು ಕ್ಷಮಿಸಿರುವೆ ॥
ಏನು ಕಾರಣ ತಪ್ಪುಗಾಣದೆ । ದೀನನಾದೆನ್ನಲ್ಲಿ ಮುನಿದಿಹೆ ।
ಪ್ರಾಣದರಸಿಯೆ ಬೇಡಿಕೊಂಬೆನು ಮೌನವನು ತ್ಯಜಿಸು ॥ ೪೮ ॥

ಸತಿಯು ಸಂತತ ನಿನ್ನ ಸಂಗಡ। ಹಿತದೆ ಮೇಲ್ಮಾತುಗಳನಾಡುತೆ।
ಕಿತವ ತನದಾಚರಣೆ ಮಾಡಿದೆನೆಂದು ನೆರೆತಿಳಿದು ॥
ಪತಿತರನು ಸಂತ್ಯಜಿಪ ಪರಿಯಲಿ। ಖತಿಗೆಗುರಿ ಮಾಡೆನ್ನ ಕೇಳದೆ।
ಬತ! ಸುಹಾಸಿನಿ ತಿರುಗಿ ಬಾರದ ಲೋಕಕ್ಕೈದಿದಿಯಾ? ॥ ೪೯ ॥
ಸನ್ನುತಾಂಗಿಯು ಜೊತೆಯಲೆನ್ನಯ। ಮುನ್ನ ಚರಿಸಿದ ಪ್ರಾಣವೇತ।
ಕ್ಕಿನ್ನು ತಿರುಗೀಗಿಲ್ಲೆ ಬಂದಿತು ಭೋಗಲಿಪ್ಸೆಯಲಿ? ॥
ಹೆಣ್ಣಿನಾಶೆಗೆ ಸಿಲುಕಿ ಜಂಬುಕ। ಬನ್ನಬಡುವಂತೆನ್ನ ಜೀವವು।
ತನ್ನ ಕರ್ಮದ ಫಲವನುಣ್ಣಲಿ ಬಿಡಿಸುವರಾರು? ॥ ೫೦ ॥
ಸುರತ ದಾಯಸದಿಂದ ಪುಟ್ಟಿದ। ಕಿರಿಬೆಮರ್ವನಿ ನಿನ್ನ ನಿಟಿಲದ।
ಸರಸ ತಾಣದಲ್ಲಿನ್ನು ತೋರುತ್ತಿರಲು ಸಖಿ ನೀನು ॥
ಮರೆತು ನನ್ನನ್ನು ಸ್ವರ್ಗಲೋಕಕೆ। ಚರಿಸಿ ಪೋಗುವದು ಚಿತವೇ?।
ಮರಣ ಶೀಲರ್ಗೆಂತು ಸ್ಥಿರತೆಯು ಹಂತ ದೊರೆಯುವದು? ॥ ೫೧ ॥
ಕನಸಿನಲಿ ಸಹ ನಾನು ನಿನ್ನಯ। ವನಿತೆ ವಿಪ್ರಿಯವನ್ನು ಮಾಡದೆ।
ಮನಸಿನಿಂದೆನ್ನನ್ನು ತ್ಯಜಿಸುವದೇಕೆ ಭಾಮಿನಿಯೇ? ॥
ಜನರು ಮಹಿಪತಿಯೆಂದು ನನ್ನನು। ವಿನಯದಿಂ ಕರೆಯುವರು ಸುಳ್ಳದು।
ಮನಸಿನಿಂ ವನಜಾಕ್ಷಿ ನಿನ್ನಲಿ ಪ್ರೇಮವಿರುತಿಹುದು ॥ ೫೨ ॥
ಪರಮ ಪರಿಮಳದಿಂದ ಕೂಡಿ-। ರ್ದರಲುಗಳ ಕೆಚ್ಚಿರ್ದವೇಣಿಯು।
ಕುರುಲುಗಳು ಮಾರುತನ ವಹನಕೆ ಸ್ವಲ್ಪ ಸರಿದಾಡಿ ॥
ಅರರೆಯೆನ್ನಯ ಮಾನಸಕೆ ಭ್ರಮ-। ವೆರಿಸಿ ಪುನರಪಿ ನೀನು ಮರಣದ।
ಪುರದೆ ತಿರುಗಿಲ್ಲೀಗ ಬರುತಿಹೆಯೆಂದು ತೋರುವದು ॥ ೫೩ ॥
ಹಿಮಗಿರಿಯ ಗುಹೆಗಳಲಿ ತೀವಿದ। ತಮವ ತಾಮಸ ರಾತ್ರಿಕಾಲಕೆ।
ಶಮಿಪವಲ್ಲಿಗಳಂತೆ ನಿಚ್ಚಳವಾಗಿ ಬೆಳ ಬೆಳಗಿ ॥
ರಮಣಿಯೆನ್ನ ವಿಷಾದವನು ಸಂ-। ಭ್ರಮದೆ ಪ್ರಜ್ಞೆಯ ತಾಳಿ ಬೇಗನೆ।
ಕಮಲಮುಖಿ ಕಳೆಯೆಂದು ನಿನ್ನನು ನಾನು ಪ್ರಾರ್ಥಿಪೆನು ॥ ೫೪ ॥
ನಿಶೆಯ ಕಾಲಕೆ ಭ್ರಮರ ತತಿಗಳು। ಬಿಸಿನಿಯುದರದೊಳಿರ್ದು ಸುಮ್ಮನೆ।
ವ್ಯಸನದಿಂದೊಡಗೂಡಿ ಶ್ರಮವನು ಪಡೆವ ತೆರದಿಂದ ॥
ಅಸಮ ಮುಖಪಂಕಜವು ನಿನ್ನದು। ಶ್ವಸನ ವಿರಹಿತವಾಗೆ ನನ್ನನ್ನು।
ಮಸುಳಿಸುವದೆನ್ನಂತ ರಂಗವು ತಾಪ ಬಡುತಿಹುದು ॥ ೫೫ ॥
ನಿಶೆಯು ಪುನರಾಗಮನದಿಂದಲೆ। ಶಶಿಯು ವಿರಹಕೆ ವಿಲಯವಪ್ಪುದು।
ಪ್ರಶ್ರಮಿಸುವದಾ ಚಕ್ರವಾಕಿಯ ವಿರಹ ದುಃಖವದು ॥

ಅಸಮ ತೇಜೋರಾಶಿಯು ದಿಸಲು। ಬಿಸಜ ಮುಖಿತವ ವಿರಹತೀರದು।
ವಿಷವ ಪ್ರಾಶನ ಮಾಡಿ ಸಹಿಸುವೆ ಪ್ರಾಣವನು ತ್ಯಜಿಸಿ ॥ ೫೬ ॥
ತಳಿರುಗಳ ಮೃದುಹಾಸಿಕೆಯು ಬಹು। ನಳಿನ ಕೋಮಲ ದೇಹಯಷ್ಟಿಗೆ।
ಮೊಳೆಯ ತೆರದಲಿ ಕಠಿಣ ದುಃಖವನುಂಟು ಮಾಡುತಿರೆ॥
ಇಳೆಯ ಮೇಲೊಟ್ಟಿರ್ದ ಚಿತೆಯಲಿ। ಜ್ವಲಗಿಯನಲನು ದಹಿಸುವದು ನೀಂ।
ನಳಿನ ನಯನೆಯೆ ಹೇಗೆ ತಾಳುವೆ ಸ್ಥೈರ್ಯದಲ್ಲಿರ್ದು ॥ ೫೭ ॥
ರತಿಯ ಮಂದಿರದಲ್ಲಿಯಾದರು। ಸತಿಯೆರ ಶನಾಸಖಿಯು ನಿನ್ನನು।
ಪತಿಯು ಸಂಗಮ ಕಾಲದಲಿ ಸಹ ಬಿಡದೆಯನು ಸರಿಸಿ॥
ಶ್ರುತಿಗೆ ಮಂಜುಲವಾದ ಶ್ರುತಿಯನು। ವಿತರಿಪಳು ನೀಂ ಮಡಿದ ಕೂಡಲೆ।
ಕ್ಷಿತಿಯ ಮೇಲ್ ಮೃತಿಹೊಂದಿ ನಿಃಸ್ವನೆಯಾಗಿ ಬಿದ್ದಿಹಳು ॥ ೫೮ ॥
ಚದುರೆ ಕೋಗಿಲಗಳಲಿಯತಿಶಯ। ಮಧುರ ಭಾಷಣಗಳನು, ಸುಂದರ।
ಮದಮತಂಗಜಗಳಲಿ ಮಂದಾಲಸದ ಗಮನವನು॥
ಮುದದಿ ಚಂಚಲತನದ ನೋಟದ। ಹೆದರಿಯೋಡುವ ಮೃಗಗಳಲಿ ಮೇಣ್।
ಸುದತಿ ವಿಭ್ರಮವನ್ನು ಮಾರುತ ಚಲಿತ ಲತೆಗಳಲಿ, ॥ ೫೯ ॥
ಇಂತುಪರಿ ಗುಣಗಳನು ನನ್ನಯ। ಚಿಂತೆಯನು ದುರ್ಬೈಸಲಿಚ್ಛಿಸಿ।
ಕಾಂತೆ ಪ್ರಾಣಿಗಳಲ್ಲಿ ಸ್ಥಿರವಾಗಿರಿಸಿ ಪ್ರೇಮದಲಿ॥
ಅಂತವನ್ನೈದಿದರು ನನ್ನಯ। ಸ್ವಾಂತರಂಗಕೆ ಸುಖವು ತೋರದು।
ಹಂತ ದುಃಖವು ಪೆರ್ಚಿ ನನ್ನನು ಭ್ರಾಂತಿಗೊಳಿಸುವದು ॥ ೬೦ ॥
ಚದುರೆ ಮಾಮರವನ್ನು ಹಾಗೆಯೆ। ಮಧುರ ಫಲಿನೀಲತೆಯನಾದರು।
ಮದುವೆ ಮಾಡುವೆನೆಂದು ಮೋದದೆ ಹಚ್ಚಿ ಯವ್ವಗಳನು॥
ವಿಧಿಯ ಪೂರ್ವಕ ಲಗ್ನಮಾಡದೆ। ಕದಲಿಸ್ವರ್ಭುವನಕ್ಕೆ ಪೋಪುದು।
ಸದಯೆಳೇ ನಿನಗುಚಿತ ತೋರುವದೇನು ಪೇಳೆನಗೆ ॥ ೬೧ ॥
ಪಾದತಾಡನದಿಂದ ಶೋಕದ। ಪಾದಪದ ಮನದಿಚ್ಛೆಯನು ಸಂ-।
ಪಾದಿಸಿದೆ ಮುಂದದಕೆ ಪುಷ್ಪೋದ್ಗಮವು ಬರಲದನು॥
ಬೋಧಿಸಲೆ ನಿನಗಾವ ಪರಿಯಲಿ। ಮೋದದಿಂದರ್ಪಿಸಲಿ ಸುಂದರಿ ?।
ಹೋದೆ ಸ್ವರ್ಗಕ್ಕೆಲ್ಲ ಭೋಗಗಳನ್ನು ನೆರೆ ತೊರೆದು! ॥ ೬೨ ॥
ಅಂದವೀಯುವ ಮಂದ ಸುಸ್ವರ। ದಿಂದ ಕೂಡಿದನೂಪುರದೆ ಬಲು।
ಚಂದಗಾಣುವ ಪಾದಕಮಲಾಹತಿಯ ಸೌಖ್ಯವನು॥
ಇಂದ ಶೋಕದ್ರುಮವು ನೆನೆಸುತೆ। ನೊಂದು ಪುಷ್ಪಗಳೆಂಬ ಕಂಬನಿ।
ಸುಂದರಾಂಗಿಯೆ ಸುರಿಸುತಿರುವದು ಶೋಕದಲಿ ಮುಳುಗಿ ॥ ೬೩ ॥

ನಿನ್ನ ಮುಖನಿಶ್ವಾಸದಂತಹ । ಗನ್ನ ಸುರಭಿಯುತಾಳ್ದ ಬಕುಲದ ।
ಸನ್ನುತಾಂಗಿಯೆ ಮಾಲೆಯನು ಗ್ರಥಿಸಲ್ಕೆ ಕೈಕೊಂಡು ॥
ನನ್ನ ಭಾಗವ ನಾನು ಮುಗಿಸಿರೆ । ನಿನ್ನ ಭಾಗವ ಮುಗಿಸದೇ ನೀ- ।
ನಿನ್ನು ಸ್ವಧಾಮಕ್ಕೆ ಪೋಗುವದೊಳಿತೆ? ಪೇಳೆನಗೆ ॥ ೬೪ ॥
ಬಿದಿಗೆ ಚಂದ್ರಮನಂತೆ ಹೊಳೆಯುವ । ಸದನದೊಳು ಸುತನಿರ್ದು ನಿನ್ನಾ- ।
ಪದಸುಖಂಗಳ ಭಾಗಿಗಳು ಕೆಳದಿಯರು ನಿನಗಿರಲು ॥
ಹದಿಬದೆಯೆ ಪ್ರೇಮೈಕಭಾವದ । ಸುಧವನಾ ನಿರುತಿರಲು ಬಳಿಯಲಿ ।
ಕದಲಿ ಪೋಗುವದೊಳಿತೆ ಸ್ವರ್ಗಕ್ಕದಯಶನದಿಂದ? ॥ ೬೫ ॥
ಹಾಡುಗಳು ತೀರಿದವು ನನ್ನಯ । ಗಾಢ-ಪ್ರೇಮದ ಝುರೆಯೆ ಬತ್ತಿತು ।
ವಾಡಿಕೆಯ ಶೃಂಗಾರ ಸಾಧನವೇಕೆ ನನಗಿನ್ನು ॥
ಹೇಡಿಯಾದೆನು ಧೈರ್ಯಗುಂದಿತು । ಕಾಡಿನಂತೀಗಾಯ್ತು ಭವನವು ।
ಜೋಡು ನನ್ನದು ಕೆಟ್ಟಿತಯ್ಯೋ ಮಾಡಲಿನ್ನೇನು? ॥ ೬೬ ॥
ಕೆಲಸದಲಿ ಬಲು ಮಂತ್ರಿಯೆನ್ನಗೆ । ಲಲಿತ ಕಲೆಗಳಲೆನಗೆ ಸಾರಥಿ ।
ಲಲನೆ, ಸುರತ ಕಲಾಪದಲಿ ಪ್ರತಿರತಿಯೆ ನೀನೆನಗೆ ॥
ಹಲವು ವಸ್ತುಗಳಿರ್ದರೇನವು । ಚಲುವೆ, ಚಿತ್ರಲೆಯಿಲ್ಲದಂತಹ ।
ಮಲಿನ ಗಾತ್ರದ ರೂಪರೇಖೆಗಳಂತೆ ನಿಷ್ಫಲವು ॥ ೬೭ ॥
ಮದಿರಲೋಚನೆ ಯೆನ್ನ ಮುಖದಿಂ । ಸುಧೆಗೆ ಸಮವಾದಂಥ ರುಚಿಕರ ।
ಮದಿರೆಯನು ಕುಡಿದೊಮ್ಮೆ ಸಂತಸ ಪಡೆದ ಮೇಲ್ನಾನು ॥
ಚದುರೆ ಕಂಬನಿಯಿಂದ ಕೂಡಿ- । ರ್ದುದಕವನು ನಿರ್ವಪಣಮಾಡಲು ।
ಮುದದಿ ಪರಲೋಕದಲಿ ಪ್ರಾಶನವೆಂತು ಮಾಡುವಿಯೋ? ॥ ೬೮ ॥
ಅಶನ ವ್ಯಸನವನುಂಟು ಮಾಳ್ಪುದು । ವಿಷಯ ವಿಷಮಯವಾಗಿ ತೋರ್ಪುದು ।
ಕುಸುಮ ವಶನಿಯತೆರದಿ ಭೀಕರವಾಗಿ ಕಾಣುವದು ॥
ಕುಸುಮಶರನಿರೆತಾದ ಬಾಣಗ- । ಳೆಸೆದು ನನ್ನನು ಕೊಂದು ಬಿಡುವನು ।
ಕುಸುಮ ಕೋಮಲಗಾತ್ರೆ ನಿನ್ನಾಧೀನ ಜೀವವಿದು ॥ ೬೯ ॥
ಈ ಪರಿಯ ಕರುಣಾರ್ತರವದಿಂ । ಪಾಪ! ಭೂಪನು ದುಃಖಮಾಡ- ।
ಲ್ಯಾಪದಾಬ್ಧಿಯ ನೀರಿನೊಳು ಪ್ರಜರಾಗ ಮುಳುಗಿದರು ॥
ತಾಪದಿಂ ತರುಗುಲ್ಮಗಳು ಸಹ । ಭೂಭತಿಗೆ ನೆರೆವಾಗಿ ರಸವೆಂ- ।
ಬಾಪವನು ಸುರಿಸಿದವು ಮೇದಿನಿ ಶೋಕಮಯ ಮಾಯ್ತು ॥ ೭೦ ॥
ಅಜನ ಪತ್ನಿಯ ಪ್ರೇತವನು ಸಂ- । ತ್ಯಜಿಸಿ ಮಾಯಾ ಮೋಹವನ್ನುರೆ ।
ಸ್ವಜನರಾಗಲೆ ರಾಜನಂಕದೆ ಕಷ್ಟದಿಂದೊಯ್ದು ॥

ಸೃಜಿಸಿ ಚಂದನ ಕಾಷ್ಠ ಚಿತೆಯನು । ದ್ವಿಜರದ್ವಾರದೆ ಮಂತ್ರವಿಧಿಯಿಂ ।
ಭಜಿಸಿದರು ಕಡೆಗೆಲಸವನು ಗಡ ಜಿಂಕಿಯನು ಹಚ್ಚಿ ॥ ೨೧ ॥
ಭಾವೆಯನ್ನನುಸರಿಸಿ ರಾಜನು । ಕೋವಿದಾಗ್ರಣಿಯಾದರೂ ತಾಂ- ।
ಪಾವಕನ ವಶವಾಗಿ ಮೃತಿಯನು ಹೊಂದಿ ಪೋಗದಲೆ ॥
ಜೀವಿಗಳು ನಿಂದಿಸುವರೆಂಬೀ । ಭಾವದಲಿ ಬದುಕುಳಿದ ನಲ್ಲದೆ ।
ಸಾವಿನಂಜಿಕೆಯಿಂದ ಬದುಕಿದನೆಂದು ಪೇಳ್ಬಹುದೆ? ॥ ೨೨ ॥
ಊರ ಹೊರಗಿನ ತೋಟದಲ್ಲಿಯೇ । ಧೀರರಘುಕುಲ ತಿಲಕನಾ ಗುಣ ।
ಸಾರ ಮಾತ್ರದೆಯುಳಿದರಾಜ್ಞಿಯ ಶ್ರಾದ್ಧವನು ಮಾಡಿ ॥
ಪಾರುವರ ದಾರಿದ್ರ್ಯವನು ಪರಿ- । ಹಾರ ಮಾಡಿದನಂದು ರಾಜನು ।
ಸಾರಸಾಕ್ಷಿಯ ಪಾರಲೋಕದ ಕ್ಷೇಮವನು ಬಯಸಿ ॥ ೨೩ ॥
ನಿಶೆಯು ಕಳೆದಿಹ ಚಂದ್ರನಂತೆಯೆ । ಸುಷುಮೆಯನು ತಾಳಿರ್ದ ರಾಜನು ।
ಕುಸುಮ ಕೋಮಲಗಾತ್ರೆಯಾದಾ ಪತ್ನಿಯನ್ನುಳಿದು ॥
ಉಸುರುಗೆಯ್ಯುತ್ತೀರ್ವನೇ ಬಲು । ವ್ಯಸನದಿಂ ಪುರಸ್ತ್ರೀಯರ ಕಣ್ಣೀರ್ ।
ಪಸರವನು ಸುರಿಸುವದು ನೋಡುತ ಪುರದೊಳೈತಂದಾ ॥ ೨೪ ॥
ಹವನ ಮಾಡುವದಕ್ಕೆ ಕುಲಗುರು । ಕವಿ ವಸಿಷ್ಠನು ತಾಳ್ದು ದೀಕ್ಷೆಯು ।
ಭವನದೊಳು ತಾನಿರ್ದರೂ ರಾಘವನ ದುಃಖವನು ॥
ಜವದೆ ದೂರೈಸುವೆನು ತಾನೆಂ- । ದವನು ಶಿಷ್ಯನ ಕರೆದು ಪೇಳಿದ- ।
ನವನಿಪತಿ ಬಳಿಯಲ್ಲಿ ತನ್ನುಪದೇಶ ತಿಳುಹೆಂದು ॥ ೨೫ ॥
ಅವನಿಪತಿ ತವ ತಾಪಕಾರಣ । ಕಿವಿಗೆ ಬಿದ್ದರು ಮುನಿವಸಿಷ್ಠನು ।
ಸವನ ಕಾರ್ಯವನುಳಿದು ತಾನೇ ಬಾರದಕ್ಕಾಗಿ ॥
ಭವಣಿ ಬಡುತಿಹ ನಿನಗೆ ಬೋಧವ । ಶ್ರವಣ ಮಾಡಿಸಲೆನಗೆ ಮುನಿಪನು ।
ಜವದೆ ಕಳುಹಿದನದಕೆ ನಾನೀಗಿಲ್ಲೆ ಬಂದಿಹೆನು ॥ ೨೬ ॥
ಮುನಿಯ ಬೋಧಾಮೃತದ ತುಂತು- । ರ್ವನಿಯ ನನ್ನಲ್ಲುಳಿದದನು ನಾಂ ।
ನಿನಗೆ ಪಾವನ ಚರಿತನೇ ಧ್ವನಿಮಾತ್ರ ಪೇಳುವೆನು ॥
ಜನಪಕೆಚ್ಚೆದೆಯವನೆ ಬಿಡದಲೆ । ವಿನಯದಿಂ ಕೇಳದನೆ ನಿನ್ನಯ ।
ಮನಸಿನಲಿ ದೃಢವಾಗಿ ಧಾರಣ ಮಾಡಲರ್ಹನಿಹೆ ॥ ೨೭ ॥
ಮೂರು ವಿಕ್ರಮವುಳ್ಳ ಪುರುಷನ । ಮೂರು ಲೋಕಗಳಲ್ಲಿ ತೋರುವ ।
ಸಾರಸಾಕ್ಷನೆ ಭೂತ ಭಾವೀ ವರ್ತಮಾನಗಳ ।
ಸಾರಬೋಧವನರಿತ ಮುನಿವರ- । ನಾರು ಪೋಲುವರಿಲ್ಲಿ ಜಗದೊಳ ।
ವೀರದಾತನ ಕೇಳಿ ಮಾತುಗಳನ್ನು ಸುಖಿಯಾಗು ॥ ೨೮ ॥

ಮುನಿಪ ತೃಣಬಿಂದುವಿನ ದುಶ್ಚರ- । ವೆನಿಪ ತಪದಾಚರಣಕಂಜಿದ ।
ಘನಮಹಿಮ ದೇವೇಂದ್ರನಾ ಸಮಯಕ್ಕೆ ಹರಿಣಿಯನು ॥
ಮನೆಗೆ ಕರೆಕಳುಹಿಸಿದನಾಕೆಗೆ । ವನಿತೆ ಮುನಿತಪವನ್ನು ಕೆಡಿಸಲು ।
ವನಕೆ ಪೋಗೆಂದುಸುರಿ ತತ್‌ಕ್ಷಣದಲ್ಲಿ ಬೀಳ್ಕೊಟ್ಟ ॥ ೭೯ ॥
ವನದೆ ತಪವನು ಚರಿಪಕಾಲಕೆ । ವನಿತೆಯಿಂದುಪಸರ್ಗ ತಟ್ಟಲು ।
ಮುನಿಯು ಕಣ್ದೆರದಾಗ ಸುಂದರ ಯುವತಿಯನು ಕಂಡು ॥
ಮನುಜರಲಿ ಜನಿಹೊಂದು ನೀನೆಂ- । ದನಲನಂತುರಿಯುತ್ತಲಾಕೆಗೆ ।
ಮುನಿದು ಘನಗಂಭೀರರವದಿಂ ಶಾಪವನು ಕೊಡಲು; ॥ ೮೦ ॥
ಅರರೆ! ಸ್ವಾಮಿಯೆ ವ್ಯರ್ಥವಾಗಿಯೆ । ಪರರ ವಶದಲ್ಲಿರ್ದ ನನ್ನನು ।
ಕರುಣೆಯಿಂ ಪೊರೆಶಾಪ ಮೋಚನ ಮಾಡಿಯೆಂದೆನಲು ॥
ಕರಗಿ ಮನದಲಿ ಮುನಿಯು ನುಡಿದನು । ಸುರರ ಪೂಸರ ನಿನಗೆತೋರುವ- ।
ವರೆಗೆ ಮಾನವಯೋನಿಯನು ಸ್ವೀಕರಿಸು ಪೋಗೆಂದು ॥ ೮೧ ॥
ಸುಂದರಾಂಗೆಯು ರಾಜಕುಲದಲಿ । ಹೊಂದಿಜನಿಯನು ರಾಜರಾಜನೆ ।
ಮುಂದೆನಿನ್ನರ್ಧಾಂಗಿಯಾದಳು ದೈವಯೋಗದಲಿ ॥
ಇಂದು ಮತಿಯೀ ವರೆಗೆ ನಿನ್ನಲಿ । ಚಂದದಿಂ ಬಹು ಸೌಖ್ಯಭೋಗಿಸಿ ।
ಬಂದಸ್ವರ್ಗದೆ ಪುಷ್ಪಮಾಲೆಯಕಂಡು ಮಡಿದಿಹಳು ॥ ೮೨ ॥
ಗಟ್ಟಿ ಮಾನಸದಿಂದ ರಾಜನೆ । ಪಟ್ಟದರಸಿಯ ಶೋಕವನು ಬಿಡು ।
ಹುಟ್ಟಿದವರಿಗೆ ಮರಣ ತಪ್ಪುವದೇನು ಮಾಡಿದರೂ? ॥
ಪುಟ್ಟ ಪುತ್ರನ ಕಡೆಗೆ ದಿಟ್ಟಿಯ । ನಿಟ್ಟು ವಸುಧಾರಾಜ್ಞಿಯನು ಪೊರೆ ।
ವಿಟ್ಟರಾಧಿಪರಚಲೆಯಿಂ ಸ್ತ್ರೀಮಂತ ರಾಗುವರು ॥ ೮೩ ॥
ಉದಯಕಾಲಕೆ ಸಾವಧಾನದೆ । ಮುದಗುಣಾನ್ವಿತನಾಗದೇ ಬಹು ।
ಸದಯತನದಿಂ ವರ್ತನವ ಮಾಡುತ್ತೆ ಬಂದಿರುವೆ ॥
ಒದಗಿಯಾಪತ್ಕಾಲಬಂದರು । ಹೃದಯದೊಳು ಸಂತಾಪತಾಳದೆ ।
ಚದುರನೇ ಧೈರ್ಯಾವಲಂಬನ ಮಾಡಿಸಹಿಸುವದು ॥ ೮೪ ॥
ಅತ್ತರೂ ಸತ್ತವರು ಬರುವರೆ । ಸತ್ತುಪೋದವರೆಲ್ಲರೂತ- ।
ಮ್ಮುತ್ತಮಾಧಮ ಕರ್ಮಗಳ ಫಲಗಳನು ಗಳಿಸಲ್ಕೆ ।
ಎತ್ತಪೋಗುವರೇನೊ ತಿಳಿಯದು । ಸತ್ತರೂ ನೀನೆಂತು ಸುದತಿಯ ।
ಹತ್ತರವೆ ಸಿಜವಾಗಿ ಪೋಗುವೆ ನೃಪನೆ ಪೇಳೆನಗೆ ॥ ೮೫ ॥
ಅಜನೆ ಶೋಕವ ಮಾಳ್ಪದನು ಸಂ- । ತ್ಯಜಿಸಿ ಮೃತಿಹೊಂದಿರ್ದ ವಧುವನು ।
ದ್ವಿಜ ಮುಖಾಂತರ ದಾನ-ಧರ್ಮಗಳಿಂದ ತೋಷಿಪುದು ॥

ಸ್ವಜನರತಿ ದುಃಖಾಶ್ರುಗಳ ದಿನ- ರಜನಿಯಲಿ ಸುರಿಸುತ್ತೆ ಕುಳಿತರೆ ।
ನಿಜವೆ ಮಾಡಿದವರಾತ್ಮಕಾಯಸ ಜಿಡದೆ ಘಟಿಸುವದು ॥ ೮೬ ॥
ನೀರ ಮೇಲಿನ ಗುರಳಿಯಂತೆ ಶ- । ರೀರಿಗಳ ಜೀವಿತ್ವವಿರುವದು ।
ಬಾರಿ ಬಾರಿಗೆ ಪೇಳಲೇನದು ತಿಳಿದು ಮನದೊಳಗೆ ॥
ಸಾರಸಾಕ್ಷನೆ ತ್ಯಜಿಸು ಮೋಹವ । ಪಾರಮೇಷ್ಟ್ಯಿಯ ಸೃಷ್ಟಿನಿಯಮ- ।
ಕ್ಯಾರು ಮಾಡುವದೇನು ? ಸುಮ್ಮನೆ ವ್ಯಸನ ಬಡಲೇಕೆ ? ॥ ೮೭ ॥
ಸಾರವರಿಯದ ಮೂರ್ಖರೇ ಸಂ- । ಸಾರದಲಿ ಪ್ರಿಯನಾಶವಾದರೆ ।
ಘೋರಶಲ್ಯವು ಹೃದಯದಲಿ ನಟ್ಟಂತೆ ಮರಗುವರು ॥
ಧೀರರಾದವರೆಲ್ಲರೂ ಸುವಿ- । ಚಾರದಿಂ ತನ್ನಾಶ ಮೂಲಕ ।
ಸಾರ ಮುಕ್ತಿಯ ದ್ವಾರ ತೆರೆದಂತಾಗಿ ಸುಖಿಸುವರು ॥ ೮೮ ॥
ತನ್ನ ದೇಹಾತ್ಮಗಳ ನಿರ್ಣಯ- । ವನ್ನು ಶೋಧವ ಮಾಡಿ ನೋಡಲು ।
ಭಿನ್ನವಾಗಿಯೆ ಜ್ಞಾನಿಗಳ ಪ್ರತ್ಯಯಕೆ ಬರುತಿರಲು ॥
ಅನ್ಯರಾದಾ ದಾರಾಬಾಂಧವ- । ರಿನ್ನು ತನ್ನವರೆಂತು ? ರಾಜನೆ ।
ನಿನ್ನ ಮನದೊಳು ತಿಳಿದು ನೀನೇ ನೋಡಿ ಪೇಳೆನಗೆ ॥ ೮೯ ॥
ನೀನು ನಿಶ್ಚಳ ಚಿತ್ತದವನಿರೆ । ಹೀನ ವಿಷಯಂಗಳಿಗೆ ವಶವಾ- ।
ಗೇನು ಪ್ರಾಕೃತರಂತೆ ಮಾಡುವೆ ? ಸಲ್ಲದಿದು ನಿನಗೆ ॥
ಸಾನು ವೃಕ್ಷಗಳನ್ನು ಮಾರುತ । ತಾನು ಧರೆಯಿಂ ಕಿತ್ತಿಯೊಗೆದರೆ ।
ಸಾನು ವೃಕ್ಷಗಳಲ್ಲಿ ಭೇದವದೆಂತು ಗಣಿಸುವರೊ ? ॥ ೯೦ ॥
ಗುರು ವಸಿಷ್ಠನ ಶಿಷ್ಯನಿಗೆ ತಾಂ- । ಪರಮಸಾದರವನ್ನು ತೋರಿಸಿ ।
ಚರಿಪೆ ತಮ್ಮುಪದೇಶದಂತೆಯೆ ತೆರಳಬಹುದೆಂದು ॥
ತಿರುಗಿ ಕಳುಹಿದನಲ್ಲದೇ ನೃಪ- । ವರನು ಗುರುವಿನ ಬೋಧವಾದರು ।
ಗುರು ವಸಿಷ್ಠನ ಪಾದಕರ್ಪಿಸಿ ಪೂರ್ವದಂತುಳಿದಾ ॥ ೯೧ ॥
ರಾಘವನು ಪ್ರಮದಾವಿಯೋಗದ । ಸಾಗರದೆ ಮಜ್ಜನವಗೈದನು ।
ಹಾಗೆ ಹೀಗೆಯೆ ಕಷ್ಟದಿಂದವನೆಂಟು ವರ್ಷಗಳ ॥
ಯೋಗಿಗಳ ತೆರದಿಂದ ವಿಷಯದ । ಭೋಗ ಜಾತಿಗಳನ್ನು ವರ್ಜಿಸಿ ।
ಭೋಗತೀರುವವರೆಗೆ ಕಳೆದನು ಹಾಯ! ಹಾಯೆಂದು ! ॥ ೯೨ ॥
ಪಾದಪದ ಕುಣಿವೇರು ಮೃದುತಮ । ಮೇದಿನಿಯ ತಳಭಾಗವನ್ನರೆ ।
ಭೇದಿಸುವ ತೆರದಿಂದ ಭಾರ್ಯಾವಿರಹ ಶಲ್ಯವದು ॥
ಮೇದಿನಿಯ ಪತಿರಾಘವನ ಮೃದು- । ವಾದ ಹೃದಯದೊಳಿಳಿದು ಸಂತತ ।
ಬಾಧೆಗೊಳಿಸಲುಕ್ಷೀಣನಾದನು ರೋಗ ಪೆರ್ಚಿದುದು ॥ ೯೩ ॥

ಪ್ರೌಢನಾದಾ ದಶರಥನ ಜನ । ರೂಢಿಯಂತೆಯೆ ರಾಜ್ಯಪದದಲಿ ।
ಕೂಡಿಸಿದ ಮೇಲ್ತಾನು ರಾಘವನನ್ನವನು ತೊರೆದು ॥
ಮಾಡಿ ಭಗವದ್ಭಜನೆಯನು ಗಡ । ನೋಡ ಮುಸುಕಿದ ಚಂದ್ರನಂತೆಯೆ ।
ದೂಡಿ ಸಂಸೃತಿ ದುಃಖವನು ಸ್ವರ್ಧಾಮಕಡರಿದನು ॥ ೮೪ ॥

ಸರಿಯು ಗಂಗಾಸಂಗಮದ ಘನ । ಪರಮಪಾವನ ತೀರದಲಿ ರಘು- ।
ವರನು ದೇಹತ್ಯಾಗ ಮಾಡಿದ ಮೇಲೆ ಪುನರವನು ॥
ಸುರರಿಗೊಪ್ಪುವ ದಿವ್ಯದೇಹವ । ಧರಿಸಿ ಹರಿಣಿಯು ಕೂಡ ನಂದನ ।
ಸರಸವನದಲಿ ಚರಿಸಿ ಸುರತಾನಂದದಲ್ಲಿಹನು ॥ ೮೫ ॥

ರಾಮಗುಣಗಣ ಧಾಮಭಕ್ತರ । ಕಾಮಕಲ್ಪದ್ರುಮನ ಪೂರ್ವಜ ।
ಭೂಮಿಪತಿ ರಾಘವನ ಕರುಣಾಭರಿತ ಕಾವ್ಯವಿದು ॥
ರಾಮಚಂದ್ರನ ಸೂನು ನರಹರಿ । ಪ್ರೇಮದಿಂ ರಚಿಸಿಹನು ಜನರನು ।
ನೇಮದಿಂ ರಂಜಿಪುದು ಸಿದ್ಧೇಶ್ವರನ ಕರುಣೆಯಲಿ ॥ ೮೬ ॥

೯ನೆಯ ಸರ್ಗ.

ತಂದೆ ಕಾಲಾಧೀನನಾಗಲು । ಮುಂದೆಯುತ್ತರ ಕೋಸಲದ ಬಲು ।
ಚಂದವಾದ ಪ್ರದೇಶವನು ಮಾರಥನು ದಶರಥನು ॥
ತಂದು ತನ್ನಾಧೀನದಲಿ ನಯ- । ದಿಂದ ಪ್ರಕೃತಿಗಳನ್ನು ಪಾಲಿಸಿ ।
ಹೊಂದಿದನು ದೇವೇಂದ್ರನಂದದೆ ವಿಮಲ ಕೀರ್ತಿಯನು ॥ ೧ ॥

ಗುರುವಿನಿಂ ವಿಧಿಯಂತೆ ದೊರಕಿದ । ಪರಮ ವಿಸ್ತೃತವಾದ ಸುಂದರ ।
ಧರಣಿಪ್ರಾಂತವನ್ನೆಲ್ಲ ಗೌರೀವರನ ಸುತನಂತೆ ॥
ಉರು ಪರಾಕ್ರಮದಿಂದ ಸಲಹು- । ತ್ತಿರಲು ಮುಂಚಿನಕಿಂತ ಪ್ರಜೆಗಳು ।
ನಿರತಿಶಯ ಸುಖದಿಂದ ಕಾಲಕ್ಷೇಪ ಮಾಡಿದರು ॥ ೨ ॥

ಹೊಲಗಳಲಿ ಹೊಡೆಹೊಡೆದು ನೇಗಿಲ- । ಗಳನು ಬಳಲಿದ ಕರ್ಷಕರ ಶ್ರಮ ।
ಜಲವ ಸೇಚನ ಮಾಡಿ ಸಮಯಕೆ ಬಲನಿಷೂದನನು ॥
ಕಳೆದ ತೆರದಲಿ ಮನುವಿನನ್ವಯ- । ದೊಳಗೆ ಜನಿಸಿದ ದಶರಥನು ಧನ ।
ಗಳಿಸಿ ಯಾಜ್ಞಿಕ ಜನಕೆ ಕೊಡುತಿಹನೆಂದು ಪೇಳುವರು ॥ ೩ ॥

ಅಮರಪತಿಯಂತಮಿತ ತೇಜದ । ಶಮಗುಣಾನ್ವಿತನಾದ ದಶರಥ- ।
ನಮಮ ಪ್ರಕೃತಿಗಳನ್ನು ಪಾಲಿಸುತಿರಲು ವ್ಯಾಧಿಗಳು ॥
ಕ್ರಮಿಸಿ ದೇಶಾಂತರಕೆ ಪೋದವು । ಕ್ಷಮೆಯು ಫಲವತಿಯಾದಳತಿಶಯ ।
ಮಮತೆ ಸಮತೆಗಳೆಲ್ಲಕಡೆಯಲಿ ಕಣ್ಗೆ ತೋರಿದವು ॥ ೪ ॥

ಹತ್ತು ದಿಕ್ಕುಗಳನ್ನು ಜಯಿಸಿ- । ದುತ್ತಮಾಂಗ ನೃಪಾಲ ರಘುವಿನ ।
ಪುತ್ರನಜನೃಪನಂತೆ ಸಲೆ ತೇಜಸ್ವಿಯಾಗಿರ್ದು ॥
ಶತೃಗಳನುರೆ ಗೆದ್ದು ದಶರಥ । ವೃತ್ರವೈರಿಯು ತೆರದಿ ತನ್ನಯ ।
ಹೆತ್ತ ತಂದೆಯ ರಾಜ್ಯವನ್ನಾಳಿದನು ವಿಕ್ರಮದೆ ॥ ೫ ॥
ದುರುಳರನು ನಿಗ್ರಹಿಸಿ ರಾಜನು । ವರುಣನನು ಮೇಣ್ಸಾಮತೆಯಿಂದಲೆ ।
ಪರಮ ಧಾರ್ಮಿಕನಾದ ಯಮನನು ಮತ್ತೆ ವಸುಗರೆದು ॥
ನರರ ವಾಹನನನ್ನು ತೇಜದೆ । ಯರುಣಸಾರಥಿಯಾದ ನಿರುಪಮ ।
ಸರಸ ರವಿಯನು ಪೋಲ್ದು ಧರಣೀತಲದೆ ಮಿರುಗಿದನು ॥ ೬ ॥
ನೂತನಾಂಗದ ಸ್ತ್ರೀಯ ರತಿಸುಖ । ಕೌತುಕಕೆ ಮೇಣವಳ ಸೊಬಗಿನ ।
ಮಾತುಗಳಿಗಾಕ್ಷೋದಸಾಧಿಕ ವ್ಯಸನಗಳಿಗಥವಾ ॥
ದ್ಯೂತದತಿ ವ್ಯಾಮೋಹನಕೆ ಮನ । ಸೋತು ಪೋಗದೆ ಪ್ರಜೆಗಳುದಯಕೆ ।
ಪ್ರೀತಿಯಿಂ ದಶರಥನು ಸಂತತ ಯತ್ನ ಮಾಡಿದನು ॥ ೭ ॥
ಸುರರಪತಿಯಲ್ಲಾದರೂ ತಾ । ನರಿಯ ದೀನೋಕ್ತಿಗಳನಾಡಲು ।
ಸುರಸ ಪರಿಹಾಸಗಳ ಕಥೆಯಲಿ ಸುಳ್ಳು ಮಾತುಗಳ ॥
ಅರುಹಲಾರನು ಪರುಷ ವಚನವ- । ನರಿ ನೃಪಾಲರಿಗಾದರೂ ಗಡ ।
ಧರೆಯಪಾಲನು ನುಡಿಯಲಾರನು ಕ್ರೋಧವಶವಾಗಿ ॥ ೮ ॥
ಧೊರೆಗಳುದಯಾಸ್ತಗಳು ತರುಣಿಯ । ಸರಸಕುಲದಲಿ ಜನಿಸಿದಂತಹ ।
ಪುರುಷಸಿಂಹನ ಕರಸರೋರುಹದಲ್ಲಿ ಯಿರುತಿಹವು ॥
ಅರಿಯ ಭಾವವ ತೋರಿದವರಿಗೆ । ಮರಣವನ್ನೀಯುವನು ರಾಜನು ।
ಶಿರದೆಯಪ್ಪಣೆ ವಹಿಸಿದವರಿಗೆ ಕರುಣೆದೋರುವನು ॥ ೯ ॥
ಕುಳಿತು ಪೊನ್ದೇರಿನಲಿಯೋರ್ವನೆ । ಪೊಳೆದು ದಿನಮಣಿಯಂತೆ ಪೃಥ್ವೀ- ।
ತಲವ ವಿಕ್ರಮದಿಂದ ಜಯಿಸಿರ್ದಂಥ ದಶರಥನ ॥
ದಳವದಾತನ ಪಿಂತೆ ವೇಗದೆ । ಯೆಲರದಂತನುಸರಿಸಿ ದೃಢವಾ- ।
ಗಿಳೆಯಪತಿ ಯಶವನ್ನು ಘೋಷಿಸುವಂತೆ ತೋರಿದುದು ॥ ೧೦ ॥
ರಾಜರಾಜನ ತೆರದೆ ದಶರಥ- । ರಾಜನಿಳೆಯೊಳು ಬೆಳೆದು ಧನದಲಿ ।
ರಾಜಿಸುವ ರಥದಲ್ಲಿ ಶರಕರನಾಗಿ ಕುಳಿತೊಡನೆ ॥
ರಾಜಮಂಡಳವನ್ನು ಸಾಜದೆ । ಯಾಜಿಯಲಿ ಗೆಲ್ವಂಥ ಕಥೆಯನು ।
ಸೋಜಿಗದೆ ಜಲನಿಧಿಯು ಘೋಷಿಪ ತೆರದೆ ತೋರಿದುದು ॥ ೧೧ ॥
ಸುರರ ಪತಿಯತಿ ನಿಶಿತ ಕುಲಿಶದ । ಸರಸವಾದಾಯುಧದೆ ಧರಣೀ- ।
ಧರರ ಪಕ್ಷಗಳನ್ನು ಛೇದಿಸಿದಂತೆ ದಶರಥನು ॥

ಧರಣಿಯಾಣ್ಮರ ಪಕ್ಷಬಲವನು । ತ್ವರದೆ ಶರಗಳ ವೃಷ್ಟಿಯಿಂ ಸಂ- ।
ಹರಣ ಮಾಡಿದನೆಂತು ಬಣ್ಣಿಪೆನವನ ವಿಕ್ರಮವ ॥ ೧೨ ॥

ಸುರರು ಸುರಪತಿ ಚರಣಗಳನುರೆ । ಪರಮ ಸಾದರದಿಂದ ವಂದಿಪ ।
ತೆರದೆ ರಾಜರು ಕೋಸಲೇಂದ್ರನ ಚರಣಗಳಿಗೆರಗಿ ॥
ಬೆರಳುಗಳ ನಖರುಚಿಗೆ ತಮ್ಮಯ । ಶಿರದೆ ಮೆರೆಯುವ ಮುಕುಟಗಳ ಪೇರ್ ।
ವರಳುಗಳ ಥಳಥಳಿಪ ಕಿರಣಗಳನ್ನು ಬೆರೆಸಿಹರು ॥ ೧೩ ॥

ಕಾಳಗದ ಭರದಲ್ಲಿ ಕಾದುತ । ಕಾಲವಶರಾಗಿರ್ದ ಭೂಮಿಯ ।
ಪಾಲರಂತಃಪುರದೆ ಮುಂಡಿತ ರಾಜಮಹಿಲೆಯರ ॥
ಚಾಲನದ ಮೇಲಿಂದ ಬಂದಿಹ । ಬಾಲರಾಜರ ಬಿನತಿ ಮನ್ನಿಸಿ ।
ಸ್ವಾಲಯಕೆ ಬಿಟ್ಟವರ್ಗೆ ರಾಜ್ಯವ ನೃಪನು ಸಾಗಿಹನು ॥ ೧೪ ॥

ಇಂದುವಹ್ನಿಗಳಂತೆ ಕಳೆಯನು । ಸುಂದರಾಂಗನು ತಳೆದು ಸಕಲ ವ- ।
ಸುಂಧರೆಯ ಪನ್ನೆರಡು ಮಂಡಲದರಸರನು ಗೆಲ್ದು ॥
ಚಂದವಾದಸಿತಾತ ಪತ್ರದ । ಹೊಂದಿ ಮನ್ನಣೆಯನ್ನು ಭೂಪತಿ- ।
ಯೆಂದಿನಂತೆಯೆ ಬೇಸರಿಲ್ಲದೆ ಸಜ್ಜವಾಗಿಹನು ॥ ೧೫ ॥

ಆಜಿಯಲಿ ಗೆದ್ದೆಲ್ಲ ಭೂಪರ । ರಾಜಿಯನು ಮೇಣವರ ಧನವನು ।
ವಾಜಿಮೇಧಗಳನ್ನು ಕೈಕೊಂಡಂಥ ಕೋಸಲದ ॥
ರಾಜರಾಜನು ದ್ವಿಜರಗಡಣದೆ । ತೇಜದಿಂದುಡುರಾಜನಂತೆಯೆ ।
ರಾಜಿಸುತೆ ಪೊಳೆದಂಡೆಯಲಿ ನಡಿಸಿಹನು ಯೂಪಗಳ ॥ ೧೬ ॥

ಎರಳೆಯಜಿನವ ಮತ್ತೆ ಶೃಂಗವ । ಶರದೆ ನಿರ್ಮಿಸಿದಂಥ ಮೇಖಲೆ ।
ಸರಸವಾದೌದುಂಬರ-ದ್ರುಮ-ಸರಲ-ದಂಡವನು ॥
ಧರಿಸಿ ದೀಕ್ಷೆಯ ತಾಳ್ದ ದಶರಥ । ಧೊರೆಯ ಪಾವನ ದೇಹದಲಿ ಸ್ಮರ- ।
ಹರನ ತೇಜವು ತೋರೆಯದು ಮಿಗಿಲಾಗಿ ರಾಜಿಸಿತು ॥ ೧೭ ॥

ತುರಗಯಾಗವು ಮುಗಿದನಂತರ । ಸುರರ ಸಭೆಯಲಿ ಕ್ರಮಿಸಲರ್ಹನು ।
ಭರದೆ ಸರಯೂನದಿಯ ಜಲದಲಿಯವ ಭೃತವ ಮಾಡಿ ॥
ಸರನಿಗೋರ್ವನಿಗಾದರೂ ನರ- । ವರನು ಶಿರಬಾಗಿಸದೆ *ವನ-ಮುಗ್- ।
ಹರಿಗೆ ಕರಸಂಪುಟವ ಜೋಡಿಸಿ ಶರಣು ಮಾಡಿದನು ॥ ೧೮ ॥

ಕಮಲಮಿತ್ರನ ಕುಲದೆ ಪುಟ್ಟಿದ । ವಿಮಲ ಶುದ್ಧಾಚರಣ ಶೀಲನ ।
ಶಮಿತ-ರಿಪುಬಲನಾದ ದಶರಥ ರಾಜನನು ಮತ್ತೆ ॥

---

* ಇಂದ್ರನಿಗೆ.

ಕಮಲನಾಭನ ರಮಣಿ ಹದಿಬದೆ । ಕಮಲೆ ಕಮಲೋದ್ಭವನ ತಾತನ ।
ಮಮತೆಯಿಂದೆಡೆಬಿಡದೆ ಸೇವಿಪಳೆಲ್ಲರನ್ನಾಳಿದು ॥ ೧೯ ॥

ಸುರಸುರೇತರರಲ್ಲಿ ಜರುಗಿದ । ಪರಮ ದಾರುಣ ರಣದೆ ದಶರಥ ।
ಧರೆಯಪತಿ ಸುರಪತಿಯ ನೆರವಿಗೆ ಪೋಗಿ ವಿಕ್ರಮದೆ ॥
ಅರಿಗಳನು ಶರದಿಂದ ಖಂಡಿಸಿ । ಸುರರ ಸತಿಯರ ಭೀತಿಯಡಗಿಸಿ ।
ನಿರುತದಲ್ಲವರವನ ಪಾಡುವ ತೆರದಿ ಮಾಡಿದನು ॥ ೨೦ ॥

ತುಮುಲಯುದ್ಧದಲೆದ್ದ ಧೂಳಿಯು । ಕ್ರಮಿಸಿ ಬಾನ್ದಳವನ್ನು ವ್ಯಾಪಿಸಿ ।
ಕಮಲಮಿತ್ರನ ಮುಸುಕಲೆಸಗಿದರಿಂದ ದಶರಥನು ॥
ಅಮಮ ರೋಷದೆ ಹೊಡೆದು ಕೋಲ್ಗಳ । ಕುಮತಿರಿಪುಗಳ ಮುಖದೆ ಧಡಧಡ-
ವಮಿಸಿದಂತಹ ರುಧಿರದಿಂ ಶಮಿಸಿದನು ಧೂಳಿಯನು ॥ ೨೧ ॥

ನಗಗಳಲಿ ಪುಟ್ಟಿರ್ದ ನದಿಗಳು । ಸೊಗಸಿನಿಂ ಸಾಗರವನೈದಿದ ।
ಬಗೆಗೆ ಸರಿಯಪ್ಪಂತೆ ಕೋಸಲ ಮಗಧ ಮೊದಲಾದ ॥
ನಗರಗಳ ನೃಪಸುತೆಯರೆಲ್ಲರು । ಹಗೆಗಳನು ನಿರ್ಜಯಿಸಿದಂತಹ ।
ಸುಗುಣ ಸುಂದರನೃಪನ ದಶರಥನನ್ನು ವರಿಸಿದರು ॥ ೨೨ ॥

ಮೂರುಶಕ್ತಿಗಳೆಂಬ ಸುಂದರ । ಮೂರು †ದಾರಗಳಿಂದ ಕೂಡಿದ ।
ಧೀರ ದಶರಥ ನೃಪನ ರೂಪದೆ ತಾನೆ ಹರಿಹಯನು ॥
ಧಾರುಣಿಯ ಮೇಲಿಳಿದು ರಿಪುಗಳ । ಬೇರುಗಳನಗೆದೊಗೆದು ಪ್ರಜೆಗಳ ।
ತಾರತಮ್ಯವನರಿತು ಪಾಲಿಪ ತೆರದಿ ತೋರಿದನು ॥ ೨೩ ॥

ವರುಣ-ಯಮ-ಧನದೇಂದ್ರರಂತೆಯೆ । ಧುರವ ವಹಿಸಿದ ಸಾರ್ವಭೌಮನ ।
ಪರಮ ವಿಕ್ರಮದಿಂದ ಮೆರೆಯುವ ರವಿಕುಲೋತ್ತಮನ ॥
ಸರಸ ಸುಮನಗಳಿಂದ ‡ಸುರಭಿಯು । ನಿರತಿಶಯ ಭಯ ಭಕ್ತಿಯಿಂದಲೆ ।
ಭರದೆ ಪೂಜಿಪ ತೆರದೆ ಪ್ರಾದುರ್ಭೂತನಾಗಿಹನು ॥ ೨೪ ॥

ಬಡಗಣದ ದಿಗ್ಭಾಗದಲ್ಲೀ- । ಪೊಡವಿಯೊಡೆಯನು ಹೊರಡಲಿಚ್ಛಿಸೆ ।
ಗಡನೆ ಗರುಡಾಗ್ರಜನು ದಿನಮಣಿ-ಹಯಗಳನು ತಿರುಹಿ ॥
ನಡಿಸಿ ರಥವನು ಮಲಯಗಿರಿಯನು । ಬಿಡಿಸೆ ಹಿಮಭರವನ್ನು ಸೂರ್ಯನು ।
ಕೆಡಿಸಿ ದಿನಮುಖವನ್ನು ರಶ್ಮಿಗಳಿಂದ ಬೆಳಗಿದನು ॥ ೨೫ ॥

ಪರಮ ವಿಸ್ತೃತವಾದ ವನದಲಿ । ಸರಸ ತರುಗಳಿಗೆಲ್ಲ ಮುಂಚೆಗೆ ।
ಸುರಭಿಯಿಂ ಕೂಡಿರ್ದ ಪೂಗಳು ಮತ್ತೆ ಪತ್ರಗಳು ॥

† ಹೆಂಡರು. ‡ ವಸಂತಋತು

ಭರದೆ ತಲೆದೋರಿದವನಂತರ । ಕರಿಯ ಬಣ್ಣದ ತುಂಬಿಗಳು ಮೇ- ।
ಣೆರದೆ ಪಿಕಗಳು ಬಂದವಲ್ಲಿಗೆ ಪಿಂತೆ ಮಾಧವನು ॥ ೧೬ ॥

ಪ್ರಮದೆಯರು ಕುಡಿಕುಡಿದು ಮಧು ರತಿ- । ಸಮಯದಲಿ ತೃಷೆ ತೊರೆದು ತಮ್ಮವು ।
ರಮಣರಂಗಕೆ ನಖದ ಘಾಯವ ಮಾಡುವಂದದಲಿ ॥
ಹಿಮದ ಕಾಲವು ಗಮಿಸೆ ಪರ್ಣ- । ದ್ರುಮಗಳಿಗೆ ಮುದದಿಂದ ಸುಮಧುಲ- ।
ಕುಮಿಯು ಸುಮಗಳನಿತ್ತು ಬಹು ಸೊಗಸಾಗಿ ತೋರಿದಳು ॥ ೧೭ ॥

ಸುಮದ ಬಾಣನ ಸಮರದಲಿ ನವ- । ಪ್ರಮದೆಯರ ಕೆಂದುಟಿಗೆ ಘಟಿಸಿದ ।
ರಮಣದಂತಕ್ಷತದ ವ್ಯಥೆಯನು ವರ್ಧಿಸುವ ಹಿಮನ ॥
ದ್ಯುಮಣಿ ಮಧುಮಾಸದಲಿ ನಭದಲಿ । ಕ್ರಮಿಸಿ ರಶ್ಮಿಗಳೆಂಬ ಶಸ್ತ್ರದೆ ।
ಶಮಿಸೆಯಾತನು ಪೂರ್ಣಯಶವನು ಹೊಂದಲಿಲ್ಲ ಕಣಾ ॥ ೧೮ ॥

ತೋರಿಯಭಿನಯವನ್ನು ಸೊಬಗಿಲೆ । ವಾರನಾರೀ ಜನರು ನರರಲಿ ।
ಮಾರಮೋಹವನುಂಟುಮಾಡುವ ತೆರದಿ ತೆಂಕಣದ ॥
ಮಾರುತನ ಸಂಪರ್ಕದಿಂ ಸಹ- । ಕಾರಿ ತರುಗಳ ಪತ್ರಗಳು ವೈ- ।
ಯ್ಯಾರದಿಂದಲ್ಲಾಡಿ ಮುನಿಮನಗಳನು ಹರಿಸುವವು ॥ ೧೯ ॥

ಮನುವಿನನ್ವಯದೊಳಗೆ ಜನಿಸಿದ । ಸುನಯಗುಣಸಂಪನ್ನ ರಾಜನ ।
ಧನವ ಯಾಚಿಸಬಂದ ಭಿಕ್ಷುಕ ಜನರ ತೆರದಲ್ಲಿ ॥
ವನಜ-ರಾಜಿಗಳಿಂದ ಪರಿವೃತ । ಘನ ಸರೋವರದಲ್ಲಿ ಸುಂದರ ।
ವನದೆ ಚರಿಸುವ ಹಂಸ-ಭೃಂಗಗಳಾಗ ಕೂಡಿಹವು ॥ ೨೦ ॥

ಪರಮ ಸುಂದರವಾದಶೋಕದ । ತರುಗಳರಳುಗಳಿಂದ ಗ್ರಥಿಸಿದ ।
ಸರಗಳಬಲಾಜನರ ತುರುಬುಗಳಲ್ಲಿ ನೆಲೆವಡೆದು ॥
ನಿರತಿಶಯ ಸೌಂದರ್ಯ ಪೇರ್ಚಿಸಿ । ನರರ ಚಿತ್ತಗಳನ್ನು ಭರದಿಂ ।
ಹರಿಸಿ ಗೌರೀವರನ ರಿಪುದೀಪನವ ಮಾಡಿದವು ॥ ೨೧ ॥

ಮದನ-ಸಖ ಮಾಧವನು ತನ್ನಯ । ವಧು-ವನ-ಶ್ರೀಯಂಗದಲಿ ಬಲು ।
ಚದುರತನದಿಂ ಪತ್ರಲೇಖನ ಮಾಡಿದಂತೆಸೆವ ॥
ಮುದವನೀಯುವ ಕುರಬಕದ ತರು- । ಮಧುರ ರಸವನು ಪಾನ ಮಾಡಿದ ।
ಮಧುಕರಂಗಳು ಮದಿಸಿ ಮೋದದೆ ಗಾನ ಮಾಡಿದವು ॥ ೨೨ ॥

ವಿಧುವಿನೋಪಾದಿಯಲಿ ಮಿನುಗುವ । ಸುದತಿಯರ ಮುಖದಿಂದ ಲಭಿಸಿದ ।
ಮದಿರೆಯನು ಕುಡಿದೊಡನೆ ಸುಂದರ ಬಕುಲ ವೃಕ್ಷಗಳು ॥
ಮಧುರ ಪೂಗಳನಾಂತು ವನದಲಿ । ಮಧುರ ಗಂಧವ ಹರಡಿ ಪ್ರೇಮದೆ ।
ಮಧುಕರಂಗಳ ವ್ರಾತಗಳನಾಹ್ವಾನ ಮಾಡಿಹವು ॥ ೨೩ ॥

ಪ್ರಥಮ ಸಂಗಮಕಾಲದಲಿ ನಿಜ । ಪತಿಯ ಸಂಗಡ ಮುಗ್ಧ ಕುಲಸತಿ ।
ಯತನದಿಂ ಮಾತಾಡುವಂದದೆ ಸರಸ ಕೋಕಿಲೆಯು ॥
ಶ್ರುತಿ-ಮನೋಹರವಾದ ರವದಿಂ । ಮಿತಿಯ ಮೀರದೆ ಗಾನಮಾಡುತೆ ।
ಪಥಿಕ-ಜನ ಚಿತ್ತಕ್ಕೆ ಸಂತಸವನ್ನು ಕೊಡುತಿಹುದು ॥ ೩೪ ॥
ಅಲಿಗಳಿಂದುಂಟಾದ ಮಂಜುಲ । ಲಲಿತ ರವದಿಂ ಗಾನಮಾಡುವ ।
ಪೊಳೆವ ಮುಕುಲಗಳೆಂಬ ಪಲ್ಗಳದೋರಿ ನಸುನಕ್ಕು ॥
ಮಲಯಮಾರುತನಿಂದ ಚಲಿಸಿ- । ರ್ದೆಲೆಗಳಿಂದಭಿನಯುವ ನಟಿಸುವ ।
ಸಲೆ ಸುನರ್ತಕಿಯಂತೆ ಬಳ್ಳಿಗಳಲ್ಲಿ ತೋರಿದವು. ॥ ೩೫ ॥
ಸುರತ-ಕೇಲಿ-ಕಲಾಪ-ಪಟುತರ । ಪರಮ ಸುಂದರ ರಮಣಿಯರು ಕೇ- ।
ಸರವ ವಾಸನೆಯಲ್ಲಿ ಗೆಲ್ದಿರುವಂಥ ಮದಿರೆಯನು ॥
ಪುರುಷರಲಿ ರತಿ ಕೊರತೆಯಾಗದ । ತೆರದೆಯವರಿಂ ಕೂಡಿ ಕುಡಿದಾ- ।
ದರದೆ ಮನ್ಮಥನಾಟದಲಿ ಬಹು ಸೌಖ್ಯ ಹೊಂದಿದರು ॥ ೩೬ ॥
ಪರಮ ವಿಸ್ತೃತವಾದ ಗೃಹದೊಳ- । ಗಿರುವ ದೀರ್ಘಿಕೆಯಲ್ಲಿಯರಳಿದ ।
ಸರಸಿಜಂಗಳು ತರುಣಿಯರ ಸೊಗಸಾದ ಮೊಗಗಳಿಗೆ ॥
ಚರಿಪ ಪರಭೃತ-ಕಲರವಂಗಳ । ಸರಸ ರಶನೆಯ ಗೆಜ್ಜೆಗಳ ಮೃದು ।
ಸ್ವರಕೆ ಸರಿಯಾಗಿರುವ ಶೋಭೆಯನಾಂತು ತೋರಿದವು ॥ ೩೭ ॥
ತರುಣಿಯರು ತಮ್ಮಿಷ್ಟಪುರುಷನ । ವಿರಹ-ದುರ್ಧರ-ಬಾಧೆ ತಾಳದೆ ।
ಮರುಗಿ ಮನದಲಿ ಸೊರಗಿ ಪಾಂಡುರವರ್ಣ ತಳೆವಂತೆ ॥
ಸುರಭಿ-ಖಂಡಿತೆಯಾದ ರಜನಿಯು । ಕೊರಗಿ ತನ್ನಯ ಚಂದ್ರ-ಮುಖದಲಿ ।
ಧರಿಸಿ ಬಿಳುಪಾದಂಥ ಪ್ರಭೆಯನು । ಕಣ್ಗೆ ತೋರಿದಳು ॥ ೩೮ ॥
ತರುಣಿಯರು ನಿಜ ರಮಣನಲಿ ಬಲು । ಮರುಕಿನಿಂ ಕುಡಿಕುಡಿದು ಮಧುವನು
ಸುರತ ಸಂಗರದಲ್ಲಿ ಪಡೆದಿಹ ಶ್ರಮವನೆಲ್ಲವನು ॥
ತ್ವರಿತದಲಿ ಪರಿಹರಿಪ ಶೀತಲ- । ಕರನ ಸುಂದರವಾದ ಕರದಲಿ ।
ಸ್ಮರನು ತನ್ನಯ ಕುಸುಮಶರವನು ಹದನಗೈದಿಹನು ॥ ೩ ॥
ಬನದ ಸಿರಿಯಂಗದಲಿ ಮಿನುಗುವ । ಕನಕದಾಭರಣಗಳ ಪ್ರತಿನಿಧಿ ।
ಯೆನಿಸಿದಂತಹ ಕರ್ಣಿಕಾರದ ಪುಷ್ಪ-ಗುಚ್ಛವನು ॥
ವನಿತೆಯರ ಪೇರ್ಮುಡಿಗಳಲಿ ಬಹು । ಘನತೆಯಿಂ ಪ್ರಿಯಪತಿಗಳಿಡಿಸಲು ।
ವನಪಿನಿಂದವರನ್ನು ಮುದ್ದಿಸಿ ಸೌಖ್ಯಹೊಂದಿಹರು ॥ ೪೦ ॥
ಲಲನೆಯರ ಸುವಿಶಾಲ ಭಾಲವು । ಲಲಿತ ವಾಸನೆಯುಳ್ಳ ಮೃಗಮದ ।
ತಿಲಕದಿಂ ಪರಿಶೋಭಿಸುವ ತೆರದಿಂದ ಬನದಳವು ॥

ಅಲಕ-ವರ್ಣದ ಭ್ರಮರಗಳ ಕ- । ಜ್ಜಲವ ಧಾರಣಮಾಡಿದಂತಹ ।
ತಿಲಕ ಪಾದಪದಿಂದ ಸುಂದರವಾಗಿ ತೋರಿದುದು ॥ ೪೧ ॥
ತರು ವಿಲಾಸಿನಿಯಾದ ಸುಂದರ । ಸರಸ ಪೊಸ ಮಲ್ಲಿಗೆಯು ಬಳ್ಳಿಯು ।
ಸುರಭಿಯಿಂ ಕೂಡಿರ್ದ ಬಿಳುಪಾದಂಥ ಪುಷ್ಪಗಳ ॥
ವರ ಮುಗುಳ್ನಗೆಯಿಂದ ಹಾಗೆಯೆ । ಹರಡಿಕೊಂಡಿರುವಂಥ ದಲಗಳ ।
ಪರಮೆಯಿಂ ಪ್ರೇಕ್ಷಕರ ಮಾನಸಗಳನು ಹರಿಸಿಹವು ॥ ೪೨ ॥
ತರಣಿ ಸಾರಥಿಯಂತೆ ಮಿನುಗುವ । ಸರಲ ತರುಗಳ ಚಿಗಿತ ನವಕೇ- ।
ಸರದ ವರ್ಣದ ಕಿಸಲಯಂಗಳು ಮತ್ತೆ ಕೋಗಿಲೆಯು ॥
ಪರಮ ಮಂಜುಲವಾದ ರವವದು । ಸರಸ ಯುವಕದ ಪಯಿರುಗಳು ಗಡ ।
ನರರ ಮನದಲಿ ಸ್ಮರನ ಬಾಧೆಯನುಂಟುಮಾಡಿದವು ॥ ೪೩ ॥
ಮಳೆಯಕಾಲದ ಜಲಮುಚದ ರುಚಿ । ತಳೆದ ಭ್ರಮರಗಳಿಂದ ಕೂಡಿದ ।
ತಿಲಕ ತರುಗಳ ಬಲಿತ ಬಿಳುಪಾದಂಥ ಪುಷ್ಪಗಳು ॥
ಲಲನೆಯರ ಕೂದಲಡಲಿರಿಸಿದ । ಲಲಿತ ಮೌಕ್ತಿಕ ಜಾಲದಂತೆಯೆ ।
ಪೊಳೆದು ಪ್ರೇಕ್ಷಕ ಜನರ ಕಣ್ಣಾಳಿಗೆಸೆದು ತೋರಿದವು ॥ ೪೪ ॥
ಸುರಭಿವಧುವಿನ ಮೊಗಕೆ ಪೂಸುವ । ಸರಸವಾಗಿಹ ಚೂರ್ಣವೋ ಮೇಣ್ ।
ಹರನ ವೈರಿಯ ಪರಮಸುಂದರವಾದ ಧ್ವಜಪಟವೋ ॥
ನರರ ಕಣ್ಗೀತೆರದೆ ತೋರುವ । ಮರುತನಿಂ ಕಂಪಿಸಿದ ಸುಮಗಳ ॥
ಪರಿಮಳವು ನಭದಲ್ಲಿ ಪಸರಿಸಿ ಪೋದವೀಯುವವು ॥ ೪೫ ॥
ಜಾಲೆಯರು ಜೋಕಾಲಿಯಾಡುವ । ಕಾಲದಲಿ ತಮ್ಮಿನಿಯರನು ಕ- ।
ಣ್ಣಾಲಿಯಿಂ ನೆರೆ ನೋಡಿ ಪ್ರಿಯತಮರನ್ನು ತಕ್ಕೈಸ್ಸೆ ॥
ದೋಲೆ ನೇಣುಗಳನ್ನು ಧರಿಸಿದ । ಲೋಲಹಸ್ತಗಳನ್ನು ಬೇಗನೆ ।
ಸೈಲುಗೈದಂತಾಗ ನಟಿಸಿದರೇನು ಪೇಳುವೆನು ॥ ೪೬ ॥
ಏನು, ಪ್ರಾಯವು ಗತಿಸಿ ಪೋದರೆ । ತಾನೆ ಪುನರಪಿ ತಿರುಗಿ ಬಪ್ಪದೇ ।
ಜಾಣೆಯರೆ ಪ್ರಿಯರಲ್ಲಿ ಪುಸಿಯಭಿಮಾನ ಬೇಡೆಂದು ॥
ಕಾನನದೆ ಕೋಗಿಲೆಯು ಸುಂದರ । ವಾಣಿಯಿಂ ಬೋಧಿಸಲು ಸುಮಗಳ ।
ಬಾಣನಾಟದೊಳವರು ಪ್ರಿಯತಮರನ್ನು ಕೂಡಿದರು ॥ ೪೭ ॥
ಇಂತುಪರಿ ವಾಸಂತಸಮಯದೆ । ಕಾಂತೆಯರ ಸಹವಾಸದಲಿ ಬಹು ।
ಕಂತುವಿನ ಚಲ್ಲಾಟದಲಿ ರತಿಸೌಖ್ಯವನು ಹೊಂದಿ ॥
ಕಂತುವಿನ ಸಮರೂಪ ವಂತನು । ಕಂತುಪಿತನಂತೆಸೆವ ರಾಜನು ।
ಚಿಂತಿಸಿದನಾಖೇಟದನದ ವ್ಯವಸಾಯನಂತರದೆ ॥ ೪೮ ॥
ತನುವಿನಲಿ ಕಾಠಿಣ್ಯವನು ಮೇಣ್ । ದಣಿವ ತಾಳುವ ಶಕ್ತಿಯನು ಸಂ- ।
ಜನಿಸುವದು ಮೃಗಯಾ ವಿಹಾರವು ಸರ್ವಮನುಜರಲಿ ॥

ವನದ ಪಶುಗಳ ಮನದ ಧರ್ಮವ । ಗುಣಗಳನು ಸಹ ತಿಳಿವುದದರಿಂ ।
ಜನಪ ದಶರಥನೆಳಿಸಿದನು ಬಹು ಪ್ರೇಮದಿಂದಕೆ ॥ ೪೯ ॥
ಧರಿಸಿ ಮೃಗಯೋಚಿತ ಸುವೇಷವ- । ನಿರಿಸಿ ಶರಧನುಗಳನು ಕರದಲಿ ।
ತ್ವರದೆ ಬೇಂಟೆಯನಾಡಲಾ ನರವರನು ಚರಿಸಿರಲು ॥
ತುರಗ ಖುರದಿಂದೆರ್ದ ಧೂಲಿಯು । ಹರಡಿ ಬಾಂಡಳವನ್ನು ವ್ಯಾಪಿಸಿ ।
ಸರಸವಾದ ವಿತಾನಶೋಭೆಯನಾಂತು ತೋರಿದುದು ॥ ೫೦ ॥
ಸುರಭಿಯುತ ವನಮಾಲೆ ಕೊರಳಲಿ । ಸರಸ ಕವಚವ ದೇಹದಲಿ ಮೇಣ್ ।
ಹರಳು ಕೆಚ್ಚಿರ್ದುಂಗುರಂಗಳ ಬೆರಳಿನಲಿ ಧರಿಸಿ ॥
ತುರಗ-ಗತಿಯಿಂ ಸರಿವ ಕರ್ಣಾ- । ಭರಣಗಳನಿಟ್ಟಿರುವ ರಾಜನು ॥
ರುರು ಮೃಗಂಗಳ ಮಾರ್ಗವನ್ನನುಸರಿಸಿ ಸಾಗಿದನು ॥ ೫೧ ॥
ಲತೆಯರೂಪವ ತಾಳಿ ವನದೇವ- । ವತೆಯು ಕೌತುಕದಿಂದ ತುಂಬೆಗ- ।
ಳತಿಮನೋಹರವಾದ ನಯನಗಳಿಂದ ನಿಚ್ಚಳದೆ ॥
ರತಿಯ ಪ್ರಿಯತಮನಾದ ಪ್ರತಿಮ- । ನ್ಮಥನ ಪ್ರತಿಕೃತಿಯಂತೆ ತೋರುವ ।
ಕ್ಷಿತಿಯಪತಿ ದಶರಥನ ಮಾರ್ಗದೆ ನಿಂತು ನೋಡಿದಳು ॥ ೫೨ ॥
ಒಡನೆ ಶ್ವಾನಗಳನ್ನು ಕೆಲವರು । ಗಡನೆ ಜಾಲಗಳನ್ನು ಕೆಲವರು ।
ಬಡಿಗೆ ಡೊಣ್ಣೆಗಳನ್ನು ಕೆಲವರು ಪಿಡಿದು ಕರಗಳಲಿ ॥
ತುಡುಗರನ್ನು ಹೊಡೆದಟ್ಟಿ ಕೆಲವರು । ನಡೆದು ಮುಂಚೆಗೆ ಪೋದರಡವಿಗೆ ।
ಪೊಡವಿಯೊಡೆಯನು ಸಾಗಿದನು ಬೆನ್ನಿಂದೆ ಸಡಗರದೆ ॥ ೫೩ ॥
ಸುರರಪತಿ-ಕಾರ್ಮುಕನಭಸ್ಥದೆ । ನರರ ಕಣ್ಗಳಿಗೆಸೆದು ತೋರುವ ।
ತೆರದೆ ನರಪನ ಕರದೆ ಕನಕದ ಚಾಪ ಪೌರ್ವಿಯದು ॥
ಮಿರುಗಿ ಭೀಕರವಾದ ರವದಿಂ । ಹರಿಯ ರೋಷವನಿರದೆ ಪೆರ್ಚಿಸೆ ।
ತಿರುಗಿಯದು ನೃಪನಾಹವಕೆ ಕರೆವಂತೆ ಗರ್ಜಿಸಿತು ॥ ೫೪ ॥
ಹರಿದು ಕುಶ ತೃಣಗಳನು ಭಕ್ಷಿಸಿ । ಹರಿಣ ಶಿಶುಗಳು ತಮ್ಮ ತಾಯ್ಗಳ ।
ತೊರೆದ ಮೊಲೆಗಳನುಣ್ಣಲಿಚ್ಛಿಸಿ ತರುಬೆ ಪುಲ್ಲೆಗಳು ॥
ಪರಮ ಪ್ರೇಮದೆ ನೆಕ್ಕಿಯವುಗಳಿ- । ಗಿರದೆ ದುಗ್ಧವ ಕುಡಿಸುತಿರೆ ಗಂ- ।
ಡೆರಳೆಗಳು ಸಲೆ ನಿಂತು ನೋಡುವದನ್ನು ನೃಪ ಕಂಡ ॥ ೫೫ ॥
ತುರಗಗತ ದಶರಥನು ತ್ವರೆಯಿಂ । ಕರದೆ ಮೂಡಿಗೆಯಿಂದ ಶರವನು ।
ಹಿರಿದು ಕಾರ್ಮುಕವನ್ನು ಪೂಡುತ ಬರುವದನು ನೋಡಿ ॥
[illegible] ಹರವಿರ್ದ ನೈದಿಲೆ । ತೆರದೆ ಹರಣಿಗಳೆಲ್ಲ ಕಡೆಯಲಿ ।
ದರದೆ ಕಣ್ಗಳ ಕರೆಯ ಛವಿಯನು ಹರಡಿಯೋಡಿದವು ॥ ೫೬ ॥

ಹದನವಾಗಿಹ ಬಾಣವನ್ನಾ- । ಚದುರ ಧನ್ವಿಯು ಪೂಡಿ ಹೆದೆಯಲಿ ।
ಹೆದೆಯ ತಾಣಕೆ ಲಕ್ಷ್ಯಸಾಧಿಸಿ ಹೊಡೆಯುವಷ್ಟರಲಿ ॥
ವಧುವಿನಾನನವನ್ನು ಪುಂ ಮೃಗ । ಮುದದೆ ಮದನಾತುರದೆ ನೋಡಲು ।
ಸದಯು ತನದಿಂ ನೃಪನು ಶರ ಸಂಹರಿಸಿ ಕೊಂಡಿಹನು ॥ ೫೭ ॥

ಒಡನೆ ಬೇರ್ಮಿಗಳನ್ನು ಲಕ್ಷಿಸಿ । ಕಡು ಪರಾಕ್ರಮಿಯಾದ ರಾಜನು ।
ಪಿಡಿದ ಬಿಲ್ಲಿನ ಹೆದೆಗೆ ಕೂರಾದಿಸ್ತ್ರಗಳನು ಪೂಡಿ ॥
ಹೊಡೆಯಲಿಚ್ಛಿಸೆ ಭೀತಿಯಿಂದವು । ನಡುಗಿ ಪ್ರೌಢಸ್ತ್ರೀಯ ಕಣ್ಗಳ ।
ಸಡಗರವ ತಾಳಿದ್ದು ಕಂಡವುಗಳನು ಬಿಟ್ಟಿಹನು ॥ ೫೮ ॥

ಸರದ ಕರ್ದಮದೊಳಗೆ ಕಿರಿಗಳು । ಹೊರಳಿತನು ತಂಪಾಗೆ ಮುಸ್ತಾಂ- ।
ಕುರಗಳನ್ನುರೆ ಹರಿದು ತಿನ್ನುತ್ತಿರದೆ ಶೀಘ್ರದಲಿ ॥
ಚರಿಸೆಯುವುಗಳ ಹೆಜ್ಜೆಗಳನನು- । ಸರಿಸಿ ಕೋಸಲ ಧರೆಯ ಪಾಲನು ।
ಹರುಷದಿಂ ಮೃಗಯಾ ವಿಹಾರಕೆ ಹೊರಟು ಸಾಗಿದನು ॥ ೫೯ ॥

ತುರಗಗತನರವರನು ಕಿಂಚಿತ್ । ಭರದೆ ಮುಂದಕೆ ಬಾಗಿ ರಭಸದೆ ।
ತರುಗಳಾಶ್ರಯಗೊಂಡು ನಿಂತಿರುವಂಥ ಕಿರಿಗಳನು ॥
ಶರಗಳಿಂ ಹೊಡೆಯಲ್ಕೆಯವುಗಳು । ಕೆರಳಿಯಾತನ ಮೇಲೆ ತಿರುಗಲು ।
ಸರಿಯಲಾಗದೆ ಧರೆಯ ಮೇಲಲ್ಲಲ್ಲೆಯುರುಳಿದವು ॥ ೬೦ ॥

ಕೋಡುಗಳ ಮುಂದೂಡಿ ಬೇಗನೆ । ನೋಡಿ ರಾಜನ ಮುಖವ ಕೋಪದೆ ।
ಕಾಡುಕೋಣಗಳವನ ಮೆಯ್ಮೇಲೋಡಿ ಬರಲವನು ॥
ಹೂಡಿ ಕಾರ್ಮುಕದಲ್ಲಿ ಶರಗಳ । ತಾಡಿಸಲ್ಕವು ಧರೆಯಮೇಲ್ಬಹು ।
ಪೀಡೆಯಿಂದುರುಳಿದವನಂತರ ನಿಶಿತಬಾಣಗಳು ॥ ೬೧ ॥

ಮಂಡಳಾಧೀಶ್ವರರ ಮುಖ್ಯನು । ಮಾಂಡಲೀಕರ ಗರ್ವವನ್ನುರೆ ।
ಖಂಡಿಸುವ ತೆರದಲ್ಲಿ ಗಂಡಕ-ಮೃಗ-ವಿಷಾಣವನು ॥
ಚಂಡವಿಕ್ರಮನಾದ ನೃಪನು । ದ್ದಂಡ ನಿಶಿತಾದಂಥ ಬಾಣದೆ ।
ತುಂಡಿಸಿದನಾಗಿರದೆ ಪಶುವಿನ ಪ್ರಾಣವನ್ನುಳಿಸಿ ॥ ೬೨ ॥

ಅಲಲ ಬಿಲದೊಳಗಿಂದ ಹುಲಿಗಳು । ಮುಳಿದು ರಾಜನ ಮೇಲೆ ರಭಸದೆ ।
ಚಲಿಸಿ ಬರಲಾಗವನು ಚಾಪದ ಮೌರ್ವಿಯನ್ನೆಳೆದು ॥
ಪೊಳೆವ ಕೋಲ್ಗಳ ಮಳೆಯ ಕರೆದಡೆ । ಸುಳಿವಗಾಳಿಗೆ ಬೀಳ್ವ ಸರ್ಜದ ।
ದಲಗಳಂತೆಯೆ ವ್ಯಾಘ್ರ-ಮುಖ-ತೂಣೀರ ಮಾಡಿದನು ॥ ೬೩ ॥

ಘನಪರಾಕ್ರಮದಿಂದ ಮಿನುಗುವ । ವನದ ಪಶುಗಳ ರಾಜನಲಿ ಬಹು ।
ಕುಪಿಸಿಸಿಂ ಮಾತ್ಸರ್ಯ ತಾಳಿರ್ದಂತೆ ದಶರಥನು ॥

ವನದೆ ಕುಂಜ-ನಿಷುಪ್ತ ಹರಿಯುನು । ಹನನ ಮಾಡುವೆನೆಂದು ಚಾಪದ ।
ಗುಣದ ಭೀಕರರವದೆ ಕೆಣಕಿದನೇನು ಪೇಳುವೆನು ॥ ೬೪ ॥

ಕರಿಗಳಲಿ ಪಿರಿದಾದ ವೈರವ । ಧರಿಸಿ ನಖರಗಳಿಂದಲವುಗಳ ।
ಶಿರವಿದ್ಧಾರಣಮಾಡಿ ಮುಕ್ತಾಫಲಗಳನು ಹರಿಸಿ ॥
ಮೆರೆವ ಹರಿಗಳ ವೃಂದವನು ನರ- । ವರನು ಮಾರ್ಗಣದಿಂದ ಗಡ ಸಂ- ।
ಹರಿಸಿ ರಣವಾರಣಗಳಂಜಿಕೆಯುನ್ನ ಶಮಿಸಿದನು ॥ ೬೫ ॥

ಧರೆಯ ಪತಿಗಳ ಶಿರದೆ ಮೆರೆಯುವ । ಸರಸ ಚವರವ ಸಾರ್ವಭೌಮನು ।
ಹರಿಸುವಂದದೆ ರಾಜರಾಜನು ತನ್ನ ತುರಗವನು ॥
ಭರದೆಯೋಡಿಸಿ ಚಮರಿಮಿಗಗಳ । ಪರಮ ಬಿಳುಪಾದಂಥ ವಾಲವ ।
ಶರದೆ ಛೇದಿಸಿ ಮನಸಿನಲಿ ಸಂತೋಷ ತಾಳಿದನು ॥ ೬೬ ॥

ರತಿಗೆ ಸಮವಾಗಿರ್ದ ತನ್ನಯ । ಸತಿಯು ಕಬರೀಗತ ಸುಪುಷ್ಪ- ।
ಗ್ರಥಿತಮಾಲೆಯ ಶೋಭೆಯನು ತಳೆದಿರ್ದ ಬರ್ಹಿಗಳು ॥
ಅತಿ ಸಮೀಪದೆ ಪೋದರೂ ಭೂ- । ಪತಿಯು ಶರಸಂಧಾನ ಮಾಡದೆ ।
ವಿತರಿಸಿದನವುಗಳಿಗೆ ಯವುಗಳ ಪ್ರಾಣದಾನವನು ॥ ೬೭ ॥

ಪಶುಗಳಾಚೋದನದ ಶ್ರಮದಿಂ- । ದಸಮಬಲ ನರವರನ ಮೊಗದಲಿ ।
ಶಿಶಿರಸುಂದರ ಘರ್ಮಕಣಗಳು ಕೂಡಲೊಂದೆಡೆಗೆ ॥
ತೃಷಿತ ಚಾತಕವಿಂದು ಸುಧೆಯನು । ಪ್ರಶಮಿಸಲು ತೃಷೆ ಕುಡಿಯುವಂದದೆ ।
ಶ್ವಸನನಾಗಲೆ ಕುಡಿದು ಸಂತೃಪ್ತಿಯನು ಹೊಂದಿದನು ॥ ೬೮ ॥

ತರುಣ ರಮಣಿಯು ಪ್ರೇಮದಲಿಸಿ- । ಕ್ಕಿರುವ ಪುರುಷನ ತೆರದೆ ಕೋಸಲ- ।
ಧೊರೆಯು ಕಾರ್ಯಾಂತರಗಳನ್ನುರೆ ಬಿಟ್ಟು ಸಂಭ್ರಮದೆ ॥
ಪುರದ ಸಂರಕ್ಷಣದ ಭಾರವ- । ನಿರಿಸಿ ತನ್ನಯ ಮಂತ್ರಿಗಳ ಮೇಲ್ ।
ಚರಿಸಿದನು ಮೃಗಯಾವಿಹಾರದ ವ್ಯಸನವನು ತಾಳಿ ॥ ೬೯ ॥

ಹರಿಣ-ಕಿ-ಹರಿಗಳನು ಕೊಲ್ಲು- । ತ್ತಿರದೆ ಮೃಗಯಾಸಕ್ತಿಯಿಂ ನರ- ।
ವರನು ಪರಿಜನರನ್ನು ಪಿಂತೆಯೆ ಬಿಟ್ಟು ವಿಪಿನದಲಿ ॥
ಚರಿಸುತಿರೆ ದಿನಮಣಿಯು ಮುಣಗಲು । ಸರಸದೀಪದವಲ್ಲಿ ರುಚಿಯು ।
ಹರಡಿ ಪುಷ್ಪದ ಶಯ್ಯೆಯನು ತಾನಲ್ಲಿ ಮಲಗಿದನು ॥ ೭೦ ॥

ದ್ವಿರದಗಳ ಪೇರ್ಕೂರ್ಪ ಪಟಹದೆ । ಹೊರಟ ಧ್ವನಿಯಿಂದಾಗ ನೃಪ ಚೇ- ।
ತರಿಸಿ ಪ್ರಾತಃಕಾಲದಲಿ ಹಾಸಿಗೆಯ ಮೇಲ್ಕುಳಿತು ॥
ಸರಸ ಕೀರಮಯೂರಪಿಕಗಳ । ಸು-ರವವನು ಮಾಗಧರ ಮಂಗಳ ।
ಸರದ ತೆರದಲಿ ಕೇಳಿ ಮಹಾದಾನಂದ ತಾಳಿದನು ॥ ೭೧ ॥

ಇನಿತು ಪರಿ ತುಸು ಕಾಲವನು ಭೂ- । ವನಿತೆಯಾಣ್ಮನು ಕಳೆದನಂತರ ।
ವನದೆ ಪರಿಜನರನ್ನು ಕಾಣದೆ ಕುದುರೆಯನು ಹತ್ತಿ ॥
ಘನತೆಯಿಂ ಕಾಲ್ದಾರಿಯಿಂದಲೆ । ಮುನಿಕುಟೀರಗಳಿಂದ ಶೋಭಿಪ ।
ಸುನದಿ ತಮಸಾ-ತೀರವನು ಶ್ರಮಬಟ್ಟು ಮುಟ್ಟಿದನು ॥ ೭೨ ॥

ಪರಮ ಪಾವನವಾದ ತಮಸೆಯ । ಹರಿವ ನಿರ್ಮಲವಾದ ಜಲದಲಿ ।
ಭರದೆ ಪಿರಿದಾದಂಥ ಪೊಂಗೊಡವನ್ನು ಮುಣಗಿಸಲು ॥
ದ್ವಿರದಗಳ ಸ್ವರದಂತೆ ತದ್ರವ । ಧರೆಯಪಾಲನ ಕಿವಿಗೆ ಬೀಳಲು ।
ಶರವ ಸ್ವರದನುರೋಧದಿಂ ತೆಗೆದೆಚ್ಚನನು ಬಿಡದೆ ॥ ೭೩ ॥

ಎಲ್ಲ ಶಾಸ್ತ್ರಗಳನ್ನು ಸಮ್ಯಕ್ । ಬಲ್ಲ ರಾಜನು ಸಮಯವಿಲ್ಲದೆ ।
ಬಿಲ್ಲಿನಿಂ ಶರ ಹೊಡೆದು ಗಜವನು ಕೊಲ್ಲಲೆಸಗಿದನು ॥
ಬಲ್ಲ ಜ್ಞಾನಿಗಳಾದರೂ ಗಡ । ಮೆಲ್ಲನೇ ರಜ ಬಂದು ಕೂಡಲು ।
ಸಲ್ಲದನ್ಯಾಯವನು ಬಿಡದಲೆ ಮಾಡಿ ತೀರುವರು ॥ ೭೪ ॥

ಅರರೆ! ತಾತನೆ ಶರವು ತಾಕಿತು । ಮರಣ ಹೊಂದುವೆನೆಂದು ಕರುಣಾ- ।
ಭರಿತಸ್ವರವದು ರಾಜರಾಜನ ಕಿವಿಗೆ ಬೀಳಲ್ಕೆ ॥
ಭರದೆ ತೀರದ ಗರಗಿನಲಿ ನರ- । ವರನು ಶೋಧಿಸೆ ಮುನಿಕುಮಾರನು ।
ಧರೆಯ ಮೇಲ್ಬಿದ್ದದ್ದು ಕಂಡನು ಪರಮ ದುಃಖದಲಿ ॥ ೭೫ ॥

ತುರಗದಿಂ ಕೆಳಗಿಳಿದು ಭೂಪತಿ । ಯರುಹಿ ತನ್ನ ಪ್ರಸಿದ್ಧ ಗೋತ್ರವ ।
ಶರದೆ ವಿಹ್ವಲನಾದ ತರುಣನ ಕುಲವ ಕೇಳಲ್ಕೆ ॥
ಮರುಳಿಯಾತನು ಶ್ರಮದೆ ನುಡಿದನು । "ಕರಣ" ಕುಲದವ ನಾನು ತಪವಾ- ।
ಚರಿಸಿ ಕಾಲಕ್ಷೇಪ ಮಾಡುತ್ತಿರ್ದೆ ನೀವರೆಗೂ ॥ ೭೬ ॥

ತರುಣ ಮುನಿಯುಪ್ಪಣೆಯ ಮೇರೆಗೆ । ಧರೆಯ ಪಾಲನು ಹೊತ್ತು ತರುಳನ ।
ಕುರುಡ ಹಿರಿಯರ ಹತ್ತಿರಕೆ ಯೊಯ್ದಿಟ್ಟು ಪೇಳಿದನು ॥
ಕರಿಯ ಭ್ರಮೆಯಿಂದೆಲೆ ಮಹಾತ್ಮರೆ । ಶರದೆ ನಾನಿವನನ್ನು ಹೊಡೆದೆನು ।
ಕರುಣೆಯಿಂ ತಿಳಿಗೇಡಿತನವನು ಕ್ಷಮಿಸಬೇಕೆಂದು ॥ ೭೭ ॥

ಧರೆಯಪಾಲನ ಮಾತುಗಳನಾ- । ಕುರುಡದಂಪತ್ತಿಗಳು ಕೇಳಲು ।
ಪರಮ ದುಃಖದೆ ಮಗನೆ ಮಗನೆಂದುಸಿರಿ ಮರುಮರುಗಿ ॥
ತರಳನುರದಲಿ ನಟ್ಟ ಶರವನು । ಹಿರಿದು ತೆಗೆಸಲ್ಕವನು ಮಡಿದನು ।
ಸುರಿವನೇತ್ರೋದಕದೆ ಮುನಿ ನೃಪನನ್ನು ಶಪಿಸಿದನು ॥ ೭೮ ॥

ಉರಗ-ಶಿರದಲಿ ಚರಣವಿಡಲದು । ಕೆರಳಿ ಕಚ್ಚುವ ತೆರದೆಯಾಮುನಿ- ।
ವರನು ಮುಂಚೆಗೆ ತಪ್ಪು ಮಾಡಿರ್ದಂಥ ದಶರಥಗೆ ॥

ಮರಣಕಾಲಕೆ ನಿನಗೆ ಪುತ್ರನ । ವಿರಹವಾಗಲಿಯೆಂದು ಶಾಪವ- ।
ನರುಹೆ ಮನದಲಿನೊಂದು ರಾಜನು ಮುನಿಗೆಯಿಂತೆಂದ ॥ ೬೯ ॥
ಜನರು ಹರಗಿಟ್ಟಂಥ ಹೊಲವ- । ನ್ನನಲ ಸಿಟ್ಟಲೆ ಸುಟ್ಟರೂ ಫಲ- ।
ಜನಿಪ ಶಕ್ತಿಯನುಂಟು ಮಾಡುವ ತೆರದೆ ಮುನಿವರನೆ ॥
ತನಯ ಮುಖವನು ಕಾಣದಿರ್ದ । ಜನಪನಿಗೆ ತವಶಾಪವದು ಬಹು ।
ಗುಣಕೆ ಕಾರಣವಾಗಿ ಪರಿಣಮಿಸುವದು ನಿಶ್ಚಯದೆ ॥ ೭೦ ॥
ಜನಪದಾಧೀಶ್ವರನು ನಂತರ । ವಿನಯದಿಂ ಕೇಳಿದನು ಸ್ವಾಮಿಯೆ ।
ನಿನಗೆ ನಾನಿನ್ನೇನು ಮಾಡುವದೆನಲು ಮುನಿವರನು ॥
ತನಯ ದೇಹದ ಕೂಡ ನಮ್ಮಯ । ತನುಗಳನು ಪ್ರಜ್ವಲಿಸಿ ಚಿತೆಯ- ।
ನ್ನನಲಗಾಹುತಿ ಕೊಟ್ಟು ಬಿಡುನೀನೆಂದು ಪೇಳಿದನು ॥ ೭೧ ॥
ಒಡಲಿನಲಿ ವಾಡವವ ಧರಿಸಿದ । ಕಡಲಿನಂದದೆ ಶಾಪವನ್ನರೆ ।
ಪೊಡವಿಯೊಡೆಯನು ತಾಳಿ ತನ್ನಯ ಜಠರ-ಪಿಠರದಲಿ ॥
ಒಡನೆ ಮುನಿಯಪ್ಪಣೆಯ ಪಾಲಿಸಿ । ಗಡನೆ ಪರಿಚಾರಕರ ಗಡಣದೆ ।
ಯಡವಿಯಿಂ ಹೊರಹೊರಟು ತನ್ನಯ ಪುರಕೆ ಸಾಗಿದನು ॥ ೭೨ ॥

೧೧ನೆಯ ಸರ್ಗ.

ನಾಕಲೋಕಾಧೀಶನಾದಾ- । ಪಾಕಶಾಸನನಂತೆ ವಿಭವದೆ ।
ಲೋಕಬಂಧುವಿನಂತೆ ತೇಜದೆ ಹೊಳೆವ ದಶರಥನು ॥
ಜೋಕೆಯಿಂದಯುತಾಬ್ದಗಳನೀ- । ಲೋಕವನು ಪಾಲಿಸುತೆ ಮದಭಯ ।
ಶೋಕಸಂತಾಪಂಗಳಿಲ್ಲದೆ ಸೌಖ್ಯದಿಂ ಕಳೆದ ॥ ೧ ॥
ಮಾನವಾಧೀಶ್ವರನಿಗೆಲ್ಲವು । ಸಾನುಕೂಲಾಗಿರ್ದರೂ ಸಂ- ।
ತಾನವಿಲ್ಲದಲವನು ವ್ಯಸನಾಧೀನನಾಗಿಹನು ॥
ಏನು ಜಗದೊಳಗಿರ್ದಡೇನದು । ಕಾನನದ ಬೆಳದಿಂಗಳಂದದೆ ।
ಹೀನ ಸಂತತಿಯಾದ ಪುರುಷನ ಬಾಳ್ವೆ ವ್ಯರ್ಥವದು ॥ ೨ ॥
ಒಡಲಿನಲಿ ರತ್ನಂಗಳಿರ್ದರು । ಹಡೆಯಲಾರದೆ ಸುಮ್ಮನೇ ಪಾ- ।
ಲ್ಗಡಲು ಮಂಥನ ಸಮಯವನು ಬಯಸುತ್ತಲಿರ್ದಂತೆ ॥
ಪೊಡವಿಯೊಡೆಯನು ತನಯರನುಗಡ । ಪಡೆಯಲಕ್ಷಮನಿಲ್ಲದಿರ್ದರು ।
ಬಿಡದೆ ಪ್ರತ್ಯಯಕಾಲವನು ನೋಡುತ್ತ ಕುಳಿತಿಹನು ॥ ೩ ॥
ಕಾಮವನು ಗೆಲ್ದಂಥ ಮಂಗಲ- । ಕಾಮರಾದ ಸುಯಜ್ಞಕಾಶ್ಯಪ- ।
ವಾಮದೇವ ವಶಿಷ್ಠ ಮುಂತಾದಂಥ ಮುನಿವರರು ॥

ಭೂಮಿಪಾಲನ ಪುತ್ರ-ಜನ್ಮದ । ಕಾಮವನ್ನೀಡೇರಿಸಲು ಬಲು ।
ನೇಮದಿಂ ಪುತ್ರೇಷ್ಟಿಯನು ಪ್ರಾರಂಭವಮಾಡಿದರು ॥ ೪ ॥
ಇತ್ತ ಸುತ-ಕಾಮೇಷ್ಟಿ ನಡೆದಿರೆ । ಹತ್ತು ಮೊಗದವನತ್ತ ದಿವವನು ।
ಮುತ್ತಿ ದೇವತೆಗಳನು ಪರಿಪರಿಯಿಂದ ಪೀಡಿಸಲು ॥
ಚಿತ್ತದಲಿ ಭಯಗೊಂಡು ವಜ್ರಿಯು । ಮತ್ತೆ ಸುರಪುರ ವಾಸಿಗಳು ಸ- ।
ರ್ವೋತ್ತಮನ ವೈಕುಂಠನಿಲಯಕೆ ಬೇಗಸಾಗಿದರು ॥ ೫ ॥
ಕ್ಷೀರಸಾಗರವನ್ನು ವಿಬುಧರು । ಸೇರುವಷ್ಟಕೆ ಭುವನಗಳ ವ್ಯಾ- ।
ಪಾರವನು ಬಲ್ಲಂಥ ಪರಮೋದಾರನಾಗಿರುವ ॥
ಮಾರನಯ್ಯನು ಸುರರಿಗೊದಗಿದ । ಘೋರಸಂಕಟವನ್ನು ತಿಳಿದನು ।
ತೋರದಿರೆ ತೊಂದರೆಯು ಕಾರ್ಯದ ಸಿದ್ಧಿಯಾಗುವದು ॥ ೬ ॥
ಅಹಿಯಲಿ ವಿಷವನ್ನು ಧರಿಸಿದ । ಸಾಸಿರದ ಹೆಡೆಯಲ್ಲಿ ಪೊಳೆವ ವಿ- ।
ಶೇಷ ಕಾಂತಿಯ ಮಣಿಗಣಾನ್ವಿತನಾಗಿ ಕಣ್ಗೆಸೆವ- ॥
ಶೇಷನಾಸನದಲ್ಲಿ ರಾಜಿಪ । ಶ್ರೀಶಜಗದಾಧೀಶನನು ನಾ- ।
ಕೇಶ ಮೇಣ್ ತ್ರಿದಿವೇಶರೆಲ್ಲರು ಕಂಡರಾಕ್ಷಣಕೆ ॥ ೭ ॥
ಪರಮ-ಪುರುಷನ ಚರಣಯುಗಳಕೆ । ಹರಳು ಕೆಚ್ಚಿದ ಕನಕ-ಕಾಂಚಿಯು ।
ಶರಿಯುವದು ತಾನೆಂದು ಕಮಲೆಯು ಸೆರಗಿನೊಳಗದನು ॥
ಧರಿಸಿ ಮೃದುಕರದಿಂದ ಶ್ರೀಹರಿ । ಸರಸ ಪಾದಗಳನ್ನು ಸೇವಿಸು- ।
ತಿರುವದನು ಹರಿಹಯನು ಮೇಣ್ ಸುರವರರು ನೋಡಿದರು ॥ ೮ ॥
ಅರಳಿದಂತಹ ಸರಸಿಜಂಗಳ । ತೆರದಿ ವಿಸ್ತೃತನಾದ ಕಣ್ಗಳ ।
ತರುಣ ತರಣಿಯ ಛವಿಯ ಪೀತಾಂಬರವನುಟ್ಟಿರುವ ॥
ಹರಿಯು ವರ್ಷಾಕಾಲದಲ್ಲಿಯ । ಸರಸ ಸೂರ್ಯೋದಯದ ಕಾಲದ ।
ನಿರತಿಶಯ ಸೌಂದರ್ಯದಿಂ ದಿವಿಜರಿಗೆ ತೋರಿದನು ॥ ೯ ॥
ಎದೆಯ ಮೇಲ್ ಭೃಗುಮುನಿವರೇಣ್ಯನ । ಪದದ ಶ್ರೀವತ್ಸಾಂಕವನ್ನುರು ।
ಮುದದೆ ಧರಿಸಿರ್ದಂಥ ಶ್ರೀಮಾಧವನ ಕೊರಳಿನಲಿ ॥
ಉದಧಿಯಲಿ ಪುಟ್ಟಿರ್ದ ಕೌಸ್ತುಭ । ಪದಕವದು ಪೊಳೆಪೊಳೆದು ಶ್ರೀವಧು- ।
ವದನ-ರಂಜಿಪ ಮುಕುರದಂದದೆ ಕಣ್ಗೆ ತೋರಿದುದು ॥ ೧೦ ॥
ಮಾರಜನನಿಗೆ ಜನುಮವಿತ್ತಿಹ । ಕ್ಷೀರಸಾಗರದಲ್ಲಿ ಜನಿಸಿದ ।
ಪಾರಿಜಾತದ ಪರಮಸುಂದರ ಶಾಖೆಗಳ ತೆರದೆ ॥
ತೋರುವಂತಹ ಬಾಹುಗಳಕೇ- । ಯೂರಕಟಕಾದ್ಯಖಿಲ ಭೂಷಾ- ।
ಭಾರದಿಂ ಪರಿಶೋಭಿಸುವ ಹರಿಯನ್ನು ಹರಿಕಂಡ ॥ ೧೧ ॥

ಮದಿರೆಯನು ಕುಡಿಕುಡಿದು ದೈತ್ಯರ । ಸುದತಿಯರ ವೊಗದಲ್ಲಿ ಪೆರ್ಚಿದ ।
ಮದದರಾಗವನಳಿಸಲಳವಾದಂಥ ಶಸ್ತ್ರಗಳು ॥
ಪದುಮನಾಭನ ಪಾದಕಮಲಗ- । ಳೆದುರಿನಲಿ ಕೈಮುಗಿದು ಗರ್ಜಿಸಿ ।
ಮುದದೆ ಜಯರವವನ್ನು ಮಾಡುವದನ್ನು ಹರಿಕಂಡ ॥ ೧೨ ॥
ಅಮರನಾಥನ ಕೂಡ ಮಾಡಿದ । ಸಮರದಲಿ ಗಾಯ್ವಡೆದ ಕಲೆಯನು ।
ವಿಮಲವಿಗ್ರಹದಲ್ಲಿ ತಾಳಿರ್ದಂಥ ಖಗಪತಿಯು ॥
ಕಮಲೆಯಾಣ್ಮನ ಮುಂದೆ ವಿನಯದೆ । ನಮಿಸಿ ನಿಂತದ್ದನ್ನು ಹರಿಮೇಣ್ ।
ಸುಮನಸರು ಭಯ-ಭಕ್ತಿಯಿಂ ಬೆರಗಾಗಿ ನೋಡಿದರು ॥ ೧೩ ॥
ಯೋಗ-ನಿದ್ರಾಂತದಲಿ ಸಚಿಮುಂ- । ಭಾಗದಲಿ ಶಿರಗಳನು ಬಾಗಿಸಿ ।
ಭೋಗಗಳ ತೊರೆದಂಥ ಮುನಿಗಳು ನುತಿಸೆ ಭಕುತಿಯಲಿ ॥
ಯೋಗಿವರ ಭವರೋಗ-ವೈದ್ಯನು । ರಾಗದಿಂ ನಸುನಗುತ ಮುನಿಗಳ ।
ಸ್ವಾಗತವನಾದರದೆ ಮಾಡುವಡನ್ನು ಹರಿಕಂಡ ॥ ೧೪ ॥
ಯೋಗನಿದ್ರೆಯ ನೀಗಿ ಮೆಲ್ಲನೆ । ಭೋಗಿಶಯನದ ಮೇಲೆ ಕುಳಿತಿಹ ।
ಯೋಗಿವರ ಭವರೋಗ ವೈದ್ಯನ ಸೌಖ್ಯಪೃಚ್ಛೆಯನು ॥
ರಾಗದಿಂ ಮಾಡಲ್ಕೆಯಲ್ಲಿಗೆ । ಸಾಗಿ ಬಂದಿರುವಂಥ ಮುನಿಗಳ ।
ಪೂಗವನು ಶಚಿಪತಿಯು ಮೇಣ್ ಸುರವರರು ನೋಡಿದರು ॥ ೧೫ ॥
ದುರುಳ ದೈತ್ಯರ ಕುಲವನರೆಯುವ । ಸರಸಪಾವನಚರಿತ ದೇವನ ।
ಚರಣ ಸರಸಿಜಗಳಿಗೆ ಯಮರಾವತಿ ನಿವಾಸಿಗಳು ॥
ಧರಣಿಮೇಲ್ತರು ಬಿದ್ದ ತೆರದಲಿ । ಯೆರಗಿ ಕರಗಳ ಮುಗಿದು ಪರಮಾ- ।
ದರದೆ ಪರಿಪರಿಯಿಂದ ಶ್ರೀಹರಿಯನ್ನು ನುತಿಸಿದರು ॥ ೧೬ ॥
ಸರಸಿ ಜೋದ್ಭವನಾಗಿ ನೀನೇ । ವಿರಚಿಸುವೆ ಬ್ರಹ್ಮಾಂಡವನ್ನರೆ ।
ಹರಿಯ ರೂಪದೆ ನಿರುತದಲಿ । ಸಂರಕ್ಷಿಸುವೆಯದನು ॥
ಸ್ಮರನ ವೈರಿಯ ವಿಗ್ರಹದೆಸಂ । ಹರಣ ಮಾಡುವೆ ಸೃಷ್ಟಿಯನು ಶ್ರೀ ।
ಪರಮ ಪುರುಷನೆ ನಿನ್ನ ಸ್ಥಿತಿಯನ್ನಾರು ತಿಳಿಯುವರೋ ॥ ೧೭ ॥
ಮೋಡದಲ್ಲಿಯ ದಿವ್ಯ ಜಲವದು । ನಾಡಿನಲ್ಲಿಯ ವಿವಿಧ ರಸಗಳ ।
ಕೂಡಿ ತತ್ತದ್ರಸದ ಭಾವಗಳನ್ನು ತಳೆದಂತೆ ॥
ಪಾಡು ಕೆಡಕಾದಂಥ ಗುಣಗಳ । ಜೋಡಿನಲ್ಲಿ ವಿಕಾರ ಹೊಂದದೆ ।
ಗೊಢರೊಡನೆ ಸುಸಾಮರಸ್ಯದೆ ಕೂಡಿದಂತಿರುವೆ ॥ ೧೮ ॥
ಮಾಸರಹಿತನೆ ನಿನ್ನ ವ್ಯಾಪ್ತಿಯ । ಮಾನವರಿಯುವರೆಂತೊ ನರವೈ- ।
ಮಾನಿಕರು ನಿಸ್ಪೃಹನೆ ನಿನ್ನನು ಕಾಮಿಸುತ್ತಿಹರು ॥

ದಾನವೋರಗದೇವ ಕಿನ್ನರ-। ಮಾನವಾಧೀಶ್ವರರು ನಿನ್ನನು।
ಶಾನೆ ಜಯಿಸುವರುಂಟೆ ಸರ್ವ ಪ್ರಾಣನಾದವನೆ ?॥ ೧೯ ॥

ಹೃದಯಗತನಾಗಿರ್ದರೂ ನೀ-। ನುದಿಸದಲೆ ದೂರಾಗಿ ತೋರುವೆ।
ಸದಯ ನೀನಾಗಿರ್ದರೂ ಗಡ ದುಃಖಗಳನರಿಯ ॥
ಮುದುಕನಾದರು ಕ್ಷರಣವಿಲ್ಲದೆ। ಬದುಕಿಕೊಳ್ಳುವೆ ಪೂರ್ಣಕಾಮನೆ।
ಮುದದೆ ತಪವನ್ನಿಚ್ಛೆಯುಳ್ಳವರಂತೆ ನಡೆಸಿರುವೆ ॥ ೨೦ ॥

ಎಲ್ಲವನು ಬಲ್ಲಂಥ ನಿನ್ನನು। ಬಲ್ಲ ಜ್ಞಾನಿಗಳುಂಟೆ ಜಗದೊಳ-।
ಗೆಲ್ಲ ಕಾರಣನಾದ ನಿನ್ನನ್ನಾರು ಪಡೆದಿಹರೋ ?॥
ಎಲ್ಲ ರೂಪಗಳನ್ನು ತಾಳಿದ। ನಲ್ಲನೇ ನೀನೋರ್ವನಿರುತಿಹೆ-।
ಯೆಲ್ಲರೊಡೆಯನು ನೀನು ನಿನ್ನನ್ನಾರು ಶಾಸಿಪಗೋ ?॥ ೨೧ ॥

ಸಪ್ತಸಾಗರ ಜಲಗಳಲಿ ಭೋ। ಸುಪ್ತಿತಾಳಿದ ದೇವದೇವನೆ।
ಸಪ್ತಲೋಕಾಶ್ರಯನೆ ನೀಂ ನಿರ್ಲಿಪ್ತನಾಗಿರುವೆ ॥
ಸಪ್ತಜಾಲಾ ಮುಖನೆ ನಿನ್ನನು। ಸಪ್ತಸಾಮಗಳೇಕರವದಿಂ।
ವ್ಯಾಪ್ತರೂಪನೆ ಸರ್ವಕಾಲದೆ ಹಾಡತೊಡಗಿಹವು ॥ ೨೨ ॥

ನಾಕು ಪುರುಷಾರ್ಥಗಳ ಜ್ಞಾನವು। ನಾಕು ಯುಗಪರಿಮಿತಿಯ ಕಾಲವು।
ನಾಕು ವರ್ಣಗಳಿಂದ ಕೂಡಿದ ಲೋಕರಚನೆಯದು ॥
ನಾಕು ವದನಗಳಿಂದ ಪುಣ್ಯ-। ಶ್ಲೋಕನೇ ಪುಟ್ಟಿರುವವೆಂದುರೆ।
ನಾಕು ವೇದಗಳೇಕ ಕಾಲಕೆ ಘೋಷಿಸುತ್ತಿಹವು ॥ ೨೩ ॥

ನೀಗಿ ವಿಷಯಾಸಕ್ತಿಯನ್ನುರೆ। ಭೋಗ-ವಾಸನೆಯನ್ನು ವರ್ಜಿಸಿ।
ಪೋಗಿ ನಿಬಿಡಾರಣ್ಯದೊಳಗೇ ಕಾಂತದಲಿ ಕುಳಿತು ॥
ಭೋಗಿಶಯನನೆ ನಿನ್ನ ಸುಖಮಯ। ಯೋಗವನು ಸಾಧಿಸಲು ಹೃದಯದ।
ಭಾಗದಲಿ ನಿಶ್ಚಲದೆ ಚಿಂತನವನ್ನು ಮಾಡುವರು ॥ ೨೪ ॥

ಜನನ ಮರಣಗಳಿಲ್ಲದಂತಹ। ವನಜನಾಭನೆ ನೀನು ಜಗದೊಳು।
ಜನಿಸಿ ಹತ್ತವತಾರಗಳನುರೆ ಧರಿಸಿ ರಿಪುಗಳನು ॥
ಹನನ ಮಾಡುವೆ ಜಾಗರೂಕನೆ। ಘನತೆಯಿಂದಲೆ ಯೋಗನಿದ್ರಾ।
ವನಿತೆಯನು ಪರಿರಂಭಿಸುವೆ ನಿನ್ನೆಂತು ತಿಳಿಯುವೆವೋ ?॥ ೨೫ ॥

ಪರಮ ಕಾಮುಕ ಜನರ ತೆರದಲಿ। ಸರಸ ವಿಷಯಗಳನ್ನು ಭೋಗಿಸಿ।
ಚರಿಪೆ ದುಶ್ಚರ-ತಪಗಳನ್ನುರೆ ಸ್ಥಿರಚರಾತ್ಮಕನೆ ॥
ತರುಳರನು ತಾಯ್ತಂದೆಗಳು ಬಹು। ಕರುಣೆಯಿಂ ಪೊರೆವಂತೆ ಪ್ರಜೆಗಳ-।
ನಿರದೆ ಸಂರಕ್ಷಿಸುವೆ ಮೇಣೌದಾಸ್ಯದಲ್ಲಿರುವೆ ॥ ೨೬ ॥

ಸರಸ ಮೇಘೋದಕದ ಹನಿಗಳು । ಬೆರೆತು ನದಿಗಳ ನೀರಿನಲಿ ಸಾ- ।
ಗರವ ಸೇರುವ ತೆರದೆ ನಾನಾ ಶಾಸ್ತ್ರವಾದಗಳು ॥
ನರರ ಕರ್ಮದಗತಿಗೆ ಸರಿಯಾ- । ಗಿರುವ ಮಾರ್ಗಗಳನ್ನು ಬೋಧಿಸಿ ।
ಪರಮ ಪುರುಷನೆ ಕೊನೆಗೆ ನಿನ್ನೊಳಗೈಕ್ಯವಾಗುವವು ॥ ೨೭ ॥
ವಿತ್ತ-ಶಾಠ್ಯವನುಳಿದು ನಿರ್ಮಲ- । ಚಿತ್ತದಿಂ ಸತ್ಕರ್ಮಗಳನುರೆ ।
ನಿತ್ಯದಲಿ ಫಲದಾಶೆಯನು ಸಂತ್ಯಜಿಸಿ ಮೋದದಲಿ ॥
ಸೋತ್ತ್ರಮಾಂಗನೆ ನಿನ್ನ ಪ್ರೇಮದೆ । ಮತ್ತನಂತಾಗಿರುವ ಭಕ್ತರಿ- ।
ಗಿತ್ತು ನಿಜಪದವನ್ನು ಪುನರಾವೃತ್ತಿ ತಪ್ಪಿಸುವೆ ॥ ೨೮ ॥
ಎಲೆ ಮುರಾಂತಕ ನಿನ್ನ ಮಹಿಮೆಯ । ಬಲದ ಫಲವಾಗಿರ್ದ ಪೃಥ್ವೀ-
ತಲದ ವ್ಯಾಪ್ತಿಯನಳೆಯ ಬಲ್ಲವರಾರು ಜಗದೊಳಗೆ ? ॥
ನಳಿನ ನಾಭನೆ ನಿನ್ನಗೋಚರ । ಪೊಳೆವ ರೂಪದ ಮಾನವನು ಬಲು ।
ಬಳಲಿದರು ತಿಳಿಯುವರೆ ನಿನ್ನಯ ಕೂರ್ಮೆಯನ್ನುಳಿದು ? ॥ ೨೯ ॥
ಕಮಲೆಯಾಣ್ಮನೆ ನಿನ್ನ ಪಾವನ- । ವಿಮಲನಾಮವನೊಮ್ಮೆ ಮನುಜನು ।
ಮಮತೆಯಿಂ ನೆನಿಸಿದರೆ ದುರಿತಗಳಿಂದ ಪಾರಾಗಿ ॥
ರಮಿಸುವನು ಸ್ವಧರ್ಮದಲಿ ಮೇಣ್ । ಕ್ರಮದೆ ನಿನ್ನನು ಭಜಿಸಿ ಪೂಜಿಸಿ ।
ನಮಿಸಿದರೆ ವೈಕುಂಠಕೈದುವದೇನು ಸೋಜಿಗವೋ ? ॥ ೩೦ ॥
ತರಣಿ ಕಿರಣಗಳನ್ನು ಮೇಣ್ಸಾ- । ಗರದ ಜಠರದೊಳಿರ್ದ ಪೊಳೆಯುವ ।
ಹರಳುಗಳ ಪರಿಗಣನೆ ಮೂಡಲಶಕ್ಯವಿರ್ದಂತೆ ॥
ಸ್ಥಿರ-ಚರಂಗನೆಲ್ಲ ವ್ಯಾಪಿಸಿ । ನಿರತಿಶಯನಾಗಿರುವ ನಿನ್ನನು ।
ಪರಮಪುರುಷನೆ ಬಣ್ಣಿಪುದು ಪರ್ಯಾಸವಾಗುವದು ॥ ೩೧ ॥
ಏಕರೂಪಾತ್ಮಕನೆ ನಿನ್ನವ- । ಲೋಕ ಮಾತ್ರದೆ ಪುಟ್ಟಿದವು ಮೂ- ।
ಲೋಕಗಳು ನಿನಗೇಕೆ ಬೇಕೀ ವಸ್ತು-ಜಾಲಗಳು ? ॥
ಲೋಕಹಿತಕಾರ್ಯಾರ್ಥವಾಗಿಯೆ । ಲೋಕದಲ್ಲವತಾರ ತಾಳುವೆ ।
ಲೌಕಿಕರ ತೆರದಲ್ಲಿ ನಾನಾ ವಿಧದೆ ವರ್ತಿಸುವೆ ॥ ೩೨ ॥
ಅಣುವಿನಲ್ಲಣುರೂಪನಾಗಿಹೆ । ಘನತೆಯಲಿ ಘನನಾಗಿ ತೋರುವೆ ।
ಗುಣಗಳಾಶ್ರಯನಾಗಿ ಮಿನುಗುವೆ ನಿರ್ಗುಣಾತ್ಮಕನೆ ॥
ಗುಣಗಳನು ತಾವೆಣಿಸಲಾರದೆ । ದಣಿದು ಶ್ರುತಿಗಳು ತಣ್ಣಗಾದವು ।
ವನಜನಾಭನೆ ಪಾಮರರು ನಾವೆಂತು ಬಣ್ಣಿಪೆವೋ ? ॥ ೩೩ ॥
ಕಂತು ಪಿತನಾದಂಥ ಲಕ್ಷ್ಮೀ- । ಕಾಂತನನು ಸುರಪತಿಯು ಸುರರೇ- ।
ಕಾಂತ ಮಾನಸರಾಗಿ ಪರಿಪರಿಯಿಂದ ಸಂಸ್ತವಿಸಿ ॥

ನಿಂತುಃಕರಪುಟಗಳನು ಜೋಡಿಸ- । ಲಂತಕಾಂತಕನಾದ ದೇವನು ।
ಸಂತಸದೆಯುವರನ್ನು ನೋಡುತ ನುಡಿದನೀಪರಿಯು ॥ ೩೪ ॥
ಏನು ವಜ್ರಿಯೆ ನೀನು ನಿನ್ನಯ । ಸ್ಥಾನದಲಿ ಬಹುಮಾನದಿಂ ವೈ- ।
ಮಾನಿಕರ ಜೊತೆಯಲ್ಲಿ ಸುಖದಿಂ ಕಾಲಕಳೆಯುವಿಯಾ? ॥
ಧೇನು-ಗಜ-ತುರಗಾದಿಗಳು ಮೇಣ್ । ಮೇನಿಕಾದಿಕರೆಲ್ಲರೂ ಗಡ ।
ನೂನವಿಲ್ಲದ ಸೌಖ್ಯದಲ್ಲಿರುತಿಹರೆ ಶಚಿಪತಿಯೆ? ॥ ೩೫ ॥
ಎನಲು ಶಚಿಪತಿ ಚಕ್ರಪಾಣಿಗೆ । ವಿನಯದಿಂ ಲಂಕಾಧಿಪತಿಯಿಂ ।
ತನಗೆ ಯುಂಟಾದಂಥ ಸಂಕಟವನ್ನು ಪೇಳಲ್ಕೆ ॥
ಘನಕೆ ಸರಿಯಾದಂಥ ನಿಸ್ನ- । ಸ್ವನದೆ ಸಾಗರ-ಧ್ವನಿಯು ನಡುಗಿಸಿ- ।
ವಿನತೆಯಣುಗನ ವಾಹನನು ಹರಿಗಿತ್ತನುತ್ತರವ ॥ ೩೬ ॥
ದೀನ-ವತ್ಸಲನಾದ ಶ್ರೀಪತಿ- । ಯಾನನದೆ ಹೊರಟಂಥ ಸುಂದರ ।
ವಾಣಿಯಾಯಾ ವರ್ಣಸ್ಥಾನಗಳಲ್ಲಿ ಜನಿಹೊಂದಿ ॥
ವಾಣಿದೇವಿಯ ರೂಪದಿಂದಲೆ । ತಾನೆ ಗೀರ್ವಾಣರಿಗೆ ಮೋದದೆ ।
ಪ್ರಾಣದಾನವ ಮಾಡಲೆಸಗಿರುವಂತೆ ತೋರಿದಳು ॥ ೩೭ ॥
ಹರಿಯ ಚರಣದೆ ಹೊರಟ ಸುರನದಿ । ಹರಿದು ಧರಣೀತಲದ ಮೇಲ್ದಿಂ- ।
ದಿರುಗಿ ಮೇಲಕ್ಕೇರಿಯಾತನ ವದನದಲ್ಲಿರುವ ॥
ಸರಸ ದಶನಪ್ರಭೆಯ ರೂಪದೆ । ಹೊರಟು ಸರಸತಿದೇವಿ ಸುರರಿಗೆ ।
ಕರುಣೆಯಿಂದಾಶ್ವಾಸನೆಯ ಗೆಯ್ವಂತೆ ತೋರಿದಳು ॥ ೩೮ ॥
ಕಮಲನಾಭನು ನುಡಿದನೆಲೆಹ- । ರ್ಯಮರರೇ ಜನರಲ್ಲಿ ವಾಸಿಪ ।
ತಮವು ರಜಸತ್ವಗಳ ವ್ಯಾಪಿಸಿ ಬಿಡುವ ತೆರದಲ್ಲಿ ॥
ಕುಮತಿಯಾಗಿರುವಂಥ ದಶಮುಖ- । ನಮಿತ ರಾಕ್ಷಸರನ್ನು ಕೂಡಿಸಿ ।
ಯಮಮ! ನಿಮ್ಮಧಿಕಾರ ಬಲಗಳ ಕ್ರಮಿಸಿ ಬಿಟಿಹನು ॥ ೩೯ ॥
ತಿಳಿಯದೇ ಘಟಿಸಿರ್ದ ಪಾಪದ । ಮೊಳೆಯು ಸಜ್ಜನ ಹೃದಯದಲಿ ಕಳ- ।
ವಳೆಯ ಪುಟ್ಟಿಸುವಂತೆ ಭುವನತ್ರಯಗಳನು ಬಿಡದೆ ॥
ಖಳನು ದುರ್ಮದನಾಗಿಯೊಮ್ಮೆಯೆ । ಬಲದೆ ತಳಮಳಗೊಳಿಸುವದು ಸತಿ ।
ತಿಳಿದು ಬಂದಿಹುದೆನಗೆ ನಾಕಾಧೀಶ-ಶಚಿಪತಿಯೇ ॥ ೪೦ ॥
ಲೋಕದಲ್ಲಿಯ ಜನರಸನು ದಿನ । ಜೋಕೆ ಮಾಡುವ ಕಾರ್ಯದಲಿ ನಾ- ।
ವೇಕಮಾರ್ಗಿಗಳಿರುವ ಮೂಲಕ ನೀನು ಶಚಿಪತಿಯೇ ॥
ಏಕೆ ಪ್ರಾರ್ಥನೆಯನ್ನು ಮಾಡುವೆ । ಸಾಕು; ಪಾವಕನೆಂದು ಪವನಗೆ ।
ಶಾಕುಲತೆಯಿಂದುಸುರುವನೆ ಸಾಹಾಯ್ಯಬೇಕೆಂದು ॥ ೪೧ ॥

ಸ್ಮರನ ರಿಪುವಿನ ಮೆಚ್ಚಿಸುವಡಕೆ। ಪರಮ ದಾರುಣವಾದ ತಪವನು।
ಚರಿಪ ಕಾಲಕೆ ರಾವಣನು ನವಶಿರಗಳನು ಕೊಯ್ದು॥
ಹರನಿಗರ್ಪಿಸಿಯುಳಿದ ಶಿರವನು। ಸರಸ ಚಕ್ರಾಯುಧನೆ ನಾನೀ-।
ಗಿರದೆ ತರೆಯುವೆನೇಕೆ ಮಾಡುವೆ ಚಿಂತೆಯನು ಹರಿಯೆ॥ ೪೨ ॥
ಸರಸ ಹರಿಚಂದನದ ವೃಕ್ಷವು। ಗರಲದಿಂ ಕೂಡಿರ್ದ ಹಾವಿನ।
ಭರದ ಪರಿರಂಭಣವ ಸುಮ್ಮನೆ ಸಹಿಸುವಂದದಲಿ॥
ಸುರರ-ಜ್ಯೇಷ್ಠನ ವರದೆ ಬೆಳೆದೀ। ದುರುಳರಿಪು ದಶವದನನುರವಣೆ।
ಹರಿಯೆ ನಾನೀವರೆಗೆ ಸಹಿಸಿದೆ ಪರಮಶಾಂತಿಯಲಿ॥ ೪೩ ॥
ಸರಸಿಜೋದ್ಭವನನ್ನು ಲಂಕೇ-। ಶ್ವರನು ದುರ್ಧರ ತಪದೆ ಮೆಚ್ಚಿಸಿ।
ಸುರ-ಸರೀಸೃಪ-ಕಿನ್ನರಾದಿಗಳಿಂದ ತನಗೆಂದೂ॥
ಮರಣವಿರದಿರಲೆಂದು ಯಾಚಿಸಿ। ವರವ ಪಡೆದಿಹನಾದರೂ ನರ-।
ವರರ ನೌದಾಸೀನ್ಯಭಾವದೆ ಮರೆತು ಬಿಟ್ಟಿಹನು॥ ೪೪ ॥
ಭರತಭೂಮಿಯ ಮೇಲೆ ನಾನವ-। ತರಿಸಿ ದಶರಥ ರಾಜನುದರದೆ।
ಹರಿಯೆ, ಲಂಕೇಶ್ವರನ ದಶಶಿರಗಳನು ಕತ್ತರಿಸಿ॥
ಧರೆಯ ಭಾರವನಿಳಿಸಿ ಬಿಟ್ಟಾ-। ತಿರಸರೋರುಹಗಳನು ಪ್ರೇಮದೆ।
ಪರಮ ಸೋತ್ಸವದಿಂದ ಬಲಿದಾನಾರ್ಹ ಮಾಡುವೆನು॥ ೪೫ ॥
ಮೂರು ಲೋಕಗಳನ್ನು ಜಯಿಸಿದ। ಕ್ರೂರಕರ್ಮಗಳನ್ನು ಚರಿಸುವ।
ಘೋರ ಪಾತಕಿಯಾದ ರಾವಣನನ್ನು ಶೀಘ್ರದಲಿ॥
ಕೂರ ಶರದಿಂ ಹೊಡೆದು ಯಜ್ಞವ। ಪಾರುವರು ಮಾಳ್ಪಂತೆ ಮಾಡುವೆ।
ಸೇರುವದು ಹವಿಯಲ್ಲಿ ಭಾಗವು ನಿನಗೆ ಶಚಿಪತಿಯೇ॥ ೪೬ ॥
ಹರನ ಮಿತ್ರನ ವ್ಯೋಮ-ಯಾನವ। ಹರಿಸಿಯದರೊಳು ಚರಿಪ ಲಂಕೇ-।
ಶ್ವರನ ದರುಶನದಿಂದ ವೈಮಾನಿಕರೆ ನೀವಿನ್ನು॥
ದರದೆ ಮೇಘೋದರದೆ ಯಡಗುವ। ಪರಿಯನೊಯ್ಯನೆ ಬಿಟ್ಟು ಭೀಯನು।
ತೊರೆದು ಪರಮೋಲ್ಲಾಸದಿಂ ಕ್ರೀಡಿಪುದು ಸ್ವೇಚ್ಛೆಯಲಿ॥ ೪೭ ॥
ಸುರರೆ ನಲಕೂಬರನ ಶಾಪದ। ದರದೆ ಲಂಕೇಶ್ವರನ ಕರಗಳ।
ಸ್ಪರುಶವಾಗದೆಯುಳಿದ ನಿಮ್ಮಯ ಧರ್ಮಪತ್ನಿಗಳು॥
ಶರೆಯ ಮನೆಯಿಂ ಹೊರಟು ತಮ್ಮಯ। ಸರಸ ಕಬರಿಗಳನ್ನು ಸಡಿಲಿಸಿ-।
ಯೆರೆದುಕೊಳ್ಳಲಿ ಕೇಶಪಾಶಗಳನ್ನು ರಚಿಯಿಸಲಿ॥ ೪೮ ॥
ಒಲಿದು ಸಸ್ಯಂಗಳಿಗೆ ಜಲದನು। ಜಲವ ಸೇಚನ ಮಾಡಿ ತಟ್ಟನೆ।
ತೊಲಗುವಂದದೆ ನೀಲ ಮೇಘಶ್ಯಾಮ ಮಾಧವನು॥

ಖಲನ ತಾಪದೆ ಬಳಲಿದಂತಹ । ಬಲನಿಷೂದನನನ್ನು ಸುರರನು ।
ಲಲಿತ ವಾಗಮೃತದೆ ತೋಷಿಸಿ ಕಣ್ಗೆ ಮರೆಯಾದ ॥ ೪೯ ॥
ಮರವು ತನ್ನಯ ಪೂಗಳಂಶದೆ । ಮರುತನನ್ನನುಸರಿಸುವಂದದೆ ।
ಪರಮ ಪುರುಷನು ಸುರರ ಕಾರ್ಯಕ್ಕಾಗಿಯವತರಿಸಿ ॥
ಧರಣಿ ಮೇಲ್ಬರುತಿಹನು ತಾನೆಂ- । ದರಿತು ದಿವಿಜರು ಸ್ವಾಂಶರೂಪದೆ ।
ಕರಡಿ ವಾನರಗಳಲಿ ಮುಂಚೆಗೆ ಜನುಮ ತಾಳಿದರು ॥ ೫೦ ॥
ಮನುಜವರ ದಶರಥನು ತನ್ನಯ । ತನುಜ ಕಾಮೇಷ್ಟಿಯನು ವಿಧಿವದ್- ।
ಮುನಿವರೇಣ್ಯರ ದ್ವಾರದಿಂದುರೆ ಮುಗಿಸಿದಾಕ್ಷಣಕೆ ॥
ಅನಲದೊಳಗಿಂದೊರ್ವ ಪುರುಷನು । ಕನಕಮಣಿಭೂಷಣದೆ ಮಿನುಗುತೆ ।
ಜನರ ಮನಕಾಶ್ಚರ್ಯ ಬೀರುತೆ ಪ್ರಕಟ ಹೊಂದಿದನು ॥ ೫೧ ॥
ಅರರೆ! ಭುವನಗಳನ್ನು ಜಠರದೆ । ಧರಿಸಿದಂತಹ ಪರಮ ಪುರುಷನ ।
ನಿರತಿಶಯವಾದಂಥ ಸತ್ವದೆ ಕೂಡಿಕೊಂಡಿರುವ ॥
ಚರು ಪಯಸ್ಸಿನ ಪಾಯಸವ ಹಿ- । ಪುರುಷನತಿಶಯ ಸಾಯಸದೆ ತಾಂ- ।
ಸರಸ ಚಾಮೀಕರದ ಹರಿವಾಣದಲಿ ಪಿಡಿದಿಹನು ॥ ೫೨ ॥
ಕರೆದು ನರವರನನ್ನು ತನ್ನಯ । ಕರದೆ ಪರಮಾನ್ನವನು ವಿತರಿಸೆ ।
ಪರಮ ಸಾದರದಿಂದ ಕೋಸಲ ಧರೆಯ ಪಾಲಕನು ॥
ಹರಿಯು ಕ್ಷೀರೋದಧಿಯ ಸಾರವ- । ನಿರದೆ ಕೈಕೊಂಡಂತೆ ಬೇಗನೆ ।
ಗುರುವಿನಪ್ಪಣೆಯಿಂದ ಸ್ವೀಕಾರವನು ಮಾಡಿದನು ॥ ೫೩ ॥
ಮಾರಪಿತ ಮಾವರನು ಸುರ-ನರ- । ನಾರದಾದಿಕರಿಂದ ವಂದಿತ ।
ಚಾರು- ಪಾದಪಯೋಜ ಜಗದಾಧಾರ ಶ್ರೀಹರಿಯು ॥
ಧೀರ ದಶರಥ ರಾಜರಾಜನ । ದಾರೆಯುದರದೆ ಜನುಮ ತಾಳುವ ।
ತೋರ ಪುಣ್ಯದ ಭಾಗಿಗಳು ಮತ್ತಾರು ದೊರೆಯುವರೋ ? ॥ ೫೪ ॥
ತರಣಿ ದ್ಯಾವಾ ಪೃಥ್ವಿಗಳ ಮೇಲ್ । ಕಿರಣಗಳನುರೆ ಹಂಚುವಂತೆಯೆ ।
ಧರಣಿ-ವರ-ದಶರಥನು ತನ್ನಯ ಪೆಂಡರಿರ್ವರಲಿ ॥
ಹರಿಯ ತೇಜದೆ ತುಂಬಿದಂತಹ । ಸರಸ ಚರು-ಪರಮಾನ್ನವನು ತಾ- ।
ನಿರದೆ ಸರಿಯಾಗೆರಡು ಭಾಗಗಳಿಂದ ವಿಂಗಡಿಸಿ; ॥ ೫೫ ॥
ಹಿರಿಯ ಪೆಂಡತಿಯಾದ ಕೋಸಲ । ದೊರೆಯ ತರುಳೆಗೆಯೊಂದು ಭಾಗವ ।
ಪರಮ ಪ್ರೇಮದ ಜಾಯೆ ಕೈಕಯೆಗುಳಿದ ಭಾಗವನು ॥
ಹರುಷದಿಂ ಕರೆಕರೆದು ಕೊಟ್ಟನು । ವರ ಸುಮಿತ್ರೆಗೆ ಸತಿಗಳಿರ್ವರು ।
ಮರೆಯುದೇ ತಮ್ಮೊಳಗೆ ಪಾಲವರ್ನೆಯ ತಿಳಿಸಿದನು ॥ ೫೬ ॥

ಅತಿ ಮನೋಹರವಾದ ಕೋಸಲ- । ಕ್ಷಿತಿಯ ಪತಿಯಿಂಗಿತವ ಬಲ್ಲೀ- ।
ಸತಿಗಳೀರ್ವರು ತಮ್ಮ ಸವತಿಸುಮಿತ್ರೆಯನು ಕರೆದು ॥
ಹಿತದೆ ತಮ್ಮಯ ಭಾಗದರ್ಧವ । ವಿತರಿಸಿದರಾದರದೆ ಮನ್ನಿಸಿ ।
ಯಿತರ ಪೆಣ್ಗಳ ತೆರದೆ ಮಾತ್ಸರ್ಯವನು ತಾಳದಲೆ ॥ ೫೭ ॥
ವಾಣಿ-ಮಾನಸ-ಕೃತಿಗಳಿಂ ಕ- । ಲ್ಯಾಣಿಯಾದ ಸುಮಿತ್ರೆ ತನ್ನಯ ।
ಪ್ರಾಣಪತಿಯಾದಂಥ ದಶರಥ.ನಿತರ ಪತ್ನಿಗಳ ॥
ಪಾಣಿಕಮಲಗಳಿಂದ ಚರ್ವಾ- । ದಾನವನು ಬಲು ಪ್ರೇಮದಿಂ ಕರಿ- ।
ದಾನವಾರಿಯ ನಲಿಗಳಂದದೆ ಗ್ರಹಣಮಾಡಿದಳು ॥ ೫೮ ॥
ಪರಮ ನಿರ್ಮಲ ಚರಿತ ಸರ್ವೇ- । ಶ್ವರನ ತೇಜದೆ ಕೂಡಿದಂತಹ ।
ಸರಸ ಪರಮಾನ್ನವನು ರಾಜನ ಧರ್ಮಪತ್ನಿಗಳು ॥
ನರರ ಸೌಖ್ಯಕ್ಕಾಗಿ ಸೇವಿಸಿ । ತರಣಿ ಕಿರಣಗಳಮೃತಪಿಂಡವ ।
ಧರಿಸುವಂದದೆ ಗರ್ಭಧಾರಣವನ್ನು ಮಾಡಿದರು ॥ ೫೯ ॥
ಅಸಮ ಬಲನಾದಂಥ ದಶರಥ- । ವಸುಧೆಯಾಣ್ಮನ ರಾಜ್ಞಿಗಳು ಪೊಸ- ।
ಬಸುರು ತಾಳಿದರಿಂದಲವರಾ ಮುಖ-ಸರೋಜಗಳು ॥
ಮಿಸುಪ ನಸು ಬಿಳುಪಾದ ವರ್ಣದೆ । ಶಶಿಯಕಾಂತಿಯನಾಂತು ಪೆರ್ಚಿದ ।
ಸುಷುಮೆಯಿಂ ಪ್ರೇಕ್ಷಕರ ಮನಕಾನಂದವಿಯ್ದುಹವು ॥ ೬೦ ॥
ಏಕಕಾಲಕೆ ಬಸುರುತಾಳಿದ । ಲೋಕನಾಥನ ಸ್ತ್ರೀಯರ ಮುಖಗಳು ।
ಸ್ತೋಕಪಾಂಡುರವರ್ಣದಿಂ ಹಸನಾದ ಕ್ಷೇತ್ರದಲಿ ॥
ಹಾಕಿ ಬೀಜಗಳನ್ನು ಪ್ರೇಮದೆ । ಜೋಕೆಮಾಡಿರ್ದಂಥ ಸಸ್ಯಗ- ।
ಳಾಕರದ ತೆರದಲ್ಲಿ ಕಣ್ಗಳಿಗಂದವೀಯ್ದುಹವು ॥ ೬೧ ॥
ಕನಕ ಪರ್ಯಂಕಗಳ ಮೇಲೀ- । ಜನಪನರ್ಧಾಂಗಿಗಳು ಮಲಗಿರೆ ।
ಕನಸಿನೊಳು ತಮ್ಮನ್ನು ಹ್ರಸ್ವಾಕೃತಿಯ ವ್ಯಕ್ತಿಗಳು ॥
ಅನಲದೋಪಾದಿಯಲಿ ಥಳಥಳ । ಮಿನಗುವಂತಹ ಶಸ್ತ್ರದಿಂ ಬಹು ।
ಘನತೆಯಿಂದೆಡೆಬಿಡದೆ ಪೊರೆಯುವದನ್ನು ನೋಡಿದರು ॥ ೬೨ ॥
ಹರಿಯ ವಾಹನನಾದ ಗರುಡನು । ಸರಸ ಪೊಂಗರಿಗಳನು ಪಸರಿಸಿ ।
ಪರಮ ವಿಸ್ತೃತವಾದ ಬೆನ್ನಿನಮೇಲೆ ತಮ್ಮನ್ನು ॥
ಧರಿಸಿ ಬಾನ್ದಳದಲ್ಲಿ ಹಾರುತೆ । ಸರಿಸಿ ಮೇಘಗಳನ್ನು ಹಿಂದಕೆ ।
ಚರಿಪುದನು ನರಪತಿಯ ಪೆಂಡರು ಕಂಡರಂದದಲಿ ॥ ೬೩ ॥
ಹರಿಯ ಕೌಸ್ತುಭ ಹಾರವನು ಶ್ರೀ- । ಹರಿಯ ರಾಣಿಯು ಧರಿಸಿ ತನ್ನಯ ।
ಕೊರಳಿನಲಿ ಹರ್ಷಾತಿರೇಕದೆ ಬಂದು ತಮ್ಮೆಡೆಗೆ ॥

ಸರಸ ಪದ್ಮವ್ಯಜನವನು ನ್ಯಾ- । ವರಿಸಿ ಕರದಲಿ ಪಿಡಿದು ತಮ್ಮ- ।
ನ್ನಿರದೆ ಸೇವಿಸುತಿರುವದನು ನೋಡಿದರು ರಾಜ್ಞಿಗಳು ॥ ೬೪ ॥
ಪರಮ ಪುರುಷನ ಚರಣಕಮಲದೆ । ಹೊರಟ ಗಂಗೆಯ ವಾರಿಯಲಿ ಬಹು ।
ತ್ವರದೆ ಸ್ನಾನವ ಮಾಡಿ ಪ್ರಾತರ್ವಿಧಿಗಳನು ಮುಗಿಸಿ ॥
ಭರದೆ ಸಪ್ತರ್ಷಿಗಳು ತಮ್ಮನು । ಸರಸ ವೇದಾಕ್ಷರಗಳಿಂದಲೆ ।
ಪರಸುವದನೀ ಧರೆಯ ಪತಿ ರಾಜ್ಞಿಯರು ಕೇಳಿದರು ॥ ೬೫ ॥
ಇನಿತು ಪರಿಯಲಿ ತಾವು ನೋಡಿದ । ಕನಸುಗಳನಾ ವನಿತೆಯರು ತ- ।
ಮ್ಮಿನಿಯನಿಗೆ ಸಾದ್ಯಂತವಾಗಿಯೆ ಪೇಳಲಾ ನೃಪನು ॥
ಜನುಮ ಮರಣಾತೀತ ದೇವನು । ತನಗೆ ಸುತರೂಪದಲೆ ಜನಿಸುವ- ।
ನೆನಿತು ಭಾಗ್ಯವಿದೆಂದು ಮನದಲಿ ಮೋದ ತಾಳಿದನು ॥ ೬೬ ॥
ಲೋಕದಲಿ ಚಂದಿರನು ಸಲೆ ಪ್ರ- । ತ್ಯೇಕ ವಾಪಿಯ ಸ್ವಚ್ಛ ಜಲದಲಿ ।
ಯೇಕಕಾಲಕೆ ಬಿಡದೆ ಪ್ರತಿಬಿಂಬಿಸುವ ತೆರದಲ್ಲಿ ॥
ಏಕಮಯನಾಗಿರುವ ದೇವನ- । ನೇಕರೂಪಾತ್ಮಕತೆಯಿಂ ನರ- ।
ಲೋಕಪಾಲನ ಸ್ತ್ರೀಯರ ಗರ್ಭಗಳಲ್ಲಿ ಮೂಡಿದನು ॥ ೬೭ ॥
ಮಕ್ಕಳಿಲ್ಲದ ಕೋಸಲಾಧಿಪ- । ನಕ್ಕರದ ಪಿರಿಜಾಯೆಯುದರದೆ ।
ತಕ್ಕ ಕಾಲಕೆ ಜನಿಸಿದನು ಶ್ರೀಪಕ್ಷಿವಾಹನನು ॥
ದಿಕ್ಕುಗಳು ಬೆಳಗಿದವು ತಿಮಿರಾ- । ಧಿಕ್ಯದಿಂ ಸೊಕ್ಕಿರ್ದ ನಿಶೆಯದು ।
" ಲಕ್ಕ " ನೇ ಪ್ರಭೆ-ವಳ್ಳಿ-ಬೆಳಕಿಲೆ ಬೆಳಗುವಂದದಲಿ ॥ ೬೮ ॥
ಕಾನುನನು ಗೆಲ್ದಂಥ ತನ್ನಭಿ- । ರಾಮರೂಪದೆ ಕಣ್ಣುಗಳಿಗಾ- ।
ರಾಮವನು ಕೊಡುವಂಥ ಪುತ್ರನ ಕಂಡು ದಶರಥನು ॥
ರಾಮನೆಂದೀ ಪೂರ್ಣಕಾಮಗೆ । ನಾಮಧೇಯವನಿತ್ತು ಸಕಲರ ।
ಕಾಮುವನು ಪೂರೈಸಿದನು ಬಹು ವಿತ್ತವನ್ನಿತ್ತು ॥ ೬೯ ॥
ಅರರೆ ! ರಘುಕುಲ-ದೀಪನಾದೀ- । ಪರಮ ಪುರುಷನ ಕಾಂತಿಯಿಂ ನರ- ।
ವರನ ರಾಜ್ಞಿಯ ಸೂತಿಕಾಗೃಹದಲ್ಲಿ ಪ್ರಜ್ವಲಿಸಿ ॥
ಉರಿವ ಸೊಡರಿನ ದೀಪ್ತಿಯದು ಗಡ । ತರಣಿಕಿರಣಗಳಿಂದ ನಿಶೆಯಲಿ ।
ಮಿರುಗುತಿಹ ಖದ್ಯೋತ- ತೇಜದ ತೆರದೆಯಡಗಿದುದು ॥ ೭೦ ॥
ವರ ಶರತ್ತಿನ ಕಾಲದಲಿ ಸುರ- । ವರರ ತೊರೆ-ಕರೆಯಲ್ಲಿ ನೀಡಿದ ।
ಸರಸಿಜಂಗಳ ಬಲಿಯ ತೆರದಲಿ ಶೋಭೆಯನು ತಾಳ್ದು ॥
ಧರೆಯಪಾಲನ ರಾಜ್ಞಿ-ಶಾತೋ- । ದರಿಯ ಹತ್ತರ ಸ್ವಾಪ ಮಾಡಿದ ।
ಹರಿಯ ಸುಂದರ ಪರಮೆಯದು ಕಣ್ಗೆಸೆದು ತೋರಿದುದು ॥ ೭೧ ॥

ಕನಕ-ಧನ-ಸಂಪನ್ನ ಜನರನು । ವಿನಯವದು ಭೂಷಿಸುವ ತೆರದಲಿ ।
ಜನನಿ ಕೈಕೇಯ್ಯುದರದಲಿ ಕೋಸಲದ ಜನಪನಿಗೆ ॥
ಇನಿತರೊಳು ಮತ್ತೋರ್ವ ತನಯನು । ಜನಿಸಿದನು ಭರತಾಭಿಧಾನದೆ ।
ಸುನಯದಿಂ ದಿನಕುಲವನಾತನು ಧನ್ಯನೆನಿಸಿದನು ॥ ೨೨ ॥
ವರ ಸುಮಿತ್ರಾ-ದೇವಿಯುದರದೆ । ಸರಸ ಲಕ್ಷಣದಿಂದ ಕೂಡಿದ ।
ದುರುಳರರಿ-ಶತ್ರುಘ್ನ-ಲಕ್ಷ್ಮಣರೆಂಬ ಪೆಸರಿನಲಿ ॥
ಪರಮ ವಿಕ್ರಮಶಾಲಿಗಳು ಗಡ- । ತರುಳರೀರ್ವರು ಪುಟ್ಟಿದರು ಗುರು- ।
ಹಿರಿಯರೆಲ್ಲರು ಮೋದಸಾಗರದಲ್ಲಿ ಮುಳುಗಿದರು ॥ ೨೩ ॥
ಸಿರಿಯ ವರಗಿರಿಧರ-ವರೇಣ್ಯನು । ಧರೆಯ ಮೇಲವತಾರ ಧರಿಸಲು ।
ಸುರರ ಪುರದೈಶ್ವರ್ಯವೆಲ್ಲವು ಮೃತ್ಯುಲೋಕದಲಿ ॥
ಚರಿಸಿ ಬಂದಿರುವಂತೆ ನಾನಾ- । ತೆರದ ರುಜಗಳು ದೂರ ಪೋದವು ।
ಹರುಷದಿಂ ಬಾಳಿದರು ಮನುಜರು ಪರಮ ಸೌಖ್ಯದಲಿ ॥ ೨೪ ॥
ಹರಿಯು ಚತ್ವಾರ್ಯಂಶಗಳಲೀ- । ಧರೆಯ ಮೇಲವತರಿಸೆ ರಾವಣ- ।
ದರದೆ ಹೆದರಿದ ವರುಣ ಮೊದಲಾದವರು ಭೀತೊರೆದು ॥
ವಿರಜವಾದಂಥೆರಲದುಸುರವ । ಭರದೆ ಬಿಡುತಿಹರೆಂಬ ತೆರದಲಿ ।
ನರರ ಕಣ್ಗಳಿಗಾಗಿ ಭೂತಲದಲ್ಲಿ ತೋರಿದುದು ॥ ೨೫ ॥
ಸುರರ ರಿಪು ರಾವಣನ ಪೀಡೆಯು । ಜರಗಿತೆಂದಾನಂದದಿಂದುರೆ ।
ತೊರೆದು ಧೂಮವನಾಗ ವೈಶ್ವಾನರನು ಬೆಳಗಿದನು ॥
ತರಣಿಯಾಗಸದಲ್ಲಿ ತನ್ನಯ । ಸರಸ ಕಿರಣಗಳನ್ನು ಪಸರಿಸಿ ।
ನಿರತಿಶಯ ಪ್ರಭೆಯಿಂದ ನರರಿಗೆ ಹರುಷ ಬಡಿಸಿದನು ॥ ೨೬ ॥
ಎಂದು ಶ್ರೀಗೋವಿಂದನಿಳೆಯೊಳು । ಹೊಂದಿ ಜನಿಯನು ಬಂದನಂದೇ ।
ಮಂದಮತಿಯಾದಂಥ ರಾತ್ರಿಂಚರರ ವೈಭವವು ॥
ಕುಂದಿ ಪೋಯಿತು ರಾವಣನ ಸಿರಿ । ಚಂದವಾದ ಕಿರೀಟಮಣಿಗಳ ।
ಬಿಂದುರೂಪದೆ ವಿಪುಲ ಕಣ್ಣೀರವನು ಸುರಿಸಿದಳು ॥ ೨೭ ॥
ಭೂಮಿಪತಿ ದಶರಥನ ಜಠರದೆ । ಕಾಮಜನಕನ ಜನುಮವಾಗಲು ।
ವ್ಯೋಮಗಾಮಿಗಳಾದ ದಿವಿಜರು ಸ್ವರ್ಗಲೋಕದಲಿ ॥
ರಾಮಜನ್ಮನಿಮಿತ್ಯದಿಂ ಬಹು । ಪ್ರೇಮದಿಂ ದುಂದುಭಿಗಳನ್ನುರೆ ।
ಹೇಮ-ನಿರ್ಮಿತ ಗುಣಿಗಳಿಂದಲೆ ಬಾರಿಸಿದರಾಗ ॥ ೨೮ ॥
ವನಜ-ನೇತ್ರ-ವಿಚಿತ್ರ ಚರಿತನ । ಜನುಮದುತ್ಸವವನ್ನು ಮಾಡಲು ।
ಮನಸಿನಿಂ ವೈಮಾನಿಕರು ಸಂತಾನ ಪೂಗಳನು ॥

ಘನವು ಮಳೆಗರೆದಂತೆ ಕೋಸಲ । ಜನಪ ದಶರಥ ರಾಜರಾಜನ ।
ಮನೆಯು ಮೇಲ್ಸುರುಸಿದರು ಸುರಭಿಯು ಹರಡಿಕೊಂಡಿಹುದು ॥ ೭೯ ॥
ಅತಿ ಪರಾಕ್ರಮಿಯಾದ ನೃಪ ದಶ- । ರಥನ ತನುಜರ ಜಾತ ಮುಂತಾ- ।
ದಿತರ ಕೆಲ ಸಂಸ್ಕಾರಗಳು ವಿಧಿಯಂತೆ ಮುಗಿದಿರಲು ॥
ಪಿತನ ಮಹದಾನಂದದೊಂದಿಗೆ । ಪ್ರಥಿತಶುಕ್ಲೇಂದುವಿನ ತೆರದಲಿ ।
ಸತತ ಕುವರರು ಬೆಳೆದು ತಿಳಿಪ್ರಾಯವನು ತಾಳಿದರು ॥ ೮೦ ॥
ಪರಮ ತೇಜದೆಯುರಿವ ವೈಶ್ವಾ- । ನರನ ಜ್ವಾಲೆಯೊಳೆರೆಯೆ ಘೃತವನು ।
ಭರದೆಯುದು ಹೆಚ್ಚಾಗಿ ಬೆಳಗುವ ತೆರದೆ ಕೋಸಲದ ॥
ಅರಸು-ತರುಳರ ಸಹಜ ಶುದ್ಧಾ- ।ಚರಣ-ಸೌಜನ್ಯಾದಿ ಗುಣಗಳು ।
ಗುರು ವಸಿಷ್ಠನ ಶಿಕ್ಷಣದೆ ಯಭಿವೃದ್ಧಿ ಹೊಂದಿದವು ॥ ೮೧ ॥
ಒಂದಕೊಂದ ವಿರೋಧವಿಂದಲೆ । ನಂದನೋದ್ಯಾನದಲಿ ಋತುಗಳು ।
ಚಂದದಿಂದಸುಕೂಲಿಸುವ ತೆರದಿಂದ ದಶರಥನ ।
ನಂದನರು ತವೆಸ್ನೇಹಗೆಯುತಿತಯು । ಬಂಧುಪ್ರೇಮದೆ ನಡೆದು ತಮ್ಮಯ ।
ಕುಂದವಿಲ್ಲದ ಕುಲಕೆ ಭೂಷಣರಾಗಿ ಮಿನುಗಿದರು ॥ ೮೨ ॥
ಭೂಮಿಪಾಲನ ಪುತ್ರಕಲಿ ಶ್ರೀ- । ರಾಮಲಕುಮಣರೊಂದುಕಡೆಯಲಿ ।
ಸೇಮದಿಂ ಶತ್ರುಘ್ನ-ಭರತರು ಬೇರೆಕಡೆಯಲ್ಲಿ ॥
ಪ್ರೇಮದಿಂ ಜೋಡಾಗಿ ರಮಿಸರು । ಕೋಮಲಾಂತಃಕರಣದಿಂದುರೆ ।
ಕಾಮಿಸುವರನ್ಯೋನ್ಯಹಿತವನ್ನೈಕ್ಯಭಾವದಲಿ ॥ ೮೩ ॥
ವ್ಯೋಮಜಾಗ್ನಿಗಳಲ್ಲಿ ಹಾಗೆಯೆ । ಸೋಮಸಾಗರಗಳಲಿ ಮಿನುಗುವ ।
ಪ್ರೇಮಭಾವವು ಭರತಶತ್ರುಘ್ನರರ ಮಧ್ಯದಲಿ ॥
ಸಾಮರಸ್ಯದೆ ತೋರುವದು ಮೇಣ್ । ರಾಮಲಕ್ಷ್ಮಣರಲ್ಲಿ ಭೇದದ ।
ನಾಯಕಾಸ್ಪದವಿಲ್ಲದಲೆ ಘನ ಪ್ರೀತಿ ಬಲಿತಿಹುದು ॥ ೮೪ ॥
ಘನಪಯೋದಂಗಳವು ಬೇಸಿಗೆ- । ಕೊನೆಯಭಾಗದಲೆಲ್ಲ ಮನುಜರ ।
ಮನಸಿಗತ್ಯಾನಂದವೀಯುವ ತೆರದೆ ಕೋಸಲದ ॥
ಜನಪ ದಶರಥರಾಜ ರಾಜನ । ತನುಜರೆಲ್ಲರು ಮೇರೆಯಿಲ್ಲದ ।
ಸುನಯಶೌರ್ಯಗಳಿಂದ ಪ್ರಜೆಗಳಿಗಂದಗೊಡುತಿಹರು ॥ ೮೫ ॥
ಧರಣಿ ದೈತ್ಯರ ಭಾರವನ್ನುರೆ । ಧರಿಸಲಾರದೆ ಕ್ಲೇಶಬಡುತಿರೆ ।
ಕರುಣೆಯಿಂ ಶ್ರೀಹರಿಯು ಪೊರೆಯುವದಕ್ಕೆ ಯಾಕೆಯನು ॥
ಪರಮ ಪುರುಷಾರ್ಥಗಳರೂಪದೆ । ಧರೆಯಪತಿಯುದರದಲಿ ನಾಲ್ಕು ।
ತರುಳರಲಿಯವತಾರ ತಾಳಿಹನೆಂದು ತೋರಿದುದು ॥ ೮೬ ॥

ಬಡಗಣವೆ ಮೊದಲಾದ ದಿಶೆಗಳ । ನಡುವೆಯಿರ್ದಂಥೆಲ್ಲ ಭೂತಲ- ।
ದೊಡೆಯನನು ಬಹುಮೌಲ್ಯರತ್ನಗಳಿಂದ ಕಡಲುಗಳು ॥
ಬಿಡದೆ ಮನ್ನಿಸುವಂತೆ ತರುಳರು । ದೃಢತೆಯಿಂ ಕಡುಮಮತೆಯಲಿ ಗಡ- ।
ಪಡೆದ ದಶರಥ ನೃಪನನುಪಚರಿಸುವರು ನಿತ್ಯದಲಿ ॥ ೮೭ ॥
ನಾಕು ಪಲ್ಲಗಳ ಕರಿಯ ತೆರದಲಿ । ನಾಕು ತೋಳ್ಗಳ ಹರಿಯ ತೆರದಲಿ ।
ನಾಕು ಪರಿ ಫಲಸಿದ್ಧಿಗೊಳಿಸುವ ನೀತಿಯಂದದಲಿ ॥
ಏಕಕಾಲಕೆ ಮಿಸುಗುವಂಥೀ- । ನಾಕು ಮಂದಿ ಸುಪುತ್ರರಿಂದಲೆ ।
ನಾಕು ದಿಶೆಗಳ ರಾಜರೊಡೆಯನು ಶೋಭೆ ತಾಳಿಹನು ॥ ೮೮ ॥

೧೧ನೆಯ ಸರ್ಗ.

ಒಂದು ದಿನ ಕೌಶಿಕನು ರಾಜನ । ಮಂದಿರಕ್ಕೈತಂದು ಯಜ್ಞಕೆ ।
ಸಂಧಿಸುವ ಪ್ರತಿಬಂಧವನ್ನರೆ ದೂರಗೈಯ್ಯಲ್ಕೆ ॥
ಕಂದನಾಗಿಹ ರಾಮನನು ಕಳು- । ಹೆಂದು ತಂದೆಗೆ ಕೇಳಿದನು ವಯ ।
ದಿಂದ ತೇಜಸ್ವಿತೆಗೆ ತೊಂದರೆಯೆಂತು ಬರುತಿಹುದೋ ॥ ೧ ॥
ಮುನಿಯು ಯೋಚನೆಯನ್ನು ಮಾಡಲು । ತನಗೆ ಶ್ರಮದಿಂ ಲಭಿಸಿದಂತಹ ।
ತನಯ ಲಕ್ಷ್ಮಣನಿಂದ ಕೂಡಿದ ರಾಮಚಂದ್ರನನು ॥
ಘನ ವಿಚಕ್ಷಣನಾದ ರಾಜನು । ವಿನಯದಿಂದರ್ಪಿಸಿದನಾಗಲೆ ।
ಯಿನಕುಲೋದ್ಭವರಲ್ಲಿ ಪ್ರಾರ್ಥನೆ ವ್ಯರ್ಥವಾಗುವದೆ? ॥ ೨ ॥
ತರುಳರನು ಕಳುಹಲ್ಕೆ ತನ್ನಯ । ಪುರದ ದಾರಿಗಳನ್ನು ಗಡ ಸಿಂ- ।
ಗರಿಸಲಪ್ಪಣೆಯನ್ನು ರಾಜನು ಮಾಡುವಷ್ಟರಲಿ ॥
ತ್ವರದೆ ಮೇಘೋದರದೆ ಜಲದನು । ಸುರಿಸಿದನು ಜಲವನ್ನು ಮಾರುತ- ।
ನಿರದೆ ಪುಷ್ಪಗಳನ್ನು ಹರಡಿದನ್ನೆಲ್ಲ ಕಡೆಯಲ್ಲಿ ॥ ೩ ॥
ಗುರುವಿನಪ್ಪಣೆಯಂತೆ ನಡೆಯುವ । ಕರದೆ ಕಾರ್ಮುಕವನ್ನು ಧರಿಸಿದ ।
ತರುಳರೀರ್ವರು ತಂದೆ ಪಾದಕೆ ಬಂದು ವಂದಿಸಲು ॥
ಕರುಣೆಯಿಂ ಬಿಗಿದಪ್ಪಿಯವರನು । ಪರಿಸಿ ಮುದ್ದಿಕ್ಕಿನು ಬೇಗನೆ ।
ಯೆರೆದು ಬಿಟ್ಟನು ತನ್ನ ಕಣ್ಣೀರ್ವನಿಗಳಿಂ ನೃಪನು ॥ ೪ ॥
ತಂದೆಯೀಕ್ಷಣ-ಜಲದೆ ತೊಯ್ದಿಹ । ಚಂದವಾದ ಶಿಖಂಡಕುಳ್ಳಾ- ।
ನಂದನರು ಪುರವೀಥಿಯಿಂ ಮುನಿಯೊಡನೆ ನಡೆದಿರಲು ॥
ಅಂದು ಪೌರಾಂಗನೆಯು ರಕ್ಷಿಗ- । ಳಿಂದ ದಾರಿಯೊಳೆಲ್ಲ ಕಡೆಯಲಿ ।
ಚಂದದಿಂ ಪೊಸದೆನಿಪ ತೋರಣಗಳನು ಕಟ್ಟಿಹರು ॥ ೫ ॥

ರಾಮ-ಲಕ್ಷ್ಮಣರನ್ನೆಯಾಗರ । ಕ್ಷೇಮಕಾರ್ಯಕ್ಕಾಗಿಯೊಯ್ಯುವ ।
ಕಾಮವನು ಸತ್ಕಾನುಗಾಧಿಜ ಮುನಿಯು ಪ್ರಕಟಿಸಲು ॥
ಭೂಮಿಪಾಲನು ಸೈನ್ಯಸೇವಕ- । ಸ್ತೋಮವನ್ನವರೊಡನೆ ಕಳುಹದೆ ।
ಪ್ರೇಮಪೂರ್ವಕವಾಗಿ ತನ್ನಾಶಿಷವ ಕೊಟ್ಟಿಹನು ॥ ೬ ॥

ವಿಮಲ ತೇಜದಿ ಮಿನುಗುವಂತಹ । ದ್ಯುಮಣಿಗತ್ಯನುಸಾರವಾಗಿಯೆ ।
ಕ್ರಮಿಪ ಮಧು ವೈಶಾಖಮಾಸಗಳಂತೆ ಮುನಿಯೊಡನೆ ॥
ಮಮತೆಯಿಂ ನರವರನ ತರುಳರು । ನಮಿಸಿ ತಾಯ್ಗಳ ಪಾದಗಳನುರೆ ।
ಗಮಿಸಿದರು ಗಾಧಿಜನ ಪುಣ್ಯಾಶ್ರಮದ ಪಥವಿಡಿದು ॥ ೭ ॥

ಮಳೆಯ ಕಾಲದ ಕೂಲಮೀರಿ- । ದಿಳೆಯ ಮೇಲಿನ ಬಲಿತು ಹರಿಯುವ ।
ಹೊಳೆಯ ನೀರಿನ ಸೆಳವಿನಂದದೆ ತೀವ್ರಗತಿಯುಳ್ಳ ॥
ನಳಿನನಾಭ-ಸುಮಿತ್ರೆಯಣುಗರ । ಚಲುವ ಚಂಚಲವಾದ ಕೋಲ್ಗಳು ।
ಲಲಿತ ವೀಚಿಗಳಂತೆ ಕಣ್ಗಳಿಗೆಸೆದು ತೋರಿದವು ॥ ೮ ॥

ಮುನಿವರೇಣ್ಯನು ದಾರಿಯಲಿ ನೃಪ- । ತನುಜರಿಗೆ ಮಂತ್ರೋಪದೇಶವ ।
ಕನಿಕರದೆ ಮಾಡಲ್ಕೆಯದರ ಪ್ರಭಾವದಿಂದವರ ॥
ವನದೆ ಮಾರ್ಗಕ್ರಮಿಸು ಶ್ರಮವೆ- । ಳ್ಳಿನಿತು ತೋರದೆ ತಮ್ಮ ಮನೆಯಲಿ ।
ಜನನಿಗಳ ಮುಂದಾಡುವಂದದೆ ಸುಗಮವಾಗಿಹುದು ॥ ೯ ॥

ವೃಂದನೋಚಿತರಾದ ದಶರಥ- । ನಂದನರು ಪುಣ್ಯಾಶ್ರಮದ ಪಥ- ।
ದಿಂದ ನಡೆದಿರಲಾಗಿ ವಿಶ್ವಾಮಿತ್ರ ಮುನಿವರನು ॥
ಹಿಂದಿನೈತಿಹ್ಯವನು ಪೇಳು- । ತ್ತಿಂದಿರಾವರ ಲಕ್ಷ್ಮಣರ ಮನ- ।
ದಂದವನು ಬೆಳೆಸುತ್ತೆ ಮಾರ್ಗದ ಶ್ರಮವ ಕಳೆದಿಹನು ॥ ೧೦ ॥

ಪರಮ ಸುಸ್ವರದಿಂದ ಖಗಗಳು । ಸರಸ ಸವಿ-ನೀರಿಂದ ಕೆರೆಗಳು ।
ವರ ಸುವಾಸದ ಸುಮಪರಾಗಗಳಿಂದ ಲೆರಲವದು ॥
ತರಣಿ-ತಾಪವ ದೂರ ಮಾಡಲು । ನೆರಪಿ ಮೋಡಗಳನ್ನು ಜಲದವು ।
ತರುಳರನು ಸಾದರದೆ ಯುಪ-ಚರಿಪಂತೆ ತೋರಿದವು ॥ ೧೧ ॥

ಸರಗಳೊಳಗಿನ ಸರಸಿಜಂಗಳು । ತರಣಿ ತಾಪವ ದೂರ ಮಾಡುವ ।
ಮರದ ಶಾಖೆಗಳಾದರೂ ಮುನಿವರರ ಮಾನಸಕೆ ॥
ಧರೆಯ ಪಾಲನ ವರಕುಮಾರರ । ಪರಮಸುಂದರವಾದ ಮುಖಗಳ ।
ದರುಶನದ ತೆರದಲ್ಲಿ ಹರುಷವನೀಯಲಿಲ್ಲ ಕಣಾ ॥ ೧೨ ॥

ಉರಿವ ಹರನೇತ್ರಕ್ಕೆ ಗುರಿಯಾ- । ಗಿರುವ ಪೂಶರನಾದ ಕಾಮನ
ವರ ತಪೋವನದಲ್ಲಿ ಕಾರ್ಮುಕವನ್ನು ಧರಿಸಿರುವ ॥

ಸುಪರಮ ಪುರುಷನು ತನ್ನ ರೂಪದೆ । ದುರುಳತನವನ್ನಳಿದ ರುಚಿರ ।
ಸ್ಮರನ ಪ್ರತಿನಿಧಿಯಂತೆ ಕಣ್ಗಳಿಗಂದು ತೋರಿದನು ॥ ೧೩ ॥
ಮುನಿಯಗಸ್ತಿಯ ಶಾಪವನು ಮೀಣ್‌ । ಜನರ ಹಿಂಸೆಯ ಮಾಳ್ಪಯಕ್ಷನ ।
ತನುಜೆಯಿತಿಹಾಸವನು ವಿಶ್ವಾಮಿತ್ರನಿಂ ಕೇಳಿ ॥
ಜನಪತನುಜರು ತಮ್ಮ ಭೀಕರ । ಧನುಗಳಿಗೆ ಹೆದೆಗಳನು ಜಿಗಿದರು ।
ವನವ ನಡುಗಿಸುವಂತೆ ಧ್ವನಿಗಳನುಂಟುಮಾಡಿದರು ॥ ೧೪ ॥
ಕೇಳಿ ಧನು-ಟಂಕಾರರವವನು । ಜೋಲು ಬಿದ್ದಿರುವಂಥ ಮನುಜ ಕ- ।
ಪಾಲ-ಕುಂಡಲಗಳನು ಧರಿಸಿದ ಭೀಕರಾಕೃತಿಯ ॥
ಕಾಳರಾತ್ರಿಯ ವರ್ಣದತಿ ವಿ- । ಕ್ರಾಳರೂಪದ "ತಾಡಿಕೆಯು" ಮುನಿ- ।
ಬಾಲಕರ ಮುಂಭಾಗದಲಿ ಬಂದಾಗ ನಿಂತಿಹಳು ॥ ೧೫ ॥
ಪ್ರೇತ-ಭೂಮಿಕೆಯಿಂದಲೆದ್ದಿಹ । ಪೂತಿಗಂಧಿಗಳಿಂದ ಕೂಡಿದ ।
ವಾತದಿಂದತಿ ಶಬ್ದಮಾಡುತ ಕಣ್ಗಳನು ಕಿಸಿದು ॥
ಪ್ರೇತ-ವಸ್ತ್ರಗಳನ್ನು ಧರಿಸಿದ । ಭೀತಿದಾಯಕ ರಾಕ್ಷಸಿಯು ಶ್ರೀ- ।
ಭೂತ ಭಾವನನೆದುರುಗೊಂಡಳು ಪರಮ ರಭಸದಲಿ ॥ ೧೬ ॥
ಪರಮ ವಿಸ್ತೃತವಾದ ಕಟಿಯಲಿ । ಕರಳಿನೊಡ್ಯಾಣವನು ಧರಿಸಿದ ।
ದುರುಳ ರಾಕ್ಷಸಿಯಾದ ತಾಡಿಕೆ ತನ್ನ ಕರವನ್ನು ॥
ಭರತನಾಗ್ರಜನನ್ನು ವಧಿಸಲು । ಭರದೆ ಮೇಲಕ್ಕೆತ್ತಲಾತನು ।
ಶರದೆಯವಳನು ಹೊಡೆದು ಧರಣೀ ತಲಕೆಕೆಡಹಿದನು. ॥ ೧೭ ॥
ಅರೆಯ ಕಿಂತತಿ ಕಠಿಣತರವಾ- । ಗಿರುವ ರಾಕ್ಷಸಿಯುರದ ಭಾಗಕೆ ।
ಭರದೆ ಶರವನು ಹೊಡೆದು ರಾಮನು ದ್ವಾರವನು ಮಾಡೆ ॥
ಮರಣವನ್ನೀವರೆಗೆಯರಿಯದ । ದುರುಳರಾಕ್ಷಸ-ಜೀವಕೋಟಿಯ ।
ಪುರಕೆ ಪೋಗಲು ಧರ್ಮರಾಜಗೆ ಮಾರ್ಗದೊರೆತಿಹುದು. ॥ ೧೮ ॥
ಕಡು ಪರಾಕ್ರಮಿಯಾದ ರಾಮನು । ಹೊಡೆದ ಬಾಣವು ತಾಡಿಕೆಯ ಧಡ ।
ಕಡೆದ ತಾಡಿನ ಗಿಡದ ತೆರದಲಿ ಪೊಡವಿ ಮೇಲ್ಬೆಡಹಿ ।
ಗಡನೆ ರಕ್ಕಸಿಯಡವಿಯನು ಮೇ- । ಗೊಡೆಯ ದಶಕಂಧರನ ಸಿರಿಯನು ॥
ಬಿಡದೆಯೊಂದೇ ಕಾಲದಲಿ ಗಡಗಡನೆ ನಡುಗಿಸಿತು. ॥ ೧೯ ॥
ಮಾರಶರದಾಹತಿಗೆ ನಾರಿಯು । ಜಾರಪತಿ ಸಂಕೇತನಿಲಯಕೆ ।
ಚಾರು ಕೇಸರ-ಗಂಧದಿಂ ತನ್ನಂಗವನು ತೊಡೆದು ॥
ಸೇರುವಂದದೆ ರುಧಿರಲಿಪ್ತಳ- । ದೀರದಿಂದಂತಕನ ಪ್ರಾಣೇಶ-ಸದನದ ।
ದಾರಿಯಿಂದೈದಿದಳು ತಾಡಿಕೆ ರಾಮಶರಹತಳು ॥ ೨೦ ॥

‡ ಯಮ.

ಸೊಕ್ಕಿನಿಂ ಬೆಳೆದಂಥ ತಾಡಿಕೆ । ರಕ್ಕಸಿಯು ಭಯಹರಣ ಮಾಡಿದ ।
ಚಿಕ್ಕ ಪ್ರಾಯದ ದಶರಥಾತ್ಮಜನಾದ ರಾಘವನ ॥
ವಿಕ್ರಮವ ಕಂಡಾಗ ಗಾಧಿಜ- । ನಕ್ಕರದೆ ರಾಕ್ಷಸರ ಕೊಲ್ಲುವ ।
ಮಿಕ್ಕಿಮೀರಿದಮೋಘಶಸ್ತ್ರವನಿತ್ತನಾತನಿಗೆ ॥ ೨೧ ॥

ಆ ಮಹಾಮುನಿರಾಜನಿಲ್ಲಿಯೆ । ವಾಮನಾಶ್ರಮವಿದ್ದಿತೆಂದಾ- ।
ಕಾಮ ಜನಕನಿಗರುಹೆ ಮುಂಚಿನ ಕಾಲದಲಿ ತಾನು ॥
ಭೂಮಿ ಮೇಲವತರಿಸಿ ಮಾಡಿದ । ಶೀಮೆಯಿಲ್ಲದ ವಿಕ್ರಮದ ಕಥೆ ।
ಕೋಮಲಾಂಗನು ಸ್ಮರಿಸದಿರ್ದರು ಹರುಷ ತಾಳಿದನು. ॥ ೨೨ ॥

ತ್ವರದೆಯಂತೇ ವಾಸಿಗಳು ಪರಿ- । ಪರಿಯ ಪೂಜಾದ್ರವ್ಯಗಳನಾ ।
ಹರಿಸಿ, ತರುಗಳು ಪಲ್ಲವಂಗಳ ಕರಗಳನು ಮುಗಿದು, ॥
ಎರಳೆಗಳು ಪೆರ್ಗಣ್ಣುಗಳನುರೆ । ತೆರೆದು, ಮುನಿಯಾಶ್ರಮದೆ ದಾರಿಯ- ।
ನಿರದೆ ನೋಡುತ್ತಿರುವ ಸಮಯದೆ ಬಂದ ಗಾಧಿಜನು. ॥ ೨೩ ॥

ತರಣಿ-ಚಂದ್ರರು ತಮ್ಮ ಸುಂದರ- । ಕರಗಳಿಂದೀಲೋಕದಲ್ಲಿಯ ।
ಭರದ ಕತ್ತಲೆಯನ್ನು ದೂರೀಕರಿಪ ತೆರದಲ್ಲಿ ॥
ಅರಸು ತರುಳರು ಮುನಿಯು ದೀಕ್ಷೆಯ । ಧರಿಸಿ ಕುಳಿತಿರುವಂಥ ಕಾಲದೆ ।
ಶರಗಳಿಂ ವಿಘ್ನಪ್ರತ್ಯೂಹಗಳನುರೆ ದೂರಮಾಡಿಹರು. ॥ ೨೪ ॥

ಬಂಧುಜೀವಕ ಕುಸುಮ ಪರಿಮಿತಿ- । ಯಿಂದ ರಕ್ತದ ಬಿಂದುಗಳು ಬಹು- ।
ಚಂದವಾದಹ ವೇದಿಯಲಿ ಬೀಳಲ್ಕೆ ಋತ್ವಿಜರು ॥
ತೊಂದರೆಯು ಕ್ರತುಕಾರ್ಯದಲಿ ತಮ- । ಗಿಂದು ಬಂದಿಹುದೆಂದು ಮನದಲಿ ।
ನೊಂದು ಮುಂದಿನ ದಾರಿಗಾಣದೆ ಭ್ರಾಂತರಾಗಿರಲು ॥ ೨೫ ॥

ತೆಗೆದು ಮೂಡಿಗೆಯಿಂದ ಬಾಣವ । ನೆಗಹಿ ಮೊಗವನು ರಾಮಚಂದ್ರನು ।
ಮುಗುಲಿನೆಡೆಯಲಿ ಗೃಧ್ರಖಗಗಳ ಪಕ್ಷಹತಿಯಿಂದ ॥
ಒಗೆದ ಮಾರುತದಿಂದ ಚಲಿಸುವ । ಬಗೆಬಗೆಯ ಧ್ವಜಪಟಗಳುಳ್ಳಹ ।
ಹಗೆಗಳಾಗಿರುವಂಥ ರಕ್ಕಸರನ್ನು ನೋಡಿದನು ॥ ೨೬ ॥

ಸಲಿಲದೊಳು ಸಂಚರಿಪ ನಿರ್ಬಲ- । ಕುಲದ ರಾಜಿಲಗಳನು ಖಗಪತಿ- ।
ಯುಳಿದು ಭೂತಲದಲ್ಲಿ ಬೆಳೆದಿರುವಂಥ ವ್ಯಾಲಗಳ ॥
ಬಲದೆ ಲಕ್ಷಿಸುವಂತೆ ರಾಘವ- । ನೆಳೆದು ಬಿಲ್ದಾರವನು ಬೇಗನೆ ।
ಮುಳಿದು ಮಾರಿಚ ಮೇಣ್ ಸುಬಾಹುಗಳನ್ನು ಗುರಿಮಾಡಿ ॥ ೨೭ ॥

ಮಾರುತನ ಜವದಲ್ಲಿ ಮೀರಿದ । ಮಾರುತಾಸ್ತ್ರವ ಪೂಡಿ ಚಾಪದೆ ।
ಸಾರಸಾಕ್ಷನು ಪೊಡೆಯಲದು ಬಾನ್ದಳದ ದಾರಿಯಲಿ ॥

ಘೋರರವವನು ಮಾಡಿರಾಕ್ಷಸ- ! ಮಾರಿಚನ ಹೃದ್ಭಾಗದಲಿ ತಾಂ ।
ಸೇರಿ ಯಾತನ ಶುಷ್ಕಪತ್ರದ ತೆರದೆಯುರುಳಿಸಿತು ॥ ೧೮ ॥
ಕುಟಿಲ ಮಾಯಾ ಯುದ್ಧಸಂಭ್ರಮ- । ಘಟಕನಾದ ಸುಬಾಹು ತನ್ನಯ ।
ಕಟಕವನ್ನಾಕಾಶಪಥದಲ್ಲಿರಿಸಿ ಕಾದುತಿರೆ ॥
ಪಟುತರಾಂಗನು ನಿಶಿತಬಾಣದೆ । ಹಟದೆ ಯವನಾಂಗಗಳ ಖಂಡಿಸಿ ।
ಕಟನೆ ಕೀಟಕಪಕ್ಷಿಗಳಿಗವುಗಳನು ನೀಡಿದನು ॥ ೧೯ ॥
ಮುನಿಯಯಾಗದ ವಿಘ್ನತೊಲಗಲು । ಜನಪ ದಶರಥರಾಜ ತನುಜರ ।
ಗುಣಗಳನು ಚನ್ನಾಗಿ ಬಣ್ಣಿಸಿ ಬಳಿಕ ಯಾಜಕರು ॥
ಘನ ತಪೋನಿಧಿಯಾದ ಗಾಧಿಜ । ಮುನಿಯು ಕ್ರತುವನು ಮುಗಿಸಿ ಕ್ರಮದಿಂ ।
ಮನೆಗೆ ಮುನಿಯುಪ್ಪಣೆಯು ಮೇರೆಗೆ ತೀವ್ರ ಸಾಗಿದರು ॥ ೨೦ ॥
ಮುಗಿಯೆ ಕ್ರತು ಮುನಿರಾಜರಾಜನು । ಮುಗಿಸಿ ಯವ ಭೃಥವನ್ನು ಕರಗಳ ।
ಮುಗಿದ ಕೋಸಲದೇಶದೊಡೆಯನ ಚಿಕ್ಕಬಾಲಕರ ॥
ಮೊಗಗಳನು ನೋಡುತ್ತೆ ಹರುಷದೆ । ಮುಗುಳುನಗೆಯಿಂ ನಕ್ಕು ತನ್ನಯ ।
ಮಿಗಿಲು ಕೈಗಳನವರ ಮೈಯ್ಮೇಲೆಳೆದು ಹರಸಿದನು ॥ ೨೧ ॥
ಮಿಥಿಲದೇಶದ ಪತಿಯು ತನ್ನಯ । ಕ್ರತು ಮಹೋತ್ಸವಕಾಗಿ ಮುನಿಕುಲ ।
ಪತಿಗೆಯಾಮಂತ್ರಣವ ಮಾಡಿದರಿಂದ ಕೌಸಿಕನು ॥
ಅತಿ ಮನೋಹರವಾದ ಗಿರಿಜಾ- । ಪತಿಯ ಕಾರ್ಮುಕವನ್ನು ನೋಡುವ ।
ಕುತುಕದಿಂ ಕೂಡಿರ್ದ ರಾಘವರನ್ನು ಕರೆದೊಯ್ದು ॥ ೨೨ ॥
ನಡೆದು ದಾರಿಯನಿಂತು ಮೂವರು । ಕಡೆಗೆ ಸಂಧ್ಯಾಸಮಯಲಿ ಯಾ- ।
ಕಡು ತಪೋನಿಧಿಯಾದ ಗೌತಮ ಮುನಿಪನಾಶ್ರಮದ ॥
ಎಡೆಯಲಿರ್ದಹ ಗಿಡಗಳಲಿ ತಾಂ- । ಬಿಡದೆ ಮುನಿಮಡದಿಯನು ಶಕ್ರನು ।
ಕೆಡಿಸಿದಂತಹ ತಾಣದಲಿ ವಿಶ್ರಾಂತಿ ಹೊಂದಿದರು. ॥ ೨೩ ॥
ಜಾರತನದಘದಿಂದ ಗೌತಮ- । ನಾರಿ ಕಲ್ಲಿನರೂಪದಿಂ ದಾ- ।
ದಾರಿಯಲಿ ಚಿರಕಾಲ ಶಾಪದೆ ಬಿದ್ದುಕೊಂಡಿರಲು ॥
ಸಾರಕಲ್ಮಷಹಾರಿರಾಮನ । ಚಾರು ಪದರಜದಿಂದಲಾಕೆಯು ।
ಧಾರಣವ ಮಾಡಿದಳು ತನ್ನಯ ಪೂರ್ವದೇಹವನು ॥ ೨೪ ॥
ಬಂಧುರ-ದ್ವಯ-ಬಂಧುಗಳ ಸಹ । ಬಂದ ಮುನಿವರನೆಂದು ಕೇಳಿದ- ।
ರಿಂದ ಕಾಮಾರ್ಥಗಳು ಕೂಡಿದ ಮೂರ್ತಧರ್ಮವೆನೆ ॥
ಮಂದಿಗಳ ಪ್ರಭು ಜನಕರಾಯನು । ನಂದದಿಂ ಪೂಜೋಪಕರಣಗ- ।
ಳಿಂದ ಲಗಬಗೆಯಿಂದಲಾತನ ಮುಂದೆ ಯೆದುರಾದ ॥ ೨೫ ॥

ಗಗನದಿಂದ್ಯೈತಂದ ತಾರಾ- । ಯುಗಳವೇನೆಂಬಂತೆ ತೋರುವ ।
ರಘುವಿನನ್ವಯದೊಳಗೆ ಪುಟ್ಟಿದ ರಾಮಲಕ್ಷ್ಮಣರ ।
ಮೊಗಗಳನ್ನೆಡೆಬಿಡದೆ ನೋಡುವ । ನಗರವಾಸಿಗಳಾದ ಮನುಜರು ।
ಸಿಗವು ಜಗದೊಳಗಿಂಥ ರೂಪಗಳೆಂದು ಪೊಗಳಿದರು ॥ ೩೬ ॥
ಕ್ರತುವಿನವಸಾನದಲಿ ಮುನಿಕುಲ- । ಪತಿಯು ಸಮಯವ ನೋಡಿ ಮಿಥಿಲಾ- ।
ಪತಿಗೆ ಮಂಜುಲವಾಣಿಯಿಂ ಪೇಳಿದನು ದಶರಥನ ॥
ಸುತನು ನಿನ್ನಲ್ಲಿರ್ದ ಭಾರ್ಗವ- । ನತಿಮನೋಹರವಾದ ಚಾಪವ ।
ಕುತುಕದಿಂ ನೋಡಲ್ಕೆ ಬಯಸಿತ್ತಿರುವನೆಲೆ ನೃಪನೆ ॥ ೩೭ ॥
ಇನಿತು ಪರಿ ಮುನಿವಾಣಿಯನು ತಾಂ । ಜನಪ ಜನಕನು ಕೇಳಿ ರಾಮನ ।
ಘನತೆ ಗುಣಕುಲರೂಪಬಾಲ್ಯಾವಸ್ಥೆಗಳ ನೋಡಿ ॥
ತನಯೆ ಶುಲ್ಕಕೆ ತಾನು ಮಾಡಿದ । ಧನ್ವಭಂಗದ ಕಠಿಣ ಪಣವನು ।
ನೆನೆದು ಮನದಲಿ ಹೊಂದಿದನು ಪಿರಿದಾದ ಪೀಡೆಯನು ॥ ೩೮ ॥
ಗಿರಿವರನ ಧಿಕ್ಕರಿಪ ಮತ್ತ- । ದ್ವಿರದಗಳ ಕಡೆಯಿಂದಲಾಗದ ।
ಪರಮ ದುಷ್ಕರವಾದ ಕಾರ್ಯವದೆಂತು ವಾರಣದ ॥
ಮರಿಗಳಿಂದಾಗುವದೊ ಸಕಲವ- । ನರಿತಗಾಧಿಜ ಮುನಿಯೆನಾಂ ಸ್ವೀ- ।
ಕರಿಸಲಾರೆನು ನಿನ್ನ ವಚನವನೆಂದು ನೃಪ ನುಡಿದ ॥ ೩೯ ॥
ಈ ದಿನದ ಪೂರ್ವದಲಿ ಕಾರ್ಮುಕ- । ವೇದವನು ಬಲ್ಲಂಥ ಕೋವಿದ- ।
ರಾದ ಪರಮೋದ್ದಾಮ ಕಲಿಭಟರಿಲ್ಲಿಗೈತಂದು ॥
ಈ ಧನುಸ್ಸಿನ ಭಂಗಮಾಡದೆ । ಖೇದದಿಂ ಧಿಕ್ಕರಿಸಿ ತಮ್ಮನು ।
ಪೋದರೆಲ್ಲರು ತಿರುಗಿ, ತಾತನೆ, ತಮ್ಮ ಪುರಗಳಿಗೆ ॥ ೪೦ ॥
ಕೇಳಿ ರಾಜನ ನುಡಿಗಳನು ಮುನಿ- ।ಮೌಳಿಯಾತಗೆ ಲೀಲೆಯಿಂದಲೆ ।
ಪೇಳಿದನು ನರವರನೆ ಪಿರಿದಾದಂಥ ಗಿರಿಯನ್ನು ॥
ಸೀಳುವದು ದಂಭೋಳಿಯಾಪರಿ । ಬಾಲನಾದರು ರಾಮಚಂದ್ರನು ।
ಶೂಲಿ ಕಾರ್ಮುಕವನ್ನು ಸಹಜವೆ ಮುರಿದು ಚೆಲ್ಲುವನು ॥ ೪೧ ॥
ಮುಖ್ಯ-ಮುನಿ-ವಾಕ್ಯದಲಿ ನಂಬಿಕೆ । ಯಿಕ್ಕಿದಂತಹ ಜನಕಜನಪನು ।
ಚಿಕ್ಕ ಹೊನ್ನಿಯು ಕೀಟದಾಕೃತಿಯುಳ್ಳ ವಹ್ನಿಯಲಿ ॥
ಕಕ್ಕಸದ ಮರವನ್ನುದಹಿಸುವ । ಶಕ್ತಿಯುಂಟದರಂತೆ ರಾಮನು ।
ತಕ್ಕ ಪೌರುಷಯುಕ್ತನಾದವನೆಂದು ತಾನರಿತ ॥ ೪೨ ॥
ಹೊಳೆವ ತನ್ನಯ ಚಾಪವನು ಬಾ- । ಸ್ಥಳದೆ ಬರಮಾಡಲ್ಕೆ ಶಕ್ರನು ।
ಮಳೆಯ ಕರೆಯುವ ಮೋಡಗಳಿಗಪ್ಪಣೆಯನಿತ್ತಂತೆ ॥

ಬಳಿಕ ಚಾಪವ ತರಲು ತನ್ನೆಡ- । ಬಲದ ಸೇವಕ ಜನರ ಗಣವನು ।
ಕಳುಹಿದನು ಧರೆಯೊಡೆಯನಾಗಲೆ ಮಾಡಿಯಾಜ್ಞೆಯನು ॥ ೪೩ ॥
ಹರನು ಕ್ರತು ಪೂರುಷನು ಭಯದಿಂ । ಹರಿಣರೂಪನ ತಾಳಿ ನೋಡು- ।
ತ್ತಿರುವ ಸಮಯಕ್ಕವಗ ಹೊಡೆಯುವದಕ್ಕೆ ಧರಿಸಿರುವ ॥
ಪರಮ ಭೀಕರವಾದ ಸರ್ಪದ । ತೆರದಿ ತೋರುವ ಚಾಪವನು ರಘು- ।
ವರನು ತನ್ನಯ ಕರದೆ ಶ್ರಮವಿಲ್ಲದಲೆ ನೆಗಪಿದನು ॥ ೪೪ ॥
ಎಲ್ಲ ಜಗವನು ಜಯಿಸಿದಂತಹ । ಮಲ್ಲಮರ್ದನನಂಗಜನು ನವ- ।
ಮಲ್ಲಿಕಾಸುಮಚಾಪವನು ಸಜ್ಜಿಸುವ ತೆರದಲ್ಲಿ ॥
ಎಲ್ಲ ಸಭಿಕರು ನೋಡುತಿರೆ ಶ್ರೀ- । ವಲ್ಲಭನು ಗಿರಿಸಾರದಂತಿಪ ।
ಬಿಲ್ಲಬೊಗ್ಗಿಸಿಯದಕೆ ಸಿಂಜನಿಯನ್ನು ಕಟ್ಟಿದನು ॥ ೪೫ ॥
ಭರದೆ ಹರಚಾಪವನು ರಾಮನು । ಕರದೆಯತಿಶಯ ಜಗ್ಗಿ ಮುರಿಯಲು ।
ಧರಣಿ ಮೇಲ್ಕಡಕಡನೆ ಕರ್ಕಶಶಬ್ದವನು ಮಾಡಿ ॥
ಪರಶುಧರನಿಗೆ ಕ್ಷತ್ರಿಯರ ಕುಲ- । ದರಸರೇಳ್ಗೆಯು ಬೆಳೆದು ಪುನರಪಿ ।
ಶಿರವ ತೋರಿತದೆಂದು ಪೇಳುವ ತೆರದಿ ತೋರಿದುದು ॥ ೪೬ ॥
ಪರಮ ಭೀಕರವಾದ ಗಿರಿಜಾ- । ವರನ ಚಾಪವ ಮುರಿದು ರಾಮನು ।
ದೊರೆಗೆ ತನ್ನಲ್ಲಿರ್ದ ಬಲಸಾರವನು ತೋರಿಸಲು ॥
ಧರಣಿಜಾತೆಯ ಶುಲ್ಕ ಮುಟ್ಟಿತು । ಹರಿಯೆ ಶ್ರೀಯಂತಿರುವ ನನ್ನಯ ।
ತರುಳೆಯನು ನಿನಗಿತ್ತೆ ನಾನೆಂದಾಗ ನೃಪನುಡಿದ ॥ ೪೭ ॥
ನುಡಿದ ಮೇರೆಗೆ ನಡೆದುಕೊಳ್ಳುವ । ಪಡವಿಯೊಡೆಯನು ಪರಮ ಹರುಷದೆ ।
ಧೃಢತಪೋನಿಧಿಯಾದ ವಿಶ್ವಾಮಿತ್ರನೆದುರಿನಲಿ ॥
ಬಿಡದೆ ವಧುಗಳನಗ್ನಿಯದುರಿಗೆ । ಕೊಡುವತೆರದಲಿ ಸೀತೆಯನು ಜಗ- ।
ದೊಡೆಯನಿಗೆ ವಿಧಿಯಂತೆ ಕನ್ಯಾದಾನ ಮಾಡಿದನು ॥ ೪೮ ॥
ಕಳುಹಿದನು ಮಿಥಿಲೇಂದ್ರನಾಗಲೆ । ಕುಲಪುರೋಹಿತನನ್ನು ಕೋಸಲ- ।
ದಿಳೆಯ ಪಾಲನ ಬಳಿಗೆ ಪತ್ರವಕೊಟ್ಟು ವಿನಯದಲಿ ॥
ನಳಿನ ಲೋಚನನಾದ ರಾಮನಿ- । ಗಳಿಯನೆಂದಾಂ ಭಾವಿಸಿದೆ ನೀಂ- ।
ಬೆಳೆಸು ಪ್ರೇಮವ ಮನ್ನಿಸೆನ್ನಯ ಬಿನತಿಯನ್ನೆಂದು ॥ ೪೯ ॥
ತನಗೆ ಸರಿಯಾದಂಥ ಸ್ನುಷೆಯನು । ಮನಸಿನಲಿ ತರುವಷ್ಟರಲ್ಲಿಯೆ ।
ಜನಕರಾಜನ ಕುಲಪುರೋಹಿತನಾದ ಬ್ರಾಹ್ಮಣನು ॥
ಜನಪನಿಗೆ ಯಾ ಮೈಥಿಲೇಂದ್ರನ । ಬಿನತಿಯನು ಪೇಳಿದನು ಸಜ್ಜನ ।
ಮನದ ಕಾಂಕ್ಷೆಯು ಕಲ್ಪವೃಕ್ಷದ ತೆರದೆ ಫಲಿಸುವದು ॥ ೫೦ ॥

ಬಳಿಕ ಸತ್ಕರಿಸಿರ್ದಪಾರ್ಥಿವನ । ಲಲಿತ ವಚನವನು ಕೇಳಿ ಕೋಸಲ- ।
ವಿಳೆಯ ಪಾಲನು ತನ್ನ ಸೇನಾಭಾರವನು ಕೊಂಡು ॥
ಚಲಿಸಿದನು ಮಿಥಿಲೇಂದ್ರ ನಗರಕೆ । ಮಿಲಿತ ಸೇನಾಪಾದ ರಜವದು ।
ನಲಿನ ಮಿತ್ರನ ಕಾಂತಿಯನು ಘನದಂತೆಯಡಗಿಸಿತು ॥ ೫೧ ॥
ಮುಟ್ಟಿದನು ದಶರಥನು ಜನಕನ । ಪಟ್ಟಣಕೆ ಮೇಣವನ ಕಟಕವು ।
ದಟ್ಟಣಿಸಿತೂರ್ನಿ ಕಟದಲ್ಲಿಯು ತೋಟದಲಿ ಯದರಿಂ ॥
ದಟ್ಟವಾದವು ಮರಗಳಿಗೆ, ಬಹು । ದಿಟ್ಟತನದಿಂ ಪ್ರಿಯನು ರಮಣಿಗೆ ।
ನಿಟ್ಟುರದೆ ಶ್ರಮಪಡಿಸುವಂದದೆ, ಪೀಡೆ ಜನಿಸಿದುದು. ॥ ೫೨ ॥
ಹಿರಿಯರಾಚಾರಗಳ ಮೀರದ । ವರುಣ ವಾಸವರಂತೆ ಮಿಸುಗುವ ।
ನರಪರೀರ್ವರು ಕೂಡಿ ತಮ್ಮಯ ತನುಜ ತನುಜೆಯರ ॥
ಪರಮ ಮಂಗಲಕಾರ್ಯಗಳನುರೆ । ಜರಗಿಸಿದರತಿ ಕೌತುಕದೆ ತ- ।
ಮ್ಮರಸು-ತನಗಳಗೊಪ್ಪುವಂದದೆ ದಾನಗಳ ಮಾಡಿ ॥ ೫೩ ॥
ಸೀತೆಯನು ಶ್ರೀರಾಮ, ನೃಪತನು- । ಜಾತೆ “ ಊರ್ಮಿಳೆ ”ಯನ್ನು ಲಕ್ಷ್ಮಣ- ।
ನಾತನನುಜರು ಮಾಂಡವೀ ಶ್ರುತಿ ಕೀರ್ತಿಯೆಂಬವರ- ॥
ಪ್ರೀತಿಯಿಂದುದ್ವಹಿಸಿದರು ಪ್ರ- । ಖ್ಯಾತಿಯಾಯಿತಿದೆಲ್ಲ ಕಡೆಯಲಿ ।
ಕೌತುಕದೆ ಸುರವರರು ಪೂಗಳ ವೃಷ್ಟಿ ಮಾಡಿದರು. ॥ ೫೪ ॥
ದೊರೆಯು ಸಾಮಾದಿಗಳ ಸಾಧಿಸಿ । ನರಪರಲಿ ಸದ್ಯಶವ ಗಳಿಸಿದ ।
ತೆರದೆ ಯಾತನ ತರುಳರೂ ಪೌರುಷ್ಯ ಬಲದಿಂದ ॥
ಉರು ಪರಾಕ್ರಮಿಯಾದ ಜನಕನ । ಸರಸ ಸುಂದರ ಪೆಣ್ಣು ಮಕ್ಕಳ ।
ವರಿಸಿ ಲೌಕಿಕದಲ್ಲಿ ಸಂಸಿದ್ಧಿಯನು ಹೊಂದಿದರು. ॥ ೫೫ ॥
ಮೂಲ ಶಬ್ದ-ಪ್ರಕೃತಿಗಳಿಗನು- । ಕೂಲಿಸಲು ಪ್ರತ್ಯಯಗಳದರಿಂ- ।
ಮೇಲು ತೆರದರ್ಥ ಪ್ರಕಾಶವದಾಗುವಂದದಲಿ ॥
ಕಾಲದಲಿ ಸರಿಯಾದ ಭೂಮಿಯ - ಪಾಲಕರ ಪೆಣ್ಗಂಡು ಮಕ್ಕಳ ।
ಮೇಳಿನಿಂದನ್ಯೋನ್ಯರೂ ಕ್ರತಕೃತ್ಯರಾಗಿಹರು. ॥ ೫೬ ॥
ಮುಗಿಸಿ ಮಕ್ಕಳ ಮದುವೆಗಳನಾ- । ನಗರಿಯಲ್ಲಿಯೆ ಪರಮ ಹರುಷದೆ- ।
ತೆಗೆದುಕೊಂಡಪ್ಪಣೆಯ ಮಿಥಿಲಾಧೀಶನಿಂ ಕೂಡಿ ॥
ರಘುವಿನಣುಗನು ಹೊರಟು ಮೂರನೆ । ಹಗಲಿನಲಿ ವೈದೇಹಿಯನು ಕೈ- ।
ಮುಗಿದು ಹಿಂದಕೆ ಕಳುಹಿ ತನ್ನಯ ಪುರಕೆ ಸಾಗಿದನು ॥ ೫೭ ॥
ಅರಸು ಮುಂದಕೆ ಸಾಗುತಿರೆ ಬಲು । ಬಿರಸುಗಾಳಿಯು ಬೀಸಿ ಧ್ವಜದಂ- ।
ತಿರುವ ತರುಗಳು ಬಿದ್ದು ಮಾರ್ಗದೆ ಸೈನಿಕರಿಗಂದು ॥

ಹರಿವ ನದಿಗುಕ್ಕೇರಿ ದಂಡಿಯು । ಪುರಗಳಿಗೆ ಶ್ರಮವಾಗುವಂದದಿ ।
ಪರಮ ದಾರುಣ ಕಷ್ಟಸಮುಯವು ಬಂದು ಘಟಿಸಿಹುದು ॥ ೫೮ ॥
ಗರುಡನಿಂ ಹತವಾದ ಘನಫಣ- । ಧರನ ಪಿರಿದಾದಂಥ ಭೋಗದ ।
ಸುರಳಿಯಲ್ಲಿರ್ದಂಥ ರತ್ನದ ತೆರದಿ ಕಣ್ಗೆಸೆದು ॥
ಪರಮ ಭೀಕರವಾದ ತೇಜದ ! ಪರಿಧಿಯಿಂದುರೆ ಮಿರುಗಿ ತರಣಿಯು ।
ಧರೆಯು ಪಾಲನಿಗಾಗ ದುರ್ಭಿಕ್ಷವನು ತೋರಿದನು ॥ ೫೯ ॥
ಅರುಣ ವರ್ಣದ ಸಾಂಧ್ಯಧಾರಾ- । ಧರಗಳಿಂ ನಸು ತೊಯ್ದ ವಸನವ ।
ಧರಿಸಿದಂತಹ ಮತ್ತೆ ಹಾರುವ ಗಿಡಗಗಳ ಕರೆಯು ॥
ಗರಿಗಳೇ ಕೂದಲಗಳಾಗಿರು- । ತಿರುವ ದಿಕ್ಕೆಂಬಬಲೆ ಮಲಿನಿಯು ।
ತೆರದೆ ದರುಶನ ಕೊಳ್ಳಲಕ್ಷಮವಾಗಿ ತೋರಿದಳು ॥ ೬೦ ॥
ತರಣಿ ಸಾಯಂಕಾಲದಲಿ ಸಂ- । ಚರಿಪ ಪಶ್ಚಿಮ ದಿಕ್ಕಿನಲಿ ಪೆಣ್ ।
ನರಿಗಳಾದಿನ ಸೇರಿ ಭೀಕರವಾದ ಸರದಿಂದ ॥
ಕರೆದು ಕ್ಷತ್ರಿಯ ರುಧಿರದಿಂದತಿ । ತ್ವರದೆ ಪಿತೃಗಳ ತರ್ಪಣವನುರೆ ।
ಜರಗಿಸೆಂದಾ ಪರಶುಧರನಿಗೆ ಪೇಳತೊಡಗಿದವು ॥ ೬೧ ॥
ದುರಿತ ಸೂಚಕ ಕುರುಹಗಳನಾ- । ಧರೆಯು ಪಾಲಕನರೆತು ಮನದೊಳು ।
ಕೊರಗಿ ವ್ಯಸನದೆ ಗುರುವಸಿಷ್ಠನ ಚರಣಗಳಿಗೆರಗಿ ॥
ಬರುವ ಸಂಕಟವನ್ನು ದೂರೀ- । ಕರಿಪ ಪರಿಯುನ್ನರಪುದೆಂದೆನೆ ।
ಕರುಣೆಯಿಂದುಸುರಿದನು ಶುಭವಾಗುವದು ನಿನಗೆಂದು ॥ ೬೨ ॥
ಇನಿತರಲ್ಲಿನಕುಲದೆ ಜನಿಸಿದ । ಜನಪ ಸೈನಿಕರೆದುರಿನಲಿ ದಿನ- ।
ಮಣಿಯು ತಾನೇನಿಳಿದು ಬಂದಿಹನೆಂಬ ತೆರದಲ್ಲಿ ॥
ಮಿನುಗಿ ತೇಜೋರಾಶಿ ನಿಂತಿತು । ಮನುಜನಾಕೃತಿಯೆಂದು ನಂತರ ।
ಜನಕೆ ತಾನೇ ಕಾಣಿಸಿತು ಚಿರದಿಂದ ನೋಡಲ್ಕೆ ॥ ೬೩ ॥
ಕೊರಳಿನಲಿ ಯುಪವೀತಮನು ಮೇಣ್ । ಕರದೆ ಶರ-ಕಾರ್ಮುಕಗಳನ್ನುರೆ ।
ಧರಿಸಿ ಯಾತನು ತನ್ನ ಗುರುಗಳ ವರ್ಣಗಳನರುಪಿ ॥
ಉರಗ ಸುತ್ತಿರ್ದಂಥ ಚಂದನ- । ತರುಗಳೋಪಾದಿಯುಲಿ ಮೇಣ್ದಾಂ- ।
ದಿರನು ತರಣಿಯ ಕಿರಣಗಳ ತಾಳ್ದಂತೆ ತೋರಿದನು. ॥ ೬೪ ॥
ಗುರುವಿನಪ್ಪಣೆಯಂತೆ ಯಾವನು । ಮರೆತು ತನ್ನಯ ಪದದ ಸ್ಥಿತಿಯನು ।
ಪರಮ ರೋಷದೆ ಮಾತೃ ಶಿರವನು ಹೊಡೆದು ಕೆಡುಹಿದನೋ ॥
ಭರದೆ ಮೊದಲೆಗೆ ಗೆಲ್ದು ತನ್ನಯ । ಕರುಣೆಯನ್ನಾ ಮೇಲೆ ಧರಣೀ- ।
ವರರ ತಲೆಗಳನರೆದು ಮೃತ್ತಿಕೆ ಪಾಲು ಮಾಡಿದನೋ ॥ ೬೫ ॥

ಕೆರಳಿ ಕಾಲನ ತೆರದಿಯಾವನು । ತ್ವರದೆಯಿಪ್ಪತ್ತೊಂದು ಬಾರಿಗೆ ।
ಶರದೆ ಕ್ಷತ್ರಿಯರನ್ನು ಹೊಡೆಹೊಡೆದಕ್ಷವಾಲೆಯಲಿ ॥
ಅರರೆ! ಪ್ರತಿಸಂಹರಣಕಾಲ- । ಕ್ಕಿರದೆಯೊಂದೊಂದಕ್ಷವನು ತಾ- ।
ಸಿರಿಸಿ ತನ್ನಯ ಕರ್ಣ-ಭೂಷಣವನ್ನು ಮಾಡಿದನೋ; ॥ ೬೬ ॥

ಅಂತಕನ ಪೋಲ್ವಿಂಥ ಪುರುಷನ । ಸೊಂತ ವಾರ್ಧಿಕ್ಯವನು ಮೇಣ- ।
ತ್ಯಂತ ಕೋಮಲ ವಯದ ತನ್ನಯ ಬಾಲರನು ಕಂಡು ॥
ಹಂತ ಕೋಸಲದೇಶದೊಡೆಯನು । ಚಿಂತೆಯಲಿ ಸಲೆ ಮುಳುಗಿ ಮುಂದಿನ- ।
ಪಂಥವನು ಕಾಣದಲೆ ನಿಂತನು ಭ್ರಾಂತಿಗೊಳಗೊಂಡು ॥ ೬೭ ॥

ಭೀಮ ಭುಜಗದ ರತ್ನದಲಿ ಮೇಣ್ । ಕಾಮಿನಿಯ ಗಲದಲ್ಲಿ ಮಿನಗುವ ।
ಹೇಮ-ದಾಮಗ್ರಥಿತ ರತ್ನದೆ ಕಂಡು ಬರುವಂತೆ ॥
ನಾಮ ಸಾದೃಶದಿಂದ ಭಾರ್ಗವ- । ರಾಮನಲಿ ಮೇಣ್ ತನ್ನಯಾತ್ಮಜ ।
ರಾಮನಲಿ, ಭಯ-ಮೋಹಗಳು, ಭೂಪತಿಗೆ ತೋರಿದವು. ॥ ೬೮ ॥

ಒಡನೆಯರ್ಘ್ಯವ ಕೊಡುಕೊಡೆಂದುರೆ । ಪೊಡವಿಯೊಡೆಯನು ನುಡಿದರೂ ತಾಂ
ಕೊಡದೆ ಚಿತ್ತವನತ್ತ ರಾಮನು ರಾಮನಿದ್ದೆಡೆಗೆ ॥
ಕಿಡಿಗಳನ್ನುದರಿಸುತೆ ರೋಷದೆ । ಸುಡುವತೆರದಿಂ ರೆಪ್ಪೆಯಿಕ್ಕದೆ ।
ಬಿಡದೆ ಗುಡ್ಡೆಗಳನ್ನು ಮೇಲಕೆ ಮಾಡಿ ನೋಡಿದನು. ॥ ೬೯ ॥

ಭರದೆಯಡ ಮುಷ್ಟಿಯಲಿ ಚಾಪವ । ಬೆರಳುಗಳ ಮಧ್ಯದಲಿ ಶರವನು ।
ಧರಿಸಿದಂತಹ ಪರಶುರಾಮನು ರೋಷಭರದಿಂದ ॥
ಪರಮ ವಿಕ್ರಮದಿಂದ ಮೆರೆಯುವ । ದರವನರಿಯದ ಸಿರಿಯವರನಿಗೆ ।
ಜರಿದು ಘನಗಂಭೀರ ರವದಿಂ ನುಡಿದನೀ ತೆರದಿ ॥ ೭೦ ॥

ಗುರುವಿಗಪಕಾರವನು ಮಾಡಿದ । ದುರುಳ ಕ್ಷತ್ರಿಯ ವಂಶಜಾತರು ।
ಪರಮ ವೈರಿಗಳವರ ಸಂಹಾರವನು ನಾಂ ಮಾಡಿ ॥
ಹರುಷವನು ತಾಳಿರ್ದೆ ನಿನ್ನಯ । ವರ ಪರಾಕ್ರಮವರಿತು ರಾಮನೆ ।
ಕೆರಳಿಯೆನ್ನಯ ಮಾನಸವು ಧಗಧಗನೆ ಯುರಿಯುನದು ॥ ೭೧ ॥

ಇತರ ಪಾರ್ಥಿವರಿಂದ ಮಣಿಸದ । ಮಿಥಿಲ ದೇಶದ ರಾಜನಲ್ಲಿಯ ।
ಪ್ರಥುಲ ಕಾರ್ಮುಕವನ್ನು ಭಂಗಿಸಿ ನೀನು ದಶರಥನ ॥
ಸುತನೆ ನನ್ನಯ ಮಾನಸಕೆ ಬಹು । ವ್ಯಥೆಯನುಗೊಳಿಸಿದೆ ವೀರ್ಯಶಿಖರವ ।
ಕ್ಷಿತಿಗೆ ಯುರುಳಿಸಿದೆಂದು ಭಾವನೆಯನ್ನು ತಾಳಿಹೆನು ॥ ೭೨ ॥

ಭೂಮಿಯಲ್ಲಿಯ ಸಕಲಮನುಜರು । "ರಾಮ" ಶಬ್ದೋಚ್ಚಾರದಪಾತ್ರದೆ ।
ಮಿ...ಮೊದಲೆನ್ನನ್ನೆ ತಿಳಿಯುತ್ತಿರ್ದರದವಳಿಪಿ ॥

ಕಾಮರಿಪುವಿನ ಚಾಪಭಂಗಿಸಿ । ಕೋಮಲಾಂಗನೆ, ನೀನು ನನ್ನಯ ।
ನಾಮದಲ್ಲಿರ್ಭಾಗ ಮಾಡೆನ್ನನ್ನು ನಾಚಿಸಿದೆ ॥ ೭೩ ॥
ಮುನ್ನಗುರುವಿನ ಹೋಮದಾವಿನ । ಸಣ್ಣ ಕರುವನ್ನೊಯ್ದ ಹೈಹಯ- ।
ನಿನ್ನ ನೀಂ ಮಮಕೀರ್ತಿಯನ್ನಪಹರಿಸಿ ರಾಘವನೇ ॥
ಉನ್ನತೋನ್ನತವಾದ ಪರ್ವತ- । ವನ್ನು ಮಾರ್ಗಣದಿಂದ ಛೇದಿಪ- ।
ನನ್ನ ದುರ್ಧರವಾದ ಹಗೆತನವನ್ನು ಗಳಿಸಿಹಿರಿ ॥ ೭೪ ॥
ಆದಕಾರಣ ಕ್ಷತ್ರಿಯಾಂತಕ- । ನಾದನಾಂ ನಿನ್ನನ್ನು ಜಯಿಸದೆ ।
ಹೋದರೆನಗಪವಾದ ಬಾರದೆ ಮತ್ತು ಮಮಮನಕೆ ॥
ಮೋದವಾಗುವದೆಂತು? ತೃಣವನು । ಬೂದಿಮಾಡುವ ವಹ್ನಿ ನೀರಿನ- ।
ಗಾಧ ಸಂಚಯದೊಳಗೆ ಬಿದ್ದುದೆ ಮಹಿಮೆ ಹೊಂದುವದೆ? ॥ ೭೫ ॥
ಕೂಲದಲಿ ಬೆಳೆದಿರ್ದು ಬಾಗಿದ ! ಮೂಲಸಡಲಿದ ಪಾದಪವು ಪ್ರತಿ- ।
ಕೂಲ ಮೃದುತರ ಗಾಳಿಗಾದೊಡೆ ಬೀಳುವಂದದಲಿ ॥
ನೀಲಕಂಠನ ಚಾಪವನು ವನ- ಮಾಲಿಯಾದಾ ಹರಿಯತೇಜದೆ ।
ಲೀಲೆಯಿಂ ಮುರಿದೊಗೆದರೇನಚ್ಚರವೊ ಬಾಲಕನೇ? ॥ ೭೬ ॥
ಇರಲಿ ಸದ್ಯಕೆ ಸಮರಭರವದು । ಕರದೆ ನನ್ನಯ ಚಾಪವನು ನೀ- ।
ಧರಿಸಿ ಬೊಗ್ಗಿಸಿ ದಾರವನು ದೃಢವಾಗಿ ಬಿಗಿದದಕೆ ॥
ತ್ವರದೆ ಶರವನು ಪೂಡಿ ಬಿಟ್ಟರೆ । ನರಪ ತನುಜನೆ ನೀನು ನನ್ನಯ ।
ಪರಮ ಯಶವನು ಹರಿಸಿದೆಂದಾನಿರದೆ ತಿಳಿಯುವೆನು ॥ ೭೭ ॥
ಉರಿವ ವಹ್ನಿಯ ತೆರದಿ “ ಝಗಝಗ ” । ಮಿರುಗುವಂಥೀ ನನ್ನ ಸೋಜ್ವಲ- ।
ಪರಶುವನು ಕಂಡರಸು ತರುಳನೆ ನಿನ್ನ ಮಾನಸವು ॥
ದರವ ಪಟ್ಟಿರ್ದಾದರೇ ನೀ- । ನಿರದೆ ಕರಗಳ ಮುಗಿದು ಬೇಗನೆ ।
ಶರಣು ಬಂದರೆ ನಿನ್ನ ಪ್ರಾಣಗಳನ್ನು ಪೊರೆಯುವೆನು ॥ ೭೮ ॥
ಭೀಮ ವಿಕ್ರಮನಾದ ಭಾರ್ಗವ- । ರಾಮನೀತೆರದಿಂದ ನುಡಿಯಲು ।
ರಾಮಚಂದ್ರನು ಮೌನದಿಂದಲೆ ಸ್ಮೇರವನು ಮಾಡಿ ॥
ಆ ಮಹೀಧರನಂಥ ಚಾಪವ । ವಾಮಹಸ್ತಾಂಗುಲಿಗಳಿಂದಲೆ ।
ನೇಮದಿಂ ಪಿಡಿದೆತ್ತಿ ಕೃತಿಯಿಂದಿತ್ತನುತ್ತರವ ॥ ೭೯ ॥
ಮಳೆಯ ಕಾಲದ ಜಲದ ಮುಂಚೆಗೆ । ಕಳೆಯ ತಾಳಿರಲದಕೆ ಶಕ್ರನ ।
ಚಲುವ ಚಾಪದ ಮೇಳುಗೂಡಲು ಚೆಂದಕಾಣ್ಬಂತೆ ॥
ಕಳೆದ ಪೋದವತಾರದಲ್ಲಿಯ । ಪೊಳೆವ ತನ್ನಯ ಧನ್ವವನು ಶ್ರೀ ।
ನಳಿನನಾಭನು ಧರಿಸಿಯತಿಶಯ ಶೋಭೆಯನು ತಳೆದ ॥ ೮೦ ॥

ಚಾಪದಗ್ರವನೂರಿ ಭೂಮಿಗೆ । ಯೂಪರಾಕ್ರಮಿಯಾದ ರಾಮನು ।
ಭೂಪ ಭಾಪೆಂದುಸುರುತಿರೆ ಜನರಲ್ಲಿ ಮೌರ್ವಿಯನು ॥
ಚಾಪಲದೆ ಬಿಗಿದೊಗೆಯಲಾಗಲೆ । ಭೂಪರಿಪು ಭಾರ್ಗವನ ಮುಖವದು ।
ಧೂಪಧೂಮದ ತೆರದೆ ನಿಷ್ಪ್ರಭವಾಗಿ ತೋರಿದುದು ॥ ೮೧ ॥

ದಿನದ ಕೊನೆಯಲಿ ಕಡಿಮೆ ಹೆಚ್ಚಾ- । ದನುಪಮುಚ್ಛ್ರಯಿಯಿಂದ ನಭದಲಿ ।
ದಿನದ ಚಂದ್ರರು ಮಿನುಗುವಂದದಿ ಭೃಗುಮುನೀಶ್ವರನ ॥
ತನುಜ ರಾಮನು ಮತ್ತೆ ದಶರಥ । ತನಯನೀಪರಿ ಜರಠ ತರುಣರು ।
ಜನರ ಮನಗಳಿಗಾಗ ಸಾದೃಶಹೊಂದಿ ತೋರಿದರು ॥ ೮೨ ॥

ಹರನ ಸುತನಾದಂಥ ಷಣ್ಮುಖ- । ತುರನ ತೆರದಲ್ಲೆಸೆವ ರಾಮನು ।
ಪರಿಭವವ ಹೊಂದಿರ್ದ ಭಾರ್ಗವನನ್ನು ಮೇಣ್ ತನ್ನ ॥
ಬರಿದೆ ಯಾಗದ ಶರವನೀಕ್ಷಿಸಿ । ಕರುಣೆಯಿಂ ಕರಕರಗಿ ಮನದಲಿ ।
ಸರಸ ಮೃದುಸರದಿಂದ ಲವನಿಗೆ ಭರದೆಯಿಂತೆಂದ ॥ ೮೩ ॥

ನೀನು ಬ್ರಾಹ್ಮಣನಿರ್ದ ಮೂಲಕ । ಪ್ರಾಣದಾನವನಿತ್ತೆ ನನ್ನೆಯ ।
ಬಾಣ ನಿಷ್ಫಲವಾಗಿ ಪೋಗುವದೆಂತೊ ಮಾನಿತನೇ ॥
ಆನು ನಿನ್ನಯ ಮಾರ್ಗವನ್ನುತ । ನೀನು ಪುಣ್ಯಾರ್ಜನದೆ ಗಳಿಸಿದ ।
ಸ್ಥಾನವನ್ನಿದರಿಂದ ಕೆಡಿಸಲಿ ತಿಳಿದು ಪೇಳೆನಗೆ ॥ ೮೪ ॥

ಎನಲು ಮುನಿಭಾರ್ಗವನು ವಿನಯದೆ । ವನಜನಾಭನಿಗೆಂದನೆಲೆ ನೀಂ- ।
ವಿನತೆ ಸುತ ಖಗಪತಿಯ ವಾಹನನೆಂದು ನಾಂ ಬಲ್ಲೆ ॥
ಪ್ರಣತ ಪಾಲನೆ ಭೂಮಿಗತ ತವ । ಘನತೆಯನು ಕಾಣಲ್ಕೆ ನಿನ್ನನು ।
ಕನಲಿಸಿದೆ ಬೇರೊಂದು ಕಾರಣವಿಲ್ಲದಲೆ ಪ್ರಭುವೆ ॥ ೮೫ ॥

ಗುರುವಿನಪರಾಧವನು ಮಾಡಿದ । ದುರುಳ ಕ್ಷತ್ರಿಯರನ್ನು ತರೆದಿಹ ।
ಧರಣಿಯನು ಪಾರ್ವರಿಗೆ ಯರ್ಪಣವನ್ನು ಮಾಡಿರುವ ॥
ಜರಠನಾದೆನ್ನನ್ನು ಶ್ರೀರಘು- । ವರನೆ ನೀಂ ಗೆಲ್ದದ್ದು ನರರಲಿ ।
ಪರಮ ಗರಿಮೆಯನುಂಟು ಮಾಡುವದೆಂದು ನಂಬಿರುವೆ ॥ ೮೬ ॥

ಪಾವನೋತ್ತಮವಾದ ತೀರ್ಥ- । ಕ್ಕಾವಗಂ ಪೋಗಲ್ಕೆ ನನ್ನಯ ।
ದೇವದೇವನೆ ಗತಿಗೆ ಪ್ರತಿಬಂಧವನು ಮಾಡದಿರು ॥
ಆವ ಭೋಗದ ಲಿಪ್ಸೆಯಿಲ್ಲದ । ಸೇವಕನು ಸ್ವರ್ಧಾಮ ಸುಖವನು ।
ಭಾವಿಸನು ನೀನದರ ಪಥವನು ರೋಧಿಸೆಂದೆನಲು ॥ ೮೭ ॥

ಅರಸು ದಶರಥರಾಯನಣುಗನು । ಪರಶುಧರನಿಗೆ ನಿನ್ನ ಮನಸಿನ ।
ತೆರದೆ ಮಾಡುವೆನೆಂದು ಪೇಳಿದ ಮೇಲೆ ಶರವನ್ನು ॥

ಕಾಮರಿಪುವಿನ ಚಾಪಭಂಗಿಸಿ । ಕೋಮಲಾಂಗನೆ, ನೀನು ನನ್ನಯ ।
ನಾಮದಲ್ಲಿರ್ಪ್ಭಾಗ ಮಾಡೆನ್ನನ್ನು ನಾಚಿಸಿದೆ ॥ ೭೩ ॥
ಮುನ್ನಗುರುವಿನ ಹೋಮದಾವಿನ । ಸಣ್ಣ ಕರುವನ್ನೊಯ್ದು ಹೈಹಯ- ।
ನಿನ್ನನೀಂ ಮಮಕೀರ್ತಿಯನ್ನಪಹರಿಸಿ ರಾಘವನೇ ॥
ಉನ್ನತೋನ್ನತವಾದ ಪರ್ವತ- । ವನ್ನು ಮಾರ್ಗಣದಿಂದ ಭೇದಿಪ- ।
ನನ್ನ ದುರ್ಧರವಾದ ಹಗೆತನವನ್ನು ಗಳಿಸಿಹಿರಿ ॥ ೭೪ ॥
ಆದಕಾರಣ ಕ್ಷತ್ರಿಯಾಂತಕ- । ನಾದನನ್ನಾಂ ನಿನ್ನನ್ನು ಜಯಿಸದೆ ।
ಹೋದರೆನಗಪವಾದ ಬಾರದೆ ಮತ್ತು ಮಮಮನಕೆ ॥
ಮೋದವಾಗುವದೆಂತು? ತೃಣವನು । ಬೂದಿಮಾಡುವ ವಹ್ನಿ ನೀರಿನ- ।
ಗಾಧ ಸಂಚಯದೊಳಗೆ ಉರಿಯದೆ ಮಹಿಮೆ ಹೊಂದುವದೆ? ॥ ೭೫ ॥
ಕೂಲದಲಿ ಬೆಳೆದಿರ್ದ ಬಾಳಿದ ! ಮೂಲಸಡಲಿದ ಪಾದದವ್ರ ಪ್ರತಿ. ।
ಕೂಲ ಮೃದುತರ ಗಾಳಿಗಾಮೊಡೆ ಬೀಳುವಂದದಲಿ ॥
ನೀಲಕಂಠನ ಚಾಪವನು ವನ- ಮಾಲಿಯಾದಾ ಹರಿಯುತೇಜದೆ ।
ಲೀಲೆಯಿಂ ಮುರಿದೊಗೆದರೇನಚ್ಚರವೊ ಬಾಲಕನೇ? ॥ ೭೬ ॥
ಇರಲಿ ಸದ್ಯಕೆ ಸಮರಭರವದು । ಕರದೆ ನನ್ನಯ ಚಾಪವನು ನೀ- ।
ಧರಿಸಿ ಬೊಗ್ಗಿಸಿ ದಾರವನು ದೃಢವಾಗಿ ಜಿಗಿದದಕೆ ॥
ತ್ವರದೆ ಶರವನು ಪೂಡಿ ಬಿಟ್ಟರೆ । ನರಪ ತನುಜನೆ ನೀನು ನನ್ನಯ ।
ಪರಮ ಯಶವನು ಹರಿಸಿದೆಂದಾನಿರದೆ ತಿಳಿಯುವೆನು ॥ ೭೭ ॥
ಉರಿವ ವಹ್ನಿಯ ತೆರದಿ "ಝಗಝಗ" । ಮಿರುಗುವಂಥೀ ನನ್ನ ಸೋಜ್ವಲ- ।
ಪರಶುವನು ಕಂಡರಸು ತರುಳನೆ ನಿನ್ನ ಮಾನಸವು ॥
ದರವ ಪಟ್ಟಿರ್ದಾದರೇ ನೀ- । ನಿರದೆ ಕರಗಳ ಮುಗಿದು ಬೇಗನೆ ।
ಶರಣು ಬಂದರೆ ನಿನ್ನ ಪ್ರಾಣಗಳನ್ನು ಪೊರೆಯುವೆನು ॥ ೭೮ ॥
ಭೀಮ ವಿಕ್ರಮನಾದ ಭಾರ್ಗವ- । ರಾಮನೀತೆರದಿಂದ ನುಡಿಯಲು ।
ರಾಮಚಂದ್ರನು ಮೌನದಿಂದಲೆ ಸ್ಮೇರವನು ಮಾಡಿ ॥
ಆ ಮಹೀಧರನಂಥ ಚಾಪವ । ವಾಮಹಸ್ತಾಂಗುಲಿಗಳಿಂದಲೆ ।
ನೇಮದಿಂ ಪಿಡಿದೆತ್ತಿ ಕೃತಿಯಿಂದಿತ್ತನುತ್ತರವ ॥ ೭೯ ॥
ಮಳೆಯ ಕಾಲದ ಜಲದ ಮುಂಚೆಗೆ । ಕಳೆಯ ತಾಳಿರಲದಕೆ ಶಕ್ರನ ।
ಚಲುವ ಚಾಪದ ಮೇಳುಗೂಡಲು ಚಂದಕಾಣ್ಬಂತೆ ॥
ಕಳೆದ ಪೋದವತಾರದಲ್ಲಿಯು । ಪೊಳೆವ ತನ್ನಯ ಧನ್ವವನು ಶ್ರೀ ।
ನಳಿನನಾಭನು ಧರಿಸಿಯುತಿಶಯ ಶೋಭೆಯನು ತಳೆದ ॥ ೮೦ ॥

ಚಾಪದಗ್ರವನೂರಿ ಭೂಮಿಗೆ । ಯಾಪರಾಕ್ರಮಿಯಾದ ರಾಮನು ।
ಭಾಪು ಭಾಪೆಂದುಸುರುತಿರೆ ಜನರಲ್ಲಿ ಮೌರ್ವಿಯನು ॥
ಚಾಪಲದೆ ಬಿಗಿದೊಗೆಯಲಾಗಲೆ । ಭೂಪರಿಪು ಭಾರ್ಗವನ ಮುಖವದು ।
ಧೂಪಧೂಮದ ತೆರದೆ ನಿಷ್ಪ್ರಭವಾಗಿ ತೋರಿದುದು ॥ ೮೧ ॥

ದಿನದ ಕೊನೆಯಲಿ ಕಡಿಮೆ ಹೆಚ್ಚಾ- । ದನುಪಮಚ್ಛವಿಯಿಂದ ನಭದಲಿ ।
ದಿನದ ಚಂದ್ರರು ಮಿನುಗುವಂದದಿ ಭೃಗುಮುನೀಶ್ವರನ ॥
ತನುಜ ರಾಮನು ಮತ್ತೆ ದಶರಥ । ತನಯನೀಪರಿ ಜರಠ ತರುಣರು ।
ಜನರ ಮನಗಳಿಗಾಗ ಸಾದೃಶಹೊಂದಿ ತೋರಿದರು ॥ ೮೨ ॥

ಹರನ ಸುತನಾದಂಥ ಷಾಣ್ಮಾ- । ತುರನ ತೆರದಲ್ಲೆಸೆವ ರಾಮನು ।
ಪರಿಭವವ ಹೊಂದಿರ್ದ ಭಾರ್ಗವನನ್ನು ಮೇಣ್ ತನ್ನ ॥
ಬರಿದೆ ಯಾಗದ ಶರವನೀಕ್ಷಿಸಿ । ಕರುಣೆಯಿಂ ಕರಕರಗಿ ಮನದಲಿ ।
ಸರಸ ಮೃದುಸರದಿಂದ ಲವನಿಗೆ ಭರದೆಯಿಂತೆಂದ ॥ ೮೩ ॥

ನೀನು ಬ್ರಾಹ್ಮಣನಿರ್ದ ಮೂಲಕ । ಪ್ರಾಣದಾನವನಿತ್ತೆ ನನ್ನೆಯ ।
ಬಾಣ ನಿಷ್ಫಲವಾಗಿ ಪೋಗುವದೆಂತೊ ಮಾನಿತನೇ ॥
ಆನು ನಿನ್ನಯ ಮಾರ್ಗವನ್ನಿತ । ನೀನು ಪುಣ್ಯಾರ್ಜನದೆ ಗಳಿಸಿದ ।
ಸ್ಥಾನವನ್ನಿದರಿಂದ ಕೆಡಿಸಲಿ ತಿಳಿದು ಪೇಳೆನಗೆ ॥ ೮೪ ॥

ಎನಲು ಮುನಿಭಾರ್ಗವನು ವಿನಯದೆ । ವನಜನಾಭನಿಗೆಂದನೆಲೆ ನೀಂ- ।
ವಿನತೆ ಸುತ ಖಗಪತಿಯ ವಾಹನನೆಂದು ನಾಂ ಬಲ್ಲೆ ॥
ಪ್ರಣತ ಪಾಲನೆ ಭೂಮಿಗತ ತವ । ಘನತೆಯನು ಕಾಣಲ್ಕೆ ನಿನ್ನನು ।
ಕನಲಿಸಿದೆ ಬೇರೊಂದು ಕಾರಣವಿಲ್ಲದಲೆ ಪ್ರಭುವೆ ॥ ೮೫ ॥

ಗುರುವಿನಪರಾಧವನು ಮಾಡಿದ । ದುರುಳ ಕ್ಷತ್ರಿಯರನ್ನು ತರೆದಿಹ ।
ಧರಣಿಯನು ಪಾರ್ವರಿಗೆ ಯರ್ಪಣವನ್ನು ಮಾಡಿರುವ ॥
ಜರಠನಾದೆನ್ನನ್ನು ಶ್ರೀರಘು- । ವರನೆ ನೀಂ ಗೆಲ್ದುದ್ದು ನರರಲಿ ।
ಪರಮ ಗರಿಮೆಯನುಂಟು ಮಾಡುವದೆಂದು ನಂಬಿರುವೆ ॥ ೮೬ ॥

ಪಾವನೋತ್ತಮವಾದ ತೀರ್ಥ- । ಕ್ಕಾವಗಂ ಪೋಗಲ್ಕೆ ನನ್ನಯ ।
ದೇವದೇವನೆ ಗತಿಗೆ ಪ್ರತಿಬಂಧವನು ಮಾಡದಿರು ॥
ಆವ ಭೋಗದ ಲಿಪ್ಸೆಯಿಲ್ಲದ । ಸೇವಕನು ಸ್ವರ್ಧಾಮ ಸುಖವನು ।
ಭಾವಿಸನು ನೀನದರ ಪಥವನು ರೋಧಿಸೆಂದೆನಲು ॥ ೮೭ ॥

ಅರಸು ದಶರಥರಾಯನಣುಗನು । ಪರಶುಧರನಿಗೆ ನಿನ್ನ ಮನಸಿನ ।
ತೆರದೆ ಮಾಡುವೆನೆಂದು ಪೇಳಿದ ಮೇಲೆ ಶರವನ್ನು ॥

ಅರಸು ತನ್ನಯ ತರುಳರೀರ್ವರ । ವಿರಹತಾಪವ ತಾಳಲಾರದೆ ।
ಮರುಗಿ ಮನದೊಳು ಮುನಿವರೇಣ್ಯನ ಶಾಪವನು ಸ್ಮರಿಸಿ ॥
ಚರಿಸದಂತಹ ತನ್ನ ಪೂರ್ವದ । ದುರಿತ ಪರಿಮಾರ್ಜನಕೆ ಸರಿಯಾ- ।
ಗಿರುವ ಪ್ರಾಯಶ್ಚಿತ್ತ ಮರಣವಪೆಂದು ಭಾವಿಸಿದ ॥ ೧೦ ॥

ತನುಜರೀರ್ವರು ವನಕೆ ಪೋಗ- । ಲ್ಕಿನಕುಲೋದ್ಭವನಾದ ದಶರಥ ।
ಮನುಜರೊಡೆಯನು ಮರುಗಿ ಪಂಚತ್ವವನು ಹೊಂದಿದನು ॥
ಇನಿತು ಛಿದ್ರವ ದೊರೆತ ಕೂಡಲೆ । ಯನಿಶದಲಿ ಜಪ್ಪಿಸಿದ ರಿಪುಗಳು ।
ಮನಸಿನೊಳಗೀ ರಾಜ್ಯವಾಮಿಷದಂತೆ ತಿಳಿದಿಹರು ॥ ೧೧ ॥

ಪೆಂರೆಯುವವರಾರಿಲ್ಲದಂತಹ । ಪುರನಿವಾಸಿಗಳೆಲ್ಲರೂ ಬಹು ।
ತ್ವರಿತದಲಿ ಪರಮಾಪ್ತರಾಗಿರುವಂಥ ಸಚಿವರನು ।
ಅರುಹಿ ಭರತನಿಗೆಲ್ಲ ವಾರ್ತೆಯ- । ನಿರದೆ ಮಾತುಳಗೃಹದೆಯಾತನ ।
ಕರೆದು ತರಲಟ್ಟಿದರು ರಿಪುಗಳ ಭೀತಿಯಿಂ ಬೆದರಿ ॥ ೧೨ ॥

ಕೇಳಿ ಭೂಪಾಲಕನ ನಿಧನಕೆ । ಕಾಲರೂಪಿಣಿ ತನ್ನ ತಾಯಿಯೆ ।
ಮೂಲ ಕಾರಣಳೆಂದು ಭರತನು ತಿಳಿದು ಮನಸಿನಲಿ ॥
ಕೀಳು ನಡತೆಯ ಜನನಿಯನು ಮೇಣ್ । ಹಾಳು ರಾಜ್ಯವನುಳಿದು ಬಲವನು ।
ಮೇಳವಿಸಿ ಶ್ರೀರಾಮನನ್ನರಿಸುತ್ತೆ ಸಾಗಿದನು ॥ ೧೩ ॥

ಸರಸ ಬಂಧುಪ್ರೇಮದಿಂ ಬಲ- । ವೆರಸಿ ಭರತನು ಹೊರಟು ವನವನ ।
ತಿರುಗಿ ಸೀತಾರಾಮಲಕ್ಷ್ಮಣರಿಳಿದ ಸ್ಥಳಗಳನು ॥
ನಿರಕಿಸುತೆ ಕಣ್ಣೀರ ಸುರಿಸುತೆ । ತಿರದೆ ಪ್ರಭುವಿನಪಾದ ರಜವನು ।
ಧರಿಸಿಯಾತನ ಬಳಿಗೆ ಬಂದನು ಕೊನೆಗೆ ಕಷ್ಟದಲಿ ॥ ೧೪ ॥

ಪರಮ ಪುರುಷನ ಪಾದಯುಗಳ- । ಕ್ಕೆರಗಿ ಭರತನು ತಮ್ಮ ಪ್ರಭುವಿನ ।
ಮರಣವಾರ್ತೆಯನರುಹಿ ಪ್ರಾರ್ಥನೆಯನ್ನು ಮಾಡಿದನು ॥
ದೊರೆಯೆ ರಾಜ್ಯಶ್ರೀಯು ನಿನ್ನಯ । ವಿರಹತಾಳದೆ ತ್ವರದೆ ನಿನ್ನನು ।
ಕರೆದು ತರಲಟ್ಟಿಹಳು ತನ್ನನ್ನಿರದೆ ಪೊರೆಯೆಂದು ॥ ೧೫ ॥

ಹಿರಿಯ ಬಾಂಧವನನ್ನು ವರ್ಜಿಸಿ । ಧರಣಿ ಪಥುವಿನ ನಾನೆ ವರಿಸಿದ- ।
ರಿರದೆ ಗುರುತರ ಪಾತಕಕೆ ಗುರಿಯಾಗಿ ಲೋಕದಲಿ ।
ಪರಮ ನಿಂದೆಗೆ ಪಾತ್ರನಾಗುವೆ । ನರಕ ಸಾಧನವನ್ನು ಗಳಿಸುವೆ ।
ಭರತನೀ ಪರಿಯಲ್ಲಿ ಮಾನಸದೊಳಗೆ ಚಿಂತಿಸುತೆ ॥ ೧೬ ॥

ಸುರರಲೋಕಕೆ ತೆರಳಿದಂತಹ । ಗುರುವಿನಪ್ಪಣೆಯನ್ನು ಮೀರದ ।
ಪರಮ ಪುರುಷನ ದಿವ್ಯ ಪಾದುಗೆಗಳನು ಮುಂಮಾಡಿ ॥

ತಿರುಗಿಯಾತನು ನಗರಕೈದುವ । ವರೆಗೆ ರಾಜ್ಯದ ಕಾರ್ಯಗಳನುರೆ ।
ಜರಗಿಸಲು ಯಾಚಿಸಿದ ಭರತನು ಪಾದುಕಂಗಳನು ॥ ೧೭ ॥

ಹಾಗೆಯಾಗಲಿಯೆಂದು ಭರತನಿ- । ಗಾಗ ಪಾದುಕೆಗಳನು ವಿತರಿಸಿ ।
ರಾಘವನು ಕೊಡಲಪ್ಪಣೆಯು ನಿಜಪುರಕೆ ಪೋಗದಲೆ ॥
ನಾಗಿ ನಂದಿಗ್ರಾಮಕಾತನು । ರಾಘವನ ನಿಕ್ಷೇಪವೆಂದನು- ।
ರಾಗದಿಂದಾ ರಾಜ್ಯಪಾಲನವನ್ನು ಮಾಡಿದನು ॥ ೧೮ ॥

ಭೂಮಿಜಾಪತಿಯಲ್ಲಿ ನಿಶ್ಚಲ । ಪ್ರೇಮವುಳ್ಳಾ ಭರತ ಭೂಪನು ।
ಕಾಮಿಸದೆ ರಾಜ್ಯೋಪಭೋಗವ ತನ್ನ ಪಡೆದವಳ ॥
ತಾಮಸವ ತೊಳೆದೊಗೆಯಲಾತನು । ನೇಮದಿಂದೀತೆರದೆ ವರ್ತಿಸಿ ।
ರಾಮನಾಮದ ಜಪವಮಾಡುತ ಕಾಲಕಳೆದಪನು ॥ ೧೯ ॥

ವನಿತೆಯಿಂದೊಡಗೂಡಿ ವನದಲಿ । ವನಜನಾಭನು ವನ್ಯಫಲಗಳ- ।
ನನುದಿನದೆ ತಿನ್ನುತ್ತೆ ವಾನಪ್ರಸ್ಥದಾಶ್ರಮದ ॥
ಇನಕುಲೋದ್ಭವರಾದ ವೃದ್ಧರ- । ಘನ ಮಹಾವ್ರತವನ್ನು ಚರಿಸು- ।
ತ್ತನುಜ ಲಕ್ಷ್ಮಣನೊಡನೆ ಕಾಲಕ್ರಮಿಸುತಿರ್ದಪನು ॥ ೨೦ ॥

ಪರಮ ಮಹಿಮೆಯು ಬಲದೆ ರಾಮನು । ಮರದ ನೆರಳನು ನಿಲ್ಲಿಸಲ್ಲಿಯೆ ।
ಧರೆಯು ತರುಳೆಯು ತೊಡೆಯಮೇಲ್ಲಿರವಿಟ್ಟು ಚಣವರೆಗೆ ॥
ದುರಭಗಮವಾದಂಥ ವಿಪಿನದೆ । ಚರಿಸಿ ತಾಂ ಪಟ್ಟಂಥ ಶ್ರಮವ- ।
ನ್ನಿರದೆ ವಿಶ್ರಮಗೊಂಡು ಕಳೆಯುತ್ತಿರುವನಾಗಾಗ್ಗೆ ॥ ೨೧ ॥

ಸುರರ ಪತಿಸುತನಾದ ಕರಟನು । ಧರೆಯು ತರುಳೆಯು ತಿಣ್ಣವೊಲೆಗಳ ।
ನಿರಕಿಸಿಂತಹ ಸಮಯದಲಿ ಸ್ಮರಬಾಧೆಯಿಂಗೂಡಿ ॥
ದುರುಳತನದಿಂ ತನ್ನ ನಖವಂ- । ಜರದೆ ಗೆರೆಗಳ ಕೊರೆದು ರಾಮನ ।
ಸುರತ ನೈಪುಣ್ಯವನು ಜರೆಯುವ ತೆರದಿ ತೋರಿದನು ॥ ೨೨ ॥

ಉರದ ಪ್ರಾಂತಕ್ಕೆರಗೆ ಪರಭೃ- । ತ್ತಿರದೆ ರಾಮೆಯು ರಾಮಚಂದ್ರನ ।
ಕರದೆ ಗಾಬರಿಯಿಂದಲೆಬ್ಬಿಸಲವನು ತತ್ಕ್ಷಣಕೆ ॥
ಕರದೆ ಕಾಗೆಯನೆಚ್ಚಲದು ಗರ- । ಗರನೆ ಬಾನ್ಹಳದಲ್ಲಿ ತಿರುಗುತ ।
ಪರಮ ಸಾಯಸದಿಂದಲಕ್ಷಿಯನಿತ್ತು ಬದುಕಿಹುದು ॥ ೨೩ ॥

ಪುರದ ಸನಿಹಕ್ಕಿರ್ದ ಮೂಲಕ । ಭರತಭೂಪನು ಚಿತ್ರಕೂಟದ ।
ಗಿರಿಯ ತಾಣಕೆ ತಿರುಗಿ ಬಾರದಲಿರನು ತಾನೆಂದು ॥
ಅರಿತು ಮನದೊಳು ರಾಮಚಂದ್ರನು । ತ್ವರಿತದಲಿಯಲ್ಲಿಂದ ಹೊರಡಲು
ಹರಿಣಗಳು ಪಿರಿದಾದ ಮೋಹವೆ ಶೋಕವಾಡಿದವು ॥ ೨೪ ॥

ಥೊಳೆವ ನಕ್ಷತ್ರಗಳ ಮಂಡಳ- । ದೊಳಗೆ ಸೂರ್ಯನು ಮಳೆಯಕಾಲವು ।
ಕಳೆದು ದಕ್ಷಿಣ ದಿಕ್ಕಿನಲಿ ಸಂಚಾರ ಮಾಳ್ಪಂತೆ ॥
ನಳಿನನಾಭನು ಮುನಿವರೇಣ್ಯರ- । ಕುಲಗಳಿಂದಾತಿಥ್ಯಕೊಂಡುರೆ ।
ಚಲಿಸಿದನು ತೆಂಕಣದ ದಿಗ್ಭಾಗದಲಿ ಪೊರಮಟ್ಟು ॥ ೨೫ ॥
ಅರಸು ಸಿರಿಯುನುಹಟವದೆ ತಾನಪ । ಹರಿಸಿಕೇಕಯಿದೇವಿ ತನ್ನಂಘ್ರಿ ।
ಪಿರಿಯಸವತಿಯು ತರುಳನನು ವನವಾಸಕಟ್ಟಿದರೂ ॥
ಧರಣಿಸುತೆ ಶ್ರೀರಾಮನನ್ನನು- । ಸರಿಸಿ ಬನಬನದಲ್ಲಿ ತಿರುಗುತೆ ।
ಸಿರಿಯೆತಾನವತರಿಸಿ ಬಂದಿರುಪಂತೆ ತೋರಿದಳು. ॥ ೨೬ ॥
ಮುನಿಯ ಸತಿಯನು ಸೂಯೆರಾಮನ । ವನಿತೆ ಜಾನಕಿಗಿತ್ತ ಕೇಸರ ।
ಜನಿತ ತನುರಂಜನದ ದ್ರವ್ಯದ ಸವುಸವವು ತೀವಿ ॥
ಘನಮನೋಹರ ವಾದಸುರಭಿಯು । ವನಜಗಳನುರೆ ತ್ಯಜಿಸಿ ಯಲಿಗಳ ।
ವನದೆ ತನ್ನೆಡೆಯಲ್ಲಿ ಸಂಚರಿಪಂತೆ ಮಾಡಿದುದು ॥ ೨೭ ॥
ಚಂದಿರನ ಮಾರ್ಗಾವರೋಧಿಸ । ಬಂದರಾಹುವಿನಂದದಲಿ ಯರ- ।
ವಿಂದ ಲೋಚನನಾದ ರಾಮನ ಮುಂದೆ ದಾರಿಯಲಿ ॥
ಹಂದಿ ಮೊಗದ " ವಿರಾಧ "ನೆಂಬುವ । ಸಂಧ್ಯೆ ಮೋಡದ ಕೆಂಪು ವರ್ಣದ ।
ಮಂದಿಯನು ಕೊಂದೊನೆವ ರಾಕ್ಷಸ ಬಂದು ಸಂಧಿಸಿದ ॥ ೨೮ ॥
ಮುಂದೆ ರಾಮನು ನಡುವೆ ಸೀತೆಯು । ಹಿಂದೆ ಲಕ್ಷ್ಮಣನಿನಿತು ಕುರಿಮೂರ್- ।
ಮಂದಿ ಕಟ್ಟಾರಣ್ಯದೊಳು ನಡೆದಿರಲು ಮುನ್ನೋಡಿ ॥
ಸಂಧಿಸಾಧಿಸಿಕೊಂಡು ರಾಕ್ಷಸ- । ನರಿದು ಮಾಯಾಬಲದೆ ಜನಕನ ।
ನಂದಿನಿಯನಪಹರಿಸಿ ಬಾನ್ದಳದಲ್ಲಿ ಸಾಗಿದನು. ॥ ೨೯ ॥
ದುರುಳ ರಾತ್ರಿಂಚರನ ಚರಿತಕೆ । ಕೆರಳಿ ರಾಘವನಾಗ ಕರದಲಿ ।
ಧರಿಸಿ ಕಾರ್ಮುಕವನ್ನು ಶರಸಂಧಾನವನು ಮಾಡಿ ॥
ಭರದೆಹೊಡೆಯಲ್ಕವನು ದಪ್ಪನೆ । ಯೆರಲದಿಂ ಮುರಜಿದ್ದ ತೆರದಲಿ ।
ಧರೆಯಮೇಲೊರಗಿದನು ಪಪ್ಪನೆ ಪ್ರಾಣವನು ತೊರೆದು ॥ ೩೦ ॥
ಮುನಿಯಗಸ್ತ್ಯಿಯ ಬೆಸನದೆಂತೆಯೆ । ವನಜನಾಭನು ಪಂಚವಟಿಯಲಿ ।
ಜನಕ ತನುಜೆಯು ಮತ್ತೆಯನು ಜನಕೂಡ ವಾಸಿಸುತೆ ।
ಘನತೆಯಲಿ ಬೆಳೆದಂಥ ವಿಂಧ್ಯಾ- । ಸುನಗದಂತೆಯೆ ಮೇರೆ ಮೀರದೆ ।
ದಿನಪ ಕುಲದಾಚಾರವನ್ನುರೆ ಬಿಡದೆ ನಡಿಸಿಹನು ॥ ೩೧ ॥
ಬಿಸಿಲುಗಾಲದ ತಾಪವನು ಗಡ । ವಿಷಧರಾಂಗನೆ ಸಹಿಸಲಾರದೆ ।
ಮಿಸುಪ ಚಂದನ ವೃಕ್ಷದೆಡೆಯಲಿ ಪೋಘುವಂದದಲಿ ॥

ಅಸಮಸುಂದರನಾದ ರಾಮನ । ಸುಷುಮೆಯಿಂ ರಾವಣನ ಭಗಿನಿಯು ।
ಕುಸುಮಶರಬಾಧೆಯನು ತಾಳದೆ ಬಂದಳವನೆಡೆಗೆ ॥ ೩೨ ॥

ಕಾಮನನು ಗೆಲ್ದಂಥ ಜಗದಭಿ- । ರಾಮರೂಪನ ಮುಂದೆಯಾತನ ।
ಕಾಮಿನಿಯು ಕುಳಿತಿರಲು ತನ್ನಯ ವಂಶವನ್ನರುಹಿ ॥
ಕಾಮಚಾರಿಣಿಯಾದ ರಾಮೆಯು । ಕಾಮಿಸಿದಳಾಗವನ ಕರವನು ।
ಕಾಮ ಪೆರ್ಚಿದ ಪೆಣ್ಗಳರಿವರೆ ತಕ್ಕ ಸಮಯವನು ॥ ೩೩ ॥

ಸರಸಗುಣಕುಲರೂಪಯುತಳಾ- । ದರಸಿಯೆನಗಿರುತಿರುವ ಮೂಲಕ ।
ವರಿಸಲಾರೆನು ನಾನು ನಿನ್ನನು ತರುಣಿ-ಗುಣ-ಮಣಿಯೇ ॥
ಪರಮ ಸುಂದರನಾದ ನನ್ನಯ । ತರುಣ ಬಾಂಧವನನ್ನು ಮರುಕದೆ ।
ವರಿಸಿ ಸುಖಿಯಾಗೆಂದು ರಾಮನು ಪೇಳ್ದನಾ ಪೆಣ್ಗೆ ॥ ೩೪ ॥

ಕೇಳಿ ರಾಮನ ವಚನಗಳನಾ- । ಬಾಲೆ ಲಕ್ಷ್ಮಣನನ್ನು ಪ್ರಾರ್ಥಿಸೆ ।
ಲೋಲೆ ನೀಂ ಮಮಬಾಂಧವನ ಕೊರಳಲ್ಲಿ ಪ್ರಥಮದಲಿ ॥
ಮಾಲೆಯನು ಮನದಿಂದ ಹಾಕಿದೆ । ಯೇಳು ಪೋಗತ್ತೆಂದು ಪೇಳಲು ।
ಕೂಲಗತಜಲದಂತೆ ರಾಮನ ಕಡೆಗೆ ತಿರುಗಿದಳು ॥ ೩೫ ॥

ಒಲವಿನಿಂದಿತ್ತತ್ತ ಚಲಿಸುವ । ನೆಲೆಯಗಾಣದ ಲಲನೆಯನು ಮೈ- ।
ಥಿಲಿಯು ಕಂಡುಪಹಾಸದಿಂ ಗಹಿಗಹಿಸಿ ನಗಲವಳು ॥
ತಳೆದ ಸೌಮ್ಯಾಕಾರವನ್ನರೆ । ಗಳಿಗೆಯೊಳು ಸಂತ್ಯಜಿಸಿ ಜಲಧಿಯು ।
ಪೊಳೆವ ಚಂದ್ರೋದಯದೆ ಕ್ಷೋಭಿಸುವಂತೆ ಮುಳಿದಿಹಳು ॥ ೩೬ ॥

ಎಲೆಲೆ ನೀನುಪಹಾಸದಿಂ ಮೈ- । ಥಿಲಿಯೆ ನನ್ನವಮಾನಿಸಿದೆ ಗಡ ।
ಮಲಗಿಕೊಂಡಿರುವಂಥ ಪೆರ್ಬುಲಿಯನ್ನು ಕೆರಳಿಸಿದ ॥
ಹಳುವಿನಲ್ಲಿಯ ಪುಲ್ಲೆಯಂದದಿ । ಫಲವ ಗಳಿಸುವೆಯೆಂದು ಕ್ರೋಧಾ ।
ನಲದೆಯುರಿಯುತ್ತುಸುರಿದಳು ರಕ್ಕಸಿಯು ನೆರೆನೊಂದು ॥ ೩೭ ॥

ಅಲಯಿಸಿ ಕೂರ್ನ್ನಡಿಗಳನು ಜಗ- । ಪಾಲಕನ ತೊಡೆಯೇರಿದಂತಹ ।
ಬಾಲೆಯನು ಭಯ ಬಡಿಸುವಂತೆಯೆ ಶೂರ್ಪಣಖೆಯಾಗ ॥
ತಾಳಿನಂದದೆ ಬೆಳೆದು ತನ್ನಯ । ಕಾಲ್ಗಳುಗುರುಗಳನ್ನು ಚಾಚುತೆ ।
ಬಾಳು ಬಾಳೆಂದೊದರಿದಳು ಘನಘೋರರವದಿಂದ ॥ ೩೮ ॥

ವಿಕಟ ರಾತ್ರಿಂಚರೆಯು ಮುಂಚೆಗೆ । ಪ್ರಕಟಿಸಿದ ಕಿವಿಗಿಂಪುದೋರಿದ ।
ಪಿಕದ ಸುಸ್ವರವನ್ನು ಪೋಲ್ದಿಹ ವಾಣಿಯಿಂ ಮತ್ತೂ ॥
ಅಕಟ-ಗೋಮಾಯುವಿನ ತೆರದಲಿ । ಪ್ರಕೃತದಲಿ ಕೇಳಿರ್ದ ರವದಿಂ ।
ವಿಕೃತಿಯುಳ್ಳವಳೆಂದು ಲಕುಮಣನರಿತನಿವಳನ್ನು ॥ ೩೯ ॥

ಕೆರಳಿ ರಾಮಾನುಜನು ತನ್ನಯ । ಹಿರಿದು ಕರವಾಲವನು ಕರದಲಿ ।
ಧರಿಸಿ ಚೆಪ್ಪರದಲ್ಲಿ ಪೊಕ್ಕಿರುವಂಥ ರಕ್ಕಸಿಯು ।
ಶಿರವನರೆಯುದೆ ನಾಸಿಕವ ಮೇ- । ಸೆರಡು ಕರ್ಣಗಳನ್ನು ಛೇದಿಸಿ ।
ಭರವ ಮಾಡಿದನವಳ ವೈರೂಪ್ಯದಲಿ ಮತ್ತಿಷ್ಟು ॥ ೪೦ ॥

ದಾರುಣಾಕೃತಿಯುಳ್ಳ ಮರ್ಜಿಗೆ । ಧಾರುಣಿಗೆ ದೃಢವಾಗಿ ಕಾಲ್ಗಳ- ।
ನೂರಿ ಮೇಲಕ್ಕಾಗಸದ ಪಥದಲ್ಲಿ ತಾಂ ಹಾರಿ ॥
ಚೀರಿ ಕರ್ಕಶರವದೆ ತನ್ನಯ । ಚೂರಿಯೋಪಾದಿಯಲಿ ತೋರುವ ॥
ಕ್ರೂರ ನಖಗಳ ಚಾಚಿ-ರಾಘವರನ್ನು ಹೆದರಿಸುತೆ ॥ ೪೧ ॥

ಮರುಗಿ ಯಾಸ್ಥಳದಿಂದಲಾಕೆಯು । ಹೊರಟು ರಕ್ಕಸರಿರುವ ತಾಣ- ।
ಕ್ಕೆರಲದಂತತಿ ವೇಗದಿಂ ಬಂದೊದೆಗಿಯಲ್ಲಿರುವ ॥
ದುರಳ ಖರ ಮುಂತಾದ ರಾತ್ರಿಂ- । ಚರರ ಗಡಣದ ಮುಂದೆ ರಾಮನು ।
ಮರೆಯದಂಥಪಕೃತಿಯ ಮಾಡಿದನೆಂದು ಪೇಳಿದಳು ॥ ೪೨ ॥

ಕಾಲನಂತುರವಣಿಸಿ ಯಾಕೆಗೆ । ಯೇಳು ತೋರಿಸು ನಮಗೆ ರಾಮನ ।
ಶೀಳಿ ಬಿಡುತಿಹವೆಂದು ಪೇಳುತ ಖೂಳ ರಕ್ಕಸರು ॥
ಬೋಳ ಮೂಗಿನ ಶೂರ್ಪಣಖಿಯನು । ಕಾಳಗಕೆ ಮುಂಮಾಡಿ ಮುಂಚೆಗೆ ।
ಕಾಳಗೌತಣ ಕೊಟ್ಟು ಹೊರಟರು ಪರಮರಭಸದಲಿ ॥ ೪೩ ॥

ನೆಗಹಿಯಾಯುಧಗಳನು ಮೈಮೇ- । ಲ್ಮಗುರಿ ಬರುತಿರುವಂಥ ರಕ್ಕಸ- ।
ಹಗೆಗಳನು ಜಯಿಸಲ್ಕೆ ಸಜ್ಜೀಕರಿಸಿ ಚಾಪವನು ॥
ಸುಗುಣ ಸುಂದರನಾದ ರಾಮನು । ಬಗೆದು ಮನದೊಳು ತನ್ನ ಸತಿಯ- ।
ನ್ನಗಲದಲೆ ಪೊರೆಯೆಂದು ತಮ್ಮನಿಗಾಜ್ಞೆ ಮಾಡಿದನು ॥ ೪೪ ॥

ಆ ಸಮರ ರಣರಂಗದಲಿ ಶ್ರೀ- । ದಾಶರಥಿ ರಾಘವನ ಮೈಮೇಲ್ ।
ಸಾಸಿರದೆ ಕೂಡಿರ್ದ ರಾಕ್ಷಸ-ಭಟರು ಕೈಗಳಲಿ ॥
ಬೀಷಣಾಕೃತಿಯಸಿಗಳನ್ನಾ- । ವೇಶದಿಂ ಪಿಡಿದೈದುತಿರೆ ಸ- ।
ರ್ವೇಶನೆಲ್ಲರಿಗಾಗ ಬೇರ್ಬೇರಾಗಿ ತೋರಿದನು ॥ ೪೫ ॥

ಖಳರು ಬಳಸುತ್ತಿರುವ ದೂಷಣಗಳನು ಸಹಿಸದೆ ಸಜ್ಜನರು ಸಲೆ ।
ಗಳಿಗೆಯೊಳು ಪ್ರತಿಕಾರ ಮಾಡುವ ತೆರದೆ ರಾಘವನು ॥
ಮುಳಿದು ಬಹು "ದೂಷಣ" ದುರಾತ್ಮನ । ಬಲವ ಮುರಿದೊಗೆಯಲ್ಕೆ ತ್ವರೆಯಲಿ ।
ಜ್ವಲನನಂದದೆ ಭೀಷಣಾವೇಶವನು ತಾಳಿದನು ॥ ೪೬ ॥

ದುರುಳ ಖರದೂಷಣದ ಮೇಣ್ಮೂರ- । ಶಿರನ ಶಿರಗಳ ಶರದೆ ತರೆಯುವ ।
ನಿರತಿಶಯ ವಿಕ್ರಮನ ಪಾವನ ತಮ ಪರಾತ್ಪರನ ॥

ತರುಣಿ ಕುಲಸಂಭವನ ರಾಮನ । ಕರದ ಚಾಪಲ್ಯವನು ತಿಳಿದಪ- ।
ರಿರುವರೆಂತೋ ಧರಣಿಯಲಿ ಮೇಣ್ಸುರರ ಪುರದಲ್ಲಿ ? ॥ ೪೭ ॥
ಪಾಣಿ ಕರ್ಮ್ಮವಿಕಾರರ ಶ್ರೀ- । ಶ್ರೀನಿವಾಸನು ಹೊಡೆದ ಪೊಸ ಪೊಸ- ।
ಬಾಣಗಳ ಪರಿಶುದ್ಧವಾಗಿಯೆಯುಳಿದು ಮರ್ಬಿಗರ ॥
ಪ್ರಾಣಗಳನುರೆ ಹರಿಸಿ ಬಿಟ್ಟವು । ಶೋಣಿತವ ವನಪಕ್ಷಿ ಮೃಗಗಳು ।
ಪಾನ ಮಾಡಿದವಂದದಿಂ ಕುಣಿಕುಣಿದು ಚಣಾಚಣದೆ ॥ ೪೮ ॥
ಪುಂಡತನದಲಿ ಬೆಳದ ರಕ್ಕಸ- । ಗಂಡುಗಲಿಗಳ ದಂಡಗಳ ಕೋ- ।
ದಂಡ ಪಾಣಿಯು ಹೊಡೆದು ಖಂಡಿಸಿ ದಿಂಡುಗೆಡಹಲ್ಕೆ ॥
ರುಂಡವಿಲ್ಲದ ದೇಹಗಳು ದೋ- । ರ್ದಂಡಗಳನೆತ್ತೆತ್ತಿ ಮೇಲಕೆ ।
ತಂಡ ತಂಡದೆ ತಾಂಡವವ ಮಾಡಿದವು ಗಹಗಹಿಸಿ ॥ ೪೯ ॥
ಕಾಮುಗಾಮಿಗಳಾದ ದುರುಳರ । ಸೀಮೆಯಿಲ್ಲದ ಪ್ರೌಢ ಸೇನಾ- ।
ಕಾಮಿನಿಯು ಶ್ರೀರಾಮನಿಂ ಸಂಗ್ರಾಮದಲಿ ಸೋತು ॥
ಭೂಮಿಮೇಲ್ಬಿರವಾಗಿಯೇ ವಿ- । ಶ್ರಾಮಗೊಳ್ಳುವದಕ್ಕೆ ಶೀತಲ- ।
ವ್ಯೋಮಗಾಮಿ ಪತತ್ರಿಗಳ ನೆಳಲಲ್ಲಿ ಮಲಗಿದಳು ॥ ೫೦ ॥
ಪರಮ ದಾರುಣವಾದ ಸಮರದೆ । ಪರಮ ಪುರುಷನ ಪ್ರಖರತರವಾ- ।
ಗಿರುವ ಬಾಣಗಳಿಂದ ರಾಕ್ಷಸರೆಲ್ಲರೂ ಮಡಿದು ॥
ಧರಣಿ ಮೇಲುರುಳಿದರು ಯುದ್ಧದ । ದುರುಳ ವಾರ್ತೆಯನೊಯ್ದು ಲಂಕೇ- ।
ಶ್ವರನಿಗರುಹಲ್ಕುಳಿದಳೊರ್ವಳೆ ಶೂರ್ಪಣಖಿಯೊಂದು ॥ ೫೧ ॥
ಭರದೆ ಶರದಿಂ ಕರಣಗಳನುರೆ । ತರೆದು ಭಗಿನಿಯ ಮೂಸ ಖಂಡಿಸಿ ।
“ ಖರ ” ನೆ ಮೊದಲಾಗಿರುವ ನಂಟರ ಹರಣವನು ಕೊಂಡು ॥
ಮೆರೆವ ತನ್ನಯ ಶಿರಗಳಲಿ ಶ್ರೀ । ಧರನು ಪಾದವ ನಿಟ್ಟ ಪರಿಯಲಿ ।
ಹರನ ವರದಿಂ ಬೆಳೆದ ರಾಕ್ಷಸವರನು ನೆರೆನೊಂದು; ॥ ೫೨ ॥
ತ್ವರದೆ ಮಾರೀಚನ ಮುಖಾಂತರ । ಸರಸ ಹರಿಣದ ವ್ಯಾಜದಿಂ ಶ್ರೀ- ।
ಹರಿಯು ಲಕುಮಣನನ್ನು ವಂಚಿಸಿಯೊಯ್ದು ದೂರದಲಿ ॥
ಪೊರೆಯ ಬಂದ ಜಟಾಯು ಪಕ್ಷಿಯ । ಹರಿದು ಪಕ್ಕಗಳನ್ನು ಧರಣಿಯ ।
ತರುಳೆಯನು ಹರಿಸಿದನು ಮಾಯಾಬಲದೆ ದಶಶಿರನು ॥ ೫೩ ॥
ವನಜ ಲೋಚನೆಯನ್ನು ದಶರಥ- । ತನುಜರೀರ್ವರು ಹುಡುಕುತಿರೆಯಾ- ।
ವನದೆ ಖಲದಶಶಿರನ ಸಂಗಡ ದ್ವಂದ್ವಯುದ್ಧದಲಿ ॥
ಹೆಣಗಿ ಪೌರುಷವನ್ನು ತೋರಿಸಿ । ಕೊನೆಗೆಯಪಜಯ ಹೊಂದಿ ಕಾಲನ ।
ಮನೆಯ ಪಥದಲ್ಲಿರುವ ತಂದೆಯ ಮಿತ್ರಗೃಧ್ರನನು; ॥ ೫೪ ॥

ನಿರಿಕಿಸಿದರಾ ಮೇಲೆ ಯಾತನ। ಸರಸ ಮುಖದಿಂ ಧರೆಯು ತರುಳೆಯು।
ದುರುಳ ರಾವಣನೊಯ್ದ ವಾರ್ತೆಯನೆಲ್ಲ ಕೇಳಿದರು॥
ಜಠರನಾದವನಂಗದಲ್ಲಿಯು। ಪರಿವ ರುಧಿರದೆಯುವನು ಮಾಡ್ಡಿದ।
ಪರಮ ಶೌರ್ಯದ ಕಾರ್ಯವನು ಸ್ಫುಟವಾಗಿ ನೋಡಿದರು॥ ೫೫॥

ತಂದೆ ತೀರಿದ ದುಃಖ ಪುನರಪಿ। ಯಂದು ನೂತನವಾಯ್ತು ಗೃಧ್ರನು।
ಹೊಂದಿದನು ಪಂಚತ್ವವನು ಸುಖದಿಂದಲಾ ಮೇಲೆ॥
ಮುಂದೆ ಮಾಡುವ ಕಾರ್ಯಗಳ ನೃಪ-। ನಂದನರು ವಿಧಿಯಂತೆ ಜರಿಗಿಸಿ-।
ತಂದೆಗೆಳೆಯನ ಋಣವ ಮುಟ್ಟಿಸಿ ಬಿಟ್ಟರಾದರದೆ॥ ೫೬॥

ವನಜನಾಭನ ಬಾಣಹತಿಯಿಂ। ಮುನಿಯು ಶಾಪದೆ ಮುಕ್ತನಾದಾ।
ಘನ "ಕಬಂಧ"ನ ಮಾತಿನಿಂದಲೆ ದಾಶರಥಿ ತಾನು॥
ಮನಸಿನಿಂ "ಸುಗ್ರೀವ" ಕೀಶನ। ಗೆಣೆತನವ ಕಟ್ಟಿದನು ಜಗದೊಳು।
ಜನರ ನೇಹವು ಕಲೆಯುವದು ಸತಿ ವ್ಯಸನ ಸಮತೆಯಲಿ॥ ೫೭॥

ರಾಮಚಂದ್ರನು "ವಾಲಿ"ಯಸು ರಣ-। ಭೂಮಿಯಲಿ ಸಂಹರಿಸೆಯಾತನ।
ಧಾಮವನು "ಸುಗ್ರೀವ" ಕೀಶನು ಧಾತುಸ್ಥಾನವನು॥
ನೇಮದಿಂದಾದೇಶವದು ಸಂ-। ಕ್ರಾಮಿಸುವ ತೆರದಲ್ಲಿ ಜಿಡದಲೆ।
ಪ್ರೇಮದಿಂದಲೆ ವಶಕೆ ಕೊಂಡನು ಪರಮ ಹರುಷದಲಿ॥ ೫೮॥

ದಾಶರಥಿ-ಸತಿಯನ್ನು ಹುಡುಕಲು। ಕೀಶರಾಜನು ಕಪಿಗಳನು ದಿಗ್-।
ದೇಶದೇಶಕೆ ಕಳುಹಲವು ಚೆನ್ನಾಗಿ ಶೋಧಿಸುತೆ॥
ಬೇಸರಿಲ್ಲದೆ ಯೆಲ್ಲಕಡೆಯಲಿ। ಲೇಶ ವಿಶ್ರಾಂತಿಯನು ಕೊಳ್ಳದೆ।
ಶ್ರೀಶ-ಚಿತ್ತತರಂಗದಂತೆಯೆ ಸತತಸಾಗಿಹವು॥ ೫೯॥

ಮರುತ ಸುತ ಮೈಥಿಲಿಯ ಶೋಧಕೆ। ಚರಿಸುತಿರೆ ದಾರಿಯಲಿ ಕಂಡನು।
ವರ ಜಟಾಯುವಿನಣ್ಣ ಸಂಪಾತಿಯನು ಸಾಜದಲಿ॥
ಅರಿತು ತಾನವನಿಂದ ವಾರ್ತೆಯು। ಭರದೆ ಸಾಗರವನ್ನು ನಿರ್ಮಮ।
ನರರು ಸಂಸಾರವನು ದಾಂಟುವ ತೆರದೆ ದಾಂಟಿದನು॥ ೬೦॥

ಹುಡುಕಿದನು ಲಂಕೆಯಲಿ ರಾಮನ। ಮಡದಿಯನು ಮನೆ ಮನೆಗಳಲಿ ಬಲು।
ಕಡೆಗೆ ಕಂಡನಶೋಕವನದೊಳು ಕ್ರೂರ ರಕ್ಕಸರ॥
ಮಡದಿಯರ ಗಡಣದಲಿಯವಳನು। ಕೆಡಕು ವಿಷವಲ್ಲಿಗಳ ಮಧ್ಯದೆ।
ಯಡಗಿಕೊಂಡ ಮಹೌಷಧಿಯ ತೆರದಲ್ಲಿ ಮಾರುತಿಯು॥ ೬೧॥

ತಟ್ಟನೇ ಮರ್ಕಟನು ರಾಮನ। ಪಟ್ಟದರಸಿಗೆ ಋಾನದುಂಗುರ।
ಕೊಟ್ಟು ಪ್ರಭುವಿನ ಸ್ಥಿತಿಯನಾಕೆಗೆಯರುಹೆಯಾಸತಿಯು।

ಪಟ್ಟನೇ ಕೊಂಡದನು ಶಿರದ-। ಲ್ಲಿಟ್ಟು ವಂದಿಸಿ ಪರಮ ಪ್ರೇಮದೆ।
ಕೊಟ್ಟು ಚುಂಬನವನ್ನು ಬೆರಳಲ್ಲಿಟ್ಟು ಸುಖಿಸಿದಳು ॥ ೬೨ ॥

ಸೀತೆಗಾಕೆಯು ನಾಥನುಸುರಿದ । ಮಾತುಗಳನುರೆ ಪೇಳಿ ಮಾರುತಿ ।
ವಾತವೇಗದೆ ತಿರುಗಿ ಲಂಕಾಪಟ್ಟಣಕೆ ಬಂದು ॥
ಖ್ಯಾತರಾವಣಪುತ್ರನಕ್ಷನ । ಭೀತಿಯಿಲ್ಲದೆ ಸದೆದನಂತರ ।
ಕೋತಿಗುಚಿತಾದಂಥ ಕೃತಿಯಿಂ ಸುಟ್ಟನಾಪುರಿಯು ॥ ೬೩ ॥

ಜಾನಕಿಯು ಕರದಿಂದ ಪ್ರತ್ಯಭಿ-। ಜ್ಞಾನ-ರತ್ನವಕೊಂಡು ಕಪಿಯು-।
ಡ್ಡಾಣವನು ಮಾಡ್ಯೆದೆ ಬೇಗನೆ ರಾಮನಿದ್ದೆಡೆಗೆ ॥
ಖೂನದೊಡವೆಯು ನೋಡಿ ಯಾತಗೆ। ತಾನೆ ಮೈಥಿಲಿ ಬಂದ ಪರಿಯುಲಿ।
ಮೂನ ಮೀರಿದ ಸೌಖ್ಯವಾಯಿತದೇನು ಪೇಳುವೆನೋ ॥ ೬೪ ॥

ಸಾರಸಾಕ್ಷನ ಹಸ್ತಪುಟದಲಿ । ಮಾರುತಿಯು ತಂದಿತ್ತ ಸುಂದರ ।
ಮಾರ ಮಾತೆಯು ಸರಸ ಚೂಡಾರತ್ನವನ್ನವನು ॥
ತೋರ ಸಂತಸದಿಂದ ತನ್ನಯ । ಸ್ಫಾರವಾದುರದಲ್ಲಿ ಸ್ಥಾಪಿಸಿ ।
ಚಾರುಗಾತ್ರಿಯ ಸ್ಪರ್ಶ ಸೌಖ್ಯವನಾಗ ಹೊಂದಿದನು ॥ ೬೫ ॥

ವಾನರನ ಮೊಗದಿಂದ ತನ್ನಯ। ಮಾನಿನಿಯು ವೃತ್ತಾಂತವನ್ನರೆ।
ತಾನು ಕೇಳಿದ ಮೇಲೆಯಾಕೆಯ ಸಂಗಮೋತ್ಸವದೆ ॥
ಮಾನಿಸಿದನರಿಪುರವ ಸುತ್ತಿದ। ಮಾನ ಮೀರಿದ್ದುದಧಿಯುನು ಲಘು-।
ಜಾನಪದದಗಳತೆಯು ಪರಿಯುಲಿ ಜಾನಕೀವರನು ॥ ೬೬ ॥

ಹರಿಯು ಸೇನೆಯು ಕೊಂಡು ಶ್ರೀಹರಿ। ಪರಮರಯುಗತಿಯಿಂದ ಲಂಕೇ-।
ಶ್ವರನ ಸಂಹಾರವನು ಮಾಡಲ್ಕಾಗಲುರವಣಿಸಿ॥
ಹೊರಟನುರ್ವಿಯು ತಲವ ಮೇಣಂ-। ಬರವ ವ್ಯಾಪಿಸಿಕೊಂಡಿತಾ ವಾ-।
ನರರ ಸೈನ್ಯವು ಪರಮ ದುರ್ಧರವಾಗಿ ತೋರಿದುದು. ॥ ೬೭ ॥

ಉದಧಿತೀರದೆ ರಾಮಚಂದ್ರನು। ಮುದದೆ ಕೊಬ್ಬಿದ ವೈರಿಯುನ್ನರೆ।
ವಧಿಸಲಿಚ್ಛಿಸಿ ಸೈನ್ಯ ಪರಿವೃತನಾಗಿಯೈತರಲು ॥
ಮುದದೆ ರಕ್ಕಸ ಸಿರಿಯು ಪ್ರೇಮದೆ। ಚದುರನಾದ ವಿಭೀಷಣನ ಗಡ-।
ಸದಮಲಾತ್ಮನ ಕಡೆಗೆ ಲಗುಬಗೆಯಿಂದ ಕಳುಹಿದನು ॥ ೬೮ ॥

ನಲುವಿನಿಂದ ಬಿಭೀಷಣಾರ್ಯನ । ಬಲು ಪರಾಕ್ರಮಿಯಾದ ರಾಮನು ।
ಸಲುಹಿ ರಕ್ಕಸ-ಸಿರಿಯು ನಾಸಿನಗರ್ಪಿಸುವೆನೆಂದು ॥
ಲಲಿತ ವಚನಗಳಿಂದ ಪೇಳ್ದನು । ತಿಳಿದು ನಯದಿಂದೂಡಿದಂತಹ ।
ಕೆಲಸಗಳು ನಿಜವಾಗಿ ಫಲಿಸುತ್ತಿಪ್ಪವು ಕಾಲದಲಿ ॥ ೬೯ ॥

ಸೀತೆಯನು ವೋಚಿಸಲು ರಾಮನು । ಕೋತಿಗಳ ಕಡೆಯಿಂದ ಸುಂದರ ।
ಸೇತುವನು ಕಟ್ಟಿಸಿದನಾಗಲೆ ಲವಣ ಜಲಧಿಯಲಿ ॥
ಭೂತಲಕೆ ಪಾತಾಲದಿಂದ ಹಿ । ಸಾಥನಾದರದಿಂಧ ಕಂಸಾ- ।
ರಾತಿಯನ್ನು ಪಚರಿಸಲ್ಕೈತಂದಂತೆ ತೋರಿತದು ॥ ೨೦ ॥

ಆ ಮಹಾ ಸೇತುವಿನ ಮಾರ್ಗದೆ । ರಾಮಭದ್ರನು ದಾಂಟಯುದಧಿಯ ।
ಹೇಮ ಪ್ರಾಕಾರಾವಗುಂಠಿತವಾದ ಲಂಕೆಯನು ॥
ಭೀಮ ವಿಕ್ರಮವುಳ್ಳ ಕಪಿಗಳ । ಸ್ತೋಮದಿಂದುರೆ ಹಾಕಿ ಮುತ್ತಿಗೆ ।
ತಾಮಸರ-ಪುರಕಪರಕನಕದ ಕೋಟೆ ರಚಯಿಸಿದ ॥ ೨೧ ॥

ಅರಿಗಳಲಿ ಘನಘೋರ ಯುದ್ಧವು । ತ್ವರದೆ ಜರಗಿತು ಕೋತಿಗಡಣವು ।
ಭರದೆ ಹೋರಾಡುತ್ತ ಜಯ ಶ್ರೀರಾಮ ರಾಮೆಂದು ॥
ದುರುಳ ಮರ್ಜಿಗರಾಗ ತಮ್ಮಯ । ಧುರದೆ ಲಂಕಾಧಿಪನ ಗುಣಗಳ ।
ನಿರದೆ ಶ್ಲಾಘಿಸಿ ಭಳಿರೆ ಪೌಲಸ್ತ್ಯೆಂದು ಕೂಗಿದರು ॥ ೨೨ ॥

ಪರಿಘಗಳನುರೆ ಮರಗಳಿಂ ಮು- । ದ್ಗರಗಳನು ಪೇರರೆಗಳಿಂ ಮೇಣ್ ।
ಗಿರಿಗಳಿಂ ಮದ್ದಾನೆಗಳ ನರೆ ದರೆದು ಸಮರದಲಿ ॥
ಜರೆದು ರಾಕ್ಷಸ-ವೀರರನು ವಾ- । ನರಗಳುಗುರುಗಳಿಂದಲವರನು ।
ಹರಿದು ಶಸ್ತ್ರಾಘಾತದಂತೆಯೆ ಗಾಯ ಮಾಡುವವು ॥ ೨೩ ॥
ಅರರೆ ! ವಿದ್ಯುಜ್ಜಿಹ್ವ ಪೆಸರಿನ । ದುರುಳ ರಾಕ್ಷಸನಾಗಿ ಮಾಯಾ- ।
ಭರದೆ ರಾಮನ ಶಿರಕೆ ಸಾದೃಶವಾದ ರುಂಡವನು ॥
ಧರೆಯ ತರುಳೆಯ ಮುಂದೆಯೊಗೆಯಲು । ಮರುಳತನದಿಂದವಳು ಪ್ರಜ್ಞೆಯ ।
ತೊರೆಯೆ ಸತ್ಯವನರಪಿ ತ್ರಿಜಟೆಯು ಪ್ರಾಣವುಳಿಸಿದೆಳು ॥ ೨೪ ॥
ಶ್ಯಾಮಸುಂದರನಾದ ನಿಜಪತಿ । ರಾಮಚಂದ್ರನು ಜೀವಿಸಿಹನೆಂ- ।
ದಾ ಮಹೀಸುತೆ ತಿಳಿದು ಮನದೊಳು ಹರುಷ ಹೊಂದಿದರೂ ॥
ಕಾಮ ಜನಕನ ನಿಧನವಾರ್ತೆಯ । ಕಾಮಿನಿಯು ನಿಜವೆಂದು ತಿಳಿದೀ ।
ಭೂಮಿಯಲಿ ನಾನೆಂತು ಬದುಕಿದೆನೆಂದು ನಾಚಿದಳು ॥ ೨೫ ॥

ಉರಗದಸ್ತ್ರವನೆಸೆದು ದಶಕಂ- । ಧರನ ಸುತ ಕೋಸಲದ ರಾಜನ- ।
ತರುಳರನು ಬಿಗಿದೊಗೆದು ಶ್ರಮಬಡಿಸಿದರು ಕ್ಷಣದೊಳಗೆ ॥
ಹರಿಯ ವಾಹನನಾದ ಗರುಡನು । ಬರುವದನು ಕಂಡಾಗಲವುಗಳು ।
ತ್ವರದೆ ಯೋಡಿದವೆಲ್ಲ ಕಡೆಯಲಿ ಪ್ರಾಣಭಯದಿಂದ ॥ ೨೬ ॥
ಕೆರಳಿ ರಾವಣನಾಗ ಲಕುಮಣ- । ನುರಕೆ ಶಕ್ತ್ಯಸ್ತ್ರವನು ಹೊಡೆಯ- ।
ಲ್ಕುರುಳಿದನು ಧಾರುಣಿಯ ಮೇಲೆದೆಯೊಡೆದು ॥

ಹರಿಗೆ ಯಸ್ತ್ರವು ತಗಲದಿರ್ದರು । ಮರುಗಿದನು ಮನದಲ್ಲಿ ತಮ್ಮನ ।
ಮರಣವದು ತಾನಿರತೆಯಾದದ್ದನ್ನು ಕಂಡವನು ॥ ೭೭ ॥
ಹಾರಿ ದ್ರೋಣಾಚಲಕೆ ತಟ್ಟನೆ । ಮಾರುತಿಯು ಸಂಜೀವನಿಯ ಲತೆ ।
ತೋರ ವೇಗದೆ ತಂದು ಲಕ್ಷ್ಮಣನನ್ನು ಬದುಕಿಸಲು ॥
ಕ್ರೂರ ಕರ್ಮಿಗಳಾದ ರಾಕ್ಷಸ- । ನಾರಿಯರಿಗವ ತಮ್ಮ ಪಣೆಯಲಿ ।
ಕಾರ ರೇಖೆಯು ಕೊರೆವ ಕಲೆಯನು ಕಲಿಸಿ ಬಿಟ್ಟಿಹನು ॥ ೭೮ ॥
ಮೇಘನಾದನ ನಾದವನು ಮೇಣ್ । ಮೇಘವಾಹನನಾದ ಶಕ್ರನ ।
ಮೋಘಶರದಂತಿರುವ ಕಾರ್ಮುಕವನ್ನು ತತ್‌ಕ್ಷಣಕೆ ॥
ರಾಘವನು, ಶರದೃತುವು ಸುರಿಯುವ । ಮೇಘವನು ನಿಃಶೇಷವಾಗಿಯೆ ।
ಶೋಗಲಾಡಿಸುವಂದದಲಿ ಶರ ಹೊಡೆದು ದೂಡಿದನು ॥ ೭೯ ॥
ತಂಗ್ಯೆಯಂದದೆ ಕುಂಭಕರ್ಣನ । ತುಂಗನಾಸಾಕರ್ಣಗಳ ನುರೆ ।
ಭಂಗಿಸಲು ಸುಗ್ರೀವ ಕಪಿನಾಯಕನು, ಮನಶಿಲ್ಪದ ॥
ಶೃಂಗವನು ಛೇದಿಸಿದ ಪರಿಯಲಿ- । ಯಂಗಕಾಂತಿಯು ತಾಳಿ ರೋಷದೆ ।
ಮಂಗಳಾಂಗನ ಮೇಲೆ ಯಾತನು ಹರಿದು ಬಿದ್ದಿಹನು ॥ ೮೦ ॥
ಅರರೆ! ಕೊಡಗಿವಿಯುವನೆ, ನಿದ್ರಾ- । ತರುಣಿ ಪರಿರಂಭಣದೆ ನಿನ್ನನು ।
ಬರಿದೆ ಯವಸರದಪ್ಪಿ ದಶಕಂಧರನು ಜಾಗರಸಿ ॥
ಪರಮ ಪಾಪವ ಗಳಿಸಿದನು ನಿ- । ನ್ನಿರದೆ ನಿದ್ರಾದೇವಿ ಬಳಿಯಲಿ ।
ತ್ವರದೆ ಕಳುಹುವೆನೆಂದು ರಾಮನು ಶರದೆ ಹೊಡೆದೊಗೆದ ॥ ೮೧ ॥
ಪರಮದಾರುಣವಾದ ರಣದಲಿ । ಹರಿವ ರುಧಿರಸ್ರೋತದಲಿ ದೂ- ।
ಸರದ ಕಣಗಳು ಮುಳುಗಿ ಪೋಗುವ ತೆರದೆ ರಕ್ಕಸರು ॥
ನಿರತಿಶಯವಾಗಿರುವ ಬಲ್ಲ ವಾ- । ನರರ ಮೈಮೇಲೇರಿ ಪೋಗಲು ।
ಮರಣ ಪಥವನು ಪಿಡಿದು ಕೆನ್ನೀರಲ್ಲಿ ಮುಳುಗುವದು ॥ ೮೨ ॥
ಇಂದಿನಾಹವದಲ್ಲಿ ದಶರಥ- । ನಂದನನ ನಿಜವಾಗಿ ಕಾಲನ ।
ಮಂದಿರಕೆ ಕಳುಹಲ್ಕೆ ತಪ್ಪಿದರಾನೆ ಮುಡಿಯುವೆನು ।
ಎಂದು ನಿಶ್ಚಯಮಾಡಿ ಮನದಲಿ । ಸ್ಯಂದನವನೇರಿದನು ಲಗಬಗೆ- ।
ಯಿಂದ ಸಮರಾಂಗಣಕೆ ಬಂದನು ರಾಕ್ಷಸಾಗ್ರಣಿಯು ॥ ೮೩ ॥
ಸುರರ ರಿಪು-ದಶಶಿರನು ಚಾಮೀ- । ಕರದ ರಥದಲಿ ಕುಳಿತು ರೋಷದೆ ।
ಹರಿಯು ಮೇಲುರವಣಿಸಿ ಯುದ್ಧಕೆ ಬರುವದನು ಮತ್ತೂ ॥
ಪರಮ ಪುರುಷನು ಪಾದಗತಿಯಿಂ- । ದಿರುವದನು ಹರಿ ಕಂಡು ತನ್ನಯ ।
ಹರಿಗಳನು ಪೂಡಿರದೆ ಪೊನ್ದೇರನ್ನು ಕಳುಹಿದನು ॥ ೮೪ ॥

ಪರಮ ಪಾವನೆಯಾದ ಸುರನದಿ- । ಸರಿಲದಿಂ ಹರಿತರುವ ಮರುತದೆ ।
ಸರಿವ ಧ್ವಜಪಟವುಳ್ಳ ಸುಂದರ ತೇರಿನಲಿ ಹರಿಯು ॥
ಹರಿಯು ಸಾರಥಿಕರವ ಕರದಿಂ । ಧರಿಸಿ ಭರದಿಂದೇರಿ ಕುಳಿತಾ- ।
ದುರುಳ ರಕ್ಕಸನೆದುರಿನಲಿ ಸಮರಕ್ಕೆಯೆದುರಾದ ॥೭೫॥
ಸರಸಿಜಂಗಳ ತೆರದೆ ಲಂಕೇ- । ಶ್ವರನ ಬಾಣಗಳನ್ನು ಗೆಯ್ಯುವ ।
ಸುರರ ಪತಿ ವರ್ಮವನು ರಾಮನಿಗಾಗ ಮಾತಲಿಯು ॥
ಪರಮ ಸಾದರದಿಂದ ವಿತರಿಸೆ । ಧರಿಸಿದನು ತನ್ನಂಗದಲಿ ಶ್ರೀ ।
ಧರನು ಕಾರ್ಮುಕವನ್ನು ಸಜ್ಜೀಕರಿಸಿ ಮುಂಗೊಂಡ ॥೭೬॥
ಅಸಮ ಬಲಪೌಲಸ್ತ್ಯನೆಂದುರೆ- । ವಸುಧೆಯೊಳಗೆಲ್ಲೆಲ್ಲ ಕಡೆಯಲಿ ।
ಪೆಸರು ಪಡೆದಿರುವವನ ಸಂಗಡ ಬಹಳದಿನದಿಂದ ॥
ಪೊಸತದಾಗಿರುವಂಥ ಯುದ್ಧದ- । ಸುಸಮಯುವು ಬಂತೆಂದು ಮನದಲಿ ।
ದಶರಥಾತ್ಮಜ ನಾಗಸಂತಸವನ್ನು ಹೊಂದಿಹನು ॥ ೭೭ ॥
ಅನುಜ ತನುಜರು ಮತ್ತೆ ತನ್ನಯ । ಜನರು ನುಣ್ಣಗೆ ಮಾಡಿದು ಪೋದರು ।
ರಣದ ತಲದಲಿ ಯುದ್ಧಕೆದುರಾಗಿರ್ದ ರಾವಣನು ॥
ಮಿನುಗುವೂರ್ಧ್ವಾನನ ಭುಜಂಗಳ । ಗಣನೆಯಿಂದವನೊರ್ವ ನಿರ್ದರು ।
ಜನನಿ ಕುಲದವರಿಂದ ಕೂಡಿರ್ದಂತೆ ತೋರಿದನು ॥ ೭೮ ॥
ಶಿರ ಸರೋಜಗಳಿಂದ ಗೌರೀ । ವರನ ಪೂಜಿಸಿದಂಥ ಹಾಗೆಯೇ ।
ಹರಿಹಯಾದಿಕ ಲೋಕಪಾಲಕರನ್ನು ಜಯಿಸಿರ್ದ ॥
ಸರಸ ಕೈಲಾಸವನು ವಿಂಶತಿ । ಕರಗಳಿಂದುರೆಯೆತ್ತಿದಂತಹ ।
ಪರಮ ವೀರನ ಬಣ್ಣಿಸಿದನತಿಶಯದಿ ಶ್ರೀಹರಿಯು ॥ ೭೯ ॥
ತುಂಗ ಕುಚದಂಗನೆಯ ಪ್ರಿಯಕರ । ಸಂಗಮದ ಶುಭಶಕುನವೆಂದುರೆ ।
ಮಂಗಳಾಂಗನು ಸವ್ಯ ಭುಜ-ವಿಸ್ಫುರಣದಿಂ ತಾನು ॥
ಹಿಂಗದಂಥಾನಂದದಲ್ಲಿರೆ । ಭಂಗಬಡಿಸಲು ಯಾತುಧಾನರ ।
ಪುಂಗವನು ಕರಮೂಲದಲಿ ಶರಘಾತ ಮಾಡಿದನು ॥ ೮೦ ॥
ಶಿಕ್ಷಿಸಲ್ಕಾಪರಮ ದುರ್ಮದ । ರಾಕ್ಷಸಾಗ್ರಣಿಯನ್ನು ರಾಮನು ।
ತೀಕ್ಷ್ಣ ಬಾಣವ ಪೂಡಿ ಚಾಪಕೆ ಜಗ್ಗಿ ಹೊಡೆಯಲದು ॥
ವಕ್ಷವನ್ನೊಡೆದೊಗೆದು ಬೇಗನೆ । ಪೊಕ್ಕು ಪಾತಾಳಕ್ಕೆ ವೃತ್ರವ ।
ತಕ್ಷಕನಿಗರುಹಲ್ಕೆ ಪೋದಂತೆನಗೆ ತೋರಿದುದು ॥ ೮೧ ॥
ಪಂಡಿತನು ವಾಗ್ವಾದದಲಿ ಬಲು । ಚಂಡಿತನದಿಂದೆದುರಗಾರನು ।
ಮಂಡಿಸಿದ ಶಾಸ್ತ್ರಾರ್ಥಗಳನುರೆ ಖಂಡಿಸುವ ತೆರದಿ ॥

ಪುಂಡ ರಾಕ್ಷಸವರನು ಬಿಟ್ಟ ಪ್ರ- । ಚಂಡ-ಬಾಣಗಳನ್ನು ರಾಮನು ।
ತುಂಡ್ರಿಸುತ್ತಿಷುಗಳನು ಕರೆದವನನ್ನು ದಂಡಿಸಿದ ॥ ೯೨ ॥
ಎತ್ತಿ ಸೊಂಡಿಲಗಳನು ಕಾದುವ । ಮತ್ತಕರಿಗಳ ಮಧ್ಯದಲ್ಲಿರು- ।
ವೆತ್ತರದ ದೃಢಭಿತ್ತಿಯಂದದೆ ರಾಮರಾವಣರ ॥
ಚಿತ್ತವೇಧಕ ರಣದೆ ಜಯಸತಿ- । ಯೆತ್ತಲೆತ್ತಲು ಕದಲದೇ ಚಿರ ।
ಹೊತ್ತು ಸುಮ್ಮನೆಯಿರ್ದು ತಾಟಸ್ಥ್ಯವನು ತಾಳಿಹಳು ॥ ೯೩ ॥
ಪರಮ ವಿಕ್ರಮದಿಂದ ಕಾದು- । ತ್ತಿರುವ ರಿಪುಗಳ ಮೇಲೆ ದಾನವ- ।
ಸುರರು ಹರುಷದೆ ಕರೆದ ಪೂಗಳ ವೃಷ್ಟಿಯನು ತ್ವರದೆ ॥
ಶರಗಳನ್ನೆಚ್ಚೆಚ್ಚ ಲಂಕೇ- । ಶ್ವರನು ಮೇಣ್ ರಾಘವನು ತಪ್ಪದೆ ।
ಕೆರಳಿ ಬಾನ್ದಳದಲ್ಲಿ ತಿರುಗುವ ತೆರದಿ ಮಾಡಿಹರು ॥ ೯೪ ॥
ತರಣಿನಂದನನಿಂದ ರಣದಲಿ । ಹರಿಸಿ ತಂದಿರುವಂಥ ಶಾಲ್ಮಲಿ ।
ತರುವಿನಂದದಿ ಕೂರವಾಗಿರುವಂಥ ಪರಿಘವನು ॥
ಭರದೆ ಗರಗರ ತಿರುವಿ ಕರದಿಂ । ತರಣಿ ಕುಲಸಂಭವನ ಮೇಲ- ।
ಬ್ಬರದೆ ರಾವಣನಿರದೆಯೊಗೆದನು ರೋಷಭರದಿಂದ ॥ ೯೫ ॥
ಪರಮ ಭೀಕರಶಬ್ದಮಾಡು- । ತ್ತಿರಲಗತಿಯನು ಮೀರಿ ಮುಂದಕೆ ।
ಬರುವ ಗದೆಯನು ಮತ್ತೆ ರಿಪುವಿನ ವಿಜಯದಾಶೆಯನು ॥
ಹರಿಯು ಖರತರವಾದ ಶರದಿಂ- । ದರೆದು ಕದಳಿಯ ಸೂಕ್ಷ್ಮತರುವಿನ ।
ತೆರದೆ ಧರಣಿಯ ಮೇಲೆ ನಡುದಾರಿಯಲಿ ಕೆಡಹಿದನು ॥ ೯೬ ॥
ವಾರಿಜಾಕ್ಷನು ತನ್ನ ಪ್ರೇಮದ । ದಾರೆ ವಿರಹದ ವ್ಯಾಧಿಯನು ಮೇಣ್ ।
ಮೂರು ಲೋಕಕೆ ಬಾಧೆಯುಂಟಾಗಿರುವ ರಾವಣನ ॥
ದೂರಮಾಡುವದಕ್ಕೆ ಬಿಲ್ಲಿನ । ದಾರದಲಿ ಪುಸಿಯಾಗದಂತಹ ।
ಘೋರತರವಾದಂಥ ಬ್ರಹ್ಮಾಸ್ತ್ರವನು ಪೂಡಿದನು ॥ ೯೭ ॥
ಎಳೆದು ಬಿಲ್ಲಿನ ಮೌರ್ವಿಯನು ಶ್ರೀ- । ನಳಿನನಾಭನು ಬಿಟ್ಟ ಶರಬಾನ್- ।
ದಳದೆ ಲಂಕೇಶ್ವರನ ರಥವಿದ್ದೆಡೆಗೆ ಶೀಘ್ರದಲಿ ॥
ಪೊಳೆವ ಪೆರ್ಮಣಿಯಿಂದ ಕೂಡಿದ । ಬಲಿತಪಾವಿನತೆರದೆ ಥಳಥಳ ।
ಪೊಳೆದು ಭೀಕರಶಬ್ದಮಾಡುತ್ತಾಗ ಸಾಗಿದುದು ॥ ೯೮ ॥
ಪ್ರಳಯಕಾಲದ ಸಿಡಲಿನಂದದೆ । ಕಳೆಯ ತಳೆದಾ ದಿವ್ಯಬಾಣವು ।
ಗಳಿಗೆಯೊಳು ದಶಶಿರನ ಶಿರಗಳನಿಳಿಸಿ ಭೂತಲಕೆ ॥
ತೊಲಗಿ ದಶರಥರಾಜತನಯನ । ಬಳಿಗೆ ಬಂದಿತು ಸಗ್ಗದಲಿ ಬಹು ।
ಮೊಳಗಿದವು ದುಂದುಭಿಗಳಾಗಲೆ ಪರಮ ರಭಸದಲಿ ॥ ೯೯ ॥

ಮರುತದಿಂದಲ್ಲಾಡುವಂತಹ । ಸರಲವೀಚಿಗಳಿಂದ ತರಣಿಯು ।
ಸರಸ ಪ್ರತಿಮೆಯು ಬೇರೆಯಾಗಿಯೆ ತೋರುವಂದದಲಿ ॥
ಶರದೆ ಕತ್ತರಿಸಿರ್ದ ದಶಕಂ- । ಧರನ ಶಿರಗಳು ದೇಹಭಿನ್ನಾ- ।
ಗಿರದೆ ಧರಣಿಗೆಯುರುಳುವಾಗತಿಶೋಭೆದಳೆದಿಹವು ॥ ೧೦೦ ॥
ಹರನಕೃಪೆಯಿಂ ಪಿಂತೆರಾಕ್ಷಸ । ವರನ ಶಿರಗಳು ಹೊಂದಿದಂತೆಯೆ ।
ಮರಳಿ ಪ್ರಸ್ತುತದಲ್ಲಿಯವುಗಳು ಸಂಧಿಸುವವೆಂದು ॥
ಪರಮನಿಶಿತಾದಂಥ ಶರದಿಂ । ಹರಿಯು ದುರುಳನ ಶೀರ್ಷಗಳನುರೆ ।
ತರೆದುಬಿಟ್ಟರು ಸುರರು ಸಂದಿಗವನ್ನು ತಾಳಿಹರು ॥ ೧೦೧ ॥
ಲೋಕಪಾಲಕರೆಲ್ಲರೂ ಭೂ- । ಲೋಕದಲ್ಲವತಾರ ತಾಳಿದ ।
ಲೋಕನಾಥನ ತಲೆಯ ಮೇಲ್ಸುಮವೃಷ್ಟಿಮಾಡಲ್ಕೆ ॥
ಏಕಕಾಲಕೆ ಕುಸುಮಭೃಂಗಗ- । ಳಾಕರವು ಪೊಳೆಪೊಳೆವ ರತ್ನಗ- ।
ಳಾಕರಂಗಳತೆರದೆ ಹರಿಶಿರದಲ್ಲಿ ಬಿದ್ದಿಹುವು ॥ ೧೦೨ ॥
ದುರುಳರಕ್ಕಸರನ್ನು ಗಡ ಸಂ- । ಹರಿಸಿ ಸುರಕಾರ್ಯವನು ಮಾಡಿದ ।
ಪರಮವಿಕ್ರಮಶಾಲಿಯಾಗಿರುವಂಥ ದಶರಥನ ॥
ತರುಳನಾಜ್ಞೆಯಪಡೆದು ತ್ವರೆಯಿಂ । ಹರಿಯುಸಾರಥಿಯಾದ ಮಾತಲಿ ।
ಸರಸರಥವನ್ನಿಂದ್ರಲೋಕಕೆಕೊಂಡುಸಾಗಿದನು ॥ ೧೦೩ ॥
ಪಾವಕದಮುಖದಿಂದ ರಾಮನು । ಭೂವಿಕನ್ನೆಯ ಶುದ್ಧಿ-ಸಿದ್ಧಿಸಿ ।
ರಾವಣನ ತಮ್ಮನಿಗೆ ಲಂಕಾನಗರಿಯನ್ನಿತ್ತು ॥
ದೇವಯಾನದೆ ಕುಳಿತುಕಪಿ-ಸು- । ಗ್ರೀವ ಸೀತಾಲಕ್ಷ್ಮಣರ ಸಹ ।
ಸಾವಕಾಶದೆ ಹೊರಟು ನಿಜಪಟ್ಟಣಕೆ ಸಾಗಿದನು ॥ ೧೦೪ ॥

೧೩ನೆಯ ಸರ್ಗ.

ಸುರರ ಯಾನದೆ ಕುಳಿತು ರಾಮನು । ಹೊರಟು ತಾರಾಪಥದೆ ತನ್ನಯ ।
ಪರಮಪಾವನೆಯಾದ ದಾರೆಯ ಸಹಿತದಾರಿಯಲಿ ॥
ಇರುವರತ್ನಾಕರನ ಲಕ್ಷಿಸಿ- । ಮರುಕಿನಿಂ ರಹದಲ್ಲಿಯೀಪರಿ ।
ಸರಸಸಲ್ಲಾಪವನು ಭಾರ್ಯೆಯಕೂಡ ಮಾಡಿದನು ॥ ೧ ॥
ರಮಣಿಮಣಿ ನೋಡೆಲೆಶರತ್ತಿನ । ಸಮಯದಲ್ಲಿಯ ನೀಲವರ್ಣದ ।
ವಿಮಲನಭದಲಿ ವ್ಯೋಮಗಂಗೆಯ ತೆರದೆ ಕಾಣಿಸುವ ॥
ಮಮತೆಯಿಂ ತವಪ್ರಾಪ್ತಿಗಾಗಿಯೆ । ಶ್ರಮದೆ ವಾರಿಧಿಯಲ್ಲಿ ನನ್ನಿಂ ।
ಸಮನಿಸಿದ ವಿಸ್ತೀರ್ಣವಾಗಿರುವಂಥ ಸೇತುವನು ॥ ೨ ॥

ಸುಂದರಾಂಗಿಯೆ ಸಗರರಾಜನು । ಹಿಂದೆಮಾಡಿದ ಯಜ್ಞದಶ್ವವ- ।
ನಿಂದಿರನು ಪಾತಾಲಲೋಕಕೆ ಹರಿಸಿಯೊಯ್ಯಲ್ಕೆ ॥
ಅಂದು ಸೈಂಧವವನ್ನು ಹುಡುಕಲು । ನಂದನರಕಡೆಯಿಂದ ಭೂವನು ।
ಚಂದದಿಂದಗಿದೊಗೆಸಿ ಬಿತ್ತರಿಸಿದನು ಕಡಲವನು ॥ ೩ ॥
ವಾರಿಧಿಯು ತನ್ನುದದೆ ಸೂರ್ಯಗೆ । ವಾರಿಗರ್ಭವನೀಯುವನು ಮೇಣ್ ।
ಚಾರುಚಂದ್ರನ ಸೃಜಿಸಿಲೋಕದ ತಾಪಗಳೆಯುವನು ॥
ಸಾರಸಾಕ್ಷಿಯೆ ವಾಡುವವನುರೆ । ಧಾರಣವಮಾಡಿಹನು ಜಠರದೆ ।
ಪಾರವಿಲ್ಲದನರ್ಘ್ಯ ರತ್ನಗಳನ್ನು ಪೆರ್ಚಿಪನು ॥ ೪ ॥
ಮುದದೆ ತನ್ನುದರದಲಿನಾನಾ । ವಿಧದ ಪ್ರಾಣಿಗಳನ್ನುಧರಿಸಿ- ।
ರ್ದುದಧಿ, ವರ್ಣಸ್ಥಿತಿಸುಮಹಿಮೆಗಳನ್ನು ಸರಿಯಾಗಿ ।
ಸದಮಲಾತ್ಮಕನಾದಹರಿಯನು । ಚದುರೆಪೋಲುತ್ತಿರುವ ಜಲಧಿಯ ।
ಪಡವಿಯನು ನಾನೆಂತು ಸಾಕಲ್ಯದಲಿ ಬಣ್ಣಿಪೆನು ॥ ೫ ॥
ಪ್ರಲಯಕಾಲದೊಳೆಲ್ಲಜಗವನ್ನು । ವಿಲಯಹೊಂದಿಸಿ ಯೋಗನಿದ್ರಾ- ।
ಲಲನೆ-ಯುತ್ಸಂಗದಲಿ ವಿಶ್ರಾಂತಿಯನು ಜಲಧಿಯಲಿ ॥
ಜಲಜನಯನನು ಕೊಳ್ಳುತಿರೆ ಶ್ರೀ- । ನಲಿನ ಸಂಭವನವನಗುಣಗಳ- ।
ನೊಲುಮೆಯಿಂ ವಿಧವಿಧದೆ ಭಕುತಿಯಬಲದೆ ತುತಿಸುವನು ॥ ೬ ॥
ಅರಿನೃಪಾಲಕರಿಂದ ಭೂಪರು । ಪರಿಭವವ ಹೊಂದಿರದೆ ತಮ್ಮನು ।
ಪೊರೆಯಲತಿಬಲನಾದ ಧಾರ್ಮಿಕ ರಾಜರಾಜನನು ॥
ಶರಣಪೋಗುವ ತೆರದೆ ಗಿರಿಗಳು । ಹರಿಯುಪಕ್ಷಚ್ಛೇದಿಸಲು ಬಹು ।
ತ್ವರದೆವಾರಿಧಿಯಲ್ಲಿಯಾಶ್ರಯಗೊಂಡು ಬದುಕಿಹವು ॥ ೭ ॥
ಪ್ರಲಯಕಾಲದೆ ಧರೆಯುಜಲದಲಿ । ಮುಳುಗಿ ಪಾತಾಳಕ್ಕೆ ಪೋಗಿರೆ ।
ನಳಿನನಾಭನು ತಾನುಸೂಕರ-ರೂಪವನು ತಾಳಿ ॥
ಇಳೆಯನುದ್ವಹಿಸುವ ಸು-ಸಮಯದೆ । ಜಲಧಿಯಚ್ಛೋದಕವದಾಕೆಯ ।
ಲಲಿತ-ವಕ್ತ್ರಾವರಣದೋಪಾದಿಯಲಿ ತೋರಿದುದು ॥ ೮ ॥
ಮಾರನಾಟದೆ ಚದುರನಾದೀ- । ವಾರಿಧಿಯು ತನ್ನಲೆಗಳಧರದೆ ।
ಪೀರಿ ಸಿಂಧುಗಳೆಂಬಪ್ರೌಢ-ಪ್ರಮದೆಯರ ಸುಧೆಯ ॥
ತೋರ ಸಂಭ್ರಮದಿಂದಲವರಿಗೆ । ಚಾರು ಮುಖರಸವನ್ನುಯುಗಪತ್ ।
ತೋರಿಯಾದರವನ್ನು ನೀಡುತ್ತಿಹನು ಪ್ರತಿದಿನದೆ ॥ ೯ ॥
ತೆರೆದು ದರಿಯಂತಿರುವಮುಖವನು । ವರತಿಮಿಂಗಿಲವೆಂಬ ಮತ್ಸ್ಯವು ।
ತೊರೆಯನೀರ್ಕೈಮೇಣ್ ಜಂತುಗಳನುರೆ ನುಂಗಿಬಾಯ್ಮುಚ್ಚಿ ॥

ಭರದೆ ವಾರಿಧಿಯಲ್ಲಿಹಾರಲು । ಶಿರದ ಛಿದ್ರ-ದ್ವಾರದಿಂದೆ- ।
ತ್ತರದೆ ನೀರ್ವುಟಿ-ಪುಟಿದುಕಣ್ಣಿಗೆ ಚಂದಗಾಣುವದು ॥ ೧೦ ॥
ವಾರಿಜಾಕ್ಷಿಯೆ ನೋಡು ನೋಡೀ- । ವಾರಿಧಿಯು ನೀರೊಳಗೆ ಬೀಸುವ
ಮಾರುತನ ಸಂಕ್ಷೋಭದಿಂ ಪುಟ್ಟಿರ್ದ ನೊರೆಯೊಳಗೆ ॥
ವಾರಿಕರಿಗಳು ಧುಮುಕೆಯುವುಗಳ । ತೋರ ಕಿವಿಗಳಿಗಂಟಿ ಫೇನವು ।
ಚಾರುಚಮರಗಳಂತೆ ಯಿ । ರ್ಭಾಗಾಗಿ ತೋರುವದು ॥ ೧೧ ॥
ಬಾಲೆ ಸದ್ಗುಣಶೀಲೆ ಜಲಧಿಯು । ಕೂಲದಲಿ ಯೆಲರುಣ್ಣ ತೊಡಗಿದ ।
ಸ್ಥೂಲವಾದ ವಿಶಾಲ ಸರ್ಪವು ತನ್ನ ಪೊಳೆ ಪೊಳೆವ ॥
ಮೌಲಿಯಲ್ಲಿಯು ಮಣಿಯು ಕಿರಣದೆ । ಲೋಲವೀಚಿಯುದಲ್ಲವೆಂದುರೆ ।
ನೀಲವೇಣಿಯೆ ಕಾಣುವದು ನಿಜವಾಗಿ ನೋಡಲ್ಕೆ ॥ ೧೨ ॥
ಮದಿರಲೋಚನೆ ನಿನ್ನ ರದನ । ಚ್ಛದನ ರುಚಿಯನು ಪೋಲ್ವ ಪವಳದ ।
ಹದನವಾಗಿರುವಂಥ ತುದಿಗಳಿಗಂಟೆ ಜಲಜಗಳು ॥
ಅಧರ ಸುಧೆಯನು ಪಾನಮಾಡುವ । ಈದುರಪುರುಷನ ತೆರದಿ ಜಿಡದಲೆ ।
ಮುದದೆಯಲ್ಲಿಯೆ ಸಿಲುಕಿಕೊಂಡಿರುವಂತೆ ತೋರುವವು ॥ ೧೩ ॥
ಸೋಗೆಗಂಗಳೆ ನೋಡು ನೋಡೀ- । ಸಾಗರದ ಜಲವನ್ನು ಕುಡಿಯಲು ।
ಸಾಗಿ ಬಂದಿರುವಂಥ ಮೇಘಗಳನ್ನು ಮಾರುತನು ॥
ವೇಗದಿಂ ತಿರುಹಲ್ಕೆ ಕಡಲವು । ಬೇಗ ಬೇಗನೆ ಭ್ರಮಿಸಿ ಪೂರ್ವದ ।
ಹಾಗೆ ಮಂಥನ-ಕಾರ್ಯಕೀಡಾದಂತೆ ತೋರುವದು ॥ ೧೪ ॥
ಕ್ಷಾರನೀರಿನ ರಾಶಿ ತೀರದ । ತೋರ ತಾಲತಮಾಲ ತರುಗಳ ।
ಚಾರು ರಾಜಗಳಿಂದ ಪರಿಶೋಭಿಸುವ ಕೂಲವಿದು ॥
ವಾರಿ-ಜಾಂಬಕಿ, ಲೋಹ-ಚಕ್ರದ । ಧಾರೆಯೋಪಾದಿಯಲಿ ಕರ್ರಗೆ ।
ದೂರದಿಂ ಸಣ್ಣಾಗಿ ರೇಷೆಯು ತೆರದೆ ತೋರುವದು ॥ ೧೫ ॥
ಸಾರಸಾಕ್ಷಿಯೆ ನಿನ್ನ ಚೆಂದುಟಿ । ಪೀರಲಿಚ್ಛಿಪ ನನ್ನ ಮನವನು ।
ಮಾರುತನು ತಾನರಿತು ಮಾರ್ಮಿಕತನದೆ ತ್ವರಿತದಲಿ ॥
ತೀರದಲ್ಲಿಯು ಕೇತಕಿಯು ಪೂ- । ಸಾರದಿಂ ತವಮುಖವ ರಂಜಿಸಿ ।
ತೀರದಂಥುಪಕಾರವೆನ್ನಯ ಮೇಲೆ ಮಾಡಿಹನು ॥ ೧೬ ॥
ಪೂಗಫಲಗಳ ಭಾರದಿಂದುರೆ । ಬಾಗಿಕೊಂಡಿರುವಂಥ ತರುಗಳ ।
ಪೂಗದಿಂ ಮೇಣ್ಮುಕ್ತಿಭಿನ್ನಾಗಿರುವ ಮುತ್ತುಗಳ ॥
ಯೋಗದಿಂ ರಾರಾಜಿಸುವ ಘನ । ಸಾಗರದ ಸೈಕತದ ಭಾಗಕೆ ।
ವೇಗಯುತ ಸುರಯಾನದಲ್ಲಿ ಬಹುಬೇಗ ಬಂದಿಹೆವು ॥ ೧೭ ॥

ಪ್ರಾಣದರಸಿಯೆ ನೋಡು ನೋಡು ವಿ- । ಮಾನಗತಿ ಚಾಪಲ್ಯದಿಂದೀ ।
ಮಾನ ಮೀರಿರ್ದುದಧಿಯನು ಕ್ಷಣದಲ್ಲಿ ಹಿಂದೊಗೆದು ॥
ಆನೆ ಮೊದಲಾದಂಥ ನಾನಾ । ಪ್ರಾಣಿ-ಸಂಘಗಳಿಂದ ಕೂಡಿದ ।
ಕಾನನದ ರಮಣೀಯ ಭಾಗಕ್ಕಾವು ಬಂದಿಹೆವು ॥ ೧೮ ॥
ಒಂದು ಬಾರಿಗೆ ಸುರರ ಪಥದಿಂ- । ದೊಂದು ಬಾರಿಗೆ ಮೇಘ ಪಥದಿಂ- ।
ದೊಂದು ಬಾರಿಗೆ ಪಕ್ಷಿಗಳು ಸಂಚರಿಪ ಪಥದಿಂದ ॥
ಸುಂದರಾಂಗಿಯೆ ನನ್ನ ಮಾನಸ- । ದಂದದಂತೆ ವಿಮಾನವಿದು ಬಹು ।
ಚಂದದಿಂ ಚಲಿಸುವದು ಬೇಕಾದಲ್ಲೆ ಗತಿಗೆಡದೆ ॥ ೧೯ ॥
ಸುರರ ಪತಿ-ಕರಿದಾನ-ವಾರಿಯ । ಸುರಭಿಯಿಂ ಕೂಡಿರ್ದ ಗಂಗಾ- ।
ಸರಿಲ-ಶೀಕರದಿಂದ ಕೂಡಿರ್ದಂಥ ಮಾರುತನು ॥
ತರಣಿ-ಕಿರಣದೆ ನಿನ್ನ ಮೊಗದಾ- । ವರೆಯ ತಾಣದೆ ಸುರಿವ ಬೆಮರಿನ ।
ಪರಿಕರವ ಪರಿಹರಿಸಿ ಸರಸಿಜ ನಯನೆ ಬಿಡುತಿಹನು ॥ ೨೦ ॥
ಸರಸ ಪುಷ್ಪಕಯಾನದಿಂ ಸಂ- । ಚರಿಪ ನಿನ್ನಯ ಕರವ ಕಿಟಕಿಯ ।
ಹೊರಗೆ ಚಾಚಿದುದನ್ನು ಮೇಘನು ಕಂಡು ತ್ವರಿತದಲಿ ॥
ಪರಮಸಾದರದಿಂದ ಚಪಲಾ- । ಭರಣವನ್ನಿನಗರ್ಪಿಸಿದ ತೆರ ।
ಹರಿಣಲೋಚನೆ ನನ್ನ ಮನಸಿಗೆ ಬಿಡದೆ ತೋರಿದುದು ॥ ೨೧ ॥
ಕೋಡಿ ಖರದೂಷಣರ ಭೀಯಿಂ- । ದೋಡಿ ಪೋದಂಥೆಲ್ಲ ಮುನಿಗಳು ।
ಕೂಡಿ ಪುನರಪಿ ಬಂದು ಜನಪದದಲ್ಲಿ ತಂತಮ್ಮ ॥
ವಾಡಿಕೆಯ ಸ್ಥಳಗಳಲಿ ಪರ್ಣದೆ । ಮಾಡಿ ಯುಟಜಗಳನ್ನು ಮೋದದೆ ।
ನೋಡು ಮಾನಿನಿ ಸೌಖ್ಯದಿಂದಾ ವಾಸಮಾಡಿಹರು ॥ ೨೨ ॥
ಅರಕೆ ನಾಂ ನಿನ್ನಿಚ್ಛೆ ಮೇರೆಗೆ । ತರಲು ಮಾಯಾ-ಹರಿಣವನು ಗಡ ।
ಚರಿಸೆ ದುರುಳಾಧಮನು ನಿನ್ನನು ಕೊಂಡು ಪೋಗಲ್ಕೆ ॥
ತಿರುಗೆ ಯೀವನದಲ್ಲಿ ನಿನ್ನ- । ನ್ನರಸುತಿರೆ ನೂಪುರವು ನಿನ್ನಯ ।
ವಿರಹದಿಂ ಮೂಕಾಗಿ ಬಿದ್ದದ್ದನ್ನು ಸಖಿ ಕಂಡೆ ॥ ೨೩ ॥
ಜಲಜಮುಖಿ ರಾವಣನು ಮೋಸದ । ಬಲದೆ ನಿನ್ನಪಹರಣ ಮಾಡಲು ।
ಲಲನೆ ನಿನ್ನನ್ನಾನು ಹುಡುಕುತ್ತಿರಲು ವಿಪನದಲಿ ॥
ಒಲಿದು ವನದೇವತೆಯು ತಾಂ ಕೋ- । ಗಿಲೆಯ ರವದಿಂ ನಿನ್ನ ಪಥವನು ।
ತಿಳುಹಿ ಪಲ್ಲವ ಕರದೆ ದಿಗ್ದರ್ಶನವ ಮಾಡಿದಳು ॥ ೨೪ ॥
ಎರಳೆಗಳು ಪುಲ್ಲನ್ನು ಕಚ್ಚದೆ । ತರಳಲೋಚನೆ ರೆಪ್ಪೆಯಿಕ್ಕದೆ ।
ಮರುಗಿ ಮನದೊಳು ನಿನ್ನ ದೈನ್ಯಾವಸ್ಥೆಯನು ನೋಡಿ ॥

ಭರದೆ ತೆಂಕಣದಾಶೆಯನು ತಾ- । ವಿರದೆ ನಿರಕಿಸಿ ನೀನು ಚರಿಸಿದ ।
ಸರಣಿಯನು ಸಖಿಯೆನಗೆ ಸೂಚಿಪ ತೆರದಿ ತೋರಿದವು ॥ ೨೫ ॥
ಮುಂದೆ ಕಾಣುವ ಮಾಲ್ಯವದ್ಗಿರಿ- । ಕಂಧರದೆ ನವ ಕಂಧರನು ಮೇಣ್-
ಸುಂದರಾಂಗಿಯೆ ನಾನು ನಿನ್ನಯ ಬಿರಹ ಚಿತೆಯಿಂದ ॥
ನೊಂದು ಮನದಲ್ಲಂದು ಜಲವ- । ನ್ನೊಂದೆ ಕಾಲಕೆ ಸುರಿಸಿ ವಾರಿಗ- ।
ಳಿಂದ ನೆಲವನು ಚಂದವಾಗಿಯೆ ಪೂರ ತೊಯ್ಸಿದವು ॥ ೨೬ ॥
ಬರಿಸ ಕಾಲದ ಮಳೆಯು ಜಲದಿಂ । ಹರಡಿಕೊಂಡಿರುವಂಥ ಸುರಭಿಯು ।
ಹರುಷದಿಂದಾಲಾಪ ಮಾಡುವ ಬರ್ಹಿಗಳು ಮತ್ತೂ ॥
ಪರಮ ಸುಂದರ ನೀಪ ತರುಗಳ । ಬಿರಿ ಮುಗುಳ್ಗಳು ನನ್ನ ಮನಸಿಗೆ ।
ವಿರಹವಿನ್ನಿಮ್ಮಡಿಸಿ ತಾಪವನುಂಟು ಮಾಡಿದವು ॥ ೨೭ ॥
ಮಡದಿ ನೀಂ ಭಯಗೊಂಡು ಮನದಲಿ । ಗಡಗಡನೆ ನಡುನಡುಗಿ ಯೆನ್ನಯ ।
ತೊಡೆಯ ಮೇಲ್ಕುಳಿತೊಯ್ಯನೇ ದೃಢವಾಗಿ ಬಿಗಿದಪ್ಪಿ ॥
ನುಡಿದ ನುಡಿಗಳ ಸ್ಮರಣೆ ಮೋಡದ । ಗುಡಗು ಚಿತ್ತಕ್ಕಿತ್ತು ದುಃಖದ ।
ಅಡಲಿನೊಳಗೆನ್ನೊಗೆದು ವಿರಹಾಗ್ನಿಯನು ಪೆರ್ಚಿಸಿತು ॥ ೨೮ ॥
ಗಿರಿಯ ಮೇಲ್ಮಳೆಯಾಗೆ ಬಾಷ್ಪದ । ಭರದೆಯರಳಿರ್ದಂಥ ಕಂದಲಿ- ।
ಯರಳುಗಳ ನಸುರಕ್ತವರ್ಣದ ಶೋಭೆಯನು ಕಂಡು ॥
ತರುಣಿ, ಪರಿಣಯ ಕಾಲದಲ್ಲಿಯು । ಸರಸ ಹೋಮದ ಧೂಮದಿಂ ನಿ- ।
ನ್ನರುಣ ನಯನದ ನೆನಪಿನಿಂ ವಿರಹಾಗ್ನಿ ಪೆರ್ಚಿದುದು ॥ ೨೯ ॥
ದೂರದಲಿ ಕಂಗೊಳಿಪ ಪಂಪಾ- । ಸಾರಸದ ಸವಿನೀರು ಮೇಣಾ- ।
ನೀರುಗಳ ಸಮುದಾಯದಿಂ ರಮಣೀಯವಾಗಿರುವ ॥
ತೀರದಲಿ ನಲಿನಲಿದು ಕ್ರೀಡಿಪ । ಸಾರಸಂಗಳ ಹಿಂಡುಗಳು ಸಖಿ ।
ತೋರ ಸಂತಸವನ್ನು ಮಮ ಮಾನಸಕೆ ಕೊಡುತಿಹವು ॥ ೩೦ ॥
ಜೋಡುವಕ್ಕಿಗಳಿಲ್ಲಿಯಗಲದೆ । ಕೂಡಿಯೊಂದಕ್ಕೊಂದು ಪ್ರೇಮದೆ ।
ನೀಡಿ ಚಂಚುವಿನಿಂದಕಮಲದ ಕೇಶರಂಗಳನು ॥
ಕ್ರೀಡಿಸುತೆ ದೂರಿಂದನನ್ನನು । ನೋಡಿತಮ್ಮಂತೆಂದು ನಿನ್ನನು ।
ಪ್ರೌಢೆ, ಕೂಡುವೆನೆಂದುಯೋಚಿಪ ತೆರದೆತೋರಿದವು ॥ ೩೧ ॥
ಪರಮಸುಂದರವಾದಶೋಕದ । ಮರದ ಸ್ತಬಕಗಳಿಂದ ತವಕುಚ ।
ಪರಮೆಯನುಕಂಡಾನುನಿನ್ನಯ ಪ್ರಾಪ್ತಿಭ್ರಮೆಯಿಂದ ॥
ಸರಸಿಜಾಕ್ಷಿಯೆ ಚಾಚಿಕರವನು । ಭರದೆ ಪರಿರಂಭಿಸಲು ತರುವನು ।
ತ್ವರದೆ ಲಕ್ಷ್ಮಣನಿರದೆನನ್ನನು ದೂರಮಾಡಿದನು ॥ ೩೨ ॥

ಅನಿಲನನು ಹಿಂದೊಗೆದುಸಾಗಿದ । ವನಿತೆ, ನಮ್ಮ ವಿಮಾನದಲ್ಲಿಯ ।
ಕನಕಮಯ ಕಿಂಕಿಣಿಯು ಮಧುರಸ್ವನವನಾಲೈಸಿ ॥
ಸು-ನದಿಗೋದಾವರಿಯ ತಟದಿಂ । ಘನದಪಥದಿಂ ಸಾರಸಂಗಳು ।
ಪ್ರಣಯದಿಂ ನಿನ್ನೆದುರುಗೊಳ್ಳಲು ಸಾಗಿಬರುತಿಹವು ॥ ೩೩ ॥
ನೀನುಮೇಣಾಂ ಪಂಚವಟಿಯಲಿ । ಮಾನಿನಿಯೆಮೊದಲಿರುವಕಾಲಕೆ ।
ಪೀನ ಕುಚಗಳ ಪೋಲ್ವಘಟದಿಂ ನೀನು ನೀರೆರೆದು ॥
ಕಾನನದೆ ಬೆಳೆಸಿರ್ದಮಾಮರ । ತಾಣವನು ಮೇಗೇಣಗಳ ಸು- ।
ಶ್ರೇಣಿಯನು ಕಂಡೀಗ ಮಹದಾನಂದವಾಗಿಹುದು ॥ ೩೪ ॥
ನೀರೆ ಗೋದಾವರಿಯತಟದಾ । ನೀರಗೃಹದಲಿ ಸೀತವಾದ ಸ- ।
ಮೀರದಿಂದಾಚೆಟ್ಟೀಡನ ಶ್ರಮವನ್ನುಕಳೆಯಲ್ಕೆ ॥
ವಾರಿಜಾಕ್ಷಿಯೆ ನಿನ್ನತೊಡೆಯಾ- । ಧಾರವನು ಶಿರಕಿತ್ತುರಹದಲಿ ।
ಪೂರವಿಶ್ರಾಂತಿಯನು ಹೊಂದಿದ್ದನ್ನು ನೆನಿಸುವೆನು ॥ ೩೫ ॥
ಮೊದಲೆಚರಿಸಿದ ತಪದೆಶಕ್ರನ । ಪದವಿಯನ್ನೈದಿರ್ದ ನಹುಷನು ।
ಮುದದೆಪದದಿಂದೊದೆಯಲಾತನ ಸರ್ಪಯೋನಿಯಲಿ ॥
ಒದಹಿಸಿದನಾಮುನಿಯಗಸ್ತ್ಯನ । ಸದನವೀಭೂಭಾಗದಲಿ ಸಹ ।
ಸುದತಿಮಣಿ ಕಣ್ಗೊಳಿಸುವದು ನಿನ್ನೆದುರಿನಲಿನೋಡು ॥ ೩೬ ॥
ಧರಣಿಸುತೆ ತ್ರೇತಾಗ್ನಿಯಲಿಭೂ- । ಸುರನುಮಾಡಿದ ಹವನದಿಂದುರೆ ।
ಪರಮಪಾವನವಾದಹೋಮದ ಧೂಮದಗ್ರವದು ॥
ಹರದಿ ಸುರವರ್ತ್ಮದಲಿನಮ್ಮಯ । ಸುರರಯಾನವ ಮುಸುಕಿನಮ್ಮನು ।
ವಿರಜ ಮಾಡಿಹುದೆಂಥಸುಕೃತದ ಫಲವು ದೊರೆತಿಹುದೋ ॥ ೩೭ ॥
ಮುಂದೆ ಶೋರ್ಪ್ಯೆದಪ್ಸರೆಯು ಪೆಸ- । ರಿಂದ ಜನರಲಿ ಖ್ಯಾತಿಹೊಂದಿದ ।
ಮಂದಕರ್ಣ-ಮುನೀಂದ್ರನಿಂ ನಿರ್ಮಾಣವಾಗಿರುವ ॥
ಚಂದವಾದ ವಿಹಾರಸರವಿದು । ಸುಂದರಾಂಗಿಯೆ ನೋಡದೊಳಗಿನ ।
ಚಂದಿರನತೆರದಿಂದ ಕಣ್ಗಳಿಗಂದವೀಯುವದು ॥ ೩೮ ॥
ಎರಳೆಗಳ ತೆರದಿಂದಲೀ ಮುನಿ- । ವರನು ತಿನ್ನುತ್ತೆಳೆಯ ಪುಲ್ಲನು ।
ಚರಿಸಿಯವುಗಳಕೂಡ ತಪವಾಚರಿಪ ಸಮಯದಲಿ ॥
ದರದೆ ಪಂಚಾಪ್ಸರಸೆಯರ ಬಲೆ । ಹರವಿಯೀಮುನಿಯನ್ನು ಕಪಟದೆ ।
ಹರಿಣಲೋಚನೆ, ಹರಿಯುಬಂಧನವನ್ನು ಗೆಯಿಸಿಹನು ॥ ೩೯ ॥
ಸರದ ನೀರೊಳಗಿರ್ದಮಾಮುನಿ- । ವರನ ಹರ್ಮ್ಯದೊಳೀಗ ಸಾಗಿದ ।
ಸರಸ ಸಂಗೀತದಲಿ ಬೊಡಿಯುವ ಮರ್ದಲದ ರವವು ॥

ಸುರರಯಾನದ ಸೌಧದಲಿನವು- । ಗಿರದೆ ಶ್ರುತಿಗೋಚರಿಸುವದು ಮೇಣ್ ।
ವರಸು-ಹಾಸಿನಿ ಪರಮುಸಂತಸವನ್ನು ಕೊಡುತಿಹುದು ॥ ೪೦ ॥
ಉರಿವ ಬೇಸಿಗೆ ಕಾಲದಲ್ಲೀ । ವರಸುತೀಕ್ಷ್ಣನು ನಾಲ್ಕು ಕಡೆಯುಲಿ ।
ಯುರವಲವ ಪ್ರಜ್ವಲಿಸಿ ತನ್ಮಧ್ಯದಲಿ ತಾಂ ಕುಳಿತು, ॥
ತರಣಿ ಕಿರಣಗಳನ್ನು ಶಿರದಲಿ । ಧರಿಸಿ ದುಶ್ಚರ ತಪವ ನಿಯುಮದೆ ।
ಚರಿಪ ಪರಿಯುನು ನೋಡಿ ಸಖಿಯಾಶ್ಚರ್ಯವಾಗುವದು ॥ ೪೧ ॥
ಮುನಿಯು ಘನತಪಕಂಜಿ ಬೇಗನೆ । ಯನಿಮಿಷರಪತಿಯಾದ ಶಕ್ರನು ।
ಗಣಿಕೆಯುರನವನಿರ್ದ ತಾಣಕೆ ಕಳುಹಲಾಗವರು ॥
ಕುಣಿದು ಕುಶಲತೆಯಿಂದ ತಮ್ಮಯ । ಮಣಿಸಿಯಂಗಗಳನ್ನು ತೋರಿಸಿ ।
ಪ್ರಣಯ ಭಾವವ ವ್ಯರ್ಥವಾಗಿಯೆ ವ್ಯಕ್ತ ಮಾಡಿದರು ॥ ೪೨ ॥
ಎತ್ತಿ ಯೆಡಗೈಯ್ಯನ್ನು ಮೇಲಕೆ । ನಿತ್ಯದಲಿ ತಪವನ್ನು ಚರಿಸುವ ।
ಸತ್ಯಸಂಗರನಾದ ಮಾಮುನಿವರನು ನಮ್ಮನ್ನು ॥
ಮತ್ತ ಕುಂಜರಗಮನೆ ನಮಿಸ- । ಲ್ಕಿತ್ತ ದಕ್ಷಿಣ ಕರವನೀಗಲೆ ।
ಯೆತ್ತಿ ಮೇಲಕೆ ನೋಡು ಮಸ್ತಕವನ್ನು ಮಣಿಸಿಹನು ॥ ೪೩ ॥
ವಾಣಿ ಸಂಯುಮವನ್ನು ಮಾಡಿದ । ಮೌನಿವರನಾದೀ ಸುತೀಕ್ಷ್ಣನ ।
ನಾನು ಮಾಡಿದ ಪ್ರಣತಿಯುನು ತಲೆವಾಗಿ ಸ್ವೀಕರಿಸಿ ॥
ತಾನು ನಮ್ಮ ವಿಮಾನ ತೊಲಗಲು । ಸಾನುರಾಗದೆ ಮುಂಚಿನಂತೆಯೆ ।
ಧ್ಯಾನ ತತ್ಪರನಾಗಿ ಸೂರ್ಯನ ನೋಡತೊಡಗಿಹನು ॥ ೪೪ ॥
ತರುಣಿಮಣಿ ಶರಭಂಗ ಪೆಸರಿನ । ತರಣಿಯೋಪಾದಿಯುಲಿ ಮಿರುಗಿದ ।
ಪರಮ ಪಾವನನಾದ ಮುನಿಕುಲಪತಿಯ ವಿಪಿನವಿದು ॥
ನಿರುತದಲ್ಲಿಲ್ಲವನು ವೈಶ್ವಾ- । ನರಗೆ ಸಮಿಧೆಗಳನ್ನು ನಿಯುಮದೆ ।
ತರುಳೆ ಯರ್ಪಿಸಿ ಕೊನೆಗೆ ದೇಹಾರ್ಪಣವ ಮಾಡಿದನು ॥ ೪೫ ॥
ದಾರಿಯುನು ನಡೆತಂದ ಪಥಿಕರ । ಭೂರಿಶ್ರಮವನು ನೆರಳಿನಿಂ ಮೇಣ್ ।
ಚಾರು ರುಚಿಕರ ಪಣ್ಗಳಿಂದೀ ಜನರ ಕ್ಷುಧೆಯನ್ನು ॥
ದೂರ ಮಾಡುವ ತೋರ ತರುಗಳು । ವಾರಿಜಾಕ್ಷಿಯೆ ಮುನಿಯ ಸುತರೆನೆ
ತೋರುವರು ಸತ್ಕಾರವನು ಬಹು ವಿನಯ ಭರದಿಂದ ॥ ೪೬ ॥
ಮೆರೆವ ಶೃಂಗಂಗಳಿಗೆ ಹತ್ತಿದ । ಕರೆಯ ಮೋಡ್ಗಳ ಪಂಕದಿಂ ನಿ- ।
ರ್ಝರದ ಧ್ವನಿಗಯ್ಯುತ್ತ ಹರಿಯುವ ನೀರಿನಿಂ ಮತ್ತಾ ॥
ದರಿಯ ಮುಖದಿಂ ಚಿತ್ರಕೂಟದ । ಗಿರಿಯು ಗೂಳಿಯ ಹಾಗೆ ಮಾನಿನಿ ।
ಸರಸ ವಪ್ರಕ್ರೀಡೆಯಾಡುವ ತೆರದಿ ತೋರುವದು ॥ ೪೭ ॥

ರಘುವಂಶ.

೧೩ನೆಯ ಸರ್ಗ [ಮುಂದೆ ಸಾಗಿದ್ದು]

ದೂರದಿಂ ಕಿರಿಯಾಗಿ ತೋರುವ । ಚಾರು ನಿರ್ಮಲ ಕ್ಷೋಭವಿಲ್ಲದ ।
ವಾರಿಯಿಂ ಕೂಡಿರುವ ಮಂದಾಕಿನಿ ಪ್ರವಾಹವದು ॥
ವೀರ! ಗಿರ್ಯುಪಕಂಠದಲಿ ಸಲೆ । ಧಾರುಣಿಯು ಕೊರಳಲ್ಲಿ ಧರಿಸಿದ ।
ತೋರಮುತ್ತಿನ ಹಾರದೋಪಾದಿಯಲಿ ಮಿರುಗುವದು ||೪೮||

ಗಿರಿಯು ಸರಿಸಕ್ಕಿರುವದೀಸುಂ-।ದರ ತಮಾಲದ ಸುರಭಿಯಿಂ ಕೂ- ।
ಡಿರುವ ತಳಿರುಗಳಿಂದ ಕರ್ಣಾಭರಣಗಳ ರಚಿಸಿ ||
ಅರಸಿ ನಿನಗರ್ಪಿಸಿದೆನವುಗಳು । ಬೆರಸಿ ನಿಜಕಾಂತಿಯನು ತವಪಾಂ -।
ಡುರತೆಯುಳ್ಳ ಕಪೋಲಪ್ರಾಂತಕೆ ಶೋಭೆಕೊಟ್ಟಿಹವು. ||೪೯||

ವನಜಮೃಗಗಳು ಶಿಕ್ಷೆಯಿಲ್ಲದೆ । ವಿನಯದಿಂ ಕೂಡಿಹವು ಮತ್ತು ।
ಪನಸ ಮೊದಲಾದೆಲ್ಲ ತರುರಾಜಿಗಳು ಫಲಗಳನು ||
ಜನಿಸುವವು ಪೂಗಳನು ತಾಳದೆ । ವನಜಲೋಚನೆ ನೋಡುನೋಡೀ ।
ಮುನಿಪನಾದತ್ರಿಯ ತಪಸ್ಸಿನ ಘನತೆಯಿಂತುಂಟೋ ॥೫೦||

ವನಿತೆ ಸಪ್ತರ್ಷಿಗಳು ಕರದಿಂ। ಕನಕವನಜಗಳನ್ನು ಕೊಯ್ದಿಹ ।
ವನಜನಾಭನ ಸಖನ ಶಿರದೊಳ್ಮೆರೆವ ಸ್ವರ್ಧುನಿಯು ॥
ವನದಿ ತಪಮಾಚರಿಪ ಜನರಿಗೆ । ವನನನೀಯುವದಕ್ಕೆ ಮುದದಿಂ ।
ಮುನಿಪಸತಿಯನಸೂಯೆ ಬರಮಾಡಿಹಳು ನೋಡಿಲ್ಲಿ ॥೫೧॥

ಅಳಿದು ಷಡ್ರಿಪುಗಳನು ಮೌನದಿ। ಕುಳಿತು ವೀರಾಸನದಿ ಬಲು ನಿ-।
ಶ್ಚಲತೆಯಿಂ ಸಲೆ ಧ್ಯಾನಮಾಡುವ ಋಷಿಗಳಂದದಲಿ ॥
ಲಲಿತವೇದಿಕೆಗಳಲಿ ತರುಗಳು । ಲಲನೆ, ವಾತಾಭಾವದಿಂ ಸಂ-।
ಚಲನವಿಲ್ಲದೆ ಯೋಗ ಸಿದ್ಧಿಸುವಂತೆ ತೋರುವವು ॥೫೨॥

ಕೋಮಲಾಂಕುರ ಪಲ್ಲವಂಗಳ । ಸ್ತೋಮದಿಂ ಮರಕತವ ಜಯಿಸಿದ ।
ಮಾಮನೋಹರ ಪದ್ಮರಾಗವ ಫಲಗಳಿಂ ಗೆಲ್ದು ॥
ಈ ಮಹಾ ನ್ಯಗ್ರೋಧವೃಕ್ಷಕೆ । ಶ್ಯಾಮಸಾಮವು; ನೀನು ಆ ದಿನ ।
ಕಾಮಿತಾರ್ಥವ ನೀಯಲೋಸುಗ ಪ್ರಾರ್ಥಿಸಿದೆಯಿದನು ॥೨೩॥

ಸರಸಿಜಾನನೆ ನೀಲಮಣಿಗಳ । ಕಿರಣಕಾಂತಿಗಳಿಂದಲೊಪ್ಪುವ ।
ಸರಸಮೌಕ್ತಿಕ ಹಾರಗಳ ಪರಿಯಲ್ಲಿ ಯೊಂದಡೆಗೆ ॥
ಕರಿಮುಕಮಲಗಳನ್ನು ಮಧ್ಯದಿ । ಧರಿಸಿ ಸಿತಪಂಕೇರುಹಂಗಳ ।
ಸರವ ರಚಿಸಿರುವಂತೆ ಜೇಗಡೆಯಲ್ಲಿ ತೋರುತಿಹ, ॥೨೪॥

ಕರಿಮುರಾಲಗಳಿಂದ ಕೂಡಿದ । ಸುರಸರೋವರದಮಲ ಹಂಸ ನಿ- ।
ಕರದ ಸೌಂದರ್ಯವನು ಪೋಲುತ್ತಿರುವ ದೊಂದೆಡೆಗೆ ॥
ಭರದಿ ಶ್ರೀಗಂಧವನು ಪೂಸಿದ । ಧರಣಿಯುಲಿ ಕೃಷ್ಣಾಗರುದಿ ಪರಿ- ।
ಪರಿಯ ಪತ್ರಾವಲಿಯ ಬರೆದಂತಿಹುದು ನೋಡಿಲ್ಲಿ. ॥೨೫॥

ಚಂದಿರನಚಂದ್ರಿಕೆಯುಮೇಣ್ ತರು-।ವೃಂದಗಳಘನಸಾಂದ್ರಛಾಯೆಯು।
ಸಂಧಿಸಿದ ತೆರವಲ್ಲಿ ತೋರುತ್ತಿರುವದೊಂದೆಡೆಗೆ ॥
ಸುಂದರಿಯೆ!ಶರದಭ್ರಗಳುಮೇಣ್ । ಬಾಂದಳದ ನೀಲಿಮೆಯುವೊಂದೆಡೆ।
ಹೊಂದಿರುವ ತೆರದಿಂದ ತೋರುತ್ತಿಹುದು ಜೇಗಡೆಗೆ ॥೨೬॥

ಅಸಿತ ಸರ್ಪಾಭರಣವದು ಮೇ-। ಣಸಮ-ಬಾಣಾಂತಕನ ಶುಭ್ರವಿ-।
ಲಸಿತ ಭಸ್ಮವಿಭೂಷಿತಾಂಗ ದೊಳೊಪ್ಪುವಂದದಲಿ ॥
ಝಷನಯನೆ, ಮತ್ತೊಂದುಕಡೆನೋ-।ಡೆಸೆಯುವದು ಗಂಗಾಪ್ರವಾಹವು।
ಬಿಸಜ ಬಾಂಧವ ಸುತೆಯೊಡನೆ ಕೂಡಿರುವ ತಾಣದಲಿ ॥೨೭॥

ಶರಧಿಯರಸಿಯರಿರ್ವರುಗಳೀ -। ಪಿರಿಯಸಂಗಮಮಜ್ಜನವನಾ- ।
ಚರಿಪರಿಗೆ ಪರವಾದ ಜ್ಞಾನಾಭಾವವಿದ್ದೊಡೆಯು ॥
ಉರುತರದ ಸಂಸಾರಬಂಧಕೆ । ಪುರಳಿಗುರಿಯಾದವ ವಿಮಲತರ ।
ಪರಮಶಾಂತಿ ಲಭಿಸುವದು ಕೇಳ್ಪಂದೇಹಮೇನಿದಕೆ ॥೨೮॥

ಮೊದಲಗೀ ನೈಷಾಧಪುರದಲಿ । ಚದುರೆ, ಮುಕುಟವ ಬಿಟ್ಟು ಜಟೆಯನು ।
ಮುದದಿ ಧರಿಸಿದೆನಿಲ್ಲಿ ಮಂತ್ರಿಸುಮಂತ್ರನಾದವನು ॥
ಕುದಿದು ಮನದೊಳು ಮಾಡಿ ಶೋಕವನೊದರಿ ನಾಡಿದನು ''ಮಾತೆ, ಕೈಕೆಯಿ ।
ಯೊದಗಿ ಬಂದಿತೆ ನಿನ್ನ ಮನಕಾಮನೆಯು ಹಾ" ಯೆಂದು ॥೫೯॥

ಜನಕ ನಂದಿನಿ, ಪ್ರಕೃತಿಬುದ್ಧಿಯು । ಜನನತಾಣವದೆಂದು, ಯಕ್ಷರ ।
ವನಿತೆಯರ ಸ್ತನಯುಗ್ಮದಿಂ ದುಪಭುಕ್ತವಾಗಿರುವ ॥
ಕನಕವನಜ ಪರಾಗವುಳ್ಳಹ । ಘನಸರೋವರ ಮಾನಸವು ಕಾ- ।
ರಣವದೆಂದಾಪ್ತೋಕ್ತಿಗಳು ನಿಜವಾಗಿ ಪೇಳುತಿಹ, ॥೬೦॥

ತುರಗಯಾಗಾಂತದಲಿ ಯವಭೃಥ । ಚರಿಸೆ ಯಿಕ್ಷ್ವಾಕುವಿನ ವಂಶದ ।
ನರಪರಿಂದವತರಿಸಿ ಶುಚಿತರಗೈದ ವಾರಿಗಳ ॥
ಸರಿಲತೀರದ ಯೂಪಮಯವಾ- । ಗಿರುವಯೋಧ್ಯಾ ರಾಜಧಾನಿಯ ।
ಸರಿಸದಲಿ ಗಂಭೀರತನದಿಂ ಪರಿದು ಪೋಗುತಿಹ, ॥೬೧॥

ಮಳಲು ತೊಡೆಗಳಲಾಡಿ ಸುಖವನು । ಗಳಿಸುತರ್ಹೇರ ಮತ್ತೆ ಬಲು ನಿ- ।
ರ್ಮಲ ಪು-ಪಯವನ್ನುಂಡು ಬೆಳೆದುತ್ತರದ ಕೋಸಲದ ॥
ಇಳೆಯಪಾಲಕರೆಲ್ಲವರ ನಿ- । ಷ್ಕಲದ ಪ್ರೇಮದ ದಾದಿಯಂದದಿ ।
ಲಲನೆ, ಮಮಮಾನಸಕೆಯಾದರವನ್ನು ಪುಟ್ಟಿಸುವ, ॥೬೨॥

ನಿರತಿಶಯ ಮಾನ್ಯತೆಯ ಪಡೆದಾ । ನರಪನಿಂದ ವಿಯೋಗಹೊಂದಿದ ।
ಮರುಕದಿಂದೀ ಸರಯುವಾದೊಡೆ ಜನನಿಯಂದದಲಿ ॥
ಸರಸ ಶಿಶಿರಾನಿಲಗಳಿಂ ಮುಂ- । ದೊರೆವ ತೆರೆಗಳ ಕರಗಳಿಂ ದೂ- ।
ರಿರುವ ನನ್ನನ್ನಪ್ಪಿಕೊಳ್ಳುವ ತೆರದಿ ತೋರುವದು ॥೬೩॥

ಅರುಣ ಸಂಧ್ಯಾರಾಗ ಪೋಲುವ । ಧರಣಿತಲದಿಂದೆದ್ದ ಧೂಲಿಯು ।
ಹರಡಿ ಬಾಂದಳದೊಳಗೆ ಕಣ್ಗೋಚರಿಪುದದರಿಂದ ॥
ಅರಿತು ಹನುಮನ ಮುಖದ ವಾರ್ತೆಯ । ತ್ವರಿತದಲಿ ತಾನೆದುರುಗೊಳ್ಳಲು ।
ಭರತ ಬರುತಿಹನೆಂದು ತಿಳಿಯುವೆ ಸೇನೆಯಿಂ ಕೂಡಿ ॥೬೪॥

ಅಂದು ಖರ ಮೊದಲಾದ ರಾಕ್ಷಸ- । ವೃಂದವನು ಸಂಹರಿಸಿ ರಣದಲಿ ।
ಬಂದು ನನಗಿತ್ತಂತೆ ನಿನ್ನನು ಪೊರೆದು ಲಕ್ಷ್ಮಣನು ॥
ತಂದೆವಚನವ ಪಾಲಿಸಿದ ನನ- । ಗಿಂದು ಭರತನು ಸತ್ಯವಾಗಿಯೆ ।
ನಿಂದೆಯಿಲ್ಲದ ರಾಜ್ಯಲಕ್ಷ್ಮಿಯು ನರ್ಪಿಸುವನಿನ್ನು ॥೬೫॥

ಗುರು ವಸಿಷ್ಠನ ಪಿಂತೆ ಚರಿಸುವ । ವರ ತಪಸ್ವಿಗಳಂತೆ ವಲ್ಕಲ ।
ಧರಿಸಿದಂತಹ ಕರದಿ ಪ್ರಾಜಾ ಪರಿಕರವ ಕೊಂಡ ॥
ಜರಠ ಮಂತ್ರಿಗಳಿಂದ ಕೂಡಿದ । ಮೆರೆವ ವಾಹಿನಿ ಹಿಂದೆ ಬರವಮಾ- ।
ಡಿರುವ ಭರತನು ಹರುಷದಿಂ ಬರುತಿಹನು ನೋಡಿಲ್ಲಿ ॥೬೬॥

ಸರಸಿಜಾನನೆ, ನೋಡು ಭರತನು । ಗುರುವಿನಿಂ ವಿತರಿಸಿದ ರಾಜ್ಯದ ।
ಸಿರಿಯು ತನ್ನಂಕದಲಿಯಿೀವರೆಗಿರ್ದರೂ ತಾನು ॥
ತರುಣನಾದರು ಭೋಗವಾಸನೆ । ತೊರೆದು ಕ್ಷುರಧಾರಾವ್ರತವನಾ- ।
ಚರಿಸಿ ಯೋಗೀಶ್ವರನ ತೆರದಲಿ ಧನ್ಯನೆನಿಸಿಹನು ॥೬೭॥

ಇನಕುಲೋದ್ಭವ ರಾಮನೀ ಪರಿ । ಜನಕನಂದಿನಿಗುಸಿರುತಿರೆ ತನ್ ।
ಮನದ ಭಾವವ ತಿಳಿದು ವೈಮಾನಾಧಿಪತಿಯಿಂದ ॥
ಕನಕಮಯ ಸುರಯಾನವದು ತತ್ । ಕ್ಷಣಕೆ ನಭದಿಂದಿಳಿದು ಧರಣಿಗೆ ।
ಜನಸಿತಲ್ಲಿದ್ದೆಲ್ಲ ಜನರಿಗೆ ಪರಮ ಸೋಜಿಗವ ॥೬೮॥

ಧರಣಿತಲದಿಂದುಚ್ಚವಿಲ್ಲದ । ಮೆರೆವ ಸ್ಫಟಿಕಾರೋಹಣಾಳ್ಯಹ ।
ವರ ಬಿಭೀಷಣನಿಂದಲೊರೆಯಲ್ಪಟ್ಟ ಪಥದಿಂದ ॥
ಪರರ ಸೇವಾಚತುರನಾದವಹ । ಹರಿಗಳಾಣ್ಮನ ಪಿಡಿದು ಕರವನು ।
ಸುರವಿಮಾನವನಿಳಿದು ರಾಘವ ನಿಂತುಕೊಂಡಿಹನು ॥೬೯॥

ಎರಡಿ ರವಿಕುಲಗುರು ವಸಿಷ್ಠಗೆ । ಭರದಿನಿಂ ಪರಿಗ್ರಹಿಸಿಯರ್ಘ್ಯವ ।
ಕರಗಳಿಂ ಬಿಗಿದಪ್ಪಿ ರಾಮನು ಶಿರವ ನೆರೆ ಮೂಸಿ ॥

ಮರುಕದಿಂ ರಾಜ್ಯಾಭಿಷೇಕವ । ತೊರೆದ ತವ್ಮನ ಮಸ್ತಕದಿ ಶುಚಿ- ।
ತರದ ನೇತ್ರೋದಕದಿಯಭಿಷೇಚನವ ಮಾಡಿದನು ॥೭೦॥

ಬಲಿತ ವಟತರು ಶಾಖೆಯಿಂ ನೆಲ- । ಕಿಳಿದ ಪಾರಂಬೆಗಳ ಪೋಲುವ ।
ಬೆಳೆದ ಶ್ಮಶ್ರುಗಳುಳ್ಳ ಸಚಿವರ ನತಿಗಳನು ಕೊಂಡು ॥
ನಳಿನನಾಭನು ನೋಡಿ ಪ್ರೇಮದಿ । ಬಳಸಿ ಸವಿನುಡಿಗಳನು ಕುಶಲಂ- ।
ಗಳನು ಕೇಳುತ ಮನ್ನಿಸಿದನವರನ್ನು ನಸುನಗುತ ॥೭೧॥

ದುರುಳಕಾಲದ ಬಾಂಧವನು ಮೇಣ್ । ಕರಡಿಕೋತಿಗಳೊಡೆಯನೀತನು ।
ಭರತನೇ, ಪೌಲಸ್ತ್ಯನೀತನು ಸಮರ ದುರ್ಧರನು ॥
ಒರೆಯಲೀಪರಿ ರಾಘವನು ಸ- । ತ್ವರದೆ ಲಕ್ಷ್ಮಣನನ್ನು ಲಂಘಿಸಿ ।
ಪರಮ ಸಾದರದಿಂದಲಾತನು ನಮಿಸಿದಿರ್ವರನು ॥೭೨॥

ಭರತ ಬಳಿಕಗ್ರಜನ ಚರಣಕೆ- । ಯೆರಗಲಾತನ ಲಕ್ಷ್ಮಣನು ಬಲು ।
ಮರುಕದಿಂ ಮೇಲೆತ್ತಿ ಸ್ವರದಿಂ ತಬ್ಬಿಕೊಳ್ಳಲ್ಕೆ ॥
ಉರದಿ ರಾವಣಿಯಿಂದ ಘಟಿಸಿದ । ಪಿರಿಯ ಗಾಯವುಪೊಣಗಿ ಕಲ್ಲಿನ ।
ತೆರದಿ ಬಿರುಸಾದದ್ದು ನೆಟ್ಟಿತು ಭರತಹೃದಯದಲಿ ॥೭೩॥

ಜಾನಕೀವರನಿಚ್ಛೆಯಂದದಿ । ಮಾನವಾಕೃತಿಯನ್ನು ಧರಿಸಿದ ।
ವಾನರಾಧಿಪರೆಲ್ಲರೂ ಮದವಾರಿ ಸುರಿಸುತಿಹ ॥
ಆನೆಗಳ ಮೇಲೇರಿ ಪರ್ವತ- । ಶ್ರೇಣಿಗಳ ಮೇಲ್ನಡೆಳತ ತೆರದಿಂ ।
ಮಾನಸದೆ ಭಾವಿಸುತೆ ಮಹದಾನಂದ ಪಡೆದಿಹರು ॥೭೪॥

ಮಾನನಿಧಿ ದಶರಥನ ಸೂನುವಿ- । ನಾಣತಿಗೆ ಸರಿಯಾಗಿ ತನ್ನಯ ।
ಸಾನುಚರರಿಂ ಕೂಳಿತ ಮಾಯಾಬಲದೆ ನಿರ್ಮಿಸಿದ ॥
ದಾನವಾಧೀಶ್ವರನ ರಥವದು । ಶ್ರೀನಿವಾಸನ ರಥದಕಿಂತಲು ।
ಹೀನವಾಗಿಯೆ ಕಾಣಹತ್ತಿತು ಶೋಭೆಯಲಿ ನೋಡೆ ॥೭೫॥

ತರಳ ಚಂಚಲೆಯಿಂದ ಕೂಡಿದ। ಮೆರೆವ ಸಂಜೆಯ ಮೇಘಗಳವೋಲ್ –।
ಲಿರುವ ಗುರು ಬುಧಗಳಲಿ ಸೇರಿದ ಚಂದ್ರನಂದದಲಿ ॥
ಅರಿತು ಮನದಿಂಗಿತವ ಚಲಿಸುವ। ವರಪತಾಕೆಗಳುಳ್ಳ ಯಾನದಿ।
ಭರತ ಲಕ್ಷ್ಮಣರಿಂದ ಕೂಡಿದ ರಾಮ ಕಣ್ಗೆಸೆದಾ ॥ ೭೬ ॥

ಪ್ರಳಯಕಾಲದ ವಾರ್ಗಳಿಂಭೂ-।ವಲಯವನು ಶ್ರೀ ಹರಿಯು, ಚಂದ್ರನ।
ಕಳೆಗಳನು ಮಳೆಗಾಲದಭ್ರಗಳಿಂದ ನಿರ್ಮಲದ ॥
ಚಳಿಯಕಾಲವು ಬಿಡಿಸಿದಂದದೆ। ಖಳನ ಛಳದಿಂ ರಾಮನುಳಹಿದ।
ಲಲನೆಯಡಿದಾವರೆಗೆ ಭರತನು ವಂದಿಸಿದನಾಗ ॥ ೭೭ ॥

ರಾವಣನು ನಮಿಸಲ್ಕೆಯಾತನ। ಭಾವಭಂಗವನೈದ ಸೀತಾ–।
ದೇವಿಯಡಿಗಳ ಯೋಗ ಭಾತೃವ್ರತವನಾಚರಿಸಿ ॥
ಜಾವಕವ ಧರಿಸಿರುವ ಭರತನ। ಪಾವನದ ಶಿರಕಾಗಲದು ಮೇಣ್।
ಭಾವೆ ಯಡಿಗಳಯುಗ್ಮ ಶುಚಿತರವಾಗಿ ಮೆರುಗುವವು ॥ ೭೮॥

ಮುಂದೆ ಚರಿಸುವ ಪ್ರಕೃತಿಗಳ ತುಸು –। ಹಿಂದೆ ಪುಷ್ಪಕದಲ್ಲಿ ರಾಮನು।
ಮಂದಗತಿಯಿಂ ಸಾಗಿ ಕ್ರೋಶಾರ್ಧದಲಿ ತೋರುತಿಸ ॥
ಚಂದವಾದುದ್ಯಾನದಲಿ ನಿಜ-। ಬಂಧು ಶತ್ರುಂಜಯನು ಹೊಡೆದಿಹ।
ಸುಂದರದ ಪಟಮಂದಿರದಿಯಿಳಿದಿಹನು ತಾನಂದು।೭೯॥

॥ ರಘುವಂಶ. ॥

[೧೪] ನೆಯಸರ್ಗ.

ತನುವಿನಾಶ್ರಯ ಕಡಿದ ಬಳ್ಳಿಯು। ತೆರದೆ ಸ್ಥಿತ್ಯಂತರವನೈದಿದ।
ವರಸುಮಿತ್ರಾದೇವಿ ಕೌಸಲ್ಯೆಯರು ಮರುಮರುಗಿ ॥
॥ ಪರಿಜನರ ಕೂಡಾಗ ಮೆಲ್ಲನೆ। ತರಳರಿದ್ದುಪವನಕೆ ಕಷ್ಟದೆ।
॥ ಬರುವದನ್ನಾಗಿರದೆ ಕಂಡರು ದಶರಥಾತ್ಮಜರು ॥೧॥

ಅರಿಗಳನು ಸಂಹಾರ ಮಾಡಿದ । ಪರಮ ವಿಕ್ರಮದಿಂದ ಕೂಡಿದ !
ವರ ಕುಮಾರರು ಕ್ರಮದೆ ತಾಯ್ಗಳ ಚರಣಗಳಿಗೆರಗೆ ॥
ಸುರಿವ ಕಣ್ಣೀರಿಂದ ತಮ್ಮಯ । ತರಳರನು ತಾವರಿಯದಿರ್ದೊಡೆ ।
ಸ್ಪರುಶ-ಸುಖದನುಭವದೆ ಪರಿಚಯವನ್ನು ಹೊಂದಿದರು ॥೨॥

ತರಣಿ-ಕಿರಣಗಳಿಂದ ಬಿಸಿಯಾ-। ಗಿರುವ ಸರಯೂ-ಗಾಂಗ-ಜಲಗಳು ।
ಗಿರಿಯ ಹಿಮನಿಸ್ಪಂದದಿಂ ತಂಪಾಗುವಂದದಲಿ ॥
ಅರಸುಪೆಂಡಿರ ನೇತ್ರಪಾತ್ರದೆ । ಸುರಿವ ಶೋಕೋಷ್ಣಾಶ್ರುಗಳುಗಡ- ।
ಭರತಹರಿಗಳ ಬಾಷ್ಪದಿಂದುರೆ ತಂಪುಗೊಂಡಿಹವು ॥೩॥

ಕ್ಷಣದೆಯಲಿ ಸಂಚರಿಪ ರಾಕ್ಷಸ-। ಜನರ ಶಸ್ತ್ರಾಘಾತದಿಂ ಲಕು- ।
ಮಣನ ಸೀತಾಧವನ ಮೈ ಮೇಲ್ಮರಗಳಾಡಿಸುವ ॥
ಜನನಿಗಳು ತತ್ತನುಗಳಲ್ಲಿಯು । ವ್ರಣಗಳನು ಕಂಡಾಗ ಕ್ಷತ್ರಿಯ ।
ವನಿತೆಯರ ತೆರ ವೀರಸೂ-ಪದ ಬಯಸಲಿಲ್ಲ ಕಣಾ ॥೪॥

ಪತಿಪರಾಯಣೆಯಾದ ಜನಕನ । ಸುತೆಯು ತನ್ನತ್ತೆಂದಿರೆಡೆಯಲಿ ।
ಗತಿಸಿ ಮಂಜುಸ್ವರದೆ ನುಡಿದಳು ಪರಮ ವಿನಯದಲಿ ॥
“ ಪತಿಯ ಕ್ಲೇಶದ ಹೇತುವಾಗಿರು-। ವತಿ ಕುಲಕ್ಷಣೆಯಾದ ಸೀತೆಯು।
ನತಿಯ ಮಾಡುವಳಿತ್ತ ದಯೆಯಿಂ ಲಕ್ಷ್ಯವಿರಲೆಂದು ” ॥೫॥

ಕಾಳಿಗದೆ ದೇವೇಂದ್ರನನು ಮೇಣ್ । ಕಾಳನನು ಸಹ ಗೆಲ್ದ ರಾಕ್ಷಸ-।
ಕಾಳವದನಗಳಿಂದ ನಮ್ಮಯ ಬಾಲಕರು ಬಾಲೆ ॥
ಕೇಳು ನಿನ್ನತಿ ಸುಕೃತ ಬಲದಿಂ । ಬಾಳಿದರು ಬರಿದೇಕೆ ವ್ಯಸನವ ।
ತಾಳುತಿಹೆ ಯೇಳೆಂದು ನುಡಿದರು ಶ್ವಶ್ರುಗಳು ಸ್ನುಷೆಗೆ ॥೬॥

ಪರಮ ಪುರುಷನ ತಾಯ್ಗಳಿರ್ವರು । ನಿರತಿಶಯ ಸಂತಸದೆ ಯಾತನ ।
ಶಿರದ ಮೇಲ್ಕಣ್ಣೀರುಗಳಭಿಷೇಚನದ ಕಾರ್ಯವನು ॥
ಜರುಗಿಸಲ್ಕಾರಂಭ ಮಾಡಲು । ನರಪ ಮಂತ್ರಿಗಳಾಗ ಪಾವನ- ।
ಸರಿಉಗಳನೆರೆದಿರದೆ ತತ್ಕಾರ್ಯವನು ಮುಗಿಸಿದರು ॥೭॥

ಸುರ ಸರಿತ್ಸಾಗರಗಳಿಂದತಿ । ಸರಸ ವಾರಿಗಳನ್ನು ರಾಕ್ಷಸ-।
ವರರು ಪೇಳ್ವಾನರಗಳಾಗಲಿ । ತಂದು ಬಕುತಿಯಲಿ ॥
ಸರಸಿಜಾಕ್ಷನ ಮೇಲೆ, ವಿಂಧ್ಯದ। ಗಿರಿಯು ಮೇಲ್ವಾರ್ ಮೋಡಗಳುಮಳೆ-।
ಗರೆದ ತೆರದಲಿ, ಸುರುಹಿ ಪರಮಾನಂದ ಹೊಂದಿದವು ॥೯॥

ವನದೆ ಮನೆಮಾಡಿರುವ ಪಾವನ। ಮುನಿಯ ವೇಷದ ರಚನೆಯುಲಿಶ್ರೀ।
ವನಜ ನಾಭನ ದೇಹಯಷ್ಟಿಯು ಮಿನುಗುವಂದದಲಿ ॥
ಜನಪ-ನೇಪಥ್ಯದಲಿ ಯಾದೊಡೆ। ಜನಮನೋರಮವಾಗಿಯೆಸೆದದು।
ಘನತೆಯಿಂ ಪುನರುಕ್ತ ದೋಷಕೆ ಪಾತ್ರವಾಗಿಹುದು ॥೯॥

ಬಳಿಕ ಮಂಜುಳ ವಾದ್ಯರವಗಳು । ಮೊಳಗುತಿರೆ ಸತಿ ಸಹಿತರಾಮನು।
ಕುಳಿತು ಪುಷ್ಪಕಯಾನದಲಿ ಪರಿವಾರದಿಂ ಕೂಡಿ ॥
ಚಲಿಸೆ ತೋರಣ ಕೇತುಗಳ ಪೆರ್ ।ನಿಲಯುಗಳ ಮೇಲ್ನಿಂತುಲಾಜೆಯ।
ಮಳೆಯ ಕರೆದೈದೆಯರು ಜಯಘೋಷವನು ಮಾಡಿದರು ॥೧೦॥

ಪುರಕೆ ಯಭಿಮುಖವಾಗಿ ಸೀತಾ-। ವರನು ಬರುತಿರುವಾಗ ಚಾಮೀ- ।
ಕರದ ಚಮರಗಳನ್ನು ಸೌಮಿತ್ರಿಯರು ಕರಗಳಲಿ ॥
ಧರಿಸಿ ಮೆಲ್ಲನೆ ಬೀಸಿದರು ಮೇಣ್ । ಜನದ ಸತ್ತಿಗೆಯನ್ನು ಭರತನು ।
ಪರಮ ಹರುಷದೆ ಪಿಡಿದು ಜಯಜಯಕಾರ ಮಾಡಿದನು ॥೧೧॥

ಸುರಭಿಯಿಂ ಮಘ ಮಘಿಪ ಧೂಪದ। ಸರಸ ಧೂಮಾವಳಿಯು ನಭದಲಿ।
ಮರುತನಿಂ ಭಿನ್ನಾಗಿ ನೋಡುವ ನರರ ಕಣ್ಗಳಿಗೆ ।
ತಿರುಗಿ ವನದಿಂ ಬಂದ ರಾಮನು । ಕರದೆ ಪುರವೆಂಬಬಲೆ ಹೆರಳನು ।
ಹರುಷದಿಂ ಬಿಚ್ಚಿಹನು ತಾನೆಂಬಂತೆ ತೋರಿದುದು ॥೧೨॥

ವರನ ತಾಯ್ಗಳು ಮಾಡಿದಂಥುಡು-। ಗರೆಗಳನು ಪರಿಧಾನ ಮಾಡಿದ।
ಧರೆಯಸುತೆ ಪೊಂದೇರಿನಲಿ ಮುಂಪರಿದು ಬರುತಿರಲು ।
ಸುರದ ಪೆಣ್ಗಳು ತಮ್ಮ ಕಣ್ಗಳ। ತೆರೆದು ಸತಿ-ಮುಖವನ್ನು ನೋಡುತ।
ಶಿರವ ಬಾಗಿಸಿ ಕರವ ಜೋಡಿಸಿ ಶರಣು ಮಾಡಿದರು ॥೧೩॥

ಮುನಿಯ ಪತ್ನ್ಯನಸೂಯೆಯಿಂದಲೆ । ತನಗೆ ಲಭಿಸಿರ್ದಂಗ-ರಾಗದೆ ।
ಜನಕನಂದಿನಿಯಂಗಕಾಂತಿಯು ಮಂಡಳವು ಜನಕೆ ॥
ಅನಲಗತ ಕಾಂಚನದ ತೆರದಲಿ । ಯನುಪಮ ಪ್ರಭೆಯಿಂದ ರಾಜಿಸಿ ।
ವನಜನಾಭನ ಸತಿಯ ಪರಿಶುದ್ಧತೆಯ ತೋರಿಸಿತು ॥ ೧೪ ॥

ಅಂದು ಸಾಹಿತ್ಯಗಳ ತುಂಬಿದ । ಛಂದವಾಗಿಹ ಗೃಹಗಳಲಿ ಸಖ ।
ವೃಂದವನು ತಂದಿಳಿಸಿ ಮನ್ನಿಸಿ ಯನುಜರಿಂ ಕೂಡಿ ॥
ತಂದೆ ಚಿತ್ತ್ರ ವೊಂದೆ ಕಾಣುವ । ಮಂದಿರಕ್ಕೈತಂದು ಪರಮಾ ।
ನಂದ-ಕಂದನು ಪೊಕ್ಕನೆಲ್ಲರು ನೋದ ಹೊಂದಿದರು ॥ ೧೫ ॥

ವರವ ಯಾಚಿಸಿ ಯೆನ್ನ ಗುರುವಿಗೆ । ಸುರರ ಪುರದಲಿ ಸ್ಥಿರವ ಗೊಳಿಸಿದೆ ।
ವರದೆ, ಸತ್ಯಾಚರಣವೇ ಸದ್ಗತಿಗೆ ಮೂಲವದು ॥
ಬರಿದೆ ಬಿಸನವ ಪಡಲದೇತಕೆ । ಯಿರಲಿ ಯೆಂದೀವಿಧದೆ ಪ್ರಾರ್ಥಿಸಿ ।
ಹರಿಯು ಭರತನ ಜನನಿಯುದ್ವೇಗವನು ಹರಿಸಿದನು ॥ ೧೬ ॥

ದೇವ ತರುವಿನ ವಿಕ್ಕಿಮೀರುತ । ದೇವದೇವೋತ್ತಮನು ಪ್ರೇಮದೆ ।
ರಾವಣಾನುಜಹನುಮಸುಗ್ರೀವಾದಿ ಸೇವಕರ ॥
ಭಾವಗಳ ತಾನರಿತು ಕೃತ್ರಿಮ । ಜೀವಲೋಕದ ಭೋಗಗಳನುರೆ ।
ಯೀವ ಬಗೆಯೆಲ್ಲರಿಗೆ ಸೋಜಿಗವನ್ನು ಜನಿಸಿಹುದು ॥ ೧೭ ॥

ಅಮರಪುರದಿಂದೇಳು ಮುನಿಗಳು । ಮಮತೆಯಿಂದಭಿನಂದಿಸಲು ಶ್ರೀ ।
ರಮಣನಿದ್ದೆಡೆಯಲ್ಲಿ ಬರಲವರನ್ನು ಸತ್ಕರಿಸೆ ॥
ಅಮರರಿಪುವಿನ ಜನ್ಮಕಥೆಯನು । ಕಮಲೆಯಾಣ್ಮನಿಗರುಹಿ ಯಾತನ ।
ವಿಮಲ ಯಶವನು ಪಾಡಿ ಗೌರವವನ್ನು ಬೆಳೆಸಿದರು ॥ ೧೮ ॥

ತೆರಳೆ ಮುನಿಗಳು ತಮ್ಮ ಸ್ಥಾನಕೆ । ನಿರತಿಶಯಸುಖಭೋಗದಲಿ ಕಪಿ- ।
ವರರು ಮೋಹ್ ರಕ್ಕಸರು ಮಾಸಾರ್ಧವನು ಕಳೆದಲ್ಲ ॥
ತ್ವರದೆ ಹರಿಯಪ್ಪಣೆಯ ಮೇರೆಗೆ । ಹೊರಟು ಸ್ವಸ್ಥಾನಕ್ಕೆ ಪೋದರು ।
ಧರೆಯ ತಿರುಳೆಯ ಕರದೆ ಪೂಜೆಯನ್ನು ಕೈಕೊಂಡು ॥ ೧೯ ॥

ದುರುಳ ರಾಕ್ಷಸ ವರನ ಪ್ರಾಣವ । ಹರಿಸಿದಾಗಲೆಕೊಂಡ ಸ್ವರ್ಗದ ।
ಸರಸ ಪುಷ್ಪದ ತೆರದಿ ಮೆರೆಯುವ ಸ್ಮರಿಸಿದರೆ ಬರುವ ॥
ಸುರರ ಪುಷ್ಪಕಯಾನವನು ಹರಿ । ಹರನ ಸಖನುಪಯೋಗಕಾಗಿಯೆ।
ತಿರುಗಿ ಪರಮೋದಾರತನದಲಿ ಕಳುಹಿಕೊಟ್ಟಿಹನು ॥ ೨೦ ॥

ಪಿತನ ಶಾಸನದಂತೆಯೇ ಶ್ರೀ-। ಪತಿಯು ವನವಾಸವನು ಭೋಗಿಸಿ ।
ಸತಿಯು ಸಹಿತೈತಂದು ರಾಜ್ಯಾಸನವ ಕೈಕೊಂಡು ॥
ಹಿತದಿ ಬಾಂಧವರನ್ನು ಹಾಗೆಯೆ । ಶ್ರುತಿಗೆ ಸಮ್ಮತವಾದ ಧರ್ಮವ ।
ಸತತ ಕೈತವ ಭಾವವಿಲ್ಲದೆ ಪಾಲಿಸಿದನವನು ॥ ೨೧ ॥

ಆರು ಮೊಗದವನಾದ ಹರಸುತ-। ನಾರು ಜನ ಜನನಿಯರ ಸ್ತನಗಳ ।
ಸಾರವನು ಕುಡಿದವರ ಸತ್ಕಾರವನು ಮಾಳ್ಪಂತೆ ॥
ತಾರತಮ್ಯದ ಭೇದವಿಲ್ಲದೆ । ಮಾರನಯ್ಯನು ತಾಯ್ಗಳನು ಬಲು ।
ತೋರ ಪ್ರೇಮದೆ ಭಜಿಸಿ ಯುಪಚಾರ ಮಾಡಿದನು ॥ ೨೨ ॥

ಈತನೌದಾರ್ಯದಲಿ ಸರ್ವರು । ಭೂತಿಯಿಂ ಸಂಪನ್ನರಾಗಿಹ-।
ರೀತನವನದೆ ಭೀತಿಯಿಲ್ಲದೆ ಕರ್ಮಮಾಡುವರು ॥
ನೇತೃವಾದಿವನಿಂದ ಸರ್ವರು । ಪೂತಪಿತನುಳ್ಳವರು ಶೋಕವ-।
ನೇತಿಗಳೆದದರಿಂದ ಲಾಪತ್ಯವನು ಪಡೆದವರು ॥ ೨೩ ।

ತನ್ನ ಪ್ರಜೆಗಳ ಕಾರ್ಯಗಳನುರೆ । ಪುನ್ನ ತೀರ್ಗಡೆ ಮಾಡಿ ನಂತರ ।
ಸನ್ನುತಾಂಗನು, ತನ್ನ ಭೋಗೋತ್ಸುಕದೆ ಭೂಮಿಯಲಿ ॥
ಮನ್ಮಥನ ತಾಯ್ಸತಿಯ ರೂಪದೆ । ಜನ್ಮಿಸಿರ್ದಂಥವಳ ಸಂಗಡ ।
ಗನ್ನ ಪ್ರೇಮೋದ್ರೇಕದಿಂ ರಮಮಾಣ ಮಾಡುವನು ॥ ೨೪ ॥

ಜಾಣತನದಿಂ ಸಜ್ಜಿಸಿದ ಮನೆ-। ಕೋಣೆಯಲಿ ರಹದಲ್ಲಿ ರಾಮನು ।
ಪ್ರಾಣದರಸಿಯು ಕೂಡ ವಿಷಯಾನಂದದೊಳಗಿರಲು ॥
ಕಾನನದಿ ತಮಗಾದ ದುಃಖದ । ಭಾನವದು ಮಾನಿನಿಗೆ ಮೇಣಾ-।
ಜ್ಞಾನಿಮನಸಿಗೆ ಪರಮ ಹರುಷವೆ ಯುಂಟು ಮಾಡಿಹುದು ॥ ೨೫ ॥

ಎಳೆಯ ಶರತ್ತೃಣದಂತೆ ಪಾಂಡುರ। ಕಳೆಯು ತಾಳಿದ ನಳಿನ-ಮುಖದಿಂ।
ಹೊಳೆವ ಸ್ನಿಗ್ಧಾಲೋಕನದ ಮೇಲಿಂಡ ರಾಘವನು ॥
ಇಳೆಯ ತರುಳೆಯ ಗರ್ಭ-ಲಕ್ಷಣ-। ಗಳನು ಸೀತೆಯು ಪೇಳದೆಯೆ ತಾಂ।
ತಿಳಿದು ಮನದಲಿ ಪರಮ ಸಂತಸವನ್ನು ಹೊಂದಿದನು ॥ ೨೬ ॥

ಪಿಡಿದು ನೀಲಿಮೆಯನ್ನು ಶೋಭೆಯ। ಪಡೆದ ಕುಚಗಳ ಚೂಚುಕಂಗಳ।
ಮಡದಿಯನು ಸಾಕೇತ ದೊಡೆಯನು ಪರಮ ಪ್ರೇಮದಲಿ ॥
ಒಡನೆ ಕೂಡ್ರಿಸಿಕೊಂಡು ತನ್ನಯ। ತೊಡೆಯ ಮೇಲ್ಮೈದಡವಿ ಮುದ್ದಿಸಿ।
ಬಿಡದೆ ದೋಹದಗಳನು ಕೇಳಲ್ಕವಳು ನಾಚಿದಳು ॥ ೨೭ ॥

ಎರಳೆಗಳು ಬಲಿಯುಂಡು ಚರಿಸುವ। ಪರಿಚಯದ ಮುನಿಸುತೆಗಳಿರುತಿಹ।
ಭರವೆ ಶರವರ್ಭಗಳು ಬೆಳೆದಿರುವಂಥ ಸುರನದಿಯ ॥
ಸರಸತೀರದಲಿರುವ ಮುನಿಗಳ। ಪರಮ ಪುಣ್ಯಾಶ್ರಮಗಳನ್ನರೆ।
ಹರಿಯೆ ನೋಡುವ ವಾಂಛೆಯಾಗಿಹುದೆಂದಳಾ ಸತಿಯು ॥ ೨೮ ॥

ಲಲನೆಯೀಪರಿ ಕೇಳಿ ವಚನವ। ನಳಿನನಾಭನು ತನ್ನ ಪತ್ನಿಗೆ।
ಫಲಿಸುವದು ನಿನ್ನಿಚ್ಛೆಯೆಂದತಿ ಪ್ರೇಮದಿಂ ಪೇಳಿ ॥
ಹಲವು ಸೇವಕರೊಡನೆ ನಭವನು। ಹಳಿವ ಸೌಧದ ಮೇಲೆ ತನ್ನಯ।
ನಲಿವ ಪುರ-ಸಂಭ್ರಮವ ನೋಡಲು ಹತ್ತಿದನು ಗಡನೆ ॥ ೨೯ ॥

ಪುರದ ಹೊರತೋಟಗಳ ಮಧ್ಯದೆ। ಸರಸವಾಡುವ ತರುಣ ಜನರನು।
ಹರಿವ ಸರಯೂ ನದಿಯ ನೀರಲಿ ಚರಿಸ ನೌಕೆಗಳ ॥
ಪುರದ ದಾರಿಗಳೆರಡು ಕಡೆಯಲಿ। ಮೆರೆವ ಪಣ್ಯಾವಳಿಗಳನು ಶ್ರೀ।
ಹರಿಯು ನಿರಕಿಸಿ ಪರಮ ಸಂತಸವನ್ನು ಹೊಂದಿದನು ॥ ೩೦ ॥

ಅರಿಗಳನು ಭುಜಬಲದೆ ಜಯಿಸಿ-। ದುರ್ರುಪರಾಕ್ರಮಿಯಾದ ಕೋಸಲ-।
ಧರೆಯ ಪಾಲಿಸು ವಿಜಯನಾಮಕ ತನ್ನ ಪರಿಚರನ ॥
ಕರೆದು ಕೌತುಕದಿಂದಲೆನ್ನಾ-। ಚರಣವದು ಪ್ರಜೆಗಳಿಗೆ ಸಮ್ಮತ-।
ವಿರುವದೇ? ಭಯಬಿಟ್ಟು ಪೇಳೆಂದಾಗ ಕೇಳಲ್ಕೆ ॥ ೩೧ ॥

ವಿನಯದಿಂ ಕರಮುಗಿದು ಸೇವಕ-। ಜನರ ಮುಖ್ಯನು ನುಡಿದನೆಲೆ ನೀ
ಜನಕ-ನಂದಿನಿಯನ್ನು ದಶಕಂಧರನ ಮನೆಯಿಂದ ॥
ವನಜನಾಭನೆ, ತಂದುದನು ದು-।ರ್ಜನರು ಕುಂದೆಂದೆಣಿಸುವರು ಬೇ-।
ಗುಣಗಳನು ನಿಜವಾಗಿ ಪೌರರು ಕಾಡಿ ಹರಸುವರು ॥ ೩೨ ॥

ನರಕು ತನ್ನರ್ಧಾಂಗಿಯನ್ನೀ-।ತೆರದಿ ಜರಿಯುವದನ್ನು ತನ್ನನು-।
ಚರನ ಮುಖದಿಂ ಕೇಳಿವಜ್ರಾಘಾತವಾದಂತೆ ॥
ಧರೆಯು ಮೇಲ್ಬಿಳಿತಾಗ ತಟ್ಟನೆ। ಹರಿಯು ಜಾಯೆಯು ಧವಳ ಕೀರ್ತಿ
ಬರಿದೆ ಕಾಲಿಮೆ ಯುಂಟಿಕೊಂಡಿಹುದೆಂದು ಮರುಗಿದನು ॥ ೩೩ ॥

ಜನರ ದೂಷಣೆಯನ್ನು ಮನ್ನಿಸಿ। ವನಿತೆಯನ್ನಪರಾಧವಿಲ್ಲದೆ।
ವನದಿ ಪಶುಗಳ ಸಾಹಚರ್ಯಕೆ ಕಳುಹಲೇನಥವಾ ॥
ಅನೃತವಾದಪವಾದಕಂಜದೆ। ಮನೆಯಲಿವಳನ್ನಿರಿಸಲೇನೆಂ-।
ದಿನಕುಲಾಧೀಶ್ವರನು ಸಂದೆಗದೊಳಗೆ ಮುಳುಗಿದನು ॥ ೩೪ ॥

ಬಳಿಕ ಜನರಪವಾದವನ್ನರಿ। ಕಳೆದುಕೊಳ್ಳಲ್ಕನ್ಯ ಪಥವ-।
ನ್ನಿಳೆಯ ಪಾಲನು ಕಾಣದಲೆ ತನ್ನಿನಿಯಳನು ತ್ಯಜಿಸಿ ॥
ಗಳಿಸುವೆನು ಯಶವೆಂದು ಮನದಲಿ। ತಿಳಿದು ನಿಶ್ಚಯಿಸಿದನು ಕೀರ್ತಿಯ-
ನುಳಿದು ಬದುಕಿದರೇನು ಕುತ್ಸಿತರಂತೆ ಜಗದೊಳಗೆ ॥ ೩೫ ॥

ಹರಿಯು ತೇಜೋಹೀನ ಮುಖವನು। ಭರತ ಮೊದಲಾದವರಜರುನೋ-।
ಡಿರದೆ ಚಿಂತಾವಾರಿಧಿಯ ಮಧ್ಯದಲಿ ಮುಳುಗಿರಲು ॥
ಸರಸಿಜಾಕ್ಷನು ತನಗೆಯುಂಟಾ-। ಗಿರುವ ಪರಿವಾದವನುವಿವರಿಸಿ।
ತ್ವರದೆಯುವರಿಗೆ ಮರಳಿಯೀಪರಿಯಿಂದ ಪೇಳಿದನು ॥ ೩೬ ॥

ಘನ-ಪಯೋಕಣ-ಪಾತದಿಂ ದ-। ರ್ಪಣವು ದೂಷಿತವಾಗುವಂದದೆ।
ಇನತನೂದ್ಭವನಾದ ಮನುವಿನ ಶ್ರೇಷ್ಠವಂಶದಲಿ ॥
ಜನಿಸಿದವರಿಗೆ ಯಿಂತು ನನ್ನಿಂ। ಘನಕಲಂಕವು ಬಂದಿತನುಜರೆ।
ಜನಕೆ ನಾನಿನ್ನೆಂತು ಮೊಗವನು ತೋರಿಸುವೆನಯ್ಯೋ! ॥ ೩೭ ॥

ಮೊದಲಿಗಾಲಾನಕ್ಕೆ ಕಟ್ಟಿದ । ಮದಗಜೇಂದ್ರನಿಗೊದಗಿದಂತಹ ।
ಸುದೃಢ ಬಂಧನವದಕೆ ಸಹಿಸಲಶಕ್ಯವಿರ್ಪಂತೆ॥
ಉದಕದಲಿ ಚೆಲ್ಲಿರ್ಪತೈಲದ । ಸದೃಶದಿಂಪಸರಿಸುವ ನನ್ನಯ ।
ಸುದತಿಯಪವಾದವನು ತಾಳುವದಾಗದೆನ್ನಿಂದ ॥ ೩೮ ॥

ತಂದೆಯಪ್ಪಣೆಯಂತೆ ಯನುಜರೆ । ಹಿಂದೆ ಪೃಥ್ವಿಯ ರಾಜ್ಯವನ್ನುರೆ ।
ಸಂದೆಗವ ತೊರೆದಂದು ತ್ಯಜಿಸಿರುವಂದದಲಿ ನಾನು ॥
ನಿಂದೆಯಪಸರೋದಸವ ಮಾಡ-। ಲ್ಕಿಂದು ಗರ್ಭಿಣಿಯಾದ ನನ್ನಯ ।
ಸುಂದರಾಂಗನೆಯನ್ನು ನಿಸ್ಪೃಹನಾಗಿ ತ್ಯಜಿಸುವೆನು ॥ ೩೯ ॥

ಲಲಿತ ಶಶಿಮಂಡಲದ ಮೇಲ್ಬ-। ತಲದ ಛಾಯೆಯು ಮುಸುಕೆ ಲೋಕವು ।
ಬಲದೆ ಚಂದ್ರನ ಮಲವದೆಂದಪವಾದ ಹೊರಿಸುವದು ॥
ಇಳೆಯ ಸುತೆಯಾಚಾರವತಿ ನಿ-। ರ್ಮಲತೆಯಿಂ ಕೂಡಿರ್ದರೂಜನ-।
ವಲಯ ನಿಂದೆಯು ಬಲುಮೆಯುಳ್ಳದ್ದೆಂದು ತಿಳಿಯುವೆನು ॥ ೪೦ ॥

ಉರಗವದು ರುಧಿರಾಶೆಗಲ್ಲದೆ । ಚರಣದಿಂ ತನ್ನನ್ನು ಮೆಟ್ಟಿದ ।
ಪುರುಷರನು ಕಚ್ಚುವದು ಹಗೆತನದಿಂದಲಾತೆರದೆ॥
ದುರುಳ ಮರ್ಬಿಗರನ್ನು ಕೊಲ್ಲುವ । ಪರಮ ದುರ್ಘಟವಾದ ಕಾರ್ಯವ ।
ಬರಿದೆ ಮಾಡದೆ ವೈರನಿರ್ಯಾತನೆಗೆ ಮಾಡಿಹೆನು ॥ ೪೧ ॥

ಧರಣಿಸುತೆಯಲ್ಲಾದ ಕಾರಣ । ಕರುಣೆಯನ್ನೆಳ್ಳಷ್ಟು ತೋರದೆ ।
ನರರ ನಿಂದಾಶಲ್ಯದಿಂದೆನ್ನುಳಿಸ ಬೇಕೆಂದು ॥
ಪರಿಸುತಿರ್ದರೆ ನನ್ನ ಮನಸಿನ । ಪರಮ ದೃಢವಾಗಿರುವ ನಿಶ್ಚಯ-।
ಕಿರದೆ ಸಮ್ಮತಿಸುವಿರಿ ನೀವೆಂದಾನು ಕೋರುವೆನು ॥ ೪೨ ॥

ರಾಮೆಯಲ್ಲಿಯ ಪ್ರೇಮವನು ಶುಭ-। ಕಾಮನಾದಾ ರಾಮಚಂದ್ರನು ।
ನೇಮದಿಂ ತೆಗೆದೊಗೆದು ನಿಷ್ಠುರತೆಯನು ವಹಿಸಿರಲು ॥
ಪಾಮರರ ತೆರದಲ್ಲಿ ಸುಮ್ಮನೆ । ಭೂಮಿಪನ ತಮ್ಮಂದಿರೆಲ್ಲರು ।
ಭೂಮಿಯನು ನೋಡುತ್ತ ಕುಳಿತರು ಮೂಕಭಾವದಲಿ ॥ ೪೩ ॥

ಭರತ ಮೊದಲಾದನುಜರಲಿ ಭವ-।ಹರನ ನೆರಳಿನ ತೆರದೆ ಚರಿಸುವ ।
ಪರಮ ಭಕ್ತ್ಯುದ್ರೇಕದಿಂ ಕೂಡಿರುವ ಲಕುಮಣನ ॥
ಕರೆದು ಕಣ್ಗಳ ಸನ್ನೆಯಿಂಗಡ-। ಮರೆಗೆ ಜೇರ್ಗಡೆಯಲ್ಲಿ ಯುವನಿಗೆ ।
ಹೇಯು ಮುಂದಿನ ಕ್ರಮವನೀಪರಿಯಲ್ಲಿ ಪೇಳಿದನು ॥ ೪೪ ॥

ಪುಣ್ಯತಮ ಸುರನದಿಯ ದರುಶನ-।ವನ್ನು ನಿನ್ನಿತ್ತಿಗೆಯು ಬಯಸಿಹ-।
ಳಿನ್ನು ನೀನವಳಿಚ್ಛೆಯನು ಪೂರಿಸುವ ನೆವದಿಂದ ॥
ನಿನ್ನ ಚಿನ್ನದ ರಥದೆ ಯುವಳನು । ಗನ್ನ ಮಹಿಮನೆ ಕೊಂಡು ನಿಶೆಯಲಿ ।
ರನ್ನೆಯನು ಸಂತ್ಯಜಿಸು ವಾಲ್ಮಿಕಿ-ಕುಟಿಯ ನಿಕಟದಲಿ ॥ ೪೫ ॥

ಗುರುವಿನಾಣತಿಯಂತೆ ತಾಯಿಯ । ಶಿರವ ಭಾರ್ಗವನರಿಗಳನು ಸಂ-।
ಹರಿಪ ತೆರದಲಿ ತರಿದು ಚೆಲ್ಲಿದನೆಂಬ ವಾರ್ತೆಯನು ॥
ಅರಿತ ಲಕ್ಷ್ಮಣನಣ್ಣನಪ್ಪಣೆ । ಶಿರದ ಮೇಲ್ವಹಿಸಿದನು ಜಾಣರು ।
ಹಿರಿಯ ರಾಜ್ಞಾ-ಪಾಲನೆಗೆ ಕಾರಣವ ಕೇಳುವರೇ? ॥ ೪೬ ॥

ಜನನಿ, ಜಾಹ್ನವಿ-ತೀರದಲ್ಲಿಯ । ಮುನಿವರರ ಪುಣ್ಯಾಶ್ರಮಂಗಳ ।
ನಿನಗೆತೋರಿಸಲೆನಗೆ ನೃಪನಾಜ್ಞೆಯನು ಕೊಟ್ಟಿಹನು ॥
ಕನಕ-ಮಯ ರಥದೊಳಗೆ ಕೂಡ್ರೇ-।ಳೆನುತ ನಂಬಿಗೆಗೊಳಿಸಿಯಾಗಲೆ ।
ಜನಪನನುಜನು ವನಕೆ ಸತಿಯನು ಕೊಂಡು ಸಾಗಿದನು ॥ ೪೭ ॥

ಭರದೆ ರಥದೊಳು ಕುಳಿತು ಚರಿಸುವ । ಸರಸಿ ಜಾಕ್ಷಿಯು ದಾರಿಯಲ್ಲಿಯ ।
ಪರಮ ಸುಂದರ-ವಾದ ವಿಪಿನದ ಶೋಭೆಯನು ನೋಡಿ ॥
ಸರಸ ಕಲ್ಪದ್ರುಮದ ಭಾವವ । ಮರೆತು ಬಿಟ್ಟಿಹನೆಂದು ತಿಳಿಯದೆ ।
ಹರುಷವನು ತಾಳ್ದಿಹಳು ಹರಿಕಾರುಣ್ಯವನು ಸ್ಮರಿಸಿ ॥ ೪೮ ॥

ಹದಿಬದೆಗೆ ಲಕ್ಷ್ಮಣನು ರಾಘವ-। ನದಯತನದಿಂ ಮುಂದೆ ಯಾಕೆಗೆ ।
ವದಿಸದೇ ಬಿಟ್ಟಿರುವ ದುರ್ಘರ ದುಃಖಮಯದಿರವು ॥
ಎದೆಯು ಭುಗಿ ಭುಗಿಲೆಂದು ದೇಹವು । ಗವಗವನೆ ನಡುಗಿದ್ದರಿಂ ಮೇಣ್ ।
ಸುದತಿ-ದಕ್ಷಿಣ-ನೇತ್ರ-ಕಂಪನದಿಂದ ತಿಳಿದಿಹುದು ॥ ೪೯ ॥

ಧರಣಿಸುತೆ ದುಃಶಕುನದಿಂ ಬಲು । ಮರುಗಿ ಮನದೊಳು ಬಳಲಿದಂತಃ-।
ಕರಣದಿಂ ಕಣ್ಮುಚ್ಚಿ ಗಾಬರಿಯಾಗಿ ನಿಜಪತಿಗೆ॥
ಭರತನಿಗೆ ಮೇಣವನ ತಮ್ಮಂ-।ದಿರಿಗೆಯತಿಶಯ ಕ್ಷೇಮವಿರಲೆಂ-।
ದಿರದೆ ಹರಸತಿ-ಪಾರ್ವತಿಯ ಪ್ರಾರ್ಥನೆಯ ಮಾಡಿದಳು ॥ ೫೦ ॥

ಪರಮ ಪಾವನೆಯಾದ ಜನಕನ । ತರುಳೆಯನ್ನಪರಾಧವಿಲ್ಲದೆ ।
ಹರಿಯ ಪ್ರೇರಣೆಯಿಂದ ವನದೆಡೆಯಲ್ಲಿ ಲಕ್ಷ್ಮಣನು ॥
ಕರುಣೆಯಿಲ್ಲದೆ ತ್ಯಜಿಪನೆಂದುರೆ । ಯರಿತು ಸುರನದಿಯಾಗ ತೆರೆಗಳ ।
ಕರಗಳಿಂದವನನ್ನು ವಾರಿಸುವಂತೆ ತೋರಿದಳು ॥ ೫೧ ॥

ಸುರನದೀತೀರದಲಿ ತೇರಿನ । ಹರಿಗಳನು ಸಂರೋಧಿಸಿದ ಮೇಲ-।
ತ್ವರದೆ ಹರಿಜಾಯೆಯನು ಶ್ರೀನರಹರಿಯ ಬಾಂಧವನು ॥
ಇರಿಸಿ ಸುಂದರ ನೌಕೆಯಲಿ ಯು-।ತ್ತರಿಸಿದನು ಗಂಗೌಘವನ್ನರೆ ।
ಪರಮ ಪುರುಷನ ಸಂಧೆಯನು ನೆರವೇರಿಸಿದ ತೆರದೆ ॥ ೫೨ ॥

ಹೊಳೆಯ ದಾಂಟಿದ ಮೇಲೆ ಲಕ್ಷ್ಮಣ ನಿಳೆಯಸುತೆಯನು ನೌಕೆಯಿಂ ಕೆಳ।
ಗಿಳಿಸಿ ದುಃಖಾವೇಗವನು ಬಲದಿಂದ ಸಾವರಿಸಿ ॥
ತಳೆದು ಧೈರ್ಯವ ನೆಲದ ಮೇಲ್ಕ-।ಲ್ಮಳೆಯು ಸುರಿದೋಪಾದಿಯಲಿ ತಾಂ।
ತಿಳುಹಿದನು ತನ್ನಣ್ಣನಪ್ಪಣೆಯನ್ನು ಜಾನಕಿಗೆ. ॥ ೫೩ ॥

ಭರದೆ ಬೀಸುವ ಮರುತದಿಂದುರೆ । ಪರಮ ಕೋಮಲ ವಳ್ಳಿಗಳು ಮೇ-।
ಣರಳುಗಳು ತತ್ಕಾರಣದ ಮೇಲುರುಳುವಂದದಲಿ ॥
ಹರಿಯ ತಮ್ಮನ ಮಾತುಗಳನವ-।ಧರಿಸಿ ಥರ್ರನೆ ನಡುಗಿ ತನ್ನಾ-।
ಭರಣಗಳಸಹ ಸೀತೆ ಬಿದ್ದಳು ಮಾತೆಯುಂಕದಲಿ. ॥ ೫೪ ॥

ಮನುವಿನನ್ವಯದೊಳಗೆ ಜನಿಸಿದ । ಘನಗುಣಾನ್ವಿತನಾದ ರಾಘವ-।
ನನಯದಿಂದಪರಾಧವಿಲ್ಲದೆ ಗಹನ ವಿಪಿನದಲಿ ॥
ವನಿತೆಯನು ಬಿಟ್ಟಿರುವನೆಂತೀ । ಮನದ ಸಂಶಯದಿಂದಲವನಿಯು ।
ತನುಜೆಗಾಗಲೆ ಕೊಡದೆ ಬಿಟ್ಟಳು ಸ್ಥಳವನೊಡಲಿನಲಿ ॥ ೫೫ ॥

ಧರೆಯ ಮೇಲ್ ಪ್ರಿಯಮರಿತು ಬಿದ್ದಾ-। ಧರೆಯು ತರುಳೆಯು ದುಃಖವದುಗೋ-
ಚರಿಸದೇ ಕ್ಷಣವರೆಗೆ ಯಾಕೆಯು ಬಿಟ್ಟು ಕೊಂಡಿರಲು ॥
ಹರಿಯು ತಮ್ಮನ ಯತ್ನ ಭರದಿಂ। ಮರುಳಿ ಬೆಚ್ಚರ ಪಡೆಯಲಾಕೆಯು।
ನಿರತಿಶಯ ಸಂತಾಪಸಾಗರದೊಳಗೆ ಮುಳುಗಿದಳು ॥ ೫೬ ॥

ಪಾಪ-ಕರ್ಮದ ಲೇಪವಿಲ್ಲದೆ। ಸಾಪರಾಧಿಯು ತೆರದೆ ತನ್ನನು।
ಭೂಪತಿಯು ಲೋಕಾಪವಾದದ ಭಯದ ವಿಪಿನದಲಿ ॥
ಆಪದಬ್ಧಿಯೊಳೊಗೆದರೂ ಸಂ-। ತಾಪದಿಂ ಪತಿಯನ್ನು ಹಳಿಯದೆ।
ಪಾಪ! ಹೇರಳವಾಗಿ ತನ್ನನು ತಾನೆ ಜರೆದಿಹಳು ॥ ೫೭ ॥

ಜನಪನಾಜ್ಞಾವರ್ತಿಯಾದೀ। ತನುಜಸಮನಾದೆನ್ನ ಕೃತ್ಯಕೆ-।
ಜನನಿಯೇ ನೀಂ ಮುನಿಸು ತಾಳದೆ ಕ್ಷಮಿಸುವದು ದಯದೆ ॥
ಎನುತ ಲಕ್ಷ್ಮಣನಾಗ ಸೀತೆಗೆ। ಮುನಿಪವರ ವಾಲ್ಮೀಕಿಯಾಶ್ರಮ-।
ವನು ಸುಧಾಮಯ ವಾಣಿಯಿಂ ತೋರೆರಗಿದನು ಪದಕೆ ॥ ೫೮ ॥

ಬಾಗಿದಂತಹ ಪತಿಯ ತಮ್ಮನ। ರಾಗದಿಂದುರೆ ಮೇಲಕೆಬ್ಬಿಸಿ।
ನಾಗವೇಣಿಯು ಹರಸಿದಳು ಚಿರಜೀವಿಯಾಗೆಂದು ॥
ಆಗಲೇ ಮಗುಳುಸುರಿದಳು ಸತಿ। ಹೇಗೆ ಇಂದ್ರಗುಪೇಂದ್ರನಿರುವನೊ।
ಹಾಗೆ ರಾಘವನಾಜ್ಞೆಯಲ್ಲಿರುತಿರುವೆ ನೀನೆಂದು ॥ ೫೯ ॥

ಅರುಹು ನನ್ನತ್ತೆಂದಿರಿಗೆ ನಾ-। ನೆರಗಿದೆನು ಕ್ರಮದಿಂದ ಪಾವನ-।
ತರಪದಾಂಬುಜಗಳಿಗೆ ಸಾದರದಿಂದ ಮೇಣವರ ॥
ಪರಮ ಕೃಪೆಯಿಂದೆನ್ನುದರದ-। ಲಿರುವ ಸುತನಿಗೆ ನಿರುತದಲಿ ಗಡ-।
ಹರಸಿ ಕಲ್ಯಾಣವನು ಚಿಂತಿಸರೆಂದು ಲಕ್ಷ್ಮಣನೇ ॥ ೬೦ ॥

ಮುನ್ನ ಪಾವಕನಲ್ಲಿ ತನ್ನಯ। ಕಣ್ಗಳಿದಿರಿಗೆ ಶುದ್ಧಿ ಹೊಂದಿ-।
ರ್ದೆನ್ನನೀಪರಿ ಲೋಕವಾದಕ್ಕಾಗಿ ತ್ಯಜಿಸುವದು ॥
ತನ್ನ ಕುಲಶೀಲಕ್ಕೆ ಶ್ರುತಿ ಸಂ-। ಪನ್ನತೆಗೆ ಸರಿಯಾದುದೇನೆಂ-।
ದಿನ್ನು ಮದ್ವಚದಿಂದ ಲಕ್ಷ್ಮಣ ಹೇಳು ಮತ್ಪತಿಗೆ ॥ ೬೧ ॥

ಜನರ ಕಲ್ಯಾಣಾರ್ಥವಾಗಿಯೆ । ಜನಿಸಿದಂತಹ ಶ್ರೀನಿವಾಸನು ।
ಮಾನಸಿನಿಂದನ್ಯಾಯ ಮಾಡಿಹನೆಂಬ ಕಲ್ಪನೆಯು ||
ನನಗೆ ಸಲ್ಲದು; ನನ್ನ ಮುಂಚಿನ । ಜನುಮದಲ್ಲಿಯ ಕರ್ಮ ಫಲವಿದು ।
ಘನದ ವಿದ್ಯುತ್ಪಾತದಂತೆಯೆ ಬಂದು ಘಟಿಸಿಹುದು ॥೬೨॥

ನಡೆದು ಬಂದಹ ರಾಜ್ಯಲಕ್ಷ್ಮಿಯು । ಕಡೆಗೆ ನೋಡದೆ ನನ್ನ ಸಂಗಡ ।
ಪೊಡವಿಯೊಡೆಯನು ಪರಮ ಪ್ರೇಮದೆ ವನಕೆ ಬಂದುದಕೆ ॥
ಮುಡದಿ ಮಾತ್ಸರ್ಯವನು ಮನದಲಿ ಪಿಡಿದು ರಾಜಾಸ್ಪದವು ದೊರೆಯಲು।
ಬಿಡದೆ ನನ್ನನ್ನಡವಿಗಟ್ಟಿಹಳೆಂದು ತೋರುವದು ॥ ೬೩ ॥

ಖಳನಿಶಾಚರರಿಂದ ದ್ರೋಹವ । ತಳೆದು ಕಳವಳಗೊಂಡ ಮುನಿಗಳ ।
ಲಲನೆಯರಿಗಾಶ್ರಯುವ ನಿನ್ನಾಧಾರದಿಂದಿತ್ತು ॥
ಇಳೆಯ ಪಾಲನ ಶಕ್ತಿಯುವರಿಗೆ । ನಳಿನನಾಭನೆ ತಿರಿದು ಮುಖವನು ।
ಬಳಲಿ ಮಾಶ್ರಯವನ್ನು ಬೇಡುವದೆಂತೊ ನೀನಿರಲು ॥ ೬೪ ||

ನಿನ್ನನಗಲಿದ ಹೇಯವಾದೀ । ಬನ್ನಬಡುತಿರುವಂಥ ದೇಹದೆ ।
ಚೆನ್ನಿಗನೆ ನಾಯ್ನರಿಗಳಿಗೆ ವೃಥಾಪ್ಪನ್ನವನ್ನಿತ್ತು ||
ಧನ್ಯಳಾಗುತ್ತಿರ್ದೆನಾದರೆ । ನಿನ್ನವೀರ್ಯವದೆನ್ನ ಜಠರದೆ ।
ಸನ್ನಿಹಿತವಾಗಿರುವದದು ನನ್ನನ್ನು ತಡೆದಿಹುದು ॥ ೬೫ ॥

ತರುಳಸುದಿಸಿದ ಮೇಲೆ ರಾಮನೆ । ನಿರುತದಲಿ ಭಾಸ್ಕರನ ಬಿಂಬದೊ-।
ಳಿರಿಸಿ ದೃಷ್ಟಿಯನಾನು ದುಷ್ಕರ ತಪವನಾಚರಿಸಿ ॥
ಪರಮ ಪುರುಷನೆ ನೀನೆ ಜನ್ಮಾಂ-।ತರದಲೆನ್ನನು ವರಿಸಿ ಸಂತತ ।
ವಿರಹವಿಲ್ಲದೆ ಪೊರೆಯುವಂತೆಯೆ ವರವ ಪಡೆಯುವೆನು ॥ ೬೬ ॥

ಜಾತಿಯಾಶ್ರಮಗಳನು ಸಂತತ । ನೀತಿಯಿಂ ಪಾಲಿಪುದೆ ರಾಜರ ।
ಖ್ಯಾತ ಧರ್ಮವದೆಂದು ಮನುಮುನಿಪತಿಯು ಪೇಳ್ದಿಹನು ||
ಪ್ರೀತಿ ಬಂಧನವನ್ನು ತ್ಯಜಿಸಿದ । ನಾಥನಿಗೆ ಯದರಿಂದ ನನ್ನನು ।
ಭೂತ ಮಾತ್ರಗಳಂತೆ ಪೊರೆಯುವದೆಂತು ತಪ್ಪುವದು || ೬೭ ॥

ಅರಸಿಯೀಸರಿಯಿಂದ ನುಡಿಯಲು । ಪರಿಯ ಬಾಂಧವನಾಗಲಾತೆಗೆ ।
ಯಮುಹುವೆನು ನೀನೆಂದದೆಲ್ಲವನೆಂದು ಬೇಕೊಂಡು ॥
ಮನೆಗೆ ಪೋಗಲು ದುಃಖಭರದಿಂ । ಧರೆಯುಸುತೆ ಬಾಯ್ದೆರೆದು ಕೂರಿಯು ।
ತೆರದೆ ವಿಹ್ವಳಳಾಗಿ ಶೋಕಕ್ರೋಶ ಮಾಡಿದಳು ॥ ೬೮ ॥

ಜನಕನಂದಿನಿ ಶೋಕದೊಳು ಬಳಲುವುದಾಗಿರಲು ತರುಕುಸುಮತತಿಗಳು ।
ತನಗೆ ತಾನೇ ಕ್ಷಿತಿಯ ಮೇಲ್ಬಿದ್ದಿಹವು, ಬರ್ಹಿಗಳು ॥
ಕುಣಿಯುವುದ ತ್ಯಜಿಸಿದವು, ಮೃಗಗಳು । ತೃಣವ ತಿನ್ನುವುದನ್ನು ಬಿಟ್ಟವು ।
ವನದೆ ಜನಪದದಂತೆ ದುಃಖವು ಹರಡಿ ಕೊಂಡಿಹುದು ॥ ೬೯ ॥

ಮಿದುನನಾಟದೊಳಿರ್ದ ಹಕ್ಕಿಯು । ವಧವ ವ್ಯಾಧನು ಮಾಡಲದರಿಂ ।
ಮೊದಲೆ ಕಾವ್ಯ ಸ್ಫೂರ್ತಿಹೊಂದಿದಾರ್ಯ ಕವಿವರನು ॥
ಸದನದಿಂ ಕುಶಸಮಿಧೆಗಳನುರೆ । ಯೊದವಿಸುವದಕ್ಕಾಗಿ ಹೊರಟಿರೆ ।
ಸುದತಿಯಾಕ್ರೋಶವನು ಕೇಳುತ್ತೈದಿದನು ಗಹನೆ ॥ ೭೦ ॥

ಮುನಿಯು ಬಂದದ್ದನ್ನು ಕಂಡಾವನಿತೆ ಕಣ್ಣೀರ್ಹನಿಗಳೊರೆಸುತೆ ।
ವಿನಯದಿಂದವನನ್ನು ವಂದಿಸಲಾಗ ಕನಿಕರದೆ ।
ಜನಕನಂದಿನಿ-ಗರ್ಭಲಕ್ಷಣ-ವನು ಮುನೀಂದ್ರನು ತಿಳಿದು ಮನದಲಿ ।
ತನಯೆ ಪುತ್ರಪ್ರಾಪ್ತಿಯನು ಪಡೆಯೆಂದು ಪೇಳ್ನುಡಿದ ॥ ೭೧ ॥

ಜನರ ಮಿಥ್ಯಾವಾದಕಂಜಿದ । ಜನಪ ನಿನ್ನನು ವನಕೆಯಟ್ಟಿಹ-।
ನಿನಿತು ನಾನರಿತಿರುವೆ ಯಂತರ ದೃಷ್ಟಿಯಿಂ ತನಯೆ ॥
ಜನಕನಂತಿರುವಂಥ ನನ್ನಯ । ಮನೆಗೆ ವ್ಯಥೆಯನು ಬಿಟ್ಟು ತ್ವರೆಯಲಿ ।
ವನಜ ಲೋಚನೆ ಬಂದು ಸುಖಿಸುವಿಯೆಂದು ಕಾಂಕ್ಷಿಪೆನು ॥ ೭೨ ॥

ದುರುಳ ಲಂಕೇಶ್ವರನ ಶಲ್ಯವ । ಹರಿಸಿ ಲೋಕತ್ರಯಕೆ ಸೌಖ್ಯವ-।
ನಿರಿಸಿದೊಡೆ ಮೋಕ್ಷತ್ಯಸಂಗರನಾಗಿ ಬೆಳಗಿದೊಡೆ ॥
ಹರಿಯು ಮಾಡಿದ್ದಾಡದಿದೊಡೆ । ನಿಜಪರಾಧದೆ ನಿನ್ನನಾತನು ।
ತೊರೆದುದಕೆ ಯನಗವನ ನೋಲ್ಪಲು ಸಿಟ್ಟು ಬಂದಿಹುದು ॥ ೭೩ ॥

ನಿನ್ನ ಜನಕನು ಬ್ರಹ್ಮವೇತ್ತನು। ನಿನ್ನ ಶ್ವಶುರನು ನನ್ನ ಮಿತ್ರನು ।
ಸನ್ನುತಾಂಗಿಯೆ ನೀನು ಪತಿವ್ರತೆ ಪೆಣ್ಗಳಗ್ರಣಿಯು ॥
ಎನ್ನ ಕರುಣೆಗೆ ನೀನು ಗುಣ ಸಂ-।ಪನ್ನೆ ಸಲೆಸರಿಯಾಗದಿದ್ದರೆ ।
ಯನ್ನರಿನ್ನಾರಾಗುವರು ನಾನರಿಯೆ ಜಗದೊಳಗೆ ॥ ೭೪ ॥

ಮರೆತು ನಿಜ ಹಿಂಸ್ರ ಸ್ವಭಾವವ। ಶರಭ ಹರಿ ಮುಂತಾದ ಪಶುಗಳು ।
ಚರಿಸುತಿರುವಂಥೀ ತಪೋವನದಲ್ಲಿ ಧರಣಿಸುತೆ ॥
ಇರುವ ನನ್ನಾಶ್ರಮಕೆ ನಡೆ ನಡೆ। ಸರಸ ಪುತ್ರೋತ್ಸವದ ಕೃತ್ಯವು ।
ಜರಗುವವು ಮೇಣಿತರ ಸಂಸ್ಕಾರಗಳು ವಿಧಿಯಂತೆ ॥ ೭೫ ॥

ವಿಮಲತಾಪಸ-ಜನದ ಸಿದ್ಧಾ-।ಶ್ರಮಗಳಿಂ ಶೋಭೆಯನು ತಾಳ್ದಿಹ ।
ತಮ-ವಿನಾಶಿನಿಯಾದ ತಮಸಾನದಿಯ ವಾರಿಯಲಿ ॥
ಭ್ರಮರ ಕುಂತಳೆ ಸ್ನಾನ ಜರಗಿಸಿ। ಕಮಲೆಯಾತ್ಮನ ಪೂಜೆ ಮಾಡಲು।
ಸಮನಿಸುದು ತವ ಮನವು ಸಂತಸವನ್ನು ನಿಜವಾಗಿ ॥ ೭೬ ॥

ವನದ ಭೂಭಾಗದಲಿ ಕಾಲುವೆ। ತನಗೆ ತಾನೇ ಬೆಳೆದು ನಿಂತಿಹ ।
ತೃಣದ ಬೀಜಂಗಳನು ಸುಂದರ ಪುಷ್ಪಫಲಗಳನು ॥
ವನಿತೆ ಮುನಿಗಳ ಕನ್ಯೆಯರು ಗಡ। ನಿನಗೆಯರ್ಪಿಸಿ ಮನವ ತೆಯಲೆಸೆವರ್
ಮನವ ರಂಜನವನ್ನು ಗೈಯ್ವರು ಕಥೆಗಳನು ಪೇಳಿ ॥ ೭೭ ॥

ಕಾಲಕಾಲಕ್ಕಾಶ್ರಮದ ತರು-।ಮೂಲದಲಿ ಪೊಂಗೊಡದಿ ಪಯವನು ।
ಲೀಲೆಯಿಂದುಣ್ಣಿಸುತೆ ಮರಗಳ ಪಾಲನವ ಮಾಡೆ ॥
ಬಾಲನುದಿಸುವ ಪೂರ್ವದಲಿ ಮೊಲೆ-।ಹಾಲು ಶಿಶುವಿಗೆ ಯಿತ್ತ ಪ್ರೇಮವ ।
ಬಾಲೆ ನಿಶ್ಚಯವಾಗಿ ಪೊಂದುವೆಯೆಂದು ತಿಳಿಯುವೆನು ॥ ೭೮ ॥

ಹರಿಣಗಳು ಸೂರ್ಯಾಸ್ತ ಸಮಯಕೆ। ತಿರುಗಿ ವನದಿಂ ಬಂದು ಕೂಡ್ರುವ।
ಸರಸ ವೇದಿಕೆಯುಳ್ಳ ನಿರ್ಭಯವಾದ ಸ್ವಾಶ್ರಮಕೆ ॥
ಹರುಷದಿಂ ಬರವೊಪ್ಪಿದಂತರ । ಧರೆಯ ಸುತೆಯನು ಕೊಂಡು ಸಂಗಡ ।
ತ್ವರದಿ ಪರಮೋದಾರ-ಮುನಿವಾಲ್ಮೀಕಿ-ಯೈದಿದನು ॥ ೭೯ ॥

ಇಂದುವಿನ ಕಲೆಗಳನು ಪಿತೃಗಳು । ತಿಂದು ಮುಂದುಳಿದಂಶವನು ಪೂ-।
ರ್ಣೇಂದು ಸಂಗಮ ವೋಪಧಂಗಳಿಗರ್ಪಿಸುವ ತೆರದಿ ॥
ಅಂದು ತಾಪಸಿಗಳಿಗೆ ಶೋಕದಿ । ನೊಂದ ಸೀತಾದೇವಿಯನು ಗುಣ-।
ಸಿಂಧು ಮುನಿವಾಲ್ಮೀಕಿಯೊಪ್ಪಿಸಿ ಕೊಟ್ಟನಾಕ್ಷಣಕೆ ॥ ೮೦ ॥

ಪ್ರೀತಿಯಿಂದಾಗವರು ನಾನಾ-। ರೀತಿಯಿಂದುಪಚರಿಸಿ ವಸುಧಾ-।
ಜಾತೆಯನು ನಿಶಿಯಲ್ಲಿ ವಿಶ್ರಾಂತಿಯನು ಕೊಳಿಸಲ್ಕೆ ॥
ಪೂತ ಕೃಷ್ಣಾಜಿನವ ಪಾಸಿದ । ಜ್ಯೋತಿಯನು ಹಚ್ಚಿರ್ದ ಕೋಣೆಗೆ ।
ಯಾತಪೋನಿಧಿಯಾಜ್ಞೆಯಿಂ ಕರೆದೊಯ್ದು ಬಿಟ್ಟಿಹರು ॥ ೮೧ ॥

ಅತಿಮನೋಹರವಾದ ನದಿಯಲಿ । ಸತಿಯು ಸ್ನಾನವ ಮಾಡಿ ವಿಧಿಯಿಂ-।
ದತಿಥಿಗಳ ಪೂಜೆಯನು ಗೈಯ್ಯುತ ವಲ್ಕಲವನುಟ್ಟು ॥
ಪತಿಯ ಸಂತತಿಯನ್ನು ಕಾಯಲು । ಮಿತದಿ ಫಲಗಳನುಂಡು ಕೋಸಲ-
ಪತಿಯ ಪೆಂಡತಿ ದೇಹಧಾರಣವನ್ನು ಮಾಡಿಹಳು ॥ ೮೨ ॥

ಮನಸಿನಲಿಯನುತಾಪ ಹೊಂದಿದ । ವನಜನಾಭನ ಮುಂದೆ ರಾವಣ ।
ತನುಜನನು ಗೆಲ್ದಂಥ ಲಕ್ಷ್ಮಣನಗ್ರಜನ ಮುಂದೆ ॥
ಅನಘೆಯನ್ನವನಾಜ್ಞೆಯಂತೆಯೆ । ವನದಿ ಬಿಟ್ಟಿದ್ದನ್ನು ಮೇಣಾ-।
ವನಿತೆ ಸಂದೇವನವ ಮಾಡಿದ್ದನ್ನು ಪೇಳಿದನು ॥ ೮೩ ॥

ಏಕಪತ್ನೀವ್ರತನು ಪುಣ್ಯ-। ಶ್ಲೋಕನಾದಾ ಜನಕರಾಯನ ।
ಸಾಕಮಗಳನು ತನ್ನ ಮನದಿಂದಿರದೆ ನಿಜವಾಗಿ ॥
ಲೋಕವಾದಕ್ಕಾಗಿ ತ್ಯಜಿಸಿರು-। ವಾ ಕೃಶೋದರಿ ವಾರ್ತೆಯಿಂ ಘನ ।
ಶೋಕದಲಿ ಮುಳುಗಿದನು ಕಣ್ಣೀರ್ಮಳೆಯ ಕರೆದಿಹನು ॥ ೮೪ ॥

ಜಾಣನಾದಾ ರಾವಣಾರಿಯು । ತಾನೆ ತನ್ನಯ ದುಃಖವನು ಸ್ವ-।
ಜ್ಞಾನ-ಬಲದಿಂ ಸಹಿಸಿ ನಣಾಶ್ರವಗಳನು ಪೊರೆದು ॥
ಸ್ವಾನುಜರ ಜೊತೆಯಲ್ಲಿ ನಿಶ್ಚಲ । ಮಾನವಪತಿ ಸಂಪನ್ನ ರಾಜ್ಯದ ।
ನೂನವಿಲ್ಲದ ಭೋಗಗಳನುಪಭೋಗಿಸುತ್ತಿಹನು ॥ ೮೫ ॥

ಬೇರೆ ಹೆಂಡತಿಯನ್ನು ವರಿಸದ । ಸಾರಸಾಕ್ಷನು ಲೋಕವಾದಕೆ ।
ಭೀರು ತನದಿಂ ದೋಷವಿಲ್ಲದ ಚಾರುಗಾತ್ರಿಯನು ॥
ದೂರಮಾಡಿದರಿಂದ ಲಕ್ಷ್ಮಿಯು । ಮಾರನಯ್ಯನ ಪ್ರೇಮದಲಿ ಯಾನಿ-।
ವಾರ ಸುಖದನುಭವವ ಗೈದಳು ಸವತಿಯನ್ನಳಿದು ॥ ೮೬ ॥

ಜನಪ ತನ್ನನ್ನೀದ ಮೇಲ್ಬೇ-।ರ್ವನಿತೆಯನು ಪರಿಣಯಿಸದೇ ತಾಂ ॥
ಕನಕಮಯ ಪ್ರತಿಮೆಯನು ನಿರ್ಮಿಸಿ ಯಜ್ಞ ಕಾರ್ಯವನ ॥
ಘನತೆಯಿಂ ಕೈಕೊಂಡನೆಂದುರೆ । ವನದಿ ವಾರ್ತೆಯ ಕೇಳಿ ಜಾನಕಿ ।
ಮನಸಿನಲಿ ಹಿರಿದಾದ ಸಂತಸವನ್ನು ತಾಳಿದಳು ॥ ೮೭ ॥

॥ ರಘುವಂಶ. ॥

೧೫ ನೆಯಸರ್ಗ.

ಧರೆಯ ಸುತೆಯನು ತ್ಯಾಗ ಮಾಡಿದ । ತರಣಿ ಕುಲದಲಿ ಜನಿಸಿದಂತಹ !
ಧರೆಯ ಪಾಲನು ಬೇರೆ ಸ್ತ್ರೀರತ್ನವನು ವರಿಸದಲೆ ॥
ಗಿರಿ-ಪಯೋಧರೆಯಾಗಿ ಮೆರೆಯುವ । ಸರಸರತ್ನಾಕರದ ಮೇಖಲೆ ।
ಧರಿಸಿದಂತಹ ಧರಣಿಯಲಿ ಯನುರಾಗ ತಾಳ್ದಿಹನು ॥ ೧ ॥

ಮರುಳ ಮಾರ್ಗಗನಾದ ಲವಣನು । ತರಣಿ-ತನಯೆಯ ತೀರದಲ್ಲಿರು-।
ತಿರುವ ಮುನಿಗಳ ಯಜ್ಞ-ಕಾರ್ಯಕೆ ವಿಘ್ನತರಲವರು ॥
ದರವ ದೂರೀಕರಣ ಮಾಡುವ । ಶರಣ ಜನರನು ಪೊರೆವ ಸೀತಾ-।
ವರನ ಬಳಿಯಲಿ ಬಂದು ವಿನಯದಿ ಪಾದಕೆರಗಿದರು ॥ ೨ ॥

ಮುನಿದು ಮುನಿಗಳು ತಮ್ಮ ತಾಪದಿ । ಜನಿಪ ವಹ್ನಿಗೆ ಮತ್ತೆ ರಾಕ್ಷಸ-।
ತನು ವಿನಾಹುತಿಯನ್ನು ಮಾಡದೆ ಹೊರಟು ಬಂದಿಹರು ॥
ವನಜನಾಭನು ಶರಣ ಜನ ಪಾ-। ಲನೆಯ ಮಾಡಲ್ಕಿರಲು ಜಗದೊಳು ।
ಘನತಪೋಬಲವನ್ನು ಋಷಿಗಳು ವ್ಯರ್ಥ ಕಳೆಯುವರೆ? ॥ ೩ ॥

ನೀಲಮೇಘಶ್ಯಾಮ ಮುನಿಗಳ । ದೂರಲರಿಂ ವೃತ್ತಾಂತವನ್ನರಿ ।
ಕೇಳಿಯವರಿಗೆ ರಕ್ಕಸನ ಭಯ ತಪ್ಪಿಸುವೆನೆಂದು ॥
ಪೇಳಿಯಾಶ್ವಾಸನವನಿತ್ತನು । ಕಾಲಕಾಲಕೆ ಜಲಧಿಶಯನನು ।
ತಾಳಿಯವತಾರವನು ಧರ್ಮವ ಪಾಲಿಸುತ್ತಿಹನು ॥ ೪ ॥

ಶೂಲದಿಂ ಕೂಡಿರ್ದಲವಣನು । ಕಾಲನಿಗೆ ಸಹ ವಶಕೆ ಬಾರನು ।
ಶೂಲವಿಲ್ಲದ ಕಾಲದಲಿ ನೀನವನಿಗೆದುರಾಗಿ ॥
ವ್ಯಾಲಶಯನನೆ, ಕೊಂದು ಬಿಡಲನು- । ಕೂಲಿಸುವದೆಂದಾಗ ಮುನಿಗಳು
ಪೇಳಿ ಮರ್ಮವನವನಿಪಗೆ ಸ್ವಸ್ಥಾನಕೈದಿದರು ॥ ೫ ॥

ಬೆಳೆದ ರಿಪುವಿನ ಗೆಲ್ವ ಸಮರದೆ । ಗಳಿಸೆ ನಿಜನಾಮದ ಯಥಾರ್ಥವ- ।
ನಿಳೆಯ ಪತಿ ಶತ್ರುಘ್ನನನು ತನ್ನೆದುರಿನಲಿ ಕರೆಸಿ ॥
ತಿಳುಹಿದನು ಬಾಂಧವನೆ, ನಿನ್ನಯ । ಬಲದೆ ಲವಣಾಸುರನ ಮರ್ದಿಸಿ ।
ಯುಳಿಸು ಭೂಭಾರವನು ಮೇಣ್ಸಲಿಸಿ ತಾಪಸನನ್ನೆಂದು ॥ ೬ ॥

ನಿರುತದಲಿ ಸರಿಯಾಗಿ ಸಾಗುವ । ಸರಸ ಶಾಸ್ತ್ರದ ನಿಯಮಗಳನರಿ ।
ಮುರಿಯುವಂಥಪವಾದಗಳ ತೆರವಿಲ್ಲಿ ರಘುಕುಲದ ।
ಪುರುಷರೆಲ್ಲರು ರಿಪುಗಳನು ಸಂ- । ಹರಿಸಬಲ್ಲವರೆಂದು ತೋರಲು ।
ನರವರನು ಶತ್ರುಘ್ನನನು ಯುದ್ಧಕ್ಕೆ ಕಳುಹಿದನು ॥ ೭ ॥

ಪೊಡವಿಯೊಡೆಯನ ಪರಕೆಯನು ಗಡ । ಪಡೆದು ದಶರಥ ತನಯನಾಗಲೆ ।
ಸಡಗರದೆ ಕುಳಿತಂದು ರಥವಲ್ಲಡವಿದಾರಿಯನು ॥
ಹಿಡಿದು ಗಿಡಗಳ ಪುಷ್ಪಫಲಗಳ । ಕಡು ಮನೋಹರವಾದ ಶೋಭೆಯ ।
ಬಿಡದೆ ನೋಡುತ ನಡೆದನತಿಯುಲ್ಲಾಸದಿಂ ಕೂಡಿ ॥ ೮ ॥

ಧರಣಿಪತಿಯಪ್ಪಣೆಯ ಮೇರೆಗೆ । ನರಪನನುಜನ ಹಿಂತೆ ಸೇನಾ- ।
ಭರವು ಸಾಗಿತು ಸಂಸ್ಕೃತದ "ಇ" ಧಾತುವಿನ ಹಿಂದೆ ।
ಬರುವ "ಅಧಿ" ಯುಪಸರ್ಗದಂತದು । ಪರಮ ಶೋಭೆಯ ಕಾರ್ಯವನ್ನರೆ ।
ಜರಗಿಸಿತು ಬೇರರ್ಥ-ಸಿದ್ಧಿಯನೇನು ಮಾಡದಲೆ ॥ ೯ ॥

ಬಾಲ ಸೂರ್ಯನ ಮುಂದೆ ಪ್ರಾತಃ-।ಕಾಲದಲ್ಲರವತ್ತು ಸಾವಿರ।
ವಾಲಖಿಲ್ಯರು ಪೋಗುವಂದದೆ ನರಪನನುಜನಿಗೆ।
ಪೇಳಿ ರಾಕ್ಷಸ-ಲವಣ ನಿರುತಿರು-।ವಾಲಯದ ಮಾರ್ಗವನು ಮುನಿಶಾ-।
ರ್ದೂಲರಾತನ ರಥವ ಮುಂಭಾಗದಲಿ ಸಾಗಿದರು ॥ ೧೦ ॥

ವನಜನಯನನು ಕುಳಿತು ರಥದಲಿ। ವನದ ನಾನಾ ಹಿಂಸ್ರ ಪಶುಗಳ।
ಹನನ ಮಾಡುತ ನಡೆದು ಪಥವನು ದಿನದ ಕೊನೆಯಲ್ಲಿ॥
ಮುನಿಪ ವಾಲ್ಮೀಕ್ಯಾಶ್ರಮದ ಪಾವನದ ಸ್ಥಾನಕೆ ಬಂದು ನಿಶಿಯಲಿ।
ಪ್ರಣಯದಿಂದಿಳಿದಲ್ಲಿ ತನ್ನಯ ಶ್ರಮವ ಕಳೆದಿಹನು ॥ ೧೧ ॥

ಶೀಲಗುಣಯುತನಾದ ಭೂಮಿಪ। ಪಾಲನವರಜನನ್ನು ಮುನಿಕುಲ-।
ಮೌಳಿಯುಲಾದರದಿಂದ ತನ್ನಯ ಸಿದ್ಧಿಬಲದಿಂದ ॥
ಆಲಯದೆ ವಿಧವಿಧದ ರುಚಿಕರ। ಮೂಲಕಂದಗಳಿಂದ ಮೇಣ್ಫಲ-।
ಮಾಲೆಗಳ ಸಂಭಾರದಿಂ ಪೂಜಿಸಿದನೆಡೆಬಿಡದೆ ॥ ೧೨ ॥

ಅಕ್ಷಮ ಬಲಯುತನಾದ ರಾಜನ। ವಸುಧೆ ಬಲಕೋಶಗಳನೊಮ್ಮೆಯೆ।
ಪ್ರಸುವಿಸುವ ತೆರದಲ್ಲಿಯಾ ನಿಶೆಯಲ್ಲಿ ದಶರಥನ॥
ಸ್ನುಷೆಗೆ ರವಿಶಶಿ-ಶೋಭಿತಾಳಿವ। ಶಿಶುಗಳಿರ್ವರು ಪುಟ್ಟಿದರು ಮಾ-।
ಮುಷಿಗೆ ಮೇಣ್ಮಾತ್ರಪಸರ ಶತಿಯುರಿಗಂದವಾಗಿಹುದು ॥ ೧೩ ॥

ವನಜನಾಭನ ವನಿತೆಯುದರದೆ। ತನುಜರುದಿಸಿದರೆಂಬ ವಾರ್ತೆಯು।
ಜನಪನನುಜನು ಕೇಳಿ ಮೋದವ ತಾಳಿ ಮನಸಿನಲಿ॥
ಮುನಿಪನಪ್ಪಣೆಗೊಂಡು ವಿನಯದೆ। ಕನಕಮಯ ರಥವನ್ನು ಸಜ್ಜಿಸಿ।
ತನಗೆಯೊಪ್ಪಿಸಿದಂಥ ಕೆಲಸಕೆ ಹೊರಟು ಸಾಗಿದನು ॥ ೧೪ ॥

ದಶಮುಖನ ಸ್ವಸೆಯಾದ ಕುಂಭೀ-।ನಸಿಯ ಬಸುರಲಿ ಜನಿಸಿದಂತಹ।
ಪಿಶುನವರ ರಾಕ್ಷಸನ ಭೀಷಣವಾದ ಪಟ್ಟಣಕೆ ॥
ದಶರಥನ ಸುತನೈದುವಷ್ಟಕೆ। ಕಸುವಿನಿಂ ಕರವಂತೆ ವನದಿಂ।
ದಸುಧಸತಿ ಪಶುರಾಶಿಯನುಕೊಂಡಲ್ಲಿ ಬಂದಿಹನು ॥ ೧೫ ॥

ಕೊಳೆತ ಮೇಘದ ತೆರದಿ ನಾರುವ | ಬಲಿತ ಹೊಗೆಯಂತಿರುವ ದೇಹದ |
ಜ್ವಲನದೋಪಾದಿಯಲಿ ಕಾಣುವ ಶಿಖಿಗಳಿಂ ಮೆರೆವ ||
ಫಲವನುಣ್ಣುವ ಪ್ರಾಣಿಗಳಸಲೆ | ಗೆಳೆಯರಿಂ ಕೂಡಿರ್ದ ಲವಣನು |
ಚಲಿಪ ಚಿತೆಯಂತತಿ ವಿಲಕ್ಷಣನಾಗಿ ಕಣ್ಗೆಸೆದ || ೧೬ ||

ಅನ್ದು ಲವಣನು ಶೂಲವಿಲ್ಲದೆ | ಬನ್ದನೆಂದರಿತಂಥ ಲಕ್ಷ್ಮಣ- |
ಬನ್ಧು ರಕ್ಕಸನನ್ನು ವಧಿಸಲ್ಕೆದುರುಗೊಂಡಿಹನು ||
ಸನ್ಧಿ ಸಾಧಿಸಿ ತಮ್ಮರಿಪುಗಳ | ರನ್ಧ್ರದಲಿ ಹೊಡೆದಂಥ ವೀರಗೆ |
ಸನ್ಧಿಪುದು ಜಯವೆಂದು ಪ್ರತ್ಯಯದಿಂದ ತೋರಿಹುದು || ೧೭ ||

ಎದುರಿಸಿದ ಶತ್ರುಘ್ನನಿಗೆ ದು- | ರ್ಮದದಿ ರಾಕ್ಷಸ ನುಡಿದನೆಲೆ ಯೆ- |
ನ್ನದರ ಪೂರ್ತಿಗೆ ನಾನು ವನದಿಂ ವಧಿಸಿ ತಂದಿರುವ ||
ವಿಧ ವಿಧಾಹಾರಗಳ ಕೊರತೆಯ | ವಿಧಿಯು ಸಂಪೂರ್ತಿಯನು ಮಾಡಲು |
ಹೆದರಿ ನಿನ್ನನ್ನಟ್ಟಿಕೊಟ್ಟಿಹನೆಂದು ತಿಳಿಯುವೆನು || ೧೮ ||

ಪರಮ ವಿಕ್ರಮವುಳ್ಳ ರಾತ್ರಿಂ- | ಚರನು ಭರತಾನುಜನನೀಪರಿ- |
ಜರೆದು ತಾಂ ಪೊತ್ತಿರ್ದ ಪಶುಭಾರವನು ಧರೆಗಿಳಿಸಿ ||
ತ್ವರದಿ ಪೆರ್ಮರವನ್ನು ನೆಲದಿಂ- | ದಿರದೆ ಸಹಜವೆ ಪುಲ್ಲು ಕಡ್ಡಿಯ |
ತೆರದಿ ಕಿತ್ತೆತ್ತೊಗೆದು ನುಡಿದನು ಸಹಿಸು ಸಹಿಸೆಂದು || ೧೯ ||

ಎರಲ ವೇಗದಿ ಬರುವ ಮರವನು | ಶರಗಳಿಂ ಶತ್ರುಘ್ನನಾಗಲೆ |
ತರಿದು ನಡುವೆಯೆ ಕಡಿದು ಚೂರ್ಣೀಕರಿಸಲದರಿಂದ ||
ಬರಿದೆ ಪುಷ್ಪಪರಾಗವಾತನ | ಸರಸ ದೇಹಕೆ ತಗಲಿತಲ್ಲದೆ |
ತರುವಿನಾ ಘಾತಕ್ಕೆಯಾತನು ಸಿಲುಕಲಿಲ್ಲಕಟಾ || ೨೦ ||

ಅರರೆ! ತಾನೊಗೆದಿರುವ ತರುವದು | ಬರಿದೆ ಪೋದದ್ದನ್ನು ರಾತ್ರಿಂ- |
ಚರನು ನಿರಿಕಿಸಿ ಕೆರಳಿಯಂತಕನಂತೆ ಯುರಿದುರಿದು |
ಗಿರಿಯು ಸಮವಾಗಿರುವ ಗಡುತರ | ಕರಿಯ ಪಾಷಾಣವನು ಗರಗರ |
ತಿರುಹಿ ಯಾತನ ಮೇಲೆ ಯೊಗೆದಬ್ಬರದಿ ಯೊದರಿದನು || ೨೧ ||

ಅಸುವ ತನ್ನಯ ಮೇಲೆ ಬಿಸುಟೆ-। ದರಿಯು ಭರದಿಂ ಬರುವದನು ಶ್ರೀ-।
ಹರಿಯ ತಮ್ಮನು ನೋಡಿ ಮೂಡಿಗೆಯಿಂದ ಹೊರಿದೆಗೆದು ॥
ಹರಿಯ ಶಿರವನು ಹೊಡೆದು ಚೂರ್ಣೀ-। ಕರಿಸಿ ಪರಮಾಣುವಿನ ತೆರದಲಿ।
ಧರೆಯ ಮೇಲ್ವಿಮಿಷಾರ್ಧದಲಿ ಹರಡಿದನು ಸಹಜದಲಿ ॥ ೨೨ ॥

ಮತ್ತೆ ಲವಣಾಸುರನು ಕ್ರೋಧದೆ। ಯೆತ್ತಿ ತನ್ನಯ ಸವ್ಯ ಕರವನು।
ಮತ್ತೆ ರಾಘವನನ್ನು ಹೊಡೆಯಲ್ಕ್ಯೆತ್ತಿ ಬರುತಿರಲು ॥
ಬಿತ್ತರದ ಬಿರುಗಾಳಿಯಿಂದಲೆ। ಕಿತ್ತಿಯುರುಳಿರ್ದೇಕ ತಾಲ್ವೃ-।
ದೆತ್ತರದ ಗಿರಿಯಂತೆ ಭೀಕರವಾಗಿ ತೋರಿದನು ॥ ೨೩ ||

ಪೇಮ ಮೆಯ್ಮೆಲ್ಬರುವ ಲವಣಾ-। ಸುರನ ಹೃದ್ಭಾಗದಲಿ ವೈಷ್ಣವ-।
ಶರವ ಭರತಾನುಜನು ಹೊಡೆಯಲ್ಕವನು ಧರೆಯಲ್ಲಿ ||
ಉರುಳೆ ಥರಥರ ಭೂಮಿ ನಡುಗಿತು। ಪರಮಪಾವನರಾದ ಮುನಿಗಳು।
ಮರೆತು ಭಯವನು ಹರುಷದಿಂ ಜಯ ಘೋಷಮಾಡಿದರು ॥೨೪ ||

ಆಗಸದೆ ಸುರಯಾನದಿಂ ಸುರ-। ಪೂಗರೆಲ್ಲರು ಕುಸುಮ ವೃಷ್ಟಿಯ।
ರಾಘವನ ಮೇಲಿರದೆ ಕರೆದರು ಪರಮ ಮೋದದಲಿ ॥
ಹಾಗೆಯೇ ರಣಹದ್ದುಗಳು ಮೇಣ್। ಕಾಗೆಗಳು ರಾಕ್ಷಸನ ಮೆಯ್ಮೇಲ್।
ವೇಗದಿಂದೆರಗಿದವು ಮಾಂಸದ ಸ್ವಾದಗೊಳ್ಳಲ್ಕೆ ॥ ೨೫ ॥

ಹೊಡೆದು ಮಧುಸುತನನ್ನು ಜಯವನು। ಪಡೆದು ರಾವಣಿಯನ್ನು ರಣದಲಿ।
ಕೆಡಹಿದಂತಹ ಕಡು ಪರಾಕ್ರಮಿಯಾದ ಲಕ್ಷ್ಮಣನ ||
ಪಡೆದ ತಾಯೊಡಲಲ್ಲಿ ಜನಿಸುವ। ಪಡೆದ ತನ್ನನು ಧನ್ಯನೆಂದುರೆ।
ಗಡನೆ ರಾಘವನನುಜನಂತಃಕರಣದಲಿ ತಿಳಿದ ॥ ೨೬ ||

ಸಲ್ಲಿದವು ಕಾಮನೆಗಳೆಂದುರೆ। ಬಲ್ಲ ಮುನಿಗಳು ಬಂದು ತ್ವರೆಯಲಿ।
ಫುಲ್ಲ ಲೋಚನನೆಡೆಗೆ ಪರಮಾನಂದದಿಂ ಕೂಡಿ ||
ಸಲ್ಲಲಿತ ನುಡಿಯಿಂದ ತುತಿಸಲು। ವಲ್ಲಭನು ನೆರೆನಾಚಿ ಮನದಲಿ।
ಮೆಲ್ಲನೇ ತಲೆವಾಗಿ ವಿನಯದೆ ಪಾದಕೆರಗಿದನು, ॥ ೨೭ ॥

ಪುರುಷರಿಗೆ ಪೌರುಷವೆ ಜಗದೊಳು । ಪರಮಭೂಷಣವೆಂದು ತಿಳಿದಿಹ ।
ಸರಸ ದೇಹಾಕೃತಿಯ ಧರಿಸಿದ ವಿಷಯ-ರಾಗವನು ॥
ತೊರೆದ ರಾಮಾನುಜನು ಮಧುರಾ-। ಪುರವ ಯಮುನಾತೀರದಲಿ ಸಲೆ ।
ಹರುಷದಿಂ ಪೊಸದಾಗಿ । ನಿರ್ಮಾಣವನು ಮಾಡಿದನು ॥ ೨೮ ॥

ಹರಸುಖನಪುರದಿಂದ ವಿತ್ತಪ । ಹರಿಸಿ ಯಿನಗರಿಯನು ಲಕ್ಷ್ಮೀ-।
ವರನ ತಮ್ಮನು ತನ್ನಯಾಳಿಕೆಯಲ್ಲಿ ನೆಲೆಗೊಳಿಸಿ ॥
ಇರುವನೇನೆಂಬಂತೆ ತೋರಿತು । ನೆರರ ವೈಭವದಿಂದ ಮಧುರಾ-।
ಪುರಿಯುಶೋಭೆಯ ತಾಳಿ ಸ್ವರ್ಗದ ಶಾಖೆಯಾಗಿಹುದು ॥ ೨೯ ॥

ಕರಿಯ ಸಲಿಲದ ತರಣಿ-ಜಾತೆಯು । ಕರೆಯ ಪುಲಿನದೆ ಚರಿಸುತಿರುವಂ-।
ಥರುಣವರ್ಣದ ಹಂಸಗಳ ಬಂಗಾರದೊಡವೆಗಳ ॥
ಧರಿಸಿ ಮೆರೆಯುವ ಯಮುನೆಯನು ಶ್ರೀ-। ಹರಿಯ ತಮ್ಮನು ಸೌಧತಲದಿಂ-
ಧರೆಯ ಹೆಳಲಿನ ತೆರದೆ ಪರಮೆಯ ತಾಳ್ದುದನು ಕಂಡ. ॥ ೩೦ ॥

ಇನಿತರಲಿ ನೃಪ ದಶರಥನ ಮೇಣ್ । ಜನುಮ-ಜಂಜಡವನ್ನು ಜಯಿಸಿದ ।
ಜನಕ ಜನಪನ ಕೆಳೆಯನಾಗಿರುವಂಥ ಮುನಿವರನು ॥
ಪ್ರಣಯದಿಂ ಶ್ರೀವನಜನಾಭನ । ವನಿತೆಯುದರದೆ ಜನಿಯ ತಾಳಿದ ।
ತನುಜರೀರ್ವರ ಜಾತಕಕರ್ಮಗಳನ್ನು ಮುಗಿಸಿದನು ॥ ೩೧ ॥

ಜನುಮದಾಯಾಸವನು ಕಳೆಯಲು । ತನುಜರನು ಕುಶಲವಗಳಿಂದುರೆ ।
ಮುನಿಯು ಮಂತ್ರೋದಕದೆ ಮಾರ್ಜನವನ್ನು ಗಡ ಮಾಡಿ ॥
ಜನಕನಂದಿನಿ-ಪುತ್ರರನು ಮೇ-। ದಿನಿಯ ಮೇಲ್ತನ್ನಮದಿಂದಲೆ ।
ಜನರು ಕರೆಯುವ ತೆರದೆ ಪ್ರಖ್ಯಾತಿಯನು ಪಡೆಸಿದನು, ॥ ೩೨ ॥
ಲೀಲೆಯಲಿ ಬಾಲ್ಯವನು ಕಳೆದಾ । ಬಾಲರಿಗೆ ಕ್ರಮದಿಂದಪ್ರೇಮದೆ ।
ಕಾಲಕಾಲಕೆ ಸಾಂಗವೇದಗಳನ್ನು ವಾಲ್ಮೀಕಿಯು ॥
ಪೇಳಿ ಕಲಿಸಿದಮೇಲೆ ಸದ್ಗುಣ-। ಶೀಲನಾದಾ ರಾಮಚಂದ್ರನ ।
ಮೂಲ ಕಾವ್ಯವ ತಾನೆ ರಚಿಸಿದ್ದನ್ನು ಪಾಡಿಸಿದ, ॥ ೩೩

ತರಣಿಕುಲಶೇಖರನ ಪಾವನ । ಚರಿತವನ್ನೀತರುಳದೀರ್ವರು ।
ಪರಮ ಮಧುರಸ್ವರದೆ ತಮ್ಮಯ ಜನನಿಯೆದುರಿನಲಿ ॥
ಸರಸ ಪ್ರೇಮದೆ ಪಾಡಲಾಕೆಯು । ವಿರಹದುಃಖವ ಕೊಂಚ ಮಟ್ಟಿಗೆ ।
ಮರೆತು ಬಿಟ್ಟಳು ಮತ್ತೆ ಕಿಂಚಿಚ್ಛಾಂತಿ ಹೊಂದಿದಳು ॥ ೩೪ ॥

ಪೊಳೆವ ತ್ರೇತಾಗ್ನಿಯನು ಪೋಲುವ । ನಳಿನ ಮಿತ್ರನ ಕುಲದೆ ಜನಿಸಿ–।
ದೀಳೆಯ ಪಾಲಕನುಳಿದ ಬಂಧುತ್ರಯಗಳಿಂದವರ ॥
ಲಲನೆಯರಿಗಿರ್ವರುಳರಂತೆಯೆ । ಗಿಳಿಯುದೇದ್ಭಂತೆಸೆವ ಮಕ್ಕಳು ।
ಫಲಿಸಿದರು ಸರಿಯಾಗಿ ಸರ್ವೇಶ್ವರನ ಕೃಪೆಯಿಂದೆ ॥ ೩೫ ॥

ಮಧುರೆ ಪಟ್ಟವ ಶತ್ರುಘಾತಿಗೆ । ಯಿತರ ಸುತನಿಗೆ ವಿದಿಶವನ್ನರೆ ।
ವಿತರಿಸಿದ ಶತ್ರುಘ್ನರಾಯನು ಭ್ರಾತೃದರ್ಶನದ ॥
ಅತಿಶಯೌತ್ಸುಕ್ಯದಲಿ ತನ್ನಯ । ಚತುರ ಸತಿಯನು ಕೊಂಡು ಸಂಗಡ ।
ಗಮಿಸಿದನು ಸಾಕೇತನಗರಿಯ ಮಾರ್ಗವನು ಪಿಡಿದು, ॥ ೩೬ ॥

ಜನಕನಂದಿನಿತನಯರೀರ್ವರು । ಘನ ಮನೋಹರ ಸ್ವನದೆ ಪಾಡುವ ।
ಧ್ವನಿಯ ಕೇಳುತ್ತೇಣಗಳು ನಿಸ್ಪಂದವಾಗಿರುವ ॥
ಮುನಿಪ ವಾಲ್ಮೀಕಿಯಾಶ್ರಮವನಾ–। ತನ ತಪಸ್ಸಿಗೆ ಹಾನಿ ತಪ್ಪಿಸ–।
ಲಿಣುಕಿನೋಡದೆ ರಾಘವನು ಮುಂಬಕ್ಕೆ ಸಾಗಿದನು, ॥ ೩೭ ॥

ದುರುಳ ಲವಣಾಸುರನ ವಧಿಸಿದ । ಪರಮ ವಿಕ್ರಮಶಾಲಿಯೊದೀ–।
ಹರಿಯ ತಮ್ಮನು ತಿರುಗಿ ಬರುತಿಹನೆಂಬ ವಾರ್ತೆಯನು ॥
ಅರಿತು ಪರಿಪರಿಯಿಂದ ಬಲು ಸಿಂ–। ಗರಿಸಿದಂತಹ ಕೋಸಲೇಂದ್ರನ ।
ಪುರವ ಪೊಕ್ಕನು ರಾಘವನು ಪುರಜನರು ನೋಡುತಿರೆ ॥ ೩೮ ॥

ಇಳೆಯ ಮಗಳನು ತ್ಯಜಿಸಿ ವನದಲಿ । ಯುಳಿದಭೂಲಲನೆಯಲಿ ಪ್ರೇಮವ ।
ತಳೆದು ರಾಜ್ಯವನಾಳುವಂತಹ । ರಾಮಚಂದ್ರನನು ॥
ಬಳಿಕ ಶತ್ರುಂಜಯನು ಮುತ್ತಿನ । ಹೊಳೆವ ಸರದಲಿ ಪದಕದಂತೆಯೆ ।
ಕಲಿತ ಸಭಿಕರ ಮಧ್ಯದಲಿ ಕುಳಿತಿರುವದನು ಕಂಡ, ॥ ೩೯ ॥

ದುರುಳನಾದಾಕಾಲಯವನನ। ತರಿದು ಬಂದಿರುವಂಥ ಕೃಷ್ಣನ।
ದರುಶನದೆ ಪಿರಿದಾದ ಹರುಷವ ತಾಳ್ದ ಹರಿಯಂತೆ ॥
ಭರತನನುಜನು ಕೊಂದು ಲವಣಾ-। ಸುರನ ಭರದಿಂ ಬಂದ ಪಾದ-।
ಕ್ಕೆರಗಲಾತನ ಮೋದದಿಂ ರಾಘವನು ಮನ್ನಿಸಿದ, ॥ ೪೦ ॥

ಕೇಳಿ ಶತ್ರುಘ್ನನಿಗೆ ರಾಮನು। ಪೇಳಿದನು ತನ್ನೆಲ್ಲ ಕುಶಲವ।
ಮೂಲಕವಿ ವಾಲ್ಮೀಕಿಯುಪ್ಪಣೆಯಂತೆ ಸರಿಯಾಗಿ ॥
ಭೂಲಲನೆಯು ಣುಗೆಯುಲಿ ಪುಟ್ಟಿದ। ಬಾಲರೀರ್ವರ ವಾರ್ತೆಯನು ಗಡ।
ಕಾಲವಲಿ ತಾನರುಹುವನು ಮುನಿಯೆಂದು ಬಿಟ್ಟಿಹನು. ॥೪೧॥

ಇನಿತರಲಿ ಜನಪದದೆ ಯೋರ್ವನು। ಮುನಿಯು ತನ್ನಯ ಮಡಿದ ಶಿಶುವಿನ।
ಪೆಣವನಂಕದಲಿರಿಸಿ ಶೋಕಾವೇಗದಿಂ ಕೂಡಿ॥
ವನಜನಾಭನು ವಾಸಿಸುವಪೆ-।ರ್ಮನೆಯ ಬಾಗಿಲದೊಳಗೆ ಕುಳಿತ-।
ನನವ ಬಡಿಯುತೆ ದು:ಖದಿಂ ರೋದಿಸಲು ತೊಡಗಿದನು ॥೪೨॥

ಅಸವು ಸತ್ಕೃತಿಯಾದ ಭೂಪತಿ-। ದಶರಥನ ಬಿಟ್ಟೀಗ ದುರ್ಭಗೆ
ವಸುಧೆ ಯೀದುಷ್ಕೃತಿಯ ಪಾಮರ ರಾಮಹಸ್ತದಲಿ॥
ವಶಕೆ ಪೋದುದರಿಂದ ನಿನ್ನಯ। ಕುಶಲತನ ಹಾಳಾಗಿ ಪೋಯಿತು।
ಶಿಶುಗಳಲ್ಪಾಯುಷ್ಯದಲಿ ಮೃತಿಹೊಂದ ಹತ್ತಿದವು. ॥೪೩॥

ಪಾಡುವನಘನಘೋರ ದು:ಖದ। ಕಾರಣವ ತಾನರಿತು ರಾಮನು-।
ದಾರನಾದಿಕ್ಷ್ವಾಕು ವಂಶದ ರಾಜ್ಯಪದದಲ್ಲಿ॥
ಕ್ರೂರಕಾಲನಕಾಲದಲಿ ತಾ-। ನಾರ ಪ್ರಾಣವನಾದರೂ ಸಂ-
ಹಾರ ಮಾಡಿದ್ದನ್ನು ಕೇಳದರಿಂದ ನಾಚಿದನು. ॥೪೪॥

ಮರುಗುವಂತಹ ವಿಪ್ರನಿಗೆ ಶ್ರೀ। ಶರಣವತ್ಸಲನಾದ ರಾಮನು।
ಕರುಣೆಯಿಂದಾ ಸ್ಥಾಪನೆಯನಿತ್ತವನ ಸ್ಥಿರಗೊಳಿಸಿ ॥
ತರಣಿಸುತಸಂತಕನಸಮರದೆ। ಶರದೆ ಜಯಿಸುವೆನೆಂದು ಯೋಚಿಸಿ।
ಸ್ಮರಿಸಿದನು ಹರಸಖನ ಪುರಯಾನವನು ತ್ವರಿತದಲಿ. ॥೪೫॥

ಇಂಸಿ ಶಸ್ತ್ರಾಸ್ತ್ರಗಳ ರಥದಲಿ । ಧರೆಯ ಪಾಲನು ಕುಳಿತು ಸಮರಕೆ ।
ಹೊರಡಲಾಗಲೆ ಯವನ ಮುಂಭಾಗದಲಿ ಸರಸತಿಯು ॥
ಮರೆಗೆ ನಿಂತಾಕಾಶ ಮಾರ್ಗದೆ । ಸರಸ-ಘನ-ಗಂಭೀರ ರವದಿಂ-।
ದರುಹಿದಳು ವನಜಾಕ್ಷಗೀಪರಿಯಿಂದ ಸ್ಫುಟವಾಗಿ ॥ ೪೬ ॥

ಎಲೆ ನೃಪಾಲನೆ ಕೇಳು ವಿಸ್ಮಯ । ಲಲಿತ ರಾಜ್ಯದೆ ಪ್ರಜೆಗಳಲಿ ಗಡ ।
ಹಲವಲಿಯ ಪಚಾರ ನಡೆದಿಹುದದನು ನೀನರಸಿ ॥
ವಿಲಯ ಹೊಂದಿಸು ನಿನ್ನ ಬಯಕೆಯು । ಫಲಿಸುವದ ನಿಜವಾಗಿಯಾಗಲೆ ।
ಗಳಿಸದಿರು ಸಂಗ್ರಾಮದಾಯಾಸನ ಯವನನೊಡನೆ ॥ ೪೭ ॥

ಕೇಳಿಯಾಗಸವಾಣಿಯನ್ನರಿತು ದೃಢ [illegible] ಯನ [illegible] ಲಿ
ಗಾಳಿಯನ ಹಿಂದೊಗೆದು ಸಗವ ವಯಾನಕ್ಕೆ ।
ಚಾಲನವ ಮುಗುಳಿತ್ತು ಭೂವಿಭು । ಪಾಲಕಾ ವರ್ಣಾಶ್ರಮಂಗಳ ।
ಹಾಳು ಮಾಳ್ಪವನನ್ನು ಹುಡುಕುತ ಜವದೆ ನಡೆದಿಹನು ॥ ೪೮ ॥

ಜ್ವಲನ-ಧೂಮದೆ ತಾಮ್ರವರ್ಣವ । ತಳೆದ ಕಣ್ಣುಗಳುಳ್ಳ ಹಾಗೆಯೆ ।
ಬೆಳೆದ ತರುವಿನ ಲತೆಗೆ ಹಗ್ಗದೆ ಕಾಲ್ಗಳನು ಬಿಗಿದು ॥
ನೆಲದ ಕಡೆ ತಲೆಯಾಗಿ ಜೋಲ್ವಿಹ । ಬಲದೆ ತಪವನು ಮಾಳ್ಪ ಪುರುಷನ-।
ನಿಳೆಯ ಪಾಲನು ಬಳಿಕ ತಾಂ ತನ್ನೆದುರಿನಲಿ ಕಂಡ ॥ ೪೯ ॥

ಧಾರುಣೀಶನು ತಾಪಸನೆ ನೀ-। ನಾರು ನಿನ್ನಯ ಕುಲವದಾವದು ? ।
ಘೋರತಪವನ್ನೇಕೆ ಚರಿಸುವೆ ಯೆಂದು ಕೇಳಲ್ಕೆ ॥
ಪಾರುವನು ನಾನಲ್ಲ ಶೂದ್ರನು । ಚಾರುಗಾತ್ರನೆ ಸ್ವರ್ಗವೇ ತಪ-।
ಕಾರಣವು, ಮನ್ನಾಮ ಶಂಬುಕನೆಂದು ಪೇಳಿದನು. ॥ ೫೦ ॥

ಸ್ವಪದವನು ಮೀರುತ್ತೆ ಶೂದ್ರನು । ತಪವನಾಚರಿಸುತ್ತ ಜನರಿಗೆ ।
ವಿಪದವನ್ನೊದಗಿಸಿದ ಪಾಪಕೆ ಶಾಸ್ತ್ರವಿಧಿಯಿಂದ ।
ಸಪದಿ ಶೀರ್ಷಚ್ಛೇದನವನಲೆ ಯುಪಚಿತಿಯು ಸರಿಯಾದುದೆಂದಾ-।
ನೃಪತಿ ಚೂಡಾಮಣಿಯು ಭಾವಿಸಿ ಶಸ್ತ್ರವನು ಕೊಂಡ. ॥ ೫೧ ॥

ಹಿಮದ ಹೊಡೆತಕೆ ಕಮರಿಯುದುರಿದ । ಕಮಲ ಸುಮ ಕಿಂಜಲ್ಕಗಳ ಸಮ ।
ದಮನ-ಕಣ-ತಾಪಕ್ಕೆ ಸುಟ್ಟಿರುವಂಥ ಶ್ರೀಶಸ್ತ್ರಗಳ ॥
ಕುಮತಿ-ಶಂಬುಕ-ಕಂಠನಾಳವ-। ನಮಿತ ವಿಕ್ರಮವುಳ್ಳ ಸೀತಾ-।
ರಮಣನೊಂದೇ ಬಾಣದಿಂ ಕತ್ತರಿಸಿ ಕೆಡಹಿದನು. ॥ ೫೨ ॥

ತನ್ನಮಾರ್ಗವ ಮೀರಿ ಚರಿಸಿ-। ದುರ್ನ್ನತದ ತಪದಿಂದ ದೊರೆಯದ ।
ಪುಣ್ಯವಂತರಿಗರ್ಹವಾಗಿರುವಂಥ ಗತಿಯನ್ನು ॥
ಗನ್ನ ಪಾತಕಿಯಾದ ಶೂದ್ರನ । ತನ್ನ ಕರದಿಂ ಹೊಡೆದು ಗುಣಸಂ-।
ಪನ್ನನಾದೀರಾಮನವನಿಗೆ ಕೊಟ್ಟು ಬಿಟ್ಟಿಹನು. ॥ ೫೩ ॥

ಚಳಿಯು ಕಾಲದ ರಾತ್ರಿಯಲಿ ಥಳ। ಥಳನೆ ಹೊಳೆಯುವ ಚಂದ್ರನಂತೆಯೆ ।
ಯಿಳೆಯಮೇಲಿನ ಜನಕೆ ಸನ್ಮಾರ್ಗವನು ತೋರಿಸುವ ॥
ಬಲು ತಪೋಸಿದ್ಧಿಯಾದಗಸ್ತ್ಯನು । ನಳಿನನಾಭನಮಾರ್ಗದಲಿ ಗಡ ।
ಸುಳಿದನೊಮ್ಮಿಂದೊಮ್ಮೆಯಾತನ ದೈವಬಲದಿಂದ. ॥ ೫೪ ॥

ಕುಡಿದ ಮೇಲ್ತನ್ನನ್ನು ಪುನರಪಿ । ಬಿಡುವದಕೆ ಸಾಗರನು ಮುನಿಕುಲ-।
ದೊಡೆಯನಿಗೆ ಕೊಟ್ಟಿರುವ ನೇನೆಂಬಂತೆ ಕಣ್ಗೆಸೆವ ॥
ಕಡಗವನು ಕಡು ಪ್ರೇಮದಿಂದಲೆ । ಬೊಡದೆ ಪುಟ್ಟಿದ ಮುನಿವರೇಣ್ಯನು ।
ಪೊಡವಿಯೊಡೆಯನಿಗೊಡನೆಯರ್ಪಣವನ್ನು ಮಾಡಿದನು. ॥ ೫೫ ॥

ಪೊಡವಿಯಣುಗೆಯನಪ್ಪಿಕೊಳ್ಳುವ । ತಡೆದ ವ್ಯಾಪಾರುಳ್ಳ ಕರದಲಿ ।
ಯೊಡವೆಯನ್ನಿಟ್ಟಿರುವ ರಾಮನು ತನ್ನ ಪಟ್ಟಣಕೆ ॥
ಸಡಗರದೆ ಬರುವಷ್ಟರಲ್ಲಿಯೆ । ಮಡಿದ ವಿಪ್ರನ ಪುತ್ರನಸುಗಳು ।
ಗಡನೆಯಾತನ ದೇಹದಲಿ ಸಂಚರಿಸಿ ಬಿಟ್ಟಿಹವು. ॥ ೫೬ ॥

ಮರಣ ಹೊಂದಿದ ತರುಳನನು ಹಿಂ-। ದಿರುಗಿ ತನ್ನಯ ಕರಕೆ ಯರ್ಪಿಸಿ-
ಪರಮ ಪುರುಷನು ತೋರಿಸಿದ ಪೌರುಷಕೆ ನೆರೆ ಮೆಚ್ಚಿ ॥
ಅರಿಯದೇ ಪೂರ್ವದಲಿ ಯಾತನ । ಚರಿಮೆಗಳ ಬೆಳಗೊಂಡು ಬ್ರಾಹ್ಮಣ ।
ವರನು ಪರಿಪರಿಯಿಂದ ರಾಮನ ಸ್ತೋತ್ರಮಾಡಿದನು. ॥ ೫೭ ॥

ತುರಗ ಮೇಧಕ್ಕಶ್ವವನು ತಾಂ। ಧರೆಯಮೇಲ್ಬಿಟ್ಟಿರುವ ಸೀತಾ-।
ವರನಿಗಾಗಸದಿಂದ ಮೋಡವು ಸಸ್ಯಗಳ ಮೇಲೆ ॥
ಕರೆವ ಜಲಧಾರೆಗಳ ತೆರದಲಿ। ಸರಸವಾದುದುಡುಗೊರೆಗಳನು ವಾ-।
ನರರು ನರರಾಕ್ಷಸರು ಕೊಟ್ಟರು ಪರಮ ಮೋದದಲಿ. ॥ ೫೮ ॥

ಧರೆಯ ಪತಿಯಧ್ವರಕೆ ಯಾಕನು। ಕರೆಸುಕಳುಹಿದರಿಂದ ಧರೆಯ-।
ಲ್ಲಿರುವ ಮೇಣ್ ಸ್ವರ್ಲೋಕದಲಿ ವಾಸಿಸುವ ಮುನಿವರರು ॥
ಪರಮ ಸಿದ್ಧರು ಮತ್ತೆ ಯೋಗೀ-। ಶ್ವರರು ॥ ಸಾಧಕರೆಲ್ಲರೂ ಬಹು।
ತ್ವರಿತದಲಿ ಬಂದೊದಗಿದರು ಸಾಕೇತನಗರಿಯಲಿ. ॥ ೫೯ ॥

ಮಿರುಗುವಂಥೀರೆರಡು ದ್ವಾರದೆ। ಪರಮ ಸುಂದರ ಮುಖಗಳಿಂ ಮೇಣ್।
ಹೊರಗೆ ನಾಲ್ಕು ದಿಸೆಗಳಲಿ ನೆರೆದಿರುವ ಮುನಿವರರ ॥
ಸರಸ ತಂಡಗಳಿಂದಯೋಧ್ಯಾ-। ಪುರವು ಸೃಷ್ಟಿಯನುಂಟು ಮಾಡುವ।
ಸರಸಿಜೋದ್ಭವನಂತೆ ಪ್ರೇಕ್ಷಕ ಜನಕೆ ತೋರಿದುದು. ॥ ೬೦ ॥

ಮೂಡಣದ ಹವಿಶಾಲೆಯಲಿಗಡ-। ವಾಡಿಕೆಗೆ ಸರಿಯಾಗಿ ವಾಸವ।
ಮಾಡಿದಂತಹ ರಾಮಚಂದ್ರನು ಬೇರೆ ಪತ್ನಿಯನು ॥
ಮಾಡಿಕೊಳ್ಳದೆ ಶಾತಕುಂಭದ। ಮಾಡಿದಂತಹ ಸೀತೆಯಿಂದೊಡ।
ಗೂಡಿ ಯಜ್ಞದ ಕಾರ್ಯವನು ದೃಢವಾಗಿ ನಡಿಸಿದನು ॥ ೬೧ ॥

ಸಕಲ ವಿಧಿತಂತ್ರಜ್ಞ ಮುನಿಗಳ। ಮುಖದೆ ಹೊರಟಿರುವಂಥ ವಿಧವಿಧ।
ನಿಖಿಲ ಪರಿಕರಗಳನು ಕೂಡಿಸಿ ಕೊಂಡು ಕೈಕೊಂಡ ॥
ಮಖವು ಸಡಗರದಿಂದ ಸಾಗಿತು। ಪ್ರಕಟನದಲ್ಲದನು ರಾಕ್ಷಸ-।
ಮುಕುಟ ಮಣಿಗಳೆ ವಿಘ್ನದೂರೀಕರಿಸಿ ಕಾಯ್ದಿಹರು, ॥ ೬೨ ॥

ಜನಕನಂದಿನಿ ತನುಜರೀರ್ವರು। ಮುನಿಪ ವಾಲ್ಮೀಕಿಯಿಂದ ರಚಿಸಿದ।
ಘನ ಮನೋಹರವಾದ ರಾಮಾಯಣದ ಕಾವ್ಯವನು ॥
ಇನಿತರಲಿ ಬಿಡದೆಲ್ಲ ಕಡೆಯಲಿ। ಮನಸಿನಿಂ ಗುರ್ವಾಜ್ಞೆ ಮೇರೆಗೆ।
ಜನತೆಯಲಿ ಸುಸ್ವನದೆ ಗಾಯನ ಮಾಡ ತೊಡಗಿದರು ॥ ೬೩ ॥

ತರಣಿಕುಲಮಣಿಯಾದ ರಾಮನ । ಪರಮನಿರ್ಮಲವಾದ ಚರಿತವ ।
ತರುಳ ಕುಶಲವರಂಥ ಕಿನ್ನರರನ್ನು ಸೋಲಿಸುವ ॥
ಸರಸ ಸರಗಳು ಮತೆ ಪಾವನ- । ತರ ಮುನೀಂದ್ರನ ಕೃತಿಗಳಿಪ್ಪರೆ ।
ನರರ ಮಾನಸ ಹರಣಮಾಡುವದಕ್ಕೆ ತಪ್ಪುವವೇ? ॥ ೬೪ ||

ವಸುಧೆಯಾಣ್ಮನು ರಸಿಕರಿಂದಿ- । ಕುಶಲವರ ಗುಣರೂಪ ಗಾಯನ ।
ಕುಶಲತೆಗೆ ಸರಿಗಾಣೆವೆಂದಾಲೈಸಿಯುವರನ್ನು ॥
ಸುಸಮಯದಿ ಬರಮಾಡಿ-ಗಾನದ । ಕುಸುಮಶರನಂತೆಸೆವ ರೂಪವ ।
ವಿಷಯವನು ಪ್ರತ್ಯಕ್ಷನೋಡಿದನನುಜರಿಂಕೂಡಿ ॥ ೬೫ ||

ಭಾನು ವುದಿಸವ ಪೂರ್ವದಲಿ ಪವ- ಮಾನನಲೆಯುದ ಕಾಲದಲಿ ಘನ ।
ಕಾನನದ ಭೂಭಾಗದಲಿಬ್ಬನ್ನಿ [illegible] ರಿವಂತೆ ॥
ಸೂನುಗಳ ಗಾನವನು [illegible] ತೆಸ್ಥ[illegible]ಲ್ಲಿಯೆ ಕೇಳಿತ ಸಭಿಕರು ।
ಭಾನವನು ಮರೆತಂದದಿಂ ಕಣ್ಣೀರ ಸುರಿಸಿದರು ॥ ೬೬ ||

ಅಣುಗರೀರ್ವರ ವೇಷವಯಗಳ- । ನಿನಿತು ವರ್ಜಿಸಿಯುವರು ಸಾಕ್ಷಾ- ॥
ದ್ವನಜ ನಾಭನ ಪೋಲುತಿಹರೆಂ[illegible]ಲ್ಲಿ ಕುಳಿತಿರುವ ॥
ಜನರ ಮನದಲಿ ಹೊಳೆದ ಲೋಭಿಯು ಧನವನೀಕ್ಷಿಸುವಂತೆ ಸರ್ವರು ।
ಪ್ರಣಯದಿಂ ನೋಡಿದರು ಕಣ್ಣಾಗಳೆವೆಗಳಿಕ್ಕದಲೆ. ॥ ೬೭ ||

ರಾಘವನು ಕುಶಲವರ ಗಾನ- । ಕ್ಕಾಗ ಮಿಗೆ ತಾನ್ಸೈದಿ ದಂಥನು- ।
ರಾಗದಿಂ ಧನತ್ಯಾಗ ಮಾಡಿದ್ದಕ್ಕೆ ವಿಸ್ಮಯವು ॥
ಲೋಗರಂತಃಕರಣದಲಿ ಯುಂ- । ಟಾಗದೇ ನಿಸ್ಪೃಹದೆ ಕುವರರು ।
ಭೋಗವಸ್ತುಗಳನ್ನು ತ್ಯಜಿಸಿದ್ದಕ್ಕೆ ಪುಟ್ಟಿಹುದು. ॥ ೬೮ ॥

ಪರಮ ಸಂತಸದಿಂದಲಿವರಿಗೆ । ಧರೆಯ ಪಾಲಕನಾದ ರಾಮನು ।
ತರುಳರೇ ನಿಮಗಾರು ಗಾಯನ ಕಲೆಯ ಕಲಿಸಿಹರು ? ॥
ಸರಸವಾದೀಕಾವ್ಯರಚಿಸಿದ । ಪುರುಷರಾರೆಂದಾಗ ಕೇಳ- ।
ಲ್ಕರುಹಿದರು ಗೌರವದಿ ಪ್ರಾಚೇತಸನ ನಾಮವನು, ॥ ೬೯ ||

ಮಾನ ಮೀರಿದ ಪ್ರೇಮದಿಂದಾ-। ಮಾನವಾಧೀಶ್ವರನು ತನ್ನಯ ।
ಸಾನುಜರಸಹ ವಾಲ್ಮಿಕಿಯ ಸನ್ನಿಕಟದಲ್ಲೈದಿ ॥
ಪಾಣಿ ಸಂಪುಟವನ್ನು ಜೋಡಿಸಿ । ಮಾನನಿಧಿ ಮುನಿ, ನಿನಗೆ ರಾಜ್ಯವ ॥
ನಾನು ತನುವನ್ನಳಿದು ಕೊಟ್ಟಹೆನೆಂದು ಪೇಳಿದನು. ॥ ೭೦ ॥

ಹಿರಿಯ ವಚನವ ಕೇಳಿ ಕವಿಕುಲ-। ವರನು ರಾಮನಿಗೆಂದನೆಲೆ ನೃಪ ।
ದೊರೆಯ ಪದದಿಂದೇನು ಮಾಡುವದೆನಗೆ ಯೀನಿನ್ನ ॥
ತರುಳರನು ಮೋಣಿವರ ನಿರ್ಮಲ-। ತರ ನಿರಾಗಸಳಾದ ತಾಯಿಯ-।
ನಿರದೆ ಸಂಪರಿಗ್ರಹಿಸಿ ಪೊರೆಯುವೆ ಯೆಂದು ಕೋರುವೆನು. ॥೭೧॥

ಮಾತುಗಳನಾಲೈಸಿ ಯೀಪರಿ । ಸೀತೆಯಾಣ್ಮನು ಮುನಿಗೆ ಪೇಳ್ದನು ।
ತಾತ ನಿನ್ನಯ ಸ್ನುಷೆಯು ಪರಿಶುದ್ಧತೆಯನೀ ಮೊದಲು ॥
ಜಾತ ವೇದಸನಲ್ಲಿ ಪಡೆದೊಡೆ । ಯಾತುಧಾನರ ದುರಳತನದಿಂ ।
ಪಾತಕದ ಸಂಶಯದೆ ಜನರಿವಳನ್ನು ದೂಷಿಪರು. ॥೭೨॥

ಜನರ ಮನದಾಶಂಕೆಯನ್ನರೆ । ಜನಕನಂದಿನಿ, ತನ್ನ ಚರಿತದ ।
ಘನತೆಯಿಂ ದೂರೈಸಿ ಬಿಟ್ಟರೆ ನಾನು ತತ್‌ಕ್ಷಣಕೆ ॥
ತನಯರನು ಮೋಣಿಸಿಯಳನು ಬಹು । ಪ್ರಣಯದಿಂ ನಿನ್ನಾಜ್ಞೆ ಮೇರೆಗೆ।
ಮುನಿಪನೇ ಸ್ವೀಕರಿಪೆನೆಂದಾಗುಸುರಿದನು ನೃಪನು. ॥೭೩॥

ಚರಿಸಿ ಜಪತಪಗಳನು ನಿಯಮದೆ । ಸರಸ ಸಿದ್ಧಿಗಳನ್ನು ಪಡೆಯುವ ।
ತೆರದೆ ಮುನಿವರನರಿತು ನರಪನ ವಾಂಛೆಯನು ಭರದೆ ॥
ಧರೆಯ ಸುತೆಯನು ಕಳುಹಿ ಶಿಷ್ಯರ-। ನಿರದೆ ಯಾಶ್ರಮದಿಂದ ತನ್ನಯ ।
ಸರಿಸದಲಿ ಬರಮಾಡಿದನು ಶ್ರೀವರನು ನೋಡುತಿರೆ. ॥೭೪॥

ಮರು ದಿವಸವುಷೆಯುದಯದಲಿ ಶ್ರೀ-। ಧರನು ತನ್ನಯ ಪುರದ ಜನರನು ।
ನೆರಪಿ ಸಭೆಯಲಿ ಮುಂದಿನುಪಕ್ರಮವನ್ನು ಜರುಗಿಸಲು ॥
ಪರಮ ಪಾವನನಾದ ಮುನಿಯನು । ಕರೆದು ಸಾದರದಿಂದ ತರಲವ-।
ನಿರದೆ ವರಮಂತ್ರಿಯನು ಕಳುಹಿದನಾಗ ತ್ವರಿತದಲಿ. ॥೭೫॥

ಸರಸ ಸರಸಂಸ್ಕಾರದಿಂ ಕೂ-। ಡಿರುವ ಶ್ರುತಿಮಂತ್ರಂಗಳಿಂದುರೆ।
ಮೆರೆವ ಭಾಸ್ಕರನಂತೆ ಮಿರುಗುವ ರಾಮನಿದ್ರಿತೆಗೆ।
ಧರೆಯ ಸುತೆಯಿಂ ಮತ್ತೆಯಾಕೆಯು । ತರುಳರಿಂದೊಡಗೂಡಿ ಮುನಿಕುಲ-।
ವರನು ಬಂದೊದಗಿದನು ಮಾಸಂಸತ್ತಿನಲಿ ಭೇಟಿ. ॥೭೬॥

ಅರುಣವರ್ಣದ ಶುದ್ಧ ವಸ್ತ್ರವ। ಧರಿಸಿದಂತಹ ಮತ್ತೆ ತನ್ನಯ ।
ಚರಣಗಳ ಕಡೆಗಿಟ್ಟು ದೃಷ್ಟಿಯ ನಿಂತುಕೊಂಡಿರುವ ॥
ಸರಸಿ ಜಾಕ್ಷಿಯು ಸೌಮ್ಯಕಾಂತಿಯು । ನೆರೆದ ಜನಮನದಲ್ಲಿ ಯಾಕೆಯು ॥
ಪರಮ ಶುದ್ಧತೆಯನ್ನು ಪ್ರಕಟೀ ಕರಿಸಿ ಬಿಟ್ಟಿಹುದು. ॥ ೭೭ ॥

ಮೂಢತನದಿಂ ತಾವು ಸೀತೆಯ-। ನಾಡಿಕೊಂಡದ್ದಕ್ಕೆ ಮನದಲಿ ॥
ಕೂಡಿದಂತಹ ಜನರು ಪಶ್ಚಾತ್ತಾಪವನು ಹೊಂದಿ ॥
ನೋಡಲಾರದೆ ಯಪಳ ಮುಖವನು । ಬಾಡಿದಂಥಾ ನನಗಳನು ಗಡ ॥
ಮಾಡಿದರು ನೆಲಪೆಡೆಗೆ ಶಾಲಿಯ ತೆನೆಗಳಂದದಲಿ ॥ ೭೮ ॥

ಮುನಿಯು ಕುಳಿತಾಸನದ ತಾಣದಿ । ಜನಕನಂದಿನಿಗಂದನೆಲೆ ಭೂ-।
ತನಯೆ ನಿನ್ನಾಚರಣಪರಿಶುದ್ಧತೆಯ ವಿಷಯದಲಿ ॥
ಇನಿಯನೆದುರಲಿ ಕೂಡಿದಂಥೀ-। ಜನರು ಪ್ರತ್ಯಯಗೊಳುವಂತೀ-।
ಕ್ಷಣಕೆ ನಿಃಸಂದೇಹವಾಗಿಯೆ ಕಣ್ಣುಗೊಳಿಸುವದು. ॥ ೭೯ ॥

ಇನಿತರಲಿ ವಾಲ್ಮೀಕಿಯ ಛಾತ್ರನು ॥ ವನಜನಯನೆಯ ಹಸ್ತದಲಿ ಗಡ-।
ವನವ ಕೊಡಲಾಚಮನಗಳನುರೆ ಮಾಡಿ ಯಾಸತಿಯು ॥
ಜನರು ಕೇಳುವ ತೆರದೆ ಸಭೆಯುಲಿ। ಮನಸಿನಲಿ ಸಂಕೋಚ ತಾಳದೆ।
ಘನತೆಯಿಂ ನಿಜವಾದ ವಾಣಿಯನಾಗನುಡಿದಿಹಳು ॥ ೮೦ ॥

ವಾಣಿ-ಮಾನಸ-ತನುಗಳಿಂದೀ। ಪ್ರಾಣಪತಿಯನ್ನುಳಿದು ಬೇರೆ।
ಮಾನವಾದಿಕರಲ್ಲಿ ರತಿಯನು ನಾನು ತಾಳದಿರೆ ॥
ಕ್ಷೋಣಿ ಮಾತೆಯೆ ನಿನ್ನಯುದರದೆ। ಸ್ಥಾನವನು ನನಗಿತ್ತು ಜನರೊಳು ।
ಮಾನವನು ಕಾಯ್ವೆಂದು ಜಾನಕಿ ಪ್ರಾರ್ಥನೆಯ ಮಾಡೆ; ॥ ೮೧ ॥

ಸರಸಿಜಾಕ್ಷಿಯು ವಚನವನ್ನರೆ। ಧರಣಿ ಮಾತೆಯು ಕೇಳಿದಾಗಲೆ।
ಧರೆಯು ಭಾಗವು ಬಿರಿದು ಸಭೆಯಲಿ ನೆರೆಬುಕೊಂಡಿರುವ॥
ನರರ ಕಣ್ಗಳು ಕುಕ್ಕುವಂತಹ। ಪರಮ ತೇಜವು ಮೋಡದೊಳ್ ಹೊರ-।
ಹೊರಟು ತೋರುವ ತೆರದಿ ನಾಲ್ಕಾಕಡೆಗೆ ಪಸರಿಸಿತು. ॥ ೮೨ ॥

ಮೆರೆವ ದುರ್ಧರ ತೇಜದಲಿ ಫಣ-। ಧರನ ಸಿಂಹಾಸನದ ಮೇಲ್ಕುಳಿ-।
ತಿರುವ ರತ್ನಾಕರನ ಮೇಖಲೆಯನ್ನು ಧರಿಸಿರುವ ॥
ಹರಿಯು ಪೆಂಡತಿಯಾದ ವಿಶ್ವಂ-। ಭರೆಯುನಾ ಸಭೆಯಲ್ಲಿ ನೆರೆದಿಹ।
ನರರು ಮೇಣ್ ಶ್ರೀಧರನು ಸೋಜಿಗದಿಂದ ನೋಡಿದರು. ॥ ೮೩ ॥

ಹರಿಯು ಚರಣಗಳಲ್ಲಿ ದೃಷ್ಟಿಯು-। ನಿರಿಸಿ ಸ್ಥಿರವಾಗಿರುವ ತನ್ನಯ।
ತರುಳೆಯನು ತನ್ನಂಕದಲಿ ಕುಳ್ಳಿರಿಸಿ ಧಾರುಣಿಯು ॥
ಹರಿಯು ತಡೆಯೆಂದುಸುರುವಷ್ಟರೆ-। ಭರದಿ ಪಾತಾಳಕ್ಕೆಯೊಯ್ದಳು।
ಬೆರಗುವಡೆದರು ನೆರೆದ ಪುರವಾಸಿಗಳು ಸಭೆಯಲ್ಲಿ. ॥ ೮೪ ॥

ತಿರುಗಿ ಧರಿಸುತೆಯನ್ನು ಬಲದಿಂ। ದೊರಕಿಸುವದಕ್ಕಾಗಿ ರೋಷದಿ।
ಶರವ ಕೈಕೊಂಡಿರುವ ರಾಮನ ಕಂಡು ಗುರುವರನು ॥
ಹರಿಯೆ, ವಿಧಿಯನು ಕಡೆವರಾರ್ಗೈ-। ಬರಿದೆ ಕೋಪವನೇಕೆ ತಾಳುವೆ!
ಯಿರಲಿ, ಯೆಂದವನನ್ನು ಬೋಧಿಸಿ ಶಾಂತಿಗೊಳಿಸಿದನು. ॥ ೮೫ ॥

ತುರಗ ಮೇಧವು ಮುಗಿಯೆ ರಾಮನು। ಕರೆಯುಕಳುಹಿದ ಮುನಿಗಳನು ಮೇಣ್।
ಪರಮ ಸ್ನೇಹಿತರನ್ನು ಮನ್ನಿಸಿ ತಿರುಗಿ ಬೀಳ್ಕೊಟ್ಟು ॥
ಧರೆಯು ಸುತೆಯಲ್ಲಿರುವ ಪ್ರೇಮವ। ನಿರಿಸಿ ಯಾಕೆಯು ತರುಳರಲಿ ತಾಂ-।
ಪರಮ ಸಂತಸದಿಂದ ಕಾಲಕ್ರಮಣ ಮಾಡಿದನು. ॥ ೮೬ ॥

ತಂದುಮಾನಸದಲ್ಲಿ ಕೈಕಯಿ-। ಬಂಧುವಿನ ಸಂದೇಶವನ್ನರೆ।
ಸಿಂಧು ದೇಶದ ಚಂದವಾಗಿರುವಂಥ ರಾಜ್ಯವನು ॥
ಬಂಧು ಭರತನಿಗಿತ್ತನಲ್ಲದೆ। ತಂದೆಯಿಂ ಬಂದಂಥ ಧನದಲಿ।
ಯೊಂದು ಭಾಗವ ರಾಮಚಂದ್ರನು ಕೊಟ್ಟುಬಿಟ್ಟಿಹನು, ॥ ೮೭ ॥

ತ್ವರದೆ ಭರತನು ಪೋಗಿಯಲ್ಲಿಯು । ದುರುಳ ಗಂಧರ್ವಾಖ್ಯ ಧೊರೆಗಳ-।
ನಿರದೆ ಸಮರದೆ ಗೆಲ್ದು ತತ್ಕರದಿಂದ ಶಸ್ತ್ರಗಳ ॥
ಹರಿಸಿ ಯೋಗಕ್ಷೇಮಕಾಗಿಯೆ । ಮುರಜವೀಣಾಸುಷಿರಗಳನುರೆ।
ಧರಿಸಿ ತನ್ನಯ ಯಶವಪಾಡುವ ತೆರದೆ ಮಾಡಿದನು. ।೮೮ ॥

ತನ್ನ "ಪುಷ್ಕರತಕ್ಷ" ರೆಂಬೀ । ಚೆನ್ನ ತನುಜರಿಗಾಗ ಭರತನು ।
ಮನ್ನಿಸಿದ ತನ್ನಾಮ ದೇಶದ ರಾಜ್ಯಗಳನಿತ್ತು ॥
ಅಣ್ಣರಾಮನ ಪಾದ ವನಜಗ-। ಳನ್ನು ಕಾಣುವದಕ್ಕೆ ಪುನರಪಿ ।
ಸನ್ನು ತಾಂಗನು ಪರಮಹರುಷದೆ ಹೊರಟು ಬಂದಿಹನು. ॥ ೮೯ ॥

ಲಕುಮಿವರನಪ್ಪಣೆಯ ಮೇರೆಗೆ । ಲಕುಮಣನು ತನ್ನಿಂದ ಜನಿಸಿದ ।
ಸಕಲಗುಣ ಸಂಪನ್ನರಂಗದ ಚಂದ್ರಕೇತುಗಳು ॥
ನಿಖಿಲ ಕಾರಾ ಪಥದ ರಾಜ್ಯಕೆ । ಮುಕುಟಧಾರಿಗಳೆಂದು ಪ್ರಕಟಿಸಿ ।
ಭಕುತಿಯಿಂದಗ್ರಜನ ಸೇವಾನಿರತನಾಗಿಹನು. ॥ ೯೦ ॥

ತರಣಿಕುಲಸಂಭವರು ತಮ್ಮಯ । ತರುಳರಿಗೆ ಸರಿಯಾಗಿ ಧರಣಿಯ ।
ದೊರೆತನಂಗಳನಿತ್ತು ಪತಿಲೋಕಕ್ಕೆಯೈದಿರುವ ॥
ಸರಸ ಚರಿತಗಳುಳ್ಳ ತಾಯ್ಗಳಿ-। ಗವರು ವೃತಿ ಹೊಂದಿರ್ದಕ್ರಮದಿಂ ।
ಪರಮ ಭಾವಿಕತನದೆ ಶ್ರಾದ್ಧಗಳನ್ನು ಮಾಡಿದರು. ॥ ೯೧ ॥

ವನಜನಾಭನ ಬಳಿಗೆಯೊಂದಿನ । ಮುನಿಯ ವೇಷದೆ ಬಂದ ತರಣಿಯ-।
ತನುಜ ರಹದಲಿ ನಮ್ಮ ಸಂಭಾಷಣವು ನಡೆದಿರಲು ॥
ಇಣಿಕಿ ನೋಡಿದ ಮನುಜನನು ದಿನ-। ಮಣಿಯ ತನಯನ ಕಡೆಗೆ ಕಳುಹೆ-
ದಿನಕುಲೋದ್ಭವನಾದ ಶ್ರೀ ರಾಮನಿಗೆ ಪೇಳಿದನು. ॥ ೯೨ ॥

ಕೇಳಿ ವಿಪ್ರನ ಮಾತುಗಳನಾ । ಕಾಲನಿಗೆ ಯನುಕೂಲ ಭಾಷೆಯ ।
ನೀಲಮೇಘ ಶ್ಯಾಮನಿತ್ತಾ ಕ್ಷಣಕೆ ಯಾಗವನು ॥
ತಾಳಿ ನಿಜರೂಪವನು ಭೂಮಿಯ । ಪಾಲನಿಗೆ ಸ್ವರ್ಲೋಕಕ್ಕೈದುವ ।
ಕಾಲಬಂದಿಹುದೆಂದು ವಿಧಿಶಾಸನವ ಪೇಳದನು. ॥ ೯೩ ॥

ಇನಿತರಲಿ ದುರ್ವಾಸ ಮುನಿಯು ।-ಮನೆಯ ಬಾಗಿಲಲ್ಲಿ ಬಂದಾ-।
ವನಜನಾಭನ ದರುಶನವ ಬಯಸಲ್ಕೆ ಲಕುಮಣನು ॥
ಮುನಿಯ ಶಾಪದ ಭಯದೆ ವಿಪ್ರನ । ಪಣವ ಬಲ್ಲವನಾದರೂ ರಾ-।
ಮನಿಗೆ ವೃತ್ತಾಂತವನು ಪೇಳಲು ರಹದೊಳೈದಿದನು. ।೯೪॥

ಅರರೆ । ಮುನಿವೃತ್ತವನು ಸೀತಾ-। ವರನಿಗರುಹಿದ ಮೇಲೆಯಾತನ ।
ಚರಣಯುಗುಳಕ್ಕೆರಗಿ ಸರಯೂತೀರಕ್ಕೈತಂದು ॥
ತ್ವರದೆ ಸ್ನಾನವಮಾಡಿ ಯೋಗವ-। ನರಿತ ಲಕ್ಷ್ಮಣನಿರಲು ರೋಧಿಸಿ ।
ಹರಿಯು ವಚನಕೆ ಬಾಧೆ ತಾರದೆ ದೇಹತ್ಯಜಿಸಿದನು. ॥೯೫॥

ಲೋಕದೊಳಗಿನ ಧರ್ಮವಿಗ್ರಹ-। ದೇಕಪಾದವು ಮುರಿಯಲದು ಬಹು ।
ಶಾಕುಲತೆಯಿಂ ವಿಕಲನಾಗುವ ತೆರದೆ ರಾಘವನ ॥
ನಾಕುಜನ ತಮ್ಮಂದಿರಲಿ ಭೂ-। ಲೋಕವನು ಸಂತ್ಯಜಿಸಿಯೋರ್ವನು ।
ನಾಕಕೈದಿದರಿಂದಲಾತನು ಶಿಥಿಲನಾಗಿಹನು. ॥೯೬॥

ಅರಿಮತಂಗಜಗಳಿಗೆ ಹರಿಯಂ-। ತಿರುವ ತನ್ನಯ ಪುತ್ರ "ಕುಶನನು"।
ಪುರಿ "ಕುಶಾವತಿ" ರಾಜ್ಯಪದದಲಿ ಮತ್ತೆ ಕಲಿ "ಲವನ"
ವರ "ಶರಾವತಿ" ಯಲ್ಲಿ ಸ್ಥಾಪಿಸಿ। ಹರಿಯು ಬಾಂಧವರೊಡನೆ ತಾನು-।
ತ್ತರದ ದಿಶೆಯಿಂದಗ್ನಿಯನು ತಕ್ಕೊಂಡು ಸಾಗಿದನು. ॥೯೭॥

ಪರಮ ಧಾರ್ಮಿಕನಾದ ಸೀತಾ--। ವರನಯೋಧ್ಯಾಪುರದೆ ಹೊರಡಲು ।
ಪುರನಿವಾಸಿಗಳಾದರೂ ಗೃಹದಾರ-ಮಮತೆಯನು ॥
ತೊರೆದು ಗೋವಿನ ಪಿಂತೆಯಾಳಿಗರು । ಭರದೆ "ಅಂಬಾ" ರವವಗೈಯುತ-।
ಚರಿಪ ತೆರದಲಿ ಸಾಗಿದರು ನರಹರಿಯನನುಸರಿಸಿ. ॥೯೮॥

ಮಾರ ಪಿತನನುಸರಿಸಿ ಪೋಗುವ । ಪೌರವನಿತಾಜನರ ಕಣ್ಗಳ ।
ವಾರಿಯಿಂ ತೊಯ್ದಂಥ ದಾರಿಯ ಪಿಡಿದು ರಾಕ್ಷಸರೂ
ವೀರ ವಾನರರೆಲ್ಲರೂ ರಘು-। ವೀರನಾಶಯ ವರಿತು ಬಲು ನಿ-।
ರ್ಧಾರದಿಂ ಬಿಡದವನ ಬೆನ್ನಟ್ಟಿದರು ಶೀಘ್ರದಲಿ. ॥೯೯॥

ಪರಮಭಕ್ತರ ಕಲ್ಪಲತೆಯಾ-। ಗಿರುವ ದಾಮೋದರನಯೋಧ್ಯಾ-।
ಪುರದ ಜನರಿಂಗೆ ಪುಣ್ಯಸರಯೂ ನದಿಯ ವಾರಿಯನು ॥
ಸುರರ ಪುರ-ಸೋಪಾನಕಲ್ಪಿಸಿ। ಪರಮಪುರುಷನು ಬಂಧುಗಳು ಸಹೆ।
ವರ ವಿ ಮಾನದೆ ಕುಳಿತು ಸ್ವರ್ಧಾಮಕ್ಕೆ ಚರಿಸಿದನು. ॥ ೧೦೮ ॥

ಪ್ರಣತಪಾಲನು ತನ್ನ ಭಕುತರಿ-। ಗಿನಿತು ಸುಲಭೋಪಾಯದಿಂದಲೆ।
ಯನಿವಿ:ಪರಲೋಕಕ್ಕೆ ಪೋಗುವ ದಾರಿ ತೋರಿಸಲು॥
ವನದ ಗೋಗಳ ತೆರದೆ ಸರಯೂ-। ವನದೆ ಯೆಲ್ಲರು ಧುಮುಕಿಕೊಂಡರು।
ಜನರು ತತ್ಸ್ಥಾನಕ್ಕೆ " ಗೋತರ ,, ವೆಂದು ಪೇಳುವರು. ॥ ೧೧೧ ॥

ಧರೆಯಮೇಲವತರಿಸಿದಂತಹ। ಸುರರು ತಮ್ಮಯ ಮೂರ್ತಿಗಳನುರೆ।
ತಿರುಗಿ ಕೂಡಿದ ಮೇಲೆ ತನ್ನಯ ಕೂಡ ಬಂದಿರುವ ॥
ನರರ ದೆಶೆಯಿಂದಾಗ ಸರ್ವೇ-। ಶ್ವರನು ಪೊಸದಾದೊಂದು ಸಗ್ಗವ।
ಕರುಣೆಯಿಂ ನಿರ್ಮಾಣ ಮಾಡಿದನೆಂದು ಪೇಳುವರು. ॥ ೧೧೨ ॥

ಮರುಳ ದಶಕಂಧರನ ಶಿರಗಳ-। ನರಿದು ಭೂಭಾರವನು ಹರಿಸಿದ।
ಹರಿಯು ವಾನರಪತಿ ವಿಭೀಷಣರನ್ನು ಚೆನ್ನಾಗಿ ॥
ಪುರುಷಕಾರದೆ ಕುರುಹದೆಂದುರೆ। ಭರತ ವರ್ಷದ ದಕ್ಷಿಣೋತ್ತರ।
ಗಿರಿಗಳಲಿ ಸ್ಥಿರಗೊಳಿಸಿ ನಿಜರೂಪದಲಿ ಜಿರೆತಿಹನು. ॥ ೧೧೩ ॥

೧೬ ನೆಯ ಸರ್ಗ

ನಳಿನ-ನಾಭನು ಧರೆಯ ಮೇಲಿನ। ಗಳಿಸಿ ಸುರಕಾರ್ಯವನು ತೆರಳಿದ।
ಬಳಿಕ ತದ್ವಂಶದಲಿ ಜನಿಸಿರ್ದೇಳು ನೃಪಸುತರು ॥
ಇಳೆಯ ಪಾಲಕನಾದ ಕುಶನನು। ಕುಲದ ಶ್ರೇಷ್ಠಾಚಾರದಂತೆಯೆ।
ನಲವಿನಿಂದನುಸರಿಸಿ ಯಾತನ ನಂಬಿಕೊಂಡಿಹನು. ॥ ೧ ॥

ಸೇತು, ಕೃಷಿ, ವಾಣಿಜ್ಯ, ಕುಂಜರ-॥ ಯೂಥ ಬಂಧನವಾತಿ ಮೊದಲಾ-।
ದೀತೆರದ ಕೆಲ ಕೆಲಸಗಳ ಕೈಕೊಂಡ ಪ್ರಕೃತಿಗಳ ॥
ಭೂತಿಯನು ಬೆಳೆಸಿರುವ ರಘುಕುಲ-। ನಾಥರೆಲ್ಲರು ತಮ್ಮ ಸೀಮೆಯ।
ನೀತಿಯಿಂ ಸಾಗರದ ತೀರದಲಿ ಮೀರದಿರ್ದಪರು ॥ ೨ ॥

ಮಾನವಿಲ್ಲದೆ ಸತತಸಾಗುವ। ದಾನವಾರಿಗಳುಳ್ಳ ಸಾಮಜ।
ದಾನವಾರಿಗಳಾದ ನಿರ್ಜರರಾನೆಗಳ ತೆರದೆ ॥
ಶ್ರೀನಿವಾಸನ ತೇಜದಂತದ। ಮಾನವಾಧೀಶ್ವರನ ಮಕ್ಕಳ।
ಸೂನುಗಳ ಸದ್ವಂಶ ಪಸರಿಸಿತೆಂಟು ಕಡೆಯಲ್ಲಿ ॥ ೩ ॥

ಚಂದವಾದರಮನೆಯಕೋಣೆಯೊ। ಳೊಂದುದಿನ ಕುಶನೃಪನು ಸಿರಿಯಲಿ।
ಹೊಂದಿ ವಿಶ್ರಾಂತಿಯನು ಶಯ್ಯೆಯ ಮೇಲೆ ಮಲಗಿರಲು ॥
ಅಂದು ಪ್ರೋಷಿತ-ಭರ್ತೃಕೆಯುತೆರ-। ದಿಂದ ತೋರುವ ಸುಂದರಾಂಗಿಯು।
ಬಂದು ನಿಂತಳು ಮುಂದಿಮುಕ್ಕಳು ನಿದ್ರೆಗೈದಿರಲು ॥ ೪ ॥

ಅರಿಗಳನ್ನುರೆ ಜಯಿಸಿದಂತಹ। ಸುರರ ಪತಿಯಂದದಲಿ ಮಿರುಗುವ।
ಸಿರಿಯನೆಲ್ಲರ ಕಾರ್ಯಕಾಗಿಯೆ ಧರಿಸಿದಂಥವನ ॥
ಸರಸ ಬಂಧುಗಳುಳ್ಳ ಧರಣಿಯ। ವರನ ಜಯರವದಿಂದ ಮನ್ನಿಸಿ।
ಕರಗಳನು ಸರಿಯಾಗಿ ಜೋಡಿಸಿಯವಳು ನಿಂತಿರಲು ॥ ೫ ॥

ದ್ವಾರಫಲಕಕೆಗಳನ್ನು ತೆರೆಯದೆ। ಚಾರುಗಾತ್ರಿಯಗಾರದಲಿ ತಾಂ।
ಪಾರದವ ಪೂಸಿರ್ದ ಕನ್ನಡಿಯಲ್ಲಿ ಛಾಯೆಯದು ॥
ತೋರುವಂದದೆ ಸೇರಿದಂತಹ। ನಾರಿಯನು ಕಂಡಾಗ ಬೆರಗಿದ।
ಧಾರುಣೀಶನು ಶಯ್ಯೆಯಲಿ ಕುಳಿತವಳಿಗಿಂತೆಂದ ॥ ೬ ॥

ಚದುರೆ ಯೋಗದ ಹೊಲಬನರಿಯದೆ। ಕದಗಳಿಕ್ಕಿರುವಂಥ ನನ್ನಯ।
ಸದನದೊಳು ನೀನೆಂತು ಸದ್ದಿಲ್ಲದೆಯೆ ಪೊಕ್ಕಿರುವೆ ॥
ಹದನವಾಗಿರುವಂಥ ಹಿಮದಿಂ। ಪದುಮಪೂಗಳು ಬಾಡುವಂದದೆ।
ವದನ ಕಮಲದ ರುಚಿಯು ತೋರುವದೇಕೆ? ಮೋಹಿನ್ನ; ॥ ೭ ॥

ಹದಿಬದೆಯೆ ಪತಿಯಾರು? ನನ್ನಯ। ಬದಿಯಲೈದಿದ ಕಜ್ಜವಾವದು।
ಸುದತಿಮಣಿ ನೀನಾರು? ನಿನ್ನಯ ನಾಮವೇನಿಹುದು? ॥
ಸದಮಲಾತ್ಮಕ ರಾಘವರು ಬಲು। ಹೆದರುವರು ಪರದಾರ ಸಂಗ್ರಹ।
ಕಿದನು ಮನದಲ್ಲಿಟ್ಟು ಪ್ರತ್ಯುತ್ತರವನುಸುರುವದು ॥ ೮ ॥

ಜನಕ ತನುಜೆಯು ತನುಜನೀಪರಿ । ತನಗೆ ಪ್ರಶ್ನಗಳನ್ನು ಮಾಡಲು ।
ವನಿತೆ ಪೇಳ್ದಳು ತನ್ನ ನಿಜಪದಕ್ಕೈದುವವಸರದೆ ॥
ವನಜನಾಭನು ಪ್ರಣಯದಿಂದಲೆ । ಜನತೆಯನು ಸಗ್ಗಕ್ಕೆ ಕಳುಹಿದ ।
ಜನವ ಪದವಿಧಿ ದೇವತೆಯು ನಾನಪತಿಯಾಗಿರುವೆ ॥ ೯ ॥

ನಿನ್ನ ಪಿತನಾಡಳತೆಯಲಿ । ಬಲು ಹೊನ್ನು ಮುಂತಾಡಖಿಲ ಘನಸಂ ।
ಪನ್ನತೆಯು ಮದದಿಂದಲಲಕಾಪುರವ ಧಿಕ್ಕೀಪ ॥
ನನ್ನ ಕರಣಾವಸ್ಥೆಯೀಪರಿ । ಯಿನ್ನು ನೀನಾವಂಶದಧಿಪನು ।
ಗನ್ನ ಸತ್ತ್ವಧಾರಿಯಾಗಿರಲಾಗಿ ಯಾಗಿಹುದು. ॥ ೧೦ ॥

ಕರಣಿಯು ಸ್ತಾಚಲಕೆಯ್ದಿದ । ಮರುತದಿಂ ಕರಗಿರ್ದ ಮುಗಿಲ್ಗಳ ।
ವಿರಸವಾಗಿರುವಂಥ ಸಂಧ್ಯಾಸಮಯದಂದದಲಿ ॥
ಮುರಿದ ದ್ವಾರಗಳುಳ್ಳ ಮನೆಗಳ । ಧರೆಗೆ ಯೊರಗಿದ ಸೌಧಗಳ ಮಮ ।
ಪುರವು ದೊರೆಯಿಲ್ಲದಲೆ ಭೀಕರವಾಗಿ ತೋರುವದು, ॥ ೧೧ ॥

ಸರಸ ನೂಪುರ ರವವಗೈಯುತ । ಭರದೆ ನಿಶೆಯಲಿ ತನ್ನ ಪುರುಷನ- ।
ನರಸುತಭಿಸಾರಿಕೆಯು ಚರಿಸುತ್ತಿರ್ದ ಬೀದಿಯಲಿ ॥
ಆರರೆ! ಪ್ರಸ್ತುತದಲ್ಲಿ ನರಿಗಳು । ಪರಮನಿರ್ಭಯದಿಂದ ಚೀರುತ ।
ಹರುಷದಿಂದಾಹಾರ ಹುಡುಕುತ್ತಿರುವವೆಲೆನೃಪನೇ ॥ ೧೨ ॥

ತಾಡಫಲದಂತೆಸೆವ ಕುಚಗಳ । ಪ್ರೌಢ ಪೆಣ್ಗಳ ಕೇಳಿಯಲಿ ಕರ- ।
ತಾಡಣದೆ ಕರೆಯಲ್ಲಿ । ಮರ್ದಲೆಯಂತೆ ಕೇಳ್ಬರುವ ॥
ಗಾಢವಾದಿಂ ಚರದ ಕಾಣದೆ । ಕಾಡಕೋಣನ ಕೋಡಿಸಿಂದುರೆ ।
"ದಾಡ ದಾಡನೆ" ಹೊರಡುತಿಹ ಕಟುರವವನಾಲಿಪುದ. ॥ ೧೩ ॥

ಉರಿವ ದಾವಾನಲದೆ ಕಮರಿದ । ಗರಿಗಳುಳ್ಳ ಮಯೂರಗಳು ತ- ।
ವ್ವಿರುವ ಮನೆಗಳು ಮುರಿದು ಪೋದುದರಿಂದ ಕಷ್ಟದಲಿ ॥
ಮರದ ಮೇಲಾಶ್ರಯವಕೊಂಡವು । ಮುರಜರವದಪಗಮದೆ ನೃತ್ಯವ ।
ಮರೆತು ಚರಿಸುತ್ತಿಹವು ಕಾಡಿನ ಪಕ್ಷಿಗಳ ತೆರದೆ. ॥ ೧೪ ॥

ಚರರೆ ! ಲಾಕ್ಷಾರಸದ ಪೂಸಿದ । ಚರಣಗಳನೂರಿಳಿಯುವಂತಹ
ಸರಸ ಸೋಪಾನಗಳ ತಾಣದಲೀಗ ವ್ಯಾಘ್ರಗಳು ॥
ಎರಳೆಗಳ ಸಾರುಧಿರದಲಿ ಮುಳು- । ಗಿರುವ ಕಾಲ್ಗಳನಿಟ್ಟು ಮೆಲ್ಲನೆ ।
ಚರಿಸುವವು ನಿರ್ಭಯದೆ ಹಾಹಾ! । ಕಠಿಣ ಸಮಯವಿದು ॥೧೫॥

ಕಮಲ ವನದಲಿ ಪ್ರೋಕ್ಷಸ್ತಂಬೇ- । ರಮದ ಮುಖದಲ್ಲಿ ಕಮಲ ಖಂಡವ ।
ಮಮತೆಯಿಂ ಪೆಣ್ಬಂತಿ ಕೊಡುತಿರುವಂತೆ ಭಿತ್ತಿಯಲಿ ॥
ಸುಮತಿಯಾಗಿರುವಂಥ ಶಿಲ್ಪಿಗ- । ನಮನು ಬರೆದದ್ದನ್ನು ನಿರಿಕಿಸಿ ।
ಕ್ರಮದೆ ಹರಿ ತಪ್ಪಿರದ ತಾಣವ ಭಗ್ನ ಮಾಡಿಹುದು ॥೧೬॥

ಸದನದೊಳಗಿನ ಕಂಬದಲಿ ಸು- । ಸ ದತಿಯಂದದಿ ಕೊರೆದ ಪ್ರತಿಮೆಯ ।
ವದನ ಕಮಲವು ಧೂಳಿಯಿಂ ವೈವರ್ಣ್ಯ ಹೊಂದಿಹುದು ॥
ಅದಕೆ ಯಂಟಿಹ ಫಣಿಯು ಕಂಚುಕಿ । ಯುದೆಯು ಮೇಲಿನ ಪದವಿಸಂತೆಯ ।
ಎದುರನೇ. ತೋರುವದು ದೈವದ ಚಿತ್ರಲೀಲೆಯಿದು ॥೧೭॥

ಪಾಲಿಸಂತೆಸೆದೊಂದು ಕಾಲಕೆ । ನಾಲುಗೊಂಡಚ್ಛಾಲಯಂಗಳು ।
ಕಾಲ ಚಕ್ರದ ಗತಿಯ ಮೂಲಕ ಕಾಲಿಮೆಯ ತಾಳಿ ॥
ಪಾಳಿಗೆಯು ಮೇಲ್ಬೆಳೆದ ಪುಲ್ಲಿನ । ಜಾಲದಿಂದಿಂದುವಿನ ಕರಗಳ ।
ಪಾಲೆಯನು ಪ್ರತಿ ಫಲಿಸದಿರುತಿಹವೇನು ಪೇಳುವೆನು ॥೧೮॥

ತರುಣಿರಾವಂಗನೆಯರೆನಯ । ಪುರದ ತೋಟಗಳಲ್ಲಿ ಲತೆಗಳ ।
ಸರಸ ಶಾಖಾ ಪಲ್ಲವಂಗಳನುಳಿದು ಪೂಗಳನು ॥
ಕರದೆ ಕೊಯ್ಯುತ್ತಿರ್ದರಲ್ಲೀ- । ಗಿರದೆ ಹರಿಗಳು ಮ್ಲೇಂಛ ಪೆಣ್ಗಳ- ।
ತೆರದೆ ನಿರ್ದಯ ತನದೆ ಟೊಂಗೆಗಳನ್ನು ಮುರಿಯುವವು ॥೧೯॥

ಉದುಪಸೋಪಾನಿಯಲಿ ತೋರುವ । ಮುದದಿಯರ ಲಪನಗಳು ಪಗಲಲಿ ।
ಸೊದರುಗಳ ಝಗಝಗಿಸ ತೇಜವು ರಾತ್ರಿಕಾಲದಲಿ ॥
ಕಿಡಕಿಯಿಂ ದೃಗ್ಪಥಕೆ ಬಾರವು । ಹುಡಿಯು ಕೂಡಿದ್ದೂರ್ಣನಾಭದ ।
ಕೆಡಕ ತಂತುಗಳೀಗ ತತ್ಸ್ಥಾನದಲಿ ಕಾಣ್ಬಹುದು ॥೨೦॥

ಬಲಿ ವಿವರ್ಜಿತವಾದ ಪುಲಿನವು। ಜಲಜನಯನೆಯುರಂಗರಾಗವು।
ಕಲಿಯದಿರುತಿರುವಂಥ ಸರಯೂ ನದಿಯ ಸಲಿಲವದು ॥
ಬೆಳೆದ ವಾನೀರಗಳ ನಿರ್ಜನ। ಪೊಳೆವ ಕುಟಿಗಳು ನನ್ನ ಮನಸಿಗೆ।
ಬಲು ವಿಷಾದವನುಂಟು ಮಾಡುತ್ತಿಹವು ಪ್ರಭುವರನೆ. ॥೨೧॥

ಮಾನವೇಂದ್ರನೆ ನಿನ್ನ ತಂದೆಯು। ಮಾನವೀತನು ಬಿಟ್ಟು ಕೊನೆಯಲಿ।
ತಾನು ನಿಜಪದ ಕೈದಿದಂತೆಯೆ ತ್ಯಜಿಸಿ ಯೀ ಪುರವ ॥
ಅನುವಂಶದೆ ಬಂದ ನನ್ನಯ। ಭಾನುಕುಲದವರಾಳ್ದ ನಗರಕೆ।
ನೀನು ಗಡ ತೆರಳೆಂದು ಮಾನಿನಿ ಬಿನತಿ ಮಾಡಿದಳು ॥೨೨॥

ಕೇಳಿ ಪುರದೇವತೆಯ ನುಡಿಯನು। ತಾಳಿ ಸಂತಸವನು, ರಘುಕುಲ- ।
ಮೌಳಿ ಯಾಕೆಗೆ ಹಾಗೆ ಮಾಡುವೆನೆಂದು ಲೀಲೆಯಲಿ ॥
ಪೇಳಲಾಕೆಯು ಹರುಷದಿಂ ತತ್ಕಾಲದಲಿ ತನುಬಂಧ ವರ್ಜಿಸಿ।
ಯಾಲಯದೆ ಬೀಳ್ಕೊಂಡು ಕಣ್ಮರೆಯಾಗಿ ಸಾಗಿದಳು. ॥೨೩॥

ಮಾರನಯ್ಯನ ಸುತನು ಮರುದಿನ। ಪಾರುವರಿಗರುಹಿದನು ತನಗಾ- ।
ಚಾರು ಗಾತ್ರೆಯು ರಾತ್ರಿಯಲಿ ನುಡಿದಂಥ ವಚನವನು ॥
ಧೀರನೇ ಪ್ರತ್ಯಕ್ಷ ನಿನ್ನನು। ಧಾರುಣಿಯು ವರಿಸಿದಳು ನಿನಗಿ- ।
ನ್ನಾರು ಸರಿಯೆಂದುಸುರಿಯುವರಾನಂದ ತೋರಿದರು. ॥೨೪॥

ವೇದ ವಿದ್ವಿಪ್ರರಿಗೆ ತನ್ನೀ- । ಮೇದಿನಿಯ ಭಾಗವನು ವಿತರಿಸಿ।
ಮೇದಿನಿಯ ಪತಿ ತನ್ನ ಸ್ತ್ರೀ ಪರಿವಾರದಿಂ ಕೂಡಿ ॥
ಮೋದದಿಂ ಮಾರುತನು ವೋಡವ। ಮೇದುರದೆ ಚಲಿಸಂತೆ ಸೇನಾ- ।
ಯೋಧರಿಂ ಸಾಗಿದನಯೋಧ್ಯಾಪುರದ ಮಾರ್ಗದಲಿ. ॥೨೫॥

ನೆರೆದ ಕೇತುಗಳಿಂದ ಸುಂದರ। ಪುರದ ತೋಟಗಳಂತೆ ಸ್ಯಂದನ- ।
ಕರಿಗಳಿಂದ ವಿಹಾರ ಶೈಲಗಳಂತೆ, ಹರ್ಮ್ಯಗಳ ॥
ತೆರದೆ ತೇರುಗಳಿಂದ, ಸೇನೆಯು। ಚರಿಪ ಕಾಲಕೆ ತೋರಿದುದು ನರ- ।
ವರನ ಜಂಗಮ ರಾಜಧಾನಿಯೆ ಚಲಿಸುತಿರುವಂತೆ. ॥೨೬॥

ಮೆರೆವ ಹಿಮಕರನುದಿಸಿ ನಭದಲಿ । ಯಿರದೆ ಸಾಗರವನ್ನು ತೀರಕೆ ।
ತ್ವರೆಯೊಳೊಯ್ಯುವ ತೆರದೆ ಶ್ವೇತಾತಪದೆ ಶೋಭಿಸುವ ॥
ಗುರುಗಳಾಜ್ಞಾನಕ್ಕೆ ಸೇನಾ–। ಭರವ ಸಾಗಿಸಿಕೊಂಡು ಪೋಗುವ ।
ಧರೆಯ ಪಾಲನು ನರರ ಕಣ್ಗಳಿಗಾಗ ತೋರಿದನು ॥೨೭॥

ಪರಮ ವಿಕ್ರಮವುಳ್ಳ ರಾಜನ । ನಿರತಿಶಯವಾಗಿರುವ ಸೇನೆಯು ।
ಭರವು ತಾಳದೆ ಧರಣಿದೇವಿಯು ರಜದ ರೂಪವನು ॥
ಧರಿಸಿ ನಿರ್ಭಯವಾದು ಮೂವರೆ– । ನೆರಡನೇ ಚರಣಕ್ಕೆ ದರದಿಂ ।
ಶರಣು ಪೋಗುತ್ತಿಹಳು ತಾನೆಂಬಂತೆ ತೋರಿದಳು ॥೨೮॥

ಹೊರಟು ಮುಂದಕೆ ಹೋಗಿ ಯಿಳಕೊಂ । ಡಿರುವ ಮೋಕ್ಷಾಥದಿಂದ ಚರಿಸುವ ।
ಪುರದೆ ಹೊರಡುವ ಕುಶ ನೃಪಾಲನ ಸರಸ ವಾಹಿನಿಯು ॥
ಪರಮ ಸೋಜಿಗವಾಗಿ ನೋಡುವ । ನರರಿಗೊಂದೇ ಪೂರ್ಣವಾಗಿರು- ।
ತಿರುವ, ಪರಿಯುವ ಹೊಳೆಯ ನೀರಿನ ತೆರದೆ ತೋರಿದುದು. ॥೨೯॥

ಭರದೆ ಚರಿಸುವ ಧರೆಯ ಪಾಲನ । ಸ್ಥಿರವಗಳ ಶಿರದಿಂದ ಸ್ರವಿಸುವ ।
ಸರಸ ಮದ–ಜಲದಿಂದ ನೆರೆ ತೊಯ್ದಂಥ ರೇಣುಗಳು ॥
ತುರಗಗಳ ಖುರಘಾತದಿಂದುರೆ । ಮರಳಿ ಧೂಳಿಯ ರೂಪದಿಂದಲೆ ।
ಪರಿಣಮಿಸಿದುವು ಮುಂಚಿನಂತೆಯೆ ರಾಜಮಾರ್ಗದಲಿ. ॥೩೦॥

ಘೋರ ವಿಂಧ್ಯಾಶೈಲದಲಿ ಯಾ– । ಧೋರಣಾರು, ಮೋಕ್ಷೆ ಸಿಕರು ಮುಂ- ।
ದಾರಿಯುಸ್ಸರಸುತ್ತ ನಡೆದಿರಲವರ ಶಬ್ದವದು ॥
ಸೇರಿ ಗಹ್ವರಗಳಲಿ ರೇವೆಯ । ವಾರಿಯಾರವದಂತೆ ಘನಗಂ ।
ಭೀರ ಪ್ರತಿರವವನ್ನು ಭೀಬರುವಂತೆ ಜನಿಸಿಹುದು. ॥೩೧॥

ಗೈರಿಕೆಯ ಹುಡಿತೊಡೆದು ಪೊಳೆಯುವ । ಚಾರು ಚಕ್ರಗಳುಳ್ಳ ರಥದಲಿ ।
ಧಾರುಣೀಶನು ಕುಳಿತು ನಿಜಪರಿವಾರದಿಂ ಕೂಡಿ ।
ದಾರಿ ನಡೆಯುತ್ತಿರೆ ಪುಲಿಂದರು । ಪಾರಿತೋಷಕವನ್ನು ಕೊಡಲಾ- ।
ಧೀರನವರನು ಮನ್ನಿಸಿದೆ ಪೋಲ್ವಿಂಧ್ಯ ದಾಂಟಿದನು. ॥೩೨॥

ಗಿರಿಯ ಬೇಭರ್ಾಗದಲಿ ಹರಿಯುವ । ಸುರರ ನದಿಯಾಪದಲಿ ಯಾ ನರ- ।
ವರನು ಕರಿಗಳ ಸೇತುಗಟ್ಟಿಸಿ ದಾಂಟುವವಸರವೆ ॥
ಭರದೆ ಯಾಕಾಶಕ್ಕೆ ಹಾರುವ । ಸರಸ ಹಂಸಗಳವನ ಮೇಲ್ಪಾ- ।
ಮರಗಳನು ತಾವಾಗಿ ಬೀಸುವ ತೆರದೆ ತೋರಿದವು. ॥೩೩॥

ಕಪಿಲ ಮಾಮುನಿ ಸಗರಸುತರನು । ಶಪಿಸಿ ಭಸ್ಮವ ಮಾಡಲವರನು
ತ್ರಿಪಥ ಗಾಮಿನಿಯಾದ ಭಾಗೀರಥಿಯು ಕರುಣೆಯಲಿ ॥
ವಿಪದೆಯಿಂದವರನ್ನು ರಕ್ಷಿಸಿ । ಸುಪದವನು ವಿತರಿಸಿದಳವಳಿಗೆ
ಯಪರಿಮಿತ ಬಲಿಯಾದ ರಾಜನು ಶರಣು ಮಾಡಿದನು. ॥೩೪॥

ಕೆಲವು ದಿನಗಳ ವರೆಗೆ ಯೀಪರಿ । ಜಲಜ ನಾಭನ ಸುತನು ಮಾರ್ಗವ- ।
ನಲಸವೇ ನಡೆ ನಡೆದು ಸರಯೂ ನದಿಯ ಕೂಲದಲಿ ॥
ನಲಿನ ಮಿತ್ರನ ಕುಲದ ರಾಜರು । ಬಲವೆ ಯೂಪಗಳನ್ನು ನಡಿಸಿದ ।
ಲಲಿತವಾಗಿಹ ವೇದಿಗಳ ಸುಸ್ಥಾನಕ್ಕೈದಿದನು. ॥೩೫॥

ಚರಿಸಿ ಮಾರ್ಗವ ಶ್ರಮಿಸಿದಂತಹ । ಸರಸ ವಾಹಿನಿಯುಕ್ತ ಜಾನಕಿ- ।
ತರಳನಿಗೆ ಸತ್ಕಾರ ಮಾಡುವುದಕ್ಕೆ ಮಾರುತನು ॥
ಪುರದ ತೋಟಗಳಲ್ಲಿಯರಳಿ- । ರ್ದರಳುಗಳ ಸುರಭಿಯನು ಕೊಂಡಾ- ।
ಸರಯು-ತೆರಗಳ ಸ್ಪರುಶದಿಂ ತಂಪಾಗಿ ವಹಿಸಿದನು. ॥೩೬॥

ಅರಿಗಳಿಗೆ ಶರರೂಪಿ ಮೌಣ್ಣಿಜ । ಪುರದ ಜನರಿಗೆ ಪರಮ ಮಿತ್ರನು ।
ತರಣಿ ಕುಲವರಕೇತುವಾದೀ ಕುಶನೃಪಾಲಕನು ॥
ಪುರದ ಹೊರಭಾಗದಲಿ ತನ್ನಯ । ಪರಮ ವಿಕ್ರಮವುಳ್ಳ ಸೈನ್ಯವ- ।
ನಿರಿಸಿ ತಾನೂ ಹರುಷದಿಂದಾವಾಸ ಮಾಡಿದನು. ॥೩೭॥

ಇಳೆಯ ಬೇಸಿಗೆ-ಬಿಸಿಲಿನಿಂಬಲು । ಬಳಲಿ ತಾಳಿದ ರೌಕ್ಷ್ಯವನ್ನರೆ ।
ಮಳೆಯು ಕಳೆಯುವ ತೆರದೆ ಭೂಪಾಲಕನ ಶಿಲ್ಪಿಗರು ॥
ನಿಲಯ ಹೊಂದಿದ ಪುರದ ರಚನೆಯ । ಕಲಪಿನಿಂ ಹೊಸತಾಗಿ ತ್ವರೆಯಲಿ
ನಲವಿನಿಂ ಮಾಡಿದರು ನೃಪನಾಣತಿಗೆ ಸರಿಯಾಗಿ. ॥೩೮॥

ಪುರವ ಜೀರ್ಣೋದ್ಧಾರ ಮಾಡಿದ । ಪರವ ಜಾಗ್ರತವಾದ ಪ್ರತಿಮಾ ॥
ಕರಗಳಿಗೆ ಯುಪವಾಸ ಮಾಡಿದ ವಿಧಿಕಲಾಪವನು ॥
ಅರಿತ ಭೂಸುರರಿಂದ ವಿಧಿಯಿಂ । ಹರುಷದಿಂ ಗೃಹ ಶಾಂತಿಯನು ಶ್ರೀ ।
ಹರಿಯ ತರನು ಜರುಗಿಸಿದನುರೆ ಬಲಿಗಳನ್ನಿತ್ತು. ॥೩೯॥

ವನಜ ನಯನನು ಒಳಿಕ ತನ್ನಯ । ಘನಮನೋಹರವಾದ ಮನೆಯಲಿ ।
ಪ್ರಣಯಿನಿಯ ಹೃದ್ಭಾಗದಲಿ ಕಾಮುಕನ ತೆರದಿಂದ ।
ಪ್ರಣಯದಿಂ ಸೇರಿದನು; ಮೇಣ್ತಾ- । ನನುಚರರಿಗಾಗವನು ಕೊಟ್ಟನು ।
ಕನಕದೊಡವೆಗಳನ್ನು ಮಂದಿರಗಳನು ಸರಿಯಾಗಿ. ॥೪೦॥

ಸರಕುಗಳು ಸರಿಯಾಗಿ ರಚಿಸಿದ । ಸರಸ ವಿಪಣಿಗಳಿಂದ ಸುಂದರ ।
ತುರಗ ಶಾಲೆಗಳಿಂದ ಪೆಗ್ಗಂಬಕ್ಕೆ ಕಟ್ಟಿರುವ ॥
ದ್ವಿರದರಾಜಿಗಳಿಂದಯೋಧ್ಯಾ- । ಪುರವು ತತ್ಕಾಲದಲಿ ದಿವ್ಯಾ- ।
ಭರಣ ಭೂಷಿತೆಯಾದ ತರುಣಿಯು ತೆರದೆ ತೋರಿದುದು. ॥೪೧॥

ಹರಿಯ ಸದ್ವಂಶದಲಿ ಜನಿಸಿದ । ಹರಿಯು ಮೊದಲಾದರಸರಾಳಿದ ।
ಹರಿಯ ತರಳನು ಮರಳಿ ಪೂರ್ವದ ಸ್ಥಿತಿಗೆ ತಂದಿರುವ ॥
ಪುರವು ನರವಾಹನನ ಮೇಣಾ- । ಹರಿಯ ನಗರಗಳನ್ನು ಸಲೆ ಧಿ- ।
ಕ್ಕರಿಪ ತೆರದಲಿ ಭೂತಿಕಾಂತಿಗಳಿಂದ ಶೋಭಿಸಿತು. ॥೪೨॥

ಒಲಿತ ಮೊಲೆಗಳ ಮೇಲೆ ಮುತ್ತಿನ । ಲಲಿತ ಮಾಲೆಗಳನ್ನು ಥಳಥಳ ।
ಪೊಳೆವ ರತ್ನಗ್ರಥಿತ ತಿಳುವಾಗಿರುವ ಕ್ಷೌಮವನು ॥
ಇಳೆಯ ಪಾಲನ ಸತಿಗೆ ಧರಿಸಲು । ಕಲಿಸಲಾಸಮಯದಲಿ ಬೇಸಿಗೆ ।
ತಲೆಯ ತೋರಿತು ಕೊಂಡು ಸಂಗಡ ಮಲಯ ವಾತವನು. ॥೪೩॥

ತೊರೆದು ದಕ್ಷಿಣದೇಶೆಯೆಂಬೀ- । ಸರಿಯ ಸವತಿಯ ಸದನದಿಂ ಹಿಂ- ।
ತಿರುಗಿ ತರಣಿಯು ತನ್ನ ಸದನಕೆ ಬರುವನೆಂದರಿತು ॥
ತರಣಿ ಯುತ್ತರ ದಿಗ್ಯಿತಂಬಿನಿ- । ಯಿರದೆ ಹಿಮಗಿರಿ-ಹಿಮದ ಬಾಷ್ಪವ ।
ಸುರಿಸಿ ಪರಮಾನಂದವನು ಸ್ಫುಟವಾಗಿ ತೋರಿದಳು ॥೪೪॥

ಪ್ರಣಯ ಕಲಹದೆ ಮುನಿಸು ತಾಳಿ- । ರ್ದಿನಿಯನೋಪಾದಿಯಲಿ ಬೇಸಿಗೆ ।
ದಿನವು ಪಗಲಲಿ ತಾಪದಿಂ ಕೂಡಿರ್ದು ಮಾನಿನಿಯು ॥
ಮನಸಿನಲಿ ಮರು ಮರುಗಿ ಸೊರಗಿದ । ತನುವ ಧಾರಣ ಮಾಡುವಂತೆಯೆ ।
ಕ್ಷಣದೆ ಯಾದೊಡೆ ತನುತೆಯನು ಸ್ವೀಕರಿಸಿ ಕೊಂಡಿಹುದು. ॥೪೫॥

ಮನೆಯ ದೀರ್ಘಿಕೆಗಳಲಿ ತುಂಬಿದ । ವನವು ದಿನದಿನಕಿಳಿದು ಹಾವಸೆ-
ಮುಣುಗಿದಂತಹ ಮೆಟ್ಟುಗಳು ಸಲೆ ದೆರೆದು ವನಜಗಳ ॥
ಗಣೆಗಳೆತ್ತರವಾಗಿ ಯೆಸೆದವು । ವನಿತೆಯರ ತನು- ಮಧ್ಯ- ಮಾನದೆ ।
ಮಿನುಗುವಂತವು ಕೇಲಿಕಾರ್ಯಕೆ ಯೋಗ್ಯವಾಗಿಹುದು. ॥೪೬॥

ಬನದೊಳೆಲ್ಲೆಲ್ಲಿಡೆಗೆ ಸಾಯಂ- । ತನದೊಳರಳಿದ ಮಲ್ಲಿಗೆಯ ಪೂ- ॥
ಗೊನೆಗಳಲ್ಲಿಯ ಸುರಭಿಗೆಳಸಿವಮತ್ತದುಂಬಿಗಳು ॥
ಸುನವ ಸುಮುಗಳ ಮೇಲೆ ಪದನಿ- । ಕ್ವಣಿಕೆ ಮಾಡುವ ತೆರದೆ ಮಂಜು- ।
ಸ್ವನವ ಗೈಯುತ ಪುಷ್ಪದಿಂ ಪುಷ್ಪಕ್ಕೆ ಹಾರುವವು. ॥೪೭॥

ಸರಸವಾಡುವ ಸಮಯದಲಿ ನಿಜ । ಪುರುಷನಖದಿಂದಾದ ಕ್ಷತಗಳ ॥
ಕುರುಪನಿಂ ಶೋಭಿಸುವ ಪೆಣ್ಗಳ ಕದಪುಗಳ ಮೇಲೆ ॥
ಸುರಿವ ಸ್ವೇದಾಂಬುವಿಗೆ ಯಂಟಿದ । ಸಿರಸಲದ ಪೂ ಕರ್ಣದಿಂದುರೆ ।
ಸರಿದು ಬಿದ್ದೊಡೆಯಲ್ಲಿಯೇ ಸ್ಥಿರಗೊಂಡು ನಿಂತಿಹುದು. ॥೪೮॥

ಮನೆಗಳುಪವನಗಳಲಿ ಧನಿಕರು । ಮನುಜ ಕೃತಜಲ ಯಂತ್ರಗಳ- ನಾ ।
ಧನದೆ ತಂಪಾಗಿರುವ ಭವನಗಳಲ್ಲಿ ಪಗಲುಗಳ ॥
ಘನ ಸುವಾಸನೆಯುಳ್ಳ ಹರಿ ಚಂ- । ದನವ ಪೂಸಿದ ಶಿಲೆಗ ಲಿ ಶ್ರೀ ।
ಜನಪನಾತಪ ತಾಪವನು ಮಲ ಮಲಗಿ ಕಳೆದಿಹರು. ॥೪೯॥

ಪರಮ ಸಖ ಮಾಧವನ ವಿರಹದೆ । ಕೊರಗಿದಂತಹ ಸ್ಮರನ ವೀರ್ಯವು ।
ಸುರಭಿಯಿಂ ಕೂಡಿರುವ ತೈಲಾಭ್ಯಂಗ ಮಾಡಿರುವ ॥
ಅರಳು ಮಲ್ಲಿಗೆ ಸರಗಳನ್ನುರೆ । ತುರುಬಿಗಿರಿಸಿದ ತರುಣಿಯರ ಕಚ- ।
ಭರದ ಪರಿಮಳದಿಂದ ಪುನರಪಿ ಬಲವಗೊಂಡಿಹುದು. ॥೫೦॥

ಗಿರಿಜೆ ಯಾಜ್ಞನು ರೋಷಭರದಿಂ । ಸ್ಮರನ ಭಸ್ಮೀಕರಿಸಿ ಯಾತನ ।
ಸರಸ ಸಿಂಜಿನಿಯನ್ನು ಹರಿದೊಗೆದದ್ದು ಮರಳೀಗ ॥
ಅರುಣ ವರ್ಣದ ಕಕುಭ ತರುವಿನ । ಮೆರೆವ ಮಂಜರಿ- ರೂಪದಿಂದವ ।
ತರಿಸಿ ಬಂದಿಪುದೆಂಬ ತೆರದಲಿ ಪರಮ ತಾಳಿಹುದು. ॥೫೧॥

ಜರೆದು ಸುಧೆಯನು ಮೆರೆವ ಸುರೆಯಿಂ । ಪರಮ ರುಚಿಕರವಾದ ಮಾವಿನ ।
ಸರಸ ಹಣ್ಣುಗಳಿಂದ ಮೇಣ್ಪಾಟಲದ ಪರಿಕರದೆ ॥
ತರುಣ ಕಾಮೀ ಜನರ ಮನಸಿಗೆ । ನಿರತಿಶಯ ಸಂತಸವ ಗ್ರೀಷ್ಮನು ।
ಮರಿಸಿ ತನ್ನಯ ದೋಷಗಳನುರೆಯುಂಟು ಮಾಡಿಹನು. ॥೫೨॥

ಜನರಿಗಿಂತಹ ಕಾಲದಲಿ ನಿ- । ರ್ಧನತೆಯಿಂದುಂಟದ ಶ್ರಮ ಸಂ- ।
ಹನನ ಮಾಡುವದಕ್ಕೆ ಜನಪನ ಚರಣ- ಸೇವೆಯದು ॥
ದಿನಪನಾತಪ ತಾಪ ಗಳೆಯಲು । ಕ್ಷಣದೆಯಾಜ್ಞನ ಚಂದ್ರಿಕೆಯ ಸೇ- ।
ವನವು ಘನ ಸಾಧನಗಳಾಗಿರುತಿಹವು ಲೋಕದಲಿ. ॥೫೩॥

ಅರಳುಗಳ ಪರಿಮಳದೆ ಕೂಡಿ- । ದರುಣ ಚರಣಗಳಿಂದ ಮೆರೆಯುವ ।
ಸರಸ ಶುಭ್ರಗರುತ್ತಗಳ ಪರಿಕರದೆ ವ್ಯಾಪಿಸಿದ ॥
ಹರಿವ ಸರಯೂ ವಿಮಲ ಜಲದಲಿ । ಯುರಿವ ಬೇಸಿಗೆಯಲ್ಲಿ ನರಪತಿ- ।
ಯುವತಿಯರ ಸಂಗಡ ವಿಹಾರವ ಮಾಡಲೆಳಸಿದನು. ॥೫೪॥

ನೀರಿನಲಿ ಬಲೆಯೊಡ್ಡಿ ಪೆರ್ಕಂ- । ಭೀರಗಳ ತೊರದೆಗೆದ ಮೇಣ್ಬಹು ।
ಚಾರು ಪಟಕುಟಿಗಳನು ಹೊಡೆದಿರುವಂಥ ಸರಯುವಿನ ॥
ತೀರದಲಿ ಪರಿವಾರ ಸಹಿತಾ- । ಧಾರುಣೀಶನು ಬಂದು ವಾರಿವಿ ।
ಹಾರವನ್ನಾರಂಭಿಸಿದನಹಿಮರ್ದನನ ತೆರದೆ. ॥೫೫॥

ಇಳೆಯ ಪಾಲನ ಲಲನೆಯರು ಗಡ । ಹೊಳೆಯ ಮೆಟ್ಟಿಲುಗಳನ್ನು ತ್ವರೆಯಿಂ- ।
ದಿಳಿವ ಕಾಲಕ್ಕವರ ಕೇಯೂರಗಳ ಘಟ್ಟಣದೆ ॥
ಮೊಳೆತ " ಝಳ ಝಳ " ರವಕೆ ಮೇಣ್ಸೊಬಗ । ಪೊಳೆವ ನೂಪುರ ಸಪ್ಪಳಕೆ ಭೂ- ।
ತಲದೆ ಬೆದರಿದ ಹಂಸಗಳು ಜಾನ್ಹಳಕ್ಕೆ ಹಾರಿದವು. ॥೫೬॥

ಓರಗೆಯ ನೃಪದಾರೆಯರು ಒಡಿ- | ವಾರದಿಂ ತಮ್ಮೊಳಗ ರಭಸದೆ ।
ವಾರಿ-ಸೇಚನ ಗೈದು ಕ್ರೀಡಿಪುದನ್ನು ನೌಕೆಯಲಿ ॥
ಧಾರುಣೀಶನು ಕುಳಿತು ನೋಡುತ । ಚಾರು ಚಾಮರವನ್ನು ಬೀಸುವ ।
ನಾರಿಯೊಂದಿಗೆ ಯಿಂತು ಪರಿ ಮಾತಾಡಲೆಸಗಿದನು ||೫೭॥

ಎಲೆ ಕಿರಾತಿಯೆ ನೋಡು ನೋಡೀ- | ಸಲಿಲದೊಳಗವಗಾಹ ಮಾಡುವ |
ಲಲನೆಯರ ಲಲಿತಾಂಗ ರಾಗವು ಬೆರೆತು ಸರಯುವಿನ ॥
ಜಲವು ಸಂಧ್ಯಾಕಾಲದಲ್ಲಿಯ । ಜಲದದಿಂ ಕೂಡಿರುವ ಸಲೆ ಬಾಂ ।
ದಳದ ನಾನಾ ತೆರದ ವರ್ಣವ ತಾಳಿ ಪೊಳೆಯುವದು ॥೫೮॥

ತರಣಿ ತರಣವೆ ದೊರೆತ ಧಕ್ಕೆಗೆ | ಸರಿದ ಸಲಲದೆ ನನ್ನ ಯಂತಃ- ।
ಪುರದ ತರುಣೀ ಜನರ ಕಣ್ಗಳ ಕಜ್ಜಲವು ತೊಳೆದು ॥
ಮರಳಿಯಾ ತಾಣದಲಿ ಯಾಗಲೆ । ಯರುಣ ವರ್ಣದ ಪರಮ ಪರಮೆಯು ।
ಸ್ಥಿರತೆಯನು ಪಡೆಸೆನ್ನ ಮನಸಿಗೆ ಹರುಷಗೊಡುತಿಹುದು. ॥೫೯॥

ಗುರು ನಿತಂಬ ಪಯೋಧರಂಗ - । ಭರದೆ ಸಂಬರನೊಳಗೆ ಬಿನ್ನಯ ।
ಪರಮ ಪ್ರಿಯಕರರಾದ ನಾರೀ ಜನರು ಶ್ರಮದಿಂದ ॥
ಕರಗಳಿಂ ನೀರ್ಕಡಿದು ಮೇಲಕೆ । ಧರಿಸಿ ತಮ್ಮ ಶರೀರಗಳನುರೆ ।
ತರಿಸುವರು ಜಲಕೇಲಿ ಪರವಶರಾಗಿ ಹರುಷದಲಿ. ||೬೦||

ಭರದೆ ಈಜೀಸುತ್ತಿರುವ ನನ್ನಯ | ತರುಣಿಯರ ಕರ್ಣಗಳೊಳಿರಿಸಿದ ।
ಸಿರಿಸಲದ ಮರದರಳುಗಳ ಸರಸಾದ ಹಾರಗಳು ॥
ಹರಿದು ನೀರೊಳು ಹರಿಯೆ ಮೀನ್ಗಳು | ತ್ವರಿತದಲಿ ಶೈವಾಲವೆಂದುರೆ ।
ಮರುಳು ಗೊಂಡಲ್ಲಿರದೆ ಬರುವವು ನೋಡು ಮಾನಿನಿಯೇ. ||೬೧||

ನಲವಿನಿಂ ನಳಿನಾಕ್ಷಿಯರು ಕರ- । ತಲಗಳಿಂ ಜಲವನ್ನು ಬೊಡಿಯ ।
ಲ್ಕುಲುಕಿ ಮೇಲಕೆ ಪುಟಿದು ಮುತ್ತುಗಳನ್ನು ಸ್ಪರ್ಧಿಸುವ ॥
ಜಲದ ಹನಿಗಳು ಬಾಲೆಯರ ಬ- । ಲ್ಮೊಲೆಗಳನು ಸಲೆ ಮುಸುಕಿಯಲ್ಲಿಯು ।
ಲಲಿತ ಮುಕ್ತಾಫಲಗಳುದುರುವದನ್ನು ಮರೆಸಿಹವು. ।೬೨||

ಕೇಳಿ ತತ್ಪರರಾದ ನನ್ನೀ- । ಬಾಲೆಯರ ಸುಳಿನಾಭಿಗಳಿಗೆ ವಿ- ।
ಶಾಲವಾದಾವರ್ತಗಳು, ಚಲುವಾದ ಭ್ರೂಗಳಿಗೆ ॥
ಲೋಲವಾದ ತರಂಗಗಳು, ಬಲು । ಸ್ಥೂಲ ಕುಚಯುಗಗಳಿಗೆ ಸುಂದರ ।
ಗಾಲಿಘುಂಗವ ವಕ್ಕಿಗಳು, ನಿಜವಾಗಿ ಪೋಲುವವು. ॥೬೩॥

ನಾರಿಯರು ಸುಸ್ವರದೆ ಪಾಡುತ । ವಾರಿಯಲಿ ಕರ ಬಡಿದು ಘನಗಂ- ।
ಭೀರ ಸರದಿಂ ಮುರಜರವವನುಕರಣವನು ಮಾಡೆ ॥
ತೀರದಲ್ಲಿಯ ನವಿಲುಗಳು ನಿಜ । ಚಾರು ಬರ್ಹಗಳನ್ನು ಪಸರಿಸಿ ।
ತೋರ ಸಂಭ್ರಮದಿಂದ ನರ್ತನ ಮಾಡಲೆಸಗಿದವು. ॥೬೪॥

ತರುಣಿಯರು ಪರಿಧಾನ ಮಾಡಿದ । ಸರಸ ವಸ್ತ್ರಗಳಿಂಗೆ ಹಚ್ಚಿದ ।
ಸರಿಲದಿಂ ತೊಯ್ದಂಥ ಮುಕ್ತಾಫಲಗಳವು ಕಣ್ಗೆ ॥
ಶರದಿನಲ್ಲಿಯ ಚಂದ್ರರುಚಿಯಾ- । ವರಣದಿಂ ಕೊರಗಿರ್ದ ತೇಜದೆ ।
ಮೆರೆವ ತಾರಾ-ನಿಕರಗಳ ತೆರದಿಂದ ತೋರಿದವು. ॥೬೫॥

ತಟಿನಿಯಲ್ಲೀಜುತ್ತೆ ಕರಸಂ- । ಪುಟದೆ ಕೀಲಾಲವನು ಕೆಲವರು ।
ಪಟುತರಾಂಗಿಯರಾನನಂಗಳ ಮೇಲೆ ಹಾರಿಸಲು ॥
ಹಟದೆ ಪುನರವರಾಗ ದರ್ಪದೆ । ಪುಟಿಸಿ ಜಲಧಾರೆಯನು ಸಖಿಯರ ।
ಕುಟಿಲ ಕೇಶಗಳಿಂದ ನೀರ್ಪನಿಗಳನು ಸುರಿಸಿದರು. ॥೬೬॥

ಜಲವಿಹಾರದೆ ದಣಿದ ನನ್ನಯ । ಲಲನೆಯರ ಫಣೆಗಳಲಿ ಧರಿಸಿದ ।
ತಿಲಕಗಳು ಮೇಣ್ಪೊಸಬಗಿನಿಂ ರಚಿಸಿರ್ದ ಪತ್ರಗಳು ॥
ಅಳಿಸಿದೊಡೆ, ಕಚನಿಚಯರಚನೆಯು । ಲಲಿತಕರ್ಣಾಭರಣಗಳು ಸಲೆ ।
ಗಲಿತ ವಾದೊಡೆಯವರ ಮುಖರುಚಿ ಕೊರಗದಿರ್ದಪುದು ॥೬೭॥

ಸರಸಿಜದ ಪೂದಳಿರುಗಳು ತ- । ನ್ನುರದೆ ಸಿಲುಕಿರುವಂಥ ಕಾಡಿನ ।
ಕರಿಯು ವಶಿಗಳ ಕೂಡ ನೀರೊಳು ಮೀಯುವಂದದಲಿ ॥
ತರಳ ಹಾರಗಳಿಂದ ಶೋಭಿಸು- । ವರಸು ನೌಕಾಯಾನದಿಂದಿಳಿ- ।
ದಿರದೆ ಸ್ತ್ರೀಯರ ಸಹಿತ ವಾರಿ ವಿಹಾರ ಮಾಡಿದನು. ॥೬೮॥

ಸರಸ ಮೌಕ್ತಿಕಮಣಿಗಳೊಂದಿಗೆ । ಪರಮ ಸೋಜ್ವಲವಾದ ನೀಲದ ।
ಹರಳು ಸಂಗತವಾಗಲವುಗಳ ರುಚಿಯು ಬೆಳೆವಂತೆ ॥
ಅರರೆ! ಮೊದಲೆಯೆ ಮಿರುಗುವಂತಹ । ತರುಣಿಯರು ಕುಶನೃಪನ ಜೊತೆಯಲಿ ।
ನಿರತಿಶಯ ಸೌಂದರ್ಯದಿಂ ಕಣ್ಗೆಸೆವು ತೋರಿದರು. ॥೧೯॥

ತರುಣ ಪ್ರಮದಾ ಜನರು ಚಾಮೀ- । ಕರದ ಜೀಕಳಿಗಳಲಿ ವರಕೇ- ।
ಸರದ ದ್ರವವನು ತುಂಬಿ ಪ್ರೇಮದೆ ನೃಪನ ಮೈಮೇಲೆ ॥
ಭರದೆ ಸುರಿಸಲ್ಕವನ ದೇಹವ- । ದರುಣ ಗೈರಿಕೆಯಿಂದ ಸಲಿ ತೊ- ।
ಯ್ದಿರುವ ಗಿರಿವರನಂತೆ ಸುಂದರವಾಗಿ ತೋರಿದುದು. ॥೨೦॥

ಸುರಪನಪ್ಸರಸಿಯರ ಸಂಗಡ । ಸುರರ ಗಂಗಾನದಿಯ ನೀರಲಿ ।
ಪರಮ ವೈಭವದಿಂದ ವಿಹರಿಪ ತೆರದೆ ಕೋಸಲದ ॥
ಧರೆಯಪಾಲನು ತನ್ನಯಂತಃ । ಪುರದ ಪ್ರಮದಾ ಜನರ ಗಡಣದೆ ।
ಸರಸ ಸರಯೂ- ತಟಿನಿಯಲಿ ಜಲಕೇಲಿಯಾಡಿದನು. ॥೨೧॥

ಮುನಿಯಗಸ್ತ್ಯನು ತನಗೆ ಕೊಟ್ಟಿಹ । ಘನ-ಜಯಪ್ರದವಾದ ಕಡಗವ ।
ವನಜನಾಭನು ತನ್ನ ರಾಜ್ಯದ ಕೂಡ ಪ್ರೇಮದಲಿ ॥
ತನುಜಕುಶನಿಗೆ ಯರ್ಪಿಸಿರ್ದುದು । ವನವಿಹಾರದ ಕಾಲದಲಿ ಯಾ- ॥
ತನಿಗೆ ತಿಳಿಯದೆ ಬಿದ್ದು ನೀರೊಳು ಮುಣುಗಿ ಪೋಗಿಹುದು. ॥೨೨॥

ಸರಯುವಿನ ಸಲಿಲದಲಿ ಕೋಸಲ- । ಧರೆಯ ಪಾಲನು ಮಿಂದು ನಂದದೆ ।
ತಿರುಗಿ ಬಂದುಪಕಾರ್ಯದಲಿ ನೇಪಥ್ಯ ರಚನೆಯನು ॥
ಜರುಗಿಸುವ ಸಮಯದಲಿ ಮುನಿಯಿಂ । ದೊರೆದ ಕರಕಂಕಣವು ನೀರೊಳು ।
ಜರಿದು ಬಿದ್ದದ್ದನ್ನು ಗಾಬರಿಯಾಗಿ ನೋಡಿದನು. ॥೨೩॥

ಅರಳುಗಳ ಸರಗಳಲಿ ಮೇಣಾ- । ಭರಣಗಳ ವಿಷಯದಲಿಯೊಂದೇ- ।
ತೆರದ ಭಾವನೆಯುಳ್ಳ ಭೂಪಾಲಕನ ಮನಸಿನಲಿ ।
ಗುರುವಿನಿಂ ದೊರೆದಂಥ ಮೇಣ್ಸ್ವೀ । ರರಿಗಳಸು ಸಂಹನನ ಮಾಡುವ ।
ಕರದ ಕಡಗವು ಕಳೆದುದಕೆ ಬಲು ವ್ಯಸನವಾಗಿಹುದು. ॥೨೪॥

ಕರಿಸಿಯುಂಬಿಗರನ್ನು ಸರಯೂ-। ಸರಿಲದಲಿ ಚೆನ್ನಾಗಿ ಶೋಧಿಸಿ।
ಸರಸ ಕಂಕಣವನ್ನು ತರಲಾಜ್ಞೆಯನು ಕುಶನೃಪನು ॥
ತ್ವರದೆ ಮಾಡಲ್ಕವರು ಶೋಧಿಸಿ। ಮರಳಿ ಪೇಳಿದರೆಲೆ ನೃಪಾಲನೆ।
ದೊರೆಯಲಿಲ್ಲಾ ಕಡಗವೆಂದುಸುರಲ್ಕೆ ನಾಚುವೆವು. ||೭೫॥

ಹುಡುಕಿದೆವು ಬುಡಸೋಸಿ ತಟನಿಯ। ಮಡುವಿನಲಿ ಬಿಡದೆಲ್ಲ ಕಡೆಯಲಿ।
ಪೊಡವಿಯೊಡೆಯನೆ ನಾವು ನಿನ್ನಯ ದಿವ್ಯಕಡಗವನು ॥
ಪಡೆದು ಕೊಳ್ಳದೆ ತಿರುಗಿ ಬಂದೆವು। ಜಡದೆ ನೆಲೆಗೊಂಡಿರುವ ಪನ್ನಗ-।
ದೊಡೆಯ ಕುಮುದನು ಹರಣ ಮಾಡಿಹನೆಂದು ತಿಳಿದಿಹೆವು. ॥೭೬॥

ಜಲದೆ ಮನೆ ಮಾಡಿರುವ ಕುಮುದನು। ಕಳೆದ ಕಡಗವನೊಯ್ದ ವಾರ್ತೆಯ-।
ನಿಳೆಯ ಪಾಲನು ಕೇಳಿ ಮನದಲಿ ತಾಳಿ ಕೋಪವನು ॥
ಹೊಳೆಯ ತೀರಕೆ ಪೋಗಿ ವ್ಯಾಲವ-। ನಳಿವ ಶರವನು ಪೂಡಿ ಚಾಪದೆ।
ಯೆಳೆದು ಶಿಂಜನಿಯನ್ನು ಬಿಡುವದರೊಳಗೆ ತತ್ಕ್ಷಣಕೆ. ||೭೭||

ಸರಯುವಿನ ಗಂಭೀರ ಮಡುವಿನ। ಸರಿಲದೊಳು ಪೇರ್ದೆರೆಗಳೆದ್ದವು।
ಕರೆಯಮೇಲಪ್ಪಳಿಸಿ ಪಿರಿದಾದಂಥ ಗರ್ತದಲಿ ||
ಅರಿಯದೇ ಬಿದ್ದಿರುವ ಮದವೇ-। ರಿರುವ ವನಕರಿಯಂತೆ ಯತಿಶಯ।
ವರುಷ ಸರವನು ಜನಿಸಿ ನರರಿಗೆ ದರವನೊಳಿಸಿದವು. ॥೭೮॥

ಅಸರೆ ಮಂಥನ ಕಾಲದಲಿ ಜಲ-। ಚರಗಳುರೆ ಗಾಬರಿಸಿದಂತಹ।
ಶರಧಿಯಿಂ ಹೊರಟಿರುವ ಶ್ರೀ- ಸುರತರುಗಳಂದದಲಿ ॥
ಸರಯುವಿನ ಹ್ರದದಿಂದ ಮೇಲಕೆ। ಯುರಗ ಕುಮುದನು ಮತ್ತೆಯಾತನ।
ತರುಣಿ ಸುಂದರಿಯಾದ ಸೋದರಿ ಕಣ್ಗೆ ತೋರಿದರು. ॥೭೯||

ಧರಿಸಿ ಕರದಲಿ ತನ್ನ ಕರದಾ-। ಭರಣವನ್ನೈತರುವ ಕಾಕೋ-।
ದರನ ಮೊಗವನು ಕಂಡು ಚಾಪದೆ ಗಾರುಡಾಸ್ತ್ರವನು ॥
ಹರಿಯ ತರಳನು ತಿರುಗಿ ಕೊಂಡನು। ಸರಸ ಚರಿತರ ಸಿಟ್ಟು ತಟ್ಟನೆ।
ಶರಣು ಬಂದವರಲ್ಲಿ ಕರಗುವದೇನು ಸೋಜಗವೋ? ॥೮೦॥

ಪರಮ ವಿಕ್ರಮವುಳ್ಳರಿಪುಮದ- । ಕರಿಗಳಿಗೆ ಹರಿ- ರೂಪಿಯಾದೀ- ।
ಪರಮ ಪುರುಷನ ಪುತ್ರ-ಕುಶ ಭೂವರನ ಪದಗಳಿಗೆ ॥
ಪರಮ ಮಾನಿತನಾದ ಪನ್ನಗ- । ವರನು ಸಾದರದಿಂದ ತನ್ನಯ ।
ಶಿರವ ಬಾಗಿಸಿ ವಿನಯದಿಂದುಸುರಿದನು ವಚನಗಳ. ॥೮೧॥

ಸುರರ ಕಾರ್ಯಕ್ಕಾಗಿ ತಾನವ- । ತರಿಸಿ ಮಾನವದೇಹವನ್ನುರೆ ।
ಧರಿಸಿ ಧರೆಯೊಳು ದುಷ್ಟ ನಿಗ್ರಹವನ್ನು ಮಾಡಿರುವ ॥
ತರಣಿ ಕುಲಮಣಿಯಾದ ರಾಮನ । ತರಳ ನೀನಿರುತಿರುವೆ ಯೆಂದಾ- ।
ನರಿತು ನಿನ್ನಾಭರಣವನ್ನಾನೆಂತು ಹರಿಸುವೆನು ॥೮೨॥

ಕರದೆ ಕಂದುಕವನ್ನು ಪುಟಿಸುತೆ । ಭರದೆ ಕ್ರೀಡಿಪ ನನ್ನ ತಂಗಿಯು ।
ತರಳ ದೃಷ್ಟಿಯು ನಭದ ಕಡೆಗಾಗಿರಲು ಜಲತಲದೆ ॥
ತ್ವರದೆ ಕೇತುವಿನಂತೆ ಮಿರುಗುತೆ । ಬರುವ ಜೈತ್ರಾಭರಣವನ್ನುರೆ ।
ಪರಮ ಕೌತುಕದಿಂದಲಾಕೆಯು ಗ್ರಹಣ ಮಾಡಿದಳು. ॥೮೩॥

ಭಾನುಕುಲ ಸಂಭವನೆ ನಿನ್ನಯ । ಜಾನುವಿನ ಕೆಳವರೆಗೆ ಮುಟ್ಟುವ ।
ಕ್ಷೋಣಿ-ರಕ್ಷಣ-ಕಾರ್ಯದಲಿ ಜ್ಯಾಲಾಂಛನವ ಪಡೆದ ॥
ಪಾಣಿಯಲಿ ಧಾರಣವ ಮಾಡ- । ಲ್ಕಾನು ತಂದಿರುವಂಥ ಕಡಗವ ।
ಸಾನುರಾಗದೆ ನೀನು ಕೊಳ್ಳುವೆಯೆಂದು ಪ್ರಾರ್ಥಿಪೆನು. ॥೮೪॥

ಕರದೆ ನನ್ನಯ ಭಗಿನಿಯತಿಯ- । ಕ್ಕರದೆ ತವ ಕರಕಟಕವನು ಸ್ವೀ- ।
ಕರಿಸಿ ಚರಿಸಿರುವಘದ ಪರಿಮಾರ್ಜನವ ಸಲುವಾಗಿ ॥
ಧರೆಯ ಪಾಲನೆ ನಿನ್ನ ಕರವನು । ಧರಿಸಿ ಚರಣದ ಸೇವೆಯನ್ನಾ- ।
ಚರಿಸಲಿಚ್ಛಿಪಳಿವಳ ಕೋರಿಕೆಯನ್ನು ಪೂರೈಸು. ॥೮೫॥

ಇನಿದು ನುಡಿಗಳನಾಡಿ ಕುಮುದನು । ವಿನಯದಿಂ ನಮನ ಮಾಡಿ ಜನಪನ ।
ಕನಕ-ಮಣಿಮಯ ಕಟಕವನು ಕೊಡಲಾಗ ಕುಶನೃಪನು ॥
ಫಣಧರನೆ ನೀಂಶ್ಲಾಘ್ಯನಿಹೆ ತವ । ಮನಸಿನಂತಾಗುವದು ಕಾರ್ಯವ- ।
ದೆನಲು ಭಗಿನಿಯನರ್ಪಿಸಿದನವನಾಗ ಜನಪತಿಗೆ. ॥೮೬॥

ಪರಮ ಮಾಂಗಲ್ಯೋರ್ಣ-ವಲಯದೆ । ಮೆರೆವ ವಧುವಿನ ದಿವ್ಯಕರವನು ।
ತರಣಿ ಕುಲ-ಸಂಭವನು ಪಾವಕನೆದುರಿನಲಿ ಪಿಡಿಯೆ ॥
ಸುರರು ದುಂದುಭಿಗಳನು ಬಾರಿಸೆ । ಸುರಭಿಯುತಸುಮ ವೃಷ್ಟಿಯನು ಬಹು ।
ಹರುಷದಿಂದಾಗಸದೆ ಮೇಘನು ಭರದೆ ಸುರಿಸಿದನು. ॥೮೭॥
ಹರಿಯ ತರಳನ ಕೂಡ ಪನ್ನಗ- । ವರನು ಸ್ವಸೃ-ಸಂಬಂಧ ಜೋಡಿಸಿ ।
ಗರುಡನಿಂದುಂಟಾಗುವಂತಹ ಭೀತಿಯಿಂದುಳಿದು ॥
ಉರಗಗನ ದರದಿಂದ ಕೋಸಲ- । ಧರೆಯ ಪಾಲನ ಪ್ರಜೆಗಳನ್ನರೆ ।
ನಿರುತದಲಿ ತಾನುಳಿಸಿ ತನ್ನಯ ಸ್ಥಳಕೆ ಸಾಗಿದನು. ॥ ೮೮॥

-॥ ಶ್ರೀಃ ॥-

ರಘುವಂಶ

೧೭ನೆಯ ಸರ್ಗ.

ನಿಶಿಯ ಕೊನೆ-ಭಾಗದಲಿ ಧೀಯ- । ಳ್ಗಿಸೆವ ಪೊಸ ನೈರ್ಮಲ್ಯದಂದದೆ ।
ದಶಮುಖಾರಿಯ ಸ್ನುಷೆ ಕುಮುದ್ವತಿಯುಸಮವಾಗಿರುವ ॥
ಬಸುರಿನಲಿ ಕುಶರಾಜರಾಜನ । ಮಿಸುಪ ವೀರ್ಯದೆ "ಯತಿಥಿ"- ಯೆಂಬೀ- ।
ಪೆಸರಿನಿಂಗಡ ಪ್ರಸವ ಹೊಂದಿದನೋರ್ವ ಸತ್ಸುತನು. ॥೧॥
ಗುಣ-ಗಣಾನ್ವಿತನಾದ ಕುಶನೃಪ- । ತನಯನತಿಥಿಯು ತನ್ನ ಸದ್ವ- ।
ರ್ತನಗಳಿಂ, ದಕ್ಷಿಣದ ಮೇಣುತ್ತರದ ದಿಶೆಗಳನು ॥
ವನಜ-ಮಿತ್ರನು ಬೆಳಗುವಂದದೆ । ಜನನಿ- ಜನಕರ ಕುಲಗಳನು ಪಾ- ।
ವನವ ಮಾಡಿದನಿವನ ಯಶ ಜಗವನ್ನು ವ್ಯಾಪಿಸಿತು. ॥೨॥
ಮೊದಲು ಕುಲದಾಮ್ನಾಯದಂತೆಯೆ । ಸದಮಲಾತ್ಮಕ ಕುಶನೃಪಾಲನು ।
ಮುದದೆ ಮಗನಿಗೆ ಸಕಲವಿದ್ಯೆಗಳನ್ನು ಸಲೆಗಲಿಸಿ ॥
ಚದುರರಾದಭಿಜಾತರಾಜರ । ವಧುಗಳನ್ನರಿಸಿಳೆಯ ಪಾಲನು ।
ವಿಧಿ ವಿಧಾನದೆ ಸುತನ ಮದುವೆಗಳನ್ನು ಮಾಡಿದನು. ॥೩॥
ತನಗೆ ಸರಿಯಾಗಿರುವ ನಾನಾ- । ವಿನಯ-ಶೌರ್ಯೋದಾರ ಗುಣಗಳ- ।
ಗಣಗಳಿಂ ಮಿಗೆ ಮೀರಿ ಮಿನುಗುವ ತನ್ನ ಜಠರದಲಿ ॥
ಜನಿಸಿದಂತಹ ತನಯನನು ಶ್ರೀ- । ವನಜನಾಭನ ತನಯನಾದಾ ।
ಜನಪ-ಕುಶ ತನ್ನಪರ ವಿಗ್ರಹನೆಂದು ತಿಳಿದಿಹನು. ॥೪॥

ಮನುವಿನನ್ವಯದೊಳಗೆ ಜನಿಸಿದ । ಜನಪ ಕುಲದಚ್ಚಿಸದ ಮೇರೆಗೆ- ।
ತನಗೆ ಶಕ್ರನು ಕರೆಯಕಳುಹಲು ಪೋಗಿ ಸಮರದಲಿ ॥
ಘನಪರಾಕ್ರಮದಿಂದ ರಾಜನು । ದನುಜ "ದುರ್ಜಯ"ನನ್ನು ಜೊಡೆದಾ- ।
ತನ ದುರಭಿಭವವಾದ ಶಸ್ತ್ರದೆ ತಾನು ಮಡಿದಿಹನು. ॥೫॥

ಕುಮುದ ಬಾಂಧವನನ್ನು ಕೌಮುದಿ । ಮಮತೆಯಿಂದನುಸರಿಸುವಂದದೆ ।
"ಕುಮುದ"-ಕುಂಭೀನಸನ ಭಗಿನಿಯು ತನ್ನ ಪ್ರಿಯಕರನು ॥
ಸಮರದಲಿ ಮೃತಿಹೊಂದಿ ಸಗ್ಗಕೆ । ಗಮನ ಮಾಡಿದ ಬಳಿಕ ತನ್ನಯ ।
ರಮಣನಿದ್ದೆಡೆಗೈದಿದಳು ಭೂಲೋಕವನು ತ್ಯಜಿಸಿ. ॥೬॥

ಹರಿಯ ತರಳನು ಸಗ್ಗಕೈದಲು । ಸುರರಪತಿ ತನ್ನಾಸನದ ಬದು ।
ಸರಸವಾದರ್ಧಾಂಶವನ್ನಿತ್ತವನ ಮನ್ನಿಸಿದ. ॥
ಹರಿಯ ಸತಿ ಶಚಿದೇವಿಯಾದೊಡೆ- । ನರಪನರ್ಧಾಂಗಿಯನು ತನ್ನಯ ।
ಪರಮ ಸಖಿಯೆಂದೆಣಿಸಿ ಸನ್ಮಾನವನು ಮಾಡಿದಳು. ॥೭॥

ಸಮರಕೈದುವ ಸಮಯದಲಿ ಭೂ-। ರಮಣನಾಜ್ಞಾಪಿಸಿದ ಮೇರೆಗೆ ।
ಸುಮನಸರ ಪುರಕವನು ಸಂಗ್ರಾಮದಲಿ ತಾಂ ಮಡಿದು ॥
ಗಮನ ಮಾಡಲ್ಕವನ ಸಚಿವರು । ಕಮಲನಾಭನ ಪೌತ್ರನಿಗೆ ಸಂ- ।
ಭ್ರಮದೆ ವಿಸ್ತೃತವಾದ ರಾಜ್ಯದ ಪಟ್ಟಗಟ್ಟಿದರು. ॥೮॥

ಹರುಷದಿಂ ರಾಜ್ಯಾಭಿಷೇಕವ- । ನರಸು ಮಗನಿಗೆ ಮಾಡಲಿಚ್ಛಿಸಿ- ।
ಮರುಕಿನಿಂ ತತ್ಪಿತನ ಕಾಲದ ವೃದ್ಧ ಮಂತ್ರಿಗಳು ॥
ಕರಿಸಿ ಶಿಲ್ಪಿಗರನ್ನು ತ್ವರೆಯಿಂ । ಸರಸ ವೇದಿಕೆಯಿಂದ ಮಿರುಗುವ ।
ಪರಮ ವಿಸ್ತೃತವಾದ ಮಂಟಪವನ್ನು ರಚಿಸಿದರು. ॥೯॥

ಭರದೆ ಯಾ ಮಂಟಪದ ಮಧ್ಯದೆ । ಹರಳು ಕೆಚ್ಚಿದ ಸರಸ ಚಾಮೀ- ।
ಕರದ ಗದ್ದುಗೆಯಲ್ಲಿ ಸಾದರದಿಂದ ನರವರನ ॥
ತರಳನನು ಕುಳ್ಳಿರಿಸಿ ಸಚಿವರು । ತರಿಸಿ ತೀರ್ಥೋದಕದ ಕಾರ್ತ- ।
ಸ್ವರದ ಘಟಗಳನಿರಿಸಿ ಯೆರೆಯಲು ಸಿದ್ಧರಾಗಿರಲು; ೧೦॥

ನೊಳಗಿದವು ತತ್ಕ್ಷಣದೆ ಮಂಡಪ- । ದೊಳಗೆ ಘನಗಂಭೀರ ರವದಿಂ ।
ಲಲಿತ ವಾಗಿಹ ಭೇರಿ ಮೊದಲಾದಂಥ ವಾದ್ಯಗಳು ॥
ಇಳೆಯ ಪಾಲಿನಿಗಿದರ ಮೂಲಕ । ಸಲೆ ನಿರಂತರದಲ್ಲಿ ಶುಭಗಳು ।
ಕಳೆಯುವವು ತಾವೆಂದು ಜನರಾಗಲ್ಲಿ ತಿಳಿದಿಹರು. ॥೧೧॥

ಎಳೆಯ ದೂರ್ವಾಂಕುರಯವಾಂಕುರ- । ಗಳನು ಮೇಣರೆ ಬಿರಿದ ಸುಂದರ ।
ನಳಿನ ಪುಷ್ಪಗಳನ್ನು ಚಿನ್ನದ ತಳಿಗೆಯಲ್ಲಿರಿಸಿ ॥
ನಳಿನ ನಾಭನ ಪೌತ್ರನಿಗೆ ಬಲು । ನಲಿವಿನಿಂ ಸ್ವಜ್ಞಾತಿಗಳ ಗಡ ।
ಬೆಳಗಿ ನೀರಾಜನದ ವಿಧಿಯನು ಮುಗಿಸಿ ಬಿಟ್ಟಿವರು. ॥೧೨॥

ಬಳಿಕ ಕುಶ-ತನುಜನಿಗೆ ಸಂತತ । ಗೆಲವು ದೊರೆಯುವದಕ್ಕೆ ಮೊದಲೆಗೆ ।
ಕುಲಪುರೋಹಿತನಿಂದ ಕೂಡಿದ ಹಲವು ಬ್ರಾಹ್ಮಣರು ॥
ಸಲೆಯಥರ್ವಣ ವೇದ ಮಂತ್ರಂ- । ಗಳನು ಪಠಿಸುತ ಪರಮ ಪಾವನ ।
ಜಲದೆ ಯಭಿಷೇಚನದುಪಕ್ರಮವನ್ನು ಮಾಡಿದರು. ॥೧೩॥

ಸ್ಮರನ ಭಸ್ಮೀಕರಿಸಿದಂತಹ । ಗಿರಿಜೆಯಾಣ್ಮನ ಶಿರದೆ ಭರದಿಂ ।
ಹರಿವ ಗಂಗಾಜಲವು ಭೋರ್ಗರೆಯುತ್ತೆ ಭೂತಲಕೆ ॥
ಬರುವ ತೆರದಿಂ ಕುಶನೃಪಾಲನ । ತರಳನಭಿಷೇಚನದ ಸಲಿಲವು ।
ಧರೆಯಮೇಲ್ಬಿದ್ದಾಗ ಮನುಜರಿಗೆಸೆದು ತೋರಿದುದು ॥೧೪॥

ಜಗಸಮೆ ಕಣ್ಗೆಸೆವ ಸುಂದರ । ಮೇಘವನು ಕಂಡಿರದೆ ಚಾತಕ ।
ಪೂಗಗಳು ಬಹು ಪ್ರೇಮದಿಂ ಧ್ವನಿಗೈಯ್ವ ತೆರದಿಂದ ॥
ರಾಘವನ ಘನಕೀರ್ತಿಯನ್ನನು- । ರಾಗದಿಂದಾಗಲ್ಲಿ ಕೂಡಿದ ।
ಮಾಗಧರು ಸಲೆ ಪಾಡಿ ಜನಕಾನಂದ ಬಡಿಸಿದರು. ।೧೫॥

ಇಳೆಯ ಮೇಲ್ಮಳೆಬಿದ್ದು ಜಾಸ್ವಳ- । ದೊಳಗೆ ಬೆಳಗುವ ವೈದ್ಯುತಾಗ್ನಿಯು ।
ಹೊಳೆಯುವೋಪಾದಿಯಲಿ ಮಂತ್ರೋದಕದೆ ಸಲೆ ಮಿಂದು ॥
ನಳಿನನಾಭನ ಪೌತ್ರಸತಿಥಿಯು । ಲಲಿತವಾಗಿರುವಂಥ ತೇಜದೆ ।
ಬೆಳೆದು ಥಳ ಥಳ ಮಿನುಗಿ ಕಣ್ಗಾನಂದಗೊಟ್ಟಿಹನು. ॥೧೬॥

ನರಪನಭಿಷೇಚನವು ತೀರಲು | ಕರಿಸಿ ಸ್ನಾತಕರನ್ನು ತನ್ನಯ ।
ಸರಿಸದಲಿ ಬಹು ಮೌಲ್ಯರತ್ನಾಭರಣಗಳನಿತ್ತು ॥
ಪರಮ ಸಾದರದಿಂದಲವರ- । ಧ್ವರಕೆ ಮೇಣ್ದಕ್ಷಿಣೆಗೆ ಕಿಂಚಿತ್ ।
ಕೊರತೆ ಬೀಳದ ಹಾಗೆ ಪುಷಳ ವಿತ್ತವನು ಕೊಟ್ಟ. ॥೧೭॥

ಹರುಷದಿಂ ಪಾರುವರು ಕೋಸಲ- । ಧರೆಯುಪಾಲನಿಗಾಗ ಪ್ರೇಮದೆ ।
ಹರಸಿದರು ತತ್ಫಲದ ಪ್ರಾಪ್ತಿಗೆ ಯವಸರವನವಸು ॥
ಚರಿಸಿದಂತಹ ಪೂರ್ವ ಕರ್ಮದ | ಸರಸ ಫಲಗಳು ಫಲಿಸಿ ಮುಂಚಿಗೆ ।
ದೊರೆಯುದಂತೆಯೆ ಮಾಡಿ ಬಿಟ್ಟಿಹವೇನು ಪೇಳುವೆನು. ॥೧೮॥

ಬಂಧನದ ಗೃಹದಿಂದ ನಂತರ । ಬಂದಿ ಜನರನು ಮತ್ತೆ ಪರರನು ।
ಕೊಂದು ಮರಣದ ತಕ್ಕ ಶಿಕ್ಷೆಯ ಹೊಂದಿದವರನ್ನು ॥
ಸುಂದರಾಂಗನು ಮೋಚಿಸಿದನೆಳೆ- | ಗಂದಿಯಾವಿನ ದೋಹನಕೆ ಪತಿ ।
ಬಂಧವನು ಮಾಡಿಸಿದನಾಗಲೆ ಪರಮ ಮೋದದಲಿ. ॥೧೯॥

ಕಲಿಸಿ ಮಾತುಗಳನು ಪಂಜರ- । ದೊಳಗೆ ಸಲಹಿದ ಪಂಚವರ್ಣದ ॥
ಗಿಳಿಗಳನು ಮೇಣಿತರ ಕ್ರೀಡಾ ಪತ್ರರಥಗಳನು ॥
ನಳಿನ ಲೋಚನನಾದ ಕೋಸಲ- । ದಿಳೆಯ ಪಾಲನು ಬಂಧನದೆ ಬಲು- ।
ನಲವಿನಿಂ ಮೋಚಿಸಿದನವು ಬಾನ್ದಳಕೆ ಹಾರಿದವು. ॥೨೦॥

ಮನೆಯ ಕಕ್ಷಾಂತರದೆ ಸುಂದರ । ಕನಕ-ಮಣಿ-ಗಣದಿಂದ ರಚಿಸಿದ ।
ಘನ ಮನೋಹರವಾದ ಸ್ವಚ್ಛಾಸ್ತರಣ ಹಾಸಿರುವ ॥
ಮಿನುಗುವಂತಹ ಪೀಠದಲಿ ತಾಂ । ವನಜ ನಯನನು ಕುಳಿತು ಸೇವಕ- ।
ಜನರ ಕರದಿಂದುಡುಗೆ ಧಾರಣ ಮಾಡಲೆಳಸಿದನು. ॥೨೧॥

ಹರನ ರಿಪು ಮನ್ಮಥನ ಪೋಲುವ । ಹರಿಯ ತರಳನ ತರಳನತಿಥಿಯು ।
ಶಿರದ ಕುರುಳುಗಳನ್ನು ಧೂಪದೆ ಶುಷ್ಕಗೈದಿರಲು ॥
ಸರಸ ವಸ್ತ್ರಾಭರಣಗಳನುಡೆ । ಸಲಿಲದಿಂ ತೊಳೆದಿರುವ ಕರದಲಿ ।
ಧರಿಸಿ ರಾಜನ ಸರಿಸದಲಿ ನಿಂತಿಹರು ಪರಿಜನರು. ॥೨೨॥

ಧರೆಯಪಾಲನ ಕುರುಳುಗಳನುರೆ। ಕರದೆನೇವರಿಸುತ್ತೆ ಸುಮಗಳ।
ಸರಗಳನು ಮೌಳಿಯಲಿ ಹಾಕಿದ ಮೇಲೆ ಪರಿಜನರು ॥
ಪರಮ ಕುಶಲತೆಯಿಂದ ಶೋಣಿತ। ಹರಳುಗಳ ಬೆರೆಸಿರ್ದ ಮುತ್ತಿನ।
ಮಿರುಗುವಂತಹ ಹಾರಗಳನಿರಿಸಿದರು ಸರಿಯಾಗಿ. ॥೨೩॥

ಬಳಿಕ ಮೃಗಮದವನ್ನು ಕಲಿಸಿದ। ಮಲಯಜದ ಚಂದನದ ಗಂಧವ-।
ನಿಳೆಯ ಪಾಲನ ಮೈಗೆ ತೀಡಿದ ಮೇಲೆ ಪರಿಜನರು ॥
ಪೊಳೆವ ಗೋರೋಚನದ ಸುಂದರ। ತಿಲಕವನು ಸುವಿಶಾಲ ಭಾಲದೆ।
ಲಲಿತ ಪತ್ರಗಳನ್ನು ರಚಿಸಿದರವನ ಮೈಮೇಲೆ. ॥೨೪॥

ಕೊರಳಿನಲಿ ಬಲು ಬಲಿತ ಮುತ್ತಿನ। ಮಿರುಗುವಂತಹ ಹರಳು ಕೂಡಿದ।
ಸರಗಳನು ಮೇಣ್ಕರದೆ ಕಂಕಣವನ್ನು ಧರಿಸಿರುವ ॥
ಪರಮ ವಿಸ್ತೃತವಾದ ರಾಜ್ಯದ। ಸಿರಿಯ ಪಾಣಿಗ್ರಹಣ ಮಾಡಿದ।
ನರಪ- ಚೂಡಾ ಮಣಿಯು ತರಣಿಯ ತೆರದೆ ಮಿನುಗಿದನು. ॥೨೫॥

ಮೇರುಗಿರಿವಿಸ್ತರದೆ ಮೆರೆಯುವ। ಪಾರಿಜಾತದ ಮರದ ನೆರಳವು।
ಸೂರ-ದರ್ಪಣದಲ್ಲಿ ತೋರುವ ತೆರದೆ ಕೋಸಲದ॥
ಧಾರುಣೀಶನ ರೂಪ- ಛಾಯೆಯು। ಚಾರು ಕನಕಾದರ್ಶದಲಿ ಸಲೆ।
ತೋರಿ ಶೋಭೆಯ ತಾಳ್ದು ಮನಕಾನಂದಗೊಟ್ಟಿಹುದು. ॥೨೬॥

ಇಳೆಯ ಪಾಲನು ಕುಳಿತು ರಥದಲಿ। ಲಲಿತ ತೌರ್ಯತ್ರಿಕಗಳಿಂ ಮೇಣ್।
ಪೊಳೆವ ಚಾಮರ-ಛತ್ರ-ವೇತ್ರಗಳಿಂದಲೊಡಗೂಡಿ ॥
ತುಲನೆಯಲಿ ದೇವೇಂದ್ರಸಭೆಯನು। ಹಳಿವ ತನ್ನೋಲಗದ ತಾಣಕೆ।
ನಲಿವಿನಿಂ ವೈತಾಲಿಕರ ಜಯರವದೊಳೊದಗಿದನು. ॥೨೭॥

ಇಳಿದು ರಥದಿಂ ಬಳಿಕ ಮೆಲ್ಲನೆ। ಕುಲಪರಂಪರೆಯಿಂದ ಬಂದಿ-।
ರ್ದಿಳೆಯ ಪಾಲರ ಮೌಳಿ ಮಣಿಗಣದಿಂದ ಶೋಭೆಯನು ॥
ತಳೆದ ಸಿಂಹಾಸನದ ಮೇಲ್ಬಲು। ನಲಿವಿನಿಂ ನಡೆತಂದು ರಾಜನು।
ಕುಳಿತುಕೊಂಡನು ಸಭಿಕರವನಿಗೆ ಪ್ರಣತಿ ಮಾಡಿದರು. ॥೨೮॥

ಪರಮ ಮಂಗಲಧಾಮನರಹರಿ- । ಯುರದಿ ಶ್ರೀ ಶ್ರೀವತ್ಸಲಾಂಛನ- ।
ವಿರುವ ಸ್ಥಳದಲಿ ಕೌಸ್ತುಭದ ಮಣಿ ಮಿರುಗುವಂದದಲಿ ॥
ನರಪತಿಯ ಶ್ರೀವತ್ಸಗೃಹದಂ- । ತರದಿ ರಚಿಸಿದ ಹೇಮಮಯವಿ- ।
ಷ್ಟರದಿ ಕುಳಿತಾಗತಿಥಿಯರಸನ ಕಾಂತಿ ತೋರಿದುದು. ॥೨೯॥

ಚಿಕ್ಕತನವನು ದಾಂಟಿದಾಗಲೆ । ತಕ್ಕ ಯುವರಾಜ್ಯವನು ವಹಿಸದೆ ।
ಸಿಕ್ಕ ಸಾಮ್ರಾಜ್ಯವನು ಭೋಗಿಸುವಂಥ ನರವರನು ॥
ಚಿಕ್ಕ ರೇಷೆಯ ಹೊಂದಿ ಚಂದ್ರನು । ಮಿಕ್ಕಿ ಮಧ್ಯಾವಸ್ಥೆಯನು ಗಡ- ।
ಪಕ್ಕನೇ ಸಾಮಗ್ರ್ಯತಾಳ್ದಂತೆಸೆದು ತೋರಿದನು. ॥೩೦॥

ಗಗನದೊಳು ಝಗಝಗನೆ ಬೆಳಗುವ । ಮೃಗದ ಲಾಂಛನದಂತೆ ಮಿನುಗುವ ।
ರಘುವಿನನ್ವಯದೊಳಗೆ ಜನಿಸಿದ ಕುಶನೃಪಾಲಕನ- ॥
ಮಗನು ನಸುನಗುನಗುತೆಯುಪಜೀ- । ವಿಗಳ ಸಂಗಡ ಮಾತನಾಡುತೆ ।
ಜಗದ ವಿಶ್ವಾಸಕ್ಕೆ ಸಲೆ ತಾಂ ಪಾತ್ರನಾಗಿಹನು. ॥೩೧॥

ಸುರಪನೈರಾವತಕೆ ಸರಿಯಾ- । ಗಿರುವ ದ್ವಿರದವನೇರಿ ಮೆರೆಯುವ ।
ಹರಿಯ ವೈಭವದಂಕ ಸಿರಿಯುಳ್ಳಿಳೆಯ ಪಾಲಕನ ॥
ಪುರವು ಕಲ್ಪದ್ರುಮದ ತೆರದಲಿ । ವರ ಪತಾಕೆಗಳಿಂದ ಶೋಭಿಸಿ ।
ಸುರರ ಪುರ ಧರೆಗಿಳಿದು ಬಂದಿರುವಂತೆ ತೋರಿದುದು. ॥೩೨॥

ಹರಿಯ ಪೌತ್ರನ ಶಿರದ ಮೇಲ್ಹಿಮ- । ಕರನ ಕರದಂತೆಸೆವ ಸಿತ ಛ- ।
ತ್ರರಿಗೆ ಯಮುಲಕ್ಷ್ಮಿಕ್ಕೆ ಮುಂಚೆಗೆ ಗತಿಸಿ ಪೋಗಿರುವ ॥
ತರಣಿಕುಲ ಸಂಭವ ನೃಪಾಲನ । ವಿರಹ ಸಂತಾಪವನು ಲೋಕಕೆ ।
ಮರಿಸಿಯೊಂದೇ ಸಮಯದಲಿ ಸಂತಸವ ನಿತ್ತಿಹುದು ॥೩೩॥

ಹರಡಿಕೊಂಡಿರುವಂಥ ಧೂಮದೆ । ಯುರಿವ ವೈಶ್ವಾನರನ ಶಿಖೆಗಳು ।
ತರಣಿಯುದಿಸಿದ ಮೇಲೆಯಾತನ ಕಿರಣಗಳು ಪಿಂತೆ ॥
ಹೊರಡುವವು ತೇಜಸ್ವಿಗಳಲೀ- । ತೆರದ ವೃತ್ತಿಯುದಿರಲು ನರಪನ ।
ಸರಸ ಗುಣಗಳ ಕೂಡ ತೇಜಸ್ವಿತೆಯು ಪ್ರಕಟಿಸಿತು ॥೩೪॥

ಪುರದ ವೀಥಿಗಳಲ್ಲಿ ಚರಿಸುವ । ಧರೆಯ ಪಾಲಕನನ್ನು ಸ್ತ್ರೀಯರು ।
ತರಳ ನೇತ್ರಗಳಿಂದ ಧ್ರುವನನು ಹೈಮರಾತ್ರಿಗಳು ॥
ಸರಸ ತಾರೇಕ್ಷಣಗಳಿಂದರೆ । ನಿರಕಿಸುವ ತೆರದಿಂದ ಹರುಷದಿ ।
ನಿರತಿಶಯವಾಗಿರುವ ಮರುಕದೆ ಬಿಡದೆ ನೋಡಿದರು ॥೩೫॥

ಪರಮ ವಿಸ್ತೃತವಾದಯೋಧ್ಯಾ- । ಪುರದ ದೇವಾಲಯಗಳಲ್ಲಿಯು ।
ಸರಸ ಮೂರ್ತಿಗಳಲ್ಲಿಯರ್ಚನೆಯಿಂದ ಬಂದಿರುವ ॥
ಅರರೆ ಸಾನ್ನಿಧ್ಯಾತಿಶಯದಿಂ । ಹರಿಹರಾದಿ ಪ್ರತಿಮೆಗಳು ನರ ।
ವರನನುಗ್ರಹದಿಂದ ಕಾಪಾಡಿದವು ನಿರುತದಲಿ ॥೩೬॥

ನರಪನಭಿಷೇಚನದ ಸಲಿಲದೆ । ಧರೆಯು ತೊಯ್ದಿರುವಂಥ ಭಾಗವು ।
ಮರಳಿಯೊಣಗುವಕಿಂತ ಮುಂಚೆಯೆ ಸಾಗರಾಂಬರೆಯ ॥
ವರೆಗೆ ಕೋಸಲದೇಶದೊಡೆಯನ । ಪರಮ ದುಸ್ಸಹವಾದ ತೇಜವು ।
ಹರಡಿಕೊಂಡಿತು ರಿಪುಗಳೆಲ್ಲರು ತ್ವರದೆಯಡಗಿದರು. ॥೩೭॥

ಹರಿಯ ಕರುಣೆಗೆ ಪಾತ್ರನಾದಾ- । ಗುರುವಸಿಷ್ಠನ ಸದುಪದೇಶಕೆ ।
ಹರಿಯ ಪೌತ್ರನ ವ್ಯರ್ಥವಾಗದ ಶರದ ಬಲುಮೆಯದು ॥
ಅರರೆ ಕೂಡಿರುವಂಥ ಭಾಗ್ಯದ । ಧರೆಯ ವರನಿಗೆ ಮೂರು ಲೋಕದೆ ।
ದೊರೆಯದಂತಹ ವಸ್ತುಜಾತಗಳೆಂತು ತೋರುವವೊ? ॥೩೮॥

ಭೇದಭಾವವನರಿಯದಂತಹ । ವೇದ ಶಾಸ್ತ್ರಗಳನ್ನು ಬಲ್ಲವ- ।
ರಾದ ಸಭಿಕರ ಮಧ್ಯದಲಿ ತಾಂ ಕುಳಿತು ಪ್ರತಿದಿನದೆ ॥
ಮೇದಿನಿಯ ಪತಿಯಲಸವಿಲ್ಲದೆ । ವಾದಿಜನರಲ್ಲಿರ್ದ ವಾದದ ।
ಶೋಧ ಮಾಡಿದ ಮೇಲೆ ನಿರ್ಣಯಗಳನು ಕೊಡುತಿಹನು. ॥೩೯॥

ದಿನದ ಕಾರ್ಯಗಳನ್ನು ಜರುಗಿಸಿ । ಜನಪ ಚೂಡಾಮಣಿಯು ನಂತರ ।
ಮನಸಿನಿಂದುಪಜೀವಿಗಳ ವಿಜ್ಞಪ್ತಿಯನು ಕೇಳಿ ॥
ತನುಜನಾಕಾಂಕ್ಷೆಯನು ತಪ್ಪದೆ । ಜನಕನೀಯುವ ತೆರದಿ ಯಾಗಲಿ ।
ಘನತೆಯಿಂದವರಿಚ್ಛಿತಾರ್ಥವನಿತ್ತು ಸಲುಹುವನು. ॥೪೦॥

ಮೊದಲು ನಭಮಾಸದಲಿ ಪೆಚ್ಚಿದ । ನದಿಗಳುದಕಕೆ ಭಾದ್ರಪದದಲಿ ।
ಯಧಿಕ ಸಂಬರ ಭರವು ದೊರೆಯುವ ತೆರದೆ ಕುಶನೃಪನು ॥
ಮುದದೆ ಪ್ರಜೆಗಳ ಭೂತಿ ಬೆಳೆಸಿ । ರ್ದದಕೆ ತತ್ತನು ಜ್ಞಾತಸತಿಥಿಯು ।
ಚದುತರತನದಿಂಧಿಕತರ ಭರಣವನು ಮಾಡಿಹನು. ॥೪೧॥

ತಾನು ನುಡಿದಿರುವಂಥ ಸೂನೃತ । ವಾಣಿಯನು ಪುಸಿಮಾಡದಂತಹ ।
ದಾನವಿತರಿಸಿ ತಿರುಗಿಕೊಳ್ಳದ ಸತ್ಯಸಂಗರನು ॥
ಹಾನಿಗೊಳಿಸಿದ ರಿಪುಗಳನು ಬಹು । ಮಾನದಿಂ ಪುನರವರ ರಾಜ್ಯದ ।
ಸ್ಥಾನದಲಿ ಸ್ಥಿರಪಡಿಸಿ ವ್ರತಭಂಗವನು ಗಳಿಸಿಹನು. ॥೪೨॥

ರೂಪ-ಬಲ-ಕುಲಗಳಲಿಯೊಂದೇ । ಪ್ರಾಪಿಸಿದ ನರನಲ್ಲಿ ಜಗದೊಳು ।
ತಾಪ ಕಾರಣವಾದ ಗರ್ವವು ಸೇರಿಕೊಳ್ಳುವುದು ॥
ಈ ಪರಾಕ್ರಮಿಯಾದ ಕೋಸಲ । ಭೂಪತಿಲಕನಿಗೆಲ್ಲಗುಣಗಳು ।
ಶ್ರೀಪ ಕೃಪೆಯಿಂದೊರೆದರೂ ಮದ ತಾಳಲಿಲ್ಲವನು. ॥೪೩॥

ಎಳೆಯ ಪಾದಪ-ಮೂಲಗಳು ಭೂ- । ತಲದೊಳಿಳಿವದು ದೃಢತೆಯನು ಗಡ ।
ತಳೆದು ಬಲಿತಿರುವಂತೆ ಕೋಸಲದಿಳೆಯ ಪಾಲಕನು ॥
ಎಳೆಯ ಪ್ರಾಯದೊಳೆಲ್ಲಪ್ರಜೆಗಳ- । ನೊಲವಿನಿಂ ಪೊರೆವವರ ಪ್ರೇಮವ ।
ಗಳಿಸಿ ಯಾತನು ರಿಪುಗಳಿಗೆ ದುರ್ದರ್ಷ್ಯನಾಗಿಹನು. ॥೪೪॥

ಹೊರಗಿನರಿಗಳು ದೂರದಲ್ಲಿರು- । ತಿರುವ ಮೂಲಕ ಮೊದಲೆ ಭೂಮಿಯ ।
ವರನು ತನ್ನಂತರದ ಷಡ್ರಿಪುಗಳನು ಜಯಿಸಲ್ಕೆ ॥
ಗುರುವಿನುಪದೇಶವನು ಕೊಂಡಾ- । ದರದೆಯಭ್ಯಾಸವನು ಮಾಡುತೆ ।
ನಿರತಿಶಯ ವಿಕ್ರಮದೆ ಜಯವನು ಪಡೆದುಕೊಂಡಿಹನು. ॥೪೫॥

ಒರೆಯ ಗಲ್ಲಿನ ಮೇಲೆ ಯೊರೆಸಿದ । ಸರಸ ಚಾಮೀಕರದ ರೇಷೆಯು ।
ಸ್ಥಿರತೆ ಗೊಂಡಲ್ಲಿರುವ ತೆರದಿಂ ಹರಿಯ ಶ್ರೀ ಸತಿಯು ॥
ಪರಮ ಚಂಚಲೆಯಾದರೂ ಗಡ । ಪರರಿಗುಪಕಾರವನು ಮಾಡುವ ।
ನರ ಶಿರೋಮಣಿಯಲ್ಲಿ ಪ್ರೇಮದೆ ವಾಸ ವಾಗಿಹಳು. ॥೪೬॥

ಶೂರತನವಿಲ್ಲದ ಸು- ನೀತಿಗೆ । ಭೀರುತನವೆಂದುಸಿರುವರು ಮೇಣ್ ।
ಚಾರು ನೀತಿಯನುಳಿದ ಶೌರ್ಯಕೆ ಕ್ರೌರ್ಯವೆನ್ನುವರು. ॥
ತಾರತಮ್ಯವನರಿತ ಕೋಸಲ- । ಧಾರುಣಿಯ ಪರನುಭಯ ಗುಣದಾ- ।
ಧಾರದಿಂ ಸಂಸಿದ್ಧಿಯನು ಸಲೆ ಪಡೆದು ಕೊಂಡಿಹನು. ॥೪೭॥

ವಿಗತ ಮೇಘಗಳುಳ್ಳ ಮುಗಿಲೊಳು । ಝಗನೆ ಬೆಳಗುವ ರವಿಗೆ ಗದಿರದೆ ।
ಜಗದೊಳಾಗುವ ಕೃತ್ಯಗಳು ಮಾಜಿರದ ತೆರದಿಂದ ॥
ಅಗಣಿತ ಪ್ರಣಿಧಿಗಳ ಯೋಗದೆ । ಸುಗುಣ ಚೂಡಾಮಣಿಗೆ ಕಿಂಚಿತ್ ।
ಸಿಗದ ವಾರ್ತೆಗಳಿಲ್ಲ ರಾಜ್ಯದೆ ಕಾಣದಿರ್ದಪವು. ॥೪೮॥

ಧರೆಯ ಪರರಿಗೆ ಯೋಗ್ಯವಾದಾ- । ಚರಣವೆಂದುರೆ ಧರ್ಮಶಾಸ್ತ್ರದೆ ।
ಯರುಹಿದಂತೆಯೆ ರಾತ್ರಿದಿನಗಳ ಸರ್ವಕಾಲದಲಿ ॥
ಪರನು ನಂಬುಗೆಯಿಂದ ಮರೆಯದೆ । ತರಣಿ ಕುಲಮಣಿಯಾದ ರಾಜನು ।
ನಿರುತದಲಿ ಯಾಚರಿಸಿ ಶ್ರೇಯಸ್ಸನ್ನು ಗಳಿಸಿಹನು. ॥೪೯॥

ಧೀರ ಪರಮೋದಾರ- ಸದ್ಗುಣ- । ವಾರಿಧಿಯು ಪ್ರತಿದಿನದೆ ರಹದಲಿ ।
ಸಾರವಿನ್ಮಂತ್ರಿಗಳ ಸಂಗಡ ನೀತಿ- ವಿಷಯದಲಿ ॥
ದ್ವಾರ ಗೋಪನ ಮಾಡಿ ತಮ್ಮೊಳು । ಬಾರಿ ಬಾರಿಗೆ ಮಾಡಿದಂಥ ವಿ- ।
ಚಾರ-ವಾರ್ತೆಯು ಬೇರೆ ಜನರಿಗೆ ತಿಳಿಯದಿರ್ದಪುದು. ॥೫೦॥

ಮಾನವಾಧೀಶ್ವರನು ತನ್ನಯ । ಜಾನಪದದಲಿ ದೂರದಲ್ಲಿಹ ।
ಸ್ಥಾನದಲಿ ನಡೆದಿರುವ ಸಂಗತಿಗಳನು ತಿಳಿಯಲ್ಕೆ ॥
ತಾನು ನಿಯಮಿಸಿದಂಥ ಚಾರರ । ಜಾಣತನದಿಂದೆಲ್ಲ ವಾರ್ತಾ- ।
ಜ್ಞಾನವನು ಮಲಗಿರ್ದರೂ ಸರಿಯಾಗಿ ಗಳಿಸುವನು. ॥೫೧॥

ದ್ವಿರದಗಳ ಶಿರಗಳನು ಸೀಳುವ । ಪರಮ ವಿಕ್ರಮವುಳ್ಳ ಹರಿಯದು ।
ಗಿರಿಯ ಗಹ್ವರದಲ್ಲಿ ಮನೆ ಮಾಡಿರುವ ತೆರದಿಂದ ॥
ಅರಿಗಳನು ತರಿದೊಗೆದು ಚಲ್ಲುವ । ಧರೆಯ ಪಾಲನು ತನ್ನ ರಾಜ್ಯದೆ ।
ಪರಮ ದುರ್ಗಮವಾದ ದುರ್ಗಗಳನ್ನು ರಚಿಸಿಹನು ॥೫೨॥

ಇಳೆಯ ಗರ್ಭದೆ ಪುಟ್ಟ ಶಾಲಿಯು। ಜಲದೆ ಪೋಷಣಗೊಂಡು ಸುಂದರ।
ಫಲಗಳನು ಸಲೆಯೀಯುವಂದದೆ ತನ್ನ ಮನಸಿನಲಿ॥
ಇಳೆಯ ಪಾಲನು ಗೊತ್ತು ಪಡಿಸಿದ। ಕೆಲಸಗಳ ಸುವಿಚಾರದಿಂದುರೆ।
ಫಲಿಸುವಂತೆಯೆ ಮಾಡಿ ನಂತರ ಹೊರಗೆ ಕೆಡುಹುವನು. ॥೫೩॥

ಪಾರವಿಲ್ಲದ ನೀರು ಪಾರಾ-। ವಾರದಲಿ ಬಹು ಬೆಳೆವರೂ ನಿಜ।
ಮೇರೆ ಮೀರದೆ ನದಿಯು ಮುಖದಲಿ ಸೇರುವಂದದಲಿ॥
ಚಾರು ವೈಭವದಲ್ಲಿ ಕೋಸಲ-। ಧಾರುಣೀಶನು ಬೆಳೆವರೂ ಸುವಿ-।
ಚಾರದಿಂ ಸನ್ಮಾರ್ಗವನು ಸ್ವೀಕರಿಸಿ ವರ್ತಿಪನು. ॥೫೪॥

ಜನರ ಪುಂಡಾಟವನು ಖಂಡಿಸ-। ಲಿನ ಕುಲೋದ್ಭವ ನೃಪತಿ ಚೂಡಾ।
ಮಣಿಯು ವಿಕ್ರಮದಿಂದ ಕ್ಷಮನಾಗಿರ್ದರೂ ತನ್ನ॥
ಪ್ರಣಯದಿಂ ಕೂಡಿರ್ದ ಪ್ರಜೆಗಳ। ಮನದ ಸಂತಾಪಕ್ಕೆ ನಿಜ ಕಾ-।
ರಣವನೀಯದಲವರ ಸಂರಕ್ಷಣೆಯ ಮಾಡಿಹನು. ॥೫೫॥

ಬಲಿತ ಗಾಳಿಯ ನೆರವು ದೊರೆದೊಡೆ। ಯುಳಿದು ಕೀಲಾಲವನು ದಾವಾ-।
ನಲನು ತೃಣಕಾಷ್ಠಾದಿಗಳನುರೆ ಯುಣ್ಣುವಂದದಲಿ॥
ತಿಳಿದು ಮನದಲಿ ಸ್ವಪರ ಬಲವ-। ನ್ನಿಳೆಯ ಪಾಲನು ಪ್ರಬಲತರ ರಿಪು-।
ಗಳನು ಬಿಟ್ಟುಳಿವಂಥ ನೃಪತಿಗಳನ್ನು ಗೆಲಿದಿಹನು. ॥೫೬॥

ಕಾಮಧರ್ಮಗಳನ್ನು ವರ್ಜಿಸಿ। ಭೂಮಿಪಾಲಕನರ್ಥವನ್ನೇ-।
ಕಾಮಿಸನು ಮೇಣರ್ಥಧರ್ಮಗಳನ್ನು ನೆರೆದೊರೆದು॥
ಕಾಮವನ್ನಾಕಾಂಕ್ಷಿಪನು ಮೇಣ್। ಕಾಮದ್ರವ್ಯವನುಳಿದು ಸಲೆ ನಿ-।
ಷ್ಕಾಮದಿಂದರ್ಜಿಸದೆ ಧರ್ಮವನೆಲ್ಲ ಗಳಿಸುವನು. ॥೫೭॥

ಜಿಳಿಯುಲವಸರ ಸಿಕ್ಕ ಮಿತ್ರರು। ಬಲವ ತಳೆದುಪಕಾರ ಮಾಳ್ಪರು।
ಗಲಿತ ಬಲರಕ್ಷಮರು ಪ್ರತ್ಯುಪಕಾರವನು ಮಾಡೆ॥
ತಿಳಿದು ತನ್ನಂತರದಲೀ ಪರಿ। ನಳಿನ ನಯನನು ಮಧ್ಯಸ್ಥಿತಿಯಲಿ।
ಗೆಳೆಯರನು ಕಾಯ್ದಿಟ್ಟು ಸುಖದಿಂ ರಾಜ್ಯವಾಳಿದನು. ॥೫೮॥

ಧರೆಯ ಪಾಲನು ತನ್ನ ಮಿತ್ರ। ನ್ನರಿನೃಪಾಲರ ಬಲದ ತುಲನೆಯ।
ಪರಮ ಸೂಕ್ಷ್ಮತೆಯಿಂದ ಮಾಡಿದ ಮೇಲೆಯವರನ್ನು ॥
ಭರದೆ ರಣದಲಿ ಜಯಿಸಿ ತನ್ನನು। ಮುರಿಯ ಬಲ್ಲಿದರನ್ನು ಕೆಣಕದೆ।
ನಿರುಕಿಸುತೆ ರಂಧ್ರವನು ಸುಮ್ಮನೆ ಕಾಲಗಳೆಯುವನು. ॥೫೯॥

ಮನದೆ ತುಂಬಿರುವಂಥ ಸುಂದರ। ಘನಗಳನ್ನರೆ ಚಾತಕಂಗಳು।
ನೆನೆಯುವವು ಜಲಹೀನ ಜಲದಗಳನ್ನು ನೋಡುವವೇ ॥
ಧನವು ಜನರಲಿ ಮಾನ್ಯತೆಗೆ ಕಾ-। ರಣವದೆಂದರಿತಿರುವ ನೃಪಕುಲ-।
ಮಣಿಯು ತನ್ನಲಿ ಕೋಶ ಸಂಗ್ರಹವನ್ನು ಮಾಡಿಹನು. ॥೬೦॥

ಇತರ ರಾಜರ ಛಿದ್ರಗಳನರೆ। ಚತುರತನದಿಂದರಿತು ನಿಜ ಹೃ-।
ದ್ಗತವನಾರಿಗೆ ತಿಳಿಯದಂತೆಯೆ ಗೌಪ್ಯದಿಂದಿಟ್ಟು ॥
ಸತತ ಪರಭೂವರರು ಮಾಡುವ। ಹಿತದ ಕಾರ್ಯಗಳನ್ನು ಕೆಡಿಸುತೆ।
ಮತಿ ಪುರಸ್ಸರವಾಗಿ ತಾನವುಗಳನು ರಚಿಸುವನು. ॥೬೧॥

ನಲಿನನಾಭನ ತನಯ ಕುಶನಿಂ। ಕಲಿತ ಶಸ್ತ್ರಾಸ್ತ್ರಗಳ ವಿದ್ಯಾ-।
ಬಲದೆ ಬಲಯುತನಾದ ಕೋಸಲದಿಳೆಯ ಪಾಲಕನ ॥
ಬಲವು ರಿಪುಬಲವನಕೆ ದಾವಾ-। ನಲದ ತೆರದಿಂದೆಸೆದು ಪೃಥ್ವೀ।
ವಲಯದಲಿ ಸಲೆ ರಾಜರಾಜನ ಕೀರ್ತಿಪೆರ್ಚಿಸಿತು. ॥೬೨॥

ಪರಮ ದಾರುಣವಾದ ಸರ್ಪದ। ಶಿರದ ರತ್ನದ ತೆರದೆ ಪರರೀ-।
ನರಪ ಶಕ್ತಿತ್ರಯಗಳನ್ನ ಪಹರಿಸಲಕ್ಷಮರು ॥
ಸ್ಪರುಶಗಲ್ಲವು ಲೋಹವನ್ನರೆ। ಭರದೆಯಾಕರ್ಷಣವ ಮಾಡುವ।
ತೆರದೆ ಪರರೀ ಶಕ್ತಿಗಳನುರೆ ನೃಪನು ಸೆಳೆಯುವನು. ॥೬೩॥

ಜನಪನಾಳಿಕೆಯಲ್ಲಿ ನಿರ್ಭಯ-। ತನದೆ ಬೇಸಾಯವನು ಮಾಡುವ।
ವಣಿಜಗರು ನದಿಗಳಲಿ ವಾಪೀಸಲಿಲದಂದದಲಿ ॥
ವನಗಳಲಿ ಯುಪವನಗಳಂದದೆ। ಮನೆಗಳಂದದೆ ಗಿರಿಗಳಲಿ ದಿನ-।
ದಿನಗಳಲಿ ಸಂಚರಿಸುವನು ತಮ್ಮಿಚ್ಛೆಯಂದದಲಿ. ॥೬೪॥

ಮುನಿಜನರ ತಪಗಳನು ಮೇಣ್ಬ್ರಾ- । ಹ್ಮಣರ ವರ್ಣಾಶ್ರಮಗಳನು ದು- ।
ರ್ಜನರ ಕಂಟಕದಿಂದ ಪೊರೆದವರವರ ಪುಣ್ಯದಲಿ ॥
ಧನವ ತಸ್ಕರರಿಂದ ರಕ್ಷಿಸಿ । ಧನಿಕರಿಂದವರರ್ಜನದೆ ತಾಂ- ।
ಜನಪನುರೆ ಷಡ್ಭಾಗವನು ನಯನದಿಂದ ಗಳಿಸಿದನು. ॥೬೫॥

ವನಜನಾಭನ ತನುಜ-ತನುಜನು । ಪ್ರಣಯದಿಂ ಪರಿಪಾಲಿಸಿದ ಭೂ- ।
ವನಿತೆ ತನ್ನಯ ಹೊಲಗಳಿಂ ಪಿರಿದಾದ ಬೆಳೆಗಳನು ॥
ಖನಿಗಳಿಂ ಸದ್ರತ್ನಗಳನುರೆ । ವನಗಳಿಂ ಪೇರ್ಗಜಗಳನು ತ- ।
ನ್ನಿನಿಯನಿಗೆ ಪ್ರತ್ಯರ್ಪಣೆಯ ಮಾಡಿದಳು ಪ್ರೇಮದಲಿ. ॥೬೬॥

ಆರು ಮೊಗದವನಂತೆ ವಿಕ್ರಮ- । ಸಾರದಿಂ ಕೂಡಿರುವ ಕೋಸಲ- ।
ಧಾರುಣೀಶನು ಸಂಧಿವಿಗ್ರಹದ್ವೈಧ ಮೊದಲಾದ ॥
ಆರು ಗುಣ ಬಲ-ಸಾಧನದೆ ನಿ- । ರ್ಧಾರದಿಂ ತನಗಿಷ್ಟವಾಗಿಹ ।
ಚಾರು ವಸ್ತುಗಳನ್ನು ಲಭಿಸುವ ದಾರಿ ತಿಳಿದಿಹನು. ॥೬೭॥

ನರಪನೀಪರಿಯಿಂದ ನಾಲ್ಕು । ತೆರದ ನೀತಿಗಳಿಂದ ತನ್ನಯ ।
ಚರರು ಮೊದಲಾದಖಿಲ ಸತ್ತ್ವಾಧಾರಿ ಜನರಿಂದ ॥
ಪರಮ ನಂಬಿಗೆಯನ್ನು ಪಡೆದನು । ವರಿಸಿದಂತಹ ಕಾರ್ಯಫಲಗಳು ।
ತ್ವರದೆ ದೊರೆಯುತ್ತಿರ್ದವವನಿಗೆ ವಿಘ್ನವಿಲ್ಲದಲೆ ॥೬೮॥

ಅರಿಗಳನ್ನುರೆ ಕಪಟಯುದ್ಧದೆ । ತರಿಯ ಬಲ್ಲಿದನಾವರೂ ಗಡ ।
ಸರಲತನದಿಂ ಸಮರದಲಿ ನರವರನು ತಾಂ ಕಾದಿ ॥
ಪರಮ ವಿಕ್ರಮವುಳ್ಳ ಪುರುಷನ । ವರಿಸುವಂತಹ ವಿಜಯ ಕಾಮಿನಿ- ।
ಯರಸಿ ತನ್ನೆಡೆಯಲ್ಲಿಯೇ ಬರುವಂತೆ ಮಾಡಿದನು. ॥೬೯॥

ವಾರಣಪ ಸಿರದಿಂದ ಸೋರುವ । ವಾರಿಗನ್ಧೋದ್ದಾಮತನದಿಂ ।
ಬೇರೆ ದ್ವಿರದಗಳದರ ಹತ್ತಿರ ಬಾರದಿರ್ದಂತೆ ॥
ತೋರ ವಿಕ್ರಮವುಳ್ಳ ಕೋಸಲ । ಧಾರುಣೀಶನ ತೇಜದಿಂ ಸಲೆ ।
ವೈರವನು ಮರೆತಿತರ ರಾಜರು ನಮ್ರರಾಗಿಹರು. ॥೭೦॥

ಪ್ರೋಕ್ತವ ಷೋಡಶ ಕಲೆಗಳನ್ನುರೆ। ತಳೆದ ಹಿಮಕರನಂತೆ ಮೇಣ್ಸಲೆ।
ಸಲಿಲದಿಂಮುಕ್ಕೇರಿದಂತಹ ಜಲಧಿಯಂದದಲಿ॥
ಇಳೆಯ ಪಾಲನ ವಿಭವ ಬಲಗಳು। ಬೆಳೆದರೂ ಚಂದ್ರೋದಧಿಗಳೋಲ್ ।
ನಿಲಯ ಪೊಂದದೆ ಸ್ಥೈರ್ಯದಿಂ ನೆಲೆಗೊಂಡು ನಿಂತಿಹವು. ॥೭೧॥

ಪರಮ ಪಂಡಿತರಾದ ಬ್ರಾಹ್ಮಣ । ವರರು ದೈನ್ಯದೆ ಸೊಂದು ಕೋಸಲ- ।
ಧರೆಯ ಪಾಲನ ಕಡೆಗೆ ಬರಲವನಿಂದ ದೊರೆತಿರುವ ॥
ನಿರತಿಶಯಧನದಿಂದ ಮೇಘವು। ಶರಧಿಯಿಂ ನೀರ್ಗೊಂಡು ಮಳೆಯನು।
ಕರೆವ ತೆರದಲಿ ಪರರಿಗುಪಕಾರವನು ಮಾಡಿಹರು. ॥೭೨॥

ತರಣಿ ಕುಲಸಂಭವನು ತನ್ನಾ- । ಚರಣದಿಂ ಸ್ತುತಿಪಾತ್ರನಿರುತಿರೆ।
ಪರರು ಸ್ತೋತ್ರವ ಮಾಡಲಾತನು ಲಜ್ಜೆ ದಾಳ್ದಿಹನು ॥
ಅರರೆ ತತ್ಕಾರ್ಯದಲಿ ಯಾದೊಡೆ। ಧರೆಯ ಪಾಲಕನರಿಗಳಿಗೆ ಸಲೆ।
ನಿರುತವಲಿ ತಪ್ಪದಲೆ ಬಿಜಯದ ಪ್ರಾಪ್ತಿಯಾಗಿಹುದು. ||೭೩॥

ಸ್ಮರಸ ಬಾಸ್ಟದಲ್ಲಿ ಯುದಿಸಿದ। ತರಣಿ ದರ್ಶನದಿಂದ ಪುರುಷರ।
ದುರಿತಗಳು ಮೇಣ್ನಿಬಿಡ ತಿಮಿರವು ಪೋಗುವಂದದಲಿ॥
ಪರಮ ವಿಕ್ರಮವುಳ್ಳ ಕುಶಭೂ- । ವರನ ತರಳನ ನೋಡಿದಾಗಲೆ।
ನರರ ದೈನ್ಯಾಜ್ಞಾನಗಳು ಸಲೆ ದೂರವಾಗುವವು. ॥೭೪॥

ತರಣಿ ಕಿರಣಗಳಿಂಗೆ ಕೈರವ- । ದುರದೆ ಮಾಸರ ಜೊರೆಯುದದು ಮೇಣ್ ।
ಸರಸಿ ಜೋದರದಲ್ಲಿ ಹಾಗೆಯೆ ಚಂದ್ರ-ಕರಗಳಿಗೆ ॥
ಅರರೆ! ಕೋಸಲ ಧೊರೆಯ ಗುಣಗಳು। ಪರ ನ ಪಾಲರ ಹೃದಯದಲಿ ಸಹ।
ನಿರುತವಲಿ ಸಂಚರಿಸುವವು ನಿರ್ಬಂಧವಿಲ್ಲದಲೆ. ॥೭೫॥

ಗುರುಪರಂಪರೆಯಿಂದ ಸಾಸಿರ। ಕರನ ಕುಲದಲಿ ಹಿಂತೆ ಜನಿಸಿದ।
ನರಪರಂದಾಚರಿಸಿದಂತೆಯೆ ಕುಶನೃಪಾಲಕನ ॥
ತರಳನಾದೊಡೆ ತುರಗ- ಮೇಧವ। ಚರಿಸಲಿಚ್ಛಿಸಿ ಶೌರ್ಯದಿಂ ಭೂ- ।
ವರರನುರೆ ಸಂಜಯಿಸಿ ಧನಾರ್ಜನೆಯ ಮಾಡಿದನು. ॥೭೬॥

ನಿರುತವಲಿ ಶಾಸ್ತ್ರೋಕ್ತ ಮಾರ್ಗದೆ। ಚರಿಸಿ ತನ್ನಯ ಪ್ರಜೆಗಳನು ಪೋಷ್।
ಪೊರೆದು ಸಾದರದಿಂದ ಸಾಧು ಸುಜನರನನುದಿನದೆ ॥
ಸುರರ ಸಮುದಾಯದಲಿ ವಜ್ರಿಯು। ಮಿರುಗುವಂದದೆ ಸ್ವಪ್ರಭಾವದೆ।
ಧರೆಯಪಾಲನು ರಾಜರಲಿ ತಾಂ ಶ್ರೇಷ್ಠನೆನಿಸಿಹನು. ॥೭೭॥

ನಿರವಧಿಕ ಸಾಧರ್ಮ್ಯಯೋಗದೆ। ಧೊರೆಯು ಪಂಚಮ ಲೋಕಪಾಲನು,।
ಪಿರಿಯ ಭೂತಂಗಳಲಿ ಷಷ್ಠಮನೆಂದು, ಧರಣಿಯನು ॥
ಧರಿಸಿದಂತಹ ಗಿರಿಗಳಲಿ ನರ-। ವರ-ಶಿಖಾಮಣಿ ಯಷ್ಟಮನು ತಾ-।
ನಿರುವನೆಂದಿಳೆಯಾಣ್ಮನಿಗೆ ಬಹುಜನರು ಪೇಳುವರು. ॥೭೮॥

ಸುರರಪತಿಯಾಜ್ಞೆಯನು ತಪ್ಪದೆ। ಸುರರು ಸಾದರದಿಂದ ಪಾಲಿಪ।
ತೆರದೆ ಬಲಯುತನಾದ ಕೋಸಲದೇಶದಧಿಪತಿಯು ॥
ಬರೆದ ಶಾಸನ-ಪತ್ರವನು ಭೂ-। ವರರು ಛತ್ರವನಿರಿಸಿ ಯೊಂದೆಡೆ-।
ಶಿರವ ಬಾಗಿಸಿ ಪರಮ ವಿನಯದೆ ಮನ್ನಿಸುತ್ತಿಹರು. ॥೭೯॥

ತುರಗಯಾಗದ ಕರ್ಮವನ್ನುರೆ। ಜರುಗಿಸಿದ ಯಾಜಕರಿಗೀ ನರ-।
ವರನು ದ್ರವಿಣವನಿತ್ತು ಸಂತಸವನ್ನು ಪಡಿಸಿಹನು. ॥
ಹರನ ಸಖನಂತೀ ಮಹೀಪನು। ಧರಣಿ ತಲದಲಿ ಧನದನೆಂಬೀ-।
ಬಿರುದನತಿ ದಾತೃತ್ವದಿಂ ನಿಜವಾಗಿ ಗಳಿಸಿಹನು. ॥೮೦॥

ಅರಸು ರಾಜ್ಯವನಾಳುತಿರೆ ನೌ-। ಚರರ ಪಥವನು ಸುಚರವಾಗಿಸೆ।
ವರಣದೇವನು ಮಾಡಿದನು, ಸುರಪತಿಯು ವೃಷ್ಟಿಯನು ॥
ಕರೆದನಿನಸುತ ಮನುಜರನ್ನುರೆ। ನಿರುಜೆಯಿಂ ಕಾಪಾಡಿದನು ಪೋಷ್।
ಹರನ ಮಿತ್ರನು ವಿಪುಲ ಸಂಪತ್ತಿಯನು ಕೊಟ್ಟಿಹನು. ॥೮೧॥

—॥ ಶ್ರೀ ॥—

ರಘುವಂಶ ೧೮ನೆಯ ಸರ್ಗ

ಕುಸುಮನಾಭನ ಸುತನ ಸುತನಿಗೆ। ನಿಷಧ ದೇಶದ ರಾಜ-ಪುತ್ರಿಯ।
ಬಸಿರಿನೊಳು ನಿಷಧಾದ್ರಿಯೋಪಾದಿಯಲಿ ಕಣ್ಸೆಳೆವ ॥
ಅಸಮ ಬಲದಿಂ ಕೂಡಿದಂತಹ। ಪಸುಳೆ ಜನ್ಮಿಸಿತದಕೆ ಕೋಸಲ-।
ವಸುಧೆಯಾಣ್ಮನು ನಿಷಧ ನೆಂಬಭಿಧಾನ ವಿಟ್ಟಿಹನು. ॥೧॥

ಎಳೆಯ ಬೆಳೆಗಳ ಮೇಲೆ ಕಾಲಕೆ। ಮಳೆಯು ಬಿದ್ದವು ಫಲಿಸಿ ಹೊಡೆ ಸಲೆ।
ನಲವಿನಿಂ ಕೃಷಿವಲನು ಹಿಗ್ಗುವ ತೆರದೆ ಕೋಸಲದ॥
ಇಳೆಯ ಪಾಲನು ತನ್ನ ಪ್ರಜೆಗಳ-। ನೊಲವಿನಿಂ ಸಂರಕ್ಷಿಸಲು ಭುಜ-।
ಬಲದೆ ಪುತ್ರನು ಯೋಗ್ಯನೆಂದಾನಂದ ತಾಳ್ದಿಹನು. ॥೨॥

ಸರಸ ವಿಷಯಂಗಳನು ಹರುಷದೆ। ಧರೆಯಪಾಲಕನುಂಡು ತನ್ನಯ।
ತರಳನಿಗೆ ರಾಜ್ಯಾಭಿಷೇಕವ ಮಾಡಿ ಯಾಮೇಲೆ॥
ನಿರುತವಲಿ ಯಾಚರಿಸಿವಂತಹ। ತುರಗಯಾಗಾದಿಗಳ ಪುಣ್ಯದೆ।
ಹಿರಿಯರಂತೆಯೆ ಸುರರ ಪುರಕ್ಕೈದಿದನು ಸೌಖ್ಯದಲಿ. ॥೩॥

ಕುಸುಮನಾಭನ ಸುತನ ಪೌತ್ರನು। ಕುಸುಮ ಬಾಣನ ತೆರದೆ ಚಲುವನು।
ಬಿಸಜಲೋಚನನಾದ ನಿಷಧನು ಗುರುಗಳಂದದಲಿ॥
ಅಸಮಬಲಕೌಶಲ್ಯದಿಂಮರೆ। ಸುಷುಮೆಯಿಂದಸಹಾಯ ಶೂರನು।
ವಸುಧೆಯನು ಪರಿಪಾಲಿಸಿದನರಿಗಳನು ಸಂಜಯಿಸಿ. ॥೪॥

ಜನಪ ನಿಷಧನ ಸತಿಯ ಗರ್ಭದೆ-। ಜನಿಸಿದನು ನಲನಾಮಧೇಯದೆ।
ಯುನಲನಂತುರು ತೇಜದಿಂ ಮನಕಂದವನು ಕೊಡುವ॥
ತನಯನೀತನು ಸ್ವರ್ಗಲೋಕಕೆ। ಜನಕನೈದಿದ ಮೇಲೆ ರಾಜ್ಯವ।
ಘನತೆಯಿಂದಾಳಿದನು ರಿಪುಗಳನಾಶವನು ಮಾಡಿ. ॥೫॥

ಶುಭ ಮೂಹೂರ್ತದಲಿವನ ಜಠರದೆ। ನಭದತಲದಂತೆಸೆವ ವರ್ಣದ।
ನಭದೆ ಚರಿಪರು ಪಾಡುವಂದದ ಕೀರ್ತಿಯುಳ್ಳವನು॥
ನಭದತೆರದಿಂ ತನ್ನ ಪ್ರಜೆಗಳ। ವಿಭವ ಬೆಳೆಸುವ "ನಭ"ಸುನಾಮದೆ।
ಯುಭಯ ಕುಲ ಪಾವನವ ಮಾಡುವ ಪುತ್ರನುದಿಸಿದನು. ॥೬॥

ಅನಘನಾದೀ ನಲನು ತನ್ನಯ। ತನಯ ನಭನಿಗೆ ಕೋಶಲದ ಭೂ-।
ವನಿತೆಯನ್ನರ್ಪಿಸಿದ ಮೇಲ್ತಾಂ ಜನಪದವ ಬಿಟ್ಟು॥
ಮನಸಿನಿಂದಾಚರಿಸಿ ತಪವನು। ಜನನ ಮರಣಂಗಳನು ತಪ್ಪಿಸೆ।
ವನಕೆ ವೃದ್ಧತ್ವದಲಿ ನಿರ್ಮಮನಾಗಿ ಸಾಗಿದನು. ॥೭॥

ಹಿಂದು ದ್ವಿರಂದಗಳಿಗೆ ಸೋಲದ। ಪುಂಡರೀಕದ ತೆರದೆ ನಭನಿಂ।
ಪುಂಡರೀಕೀ ನಾಮಧೇಯದೆ ಖ್ಯಾತಿಯನು ಪಡೆದ ॥
ಚಂಡವಿಕ್ರಮವುಳ್ಳ ಪುತ್ರನು। ಪುಂಡರೀಕೇಕ್ಷಣನ ತೆರದಲಿ
ದಂಡಿಸುತೆ ರಿಪುಗಳನು ಜನಕನ ಹಿಂತೆ ಯಾಳ್ದಿಹನು. ॥೮॥

ಈ ಮಹಾ ಮಹಿಪತಿಯು ತನ್ನಯ। ಭಾಮೆಯುದರದೆ ಪುಟ್ಟಿದಂತಹ।
“ಕ್ಷೇಮಧನುವಿನ” ಕೀಲಬಲಶೌರ್ಯಾದಿ ಸುಗುಣಗಳ ॥
ಸ್ತೋಮವನು ನೆರೆ ನೋಡಿ ಕೋಸಲ-। ಭೂಮಿಯನು ಪಾಲಿಸುವ ಕಾರ್ಯಕೆ।
ನೇಮಿಸಿದ ಪೋಲ್ತೃಪನ ಚರಿಸಲು ಬನಕೆ ಸಾಗಿದನು. ॥೯॥

ಅಮರಪತಿಯೋಪಾದಿಯಲಿ ಘನ। ಸಮರ ಭೂಮಿಯ ಮೇಲೆ ತನ್ನಯ।
ಚಮುಗಳಗ್ರ ಪ್ರಾಂತದಲಿ ಸಂಗ್ರಾಮವನು ಮಾಳ್ಪ ॥
ಅಮಮ, “ದೇವಾನೀಕನೆಂ”ಬೀ। ಕಮಲ ಬಾಂಧವನಂತೆ ಮಿನುಗುವ।
ಪುತ್ರನುದಿಸಿದ ವಿಮಲ ಕೀರ್ತಿಯ ರಾಜನುದರದಲಿ. ॥೧೦॥

ಅನವರತ ಶುಶ್ರೂಷೆಯಿಂದೀ। ಘನ ಮನೋಹರನಾದ ತನಯನು।
ಜನಕನಿಗೆ ಸತ್ಪ್ರೀತಿಯೆಂದೆನಿಸಿರ್ದನವರಂತೆ ॥
ಜನಕನಾದೊಡೆ ಮಮತೆಯಿಂದುರೆ। ತನುಜನನು ಕಾಪಾಡಿ ಯವನಿಗೆ।
ಜನತೆಯಲಿ ಸಜ್ಜನಕನುಳ್ಳವನೆಂದು ಪ್ರಥಿಸಿದನು. ॥೧೧॥

ಜಸಿಸಿ ನಾನಾಯಾಗಗಳನೀ-। ಗುಣಗಣಾಕರನಾದ ರಾಜನು।
ಸುನಯದಿಂದೀರೆರಡು ವರ್ಣಗಳನ್ನು ಚಿರ ಪೊರೆದು ॥
ತನಯನನು ವಿಷ್ಟರದೆ ಸ್ಥಾಪಿಸಿ। ಯನಿಮಿಷರ ಲೋಕಕ್ಕೈಯಾತನು।
ಘನತೆಯಿಂಪೈದಿದನು ತನು ಬಂಧವನು ಸಂತ್ಯಜಿಸಿ. ॥೧೨॥

ಸದಮಲಾತ್ಮಕನಾದ ರಾಜನ। ಸುದತಿಯುದರದೆ ಯೋಗ್ಯಕಾಲಕೆ।
ಮದನನೋಪಾದಿಯಲಿ ಸುಂದರ ಪುತ್ರನುದಿಸಿದನು ॥
ಬೆದರಿದೆರಳೆಗಳನ್ನು ವ್ಯಾಧನು। ಮಧುರ ರವದಿಂ ಮೋಹಿಪಂತೆಯೆ।
ಚದುರತನದಿಂದಿವನು ಸರ್ವರನೊಲಿಸಿ ಕೊಂಡಿಹನು. ॥೧೩॥

ಇವನ "ಹೀನಗು" ನಾಮದಿಂದೀ । ಭುವನದೊಳು ಭುಜ ವಿಕ್ರಮದಿ ಸಲೆ ।
ಯುವನಿಯನು ಪ್ರತಿಪಾಲಿಸಿದನತಿ ಜಾಣತನದಿಂದ ॥
ಇವನು ಯುವನಾಗಿರ್ದರೂ ಘನ । ತಪಸಿಯಂದದಿ ವ್ಯಸನವಿಲ್ಲದೆ ।
ತವಕದಿಂದಾವಾಗಲುಂ ವಿಧಿಯಂತೆ ನಡೆದಿಹನು. ॥೧೪॥

ಪುರುಷರಂತರವನ್ನು ಬಲ್ಲೀ । ತರುಣರಾಜನು ತನ್ನ ತಂದೆಯು ।
ಮರಣ ಹೊಂದಿದ ಮೇಲೆ ನಾಲ್ಕೂ ತೆರದ ನಯದಿಂದ ॥
ಸಿರಿಯ ವರನಂದದಲಿ ನಾಲ್ಕೂ । ತೆರೆಯ ಭಾಗಂಗಳನು ಶೌರ್ಯದಿ ।
ಪರನೃಪಾಲರ ಕರದಿ ಕೊಂಡಾಳಿನು ನಿರ್ಭಯದಿ. ॥೧೫॥

ಅರಿಗಳನ್ನರೆ ಜಯಿಸಿದಂಥೀ । ಧರಣಿಪಾಲನು ಸಗ್ಗಕ್ಕೈದಲು ।
ಪರಮ ಶೌರ್ಯದಿ ಪಾರಿಯಾತ್ರಾ ಪ್ರಾಂತವನು ಗೆಲ್ವ ॥
ನರಪ-ಪುತ್ರನು ಪಾರಿಯಾತ್ರನು । ಹರಿಯ ಕರುಣೆಗೆ ಪೂರ್ಣಪಾತ್ರನು ।
ಧರೆಯ ಪಾಲನವನ್ನು ಗೈದನು ಪರಮ ಹರುಷದಲಿ. ॥೧೬॥

ಜಲಧಿಯಂಬರೆಯಾಣ್ಮನುದರದಿ । ಚಲುವ ಚಂದಿರನಂತೆ ಪೊಳೆಯುವ ।
"ಶಿಲ" ಸುನಾಮದ ತರಳನೋರ್ವನು ಜನಿಸಿ ಸಮರದಲಿ ॥
ಬಲದಿ ಶತ್ರುಗಳನ್ನು ಮರ್ದಿಸಿ । ಗಳಿಸಿದನು ಬಲು ಕೀರ್ತಿಯನು ಸಲೆ ।
ಲಲಿತ ನುಡಿಯಿಂ ಪೊಗಳಲಾತನು ಲಜ್ಜೆ ತಾಳ್ದಿಹನು. ॥೧೭॥

ಪರಮ ಪರವಶರಾದ ದಾಸರ । ತೆರದಿ ಯರಸರಿಗಾದರೂ ಗಡ ।
ಸರಸ ಸುಖಗಳ ವಿರಹ ವಿರುತಿಹುದೆಂದು ತಾನರಿತು ॥
ತರಳ ತನಯನ ಮೇಲೆ ರಾಜ್ಯದ । ಭರವನಿರಿಸೀ ಧರೆಯಪಾಲನು ।
ನಿರುತದಲಿ ಸುಖಭೋಗದಲ್ಲಿಯೆ ಕಾಲಕಳೆದಿಹನು. ॥೧೮॥

ನಿರತಿಶಯ ಸೌಂದರ್ಯವತಿಯರ । ತರುಣಿಯರ ಸಮ ಸುರತದಲಿ ಮನ ।
ನಿರತಿ ಹೊಂದದ ಭೋಗಲೋಲುಪನಾದ ನರಪನನು ॥
ಅರರೆ! ಮಾತ್ಸರ್ಯದಲಿ ಯೊಂದಿನ । ಪರಮ ನಿರ್ದಯ ತನದಿ ತಟ್ಟನೆ ।
ಜರೆಯು ಪರಲೋಕಕ್ಕೆಯೊಯ್ದಳು ಪ್ರಾಣವನು ಹರಿಸಿ. ॥೧೯॥

ಇಳೆಯ ಪಾಲರ ವಲಯದಲಿ ಸಲೆ । ಬಲನಿಷೂದನನಂತೆ ಬಾಹೂ- ।
ಬಲದೆ ಬೆಳಗುವ ಶಿಲನೃಪಾಲನ ಲಲನೆ-ಯುದರದಲಿ ॥
ಚಲುವನಾದುನ್ನಾಭನೆಂಬೀ । ಲಲಿತನಾಮದೆ ಖ್ಯಾತಿ ಪಡೆದಿಹ ।
ಜಲಜನಾಭನ ಪೋಲುವಂತಹ ಪುತ್ರನುದಿಸಿದನು. ||೨೦||

ಈತನಾಳಿದ ಮೇಲೆ ಯೀತನ । ಶೀತಕರನಂತೆಸೆವ ಪುತ್ರನು ।
ಧೂರ್ತರಿಪುಬಲಕಿಲ್ಬಿಷನು ಗಂಭೀರ ನಿಸ್ವನನು ॥
ನೀತಿಯಿಂದಿಳೆಯನ್ನು ಪರಮ । ಖ್ಯಾತಿಯಾಗುವ ತೆರದೆ ಪೊರೆದನು ।
ಪ್ರೀತಿ ಮೂಲಕ ವಜ್ರಣಾಭೆಂದಿವನಿಗುಸಿರುವರು. ||೨೧॥

ತನ್ನ ಪುಣ್ಯೋದ್ದಾಮ ಬಲದಿಂ- । ದನ್ಯಲೋಕಕ್ಕೈದಲೀತನು ।
ಮಾನ್ಯತಮನಾದಿವನ ಶಂಖಣನಾಮ ತನುಜನನು॥
ಉನ್ನತಾದ್ರಿಸ್ತನೆಯು ಪ್ರೇಮದೆ । ರನ್ನಪೊನ್ಗಳ ಸರವನರ್ಪಿಸಿ ।
ತನ್ನ ಪ್ರಿಯತಮನೆಂದು ಮಾನಸದಿಂದ ವರಿಸಿದಳು. ॥೨೨॥

ಮೆರೆವ ಸಾಸಿರ ಕರನ ತೆರದಲಿ । ಪರಮ ತೇಜದೆ ಮಿರುಗುವಂಥೀ- ।
ಧರಣಿ-ಪಾಲನ ತರಳನಿಗೆ " ಹರಿದಶ್ವಧಾ"ಮೆಂದು ॥
ನರರು ಕರೆಯುವರಿವನು ತಂದೆಯು । ಮರಣ ಹೊಂದಿದ ಮೇಲೆ ಕೋಸಲ- ।
ಧರೆಯ ರಾಜ್ಯವನಾಳಿದನು ಹರಿಯಂತೆ ವಿಕ್ರಮದೆ. ॥೨೩॥

ಕಾಶಿಯಧಿಪತಿ ಯೀಶ್ವರನ ಸು- । ಶ್ರೂಷೆಯಿಂ "ಹರಿದಶ್ವಧಾಮ"ನು ।
ದೋಷವಿಲ್ಲದ ವಿಶ್ವಸಹನೆಂದೆನಿಪ ಪುತ್ರನನು ॥
ಈಶ-ಕೃಪೆಯಿಂ ಪಡೆದನೀಗುಣ- । ರಾಶಿಯಾದರಮಗನು ವಸುಧೆಯ ।
ಪೋಷಣವ ಮಾಡಿದನು ಪರನೃಪರನ್ನು ಸಲೆ ಜಯಿಸಿ. ॥೨೪॥

ಕನಕ ಗರ್ಭನ ಜನಕನಂಶದೆ । ಸುನಯಗುಣಸಂಪನ್ನನಾದೀ- ।
ಜನಪನುದರದೆ "ಕನಕನಾಭೀ" ಪೆಸರಿನಿಂದೆಸೆವ ॥
ತನುಜನುದಿಸಲ್ಕಮಿತಬಲಯುತ । ಕನಕರೇತನ ತೆರದೆ ತನ್ನರಿ- ।
ಜನಕೆ ದುಃಸಹನಾಗಿ ಯೀತನು ಬೆಳೆದನಿಳೆಯೊಳಗೆ ॥೨೫.

ಅತಿ ಪರಾಕ್ರಮಿಯಾದ ತನ್ನಯ । ಸುತನ ಜನುಮದೆ ವಿಶ್ವ ಸಹಭೂ- ।
ಪತಿಯು ಪಿತೃಗಳ ಋಣವ ತೀರಿಸಿ ಚರಮ ವಯಸಿನಲಿ ॥
ಹಿತದೆ ಮಗನಿಗೆ ರಾಜ್ಯವಿತರಿಸಿ । ಚ್ಯುತಿಯು ಹೊಂದದ ಸೌಖ್ಯಗಳಿಸಲು ।
ಸತತ ತಪಮಾಚರಣ ಮಾಡಲು ಬನಕೆ ಸಾಗಿದನು. ॥೨೬॥

ಬಿಸಜ ಮಿತ್ರನ ವಂಶಭೂಷಣ- । ನಸಮ ಬಲಯುತನಾದ ಕೋಸಲ- ।
ವಸುಧೆಯಾಣ್ಮನ ಜಠರದಲಿ "ಕೌಶಲ್ಯ"ನೆಂದೆನಿಪ ॥
ಪೆಸರಿನಿಂ ಪ್ರಖ್ಯಾತಿಹೊಂದಿದ । ಶಶಿಯ ಸುಷ್ರು*ಮೆಯ ತಾಳ್ದ ಸೋಮದ ।
ರಸವ ತೆಗೆವಂಥೋರ್ವ ಸುತನುದಿಸಿದನು ಸಮಯದಲಿ. ॥೨೭॥

ವಶಕೆ ಯರಿಷಟ್ಕವನು ತಂದಿ। ಪ್ರಶಮಿಸಿದ ರಿಪು-ಬಲನು ತನ್ನಯ ।
ಯಶದೆ ಚತುರಾನನನ ಸಭೆಯನು ತೀವಿದವನಿಪನು ॥
ಸ್ವಸುತನಹ "ಬ್ರಹ್ಮಿಷ್ಟನಿಗೆ" ನಿಜ । ವಸುಧೆ ಪಟ್ಟವಗಟ್ಟಿ ಜ್ಞಾನದೆ ।
ವಿಷಮ- ಭಾವವನುಳಿದು ಬ್ರಹ್ಮೀಭೂತನಾಗಿಹನು. ॥೨೮॥

ಘನ ಗುಣಾನ್ವಿತನಾದ ಸುಂದರ। ತನಯನುಳ್ಳೀ ಜನಪಚೂಡಾ- ।
ಮಣಿಯು ಕ್ಷೋಣಿಯ ರಾಜ್ಯವನು ಪರಿಪಾಲಿಸುತ್ತಿರಲು ॥
ಅನಿಶದಲಿ ನಿರ್ಭಯದೆ ಯಾತನ। ಜನರು ಸಾನಂದಾತಿಶಯದಿಂ ।
ಪನಿವ ನಯನಗಳಿಂದ ನೆಗ್ಗಳವಾಗಿ ಸುರಿಸಿಹರು. ॥೨೯॥

ಗುರುವನಾದರದಿಂದ ಸೇವಿಸಿ। ಪರಮ ಪಾವನತೆಯನು ಗಳಿಸಿದ ।
ಗರುಡವಾಹನನಂತೆ ರುಚಿರಾಕಾರದಿಂದೆಸೆವ ॥
ತರಳನೋರ್ವನು "ಪುತ್ರ"ನಾಮದೆ। ನರಪನುವರದೆ ಜನಿಸಿ ತನ್ನಯ।
ಹಿರಿಯನಿಗೆ ಪಿರಿದಾದ ಸಂತಸವನ್ನು ಕೊಟ್ಟಿಹನು. ॥೩೦॥

ಕರಣಗಳ ಸುಖದಾಶೆಯನ್ನರೆ । ತೊರೆದ ಸುರಪನ ಸಾಹಚರ್ಯವ ।
ವರಿಸಲಿಚ್ಛಿಸುವಂಥ ಸಜ್ಜನನಾದ ಭೂವರನು ॥
ನಿರುತದಲಿ ಸತ್ಕರ್ಮಗಳನಾ- । ಚರಿಸಿ ತರಳನಿಗಿತ್ತು ರಾಜ್ಯವ ।
ಪರಮ ಪದಕ್ಕೈದಿದನು ದೇಹತ್ಯಾಗವನು ಮಾಡಿ. ॥೩೧॥

ಕೋಸಲಾಧಿಪನಾದ "ಪುತ್ರನ" । ಭಾಸುರಾಂಗದ ಪತ್ನಿಯುದರದೆ ।
ತ್ರೈಪಮಾಸದ ಪೌಷಿಯಲಿ ಸತ್ಸುತನು ಜನಿಸಿದನು ॥
ಶ್ರೀಶಸೋಪಾದಿಯಲಿ ಯಾತನು । ದ್ವೇಷಿಗಳನುರೆ ಜಯಿಸಿ ಪ್ರಜೆಗಳ ।
ಪೋಷಣವ ಗೈಯ್ದವನಿಪಾಲನವನ್ನು ಮಾಡಿಹನು. ॥೩೨॥

ಇನಕುಲೋದ್ಭವನಾದ "ಪುತ್ರನು" । ಜನನ ಮರಣದ ಭಯದೆ ಮುನಿ-ಜೈ-
ಮಿನಿಯ ಯೋಗದೆ ಯೋಗ-ಸಂಸಿದ್ಧಿಯನು ಸಲೆ ಪಡೆದು ॥
ಜನರ ಸಂರಕ್ಷಣೆಯ ಮಾಡಲು । ತನಗೆ ಸರಿಯಾಗಿರುವ ಸುಂದರ ।
ತನುಜನನು ನಿಯಮಿಸಿದ ಮೇಲ್ಬ್ರಹ್ಮೈಕ್ಯನಾಗಿಹನು. ॥೩೩॥

ಇವನ ಪಿಂತೀ ಭುವನದೊಡೆಯನು । ಧ್ರುವನ ಸಂನಿಭನಾದ ಲಕುಮಿಯ ।
ಧವನ ಕರದಿಂದೆಸೆವ ಗಡ "ಧ್ರುವಸಂಧಿ"ಯೆಂದೆನಿಪ ।
ಶಿವಗುಣಾನ್ವಿತನಾದ ತನಯನಿ- । ಗವನಿಯೆಲ್ಲವನಿತ್ತು ತಾಂ ಕೇ- ।
ಶವನ ಲೋಕಕ್ಕೈದಿದನು ತನು ಬಂಧವನು ತ್ಯಜಿಸಿ. ॥೩೪॥

ಹರಿಯ ವರವಿಕ್ರಮದೆ ಮೆರೆಯುವ । ನರಪನುದರದೆ ಪುಟ್ಟಿದಂತಹ ।
ತರಳ "ಪ್ರಿಯದರ್ಶನ"ನ ಶೈಶವದಲ್ಲಿ ರಭಸದಲಿ ।
ಹರಿಯ ಬೇಂಟೆಯ ನಾಡಲೀ ನರ- । ಹರಿಯು ಪೋಗಿರಲಾಗಿ ಜನದೊಳು ।
ಮರಣಹೊಂದಿದನರರೆ । ವಿಧಿವೈಚಿತ್ರ್ಯವೆಂತಿಹುದೋ! ॥೩೫॥

ಅವನಿಯೊಳು ತಮ್ಮೊಡೆಯನೀಪರಿ । ಮಡಿದ ವಾರ್ತೆಯನರಿತು ಪ್ರಜೆಗಳು ।
ಸಿಡಿಲೆರಗಿದಂತಾಗಿ ಯೆದೆಗೆಟ್ಟಿರಲು ಮಂತ್ರಿಗಳು ॥
ಒಡನೆ ಯರಮಗನನ್ನು ಕೋಸಲ- । ಪೊಡವಿಯಧಿಪತಿಯಾಗಿ ನಿಯಮಿಸಿ ।
ಬಿಡದೆ ಸಡಗರದಿಂದಲಭಿಷೇಕವನು ಮಾಡಿದರು. ॥೩೬॥

ಎಳೆಯ ಚಂದ್ರಮನಿಂ ನಭಸ್ಸಿನ । ತಲವು, ಮೇಣ್ಕಾನನವು ಸಿಂಹದ ।
ಬಲದೆ ಮೆರೆಯುವ ಶಾವಕದೆ ಮೇಣ್ಜಲಜಕುಟ್ಮಲದೆ ॥
ಜಲವು ಶೋಭೆಯ ತಳೆದ ತೆರದಿಂ । ನಲಿನ ಮಿತ್ರನ ಕುಲವದೀ ಭೂ- ।
ವಲಯವೆಳೆನೃಪನಿಂದ ಪರಿಶೋಭೆಯನು ಹೊಂದಿಹುದು. ॥೩೭॥

ಕಾಡಿನಿಭದೋಃಪಾದಿಯಲಿ ಗಡ । ಮಾಡಿದಂತಹ ಸೂಕ್ಷ್ಮದೇಹವು ।
ಮೂಡಲಿನ ಬಿರುಗಾಳಿಯಿಂ ನಭ ವೇಪಿಸುವ ತೆರದೆ ॥
ಪ್ರೌಢಪಟಿವರ ನೆರವಿನಿಂ ಸರಿ । ಕೂಡಿದಂಥೀ ಬಾಲರಾಜನು ।
ಮಾಡುವನು ಸರಿ ತಂದೆಗೆಂದರಿತಿಹರು ಪ್ರಕೃತಿಗಳು. ॥೩೮॥

ಚಾರುನೇಪಥ್ಯವನು ಧರಿಸಿ-। ರ್ದಾರು ವರುಷದ ಸಾರ್ವಭೌಮ ಕು-।
ಮಾರನಾನೆಯನೇರಿ ಮೆರೆಯುತೆ ಮಂದ ಗತಿಯಿಂದ ॥
ಊರವಾರಿಯು ಪಿಡಿದು ನಡೆದಿರೆ । ಪೌರರಾತನಿಗಾಗ ಹರುಷದೆ ।
ಗೌರವವ ತತ್ತಾತನಿಗೆ ತೋರ್ಪಂತೆ ತೋರಿದರು. ॥೩೯॥

ಎಳೆಯ ಪ್ರಾಯದ ನೃಪಕುಮಾರನ । ತೆಳುವು ದೇಹಾಕಾರದಿಂದುರೆ ।
ಪೊಳೆವ ಸಿಂಹಾಸನವು ತುಂಬದೆ ಬರಿದೆಯುಳಿದಿರುವ ॥
ಸ್ಥಳವದಾತನ ಸ್ವರ್ಣವರ್ಣದ । ಲಲಿತ ಭಾಸುರವಾದ ತನುವಿನ ।
ಬೆಳಕಿನಿಂ ಸಂವಟಿತವಾಗಿಯೆ ತುಂಬಿಕೊಂಡಿಹುದು. ॥೪೦॥

ಪಟ್ಟವಾದಲತಗೆಯ ಪೂಸಿದ । ಪುಟ್ಟ ಪಾದಗಳಿಂದ ರಾಜನು ।
ವಿಟ್ಟರದ ಮೇಲ್ದತ್ತಿ ಸಡಗರದಿಂದ ಕುಳಿತಿರಲು ॥
ತಟ್ಟನೇ ಭೂಪಾಲರೆಲ್ಲರು । ಕೊಟ್ಟು ಕಾಣಿಕೆಗಳನು ವಿನಯದೆ ।
ಮುಟ್ಟಿಯಾತನ ಚರಣಗಳಿಗುರೆ ಶರಣು ಮಾಡಿದರು. ॥೪೧॥

ಇಳೆಯ ಮೇಲಿರ್ದೆಲ್ಲ ರತ್ನಂ-। ಗಳಲಿ ಮಾಮಣಿಯೆಂದು ನೀಲದ ।
ಪೊಳೆವ ಹರಳಿಗೆ ಸಣ್ಣದಿರ್ದೊಡೆ ಪೇಳುವಂದದಲಿ ॥
ನಳಿನಮಿತ್ರನ ಕುಲದೆ ಜನಿಸಿ-। ರ್ದೆಳೆಯ ಪ್ರಾಯದ ರಾಜತನುಜನಿ-।
ಗೊಲವಿನಿಂ ಮಹರಾಜನೆನ್ನುವದುಚಿತವಾಗಿಹುದು. ॥೪೨॥

ಕಮಲ ಮುಖದೀರ್ಗಡೆಗೆ ಬೀಸುವ ಚಮರದನಿಲದೆ ಚಲಿಸುವಂತಹ ।
ವಿಮಲ ಜುಲುಪೆಗಳ್ಳುಳ ರಾಜನ ವದನದಿಂ ಹೊರಟ ॥
ಅಮಮ! ವಚನಗಳನ್ನು ಭೂಮಿಯ । ರಮಣರೆಲ್ಲರು ಸರ್ವಕಾಲದೆ ।
ಮಮತೆಯಿಂ ವೇದೋಕ್ತಿಯಂದದೆ ಪಾಲಿಸುತ್ತಿಹರು. ॥೪೩॥

ಪರಮ ವಿಸ್ತೃತವಾದ ಭಾಲೋ-। ತ್ತರದ ಪ್ರಾಂತದೆ ಧರಿಸಿದಂತಹ।
ಸರಸ ಚಾಮೀಕರದ ಪಟ್ಟದ ಬುಡದ ಭಾಗದಲಿ ॥
ಮೆರೆವ ಕೇಸರ ತಿಲಕವುಳ್ಳೀ । ನೃಪ ತರುಳನು ತನ್ನ ಯುರಿಗಳ ।
ತರುಣ ಪೆಣ್ಗಳ ನೊಸಲ ಬಣ್ಣವನೊರಸಿ ಬಿಟ್ಟಹನು. ॥೪೪॥

ಧರಿಸಲೊಡವೆಗಳನ್ನು ಬೆಮರುವ । ಸಿರಸಲದ ತರು-ಕುಸುಮದಂದದೆ ।
ಪರಮ ಕೋಮಲವಾದ ವಿಗ್ರಹವುಳ್ಳ ನರವರನು ॥
ನಿರವಧಿ ಶ್ರಮಸಾಧ್ಯವಾದೀ । ಧರೆಯ ಧುರವನು ಬಲುಮೆಯಿಂದಲೆ ।
ನರರಿಗಚ್ಚರಿಯಾಗುವೋಪಾದಿಯಲಿ ವಹಿಸಿಹನು. ॥೪೫॥

ಅಲಲ! ಧೂಳಾಕ್ಷರಗಳನ್ನರೆ । ಕಲಿಯುವದರೊಳಗಾಗಿ ಕೋಸಲ-।
ದಿಳೆಯ ಪಾಲನು ರಾಜನೀತಿಗಳನ್ನು ಚೆನ್ನಾಗಿ ॥
ಬೆಳೆದ ಪಂಡಿತವರರ ಯೋಗದೆ । ತಿಳಿದು ಮಾನಸವಲ್ಲಿಯವುಗಳ ।
ಫಲಗಳನುಭವವನ್ನು ಕೊಳ್ಳುತ್ತಿಹನು ಸರಿಯಾಗಿ. ॥೪೬॥

ಇಳೆಯ ಪಾಲಸುದರ್ಶನನ ಒಲು । ಚಲುವಿಕೆಗೆ ಮರುಳಾದ ಲಕುಮಿಗೆ ।
ಯೆಳೆಯ ವಯದಪ್ರೌಢ ವಕ್ಷಾಲಿಂಗನವ ಮಾಡೆ ॥
ಸ್ಥಳವು ಸಾಲದರಿಂದ ಛತ್ರದ । ನೆಳಲಿನಲಿ ನೆರೆ ನಾಚಿಯಾಕೆಯು ।
ನಳಿನ-ಮೃದುವಾದವನ ದೇಹವನಪ್ಪಿಕೊಂಡಿಹಳು. ॥೪೭॥

ಎಳೆದ ಮೌರ್ವ್ಯಾಘಾತದಿಂ ಕೈ-। ಗಳಿಗೆ ಕಲೆಗಳು ಬೀಳದಿರ್ದೊಡೆ ।
ಬಲಿತನೊಗದೋಪಾದಿಯಲಿ ನಳಿತೋಳ್ಗಳಿಲ್ಲದೊಡೆ ॥
ನಳಿನ ಕೋಮಲ ಮುಷ್ಟಿಬಂಧನ-। ದೊಳಗೆ ಖಡ್ಗವ ಧರಿಸದಿರ್ದೊಡೆ- ।
ಯಿಳೆಯ ಪಾಲನು ತೇಜದಿಂ ಪ್ರಜೆಗಳನು ಪೊರೆದಿಹನು. ॥೪೮॥

ತರಣಿಕುಲದಲಿ ಜನಿಸಿದಂಥೀ-। ತರುಳನಾದ ಸುದರ್ಶನನ ಮೃದು ।
ಕರಣಗಳು ಮೇಣವನ ಪೂರ್ವಜರಲ್ಲಿ ನೆಲೆಗೊಂಡ ॥
ಸರಸ ಗುಣಗಳವೇಕ ಕಾಲಕೆ । ಭರದೆ ಕ್ರಮದಿಂ ಬೆಳೆದು ಪ್ರಜೆಗಳ ।
ಪರಮ ಸಂತೋಷಕ್ಕೆ ನಿಜ ಕಾರಣಗಳಾಗಿಹವು. ॥೪೯॥

ಇರದೆ! ಶಾಸ್ತ್ರಂಗಳನು ಜನ್ಮಾಂ- । ತರದೆ ಕಲಿತವುಗಳನು ಕೋಸಲ- ।
ಧರೆಯಪಾಲನು ಸ್ಮರಿಸುತಿಹನೆಂಬಂತೆ ಪ್ರಕೃತದಲಿ ॥
ಗುರುಗಳಿಗೆ ಶ್ರಮವಾಗನಂತೆಯೆ । ತ್ವರದೆ ಪಳಕಿಸಿ ಸಚಿವರನು ಮೇ- ।
ಣಿರದೆ ಪ್ರಕೃತಿಗಳನ್ನು ಕೈವಶ ಮಾಡಿಕೊಂಡಿಹನು. ॥೫೦॥
ಸರಿಸಿ ಯೆಡಗಾಲನ್ನು ಹಿಂದ- । ಕ್ಕಿರಿಸಿ ಬಲಗಾಲನ್ನು ಮುಂದಕೆ ।
ಯುರವನೀಷತುಮುಂದು ಚಾಚಿದ ಕರದೆ ಚಾಪವನು ॥
ಧರಿಸಿ ಶರವನು ಪೂಡಿದಂಥೀ । ಧರಣಿಪನು ಬಿಲ್ಗಾರತನವ- ।
ನ್ನರಿತು ಕೊಳ್ಳುವ ಕಾಲದಲಿ ಸೊಗಸಾಗಿ ತೋರ್ಪವನು. ॥೫೧॥
ಸುದತಿಯರು ಕಣ್ಮಾಗವೆ ಕುಡಿಯುವ । ಮಧುರತಮವಾಗಿರುವ ಸುಧೆಯೆನೆ ।
ಮದನ ವೃಕ್ಷಕೆ ಪುಷ್ಪಫಲಗಳ ಭರವು ಬಂದಿತೆನೆ ॥
ಚದುರ ತನದಿಂ ಮಾಡಿ ಯೋಚನೆ । ವಿಧಿಯು ಸೃಜಿಸಿದ ಮೂರ್ತಿಯೆಂದೆನೆ ।
ಮೊದಲ ಪ್ರಾಯದ ವಸುಧೆಯಾಣ್ಮನು ಶೋಭೆ ತಾಳಿಹನು. ॥೫೨॥
ಧರೆಯ ಪಾಲಕನುದರದಿಂದುರೆ । ಸರಸ ಸಂತತಿಯನ್ನು ಬಯಸುವ ।
ಪರಮ ದಕ್ಷತೆಯುಳ್ಳ ಮಂತ್ರೀಶ್ವರರು ತರಿಸಿರುವ ॥
ತರುಣ ಸುಂದರರಾದ ರಾಜರ । ತರುಣಿಯರು ಪರಿಸಿವನ ಮುಂಚಿನ ।
ಸಿರಿಯು ಮೇಣ್ಧರೆಯೆಂಬ ಸ್ತ್ರೀಸಹವಧುಗಳಾಗಿಹರು. ॥೫೩॥

—॥ ಶ್ರೀ ॥—

೧೯ನೆಯ ಸರ್ಗ.

ಜನಪನಾದ ಸುದರ್ಶನನು ತ- । ನ್ನನಲನೋಪಾದಿಯಲಿ ಮಿನುಗುವ ।
ಗುಣದ ನಿಧಿಯಾವಗ್ನಿವರ್ಣೆಂದೆನಿಪ ತನುಜನನು ॥
ಪ್ರಣಯದಿಂ ಪಟ್ಟಕ್ಕೆ ಸ್ಥಾಪಿಸಿ । ವನಕೆಯುತ್ತರ ವಯಸಿನಲಿ ತಾಂ- ।
ಘನತೆಯಿಂ ತಪವನ್ನು ಚರಿಸಲು ಹೊರಟು ಸಾಗಿಹನು. ॥೧॥
ಪರಮ ಪಾವನವಾದ ತೀರ್ಥದ । ಸರಿಲದಿಂ ದೀರ್ಘಿಕೆಯ ಜಲವನು ।
ಧರೆಯ ಮೇಲ್ಪಸರಿಸಿದ ಕುಶತೃಣದಿಂದ ಶಯ್ಯೆಯನು ॥
ಮೆರೆವ ಸೌಧಗಳನ್ನು ಕುಟಿಯಿಂ । ಧರೆಯ ಪಾಲನು ಮರೆತು ಮನದಿಂ ।
ತೊರೆದು ಫಲದಾಶೆಯನು ಮನದೊಳು ತಪವ ಚರಿಸಿದನು. ॥೨॥

ಧರಣಿಯರ್ಾಣ್ಮ ಸುದರ್ಶನನನು ತ- । ನ್ನರಿಗಳನು ನಿರ್ಜಯಿಸಿ ತನ್ನಯ ।
ತರಳನಿಗೆ ಭೂಪಾಲನಪ ಕ್ರಮಹರಿಸಿ ರಾಜ್ಯವನು ॥
ಮರುಕಿನಿಂದರ್ಪಿಸಿದ ಮೂಲಕ । ನರಪತನಯನಿಗವನಿಯೊಳಗಿನ ।
ಸರಸ ವಿಷಯಗಳನ್ನು ಭೋಗಿಪುದೊಂದೆಯುಳಿದಿಹುದು. ॥೩॥

ತನ್ನ ಕುಲಕುಚಿತಾಗಿ ಪ್ರಕೃತಿಗ- । ಳನ್ನು ಕೆಲವಬ್ದಗಳ ವರೆಗೀ- ।
ಗನ್ನ ಕಾಮುಕನಾದ ರಾಜನು ಪೊರೆದನಂತರದೆ ॥
ಸನ್ನುತಾಂಗನು ರಾಜಕಾರ್ಯಗ- । ಳನ್ನು ಧೀಸಚಿವರಿಗೆ ಯೊಪ್ಪಿಸಿ ।
ತನ್ನ ಯೌವನವನ್ನು ಸ್ತ್ರೀಸಂಗದಲಿ ಕಳೆದಿಹನು. ॥೪॥

ವಾಮೆಯರ ಸಹವಾಸದಲ್ಲೀ । ಕಾಮುಕಾಗ್ರಣಿಯಾದ ರಾಜನು ।
ಧಾಮದೊಳು ಸಾರಂಗ ಮೊದಲಾಗಿರುವ ವಾದ್ಯಗಳು ॥
ನೇಮದಿಂ ನಡೆದಿರಲು ದಿನದಿನ । ಪ್ರೇಮದಿಂದುತ್ಸಾಹಗಳನುರಿ
ಕಾಮಿಸುತೆ ಪೊಸದಾದ ಸಾಧನಗಳನು ಗಳಿಸಿಹನು. ॥೫॥

ಕರಣಗಳ ವಿಷಯಂಗಳನು ಮೇ- । ಣ್ತರುಣಿಯರ ಸಹವಾಸವನ್ನೀ ।
ಪರಮ ಲಂಪಟನಾದ ಕೋಸಲಧರೆಯ ಪಾಲಕನು ॥
ತೊರೆದು ಕ್ಷಣವರೆಗಾದರೂ ನಿಜ । ಪುರದ ನರರಾಕಾಂಕ್ಷೆಯನು ಗತ ।
ದರುಶನದೆ ಪೂರೈಸಲಕ್ಷಮನಾಗಿ ವಿಹರಿಪನು. ॥೬॥

ಜನರ ಕಟ್ಟಾಗ್ರಹದೆ ಸಚಿವರು । ವಿನಯದಿಂ ಬಲು ಬಾರಿ ಬಾರಿಗೆ ।
ಬಿನತಿಯನು ಮಾಡಲ್ಕೆ ಮನ್ನಿಸಿಯವರ ವಚಗಳನು ॥
ವನಿತೆಯರ ಸಹ ಬಂದು ವಾತಾ- । ಯನದೆ ಚರಣಗಳನ್ನು ಜನಪನು ।
ಜನಕೆ ಬಹುದಿನಕೊಮ್ಮೆ ತೋರಿಸಿ ಮಗುಳಿ ತೆರಳುವನು. ॥೭॥

ಕೆರೆಯ ನೀರೊಳಗರಳಿದಂತಹ । ಸರಸಿಜದ ಮೇಲ್ವಾಲ ಸೂರ್ಯನ ।
ಕರಗಳಿಂದುಂಟಾದ ರಕ್ತಿಮೆಯನ್ನು ಧರಿಸಿರುವ ॥
ಧರೆಯಪಾಲನಪದ ನಖಗಳ । ದರುಶನವ ಕೊಂಡವನ ಪ್ರಜೆಗಳು ।
ಹರುಷದಿಂದವನನ್ನು ಹರಸುತೆ ಮನೆಗೆ ಪೋಗುವರು. ॥೮॥

ಮದವೆ ಸೂಸುವ ಮೊದಲ ಪ್ರಾಯದ । ಸುದತಿಯರ ಬಲ್ಮೊಲೆಗಳಿಂದತಿ ।
ಕಮುಕಿದಂತಹ ಕಮಲ ಪಂಕ್ತಿಗಳಿಂದ ಮುಸುಕಿರುವ ॥
ಮದನ ಸದನಗಳುಳ್ಳ ದೀರ್ಘಿಕೆ । ಯುದಕವಲಿಯುದ್ದಾಮ ಕಾಮಿಯು ।
ಮುದದೆ ಮದ್ದಾನೆಗಳ ತೆರ ಚಲ್ಲಾಟವಾಡಿಹನು. ॥೯॥

ಓರಗೆಯ ನಾರಿಯರು ನೀರೊಳು । ಮೀರಿಮುತ್ಸವದಿಂದಲೀಸುತೆ
ವಾರಿಸೇಕವ ಮಾಡೆ ನೇತ್ರಾಂಜನವು ಮೇಣವರ ॥
ಚಾರು ಚೆಂದುಟಿ ಬಣ್ಣ ತೊಳೆದಿರೆ । ಸಾರ ಸುಂದರ ನೈಜರೂಪದೆ ।
ಧಾರುಣೀಶನ ಮನಕೆಯಧಿಕಾನಂದಗೊಟ್ಟಿಹರು. ॥೧೦॥

ಅರಳಿದಂತಹ ಕಮಲಸುಮಗಳ । ಸರಸ ತಾಣಕ್ಕೆಳಸಿ ದ್ವಿರದವು ।
ಕರಿಣಿಗಳ ಸಹ ಬರುವ ತೆರದಿಂದಿಳೆಯ ಪಾಲಕನು ॥
ಸುರಭಿಯಿಂ ಮನವನ್ನು ಹರಿಸುವ । ಸುರೆಯ ಪ್ರಾಶನ ಮಾಳ್ಪ ಭೂಮಿಗೆ ।
ಸುರತಲೋಲುಪರಾದ ಸ್ತ್ರೀಯರ ಕೂಡ ಸಾಗಿದನು. ॥೧೧॥

ನಿರತಿಶಯ ಮದವನ್ನು ಪೆರ್ಚಿಪ । ಸುರಭಿಯಿಂ ಮಗಮಗಿಪ ಮಧುವನು ।
ಪರಮ ಲಾಲಸೆಯಿಂದ ನರಪನ ಮುಖದೆ ಕುಡಿದಿರುವ ॥
ತರುಣಿಯರ ಮೊಗದಿಂದಲಾತನು । ಮೆರೆವ ಕೇಸರ ತರುವಿನಂದದೆ ।
ಮರುಕಿನಿಂ ಮೈರೇಯವನು ಪ್ರಾಶನವ ಮಾಡಿದನು. ॥೧೨॥

ಸುರತಲೋಲುಪನಂಕಗಳ ಮೇಲ್ । ಸುರಪನಪ್ಸರೆಯನ್ನು ಪೋಲುವ ।
ನಿರುಪಮ ಶ್ರೀಯಿಂದ ಮಿರುಗುವ ತರುಣಿಮಣಿಯಥವಾ ॥
ಸರಸ ಸುಸ್ವರದಿಂದ ನುಡಿಯುವ । ಪರಮ ಸುಂದರವಾದ ವೀಣೆಯು ।
ನಿರುತದಲಿ ಸ್ಥಿರಗೊಂಡು ಕುಳಿತಿಹವೇನು ಹೇಳುವೆನು. ॥೧೩॥

ಅರಲುಗಳ ಸರವನ್ನು ಕೊರಳಲಿ । ಧರಿಸಿದಂತಹ ಧರೆಯಪಾಲನು ।
ಪರಮ ಕುಶಲತೆಯಿಂದ ಮರ್ದಲ- ಪುಷ್ಕರವ ಬೊಡೆದು ।
ಹರಿಸೆ ನರ್ತಕಿ- ಮನವನಾಕೆಯು । ಮರೆತು ವ್ಯಂಜಕವನ್ನು ತನ್ನಯ ।
ಗುರುಗಳೆದುರಲಿ ತಪ್ಪು ಮಾಡಿದ್ದಕ್ಕೆ ನಾಚಿಹಳು. ॥೧೪॥

ಕುಣಿದು ವಿಧವಿಧದಿಂದ ನರ್ತಕಿ । ದಣಿಯೆ ಸರ್ವಾಂಗದಲಿ ಬೆಮರಿನ ।
ಹನಿಗಳುದುಗೆಯು ಮೇಲೆ ಪ್ರವಿಸುತ್ತಿರಲು ತನ್ಮುಖದ ॥
ಹಣೆಯ ಮೇಲಿನ ತಿಲಕವಳಿಸಿರೆ । ಜನಪ ನರ್ತನ ಮುಗಿಯಲಾಕೆಯ ।
ಘನ ಮನೋಹರವಾದ ಮೊಗವನು ಚುಂಬಿಸಿದನಿರದೆ. ॥೧೫॥

ಸ್ವಪರ ದೀರ್ಘೋದ್ಯಮದೆ ಯೊಲಿಸಿ- । ರ್ದಪರ ಕಾಮಿನಿಯೊಡನೆ ಕೋಸಲ- ।
ನೃಪನು ರಹದಲಿ ಮಗ್ನನಾಗಿರಲವನ ನಿಜ ಸತಿಯು ॥
ಚಪಲೆಯೋಪಾದಿಯಲಿ ಕೋಪದೆ । ಸಪದಿ ತೋರಿಸಿ ತನ್ನ ಮುಖವ- ।
ನ್ನಪಯಶಸ್ಸವನರ್ಜಿಸಿದಳಾಕಾರ್ಯವನು ಕೆಡಿಸಿ. ॥೧೬॥

ಬಾರಿ ಬಾರಿಗೆ ಸ್ವೈರತನದಿಂ । ನಾರಿಯರಿಗೀ ತೆರದ ವಂಚನೆ ।
ತೋರಿಸುತಿಯವರಲ್ಲಿ ಕೆಲರಿಂ ಭ್ರುಕುಟಿ ಭಂಗವನು ॥
ಮೀರಿದಂಥವಮಾನ ಕೆಲರಿಂ । ಘೋರ ರಶನಾಬಂಧ ಕೆಲರಿಂ ।
ಧಾರುಣೀಶನು ನಿತ್ಯದಲಿ ತಪ್ಪದಲೆ ಹೊಂದಿಹನು. ॥೧೭॥

ಸುರತ- ಸುಖನಿಯಮಕ್ಕೆ ತಾನನು- । ಸರಿಸಿ ಸಂಚಾರಿಕೆಯ ಪಿಂತೆಯೆ ।
ಮರೆಗೆ ನಿಂತಿರುವಂಥ ಕೋಸಲ ಧರೆಯ ಪಾಲಕನು ॥
ವಿರಹ ಕಾತರದಿಂದ ದೂತಿಗೆ । ಸರಸಿಜಾಕ್ಷಿಯು ದೈನ್ಯದಿಂದಾ- ।
ಲ್ಪರಿವ ಪರಿಯನು ಕೇಳಿ ಸಂತಸವನ್ನು ತಾಳಿಹನು, ॥೧೮॥

ಪರಮ ಸುಂದರಿಯಾದ ಗಣಿಕೆಯು । ದರುಶನವ ಹಾರೈಸುತಿರ್ದೀ ।
ಧರೆಯ ಪಾಲನು ತನ್ನ ಕಾಂತಾಗಾರದೊಳು ಸಿಲುಕಿ ॥
ಹೊರಡಲಾರದೆ ಮರುಗಿ ಮನಮೊಳು । ಕರದೆ ಯಾಕೆಯ ಚಿತ್ರವನ್ನರೆ ।
ಬರೆದು ವಿರಹದ ತಾಪವನು ತುಸು ತಾಳಿಕೊಂಡಿಹನು. ॥೧೯॥

ಧರೆಯ ಪಾಲನ ಪ್ರೇಮದೊಳಗಿರು- । ತಿರುವ ಸ್ತ್ರೀಯರು ಗರ್ವದಿಂದುರೆ ।
ಸರಿಯ ಸವತಿಗಳನ್ನು ಮತ್ಸರದಿಂದ ಜರೆಯುತಿರೆ ॥
ಬರಿದೆ ಕೋಪಾಟೋಪ ತಾಳದೆ । ಸ್ಮರನ ಪರಮೋತ್ಸವದ ನೆವದಿಂ ।
ಕರೆಸಿ ನೃಪನನು ಮಹಿಷಿಗಳು ಕೃತಕೃತ್ಯರಾಗಿಹರು. ॥೨೦॥

ಇರುಳಿನೊಳು ಜಾಗರವ ಮಾಡಿದ । ಧರಣಿಯಾಣ್ಮನು ಕಷ್ಟದಿಂ ಕ- ।
ಣ್ದೆರೆದು ಖಂಡಿತೆಯಾದ ತನ್ನಯ ಪ್ರಿಯೆಯ ಮನೆಗೈದೆ ॥
ಪುರುಶನದೆ ಕೆರಳಿರ್ದರಮಣಿಗೆ । ಪರಮ ವಿನಯದೆ ಮಾಡಿ ಪ್ರಾರ್ಥನೆ ।
ಕರವ ಮುಗಿಯಲ್ಕವಳು ಪೆರ್ಚಿದ ವ್ಯಸನ ತಾಳ್ದಿಹಳು. ॥೨೧॥

ನಿಶೆಯ ಕಾಲಕೆ ಪಾಸಿಗೆಯ ಸೇ- । ಲ್ವಸುಧೆಯಾಣ್ಮನು ಮಲಗಿ ಕೊಂಡಿರೆ ।
ಪ್ರೊಸತೆ ತಂದಿರುವಂಥ ಲಲನೆಯ ವ್ಯಸನದಿಂದವಳ ॥
ಪೆಸರು ಗೊಂಡೊದರಲ್ಕೆ ರಾಜ್ಞಿಯು । ವಿಷಧರನ ತೆರದಿಂದ ಕೋಪಿಸಿ ।
ಗಸಣಿಯಿಂ ರೋದನವ ಮಾಡುತೆ ಬಿದ್ದುಕೊಂಡಿಹಳು. ॥೨೨॥

ಕುಶಲ ಪರಿಚಾರಿಕೆಯ ಸಂಗಡ । ಕುಸುಮಶಯ್ಯಾಗೃಹಕೆ ನಿಶೆಯಲಿ ।
ವಸುಧೆಯಾಣ್ಮನು ಪೋಗಿ ನಿರ್ಜನ ತಾಣವನು ಕಂಡು ॥
ಕುಸುಮ ಬಾಣನ ತಾಪ ತಾಳದೆ । ವಿಷಯ ಲಂಪಟನಾಗಿ ದಾಸೀ- ।
ವಶಕೆ ಪೋದನು ತನ್ನಯಶವನು ಮಲಿನ ಮಾಡಿಹನು. ॥೨೩॥

ಇಟ್ಟುಕೊಂಡುಪಪತ್ನಿಯನು ಸ್ಮೃತಿ- । ಗೆಟ್ಟ ಸಮಯದೆ ತಪ್ಪಿ ತನ್ನಯ ।
ಪಟ್ಟದರಸಿಯ ಪೆಸರಿನಿಂ ಸಂಬೋಧಿಸಲ್ಕವಳು ॥
ತಟ್ಟನೇ ಬಿಗಿದಪ್ಪಿಸುಲೆ ನೀಂ । ಕೊಟ್ಟ ಮಾನದೆ ದಾಸಿಯನು ದಯ- ।
ವಿಟ್ಟು ಸಲಹುವದೆಂದು ಬಿನ್ನಹವನ್ನು ಮಾಡಿಹಳು. ॥೨೪॥

ಪರಮ ಸುಂದರ ಪಟುತರಾಂಗದ । ತರುಣ ಯೋಷಿತೆಯಲ್ಲಿ ಸ್ವೇಚ್ಛಾ- ।
ಚರಣದಿಂ ನಿಶೆಯಲ್ಲಿ ವಿಟನೋಪಾದಿಯಲಿ ನೃಪನು ॥
ಸುರತ ಬಂಧಗಳಿಂದ ರಮಿಸಿದ । ಪರಿಯು ಪ್ರಾತಃಕಾಲದಲಿ ಯಾ- ।
ಸ್ತರಣ- ಚಿಹ್ನಗಳಿಂದ ಕಣ್ಗೆದುರಿಟ್ಟು ತೋರಿಹುದು. ॥೨೫॥

ಧರೆಯ ಪಾಲನು ಪರಮ ರಭಸದೆ । ಸರಸಿಜಾಕ್ಷಿಯ ಚರಣಯುಗಲಕೆ ।
ಸರಸಲಾಕ್ಷಾರಸವ ಪೂಸಲ್ಕೆಳಸಿ ಹತ್ತಿರಲು ॥
ಜರದ ತಿಳುವಾವರಣವುಳ್ಳಹ । ಗುರು ನಿತಂಬಗಳನ್ನು ಪ್ರೇಕ್ಷಿಸಿ ।
ಕರವು ಸಾಗದೆ ಮರುಳುಗೊಂಡವನಂತೆ ನಿಂತಿಹನು. ॥೨೬॥

ಅಧರ ಸುಧೆಯನ್ನೀಂಟಲಿಚ್ಛಿಸಿ । ವದನವನು ಮುಂದೆಳೆಯೆ ನೂತನ ।
ವಧುವು ಗರ್ಜನೆ ಭೀತಿಯಿಂ ಮೊಗದಿರುಹಿದೊಡೆ ಮತ್ತು ॥
ಮುದದೆ ನೀವಿಯ ಬಂಧ ಸಡಲಿಪ । ಚದುರನಿಗೆಯವರೋಧ ಗೈಯ್ಯೊಡೆ ।
ಸುದತಿ ಸಂಗಮದಿಚ್ಛೆ ನೃಪನಲಿ ವೃದ್ಧಿ ಹೊಂದಿಹುದು. ॥೨೭॥

ತನ್ನಯಂತಃಪುರದೆ ರಹದಲಿ । ಸನ್ನುತಾಂಗಿಯು ಭುಕ್ತ ಭೋಗದ ।
ಚಿಹ್ನಗಳನುರೆ ರನ್ನಗನ್ನಡಿಯಲ್ಲಿ ನೋಡುತಿರೆ ॥
ಬೆನ್ನಿನಿಂ ಬಂದಲ್ಲೆ ನರ್ಮದೆ । ಚೆನ್ನಿಗನು ನಸುನಕ್ಕು ನಾಚಿಸಿ ।
ಕಣ್ಣುಗಳನುರೆ ಮುಚ್ಚುವಂದದೆ ಮಾಡಿ ಬಿಟ್ಟಿಹನು. ॥೨೮॥

ಇರುಳಿನಂತ್ಯದಲಿಳಿದು ಮಂಚದೆ । ಹೊರಟ ಧಾರುಣಿ ಪತಿಯ ಕೊರಳನು ।
ಕರದೆ ಭರದಿಂದಪ್ಪಿಯಾತನ ಪಾದದಗ್ರದಲಿ ॥
ಚರಣತಲಗಳನೂರಿ ಪ್ರೇಮದೆ । ಸರಸಿಜಾನನವೆತ್ತಿ ಮೇಲಕೆ ।
ತರುಣಿಮಣಿ ತನ್ನನ್ನು ಚುಂಬಿಪುದೆಂದು ಕೋರಿದಳು. ॥೨೯॥

ಗನ್ನ ಶತಮನ್ಯುವಿನ ಮೀರಿದ । ತನ್ನ ನೃಪವೇಷವನು ರಾಜನು ।
ಕನ್ನಡಿಯ ತಲದಲ್ಲಿ ಪ್ರೇಕ್ಷಿಸಿ ಪಡೆದ ಸಂತಸಕೆ ॥
ಪೆಣ್ಣುಗಳ ಸಂಭೋಗದಿಂದು- । ತ್ಪನ್ನವಾಗುವ ವ್ಯಕ್ತ ಮಂಡನ ।
ಚಿಹ್ನದಿಂದುಂಟಾದ ಮುದವನು ಹೆಚ್ಚು ತಳೆದಿಹನು. ॥೩೦॥

ಪೇಳಿ ಗೆಳೆಯರ ಕಾರ್ಯವೆಂದುಂ । ಗೂಳಿಯಂದದೆ ಕಂಡ ಕಂಡಾ ।
ಸೂಳೆಯರ ಸದನಕ್ಕೆ ಪೋಗುವ ನಿನ್ನ ನಡತೆಯನು ॥
ಕೇಳು, ಬಲ್ಲೆನು ಶಠನೆ ಸಾಗಿ- । ನ್ನೇಳು ನೋಡುವೆನೆಂದು ರಾಜನ ।
ಪೌಳಿಯನು ಪಿಡಿದೊರ್ವ ಸ್ತ್ರೀಯಾಕ್ರೋಶ ಮಾಡಿಹಳು. ॥೩೧॥

ಗುಣಿಜನಾಗ್ರಣಿಯಾದ ಗಣಿಕೆಯು । ದಣಿದು ಸಲೆ ಪೂಗಣೆಯ ನಾಟವೆ ।
ಜನಪ ಚೂಡಾಮಣಿಯ ವಿಸ್ತೃತವಾದ ವಕ್ಷದಲಿ ॥
ಮಣಿಗಣಂಗಳ ಸರಗಳನು ಧಾ- । ರುಣಿಯ ಮೇಲ್ತೆಗೆದೊಗೆದು ಪೀನ- ।
ಸ್ತನಗಳನ್ನುರೆಯೂರಿ ವಿಶ್ರಾಂತಿಯನು ಹೊಂದಿಹಳು. ॥೩೨॥

ಪೊಡವಿಯೊಡೆಯನು ರಾತ್ರಿಯಲಿಗಡ। ತುಡುಗಿನಿಂ ಸಂಕೇತ ನಿಲಯಕೆ।
ಗಡನೆ ಪೋಗುತ್ತಿರಲು ಪರಿಚಾರಿಕೆಯ ಮುಖದಿಂದ ||
ಪಡೆದು ವಾರ್ತೆಯನಿವನ ಮಡದಿಯು। ನಡುವೆ ಮಾರ್ಗದೆ ಬಂದು ಜಪ್ಪಿಸಿ
ಪಿಡಿದು ಕರವನ್ನೆಳೆದು ತನ್ನಾಲಯಕೆ-ಯೊಯ್ದಿಹಳು. ॥೩೩॥

ಇರುಳು ಜಾಗರದಲ್ಲಿ ಸುಂದರ। ತರುಣಿಯರ ಸಂಸ್ಪರ್ಶದಲಿ ಪೇ-।
ಣಿರದೆ ಪಗಲನು ನಿದ್ರೆಯಲಿ ಕಳೆದಿಳೆಯ ಪಾಲಕನು ॥
ಶರದ ರಾತ್ರಿಯ ಕಾಲದಲಿ ಹಿಮ-। ಕರನ ಸ್ಪರುಶದೆಯರಳಿ ದಿನದಲಿ।
ಮರಳಿ ವಿಶ್ರಮಗೈಯ್ವ ಕುಮುದಿನಿಯನ್ನು ಪೋಲ್ದಿಹನು. ॥೩೪॥

ಸುರತಕಾಲಕೆ-ಯಧರ ಪದದೊಳ್। ಸು-ರದದಿಂದುಂಟಾದ ಗಾಯದೆ।
ಯುರದ ತಾಣದೆ ಯುಗುರ್ಗಳಿಂದುಂಟಾದ ಕ್ಷತದಿಂದ ॥
ಪರಮ ತಾಪವ ಪಡೆದ ಸುಂದರಿ। ಜರೆದು ನೃಪನನು ವೇಣುವಲ್ಲಕಿ।
ಸ್ವರವ ನುಡಿಸುವ ಸಮಯದಲಿ ಸಾಶಯದೆ ನೋಡಿದಳು. ॥೩೫॥

ಧಾರುಣೀಶನು ವ್ಯಂಜಕವ ಮೇಣ್। ಚಾರುಗಾಯನ ನೃತ್ಯಗಳನುರೆ।
ವಾರ-ವನಿತೆಗೆ ಕಲಿಸಿ ನೃತ್ಯಾಚಾರ್ಯರನು ಕರೆಸಿ ॥
ಓರಗೆಯ ಸಖರೆದುರಿನಲಿ- ವೈ। ಯಾರದಿಂದವಳನ್ನು ಪಾಡಿಸಿ।
ತೋರಿದನು ನಿಜಕುಶಲತನವನು ಭರತಶಾಸ್ತ್ರದಲಿ. ॥೩೬॥

ಕೊರಳಿನಲಿ ಕುಟಜಾರ್ಜುನಂಗಳ। ಸರಗಳನು ಪರಿಧಾನ ಮಾಡಿದ।
ಸರಸ ನೀಪದ ಕುಸುಮರಜವನು ಮೈಗೆ ಪೂಸಿರುವ ॥
ಧರೆಯ ಪಾಲನು ಕೃತ್ರಿಮಾದ್ರಿಯ। ಶಿರದ ಮೇಲ್ಬರ್ಹಿಗಳ ತೆರದಲಿ।
ಹರುಷದಿಂ ಮಳೆಗಾಲದಲಿ ಸಂಚಾರ ಮಾಡಿಹನು. ॥೩೭॥

ಪ್ರಣಯ ಕಲಹ ವ್ಯಾಜ್ಯದಿಂ ಮಾ-। ನಿನಿಯು ಮುನಿಸನು ತಾಳ್ದು ತನ್ನಯ।
ವನಜ ಮುಖವನು ತಿರುಹಿ ಮಂಚದಮೇಲೆ ಮಲಗಿರಲು ||
ವನವು ಗರ್ಜಿಸಿದವಳು ಭಯದಿಂ। ವಿನಯ ತಾಳುವಳೆಂದು ಯೋಚಿಸಿ।
ಜನಪನಿನಿಯಳ ಮನವನೊಲಿಸುವ ಯತ್ನ ತೊರೆದಿಹನು. ॥೩೮॥

ಭರಿತ ಪ್ರಾಯದ ಲಲನೆಯರ ಕೂ-। ಡಿಳೆಯುಪಾಲನು ಮಾರನಾಟದೆ।
ತಳೆದ ಶ್ರಮವನು ಸೌಧತಲದಲಿ ಕುಳಿತು ಚನ್ನಾಗಿ ॥
ಚಳಿಯಕಾಲದ ತೊಳೆದ ಬಾನ್ದ-। ದೊಳಗೆ ಯುದಿಸಿದ ತಿಂಗಳಿನ ಬಹು।
ಪೊಳೆವ ಬೆಳದಿಂಗಳದೆಯಾತನು ಕಳೆದುಕೊಂಡಿಹನು. ॥೩೯॥

ಧರೆಯಪಾಲನು ತನ್ನ ಸುಂದರ। ತರುಣಿಜನರನುತರಣಮಾಡುವ।
ಸರಸ ಹಂಸಗಳೆಂಬ ನಡುಸರವನ್ನು ಧರಿಸಿರುವ ॥
ಸರಯುವಿನ ಸೈಕತದ ಮೀರಿದ। ಪರಮೆಯನು ತನ್ನರಮನೆಯ ಬಲು।
ಮೆರೆವ ವಾತಾಯನದ ದ್ವಾರದೆ ಕುಳಿತು ನೋಡಿದನು. ॥೪೦॥

ಭೂಮಿಪನು ಹೇಮಂತಕಾಲದೆ। ಹೇಮನಿರ್ಮಿತ ಕಾಂಚಿಯುಳ್ಳಹೆ।
ಶ್ಯಾಮವರ್ಣದ ಶ್ಯಾಮೆಯಂಗಕೆ ಕ್ಷೌಮವಸ್ತ್ರವನು ॥
ಪ್ರೇಮದಿಂ ಪರಿಧಾನಿಸುತ್ತಿರೆ। ಕಾಮ-ಬಾಧೆಯು ಪೆರ್ಚಿಯಾಕೆಯ।
ಧಾಮದಲಿ ನಿಶೆಯನ್ನು ಕಳೆದನು ಕಾಮುಕನ ತೆರದೆ. ॥೪೧॥

ನರಪನಂತಃಪುರದೆ ಯುರಿಯು-। ತ್ತಿರುವ ಸೊಡರುಗಳೆಂಬ ಮಿರುಗುವ।
ಸರಸನೇತ್ರಗಳಿಂದ ಶೈಶಿರ-ರಜನಿಗಳು ಬೆರಗಿ ॥
ಧರೆಯ ಪಾಲನು ಸ್ವೈರತನದಿಂ। ತರುಣ ಸುಂದರ ರಮಣಿಯರ ಕೂ-।
ಡಿರುಳಿನೊಳು ಭರದಿಂದ ರಮಿಸುವದನ್ನು ನೋಡಿಹವು. ॥೪೨॥

ಧೂತದಕ್ಷಿಣವಾತದಿಂದುರೆ। ನೂತನಾಂಕುರ ಪುಷ್ಪಗಳ ಭರ।
ಚೂತ ವೃಕ್ಷಂಗಳಿಗೆ ಬರಲಾಧರೆಯ ಪಾಲಕನ ॥
ನೂತನಾಂಗಿಯರೆಲ್ಲರೂ ನಿ-। ರ್ಧೂತ ವಿಗ್ರಹರಾಗಿ ವಿರಹವ।
ಭೀತಿಯಿಂ ನಿಜನಾಥನನು ಸಾದರದೆ ಭಜಿಸಿಹರು. ॥೪೩॥

ಲೀಲೆಯಿಂದಾಂದೋಲನದ ಮೇ-। ಲ್ಬಾಲೆಯರು ಸಹ ಕುಳಿತ ಭೂಮಿಪ-।
ಪಾಲನನು ಪರಿಜನರು ತೂಗುತ್ತಿರುವ ರಶ್ಮಿಯದು ॥
ಸೈಲುಬೀಳಲು ಭೀತಿಯಿಂದುರೆ। ನೀಲವೇಣಿಯರಾಗ ತಮ್ಮಯ।
ತೋಳುಗಳನೀ ನೃಪನ ಕಂಠಕೆ-ಸುತ್ತಿಬಿಟ್ಟಿಹರು. ॥೪೪॥

ಬರಲು ಜೇಸಗೆ ಕಾಲವದು ನರ-। ವರನ ಪ್ರಮದಾಜನರು ತಮ್ಮಯ।
ಸರಸಕುಚಯುಗಳಕ್ಕೆ ಚಂದನ ಗಂಧವನು ಪೂಸಿ ॥
ಕೊರಳಿನಲಿ ಪೇರ್ಪೌಕ್ತಿಕಂಗಳ। ಸರಗಳನ್ನುರೆ ಧರಿಸಿಕೋಸಲ-।
ಧರೆಯ ಪಾಲನ ಮನಸಿಗಾನಂದವನು ಕೊಟ್ಟಿಹರು. ॥೪೫॥

ಮಾಧವನ ನಿರ್ಗಮನವಾಗಲು। ಮಾಧವನ ಸುತಬಲವು ಕೊಬ್ಬಲು।
ಮಾಧವಕ ರಸವನ್ನು ಪೋಜದೆ ನಿತ್ಯದಲಿ ಕುಡಿದು ॥
ಹೋದ ಸಾಮರ್ಥ್ಯವನು ದೊರಕಿಸಿ। ಮೇದಿನಿಯ ಪತಿಯಗ್ನಿವರ್ಣನು।
ಕಾವಲೆಯರೊಡಗೂಡಿ ಸಂಭ್ರಮದಿಂದ ರಮಿಸಿಹನು. ॥೪೬॥

ಇಂತು ಪರಿಯೇಕಾಂತದಲಿ ಭೂ-। ಕಾಂತನಂತಃಪುರದತನ್ನಯ।
ಕಾಂತೆಯರ ಸಹವಾಸದಲಿ ಜೇರಿಲ್ಲ ಕಾರ್ಯಗಳ ॥
ಚಿಂತೆಯನ್ನೇನೇನು ಮಾಡದೆ। ಕಂತುವಿನ ಚಲ್ಲಾಟದಲಿ ಘನ।
ಸಂತಸದೆ ತನ್ನೆಲ್ಲ ದಿವಸಗಳನ್ನು ಕಳೆದಿಹನು. ॥೪೭॥

ವಿಷಯಗಳ ಲೋಲುಪ್ಯದಿಂದುರೆ। ವ್ಯಸನಿಯಾದೀ ವಸುಧೆಯಾಣ್ಮನ।
ಯಶವ ಹರಿಸಲ್ಕನ್ಯರಾಜರು ಶಕ್ತರಾಗದೊಡೆ ॥
ಕುಸುಮಶರಹತರಾಗಸಂಭವ। ವಿಷಮವಾದಾಮಯವು ಮೆಲ್ಲನೆ।
ಕಸುವಿನಿಂ-ದಿವನನ್ನು ವಶದಲಿಕೊಂಡು ಪಸರಿಸಿತು. ॥೪೮॥

ರಾಜಕುಲ-ದೀಪಕನ ಸುಂದರ। ರಾಜಿಸುವ ಮುಖಕಮಲ ತೇಜವು।
ಮಾಜಿಪೋದದ್ದನ್ನು ನೋಡಿದ ಭಿಷಜವರರಿಂದ ॥
ರಾಜನಿಗೆ ಸೂಚಿಸಿದ ವಚದ ಪ್ರ-। ಯೋಜನವು ಪುಸಿಯಾಗೆ ಯಾತನು।
ರಾಜದೌಷಧವನ್ನು ಸೇವಿಸಿ ಮತ್ತನಾಗಿಹನು. ॥೪೯॥

ವಿರಳಮುಕ್ತಿನ ಸರವ ಧರಿಸಿದ। ಪರರ ಕರವನು ಪಿಡಿದು ನಡೆಯುವ।
ಸ್ವರವು ಮಂದಾಗಿರುವ ಪಾಂಡುರ ವರ್ಣದಿಂ ಮೆರೆವ ॥
ಧರೆಯುಪಾಲನು ರಾಜಯಕ್ಷ್ಮದೆ। ಸೊರಗಿ ಸುಂದರ ಪರಮಹಾರ್ದವ
ತರುಣಿಯರ ವಿರಹದಲಿ ಬಳಲಿದ ಪುರುಷನಂತೆಸೆದ. ॥೫೦॥

ಉರಿದ ತೈಲದ ಧೀಪದಂದದೆ । ಸರಿಲ ಬತ್ತಿದ ಸರಸಿಯಂದದೆ ।
ಕೊರಗಿದಂತಹ ಕಲೆಯ ನಕ್ಷತ್ರೇಶನಂದದಲಿ ॥
ಧರೆಯಪಾಲನು ಬೇನೆಯಿಂದೀ । ಪರಿಯಕ್ಷೀಣತ್ವವನು ಹೊಂದಲು ।
ತರಣಿಕುಲವದು ನರರ ಕಣ್ಗಳಿಗಾಗತೋರಿದುದು. ॥೫೧॥

ತರಣಿಕುಲದೀ ರಾಜರಾಜನು । ಮರಣಹೊಂದಿಹನೆಂಬ ಕಂಕಾ- ।
ತುರತೆಯಲಿ ಮುಳುಗಿರ್ದ ಪ್ರಜೆಗಳಿಗಾಗ ಮಂತ್ರಿಗಳು ॥
ಅರಸುಪುತ್ರೇಷ್ಟಿಯನು ಮಾಡು- । ತ್ತಿರುವನೆಂದು ಸಿರುತ್ತಿಯಾತನ ।
ದುರುಳರೋಗದ ವಾರ್ತೆಯನು ಕೆಲಕಾಲಬಚ್ಚಿಹರು. ॥೫೨॥

ಪೊಡವಿಯೊಡೆಯನಿಗಿರ್ದರೂ ಬಹು । ಮಡದಿಯರು ತತ್ಕುಕ್ಷಿಯಲಿ ಗರ್ಭವ ।
ಪಡೆಯದೇ ಸಂತತಿಯನಾತನು ಘೋರರುಜೆಯಿಂದ ॥
ಕಡೆಗೆ ವೈದ್ಯರ ಯತ್ನಸಾಗದೆ । ಮಿಡುಕಿಝುಂಝಾವಾತದಲ್ಲಿಯ ।
ಸೊಡರಿನಂದದೆ ಮಡಿದುಪೋದನು ಬಿಡದುಕರ್ಮವದು. ॥೫೩॥

ಮರಣ ಹೊಂದಿದ ನೃಪನ ದೇಹವ। ನೆರೆಯಲಿದ್ದು ಪವನದ ಗಮ್ಮನೆ ।
ಧರೆಯಪಾಲನ ಮಂತ್ರಿಗಳು ಮೇಣ್ ಕುಲಪುರೋಹಿತರು ॥
ಉರಿವ ವೈಶ್ವಾನರನಿಗರ್ಪಿಸಿ । ಬರಿದೆ ಪ್ರಜೆಗಳನವರು ರೋಗದ ।
ಪರಿಭವದ ಕರ್ಮೋಪದೇಶದೆ ಶಾಂತಿಗೊಳಿಸಿಹರು. ॥೫೪॥

ವಸುಧೆಯಾಣ್ಮನ ಧರ್ಮಪತ್ನಿಯ । ಬಸಿರಿನಲಿ ಕುಸುಮೇಷುವಿನತೆರ ।
ಶಿಶುವು ಜನಿಸುವ ಚಿನ್ಹಗಳನರಿತಿರುವ ಮಂತ್ರಿಗಳು ।
ಅಸಮಸುಂದರಿಯಾದ ರಾಜ್ಞಿಯ । ವಶಕೆ ಕೋಸಲರಾಜ್ಯವನು ಸಂ- ।
ತಸದೆ ಜನರನುಮೋದನವ ಕೊಂಡರ್ಪಿಸಿದರಿರದೆ. ॥೫೫॥

ದೊರೆಯಸಾನಿಯು ದುಃಖದಿಂ ಮು- । ನ್ನಿರದೆ ಸುರಿಸಿದರ್ಮೋಷ್ಣಸರಿಲದೆ ।
ಪಿರಿಯತಾಪವ ಹೊಂದಿದಾಕೆಯ ರಾಜಗರ್ಭವದು ॥
ಮರಳಿಯಭಿಷೇಚನವಕಾಲಕೆ । ನರರು ಪೊಂಗೊಡದಿಂದ ಸುರಿದಿಹ ।
ಸರಸಶೀತಲವಾರಿಯಿಂದುರೆ ಶಾಂತವಾಗಿಹುದು. ॥೫೬॥

ಧರೆಯ ಧುರವನು ವಹಿಸಿದಂಥೀ । ಮರಮಸ್ವಾಧ್ವಿಯು ತನ್ನ ಪ್ರಜೆಗಳ ।
ನಿರತಿಶಯ ಸಂಭ್ರಮದೆ ಸಚಿವರನೆರವಿನಿಂ ಪೊರೆದು ॥
ತರಳನುದಿಸುವಕಾಲವನು ತಾ- । ನಿರುಳುಪಗಲಲ್ಲೀಕ್ಷಿಸುತೆ ಶ್ರೀ ।
ಹರಿಯ ಚಿಂತನದಲ್ಲಿ ಕಾಲಕ್ರಮಣ ಮಾಡಿಹಳು. ॥೫೭॥

—: ಓಂ :—